॥ [illegible] ॥



ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥
-ಗೀತಾವಾಕ್ಯ (ಅಧ್ಯಾಯ-7, ಶ್ಲೋಕ-19)

**WITH BEST COMPLIMENTS FROM :**

## KIRLOSKAR INVESTMENTS AND FINANCE LTD.

**REGD. OFFICE :**
**UNITY BUILDINGS, II FLOOR, C-BLOCK,**
**J. C. ROAD, BANGALORE-560 002**

॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಶ್ರೀಲಕ್ಷ್ಮೀನಾರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯ ನಮಃ ॥

# ಕಲ್ಪಸಾಧನಸಂಧಿ
## (ಅಪರೋಕ್ಷ ತಾರತಮ್ಯ ಸಂಧಿ)

## ಸಂಧಿ-೩೩

ಪಲ್ಲವಿ :-

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

## ಪದ್ಯ-೧

ಮೂಲ :-

ಏಕವಿಂಶತಿ ಮತ ಪ್ರವರ್ತಕ ।
ಕಾಕುಮಾಯ್ಗಳ ಕುಹಕಯುಕ್ತಿ ನಿ ।
ರಾಕರಿಸಿ ಸರ್ವೋತ್ತಮನು ಹರಿಯೆಂದು ಸ್ಥಾಪಿಸಿದ ॥
ಶ್ರೀಕಳತ್ರನ ಸದನ ದ್ವಿಜಪ ಪಿ ।
ನಾಕಿ ಸನ್ನುತಮಹಿಮ ಪರಮ ಕೃ ।
ಪಾಕಟಾಕ್ಷದಿ ನೋಡು ಮಧ್ವಾಚಾರ್ಯ ಗುರುವರ್ಯ ॥೧॥

**ಅವತರಣಿಕೆ :-**

ಏಕವಿಂಶತಿಮತಗಳನ್ನು ಖಂಡಿಸಿ, ಶ್ರೀಮನ್ಮಧ್ವಸಿದ್ಧಾಂತರೂಪವಾದ ತತ್ತ್ವವಾದವನ್ನು ಸ್ಥಾಪಿಸಿದ ಶ್ರೀ ಮಧ್ವಾಚಾರ್ಯರನ್ನು ಪ್ರಥಮತಃ ಸ್ತೋತ್ರ ಮಾಡುತ್ತಾರೆ. ॥೧॥

**ಪ್ರತಿಪದಾರ್ಥ :-**

**ಏಕವಿಂಶತಿ**—ಇಪ್ಪತ್ತೊಂದು ಸಂಖ್ಯಾಕವಾದ, **ಮತಪ್ರವರ್ತಕ**—ಕುಮತಗಳ ಪ್ರವರ್ತಕವಾದ (ಸ್ಥಾಪಕರಾದ) **ಕಾಕುಮಾಯ್ಗಳ**—ಕುತ್ಸಿತಕವಾದ ಮಾಯಿಗಳ, **ಕುಹಕಯುಕ್ತಿ**— ವೇದವಿರುದ್ಧವಾದ ಯುಕ್ತಿಗಳನ್ನು, (ವಾಕ್ಯಗಳನ್ನು) **ನಿರಾಕರಿಸಿ**—ಪರಾಜಯಗೊಳಿಸಿ, (ಖಂಡಿಸಿ), **ಸರ್ವೋತ್ತಮನು**— ಎಲ್ಲಾಪ್ರಕಾರಗಳಿಂದಲೂ ಅತ್ಯಂತಶ್ರೇಷ್ಠನು, **ಹರಿ ಎಂದು ಸ್ಥಾಪಿಸಿದ** — ಸಕಲದುರಿತಪರಿಹಾರಕನಾದ ಗುಣಪೂರ್ಣನಾದ ಶ್ರೀವಿಷ್ಣುವೇ, ಎಂದು ಸ್ಥಾಪನಮಾಡಿದ, **ಶ್ರೀಕಳತ್ರನಸದನ**—ಶ್ರೀಲಕ್ಷ್ಮೀದೇವಿಯನ್ನು ತನ್ನ ಸದನವನ್ನಾಗಿ ಉಳ್ಳ ಶ್ರೀಪತಿಯನ್ನೇ ಮುಖ್ಯ ಅಧಿಷ್ಠಾನವಾಗಿ ಉಳ್ಳ, **ದ್ವಿಜಪ** — ಪಕ್ಷಿಶ್ರೇಷ್ಠರಾದ ಗರುಡದೇವರು, **ಪಿನಾಕಿ**— ರುದ್ರದೇವರು, **ಸನ್ನುತ**— ಇವರುಗಳಿಂದ ಚೆಂದಾಗಿ ಸ್ತುತ್ಯಮಾನನಾದವರೇ, **ಮಹಿಮಾ**—ಕಲ್ಯಾದಿ ಆವೇಶವಿಲ್ಲದಿರುವ ಮಹಾಮಹಿಮರಾದ, **ಮಧ್ವಾಚಾರ್ಯ**— ಮಧ್ವಾಚಾರ್ಯರೇ, **ಗುರುವರ್ಯ**—ತ್ರೈಲೋಕ್ಯಚಾರ್ಯರಾದ ಗುರುಗಳೇ, **ಕೃಪಾಕಟಾಕ್ಷದಿ ನೋಡು**—ಕರುಣದಿಂದ ನೋಡಿ, ಸಂರಕ್ಷಿಸಿರಿ. ॥೧॥

## ವ್ಯಾಖ್ಯಾನಗಳು

### ೧ ಸಂಕರ್ಷಣಒಡೆಯರ ವ್ಯಾಖ್ಯಾನ

ಜೀವೋತ್ತಮರಾದ ಮಧ್ವಾಚಾರ್ಯರನ್ನು ಸ್ತೋತ್ರಮಾಡುತಾರೆ. ಇಪ್ಪತ್ತೊಂದು ಕುತ್ಸಿತವಾದ ಮತ—ಎಂದರೆ,

ಶಾಸ್ತ್ರಪ್ರಮಾಣ.ಭಾರತೀ ವಿಜಯಶ್ಚೈವ ಸಚ್ಚಿದಾನಂದ ಏವ ಚ ।
ಬ್ರಹ್ಮಘೋಷಃ ಶತಾನಂದೋ ಉರ್ಧ್ವತಶ್ಚೈವ ಪಂಚಮಃ ।
ವಿಜಯೋ ರುದ್ರಭಟ್ಟಶ್ಚ ವಾಮನಾಖ್ಯಸ್ತಥಾಷ್ಟಮಃ ।
ಸ ಯಾದವಪ್ರಕಾಶಶ್ಚ ನವಮಃ ಸಂಪ್ರಕೀರ್ತಿತಃ ।
ರಾಮಾನುಜಃ ತಥಾ ಭರ್ತೃಪ್ರಪಂಚಃ ದ್ರವಿಡಸ್ತಥಾ ।
ಬ್ರಹ್ಮದತ್ತೋ ಭಾಸ್ಕರಶ್ಚ ಪಿಶಾಚೋ ವೃತ್ತಿಕಾರಕಃ ।
ತಥಾ ವಿಜಯಭಟ್ಟಶ್ಚ ವಿಷ್ಣುಕ್ರಾಂತಿಸ್ತಥೈವಚ ।
ವಾದೀಂದ್ರಶ್ಚ ತತಃ ಪಶ್ಚಾತ್ ತಥಾ ಮಾಧವದಾಸಕಃ ।
ತತಃ ಪಶ್ಚಾತ್ಸಂಕರಶ್ಚ ಏಕವಿಂಶತಿವಾದಿಭಿಃ ।

| | | |
|---|---|---|
| ೧. ಭಾರತೀ | ೮. ವಾಮನಃ | ೧೫. ಪಿಶಾಚಃ |
| ೨. ವಿಜಯಃ | ೯. ಯಾದವಪ್ರಕಾಶಃ | ೧೬. ವೃತ್ತಿಕಾರಕಃ |
| ೩. ಸಚ್ಚಿದಾನಂದಃ | ೧೦. ರಾಮಾನುಜಃ | ೧೭. ವಿಜಯಭಟ್ಟಃ |
| ೪. ಬ್ರಹ್ಮಘೋಷಃ | ೧೧. ಭರ್ತೃಪ್ರಪಂಚಃ | ೧೮. ವಿಷ್ಣುಕ್ರಾಂತಃ |
| ೫. ಶತಾನಂದಃ | ೧೨. ದ್ರವಿಡಃ | ೧೯. ವಾದೀಂದ್ರ |
| ೬. ವಿಜಯಃ | ೧೩. ಬ್ರಹ್ಮದತ್ತಃ | ೨೦. ಮಾಧವದಾಸಃ |
| ೭. ರುದ್ರಭಟ್ಟಃ | ೧೪. ಭಾಸ್ಕರಃ | ೨೧. ಸಂಕರಃ |

ಈ ಇಪ್ಪತ್ತೊಂದು ಕುಭಾಷ್ಯಗಳು. (ಮತಗಳು), ಮೇಲೆ ಹೇಳಿದ ಇಪ್ಪತ್ತೊಂದು ಕುಮತಪ್ರವರ್ತಕರಾದ ಕುತ್ಸಿತವಾದ ಮಾಯಿಗಳ ಕುತ್ಸಿತವಾದ ಯುಕ್ತಿಗಳು–ಎಂದರೆ, ಹರಿಸರ್ವೋತ್ತಮ, ವಾಯುಜೀವೋತ್ತಮ ತಾರತಮ್ಯ, ಪಂಚಭೇಧ ಸತ್ಯವಾದ ಸೈಜಾರ್ಥದಿಂದ ಸಹಿತವಾದ ವೇದಾರ್ಥಗಳಿಗೆ ವಿರುದ್ಧವಾದ ಅರ್ಥದಿಂದ ಸಹಿತವಾದ, ಭಗ್ನಗಳಾದ ವೇದವಿರುದ್ಧವಾದ ಯುಕ್ತಿಗಳಿಂದ ಸಹಿತವಾದ ಗ್ರಂಥಗತ ಕ್ಷುದ್ರಯುಕ್ತಿಗಳ, ವೇದ ಸ್ಮೃತಿಗಳಿಂದ ಆಯಾ ಮತಪ್ರವರ್ತಕರ ಪರಾಜಯಮಾಡಿ, ರಮಾ-ಬ್ರಹ್ಮಾದಿಗಳಿಂದಲೂ ಶ್ರೇಷ್ಠನೂ, ದುರಿತಪರಿಹಾರಕನಾದ ನಾರಾಯಣ ದೇವರು-ಎಂದು ವೇದಾರ್ಥಗಳಿಂದ ಸ್ಥಾಪನಮಾಡಿದ, ಶ್ರೀದೇವೇರೇ ಪತ್ನಿಯಾಗುಳ್ಳ

ಪರಮಾತ್ಮಗೆ ಸದನಸಾಂಕೇತರಾದ ಮುಖ್ಯಅಧಿಷ್ಠಾನರಾದವರೇ, ಹಾಂಗೂ ಗರುಡದೇವರು, ರುದ್ರದೇವರು ಇವರುಗಳಿಂದ ಚಂದಾಗಿ ಸ್ತೋತ್ರಮಾಡಿಸಿ ಕೊಳ್ಳಲ್ಪಟ್ಟಂಥಾವರೇ, ಅಜ್ಞಾನಾದಿ ದೋಷಗಳಿಂದ ರಹಿತರಾದ. ಅಸುರಾ ವೇಶದಿಂದ ರಹಿತರಾದ ಏಕಾದ್ಯಶಮಹಿಮೋಪೇತರಾದಂಥವರೇ, ತಾರ ತಮ್ಯಾನುಸಾರ ಗುರುಗಳೊಳಗೆ ಶ್ರೇಷ್ಠರಾದ ಜೀವೋತ್ತಮರಾದ ವಾಯು ಅಂಶಸಂಭೂತರಾದ ಮಧ್ವಾಚಾರ್ಯರೇ, ಶ್ರೇಷ್ಠವಾದ ಅಂತಃಕರಣದಿಂದ ನೋಡಿ, ಕಾಪಾಡಿ-ಎಂತ ತಾತ್ಪರ್ಯ. ॥೧॥

## ೩. ಭಾವಪ್ರಕಾಶಿಕೆ

ಸೌರ, ಶಾಕ್ತ, ಗಾಣಾಪತ್ಯ-ಮೊದಲಾದ ೨೧ ಮತಗಳ ಕುಯುಕ್ತಿಗಳನ್ನು ನಿರಾಕರಿಸಿ, "ಏಕವಿಂಶತಿ ಕುಭಾಷ್ಯದೂಷಕಂ"-ಎಂಬ **ಮಧ್ವವಿಜಯ**ವಾಕ್ಯದಂತೆ ಬ್ರಹ್ಮಸೂತ್ರಕ್ಕೆ ೨೨ನೇ ಭಾಷ್ಯವನ್ನು ರಚಿಸಿ, ಹರಿಸರ್ವೋತ್ತಮನೆಂದು ಸ್ಥಾಪಿಸಿದ, ಗರುಡ, ಶೇಷ, ರುದ್ರಾದಿಗಳಿಂದ ಸ್ತುತ್ಯವಾದ ಮಹಿಮೆಯುಳ್ಳ ಗುರುಶ್ರೇಷ್ಠರಾದವರೇ ಮಧ್ವಾಚಾರ್ಯರೇ ! ನಿಮ್ಮ ಕೃಪಾಕಟಾಕ್ಷದಿಂದ ನನ್ನನ್ನು ನೋಡಿ, ಈ ಸಂಧಿಯಲ್ಲಿ ನಾನು ಹೇಳುವುದೆಲ್ಲವೂ ನಿಮ್ಮ ವಾಕ್ಯ ಗಳಿಗೆ ಅವಿರೋಧವಾಗಿ, ಸರ್ವಜನಸಮ್ಮತವಾಗುವಂತೆ ಮಾಡಿರಿ. ॥೧॥

## ೪. ಭಾವದರ್ಪಣ

ಶ್ರೀಗುರುಭ್ಯೋನಮಃ॥ ಶ್ರೀಹರಿಃ ಓಂ॥ ಈಗ ಬ್ರಹ್ಮಾದಿ ಜೀವರ ಕಲ್ಪಸಾಧನ ಮತ್ತು ಅಪರೋಕ್ಷ-ಇದರ ವಿಚಾರ ಹೇಳೋಉದ್ದಿಶ್ಯ, **ಕಲ್ಪಸಾಧನಸಂಧಿ**– ಉಪಕ್ರಮಿಸುತ್ತಾರೆ। ಶ್ರೀ ಹರಿರಿತಿ । ಶ್ರೀಮನ್ಮಧ್ವಾಚಾರ್ಯ ಗುರುವರ್ಯರು ಖಂಡನೆ ಮಾಡಿದ ಮತ ಹೇಳುತ್ತಾರೆ। ಏಕವಿಂಶತೀಂತಿ । ಶ್ರೀಕಳತ್ರನ ಸದನ ಆದಿಶೇಷ. ದ್ವಿಜಪ- ಗರುಡ. ಪಿನಾಕಿ–ರುದ್ರ, ಇವರಿಂದ ಸನ್ನುತ-ಸ್ತುತ್ಯ–ಎಂಬರ್ಥ. ॥೧॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಶ್ರೀರಸ್ತು ಹರಿಃ ಓಂ॥ ಏವಮಂಶಾಬುಧೌ (ಧಿಂ) ತೀರ್ಣೋ ಹನುಮತ್ಪ್ರೋತ ಸಂಶ್ರಯಾತ್॥ ಅಪರೋಕ್ಷಾಖ್ಯ ಗಂಗಾಭಃಸುಸ್ನಾನ ನಿರತಃ ಮುತಃ ॥೧॥ ನತ್ವಾ ಶ್ರೀ ಕೇಳಿಪಾತ್ರಂ ತಂ ಮಧ್ವಹೃತ್ಪದ್ಮವಾಸಿನಾಮ್॥ ಜಗನ್ನಾಥಗುರೂಪಾಸ್ಯಂ ನರಸಿಂಹಂ ಭಜೇಽನಿಶಮ್॥ ಬಹುಭಿಃ ಜನ್ಮಭಿಃ ಸಾಧ್ಯಂ ಕೈವಲ್ಯಂ ಭಕ್ತಿಮಜ್ಜನೈಃ ॥ ನೈವಂ ವಿಷಯಸೌಖ್ಯಂ ಯತ್ ತದರ್ಥಂ ಪ್ರಯತೇತ ವೈ ॥೨॥ ನೃವರಾಣಾಂತು ಕೈವಲ್ಯಂ ಯಾವಜ್ಜನ್ಮಭಿರಾಪ್ಯತೇ॥ ದೇವಾನಾಂ ಬಹುಕಲ್ಪೈಸ್ತು ದ್ವಿಧಾ ದೃಷ್ಟಿಃ ತತಃ ಪರಮ್ ॥೪॥ ತತಃ ಸಿದ್ಧಿಂ ವಿಮೋಕ್ಷಾಖ್ಯಾ ಭವೇದ್ದೇವಂ ವಿಲಂಬತಃ॥ ಯುಕ್ತೀನಾಂ ವಿವೃತಾವೇವಂ ಪ್ರೋಕ್ತಂ ಜ್ಞೇಯಂ ಸದಾ ಜನೈಃ ॥೫॥ ಪ್ರಕಾಶಸಂಹಿತಾ ತತ್ರಮಾನಂ ಭಾಗವತಂ ತಥಾ॥ ತತ್ತಾತ್ಪರ್ಯಗತಂ ಶ್ರೀಮನ್ಸ್ಮೃತ್ವಾ ಮಂಜರಿಕಾಗತಂ ||೬॥ ಸುಬೋಧಃ ಭಾವ್ಯ ಇತಿ ಸರ್ವಾಭೀಪ್ಸಿತಮೇವ ಯತ್॥ ತನ್ನಿರೂಪಯಿತುಂ ತ್ವದ್ಧಾ ಮಂಗಲಂ ಕರ್ತುಮಿಚ್ಛವಃ॥೭॥ಗುರುಸ್ತವನಮೇವಾದೌ ಸರ್ವಕಾರ್ಯ ಸುಸಾಧನಮ್॥ ಚಿಂತಯಂತಃ ಪ್ರಧಾನೋಕ್ತಂ ಮಧ್ವಾಚಾರ್ಯಾನ್ ಸ್ಮರಂತಿ ತೇ॥೮॥ 'ಏಕ' ಇತಿ॥ 'ಕಾಕು' —ಕೆಟ್ಟ॥ 'ಕುಹಕ'—ಕಪಟ॥ 'ಶ್ರೀ' ಇತಿ॥ 'ಶುಚಿಷದ್' ಇತಿ ಶ್ರುತೇಃ॥ ದ್ವಿಜಾಃ ಪಕ್ಷಿಣಃ॥ ಪರಃ ಮಿಯತೇ ಅನೇನ ಇತಿ ಪರಮಾಃ॥ ಯದ್ವಾಸರ್ವಜೀವರಾಶೇಃ ಪರಮಃ॥ ಅತ ಏವ ತತ್ಕಟಾಕ್ಷಯಾಚನಾ॥ ಯ ದಿವಾ ನಿರ್ವ್ಯಾಜಾ ಯಾ ಕೃಪಾ॥ ಪ್ರಯೋಜನವಿಕಲಾ ಇತಿ ಯಾವತ್॥ 'ಭಕ್ತಾನ್' ॥೧॥

## ಕನ್ನಡಾರ್ಥ

ಹೀಗೆ 'ಅಂಶ', 'ಆವೇಶ' ಸಂಗ್ರಹಾತ್ಮಕವಾದ ಬೃಹತ್ತಾರತಮ್ಯವೆಂಬ ಸಮುದ್ರವನ್ನು ಹನುಮಂತನೆಂಬ ನೌಕಾಸಹಾಯದಿಂದ ದಾಟಿದೆವು. ಇದರಲ್ಲಿ ಅಪರೋಕ್ಷಜ್ಞಾನವೆಂಬ ಭಾಗೀರಥೀಸ್ನಾನದಲ್ಲಿ ನಿರತವಾಗಿರುವುದೇ

ಕಾರಣ ॥೧॥ ಶ್ರೀಜಗನ್ನಾಥಗುರೂಪಾಸ್ಯನೂ ಮಧ್ವಾಚಾರ್ಯರ ಹೃದಯ ಕಮಲ ವಾಸಿಯೂ, ರಮಾವಿಲಾಸಪಾತ್ರನೂ, ಆದ ಶ್ರೀನೃಸಿಂಹದೇವನನ್ನು ಸದಾ ಭಜಿಸುತ್ತೇವೆ. ॥೨॥ ಭಕ್ತಿಯುಳ್ಳವರಿಗೂ ಸಹ ಕೈವಲ್ಯವು, ಮೋಕ್ಷವು ಬಹು ಜನ್ಮಗಳಿಂದ ದೊರೆಯುವಂಥದು. ಆದರೆ, ವಿಷಯಸುಖವು ಮಾತ್ರ ಹಾಗೆ ದುರ್ಲಭವಲ್ಲ, ಸುಲಭ. ಆದುದರಿಂದ, ದುರ್ಲಭವಾದ ಕೈವಲ್ಯಕ್ಕೋಸ್ಕರ ಎಲ್ಲರೂ ಪ್ರಯತ್ನಿಸುತ್ತಾರೆ. ॥೩॥ ಮನುಷ್ಯೋತ್ತಮರಿಗೆ ಕೈವಲ್ಯವು ಯಾವತ್ತೂ ಜನ್ಮಗಳು ಕಳೆದ ನಂತರ ದೊರೆಯುತ್ತದೆ. ದೇವತೆಗಳಿಗೆ ಬಹಳ ಕಲ್ಪಗಳಿಂದ ದೊರೆಯುತ್ತದೆ. ಹೀಗೆ, ಜ್ಞಾನ, ಉಪಾಸನ,ಅನಂತರ ಮೋಕ್ಷ ವೆಂಬ ಸಿದ್ಧಿಯಾಗುತ್ತದ. ಹೀಗೆ, ಮುಕ್ತಿಯು ಬಹುಕಾಲದ ಸಾಧನೆಗಳಿಂದ ಸಾಧ್ಯವಾದದ್ದು. ತಾರತಮ್ಯನಿವೃತ್ತಿಯಲ್ಲಿ ಹೀಗೆ ನಿರೂಪಿಸಲಾಗಿದೆ. ಅದನ್ನು ಜನರು ಸದಾ ತಿಳಿಯಬೇಕು. ಈ ವಿಷಯದಲ್ಲಿ ಪ್ರಕಾಶಸಂಹಿತಾ, ಭಾಗವತ ತಾತ್ಪರ್ಯಮುಕ್ತಾಮಂಜರೀ- ಈ ಮುಂತಾದ ಗ್ರಂಥಗಳ ವಚನಗಳು ಆಧಾರ ಗಳಾಗಿರುತ್ತವೆ. ॥೪॥ ಸುಲಭವಾಗಿ ತಿಳಿದುಕೊಳ್ಳಲು ಸರ್ವರೂ ಬಯಸು ತ್ತಾರೆ. ಆದುದರಿಂದ, ಈ ಕಲ್ಪಸಾಧನಗಳನ್ನು ಸುಲಭವಾಗಿ ತಿಳಿಸುವುದಕ್ಕೆ ಮಂಗಲವನ್ನು ಮಾಡಬಯಸಿ, ಸರ್ವಕಾರ್ಯಗಳಿಗೆ ಗುರುಸ್ತೋತ್ರವೇ ಮುಖ್ಯ, ಮೊದಲನೆಯ ಸಾಧನವಾದುದೆಂದು ಬಗೆಯುತ್ತಾ, ಶ್ರೀಜಗನ್ನಾಥ ದಾಸರು ಶ್ರೀಮನ್‌ಮಧ್ವಾಚಾರ್ಯರನ್ನು ಈ **'ಏಕವಿಂಶತಿ'**-ಎಂಬ ಪದ್ಯ ದಿಂದ ಸ್ಮರಿಸುತ್ತಾರೆ. **'ಹಂಸಃ ಶುಚಿಷದ್'** ಈ ಮಂತ್ರದಲ್ಲಿ–'ಶುಚಿ'-ಮುಖ್ಯ ಪ್ರಾಣನಲ್ಲಿ, 'ಷದ್'– ಇರುವವನು–ಎಂದು ಹೇಳಿರುತ್ತದೆ. ಆದುದರಿಂದ, ಶ್ರೀಹರಿಯು ಶುಚಿನಾಮಕ ಮುಖ್ಯಪ್ರಾಣನಲ್ಲಿ ಇರುತ್ತಾನೆ. ಈ ಕಾರಣದಿಂದ, ಶ್ರೀಕಳತ್ರನಾದ ನಾರಾಯಣನಿಗೆ ಮುಖ್ಯಪ್ರಾಣಾವತಾರರಾದ ಶ್ರೀಮಧ್ವಾ ಚಾರ್ಯರು **'ಸದನ'** ನಿವಾಸಸ್ಥಾನರಾಗಿರುತ್ತಾರೆ.

'ದ್ವಿಜ'- ಪಕ್ಷಿಗಳು. ಅವುಗಳ ಪ-ಪತಿ– ಗರುಡ. 'ದ್ವಿಜಪ'. ಸಮಸ್ತ ಪ್ರಪಂಚವನ್ನೂ ವಿಹಾರಿಸಿ ಆಳೆಯುವವನು. ಆದುದರಿಂದ, ಪರಮ ಅಥವಾ ಸರ್ವ ಜೀವರಾಶಿಗಳಿಗಿಂತಲೂ ಸದಾ ಪರಮ–ಉತ್ತಮನಾದುದರಿಂದ, **'ಪರಮ'** ಎಂದು ಹೇಳುತ್ತಾರೆ.

ಇನ್ನು 'ಪರಮ' ಎಂಬ ಪದವನ್ನು 'ಕೃಪೆ'ಯಲ್ಲಿ ಅನ್ವಯಿಸಿದರೆ ನಿರ್ವ್ಯಾಜವಾದ ಕೃಪೆಯೆಂದು-ಅರ್ಥ ತಿಳಿಯಬೇಕು. ಅಂದರೆ, ವಿಷಯ ಸಂಬಂಧಿಯಾದ ಪ್ರಯೋಜನೆಗಳಿಲ್ಲದೇ ಇರುವ ಕೃಪೆಯೆಂದು ತಾತ್ಪರ್ಯ. ॥೧॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸಾಧನಾನುಸಾರಗತಿಯನ್ನು ಕೊಡುವುದರಿಂದಲೇ, ಸಾಧನ ತಾರತಮ್ಯ ಅಪರೋಕ್ಷ ತಾರತಮ್ಯ,ತತ್ಕಾಲ ಸಹ ತಿಳಿಯಬೇಕೆಂದು ಹೇಳುವ, ಕರ್ಮಯೋಗಿ ಜ್ಞಾನಯೋಗಿ, ಭಕ್ತಿಯೋಗಿ- ಎಂದು ಮೂರು ವಿಧ ಸಸ್ಸೃತಿಯೋಗ್ಯ ಜೀವಗಣದ ಸಾಧನ- ಮೊದಲಾದವನ್ನು ಹೇಳುವ ಹರಿಕಥೆ ಎಂಬ ಅಮೃತ ರೂಪಮಧ್ವಶಾಸ್ತ್ರಸಾರವೆನ್ನುವುದನ್ನು, ಗುರುಕಟಾಕ್ಷದಿಂದ ಯಥಾಶಕ್ತಿ ಹೇಳುವೆ. ದೇವರ ಅತ್ಯಂತ ಭಕ್ತರು, ಈಸಂಧಿಯಲ್ಲಿ ಆದರದಿಂದ ಕೇಳಿ ಸಂತೋಷಪಡಬೇಕು. ॥೨॥

ಮಧ್ವಶಾಸ್ತ್ರಜ್ಞಾನಾರ್ಥವಾಗಿ,ಮಧ್ವಾಚಾರ್ಯರ ಕೃಪೆಯನ್ನು ಪಾರ್ಥಿಸುತ್ತಾರೆ. **ಏಕವಿಂಶತಿ**-ಎಂದು. ಇಪ್ಪತ್ತೊಂದು ಮತಪ್ರವರ್ತ, ಕುತ್ಸಿತ ಕಪಟಯುಕ್ತ ಕುಭಾಷ್ಯಯುಕ್ತಿಗಳನ್ನು ವೇದಸದ್ಯುಕ್ತಿಯಿಂದ ನಿರಾಕರಿಸಿ, ಶ್ರೀಹರಿಯೇ ಸರ್ವೋತ್ತಮನೆಂದು ಸಸ್ಮತ ಸಾಧಿಸಿದ ಶ್ರೀಕಳತ್ರನೆಂಬ ನಾರಾಯಣಗೆ, ಸದನ ವೆಂಬ ಮನೆಯಂತೆ, ಮುಖ್ಯಾಧಿಷ್ಠಾನರಾದ, ದ್ವಿಜಪನೆಂಬ ಪಕ್ಷೀಂದ್ರ ಗರುಡ ನಿಂದಲೂ, ಪಿನಾಕಿ- ಎಂಬ ರುದ್ರನಿಂದಲೂ, ಸಂಸ್ತುತಮಹಿಮೆಯುಳ್ಳ ಮಧ್ವಾಚಾರ್ಯರೆಂಬ ಗುರುವರ್ಯರೇ, ಕೃಪಾಕಟಾಕ್ಷದಿಂದ ನೋಡಿ, ಸಚ್ಛಾಸ್ತ್ರ ಜ್ಞಾನವನ್ನು ಪ್ರಕಾಶಮಾಡಿಸಿ-ಎಂದರ್ಥ.

**ಪ್ರಮಾಣ ಭಾರತೀ ವಿಜಯಶ್ಚೈವ...............ಏಕವಿಂಶತಿವಾದಿಭಿಃ॥**
—ಎಂಬುದಾಗಿ ಮೇಲೆ ಹೇಳಿದ ಮತವಿವರ ತಿಳಿಯುವುದು.

(ಈ ಪ್ರಮಾಣದ ಪೂರ್ಣ ಪಾಠವನ್ನು ಶ್ರೀಸಂಕರ್ಷಣ ಒಡೆಯವ್ಯಾಖ್ಯಾ ದಲ್ಲಿ ಕೊಟ್ಟಿರುವುದರಿಂದ. ಇದನ್ನು ಅಲ್ಲಿ ನೋಡಿಕೊಳ್ಳುವುದು) ॥೧॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಭಗವತ್ಪ್ರಸಾದಕ್ಕೆ ಪಂಚಭೇದ–ತಾರತಮ್ಯಜ್ಞಾನ ಅತ್ಯಗತ್ಯ. ಅಂತಹ ತಾರತಮ್ಯಕ್ರಮದಿಂದಲೇ, ಪುರುಷೋತ್ತಮನಾದ ಪರಾತ್ಪರರನ್ನು ಸ್ತೋತ್ರ ಮಾಡಬೇಕು. ಈ ಅನುಜ್ಞಾನದ ಭದ್ರತಳಹದಿಯನ್ನು ಹಾಕಿದವರು. ಶ್ರೀವಾಯುದೇವರ ತೃತೀಯಾವತಾರಭೂತರಾದ **ಶ್ರೀಮನ್ಮಧ್ವಾಚಾರ್ಯರು.** ಈ ಕಾರಣದಿಂದ, ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸ್ತೋತ್ರದಿಂದಲೇ, ಪ್ರಸಕ್ತಸಂಧಿಯನ್ನು ಆರಂಭಿಸುತ್ತಾರೆ— ಜ್ಞಾನಿವರೇಣ್ಯರೂ ಸತ್ಸಂಪ್ರದಾಯಕೋವಿದರೂ ಆದ ಶ್ರೀಜಗನ್ನಾಥದಾಸವರ್ಯರು.

೨. ಶ್ರೀಮಧ್ವಸಿದ್ಧಾಂತವು ಅನಾದಿ ಮತ್ತು ನಿತ್ಯ. ಆದರ ಪೂರ್ವದಲ್ಲಿ ಮಿಥ್ಯಾವಾದಿಗಳ ಗೊಂದಲ ಹೆಚ್ಚಾಗಿ, ಜಗತ್ತು ಮಿಥ್ಯೆ–ಪಂಚಭೇದ ತಾರತಮ್ಯಗಳೆಲ್ಲಾ ಸುಳ್ಳು, ಪರಬ್ರಹ್ಮ ವಸ್ತುವೊಂದೇ ಸತ್ಯ, ಸರ್ವ ಜಗತ್ತೂ ಪರಬ್ರಹ್ಮಸ್ವರೂಪವಾಗಿದೆ. ಜೀವೇಶರ ಐಕ್ಯವೇ ಪರಮಗುರಿ. ಅದೇ ಸಕಲ ಸಿದ್ಧಾಂತಗಳ ಸಾರ–ಎಂದು ಸಕಲವೇದಗಳ ಮೂಲಭೂತ ಅಭಿಪ್ರಾಯಕ್ಕೆ ವಿರುದ್ಧವಾದ ಕುಯುಕ್ತಿಗಳನ್ನು ಸ್ವಕಲ್ಪಿತವಾಗಿ ಮಾಡಿ, ಜನರಲ್ಲಿ ಮಾಯಾವಾದವನ್ನು ಹರಡುತ್ತಿದ್ದ ಕಾಲವದು. ನಿಜವಾದ ವಿಜ್ಞಾನಭಾಸ್ಕರನು ಅಸ್ತಂಗತವಾಗುತ್ತಿರುವಾಗ. ತಮೋಯೋಗ್ಯಶಾಸ್ತ್ರಗಳಿಂದ ಅಜ್ಞಾನ-ಭ್ರಾಂತಿ-ವಿಪರೀತ ಜ್ಞಾನ–ಎಂಬ ಕತ್ತಲೆ ಎಲ್ಲೆಲ್ಲೂ ಹರಡಿತು. ಇದನ್ನರಿತ, ಸರ್ವಜ್ಞನ ಆದೇಶದಂತೆ, ಶ್ರೀವಾಯುದೇವರು ಪಾಜಕವೆಂಬ ದಿವ್ಯಕ್ಷೇತ್ರದಲ್ಲಿ **ವಾಸುದೇವ** ನಾಮಕರಾಗಿ, **ಮಧ್ಯಗೇಹಭಟ್ಟ** ದಂಪತಿಗಳಲ್ಲಿ ಪ್ರಾದುರ್ಭಾವರೂಪದಿಂದ ಅವತರಿಸಿದರು. ಆ ಜ್ಞಾನಸೂರ್ಯರು ಅಜ್ಞಾನವೆಂದು ತಮವನ್ನು ಪರಿಹರಿಸಿ, ಸಜ್ಜನರ ಹೃನ್ಮಂದಿರದಲ್ಲಿ ಸುಜ್ಞಾನದ ಜ್ಯೋತಿಯನ್ನು ಹಚ್ಚಿ, ಅವರ ಹೃನ್ಭೂಮಿಕೆಯಲ್ಲಿ **ವಿಷ್ಣುಭಕ್ತಿ**–ಎಂಬ ಬೀಜವನ್ನು ಬಿತ್ತಿದರು.

೩. ತತ್ತ್ವಜ್ಞಾನವು ಉದಯಿಸುವುದಕ್ಕೆ ಪೂರ್ವದಲ್ಲಿ, ಇಪ್ಪತ್ತೊಂದು

ಕುಮತಗಳು ಜಾರಿಯಲ್ಲಿದ್ದವು. ಇದನ್ನು **ಏಕವಿಂಶತಿ ಮತ**–ಎಂದಿದ್ದಾರೆ. ವಿಶಂತಿ-ಎಂದರೆ ಇಪ್ಪತ್ತು. ಏಕವಿಂಶತಿ–ಎಂದರೆ, ೨೧ ಎಂದರ್ಥ.

ಆ ಏಕವಿಶಂತಿಮತಗಳು ಯಾವುವೆಂದರೆ :–

| | | | |
|---|---|---|---|
| ೧. ಭಾರತೀ, | ೨. ವಿಜಯ. | ೩. ಸಚ್ಚಿದಾನಂದ | ೪. ಬ್ರಹ್ಮಘೋಷ |
| ೫. ಶತಾನಂದ | ೬. ವಿಜಯ | ೭. ರುದ್ರಭಟ್ಟ | ೮. ವಾಮನ |
| ೯. ಮಾಧವಪ್ರಕಾಶ | | ೧೦. ಭರ್ತೃಪ್ರಪಂಚ | ೧೧. ದ್ರವಿಡ |
| ೧೨. ಬ್ರಹ್ಮದತ್ತ. | | ೧೩. ಭಾಸ್ಕರ | ೧೪. ಪಿಶಾಚಃ |
| ೧೫. ವೃತ್ತಿಕಾರಕ | | ೧೬. ವಿಜಯಭಟ್ಟ. | ೧೭. ವಿಷ್ಣುಕ್ರಾಂತ |
| ೧೮. ವಾದೀಂದ್ರ. | | ೧೯. ಮಾಧವದಾಸ. | ೨೦. ಶಂಕರ |
| ೨೧. ರಾಮಾನುಜ | | | |

೪. ಅಂತಹ ಇಪ್ಪತ್ತೊಂದು ಮತಪ್ರತಿಷ್ಠಾಪಕರಾದ ಮತಾಚಾರ್ಯರು ಮತ್ತು ಅವರ ಅನುಯಾಯಿಗಳು ತಮೋ ಯೋಗ್ಯರಾದ ಮಾಯಾವಾದಿಗಳು. ಇದನ್ನು **ಕಾಕುಮಾಯ್ಗಳ**–ಎಂದಿದ್ದಾರೆ. ವೇದಗಳಿಗೆ ವಿರುದ್ಧವಾದ ಸ್ವಕಲ್ಪಿತ ವಾಕ್ಯರೂಪವಾದ ಅವರ ಮತಪ್ರಸಾರವನ್ನು, **ಕುಹಕಯುಕ್ತಿ** ಎಂದಿದ್ದಾರೆ. ಅವರ ಯುಕ್ತಿಗಳು ಕುಹಕ– ಎಂದರೆ, ದುಷ್ಟಭಾವನೆಯಿಂದ ಕೂಡಿದ್ದು-ಎಂದರ್ಥ.

**ವಿಶೇಷ ವಿಷಯಃ–**

೨೧. ಮತಗಳಪೈಕಿ ಕೊನೆಯ ಎರಡು-ಕ್ರಮವಾಗಿ ಶಂಕರ ಮತ್ತು ರಾಮಾನುಜ ಮತಗಳು. ಶಂಕರ ಮತವು ೨೦ನೆಯದು. ಇಲ್ಲಿ ಸಂಖ್ಯಾ ಕ್ರಮವು ೨೦. ಅಂದರೆ, ಎರಡು ಮತ್ತು ಸೊನ್ನೆ. ಆದರರ್ಥ–ಇಲ್ಲಿ–ಅಂದರೆ, ಜಗತ್ತಿನಲ್ಲಿ ಭೇದ. ವ್ಯಾವಹಾರಿಕ ಸತ್ಯ. ಪರದಲ್ಲಿ ಸೊನ್ನೆ. ಅಂದರೆ ಐಕ್ಯ. (ನಿರಾಕಾರ-ನಿರ್ಗುಣತ್ವ), ರಾಮಾನುಜ ಮತವು ೨೧ನೆಯದು. ೨-ಎಂದರೆ, ಇಲ್ಲಿ ಭೇದ. ೧–ಎಂದರೆ ಪರದಲ್ಲಿ ಜೀವರು ಈಶನಿಗೆ ಸಮಾನರು. ಇಹದಲ್ಲಿ

ಭೇದ ಮತ್ತು ಪರರಲ್ಲಿ ಸಾಮ್ಯ. ಆದರೆ, ಶ್ರೀಮದಾಚಾರ್ಯರ ಮತವು ೨೨ನೆಯದು. ೨ ಮತ್ತು ೨. ಅಂದರೆ, ಇಲ್ಲಿಯೂ ಭೇದ ಮತ್ತು ಮುಕ್ತಿಯಲ್ಲೂ ಭೇದ. (ತಾರತಮ್ಯ) (೨೦ನೆಯದು ಮುಕ್ತಿಯಲ್ಲಿ ಐಕ್ಯ. ೨೧ನೆಯದು ಮುಕ್ತಿಯಲ್ಲಿ ಸಾಮ್ಯ. ೨೨ನೆಯದು ಮುಕ್ತಿಯಲ್ಲಿ ತಾರತಮ್ಯೋಪೇತವಾದ ಭೇದ.)

೫. ೨೧ ಮತಗಳನ್ನು ಯುಕ್ತಿಪೂರ್ವಕವಾಗಿ, ಪ್ರಮಾಣಪ್ರಮಿತರಾಗಿ ಖಂಡಿಸಿ, ಹರಿಸರ್ವೋತ್ತಮತ್ವ- ವಾಯುಜೀವೋತ್ತಮತ್ವ-ಪ್ರಪಂಚಸತ್ಯತ್ವ-ಪಂಚಭೇದ-ತಾರತಮ್ಯತತ್ತ್ವಗಳನ್ನು ಬೋಧಿಸಿದವರು-ಆಚಾರ್ಯ ಮಧ್ವರು. ವಿಷ್ಣುವೇ (ಹರಿಯೇ) ಸರ್ವಪ್ರಕಾರಗಳಲ್ಲಿಯೂ ಅತ್ಯಂತ ಶ್ರೇಷ್ಠವಸ್ತು. ರಮಾ ಬ್ರಹ್ಮಾದಿಸಕಲರೂ ಹರಿಯ ಅಧೀನರು. ಆತನ ದಾಸಭೂತರು.

೬. ಶ್ರೀ-ಎಂದರೆ ಲಕ್ಷ್ಮೀದೇವಿ. ಕಳತ್ರ-ಶಬ್ದವು ನಪುಂಸಕಲಿಂಗ. ಆದರ ಅರ್ಥ-ಪತ್ನಿ ಎಂದು. ಶ್ರೀಕಳತ್ರ-ಎಂದರೆ, ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು. ಅವನ ಸದನ-ಎಂದರೆ, ಮುಖ್ಯ ಪ್ರತಿಮಾ ಯಾರೆಂದರೆ, ಶ್ರೀವಾಯುದೇವರು. ಭಾರತೀರಮಣರು ಶ್ರೀಹರಿಯ ಪ್ರಥಮಾಂಗಭೂತರು. ಶ್ರೀವಿಷ್ಣುವಿನ ಮುಖ್ಯಪ್ರತೀಕರು. ಅಖಿಲಾಶ್ರಯರು. ಅತಿರೋಹಿತ ವಿಮಲವಿಜ್ಞಾನಿಗಳು. ಇದರಿಂದ, ಶ್ರೀವಾಯುದೇವರು ಶ್ರೀಕಳತ್ರನಸದನರು.

೭. **ದ್ವಿಜಪ**-ಪಕ್ಷಿಶ್ರೇಷ್ಠರಾದ ಗರುಡದೇವರು. ದ್ವಿಜ-ಎಂದರೆ,ಎರಡಾರ್ತಿ ಜನಿಸುವುದು-ಪಕ್ಷಿಗಳು. ಜನನವಾಗುವುವು. ಮೊದಲು ಮೊಟ್ಟೆ. ನಂತರ, ಮೊಟ್ಟೆ ಒಡೆದು ಮರಿಯುಂಟಾಗುವುದು. ಇದರಿಂದ ದ್ವಿಜ-ಎಂದರೆ, ಪಕ್ಷಿ ಎಂದರ್ಥ. ಪ-ಶ್ರೇಷ್ಠ. ಪಕ್ಷಿ ಶ್ರೇಷ್ಠರಾದ-ಶ್ರೀಗರುಡ ದೇವರು-'**ದ್ವಿಜಪ**'ರು.

೮. **ಪಿನಾಕ**-ಎಂಬ ಧನುಸ್ಸನ್ನು ತಮ್ಮ ಕರದಲ್ಲಿ ಧರಿಸಿರುವುದರಿಂದ, ಶ್ರೀಮಹರುದ್ರದೇವರಿಗೆ **ಪಿನಾಕಿ**-ಎಂದು ಹೆಸರು. ಅಂದರೆ. ಗರುಡ ದೇವರು ಮತ್ತು ರುದ್ರದೇವರಿಂದ ಸಂಸ್ತುತ್ಯಮಾನ್ಯರಾದವರು ಶ್ರೀವಾಯು

ದೇವರು. ಇದರಿಂದ. **ದ್ವಿಜಪಪಿನಾಕಿಸನ್ನುತ**–ಎಂದಿದ್ದಾರೆ. ಶೇಷದೇವರು ಭಾವೀರುದ್ರರಾದ ಪ್ರಯುಕ್ತ, ಶೇಷದೇವರೂ ಗ್ರಾಹ್ಯ. ಅಂದರೆ, ಗರುಡ-ಶೇಷ, ರುದ್ರರಿಂದ ಸನ್ನುತರು. ನಿಗಮಸಂಚಾರಿಗಳಾದ ವಾಯುದೇವರು ಭಳಿತ್ಥಾಸೂಕ್ತಾದಿ ವೇದಪ್ರತಿಪಾದ್ಯರು. ಇದರಿಂದ **ಮಹಿಮರು.**

೮. ಶ್ರೀಕಳತ್ರನ ಸದನರೂ, ದ್ವಿಜಪ ಪಿನಾಕಿ ಸನ್ನುತರೂ, ಮಹಾಮಹಿಮರೂ ಆದ ಶ್ರೀಮಧ್ವಾಚಾರ್ಯರೇ-ನೀವು ತ್ರೈಲೋಕ್ಯಾಚಾರ್ಯರು-ಸಕಲಸಜ್ಜನರಿಗೆ ಗುರುಗಳು. **(ಗುರುವರ್ಯ)** ಗುರುವರ್ಯರಾದ ಆಚಾರ್ಯಮಧ್ವರೇ, ನೀವು ತಮ್ಮ ಶ್ರೇಷ್ಠವಾದ ಕೃಪೆಯೆಂಬ ಕಟಾಕ್ಷದಿಂದ ನಮ್ಮನ್ನು ನೋಡಿ, ಯಥಾರ್ಥಜ್ಞಾನರೂಪವಾದ ಪ್ರಸಕ್ತಸಂಧಿಗತ ವಿಷಯವಾದ **ಅಪರೋಕ್ಷತಾರತಮ್ಯಜ್ಞಾನವನ್ನು** (ಕಲ್ಪಸಾಧನ ವಿಷಯ) ನನಗೆ ನೀಡಿ, ಉದ್ಧರಿಸಿ–ಎಂದು ಪ್ರಥಮಶ್ಲೋಕದಿಂದಲೇ ಗುರು ಮಧ್ವರನ್ನು ಪ್ರಾರ್ಥಿಸಿಕೊಂಡಿದ್ದಾರೆ. ॥೧॥

## ಪದ್ಯ-೨

**ಮೂಲ :**

**ವೇಧ ಮೊದಲಾಗಿಪ್ಪಮಲ ಮೋ ।**
**ಕ್ಷಾಧಿಕಾರಿಗಳಾದ ಜೀವರ ।**
**ಸಾಧನಗಳ ಪರೋಕ್ಷನಂತರ ಲಿಂಗಭಭಂಗವನು ॥**
**ಸಾಧುಗಳು ಚಿತ್ತಯಿಪುದೆನ್ನಪ ।**
**ರಾಧಗಳ ನೋಡದಲೆ ಚಕ್ರ ಗ ।**
**ದಾಧರನು ಪೇಳಿಸಿದ ತೆರದಂದದಲಿ ಪೇಳುವೆನು ॥೨॥**

**ಅವತರಣಿಕೆ**

ಬ್ರಹ್ಮಾದಿ ಜೀವರ ಸಾಧನ, ಅಪರೋಕ್ಷವಿಚಾರಗಳನ್ನು ತಿಳಿಸುತ್ತಾರೆ. ॥೨॥

**ಪ್ರತಿಪದಾರ್ಥ**

**ವೇಧ**— ಬ್ರಹ್ಮದೇವರು, **ಮೊದಲಾದ**— ಆದಿಯಾಗಿ ಉಳ್ಳ ದೇವತಾವರ್ಗ, **ಅಮಲ**—ಸ್ವರೂಪತಃ ಶುದ್ಧ ಸ್ವಭಾವವುಳ್ಳ, **ಮೋಕ್ಷಾಧಿಕಾರಿಗಳಾದ**—ಮುಕ್ತಿಯೋಗ್ಯರಾದ ಅಧಿಕಾರಿಗಳಾದ, **ಜೀವರ**— ಜೀವರುಗಳ, **ಸಾಧನ**— ಸಾಧನಾಕ್ರಮ, (ತಾರತಮ್ಯಾನುಸಾರ) **ಅಪರೋಕ್ಷ ನಂತರ**— ಸ್ಥೂಲದೇಹಗತ ಬಿಂಬಿನ ದರ್ಶನದ್ವಾರಾ, ಭಗವದಪರೋಕ್ಷಾನಂತರ, **ಲಿಂಗಭಂಗವನು**—ಲಿಂಗದೇಹನಾಶವುಳ್ಳವರಾಗಿ, **ಸಾಧುಗಳು**— ಈ ಸಮಸ್ತವಿಚಾರಗಳನ್ನೂ ಜ್ಞಾನಿಗಳಾದವರು, **ಎನ್ನ ಅಪರಾಧಗಳ ನೋಡದಲೆ**— ಶಾಸ್ತ್ರದಲ್ಲಿ ಹೇಳಿರುವ ನ್ಯೂನತೆಗಳನ್ನು ಪರಿಗಣಿಸದೆ, **ಚಿತ್ತಯಿಸುವುದು**—ಪ್ರಸಕ್ತ ಗ್ರಂಥಗತ ವಿಷಯಗಳನ್ನು ಚಿತ್ತಕ್ಕೆ ತಂದುಕೊಳ್ಳಬೇಕೆಂದು ದಾಸರಾಯರು ಪ್ರಾರ್ಥಿಸುತ್ತಾರೆ. **ಚಕ್ರ ಗದಾಧರನು**—ಚಕ್ರಗದಾ-ಇತ್ಯಾದಿ ಆಯುಧಗಳನ್ನು ಧರಿಸಿರುವ ಶ್ರೀಪರಮಾತ್ಮನೇ, **ಹೇಳಿಸಿದ ತೆರದಂದಲಿ**—ನನ್ನ ಅಂತರ್ಯಾಮಿಯಾಗಿ ನಿಂತು, ಏನನ್ನು ನುಡಿದು, ನುಡಿಸಿದ್ದಾನೆಯೋ, ಅದಕ್ಕನುಸಾರವಾಗಿ, **ಹೇಳುವೆನು**—ಪ್ರತಿಬಿಂಬಭಾವದಿಂದ ಹೇಳುವವನಾಗುತ್ತೇನೆ. ॥೨॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಬ್ರಹ್ಮಾದಿ ಜೀವರ ಸಾಧನ, ಅಪರೋಕ್ಷ ವಿಚಾರ ಹೇಳತ್ತೇವೆಂದು ಹೇಳುತ್ತಾರೆ.

ಸ್ವರೂಪಸ್ವಭಾವದಲ್ಲಿ ಭಗವದ್ದ್ವೇಷರಹಿತರಾದ, ನಿರ್ದೋಷರಾದ, ಪರಮಾತ್ಮನಲ್ಲಿ ಭಕ್ತಿಮಾಡತಕ್ಕ ಸ್ವಭಾವಸ್ವರೂಪದಲ್ಲಿ ತಾರತಮ್ಯಾನುಸಾರ ಯುಕ್ತರಾದ, ಪರಿಶುದ್ಧಜ್ಞಾನವುಳ್ಳ ಬ್ರಹ್ಮಾದಿ ದೇವತೆಗಳೇ ಮೊದಲಾಗಿ ಇರತಕ್ಕ, ಅಜ್ಞಾನಪರಿಹಾರವಾಗಿ, ಭಗವಂತನ್ನ ಹೃದಯಾಕಾಶದಲ್ಲಿ ಪ್ರತ್ಯಕ್ಷೀಕರಿಸಿಕೊಂಬೋದಕ್ಕೆ ಅಧಿಕಾರಿಗಳಾದ, ತೃಣಾಂತಜೀವರ ಸಾಧನ ತಾರತಮ್ಯಗಳ, ಸಾಧನ ಮಾಡಿ, ಸ್ಥೂಲದೇಹದಲ್ಲಿ ಭಗವದಪರೋಕ್ಷಾನಂತರ, ಲಿಂಗಭಂಗವಾಗಿ, ಜೀವಾಂತರ್ಗತದಲ್ಲಿ ಆಗತಕ್ಕ ಅಪರೋಕ್ಷಕ್ಕೆ ಸಾಧನಗಳನ್ನೂ, ಇವು ಯಾವತ್ತೂ ಚಕ್ರ ಗದಾ- ಇವುಗಳನ್ನ ಧರಿಸಿದ ಪರಮಾತ್ಮ ಪೇಳಿಸಿದ ಕ್ರಮದೋಪಾದಿಯಲ್ಲಿ ಹೇಳುತ್ತೇನೆ. ಜ್ಞಾನಿಗಳಾದವರು–ಶಾಸ್ತ್ರವು ಅನೇಕ ವೈಚಿತ್ರಗಳಿಂದ ಯುಕ್ತವಾಗಿ ಅದೆ. ಆ ವೈಚಿತ್ರ್ಯಗಳನುಸರಿಸಿ ಹೇಳಿದ್ದರೊಳಗೆ ಸಾವಕಾಶ, ನಿರವಕಾಶಪ್ರಮಾಣಗಳಿಂದ ಸಮನ್ವಯ ಮಾಡಿಕೋತಾ, ವ್ಯತ್ಯಸ್ಥಗಳೇಂಬೋದರನ್ನ ನೋಡದೇನೆ. ಈ ಗ್ರಂಥವನ್ನ ಚಿತ್ತಕ್ಕೆ ತಂದು ಕೊಳ್ಳೋವರಾಗಬೇಕು. (ಶಾಸ್ತ್ರಕ್ಕೆ ಅವಿರೋಧವಾಗಿ ಹೇಳಿದ್ದರೂ,ಸ್ವಾಹಂಕಾರ ಖಂಡನಾರ್ಥ ಜ್ಞಾನಿಗಳ ಪ್ರಾರ್ಥನಮಾಡತಕ್ಕ ಮರ್ಯಾದಾ- ಎಂತ ತಿಳಿಯ ಬೇಕು.) ॥೨॥

## ೨. ಭಾವಪ್ರಕಾಶಿಕೆ

ಬ್ರಹ್ಮದೇವರು ಮೊದಲು ಮಾಡಿ,ಮೋಕ್ಷಯೋಗ್ಯರಾದ ಸರ್ವಜೀವರು, ಎಷ್ಟೆಷ್ಟು ಕಲ್ಪಗಳ ಸಾಧನಾನಂತರ, ಅಪರೋಕ್ಷವನ್ನು ಹೊಂದುವರು, ಮತ್ತೆ ತದನಂತರ, ಮುಕ್ತಿಗೆ ಎಷ್ಟು ಕಲ್ಪಸಾಧನಗಳೇಬುವುದನ್ನು ಶ್ರೀಹರಿಯು ನನ್ನೊಳಗಿದ್ದು,ಪ್ರೇರಿಸಿದಂತೆ ಹೇಳುವೆನು. ಇದರಲ್ಲಿ ನನ್ನಪರಾಧವೇನಾದರೂ ಇದ್ದರೆ, ಕ್ಷಮಿಸಿ. ಸಾಧುಗಳು ಇದನ್ನು ಲಾಲಿಸಬೇಕೆಂದು ಬೇಡುವೆನು. ಇದರಿಂದ, ತಮ್ಮ ಸ್ವಾಂತಂತ್ರ್ಯಕರ್ತೃತ್ವವನ್ನು ದಾಸಾರ್ಯರು ನಿವಾರಣೆ ಮಾಡಿಕೊಂಡಿರುವರೆಂಬ ತಾತ್ಪರ್ಯ. ॥೨॥

### ೩. ಭಾವದರ್ಪಣ

ಬ್ರಹ್ಮಾದಿ ಜೀವರ ಸಾಧನ- ಶ್ರೀಹರಿಯು ಹೇಳಿಸಿದ್ದಾಗೆ ಹೇಳುತ್ತೇನೆ। ವೇಧಾ ಇತಿ। ಬ್ರಹ್ಮಾ. ॥೨॥

### ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

ಶ್ರೀಮತ್‌ಲಾತವ್ಯಾಂತೇವಾಸಿತ್ವಾತ್ ಅತೀತಭವೇ ತತ್ಪ್ರಸಾದಾಪಿ ಭಾವರ್ತಾಪಕ್ಷೇಣ ತತ್ಸ್ವರೂಪಿಕಂ ವಿವಕ್ಷುಃ ಭಿನ್ನಾನುಪೂರ್ವ್ಯಾ ಮುಕ್ತಾ ಮಂಜರೀಂ ಸಂಗೃಹ್ಣನ್ ಚಿಕೀರ್ಷಿತಂ ಪ್ರತಿಜಾನೀತೇ 'ವೇಧಾ' ಇತಿ॥ ಬ್ರಹ್ಮಾ॥ ಅಧಿಕಾರಿಣಃ ಆತೃಣಾತ್॥ 'ಚಿತ್ತಯಿಪ್ಪುದು' ಚಿತ್ತಕ್ಕೆ ತರಲಿ। "ನ ಪಾಂಡಿತ್ಯಾಭಿಮಾನೇನನಾಪಿ ಮತ್ಸರತಃ ಕ್ವಚಿತ್॥ ಯತ್ನಃ ತಥಾಪ್ಯರಿಗದಾಧರ ಪೂರ್ವಾಃ ಕ್ರಿಯಾಃಮಮ"॥ ಇತ್ಯಾಹ 'ಚಕ್ರ' ಇತಿ ॥೨॥

## ಕನ್ನಡಾರ್ಥ

ಪೂರ್ವಜನ್ಮದಲ್ಲಿ ಲಾತವ್ಯರೆಂಬ ಗುರುಗಳಲ್ಲಿ ವ್ಯಾಸಂಗಮಾಡಿದ್ದರು. ಅವರ ಪ್ರಸಾದದಿಂದ ಅಪರೋಕ್ಷಜ್ಞಾನವೂ ಉದಯಿಸಿತು. ಆದುದರಿಂದ, ಅಪರೋಕ್ಷಜ್ಞಾನೋತ್ಪತ್ತಿಯ ಕ್ರಮ- ಮುಂತಾದವುಗಳನ್ನು ಹೇಳಬಯಸಿ ದಾಸವರ್ಯರು ಬೇರೆ ಪದಗಳಿಂದ ಮುಕ್ತಾಮಂಜರಿಯನ್ನೇ ಅದರ ವಿಷಯಗಳನ್ನೇ ಹೇಳುತ್ತ, ತಮ್ಮ ಮನಸ್ಸಿನಲ್ಲಿದ್ದ ಕರ್ತವ್ಯವನ್ನು ತಿಳಿಸುತ್ತಾರೆ- 'ವೇಧ' ಎಂಬ ಪದ್ಯದಿಂದ.

'ವೇಧ'-ಚತುರ್ಮುಖ ಬ್ರಹ್ಮ. ಅಧಿಕಾರಿಗಳು ತೃಣಜೀವರನ್ನಾರಂಭಿಸಿ, ಚತುರ್ಮುಖನ ವರೆಗಿರುವರು. 'ಚಿತ್ತಯಿಪುದು'-ಚಿತ್ತಕ್ಕೆ ತರಲಿ.

ಪಾಂಡಿತ್ಯದಿಂದಾಗಲೀ, ಮಾತ್ಸರ್ಯದಿಂದಾಗಲೀ, ನಾವು ಈ ಪ್ರಯತ್ನವನ್ನು ಮಾಡುತ್ತಿರಲಿಲ್ಲ. ನಮ್ಮ ಕ್ರಿಯೆಗಳೆಲ್ಲವೂ ಚಕ್ರಗದಾಧಾರಿ ಶ್ರೀಹರಿಯ

ಪ್ರೇರಣೆಯನ್ನನುಸರಿಸಿ, ಅವನು ಮಾಡಿಸಿದಂತೆ ನಡೆಯುವೆವು—ಎಂದು ತಿಳಿಸುತ್ತಾರೆ,-'ಚಕ್ರಗದಾಧರ'-ಎಂಬ ವಾಕ್ಯದಿಂದ. ||೨||

### ೫. ಶ್ರೀಗುರುಹೃದಯಪ್ರಕಾಶಿಕೆ

ಅಧ್ಯಾಯಾರ್ಥ ಸಂಗ್ರಹಿಸಿ, ತಿಳಿಸಿ, ಸಜ್ಜನ ಪ್ರಾರ್ಥನೆ ಆಚರಿಸುತ್ತಾರೆ—ವೇಧ—ಎಂದು. ವೇಧ-ಎಂಬ ಬ್ರಹ್ಮನೇ ಮೊದಲಾದ, ಅಮಲಮೋಕ್ಷವೆಂಬ ಸನ್ಮುಕ್ತಿಗೆ ಅಧಿಕಾರಿಗಳೆಂದರೆ, ಅರ್ಹರಾದ ಯೋಗ್ಯಜೀವರ ಸಾಧನಗಳ ನಂತರ, ಅಪರೋಕ್ಷವೆಂಬ ಶ್ರೀಹರಿಪ್ರತ್ಯಕ್ಷವನ್ನು, ತದನಂತರ, ಲಿಂಗಶರೀರಪರಿಹಾರ ಕಾಲವನ್ನೂ ಸಹಾ, ಚಕ್ರ ಗದಾಧರನಾದ ದೇವರು ಹೇಳಿಸಿದಂತೆ ಹೇಳುವುವನ್ನು ತಪ್ಪು ಎಣಿಸದೆ, ಸಾಧುಗಳು ಚಿತ್ತಕ್ಕೆ ತರಬೇಕೆಂದರ್ಥ. ||೨||

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಋಜುಗಣಶ್ರೇಷ್ಠರೂ, ಶತಾನಂದರೂ ಆದ ಚತುರ್ಮುಖಬ್ರಹ್ಮದೇವರಿಗೆ "**ವೇಧ**" ಎಂತ ನಾಮ. ಬ್ರಹ್ಮದೇವರು ಆದಿಯಾಗಿ ತೃಣಾಂತ ಸಾತ್ವಿಕಜೀವರು ಶುದ್ಧವಾದ ಸ್ವರೂಪತಃ ಸ್ವಭಾವವುಳ್ಳವರು. ಆ ಜೀವ ಗಣಗಳೆಲ್ಲವೂ ಮುಮುಕ್ಷುಗಳು. ಅಂದರೆ, ಮೋಕ್ಷಾಧಿಕಾರಿಗಳಾದ ಮುಕ್ತಿಯೋಗ್ಯಚೇತನರು. ಅಮಲ-ಎಂದರೆ. ಸ್ವರೂಪತಃ ಸಾತ್ವಿಕರು- ಎಂದರ್ಥ. ಅಪ್ರಾಕೃತಸಾತ್ವಿಕಗುಣದಿಂದ ಅವರ ಸ್ವರೂಪಗತ ಸ್ವಭಾವವು ಯುಕ್ತವಾಗಿರುವುದು. (ತಾರತಮ್ಯಾನುಸಾರ).

೨. ಅಂತಹ ಮೋಕ್ಷಾಧಿಕಾರಿಗಳು ಅಪರೋಕ್ಷಜ್ಞಾನಕ್ಕಾಗಿ ಸಾಧನಗಳನ್ನು ಮಾಡುತ್ತಿರುವರು. ಸತ್ಸಾಧನಾಪೂರ್ವಕ, ಬಿಂಬಾಪರೋಕ್ಷರೂಪವಾದ ಭಗವದಪರೋಕ್ಷವನ್ನು ಹೊಂದುವರು. ಅಪರೋಕ್ಷಾನಂತರ, ಸಾಧನೆಗಳನ್ನು ಮಾಡುತ್ತಾ, ಅವಿಶಿಷ್ಟರೂಪವಾದ ಪ್ರಾರಬ್ಧಕರ್ಮವನ್ನು

ಭೋಗಿಸುತ್ತಾ, ಲಿಂಗಭಂಗಾನಂತರ ಮೋಕ್ಷವನ್ನು ಹೊಂದುವರು. ಆಗ, ಅವರಿಗೆ ಸ್ವಸ್ವರೂಪಗತಆನಂದದ ಅಭಿವ್ಯಕ್ತಿ—ಎಂಬ ಮುಕ್ತ್ಯಾನಂದವು ಭಗವತ್ಪ್ರಸಾದದಿಂದ ಉಂಟಾಗುವುದು.

೩. ಈ ರೀತಿಯಲ್ಲಿ, ಪ್ರಸಕ್ತಸಂಧಿಗತ ವಿಷಯವು– **ಅಪರೋಕ್ಷ ತಾರತಮ್ಯ.** ಬ್ರಹ್ಮಾದಿ ಸಮಸ್ತಜೀವರ ಕಲ್ಪ ಸಾಧನಗಳೆಷ್ಟು? ಅವರವರ ಸಾಧನಕ್ರಮಗಳೇನು ? ಸಾಧನಾನಂತರ, ಅಪರೋಕ್ಷಪ್ರಾಪ್ತಿ– ತದನಂತರ, ಕರ್ಮವಿಮೋಚನದ್ವಾರಾ ಮೋಕ್ಷಪ್ರಾಪ್ತಿ. ಈ ಪ್ರಮುಖವಾದ ರಹಸ್ಯ ತತ್ತ್ವಗಳನ್ನು ನನ್ನ ಅಂತರ್ಯಾಮಿಯಾದ ಚಕ್ರ ಗದಾಧರನಾದ ಶ್ರೀಹರಿಯು ನನ್ನ ಅಂತಸ್ಥನಾಗಿ ನಿಂತು, ಪ್ರೇರಿಸಿದಂತೆ, ತಿಳಿದು, ತಿಳಿಸುತ್ತಿರುವೆನು.

ಕಾರಣಾಂತರಗಳಿಂದ ಇಲ್ಲಿರುವ ಲೋಪದೋಷಗಳ ರೂಪದಲ್ಲಿರುವ ನ್ಯೂನತೆಗಳನ್ನು ಪರಿಗಣಿಸದೆ, ಸುಜ್ಞಾನಿಗಳಾದವರು, ನಿರ್ಮತ್ಸರಭಾವದಿಂದ ಚಿತ್ತವಿಟ್ಟು ಆಲಿಸಬೇಕೆಂದು ಪ್ರಾರ್ಥಿಸುತ್ತಾರೆ. ಸ್ವಾಹಂಕಾರಖಂಡನಾ ಪೂರ್ವಕ, ಅತ್ಯಂತ ವಿನಯಭಾವದಿಂದ. ॥೨೦॥

## ಪದ್ಯ-೩

**ಮೂಲ :**

**ತೃಣ ಕ್ರಿಮಿ ದ್ವಿಜ ಪಶು ನರೋತ್ತಮು ।**
**ಜನಪ ನರಗಂಧರ್ವಗಣರಿವ ।**
**ರೆನಿಪರಂತವಿಹೀನ ಕರ್ಮಸುಯೋಗಿಗಳು ಎಂದು॥**
**ತನು ಪ್ರತೀಕದಿ ಬಿಂಬನ ಉಪಾ ।**
**ಸನವ ಗೈಯುತ ಇಂದ್ರಿಯಜ ಕ ।**
**ರ್ಮನವರತ ಹರಿಗರ್ಪಿಸುತ ನಿರ್ಮಮರು ಎನಿಸುವರು ॥೩॥**

**ಅವತರಣಿಕೆ**

ನಿರಂಶಜೀವರಾದ ಕರ್ಮಸುಯೋಗಿಗಳ ವಿಚಾರವನ್ನು ತಿಳಿಸುತ್ತಾರೆ ॥೩॥

**ಪ್ರತಿಪದಾರ್ಥ**

**ತೃಣ**— ತೃಣರೂಪನಾದ ಅಂತ್ಯಜೀವರು. **ಕ್ರಿಮಿ**—ತೃಣಜೀವರಿಗಿಂತ ಉತ್ತಮರಾದ ಕ್ರಿಮಿರೂಪದ ಜೀವರು **ದ್ವಿಜ**— ಅವರಿಗಿಂತ್ತುಮರಾದ ಪಕ್ಷಿಜೀವರು, **ಪಶು**— ಪಕ್ಷಿಗಳಿಗಿಂತ ಉತ್ತಮರಾದ ಪಶುಜೀವರು. **ನರೋತ್ತಮ**— ಮನುಷ್ಯೋತ್ತಮಜೀವರು, **ಜನಪ** — ಮಾನುಷಚಕ್ರವರ್ತಿಗಳು, **ನರಗಂಧರ್ವ**— ಅವರಿಗಿಂತ್ತುಮರಾದ ಮಾನುಷಗಂಧರ್ವ-ವರ್ಗ, **ಗಣರಿವರೆನಿಪ ಅಂಶವಿಹೀನ**—ಈ ವಿಧವಾದ ಏಳು ಮಂದಿ ನಿರಂಶಜೀವರು (ತೃಣ-ಕ್ರಿಮಿ-ದ್ವಿಜ-ಪಶು-ನರೋತ್ತಮ ಜನಪ ಮತ್ತು ನರಗಂಧರ್ವರು), **ಕರ್ಮಸುಯೋಗಿಗಳು ಎಂದು**.-ಕರ್ಮಪ್ರಾಚುರ್ಯದಿಂದ ಸಾಧನೆ ಮಾಡತಕ್ಕ ಕರ್ಮಯೋಗಿಗಳೆಂದೆನಿಸುವರು. **ತನುಪ್ರತೀಕದಿ**— ತಮ್ಮ ಸ್ಥೂಲದೇಹಾಖ್ಯಪ್ರತೀಕದಲ್ಲಿ, **ಬಿಂಬನ** — ಬಿಂಬರೂಪವಾದ ಶ್ರೀಪರಮಾತ್ಮನನ್ನು, **ಉಪಾಸನವಗೈಯುತ**—ಧ್ಯಾನೋಪಾಸನಾದಿಗಳನ್ನು ಮಾಡುತ್ತಾ, **ಇಂದ್ರಿಯಜಕರ್ಮ**— ಸ್ಥೂಲದೇಹಗತ ಏಕಾದಶೇಂದ್ರಿಯಗಳಿಂದ ಜನ್ಯವಾದ ಸಮಸ್ತಕರ್ಮಗಳನ್ನು, **ಅನವರತ ಹರಿಗರ್ಪಿಸುತ**— ನಿರಂತರವೂ, ಹೃದಯಕಾಶಗತಬಿಂಬರೂಪೀ ಹರಿಯೇ ಮಾಡಿ ಮಾಡಿಸುತ್ತಾನೆಂಬ ಉತ್ತಮಾನುಸಂಧಾನದಿಂದ ಅರ್ಪಿಸುತ್ತಾ, **ನಿರ್ಮಮರು**— ಅಹಂಮಮತಾದಿ ರಹಿತರೆಂದು, **ಎನಿಸುವರು**--ಎನಿಸಿ ಪ್ರಸಿದ್ಧರಾಗಿದ್ದಾರೆ. ॥೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರರ ವ್ಯಾಖ್ಯಾನ

ನಿರಂಶರು ದಾರು ಎಂದರೆ, ಅದರನ್ನ ಹೇಳತಾರೆ.

ತೃಣಾಜೀವನೇ ಅಂತ್ಯಜೀವ. (ಇವನ ತರುವಾಯ ಅವರರಾದ ಜೀವರು ಮುಕ್ತಿಯೋಗ್ಯರಲ್ಲಿ ಇಲ್ಲ.) ತೃಣಜೀವನಿಗಿಂತಲೂ ಉತ್ತಮರು ಕ್ರಿಮಿಜೀವರು. ಕ್ರಿಮಿಜೀವರಿಗಿಂತಲೂ ಪಕ್ಷಿಜೀವರು ಉತ್ತಮರು. ಪಕ್ಷಿ ಜೀವರಿಗಿಂತಲೂ ಪಶುಜೀವರು ಉತ್ತಮರು. ಪಶುಜೀವರಿಗಿಂತಲೂ ಮನುಷ್ಯೋತ್ತಮಜೀವರು ಉತ್ತಮರು. ಜನರನ್ನು ಪಾಲಿಸತಕ್ಕ ಅರಸರು (ಮಾನಪಚಕ್ರವರ್ತಿಗಳು) ಮಾನುಷೋತ್ತಮಜೀವರಿಗಿಂತಲೂ ಉತ್ತಮರು. ಅರಸರಿಗಿಂತಲೂ ಮಾನುಷಗಂಧರ್ವರು ಉತ್ತಮರು. ನಿರಂಶರೊಳಗೆ ಮಾನುಷಗಂಧರ್ವರಿಗಿಂತಲೂ ಉತ್ತಮರು ಇಲ್ಲ. ತೃಣಜೀವರಿಗಿಂತಲೂ ಅಧಮಜೀವರು ಇಲ್ಲ. ಈ ಯಾವತ್ತೂ ಜೀವರು ನಿರಂಶರು. ಪೂರ್ವೋಕ್ತ ಏಳು ವಿಧ ಗಣರಾದ ಇವರೆನಿಸ ಜೀವರೇವೇ ಅಂಶರಹಿತರಾದವರು. (ನಿರಂಶರು). ಸಮೀಚೀನವಾದ ಕರ್ಮಯೋಗಿಗಳು ಅಂದರೆ, ಕರ್ಮಪ್ರಾಚುರ್ಯ ದಿಂದ ಸಾಧನಿ ಮಾಡತಕ್ಕವರು, ದಾವಾಗ್ನ್ಯ, ದೇಹಾಪ್ಯಪ್ರತೀಕವನ್ನಿ ಬಿಂಬರೂಪಿಯಾದ ಪರಮಾತ್ಮನ್ನ ಧ್ಯಾನೋಪಾಸನಾದಿಗಳು ಮಾಡತಾ, ಏಕಾದಶೇಂದ್ರಿಯುಗಳಿಂದ ಜನಿತಗಳಾದ ಕರ್ಮಗಳ ನಿರಂತರ ತಮ್ಮ ತಮ್ಮ ಹೃದಯಾಕಾಶಗತ ಬಿಂಬರೂಪೀ ಪರಮಾತ್ಮಗೇ ಅರ್ಪಿಸತಾ, ಅಹಂ ಮಮ ತಾದಿಗಳಿಂದ ರಹಿತರಾಗಿ, ಸಾಧನಮಾಡತಕ್ಕವರೇತ ಎನಿಸೋವರಾಗತಾರೆ (ಇವರಿಗೆ ತಮ್ಮ ತಮ್ಮ ದೇಹಗತ ಬಿಂಬದರ್ಶವೇ ಹೊರ್ತು, ಅನ್ಯದೇಹಗತ ಬಿಂಬದರ್ಶನ ಇಲ್ಲ.)

ಮೇಲಿನ ಶ್ಲೋಕ ಮೊದಲು ಏಳನೇ ಶ್ಲೋಕದವರಿಗೆ ಪ್ರಮಾಣ—

ನಿರಂಶಾಃ ಸತ್ಸಾಧನಾಯೋಚಿತ ಜನ್ಮಸಹಸ್ರಶಃ ।
ಜ್ಞಾನಂತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯಚ।
ದೃಷ್ಟ್ವಾ ಹೃದಿಸ್ಥಂ ಮುಚ್ಯಂತೇಹ್ಯತಸ್ತೇ ಕರ್ಮಯೋಗಿನಃ ॥
ಇತಿ ಪ್ರಕಾಶ ಸಂಹಿತಾಯಾಂ॥

ತೃಣಾದಿ ನಿತ್ಯಗಂಧರ್ವಪರ್ಯಂತಾಸ್ತೇ ಹ್ಯನೇಕಶಃ।
ನಿರಂಶಾಸ್ತೇ ಪ್ರತೀಕಾವಲಂಬಸ್ತೇ ಕರ್ಮಯೋಗಿನಃ ॥
ಪ್ರತೀಕಸ್ಥಂ ಶರೀರಸ್ಥಂ ಪಶ್ಯಂತೀತಿ ತದಾಹ್ವಯಾಃ। ॥೩

### ೨. ಭಾವಪ್ರಕಾಶಿಕೆ

ತೃಣ, ಕ್ರಿಮಿ, ಪಶು, ಮಾನುಷೋತ್ತಮರು, ಚಕ್ರವರ್ತಿಗಳು ಮನುಷ್ಯಗಂಧರ್ವರೆಂಬ- ಈ ಏಳು ವಿಧಜೀವರು ನಿರಂಶನೆನಿಸುವರು. ಸಾಂಶರೆಂದರೆ, ತತ್ವಾಭಿಮಾನಿದೇವತೆಗಳಾದ ಸೂರ್ಯಾದಿಗಳೆಂದು ತಿಳಿಯ ಬೇಕು. ಸೂರ್ಯಮಂಡಲದಲ್ಲೂ, ಎಲ್ಲರ ಕಣ್ಣುಗಳಲ್ಲೂ ಇರುವನು ಒಬ್ಬನೇ ಆದರೂ, ಸೂರ್ಯನು ಅಂಶದಿಂದ ಬಹುರೂಪಿಯಾಗಿರುವನು. ಹೀಗೆ, ಎಲ್ಲಾ ತತ್ವಾಭಿಮಾನಿಗಳೂ ಇರುವರು. ಇಲ್ಲದವರು ನಿರಂಶರು. ಇವರು ಒಂದೇ ಸ್ಥಳದಲ್ಲಿದ್ದರೆ, ಮತ್ತೊಂದು ಸ್ಥಳದಲ್ಲಿ ರೂಪಾಂತರದಿಂದ ಇರುವ ಯೋಗ್ಯತೆ ಇಲ್ಲದವರೆಂದು ತಾತ್ಪರ್ಯ. ಇವರೆಲ್ಲರೂ ಕರ್ಮಯೋಗಿಗಳೆನಿಸುವರು. ಇವರಿಗೆ ಪ್ರತೀಕಾಲಂಬನರೆಂತಲೂ ಮತ್ತೊಂದು ಹೆಸರು. ಪ್ರತೀಕವೆಂದರೆ, ತನ್ನ ಶರೀರವು. ತನ್ನ ಶರೀರದಲ್ಲೇ ಹರಿಯನ್ನು ಅಪರೋಕ್ಷದಲ್ಲಿ ಕಾಣುವವರಾದುದ ರಿಂದ, ಪ್ರತೀಕಾಲಂಬನರೆಂದು ಹೆಸರು. ತೃಣಾದಿ ಮರ್ತ್ಯಗಂಧರ್ವ ಪರ್ಯಂ ತಾಸ್ತೇನಂಶತಃ ॥ ನಿರಂಶಾಸ್ತೇಪ್ರತೀಕಾಖ್ಯಾಲಂಬಾಸ್ತೇಕರ್ಮಯೋಗಿನಃ ॥ ಪ್ರತೀಕಾಖ್ಯಾಶರೀಕಸ್ಥಂ ವಿಶ್ಯಂತೀತದಾಹ್ವಾಯಾಃ॥"-ಎಂಬ ಪ್ರಕಾಶಸಂಹಿತೆಯ ವಾಕ್ಯದಿಂದ, ಈ ಅರ್ಥವು ಸಿದ್ಧವಾಗುವುದು. ಈ ತೃಣ ಮೊದಲು ಮನುಷ್ಯ ಗಂಧರ್ವರವರೆಗೂ ಇರುವ ಏಳು ಗುಣಗಳು ತಮ್ಮ ದೇಹದೊಳಗೆ ಬಿಂಬ ರೂಪಿಯಾದ ಶ್ರೀ ಹರಿಯನ್ನು ಉಪಾಸನೆಮಾಡುತ್ತಾ, ತಮ್ಮ ಇಂದ್ರಿಯಗಳಿಂದ ಮಾಡುವ ಎಲ್ಲಾ ಕರ್ಮಗಳನ್ನು, ಮಮತೆಯನ್ನು ಬಿಟ್ಟು, ಹರಿಗರ್ಪಿಸುತ್ತಾ, ತಾವು ನಿರ್ಲಿಪ್ತರಾಗಿರುವರು. ॥೩॥

### ೩. ಭಾವದರ್ಪಣ

ತೃಣಾದಿ ಮರ್ತ್ಯಗಂಧರ್ವರವರಿಗೆ ೭ ವಿಧ ಜೀವರುಗಳು ನಿರಂಶ ರೆಂತಲೂ, ಇವರು ಕರ್ಮಯೋಗಿಗಳೆಂತಲೂ, ಸ್ವದೇಹದಲ್ಲಿ ಪರಮಾತ್ಮನನ್ನ ಕಾಂಬುವರೆಂದು ಹೇಳುತ್ತಾರೆ। ತೃಣಮಿತಿ। ತದುಕ್ತಂ-ಪ್ರಕಾಶಸಂಹಿತಾಯಾಂ "ತೃಣಾದಿಮರ್ತ್ಯಗಂಧರ್ವಪರ್ಯಂತಾಸ್ತೇಹ್ಯಾನಂತಶಃ । ನಿರಂಶಾಸ್ತೇ ಪ್ರತೀ

ಕಾಮ್ಯಾಲಂಬಾಸ್ತೇ ಕರ್ಮಯೋಗಿನಃ । ಪ್ರತೀಕಾಮ್ಯಶರೀರಸ್ಥಂ ಪಶ್ಯಂತೀತಿ ತದಾಪ್ನುಯಾ ಇತೀ ॥ ನಿರ್ಮಮರು ಅಹಂಕಾರರಹಿತರು- ಎಂತ ಅನಿಸುವರು. ॥೩॥

## ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

ಭಕ್ತಿ ಜ್ಞಾನ ಸುಕರ್ಮಾಖ್ಯಾಃ ತ್ರಿಧೈತೇ ಯೋಗಿನೋಮತಾಃ॥ "ಏಕಾದಶಸ್ಕಂಧ ಪಿ. ಶಾಧ್ಯಾಯತಾತ್ಪರ್ಯಗೇ ದುರ್ಭೇ॥ ತ್ರಿಯೋಗೇ ತಾರತಮ್ಯಂ ಚ ತೇಷು ತತ್ರೈವ ಕೀರ್ತಿತವ್॥ ಯಥಾಹಾನಂದತೀರ್ಥಾಖ್ಯಃ ಜಗದ್ ಬಂಧುಃ ಯದೂತ್ತಮಃ॥ ಉತ್ತಮೋ ಭಕ್ತಿಯೋಗಸ್ತು ಜ್ಞಾನ ಯೋಗಸ್ತು ಮಧ್ಯಮಃ॥ ಅಧಮಃ ಕರ್ಮಯೋಗಶ್ಚ ಬ್ರಹ್ಮೈಕೋ ಮುಖ್ಯ ಭಕ್ತಿಭಾಕ್॥ ಸನಕಾದ್ಯಾಃ ಜ್ಞಾನಯೋಗಾಃ ಭಕ್ತಿಯೋಗಾಸ್ತು ಮಧ್ಯಮಾಃ॥ ಮಾನುಷಾಃ ಕರ್ಮಯೋಗಾಶ್ಚ ತ್ರಿಧೈತೇ ಯೋಗಿನಃ ಸ್ಮೃತಾಃ॥ ಸರ್ವೇಷಾಂ ಸರ್ವಯೋಗೈಶ್ಚ ಪ್ರಾಪ್ಯಾ ಮುಕ್ತಿಃ ನ ಸಂಶಯಃ॥ ತಥಾಪಿ ತು ವಿಶೇಷೇಣ ಸದಾ ತೇಷಾಂ ವಿಧೀಯತೇ॥ ಭಗವದ್ಗುಣಾನುಸಾರೇಣ ವೇದಾರ್ಥೋ ನೀಯತೇ ಹಿ ಯೈಃ॥ ಭಕ್ತಿಯೋಗಾಸ್ತು ತೇ ಪ್ರೋಕ್ತಾಃ ತಾದೃಶಾಃ ಹಿ ಸುರಾಃ ಸದಾ॥ ಅಂಗಾನುಸಾರಿ ವೇದಾರ್ಥಂ ಜ್ಞಾತ್ವಾ ತದನು ಸಾರತಃ॥ ಭಗವದ್ಗುಣಾಃ ಯೈ ನೀಯಂತೇ ತೇ ಪ್ರೋಕ್ತಾಃ ಜ್ಞಾನಯೋಗಿನಃ॥ ಕರ್ಮಾಣಿ ಶಾಸ್ತ್ರತಃ ಜ್ಞಾತ್ವಾ ತತ್ತ್ವಾರ್ಥಾನ್ಯಾನುಸಾರತಃ॥ ವಿಜ್ಞಾತಾಃ ಯೈಃ ಗುಣಾಃ ವಿಷ್ಣೋಃ ಜ್ಞೇಯಾಃ ತೇ ಕರ್ಮಯೋಗಿನಃ॥ ಭಕ್ತಿಃ ಜ್ಞಾನಂ ತು ಕಿಂಚಿತ್ತು ಪಶ್ಚಾತ್ ತೇಷ್ವಪಿ ಜಾಯತೇ॥ ತಥಾಪಿ ಕರ್ಮಯೋಗಾಸ್ತೇ ಕರ್ಮಪೂರ್ವತ್ವಕಾರಣಾತ್॥ ಭಗವದ್ಗುಣಾನುಸಾರಿತ್ವಂ ಅಧಿಕಂ ಭಕ್ತಿಯೋಗಿನಾಮ್॥ ಈಷದ್ವೈರಾಗ್ಯಮಲ್ಪಂ ತು ಪೂರ್ವಂ ದೇವೇಷು ವರ್ತತೇ॥ ಪಶ್ಚಾತ್ ವಿರಾಗೋಪ್ಯಧಿಕಃ ದೇವಾನಾಂ ನಾತ್ರ ಸಂಶಯಃ॥ ಜ್ಞಾನಾಧಿಕ್ಯಂ 'ತು ದೇವಾನಾಂ ಭಕ್ತ್ಯಾಧಿಕ್ಯಂ ತಥೈವ ಚ ॥ ವಿರಾಗೋಪ್ಯಧಿಕಃ ತೇಷಾಂ ಸದೈವ ಸನಕಾದೀನಾಂ ॥ ಜ್ಞಾನಾಧಿಕ್ಯಾತ್ ಮನುಷ್ಯೇಭ್ಯಃ ಭಣ್ಯಂತೇ

ಜ್ಞಾನಯೋಗಿನಃ॥ ನ ತು ಜ್ಞಾನಾಧಿಕಾಃ ತೇ ವೈ ದೇವೇಭ್ಯಸ್ತು ಕಥಂಚನ॥ ದೇವಾನಾಮಪಿ ಕರ್ಮಿತ್ವಂ ವಿದ್ಯತೇ ಯದ್ಯಪಿ ಸ್ಫುಟಮ್॥ ತಥಾಪಿ ಪ್ರತ್ಯವಾಯಿತ್ವಾತ್ ಮನುಷಾಃ ಕರ್ಮಯೋಗಿನಃ॥ ತ್ರಿಯೋಗಾಭ್ಯಧಿಕಃ ಬ್ರಹ್ಮಾ" ಇತಿ॥ ಏಷು ಕರ್ಮಯೋಗಾಃ ನಿರಂಶಾಃ॥ ಪ್ರತಿಕೇ ಹೃದ್ಯೇವ ಹರಿಂ ಪಶಂತಃ ನ ತು ವ್ಯಾಪ್ತತಯಾ ಕ್ವಾಪಿ॥ ಭೋಗಪಾದೇ ಚ "ಪ್ರತಿಕೇಃ ದೇಹ ಉದ್ದಿಷ್ಟ"-ಇತಿ॥ ತೃಣಾದಿ ಮರ್ತ್ಯಗಂಧರ್ವಪರ್ಯಂತಾಸ್ತೇ ಹ್ಯನಂತಶಃ॥ ನಿರಂಶಾಸ್ತೇ ಪ್ರತೀಕಾಲಂಬನಾಃ ತೇ ಕರ್ಮಯೋಗಿನಃ॥ ಪ್ರತೀಕಸ್ಥ ಶರೀರಸ್ಥಂ ಹರಿಂ ಪಶ್ಯಂತಿ ಇತಿ ತದಾಪ್ತಯಾಃ॥ "ಜನಪಾಃ"-ಹೃಹಯಾ ದಿಶತಾಸ್ಯೇ. ॥೩॥

## ಕನ್ನಡಾರ್ಥ

ಭಕ್ತಿಯೋಗಿ, ಜ್ಞಾನಯೋಗಿ–ಕರ್ಮಯೋಗಿ– ಹೀಗೆ ಯೋಗಿಗಳಲ್ಲಿ ಮೂರು ತರವಿರುವುದು ಪ್ರಸಿದ್ಧ. ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದ ತಾತ್ಪರ್ಯದಲ್ಲಿ, ಶ್ರೀಮದಾಚಾರ್ಯರು, ಈ ಮೂರು ಯೋಗಿಗಳಲ್ಲಿ ತಾರತಮ್ಯವನ್ನು ಅಲ್ಲೇ ಅಲ್ಲಲ್ಲಿ ನಿರೂಪಿಸಿರುತ್ತಾರೆ.

"ಭಕ್ತಿಯೋಗವು ಉತ್ತಮ ; ಜ್ಞಾನಯೋಗವು ಮಧ್ಯಮ; ಕರ್ಮಯೋಗವು ಅಧಮ; ಬ್ರಹ್ಮದೇವನೊಬ್ಬನೇ ಮುಖ್ಯಭಕ್ತಿಯುಳ್ಳವನು. ಸನಕ ಮೊಂತಾದವರು ಜ್ಞಾನಯೋಗಿಗಳು. ಅವರು ಭಕ್ತಿಯೋಗಿಗಳಿಂದ ಕಡಿಮೆಯವರು. ಮನುಷ್ಯರು ಕರ್ಮಯೋಗಿಗಳು. ಹೀಗೆ ಯೋಗಿಗಳು ಮೂರು ವಿಧರೆಂದು ಪ್ರಸಿದ್ಧವಿದೆ. ಸರ್ವರಿಗೂ ಸರ್ವಯೋಗಗಳಿಂದಲೂ ಮುಕ್ತಿಯು ದೊರೆಯುತ್ತದೆ. ಇದರಲ್ಲಿ ಸಂಶಯವಿಲ್ಲ. ಆದರೂ, ಅದರಲ್ಲಿ ವಿಶೇಷವಿದ್ದುದರಿಂದ, ಅವರವರಿಗೆ ಆ ಯೋಗಗಳು ವಿಹಿತವಾಗಿರುತ್ತವೆ. ಭಗವಂತನ ಗುಣಗಳನ್ನನುಸರಿಸಿ, ವೇದಗಳಿಗೆ ಅರ್ಥವನ್ನು ಸದಾ ತಿಳಿಯುವವರು ಭಕ್ತಿಯೋಗಿಗಳೆನಿಸಿದವರು. ಅವರು ದೇವತೆಗಳು. ಅಂಗಗಳನ್ನನುಸರಿಸಿ, ವೇದಾರ್ಥಗಳನ್ನು ತಿಳಿದು, ಅದನ್ನನುಸರಿಸಿ, ಭಗವದ್ಗುಣಗಳನ್ನು ತಿಳಿಯುವವರು–ಜ್ಞಾನ

ಯೋಗಿಗಳು ಶಾಸ್ತ್ರಗಳಿಂದ ಕರ್ಮಗಳನ್ನು ಅರಿತು, ಅವುಗಳ ಪ್ರಾಧಾನ್ಯವನ್ನು ಅನುಸರಿಸಿ, ವಿಷ್ಣುವಿನ ಗುಣಗಳನ್ನು ತಿಳಿಯುತಕ್ಕವರು-ಕರ್ಮಯೋಗಿಗಳು. ಜ್ಞಾನ ಭಕ್ತಿಗಳು ಸ್ವಲ್ಪ ಸ್ವಲ್ಪ ಪ್ರಮಾಣಗಳಲ್ಲಿ ವಿಷ್ಣುಗುಣ ಜ್ಞಾನವಾದ ಅನಂತರ, ಕರ್ಮ ಯೋಗಿಗಳಿಗೂ ಬರುತ್ತದೆ. ಆದರೂ, ಪೂರ್ವದಲ್ಲಿ ಕರ್ಮ ವಿರುವುದರಿಂದ, ಕರ್ಮಯೋಗಿಗಳೆನಿಸುವರು. ಭಕ್ತಿಯೋಗಿಗಳು ಭಗವಂತನ ಗುಣಗಳನ್ನು ಹೆಚ್ಚಾಗಿ ಅನುಸರಿಸುತ್ತಾರೆ. ಅಲ್ಪಸ್ವಲ್ಪ ವೈರಾಗ್ಯವು ಪೂರ್ವ ದಲ್ಲಿ ದೇವತೆಗಳಲ್ಲಿ ಇರುತ್ತದೆ. ಆದರೂ, ಅನಂತರ ವೈರಾಗ್ಯವೂ, ಭಕ್ತಿಯೂ ಅಧಿಕವಾಗುವುದು. ಇದರಲ್ಲಿ ಸಂಶಯವಿಲ್ಲ. ದೇವತೆಗಳ ಜ್ಞಾನವೂ, ಭಕ್ತಿಯೂ, ವೈರಾಗ್ಯವೂ ಎಲ್ಲರ ಜ್ಞಾನಾದಿಗಳಿಗಿಂತ ಅಧಿಕವಿರುತ್ತದೆ. ಸನಕ-ಮುಂತಾದವರಲ್ಲಿ ಮನುಷ್ಯರಿಗಿಂತ ಹೆಚ್ಚಿನ ಜ್ಞಾನವು ಇರುವುದು. ಈ ಕಾರಣ ದಿಂದಲೇ, ಅವರಿಗೆ ಜ್ಞಾನಯೋಗಿಗಳೆನ್ನುತ್ತಾರೆ, ತೋರತು, ದೇವತೆಗಳಿಗಿಂತಲೂ ಅವರು ಜ್ಞಾನದಲ್ಲಿ ಹೆಚ್ಚಿನವರಲ್ಲ. ಇನ್ನು, ದೇವತೆಗಳೂ ಕರ್ಮಿಗಳಾಗಿರುತ್ತಾರೆ. ಆದರೂ, ಕರ್ಮವಾಡದಿದ್ದರೆ, ಪ್ರತ್ಯವಾಯುವು ಮಾತ್ರ ಮನುಷ್ಯರಿಗೆ ಇರುವುದರಿಂದ, ಮನುಷ್ಯರೇ ಕರ್ಮಯೋಗಿಗಳೆನಿಸುವರು. ಈ ಮೂರು ಯೋಗಿಗಳಲ್ಲಿ ಬ್ರಹ್ಮನು ಸರ್ವಾಧಿಕನು.

ಈ ಯೋಗಿಗಳಲ್ಲಿ ಕರ್ಮಯೋಗಿಗಳು ನಿರಂಶರು–ಅಂಶವಿಲ್ಲದವರು. ಪ್ರತೀಕ–ಹೃದಯದಲ್ಲಿಯೇ ಹರಿಯನ್ನು ನೋಡುವವರು. ವ್ಯಾಪ್ತನಾಗಿರುವ ಹರಿಯನ್ನು ಎಂದೂ ನೋಡದವರು. ಭೋಗ ಪಾದದಲ್ಲಿ ದೇಹಕ್ಕೆ ಪ್ರತೀಕ ವೆಂದು ಕರೆದಿರುತ್ತಾರೆ. ತೃಣಜೀವರನ್ನಾರಂಭಿಸಿ, ಮನುಷ್ಯಗಂಧರ್ವರವರೆಗಿನ ಈ ಜೀವರು ಅನಂತವಿರುತ್ತಾರೆ, ಹಾಗೂ, ನಿರಂಶರಾಗಿರುತ್ತಾರೆ. ಇವರು ಪ್ರತೀಕಾಲಂಬನರು. ಇವರು ಕರ್ಮಯೋಗಿಗಳು. ಪ್ರತೀಕದಲ್ಲಿ ಇರುವ ಶ್ರೀಹರಿಯನ್ನು ನೋಡುವರು. ಆದುದರಿಂದ, ಪ್ರತೀಕಾಲಂಬನರೆಂಬ ಹೆಸರು ಇವರಿಗೆ ಬಂದಿರುತ್ತದೆ.

ಈ ಪದ್ಯದಲ್ಲಿರುವ 'ಜನಪ'- ಎಂಬ ಪದಕ್ಕೆ "ಹೈಹಯ"-ಮುಂತಾದ ನೂರು ರಾಜರನ್ನು ಬಿಟ್ಟು ಉಳಿದ ರಾಜರೆಂದು ಅರ್ಥಮಾಡಬೇಕು ॥೩॥

**ಜ. ಶ್ರೀಗುರುಹೃದಯಪ್ರಕಾಶಿಕೆ**

ತೃಣಜೀವರು. ಕ್ರಿಮಿಜೀವರು, ದ್ವಿಜರೆಂಬ ಪಕ್ಷಿಜೀವರು, ಪಶುಗಳೆಂಬ ಮೃಗಜೀವರೂ, ನರೋತ್ತಮರೆಂಬ ಮನುಷ್ಯೋತ್ತಮ ಗಣಜೀವರೂ, ಜನಪರೆಂಬ ರಾಜಪದಯೋಗ್ಯ ಜೀವರೂ, ಮನುಷ್ಯ ಗಂಧರ್ವಗಣಜೀವರು- ಎಂಬ ಏಳು ವಿಧ ಜೀವಗಣರು ಅಂಶವಿಲ್ಲದವರೆಂತಲೂ, ಕರ್ಮಯೋಗಿಗಳೆಂತಲೂ ಕರೆಸುವರು. ತನುವೆಂಬ ಸ್ವದೇಹಪ್ರತಿಮೆಯಲ್ಲಿ ಬಿಂಬವೆಂಬ ಮುಖ್ಯ ಸ್ವಾಶ್ರಯರೂಪವನ್ನು ಧ್ಯಾನಾದಿಗಳಿಂದ ಸೇವಿಸುತಾ, ಸರ್ವೇಂದ್ರಿಯ ವ್ಯಾಪಾರವನ್ನು ಶ್ರೀಹರಿಯ ಅಧೀನವೆಂದು ಭಾವಿಸುವ ಅರ್ಪಣೆಯನ್ನು ಮಾಡುತ್ತಾ, ಮಮತೆ ಎಂಬ ಅಭಿಮಾನವನ್ನು ಬಿಟ್ಟಿರುವರು. ॥೩॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಒಂದೇ ಸ್ಥಳವಲ್ಲಿದ್ದು, ಇತರ ಸ್ಥಳಗಳಲ್ಲಿ ಅಂಶತ್ವೇನ ಇಲ್ಲದಿರುವ ಜೀವರಿಗ **ನಿರಂಶಜೀವರು**–ಎಂದು ಹೆಸರು. ಈ ವರ್ಗವನ್ನು ದಾಸರಾಯರು- **ಅಂಶವಿಹೀನ**–ರೆಂದು ಕರೆದಿದ್ದಾರೆ.

೨. ಅಂತಹ ನಿರಂಶಜೀವರು ಏಳು ಪ್ರಕಾರ ಇದ್ದಾರೆ.

(1) **ತೃಣಜೀವರು**–ಅಂತ್ಯಜೀವರು ತೃಣಜೀವರು. ಇವರಿಗಿಂತ ಕೆಳಗಿನ ಮುಕ್ತಿಯೋಗ್ಯಜೀವರಿಲ್ಲ. (2) **ಕ್ರಿಮಿಜೀವರು**–ಸೂಕ್ಷ್ಮವಾದ ಕ್ರಿಮಿರೂಪದಲ್ಲಿರುವ ಜೀವರ ಸಮೂಹ ಇರುವ ತೃಣಜೀವರಿಗಿಂತ ಉತ್ತಮರು. (3) **ದ್ವಿಜ**–ಪಕ್ಷಿವರ್ಗ-ಎರಡಾವರ್ತಿ ಜನಿಸುವುದರಿಂದ, ಪಕ್ಷಿಗಳಿಗೆ-'ದ್ವಿಜ'- ಎಂದು ಹೆಸರು. ಮೊದಲು ಮೊಟ್ಟೆ ಇಡುವುದು, ನಂತರ, ಮೊಟ್ಟೆ ಒಡೆದು ಮರಿಯಾಗುವುದು. ಈ ಪಕ್ಷಿವರ್ಗವು ಕ್ರಿಮಿಜೀವರಿಗಿಂತ ಉತ್ತಮರು. (4) **ಪಶು**–ಚತುಷ್ಪಾದಗಳಾದ ಹಸು, ಕುದುರೆ, ಮೇಕೆ-ಮುಂತಾದ ಪ

ಜೀವರು ಇವರು ಪಕ್ಷಿ ಜೀವರಿಗಿಂತ ಉತ್ತಮರು. (5) **ನರೋತ್ತಮ**- ಮಾನವರಲ್ಲಿ ಉತ್ತಮಜೀವರು ಇವರಿಗೆ ಮನುಷ್ಯೋತ್ತಮರೆಂದು ಹೆಸರು. ಇವರು ಪಶ್ವಾದಿಗಳು, ಸಾಮಾನ್ಯಮಾನವರಿಗಿಂತ ಉತ್ತಮರು. (6) **ಜನಪ**- ಜನರನ್ನು ಪಾಲಿಸುವ ಮಾಂಪಚಕ್ರವರ್ತಿಗಳು. ಹೈಹಯ-ಮುಂತಾದ ನೂರು ರಾಜರನ್ನು ಬಿಟ್ಟು, ಉಳಿದ ರಾಜರೆಂದು ಗ್ರಾಹ್ಯ. (7) **ನರಗಂಧರ್ವರು**- ಮಾನುಷಗಂಧರ್ವರು ಇವರು ಜನಪರಿಗಿಂತ ಉತ್ತಮರು. ಗಂಧರ್ವವರ್ಗದಲ್ಲಿ ಎರಡು ಪ್ರಕಾರ-(೧) ನರಗಂಧರ್ವರು ಮತ್ತು (೨) ದೇವಗಂಧರ್ವರು. ದೇವಗಂಧರ್ವರು ನರಗಂಧರ್ವರಿಗಿಂತ ಉತ್ತಮಪಕ್ಷ.

ಮೇಲಿನ ಏಳು ವರ್ಗಕ್ಕೆ ಸೇರಿದ ಜೀವಗಣವು ನಿರಂಶಜೀವರು. ಅವರು ಉತ್ತಮಕರ್ಮಗಳನ್ನು ಆಚರಿಸುತ್ತಾ, ಭಗವದನುಗ್ರಹಕ್ಕೆ ಪಾತ್ರರಾಗಿರುವರು. ಯೋಗಿಗಳಲ್ಲಿ ಮೂರು ಪ್ರಕಾರ. (೧) ಭಕ್ತಿಯೋಗಿಗಳು (೨) ಜ್ಞಾನಯೋಗಿಗಳು ಮತ್ತು (೩) ಕರ್ಮಯೋಗಿಗಳು ಬ್ರಹ್ಮಾದಿ ಸಮಸ್ತಋಜುಗಣಸ್ಥರೂ ಭಕ್ತಿಯೋಗಿಗಳು ಅತ್ಯಂತ ಉತ್ತಮರು. ಸನಕಾದಿಗಳು ಜ್ಞಾನಯೋಗಿಗಳು. ಮೇಲೆ ಹೇಳಿದ ಏಳು ಜೀವರ ಪೈಕಿ, ಮಾನುಷೋತ್ತಮರು ಕರ್ಮಯೋಗಿಗಳು. ಕರ್ಮಾನುಷ್ಠಾನವೇ ಅವರಿಗೆ ಪ್ರಮುಖ. ಅವರಲ್ಲಿ ತಾರತಮ್ಯವುಂಟು. ಕರ್ಮ-ಜ್ಞಾನ ಭಕ್ತಿಗಳಿಂದ ಕೂಡಿದವರು. ಜ್ಞಾನ ಭಕ್ತಿಗಳಿಂದ ಕರ್ಮ ಪ್ರಾಚುರ್ಯರು. ಯೋಗಿಗಳಲ್ಲಿ ಬ್ರಹ್ಮನು ಸರ್ವಾಧಿಕನು.

ಇಂತಹ ಕರ್ಮ ಸುಯೋಗಿಗಳು ೩ **ಪ್ರತೀಕಾಲಂಬನರೆನಿಸುವರು**- ತಮ್ಮ ಸ್ಥೂಲದೇಹಸ್ಥ ಇಂದ್ರಿಯಗಳಲ್ಲಿ ವಿದ್ಯಮಾನನಾಗಿರುವ ಬಿಂಬರೂಪೀ ಶ್ರೀಹರಿಯನ್ನು ಸ್ಥೂಲದೇಹವೆಂಬ (ತನು) ಪ್ರತೀಕದಲ್ಲಿ ಉಪಾಸನೆ ಮಾಡುವರು. ಪ್ರತೀಕ-ಎಂದರೆ, ತಮ್ಮ ದೇಹಾಧಿಷ್ಠಾನ ಅದನ್ನು ಅವಲಂಬನ ಮಾಡಿರುವುದರಿಂದ-ಪ್ರತೀಕಾಲಂಬನರೆಂದು ಹೆಸರು.

೪. ಇಂತಹ ಪ್ರತೀಕಾಲಂಬರು ಇಂದ್ರಿಯಜನ್ಯವಾದ ಸಕರ್ಲವಕು

ಕಗಳನ್ನು ಬಿಂಬರೂಪಿಯಾದ ಶ್ರೀಹರಿಗೆ ಅರ್ಪಿಸುತ್ತಾ, ಅಹಂಮಮಕಾರ ರಹಿತರಾಗಿ, ಉಪಾಸನೆ ಮಾಡುತ್ತಿರುವರು. ಆದರಿಂದ, ನಿರ್ಮಮರೆನಿಸುವರು. ||೩||

## ಪದ್ಯ-೪

**ಮೂಲ :**

**ಏಳುವಿಧ ಜೀವಗಣ ಬಹಳ ಸು |**
**ರಾಳಿ ಸಂಖ್ಯಾನೇಮವುಳ್ಳದು |**
**ಕಾಳಿ ನರದೇಹವನು ಬ್ರಾಹ್ಮಣಕುಲದಲವತರಿಸಿ ||**
**ಸ್ಥೂಲಕರ್ಮವ ತೊರೆದು ಗುರುಗಳು |**
**ಪೇಳಿದರ್ಥವ ತಿಳಿದು ತತ್ತ |**
**ತ್ಕಾಲ ಧರ್ಮ ಸಮರ್ಪಿಸುತಿಹರು ಕರ್ಮಯೋಗಿಗಳು ||೪||**

**ಅವತರಣಿಕೆ :**

ನಿರಂತರಾದ ಪೂರ್ವೋಕ್ತ ಏಳುವಿಧರಾದ ಕರ್ಮಯೋಗಿಗಳ ವಿಚಾರವನ್ನು ತಿಳಿಸುತ್ತಾರೆ. ||೪||

**ಪ್ರತಿಪದಾರ್ಥ**

**ಏಳುವಿಧಜೀವಗಣ**— ತೃಣಜೀವರು ಆರಂಭಮಾಡಿ, ಮಾನುಷಗಂಧರ್ವರ ಪರ್ಯಂತ ಏಳು ವಿಧರಾದ ಜೀವಸಮೂಹ, **ಬಹಳ**—ಬಹು ಸಂಖ್ಯಾಕವಾದದ್ದು. **ಸುರಾಳಿ**— ಅವರಿಂದ ಅತಿರಿಕ್ತರಾದ ದೇವಗಂಧರ್ವರಾದಿ ಬ್ರಹ್ಮಾಂತ ದೇವತಾವರ್ಗ, **ಸಂಖ್ಯಾನೇಮವುಳ್ಳದು**— ನಿಯತಸಂಖ್ಯೆ

ಯುಳ್ಳವರು. ಅಂದರೆ, ಜೀವರಲ್ಲಿ-ಸಾಂಶರು ಮತ್ತು ನಿರಂಶರು—ಎಂದು ಎರಡು ಪ್ರಕಾರ-ಎಂದು ಹೇಳಿದಂತಾಯಿತು. **ನರದೇಹವನು**— ಪೂರ್ವೋಕ್ತ ಏಳು ವಿಧರಾದ ನಿರಂಶಜೀವರು ಮಾನವ ಶರೀರವನ್ನು ಹೊಂದಿ (ಹೇಳಿ). **ಬ್ರಾಹ್ಮಣ ಕುಲದಲವತರಿಸಿ**—ಬ್ರಾಹ್ಮಣಕುಲದಲ್ಲಿ ಜನಿಸಿದವರಾಗಿ, **ಗುರುಗಳು**— ಆಯಾ ಜನ್ಮದಲ್ಲಿ ಗುರುಗಳು, **ಪೇಳಿದ**— ಉಪದೇಶಿಸಿದ, **ಅರ್ಥವನ್ನು ತಿಳಿದು**--- ಶಾಸ್ತ್ರಾರ್ಥಗಳನ್ನು ಅರಿತು, **ಸ್ಥೂಲಕರ್ಮವ ತೊರೆದು**— ಬಾಹ್ಯ ಹಾಗೂ ಜಡಕರ್ಮಗಳನ್ನು (ಜ್ಞಾನಾನುಸಂಧಾನವಿಲ್ಲದ ಕರ್ಮಗಳೆಂಬರ್ಥ) ಬಿಟ್ಟು, **ತತ್ತತ್ಕಾಲ**—ಆಯಾಯಾ ಕಾಲೋಚಿತವಾದ, **ಧರ್ಮ-**ಧರ್ಮ, ಕರ್ಮಗಳನ್ನು, **ಕರ್ಮಯೋಗಿಗಳು**--- ಕರ್ಮಯೋಗಿಗಳಾದ ಈ ನಿರಂಶಜೀವರು, **ಸಮರ್ಪಿಸುತಿಹರು**---ಹೃತ್ಪದ್ಮದಲ್ಲಿ ನಿವಾಸಿಯಾದ ಬಿಂಬರೂಪೀ ಶ್ರೀಹರಿಗೆ ಅರ್ಪಿಸುತ್ತಾರೆ. ॥೬॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ನಿರಂಶರಾದ ಪೂರ್ವೋಕ್ತ ಏಳು ವಿಧರಾದ ಕರ್ಮಯೋಗಿಗಳ ವಿಚಾರ ಹೇಳತಾರೆ.

ಪೂರ್ವೋಕ್ತ ತೃಣಜೀವರು ಆರಂಭಮಾಡಿ, ಮಾನುಷಗಂಧರ್ವರ ಪರಿಯಂತ, ಏಳುವಿಧ ಜೀವಗಣ ಸಂಖ್ಯಾನೇಮದಿಂದ ರಹಿತವಾದ ಬಹಳ ಸಮೂಹದಿಂದ ಯುಕ್ತವಾದದ್ದು. ದೇವಗಂಧರ್ವರು ಆರಂಭಮಾಡಿ, ಬ್ರಹ್ಮಾಂತವರಿಗೂ ದೇವತೆಗಳ ಪಙ್ಕ್ತಿ ಸಂಖ್ಯಾನೇಮದಿಂದ ಯುಕ್ತವಾದದ್ದು. ಅಂತು, ಸಾಂಶರು-ನಿರಂಶರು ಎಂತ-ಎರಡು ವಿಧ ಜೀವರೆಂದು ಹೇಳಿದಂತಾಯಿತು. ಎರಡು ವಿಧದೊಳಗೆ ಏಳುವಿಧರಾದ ನಿರಂಶರ ವಿಚಾರ ಹೇಳತಾರೆ. ಈ ಏಳು

ವಿಧರಾದ ಸಿರಂಶಜೀವರು ಮನುಷ್ಯಶರೀರವನ್ನು ಧರಿಸಿ, ಪ್ರಥಮತಃ ಬ್ರಾಹ್ಮಣ ಜಾತಿ ವ್ಯತಿರಿಕ್ತ ಅನ್ಯಜಾತೀಯವಾದ ಮಾನುಷದೇಹ ಧರಿಸಿ, ಅನಂತರ, ಬ್ರಾಹ್ಮಣಕುಲದಲ್ಲಿ ಅವತರಿಸಿದವರಾಗಿ, ಆ ಜನ್ಮದಲ್ಲಿ ಗುರುಗಳು ಪೇಳಿವ ಶಾಸ್ತ್ರಾರ್ಥವನ್ನು ತಿಳಿದು, ಬಾಹ್ಯಕರ್ಮಗಳಾದ ಸ್ಥೂಲಕರ್ಮಗಳ ತೊರೆದು, ಹೃದಯಾಕಾಶದಲ್ಲಿ ಧ್ಯಾನೋಪಾಸನಾದಿ ಅಂತರಂಗಕರ್ಮವನ್ನು ಆಚರಿಸೋವರಾಗಿ, ಆಯಾ ಕಾಲದಲ್ಲಿ ಮಾಡಲ್ಪಟ್ಟ ಯಥೋಚಿತವಾದ ಬಾಹ್ಯಗಳಾದ ಧರ್ಮ--ಕರ್ಮಗಳನ್ನು ಕರ್ಮಯೋಗಿಗಳಾದ ಸಿರಂಶರು ಹೃದಯದಲ್ಲಿ ಧ್ಯಾನೋಪಾಸನ ಮಾಡಿ, ತಮ್ಮ ಬಿಂಬರೂಪೀ ಪರಮಾತ್ಮಗೆ ಅರ್ಪಿಸೋವರಾಗಿತಾರೆ. ಈ ಜೀವರಿಗೆ ಜನ್ಮಗಳು ಒಂದೇ ಪ್ರಕಾರ. ಅದರಲ್ಲಿ ವ್ಯತ್ಯಾಸಗಳು ಇಲ್ಲ. ॥೪॥

## ೨. ಭಾವಪ್ರಕಾಶಿಕೆ

ತೃಣ-ಮೊದಲಾದ ಏಳುವಿಧ ಜೀವರು ಸಂಖ್ಯಾ ಇಲ್ಲದಷ್ಟು ಬಹಳ ನಾಗಿರುವರು. ದೇವತಾ ಗಣಗಳು ಮಾತ್ರ **"ಶತಕೋಟ್ಯೋಹಿ ದೇವಾನಾಂ"**-ದೇವತೆಗಳು ೧೦೦ ಕೋಟಿಗಳು-ಎಂಬಿವೇ ಮೊದಲಾದ ವಾಕ್ಯಗಳಿಂದ ಸಂಖ್ಯಾನಿಯಮ ಏರ್ಪಡುವದು. ತೃಣ ಮೊದಲು, ಮನುಷ್ಯಗಂಧರ್ವರವರೆಗೂ ಆಗುವ ಏಳುವಿಧ ಜೀವರು ಕರ್ಮಯೋಗಿಗಳೆನಿಸುವರು. ಇವರು, ಮನುಷ್ಯರಾಗಿ ಬ್ರಾಹ್ಮಣರ ಕುಲದಲ್ಲಿ ಹುಟ್ಟಿ, ಕಾಮ್ಯಕರ್ಮಗಳನ್ನು ಬಿಟ್ಟು, ಗುರು ಮುಖದಿಂದ ಭಗವನ್ಮಾಹಾತ್ಮ್ಯ ಶ್ರವಣಾದಿಗಳನ್ನು ಮಾಡಿ, ಅದನ್ನು ಮನನ ಮಾಡಿ, ಮಾಡಿದ ಕರ್ಮಗಳನ್ನು ಹರಿಗರ್ಪಿಸುತ್ತಾ, ಕಾಲವನ್ನ ಕಳೆಯುವರು. ॥೪॥

## ೩. ಭಾವದರ್ಪಣ

ಏಳು । "ಕರ್ಮಾಣಿ ಶಾಸ್ತ್ರತೋ ಜ್ಞಾತ್ವಾ ತತ್ಪ್ರಾಧಾನ್ಯಾನುಸಾರತಃ ।

ವಿಜ್ಞಾತಾಯೈರ್ಗುಣಾ ವಿಷ್ಣೋರ್ಜ್ಞೇಯಾ ಸ್ತೇ ಕರ್ಮಯೋಗಿನ"-ಇತಿ ಪ್ರಕಾರ ಸಂಹಿತೋಕ್ತೇಃ ॥೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

'ಏಳು'-ಇತಿ ॥ 'ಬಹಳ'-ಅಸಂಖ್ಯಾತ 'ಸಂಖ್ಯಾನೇಮವುಳ್ಳದ್ದು'--ಯುಕ್ತ. ॥೪॥

## ಕನ್ನಡಾರ್ಥ

'ಬಹಳ'-ವೆಂಬುದಕ್ಕೆ ಅಸಂಖ್ಯ. ಅನಂತ-ಎಂದು ಅರ್ಥಮಾಡಬೇಕು. ಈ ಪದವನ್ನು 'ಏಳು ವಿಧ ಜೀವಗಣಕ್ಕೆ'-ಅನ್ವಯಿಸಬೇಕು.

'ಸಂಖ್ಯಾನೇಮವುಳ್ಳದ್ದು'--ಈ ಪದಕ್ಕೆ ಸಂಖ್ಯಾನೇಮಯುಕ್ತವೆಂದು ಅರ್ಥ. ಅಂದರೆ, 'ಇಂತಿಷ್ಟೇ ಸುರರು'-ಎಂಬ ನಿಯತವಾದ ಸಂಖ್ಯೆಯಲ್ಲಿಯೇ ಇರುವವರು. ॥೪॥

## ೫. ಶ್ರೀಗುರುಹೃದಯಪ್ರಕಾಶಿಕೆ

ಮೇಲೆ ಹೇಳಿದ, ಏಳು ವಿಧ ಜೀವಗಣಗಳು ಬಹಳ ಸುರರೆಂಬ ಜೀವಗಣದಂತೆ ಸಂಖ್ಯಾನಿಯಮ ಉಳ್ಳದ್ದು. ಅಂದರೆ, ದೇವಪದವಿಗೆ ಬರತಕ್ಕ ಜೀವರೇ ಬೇರೆ-ಎಂಬ ನಿಬಂಧನೆಯಂತೆ, ಈ ಏಳು ಗಣದ ಸಂಖ್ಯೆಯವರು ಬೇರೆ ಬೇರೆ ಬರತಕ್ಕವರು ಎಂದರ್ಥ. ಇವರ ಸಾಧನವನ್ನೇ ಏಳು ಪದ್ಯದ ವರೆಗೆ, ನಾಲ್ಕು ಪದ್ಯದಿಂದ ತಿಳಿಸುತ್ತಾರೆ. ಈ ಏಳ ುಗಣದ ಕರ್ಮಯೋಗಿಗಳೆಂಬ ಜೀವರು ಮನುಷ್ಯ ಜನ್ಮವನ್ನು ಹೊಂದಿ, ಬ್ರಾಹ್ಮಣಕುಲದಲ್ಲಿ ಹುಟ್ಟಿ, ಸ್ಥೂಲ ಧರ್ಮವೆಂಬ ಅಲ್ಪಫಲಪ್ರದ ಕರ್ಮಗಳನ್ನು ವರ್ಜಿಸಿ, ಗುರುಗಳು ಹೇಳಿದ ಶಾಸ್ತ್ರ ಧಹಸ್ಯಜ್ಞಾನಪೂರ್ವಕ ಶ್ರೀಹರಿಗೆ ಸರ್ವಸಮರ್ಪಣೆರೂಪ ಧರ್ಮ ಮೊದಲಾದ್ದು ತಿಳಿದು, ತತ್ತತ್ಕಾಲೋಚಿತ ಧರ್ಮಗಳನ್ನು ದೇವರಿಗೆ ಒಪ್ಪಿಸುವವರು-ಕರ್ಮಯೋಗಿಗಳೆಂದು ಕರೆಸುವರು. ॥೪॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ತೃಣಾದಿ ನರಗಂಧರ್ವಪರ್ಯಂತ ಇರುವ ಏಳುವಿಧವಾದ ನಿರಂಶ ಜೀವರು ಅನಂತ ಸಂಖ್ಯೆಯಲ್ಲಿದ್ದಾರೆ. **"ಬಹಳ"**–ಎಂಬ ಶಬ್ದವು ಸಂಖ್ಯಾ ವಾಚಕ. ಅದರ ಅರ್ಥ. **"ಅನಂತ"**-ವೆಂದು. ಅವರ ಸಂಖ್ಯಾಬಲ ಇಷ್ಟೇ ಎಂದು-ನಿಯಮವಿಲ್ಲ.

೨. ಆದರೆ, ಬ್ರಹ್ಮಾದಿ ದೇವಗಂಧರ್ವ ಪರ್ಯಂತ, ವಿದ್ಯಮಾನರಾಗಿ ರುವ ದೇವತೆಗಳ ಶ್ರೇಣಿ (ಸುರಾಳಿ) ನಿಯಮಿತ ಸಂಖ್ಯೆಗೆ ಒಳಪಟ್ಟಿದ್ದು.

**"ಶತಕೋಟ್ಯೋಹಿ ದೇವಾನಾಂ"**–ಎಂಬ ಪ್ರಮಾಣಾನುಸಾರ, ದೇವತಾವರ್ಗ ೧೦೦ ಕೋಟಿಗಳು-ಎಂದು ನಿಯಮಿತ. ದೇವತಾಸಮೂಹ ಸಂಖ್ಯಾನಿಯಮಕ್ಕೆ ಒಳಪಟ್ಟಿದ್ದು. ಇಂತಿಂತಹ ಪದವಿಗೆ ಇಷ್ಟೇ-ಎಂದು ನಿಯಾ ಮಕ. ದೃಷ್ಟಾಂತಪೂರ್ವಕವಾಗಿ-ವಸುಗಣ-ರುದ್ರಗಣ-ಆದಿತ್ಯಗಣ-ಋಭುಗಣ ..............ಇತ್ಯಾದಿ.

೩. ಏಳುವಿಧದ ನಿರಂಶಜೀವರು, ತಮ್ಮ ಸಂಸ್ಕಾರಗಳಿಗನುಗುಣವಾಗಿ, ತೃಣ–ಕ್ರಿಮಿ-ಪಕ್ಷಿ–ಪಶ್ವಾದಿಗಳ ಜನ್ಮಗಳನ್ನು ತಾಳಿ, ಕೊನೆಯಲ್ಲಿ ಉತ್ತಮ ಸಾಧನಸಂಪತ್ತುಗಳಿರುವ ನರದೇಹವನ್ನು (ಮಾನವ ಶರೀರ) ತಾಳುವರು. ಮಾನವಶರೀರವನ್ನು ಹೊಂದಿ, ಪ್ರಥಮತಃ ಬ್ರಾಹ್ಮಣೇತರ ಕುಲದಲ್ಲಿ ಜನಿಸಿ, ಕೊನೆಯಲ್ಲಿ ಸಂಸ್ಕಾರವಿಶೇಷದಿಂದ ಬ್ರಾಹ್ಮಣಕುಲದಲ್ಲಿ ಅವತರಿಸುವರು.

೪. ಅಂತಹ ಬ್ರಾಹ್ಮಣ ಕುಲದಲ್ಲವತರಿಸಿ, ಕಾಮ್ಯಕರ್ಮಗಳನ್ನು ತೊರೆದು, ಸದ್ಗುರುಗಳ ಉಪದೇಶ ದ್ವಾರಾ, ಶಾಸ್ತ್ರಾರ್ಥಗಳನ್ನು ತಿಳಿದು, ಅದರಂತೆ, ಸತ್ಕರ್ಮಾನುಷ್ಠಾನರಾಗಿರುವರು. ಆಯಾಯ ಕಾಲ–ದೇಶಗಳಿಗನ ಗುಣವಾಗಿ, ಧರ್ಮಗಳನ್ನು ಆಚರಿಸುತ್ತಾ, ತದನುಗುಣವಾದ ಕರ್ಮಗಳನು

ಅನುಷ್ಠಾನ ಮಾಡುತ್ತಾ, ತಮ್ಮ ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಕಲಧರ್ಮ ಕರ್ಮಗಳನ್ನು ಬಿಂಬರೂಪಿಯಾದ ಶ್ರೀಹರಿಗೆ ಅರ್ಪಿಸುತ್ತಾ, ಕರ್ಮಯೋಗಿಗಳೆನಿಸುವರು.

**ಪ್ರಮಾಣ :-**

"ಕರ್ಮಾಣಿ ಶಾಸ್ತ್ರತೋ ಜ್ಞಾತ್ವಾ ತತ್ತಾತ್ಪರ್ಯಾನುಸಾರತಃ ।
ವಿಜ್ಞಾತಾರ್ಯೈರ್ಗುಣಾ ವಿಷ್ಣೋರ್ಜ್ಞೇಯಾ ಸ್ತೇ ಕರ್ಮಯೋಗಿನಃ ॥
**—ಇತಿ ಪ್ರಕಾಶಸಂಹಿತೋಕ್ತೇಃ** ॥೯॥

## ಪದ್ಯ-೫

**ಮೂಲ :-**

**ಹೀನ ಕರ್ಮಗಳಿಂದ ಬಹುವಿಧ।**
**ಯೋನಿಯಲಿ ಸಂಚರಿಸಿ ಪ್ರಾಂತಕೆ ।**
**ಮಾನುಷತ್ವವನೈದಿ ಸರ್ವೋತ್ತಮನು ಹರಿಯಂಚ ॥**
**ಜ್ಞಾನಭಕ್ತಿಗಳಿಂದ ವೇದೋ ।**
**ಕ್ತಾನುಸಾರ ಸಹಸ್ರ ಜನುನೋ ।**
**ನ್ಯೂನ ಕರ್ಮವ ಮಾಡಿ ಹರಿಗರ್ಪಿಸಿದ ನಂತರ ॥೫॥**

**ಅವತರಣಿಕೆ :-**

ನಿರಂಶಜೀವರಾದ ಕರ್ಮಯೋಗಿಗಳ ವಿಚಾರವನ್ನೇ ಮುಂದುವರಿಸುತ್ತಾರೆ. ॥೪॥

**ಪ್ರತಿಪದಾರ್ಥ**

**ಹೀನಕರ್ಮಗಳಿಂದ** — ದುಷ್ಟರೂಪವಾದ ಪಾಪಕರ್ಮಗಳಿಂದ

**ಬಹುವಿಧ**— ಮಾನುಷ ವ್ಯತಿರಿಕ್ತವಾದ ನಾನಾವಿಧಗಳಾದ. **ಯೋನಿಯಲಿ**— ಜನ್ಮಗಳಲ್ಲಿ, **ಸಂಚರಿಸಿ**—ಜನ್ಮತಾಳುತ್ತಾ, **ಪ್ರಾಂತಕೆ**—ಕೊನೆಯಲ್ಲಿ, **ಮಾನುಷತ್ವನೈದಿ**—ನರಜನ್ಮವನ್ನು ಹೊಂದಿ, (ಅದರಲ್ಲಿ ಬ್ರಾಹ್ಮಣ ಕುಲದಲ್ಲಿ ಜನಿಸಿ—ಎಂದು ಗ್ರಾಹ್ಯ) **ಸಹಸ್ರಜನುಮ**—ಇಂತಹ ಬ್ರಾಹ್ಮಣ ಜನ್ಮಗಳು ಸಾವಿರಸಲ ಧರಿಸಿದ ನಂತರ, **ವೇದೋಕ್ತಾನುಸಾರ**—ವೇದಶಾಸ್ತ್ರಗಳಲ್ಲಿ ತಿಳಿಸಿದ ಪ್ರಕಾರ, **ಅನ್ಯೂನ ಕರ್ಮವಮಾಡಿ**—ದೋಷರಹಿತಗಳಾದ ಧ್ಯಾನೋಪಾಸನ ಸತ್ಕರ್ಮಪೂರ್ವಕ, **ಸರ್ವೋತ್ತಮನು ಹರಿಯೆಂದು**— ಸರ್ವಪ್ರಕಾರಗಳಿಂದಲೂ ಶ್ರೀವಿಷ್ಣುವೇ ಸರ್ವೋತ್ತಮನೆಂಬ ಉತ್ತಮ ಜ್ಞಾನಾನುಸಂಧಾನದಿಂದ (ವೈಷ್ಣವ ಕುಲದಲ್ಲಿ ಬಂದು ಶ್ರೀಮದಾಚಾರ್ಯರ ಮತಾನುಗರಾಗಿ.) **ಹರಿಗೆ ಅರ್ಪಿಸಿದನಂತರ**.....ಬಿಂಬರೂಪಿಯಾದ, ಸಜ್ಜನರ ಸಕಲಪಾಪ ಪರಿಹಾರಕರೂಪನಾದ ಶ್ರೀ ಹರಿಯ ಚರಣಾರವಿಂದಗಳಿಗೆ ಅರ್ಪಿಸಿದಮೇಲೆ. ॥೫॥

## ವ್ಯಾಖ್ಯಾನಗಳು

### ೧ ಸಂಕರ್ಷಣಒಡೆಯರ ವ್ಯಾಖ್ಯಾನ

ನಿರಂಶದ ವಿಚಾರವೇ ಹೇಳತಾರೆ.

ಹೀನಕರ್ಮಗಳಾದ ಪಾಪಕರ್ಮಗಳಿಂದ, ಮಾನುಷಯೋನಿ ವ್ಯತಿರಿಕ್ತ, ಅನ್ಯವಾದ ನಾನಾವಿಧವಾದ ಯೋನಿಸಮೂಹದಲ್ಲಿ ಸಂಚಾರಮಾಡಿ, ಅಂದರೆ, ನಾನಾ ವಿಧವಾದ ಜನ್ಮಗಳಿಂದ ಸಂಚಾರಮಾಡಿ, ಮಧ್ಯೇ ಮಧ್ಯೇ ಮನುಷ್ಯದೇಹವೇನು, ಮನುಷ್ಯರಲ್ಲಿ ಬ್ರಾಹ್ಮಣದೇಹವೇನು ಧರಿಸತಾ, ಈ ಪ್ರಕಾರ ಅನೇಕಾವರ್ತಿ ಅನೇಕ ರೀತಿಯ ಬ್ರಾಹ್ಮಣ ಜನ್ಮವನ್ನೊಳಗೊಂಡ ಮಾನುಷಜನ್ಮ ಧರಿಸತಾ, ಸಾಧನ ಮಾಡತಾ, ಬಂದು ಕೊನೆಗೆ, ಪುನಃ ಬ್ರಾಹ್ಮಣಜನ್ಮ ವ್ಯತಿರಿಕ್ತ ಅನೇಕ ಮಾನುಷ ಜನ್ಮವಾಗಿ, ನಂತರ ಬ್ರಾಹ್ಮಣಕುಲದಲ್ಲಿ, ಅವತರಿಸಿ ಎಂಬುದು ಪೂರ್ವೋಕ್ತದಿಂದ ಅನ್ವಯವು, ಇಂಥಹ ಬ್ರಾಹ್ಮಣ ಜನ್ಮಗಳು

ಅವಿಚ್ಛಿನ್ನವಾಗಿ ಸಾವಿರಜನ್ಮ ಧರಿಸಿ, ಈ ಸಾವಿರ ಜನ್ಮಗಳಲ್ಲಿ ಪರಮಾತ್ಮನ ಧ್ಯಾನೋಪಾಸನ ಮಾಡುತಾ, ತಮ್ಮ ಯೋಗ್ಯತಾನುಸಾರ ವೇದದಲ್ಲಿ ಹೇಳಿದ ಪ್ರಕಾರ ನ್ಯೂನರಹಿತವಾದ ಧ್ಯಾನೋಪಾಸನಾದಿ ಸತ್ಕರ್ಮಗಳ ಮಾಡಿ, ಸರ್ವೋತ್ತಮನು ಹರಿಯೆಂಬ ದೃಢಜ್ಞಾನದಿಂದ ಯುಕ್ತರಾಗಿ, ದೃಢವಾದ ಜ್ಞಾನ-ಭಕ್ತಿ-ವೈರಾಗ್ಯಗಳಿಂದ ಸಹಿತರಾಗಿ ಮಾಡಿದ ಕರ್ಮಗಳ ಬಿಂಬಗೆ ಸಮರ್ಪಣ ಮಾಡಿ, ಈ ಪ್ರಕಾರ ಸಾವಿರ ಜನ್ಮ ಕಳೆದ ನಂತರ ಪ್ರಾಂತಕ್ಕೆ. ಪೂರ್ವದಲ್ಲಿ ಅನೇಕಾವರ್ತಿ ಮಾನುಷಜನ್ಮವೇನು, ಬ್ರಾಹ್ಮಣ ಜನ್ಮವೇನು-ಮಧ್ಯೇ ಬರುತ್ತಲೂ ಮತ್ತು ತದ್ವ್ಯತಿರಿಕ್ತ ಅನ್ಯವಾದ ಜನ್ಮಗಳ ಸರಿಸುತಾ ಪ್ರಾಂತವಾದ ಅಪರೋಕ್ಷಕ್ಕೆ ಸಮೀಪವಾದ ಕಾಲದಲ್ಲಿ ಒಂದುಸಾರರದ ಹದಿಮೂರು ಜನ್ಮಗಳು ಮಧ್ಯ ವಿಚ್ಛೇದ ಬಾರದಂತೆ ಧರಿಸತಾರೆಂದು ಪ್ರಾಂತ-ಶಬ್ದಕ್ಕೆ ತಾತ್ಪರ್ಯ. ॥೫॥

## ೨. ಭಾವಪ್ರಕಾಶಿಕೆ

ತೃಣ ಮೊದಲು ಮನುಷ್ಯಗಂಧರ್ವರವರೆಗೂ ಹೇಳಿದ, ಏಳು ವಿಧವಾದ ಕರ್ಮಯೋಗಿಗಳು ಮನುಷ್ಯರಾಗಿ ಹುಟ್ಟುವುದಕ್ಕೆ ಮುಂಚೆ, ಅನೇಕ ವಿಧವಾದ ನೀಚಕರ್ಮಗಳನ್ನು ಮಾಡಿ, ಅನೇಕ ವಿಧಜನ್ಮಗಳಲ್ಲಿ ಹುಟ್ಟಿ, ಮೃತನಾಗಿ, ಕಡೆಗೆ, ಮನುಷ್ಯಜನ್ಮದಲ್ಲಿ ಹುಟ್ಟಿ, ಪರಮಾತ್ಮನಲ್ಲಿ ಭಕ್ತಿಯಿಂದ ಹರಿ ಸರ್ವೋತ್ತಮನೆಂದು ತಿಳಿದು, ಜ್ಞಾನಪೂರ್ವಕವಾಗಿ ವೇದೋಕ್ತಕರ್ಮಗಳನ್ನು ಸಹಸ್ರಜನ್ಮಗಳಿಗೆ ಕಮ್ಮಿ ಇಲ್ಲದೆ ಮಾಡಿ, ಶ್ರೀಹರಿಗೆ ಅರ್ಪಿಸಿದ ಅನಂತರದಲ್ಲಿ ॥೭॥

## ೩. ಭಾವದರ್ಪಣ

ಸಹಸ್ರಜನ್ಮ ವೇದೋಕ್ತಕರ್ಮ ಮಾಡೋಣ. ಹತ್ತುಜನ್ಮಗಳಲ್ಲಿ ಮುಕ್ತಾಮುಕ್ತಜಡಚೇತನಗಳಲ್ಲಿ ಬೇಧಪಂಚಕ ತರತಮಮನನಪೂರ್ವಕ

ಹರಿಸರ್ವೋತ್ತಮಜ್ಞಾನ । ದಾರಾಪುತ್ರಾದಿಗಳಪೇಕ್ಷೆಯಾ ಶ್ರೀಹರಿಪಾದದಲ್ಲಿ ಅತಿ ದೃಢತರವಾದಂಥ ಸ್ನೇಹಾಖ್ಯಭಕ್ತಿ । ಏವಂ ರೀತ್ಯಾ ನಿರಂಶಜೀವರು ಸರಿಯಾಗಿ ಸಾಧನ ಮಾಡಿದ ತರುವಾಯ ಸ್ವಹೃದಯದಲ್ಲಿ ಬಿಂಬರೂಪವನ್ನ ಕಾಣುತ್ತಾರೆಂದು-ಮೂರು ಪದ್ಯದೀದ ಹೇಳುತ್ತಾರೆ । ಹೀನ । ಅನ್ಯೂನ ಸಂಪೂರ್ಣ ಎಂಬರ್ಥ. ॥೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

" ಹೀನ " ಇತಿ॥ "ಅನ್ಯೂನ"-ನ್ಯೂನವಲ್ಲದ. "ಕರ್ಮ"- ಅನೇನ ಪೂರ್ವಂ ತ್ಯಾಜ್ಯಂ ಸ್ಥೂಲಂ ಪ್ರವೃತ್ತಮಿತಿ ಜ್ಞೇಯಮ್. ॥೫॥

## ಕನ್ನಡಾರ್ಥ

ಸಹಸ್ರಜನ್ಮಾನ್ಯೂನವೆಂದರೆ, ಸಾವಿರಜನ್ಮ ಕಡಿಮೆಯಾಗದಿರುವ ಜನ್ಮ ಗಳೀದ ಎಂದು ಅರ್ಥ. ಅಷ್ಟು ಜನ್ಮಗಳಿಂದ ಕರ್ಮವನ್ನು ಮಾಡುತ್ತಾರೆ. ಹಿಂದಿನ ಪದ್ಯದಲ್ಲಿ ಹೇಳಿದ ಸ್ಥೂಲಕರ್ಮಗಳನ್ನು ತೊರೆದಿರುತ್ತಾರೆ. ಆದರೂ, ಅಂಥ ಕರ್ಮಗಳು ಪ್ರವೃತ್ತವಾಗಿಯೇ ಇರುವವೆಂದು ತಿಳಿಯಬೇಕು. ॥೫॥

## ೪ ಶ್ರೀಗುರುಹೃದಯಪ್ರಕಾಶಿಕೆ

ಇವರು ದುಷ್ಕರ್ಮಮೂಲಕ ನಾನಾ ಜಾತಿಯಲ್ಲಿ ಹುಟ್ಟಿ, ಕೊನೆಗೆ ಮಾನುಷ ಜನ್ಮವನ್ನು ಹೊಂದಿ, ವಿಷ್ಣುವೇ ಸರ್ವೋತ್ತಮನೆಂಬ ಜ್ಞಾನಭಕ್ತಿಗಳಿಂದ ವೇದೋಕ್ತಪ್ರಕಾರ, ಸಹಸ್ರಜನ್ಮದಲ್ಲಿ ನ್ಯೂನಕರ್ಮವಮಾಡಿ, ಅಂದರೆ ಸ್ವಸಾಧನೆ ಪೂರ್ಣಆಗದೆ ಇರುವಷ್ಟು ಸತ್ಕರ್ಮಗಳನ್ನು, ಸಾವಿರ ಜನ್ಮ ಆಚರಿಸಿ ಶ್ರೀಹರಿಗೆ ಸಮರ್ಪಿಸಿದ ನಂತರದಲ್ಲಿ. ॥೫॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಪೂರ್ವೋಕ್ತ ಏಳು ವಿಧರಾದ ನಿರಂಶಜೀವರು ತಮ್ಮ ಹಿಂದಿನ ಜನ್ಮಗಳಲ್ಲಿ ದುಷ್ಟರೂಪವಾದ ಪಾಪಕರ್ಮಗಳನ್ನು ಮಾಡಿ, ತದ್ವಾರಾ, ವಿಧ ವಿಧವಾದ ಯೋನಿಗಳಲ್ಲಿ ಜನ್ಮವೆತ್ತುವರು. ನಂತರ, ಕೊನೆಯಲ್ಲಿ (ಪ್ರಾಂತಕೆ) ನರಜನ್ಮವನ್ನು ತಾಳುವರು.

೨. ಮಾನುಷದೇಹವನ್ನು ಧರಿಸಿ. ಜಗತ್ತಿನ ಬೇರೆ ಬೇರೆ, ಪ್ರದೇಶಗಳಲ್ಲಿ ಜನಿಸುವರು. ಸಂಸ್ಕಾರಫಲವಾಗಿ, ಈ ಭರತಖಂಡದಲ್ಲಿ ಮಾನುಷ ಶರೀರದಿಂದ ಜನ್ಮತಾಳುವರು. ಅದರಲ್ಲಿ ಬ್ರಾಹ್ಮಣಕುಲ ಅತಿರಿಕ್ತವಾದ ಇತರ ಕುಲಗಳಲ್ಲಿ ಜನ್ಮವೆತ್ತುವರು. ಕೊನೆಯಲ್ಲಿ, ಉತ್ತಮವಾದ ಬ್ರಾಹ್ಮಣ ಜನ್ಮವನ್ನು ಹೊಂದುವರು.

೩. ಆ ವಿಪ್ರಜನ್ಮತಾಳಿ, ಜ್ಞಾನಪೂರ್ವಕವಾಗಿ. ಭಕ್ತಿಯಿಂದ ಸಹಸ್ರ ಜನ್ಮಗಳ ನಂತರ, ಉತ್ತಮವೈಷ್ಣವಕುಲದಲ್ಲಿ ಜನಿಸುವರು. ಶ್ರೀಮದಾಚಾರ್ಯರ ಮತವನ್ನು ಅವಲಂಬಿಸಿ, ವೇದೋಕ್ತಾನುಸಾರವಾಗಿ, ಪಂಚಭೇದ-ತಾರತಮ್ಯ-ಜಗತ್ತಿನ ಸತ್ಯತ್ವ-ಹರಿಯೇ ಸರ್ವೋತ್ತಮ-ವಾಯುಜೀವೋತ್ತಮ-ಈ ಸಿದ್ಧಾಂತಗಳನ್ನು ಗುರುಮುಖೇನ ಅರಿತು, ಅಧ್ಯಯನದ್ವಾರಾ, ಅನುಷ್ಠಾನ ಮಾಡುತ್ತಾ, ದೋಷರಹಿತರಾದ, ಅಂದರೆ, ವಿಧಿಬದ್ಧವಾದ ಕರ್ಮಗಳನ್ನು ಕರ್ಮಪತಿಯಾದ ಕಮಲನಾಥನು ಮಾಡಿ ಮಾಡಿಸದಂತೆ ಆಚರಿಸುತ್ತಾ, ತಮ್ಮ ಬಿಂಬಮೂರ್ತಿಯಾದ ಸಜ್ಜನರ ಸಕಲದುರಿತ ಪರಿಹಾರಕನಾದ ಶ್ರೀಹರಿಯ ದಿವ್ಯಚರಣಕಂಜಗಳಿಗೆ ಅರ್ಪಿಸಿ, ಕೃತಕೃತ್ಯರೆನಿಸುವರು.

ಇದು ನಿರಂಶಜೀವರ ಕರ್ಮಸಾಧನಕ್ರಮವು. ॥೫॥

## ಪದ್ಯ-೬

ಮೂಲ :-

**ಹತ್ತು ಜನಮಗಳಲ್ಲಿ ಹರಿ ಸ ।**
**ರ್ವೋತ್ತಮನು ಸುರಾಸುರಗಣಾರ್ಚಿತ ।**
**ಚಿತ್ರಕರ್ಮ ವಿಶೋಕನಂತಾನಂತರೂಪಾತ್ಮ ॥**
**ಸತ್ಯಸಂಕಲ್ಪ ಜಗದು ।**
**ತ್ಪತ್ತಿ ಸ್ಥಿತಿ ಲಯ ಕಾರಣ ಜರಾ ।**
**ಮೃತ್ಯುವರ್ಜಿತನೆಂದುಪಾಸನೆಗೈದ ತರುವಾಯ ॥೬॥**

**ಅವತರಣಿಕೆ :**

ಈ ಪದ್ಯದಿಂದಲೂ ನಿರಂಶಜೀವರಾದ ಕರ್ಮಯೋಗಿಗಳ ಸಾಧನ ವಿಚಾರವನ್ನು ಮುಂದುವರಿಸುತ್ತಾರೆ. ॥೬॥

**ಪ್ರತಿಪದಾರ್ಥ**

**ಹತ್ತು ಜನುಮಗಳಲ್ಲಿ**—ಪೂರ್ವೋಕ್ತ ಪ್ರಕಾರ, ಒಂದು ಸಹಸ್ರ ಬ್ರಾಹ್ಮಣ ಜನ್ಮಗಳಾದ ನಂತರ, ಮುಂದೆ ಹತ್ತು ಬ್ರಾಹ್ಮಣಜನ್ಮಗಳಲ್ಲಿ, **ಹರಿಸರ್ವೋತ್ತಮು**— ಬಿಂಬರೂಪನಾದ, ಸಜ್ಜನರ ಸಕಲದುರಿತ ಪರಿಹಾರಕನಾದ ಹರಿಶಬ್ದವಾಚ್ಯನಾದ ಶ್ರೀ ಪರಮಾತ್ಮನೇ ಸರ್ವೋತ್ತಮ ನೆಂಬ ಉತ್ತಮಜ್ಞಾನಾನುಸಂಧಾನದಿಂದ, **ಸುರಾಸುರಾಗಣಾರ್ಚಿತ**— ದೇವತೆಗಳು ಮತ್ತು ಅಸುರರಿಂದಲೂ ಪೂಜಿಸಲ್ಪಟ್ಟ, **ಚಿತ್ರಕರ್ಮ**— ಸುರಾಸುರವರ್ಗಕ್ಕೆ ಆಶ್ಚರ್ಯಗೊಳಿಸತಕ್ಕ ಜಗದ್ವ್ಯಾಪಾರಗಳುಳ್ಳವನೆಂತಲೂ, **ವಿಶೋಕ**—ದುಃಖಕ್ಲೇಶಾದಿಗಳಿಂದ ದೂರನಾದವನೆಂತಲೂ (ಸದಾ ಆನಂದ

ಸ್ವರೂಪಿಯು), **ಅನಂತಾನಂತ ರೂಪಾತ್ಮ**— ಅಪರಿಚ್ಛಿನ್ನವಾದ ಅಪ್ರಾಕೃತವಾದ ಅನಂತಾನಂತ ಅವತಾರ, ರೂಪಗಳುಳ್ಳವನೆಂತಲೂ, **ಸತ್ಯಸಂಕಲ್ಪ**— ಸತ್ಯಭೂತವಾದ ಇಚ್ಛಾಮಾಡುವವನೆಂತಲೂ, (ಶ್ರೀಹರಿಯ ಇಚ್ಛಾರೂಪವಾದ ಸಂಕಲ್ಪವು ಯಥಾರ್ಥವಾದದ್ದು) **ಜಗದುತ್ಪತ್ತಿ ಸ್ಥಿತಿ ಲಯ ಕಾರಣ**— ಚರಾಚರಾತ್ಮಕವಾದ ಈ ಸತ್ಯಭೂತವಾದ ಜಗತ್ತಿನ ಸೃಷ್ಟಿ, ಪಾಲನೆ, ನಾಶ ಮೊದಲಾದ ವ್ಯಾಪಾರಗಳಿಗೆ ಮುಖ್ಯಕಾರಣವಾದವನೆಂತಲೂ, (ಇತರ ಶ್ರೀಹರಿಯ ಅಪ್ಪಕರ್ತೃತ್ವವೂ ಗ್ರಾಹ್ಯ.) **ಜರಾಮೃತ್ಯುವರ್ಜಿತನೆಂದು**- ಉತ್ಪತ್ತಿ, ಮರಣಗಳಿಂದ ದೂರನಾದ ಶಾಶ್ವತವಸ್ತುವೆಂತಲೂ, **ಉಪಾಸನೆಗೈದತರುವಾಯ**— ಈ ಪ್ರಕಾರ ಶ್ರೀಹರಿಯ ಗುಣೋಪಾಸನಪೂರ್ವಕ ಹತ್ತು ಬ್ರಾಹ್ಮಣ ಜನ್ಮಗಳಲ್ಲಿ ಧ್ಯಾನ ಮಾಡಿದ ತರುವಾಯ— ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಮತ್ತು ನಿರಂತರ ವಿಚಾರ ಹೇಳತಾರೆ.

ಪೂರ್ವೋಕ್ತಪ್ರಕಾರ, ಒಂದು ಸಾವಿರ ಬ್ರಾಹ್ಮಣಜನ್ಮಗಳು ಆದ ನಂತರದ ಹತ್ತು ಬ್ರಾಹ್ಮಣಜನ್ಮಗಳಲ್ಲಿ, ಬಿಂಬರೂಪನಾದ, ಹರಿಶಬ್ದವಾಚ್ಯನಾದ ಪರಮಾತ್ಮ ಸರ್ವೋತ್ತಮನೆಂತಲೂ, ಸುರರಿಂದಲೂ, ಅಸುರರಿಂದಲೂ ಅರ್ಚಿತನಾದವ--ಎಂದರೆ, ಸುರರಿಂದ ತಾರತಮ್ಯಾನುಸಾರ ಮಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹದಿಂದ ಸರ್ವೋತ್ತಮನೆಂದು ಅರ್ಚಿತನಾದವನು. ದೈತ್ಯರು ದ್ವೇಷಿಗಳಾದ್ದರಿಂದ, ಅರ್ಚಿತಶಬ್ದ ಅವರಿಗೆ ಕೊಡೋದಿಲ್ಲ. ದ್ವೇಷಿಗಳಾದ ಕಾಲಕ್ಕೂ, ಮಾನುಷತ್ವೇನ ದೇವರು ಅವತಾರ ಮಾಡಿ, ದೈತ್ಯರನ್ನ ಪರಾಜಯ ಐದಿಸೋಣದರಿಂದ, ಇವನ್ನ ಜೈಸೋಣ ಅಶಕ್ಯ, ದಾರಿಂದಲೂ

ಆಗಲಾರದು. ಎಂತ ಅಸುರರು ತಿಳಿಯೋಣ ದಾವದದೆ, ಅದೇ ಅಸುರರಿಂದ ಅರ್ಚನ. ಆದರೂ, ದ್ವೇಷದಿಂದ ಇಂಥಾವನ ಸಂಹಾರಮಾಡಿದರೆ, ತಮಗೆ ಭೀತಿಪಡಿಸೋರುದಾರೂ ಇಲ್ಲ. ಆದ್ದರಿಂದ, ಸಂಹಾರ ಮಾಡಬೇಕೆಂಬ ದ್ವೇಷ, ಈ ಪ್ರಕಾರ ಸುರಾಸುರರಿಂದ ಅರ್ಚಿತನಾದವ. ಸುರಶಬ್ದದಿಂದ ಮುಕ್ತಿ ಯೋಗ್ಯರು ತೃಣಾಂತಗ್ರಾಹ್ಯ. ಅಸುರಶಬ್ದದಿಂದ ತೃಣಾಂತ ತಮೋ ಯೋಗ್ಯರು ಗ್ರಾಹ್ಯ. ಸುರಾಸುರರಿಗೆ ಆಶ್ಚರ್ಯಗೊಳಿಸತಕ್ಕ ಅತ್ಯಾಶ್ಚರ್ಯ ವ್ಯಾಪಾರವುಳ್ಳವ. ಸೃಷ್ಟಿ-ಸ್ಥಿತಿ-ಸಂಹಾರಾದಿಗಳಿಂದ ಸಂತೋಷ, ಶೋಕ ಎರಡರಿಂದಲೂ ರಹಿತನಾದವ. ಅಪರಿಚ್ಛಿನ್ನವಾದ ಅನಂತಾನಂತ ಅವತಾರ ಗಳುಳ್ಳವ. ನವನಾರೀಕುಂಜರವತ್, ಒಂದೇ ರೂಪದಲ್ಲಿ ನಾನಾವಿಚಿತ್ರ ಗಳಾದ ರೂಪಗಳಿಂದ ಯುಕ್ತವಾದ ದೇಹವುಳ್ಳವ. ಸತ್ಯವಾದ ಸತ್ಸಂಕಲ್ಪ ವುಳ್ಳವ. ತನ್ನ ಸಂಕಲ್ಪಾನುಸಾರ ಮಾಡತಕ್ಕವನೇ ಹೊರ್ತು, ಅದಕ್ಕೆ ಅನ್ಯಥಾ ಮಾಡತಕ್ಕವನಲ್ಲ. ಚರಾಚರ ಜಗತ್ತು ಸೃಷ್ಟಿ, ಸ್ಥಿತಿ, ಸಂಹಾರಕ್ಕೆ ಕಾರಣ ದಾದವನು. ಉತ್ಪತ್ತಿ ಮರಣಗಳಿಂದ ರಹಿತನಾದವ. ಇಂಥಾ ಪರಮಾತ್ಮ ನೆಂದು ದೃಢಜ್ಞಾನದಿಂದ, ತದನುಷ್ಠಾನಪೂರ್ವಕವಾಗಿ, ನಿಶ್ಚಂಚಲಜ್ಞಾನ ದಿಂದ, ಈ ಪ್ರಕಾರ, ಗುಣೋಪಾಸನ ಹತ್ತು ಜನ್ಮಗಳಲ್ಲಿ ಮಾಡಿದ ತರುವಾಯು. ॥೬॥

## ೨. ಭಾವಪ್ರಕಾಶಿಕೆ

ಮನುಷ್ಯ ಜನ್ಮಗಳಲ್ಲಿ ೧೦೦೦ ಜನ್ಮಗಳು ಸಾಧನಮಾಡಿದಮೇಲೆ, ಮತ್ತು ಹತ್ತು ಜನ್ಮಗಳಲ್ಲಿ ಹರಿಯು ಸರ್ವೋತ್ತಮನು ; ಮುಕ್ತಾಮುಕ್ತದೇವ ಗಣಾರ್ಚಿತನು ; ವಿಚಿತ್ರ ಕರ್ಮಗಳುಳ್ಳವನು ; ಶೋಕರಹಿತನು ; ಅನಂತಾ ನಂತರೂಪಗಳುಳ್ಳವನು ; ಸತ್ಯಸಂಕಲ್ಪನು ; ಜಗತ್ತಿನ ಸೃಷ್ಟಿ, ರಕ್ಷಣಾ ಸಂಹಾರಗಳಿಗೆ ಕಾರಣನು ; ಜರಾಮರಣವಿಲ್ಲದವನೆಂದು ಉಪಾಸನೆಯನ್ನು ಮಾಡಿದವೇಲೆ. ॥೬॥

## ೩. ಭಾವದರ್ಪಣ

ಹತ್ತು ಜನ್ಮ। ಸುರಾಸುರಗಣಾರ್ಚಿತೇತಿ। ವೈವಾರುವರ್ಣ್ಯೋ ಎಂಬಂಥಾ ಪೈಂಗ್ಯಶ್ರುತಿರೀತ್ಯಾ, ತಮೋಯೋಗ್ಯರಿಂದ ಶ್ರೀಹರಿ ವರ್ಣನೀಯನೇ ಅಲ್ಲವೆಂತ ಹೇಳುವ ಸ್ಥಳದಲ್ಲಿ, ಅರ್ಚನಕ್ಕೆ ಎಲ್ಲಿ ಅವಕಾಶ ಉಂಟಾದೀತು ? ತತ್ರ್ಯಯುಕ್ತ, ಅನ್ವಯ ಮಾಡೋದು ಹ್ಯಾಗೆಂದರೆ, ಮೇಲೆ ಕಂಡಂಥ ೨ ಪದ್ಯದಲ್ಲಿ ಅಸುರಶಬ್ದ ವಿಶೇಷಣ ಮಾಡಿ,ಸುರಶಬ್ದ ವಿಶೇಷ್ಯ ಮಾಡಿಕೊಂಡರೆ. ಶಾಸ್ತ್ರಕ್ಕೆ ವಿರೋಧ ಬರವಂತೆ ಅರ್ಥಾನುಕೂಲವಾಗುತ್ತದೆ। ಅದರ ವಿವರ। ಅಸು। ಸ್ವರೂಪೇಂದ್ರಿಯಗಳಿಂದ ರಾ- ಎಂದರೆ ರಮಣ ಮಾಡತಕ್ಕ ಮುಕ್ತರಾದಂಥ ಸುರಗಣ ದೇವತಾಸಮೂಹದಿಂದ ಅರ್ಚಿತ ಪೂಜಿತನಾದಂಥ ಶ್ರೀಹರಿ ಎಂದರೆ, ಶ್ರೀಮನ್ಮಧ್ವಶಾಸ್ತ್ರಕ್ಕೆ ವಿರೋಧಬಾರದ ರೀತಿ ಅನ್ವಯವಾಗುತ್ತದೆ। ಇದಕ್ಕೆ ದೃಷ್ಟಾಂತ। ತದುಕ್ತಂ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ದ್ವಿತೀಯಾಧ್ಯಾಯೇ। "ಅಮರಾಸುರಸಿದ್ಧಮಿತಿಪದಸ್ಯ ವ್ಯಾಖ್ಯಾನಾವಸರೇ। ಶ್ರೀಮತ್ಸರ್ವಜ್ಞ ಪೂಜ್ಯಪಾದೈಃ ಅಸುರೂಪರೈಸ್ತು ಮುಕ್ತೈರ್ವಂದ್ಯ ಇತಿ ತಸ್ಯ। ವರದರಾಜೀಯೈಷೇಂ ವ್ಯಾಖ್ಯಾತಂ। ಅತ್ರ ಅಸುರತ್ವಸ್ಯ ಅಮರವಿಶೇಷಣತ್ವಾತ್ ಪೂರ್ವ ನಿಪಾತಾಪೇಕ್ಷಯಾ ಅಮರಾಸುರಸಿದ್ಧೇತ್ಯಸ್ಯ ಅಸುರೂಪಸುರೈರಿತಿ ವೈಪರಿತ್ಯೇನ ಯೋಜನಂ ಕೃತಂ। ಅಸುಭಿಃ ಸ್ವರೂಪೇಂದ್ರಿಯೈಃ ಚಿನ್ಮಾತ್ರೈರಮಂತೇ ಸ್ವರೂಪಾನಂದಮನುಭವಂತೀತ್ಯಸುರಾಃ। ತೇಚತೇಸಿದ್ಧಾಃ ಮುಕ್ತಾಶ್ಚೇತಿ ಅಸು ಶಬ್ದವಾಚ್ಯಾನಾಂ ಇಂದ್ರಿಯಾಣಾಂ ಚಿನ್ಮಾತ್ರತ್ವಂ ಯುಕ್ತಂ ಅಸುರೂಪೇತ್ಯುಕ್ತಂ ಅಮರಪದವ್ಯಾಖ್ಯಾನಂ ಸುರೈಶ್ಚೇತಿ ಸಿದ್ಧ ಪದಾರ್ಥಕಥನಂ। ಮುಕ್ತೈರಿತಿ"। ಮೇಲೆ ಬರವಂಥಾ ಸುರಾಸುರಗಣ ಶಬ್ದಕ್ಕೆ ವರದರಾಜೀಯ ವ್ಯಾಖ್ಯಾನರೀತ್ಯಾ, ಸ್ವರೂಪಇಂದ್ರಿಯಗಳಿಂದ ರಮಣಮಾಡತಕ್ಕಂಥಾ ಮುಕ್ತ ಸಮೂಹದಿಂದ ಪೂಜಿತನೆಂದು ಮಾಡಿದ ಅರ್ಥವೇ ಇಲ್ಲಿ ಸಿದ್ಧದಂದು ತಿಳೀತಕ್ಕದ್ದು। (ಅಥವಾ ಮಹಾಭಾರತ ಆದಿಪರ್ವ ೧೪ನೇ ಶ್ಲೋಕದಲ್ಲಿ– "ಅಮರಾಸುರಸಿದ್ಧ ವಂದ್ಯಮ್."-ಈ ವ್ಯಾಸೋಕ್ತಿಯ ಮೇರೆಗೆ "ಅಮರ"- ಅಂದರೆ, ದೇವತೆಗಳು ಹಾಗೂ ಅಮರತ್ವವನ್ನು ಪಡೆದ ಮುಕ್ತರು. ಹೀಗೆ ಅರ್ಥ

ಮಾಡಿದರೆ, "ಅಸುರ"-ಇದರ ಅರ್ಥ-ವಿಷಯಾಭಿಲಾಷಿಗಳಾದ ದೈತ್ಯದಾನವ ರೆಂದಾಗುತ್ತದೆ। ಇಂಥಾ ಸ್ವಾಭಾವಿಕವಾದ ಅಸುರರಿಗೂ ಸಹ ಶ್ರೀಹರಿಯು ವಂದ್ಯನೇ ಸರಿ। ಹೀಗಾಗದಿದ್ದರೆ, ಪರಮಾತ್ಮನಿಗೆ ನೈರ್ಘೃಣ್ಯತ್ವ ಬಂದೀತು। ಆದಕಾರಣ, ಅಸುರರೂ ಸಹ ಶ್ರೀಹರಿಯನ್ನು ಅರ್ಚಿಸುವುದು ಸಿದ್ಧವೇ ಸರಿ। ಮತ್ತು ಇಂಥವರು ಅರ್ಚನೆಯು ಶ್ರೀಹರಿಗೆ ಮುಟ್ಟುವದಾದರೂ ಸರಿಯೆ। ಆದರೆ, ಈ ಅಸುರರು ತಮ್ಮ ಸ್ವಭಾವಕ್ಕನುಸಾರವಾಗಿ, ತಮಗೆ ಶ್ರೀಹರಿಯ ಪ್ರಾಪ್ತಿಯ ಬದಲಾಗಿ ರಾಜ್ಯಸಿರಿದಾರಾಪುತ್ರಾದಿ ವಿಷಯಾಭಿಲಾಷಾದೀದೇ ಆಜಭನಾದಿಗಳ ದ್ವಾರವಾಗಿ, ಶ್ರೀಹರಿಯನ್ನು ಪೂಜಿಸುವುದರಿಂದ-"ತಂ ಯಥೋಪಾಸತೇ ತಥೈವ ಭವತಿ." ಈ ಶ್ರುತಿಗನುಸಾರವಾಗಿ, ಈ ಅಸುರರಿಗೆ ಶ್ರೀಹರಿಯ ಪ್ರಾಪ್ತಿಯಾಗದೇ, ಸಂಸ್ಕೃತಿಯ ಸುಖಾಭಾಸವಾದ ದುಃಖದಲ್ಲಿಯೇ ಇರುವದುಂಟು. ಇವರೇ ತಮೋಯೋಗ್ಯರಾದ ಅಸುರರೆಂದು ಶ್ರೀಹರಿ ಪ್ರೇರಿತನಾದ ಭಗವದ್ದಾಸನ ಮತಿಯು) ಚಿತ್ರಕರ್ಮ ಆಶ್ಚರ್ಯವಾದ ಕರ್ಮ ಉಳ್ಳವ. ವಿಶೋಕ-ಹೋಗಲ್ಪಟ್ಟ ಶೋಕ ಎಂಬರ್ಥ. ॥೬॥

## ४. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

"ಹತ್ತು" ಇತಿ ॥೬॥

## ಕನ್ನಡಾರ್ಥ

ಜ್ಞಾನ, ಭಕ್ತಿಪೂರ್ವಕ ಮಾಡಿದ ಕರ್ಮಗಳನ್ನು ಶ್ರೀಹರಿಯಲ್ಲಿ ಅರ್ಪಿಸಿದ ತರುವಾಯ, ಹತ್ತು ಜನ್ಮಗಳಲ್ಲಿ ಶ್ರೀಹರಿಯೇ ಸರ್ವೋತ್ತಮ-ಎಂದು ಮುಂತಾಗಿ, ಉಪಾಸನೆಯನ್ನು ಮಾಡಬೇಕು-ಎಂದು ತಾತ್ಪರ್ಯ. ॥೬॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಹತ್ತು ಜನ್ಮಗಳಲ್ಲಿ ವಿಷ್ಣುವೇ ಸರ್ವೋತ್ತಮ, ಸುರರೆಂಬ ದೇವತೆ

ಗಳಿಂದಲೂ, ಅಸುರರೆಂಬ ಪ್ರಹ್ಲಾದಾದ್ಯಸುರರಿಂದಲೂ ಅಥವಾ ಅಸುರರೂಪ ಮುಕ್ತರಿಂದಲೂ ಸಹ ಪೂಜಿತನು. ವಿಚಿತ್ರಚರಿತ್ರನು. ದುಃಖಾದಿ ದೋಷ ದೂರನು. ಅನಂತಾನಂತರೂಪನು. ಸತ್ಯಸಂಕಲ್ಪನು. ಜಗದುತ್ಪತ್ತಿ ಸ್ಥಿತಿ ಲಯಾದಿಗಳಿಗೆ ಮುಖ್ಯಕಾರಣನು. ಜರಾಮೃತ್ಯುರಹಿತನು- ಎಂದು ಉಪಾಸನೆ ಮಾಡಿದನಂತರ. ॥೬॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವಂತೆ. ಸಹಸ್ರಬ್ರಾಹ್ಮಣ ಜನ್ಮಗಳಾದ ನಂತರ, ಮುಂದೆ, ಶ್ರೀಹರಿಯ ಪರಮಾನುಗ್ರಹದಿಂದ ಬರುವ ಹತ್ತು ಬ್ರಾಹ್ಮಣ ಜನ್ಮಗಳು ಅತಿಮುಖ್ಯವೆಂದು ಹೇಳುತ್ತಾರೆ.

೨. ಆ ಹತ್ತು ಜನ್ಮಗಳಲ್ಲಿ ಸರ್ವೇಶನು ಸಜ್ಜನರ ಸಕಲಪಾಪಪರಿಹಾರಕನೂ, ಬಿಂಬರೂಪಿಯೂ ಹರಿಶಬ್ದವಾಚ್ಯನೂ ಆದ ಶ್ರೀ ವಿಷ್ಣುವೇ ಸರ್ವೋತ್ತಮನೆಂಬ ಜ್ಞಾನವು ಪ್ರಾಪ್ತಿಯಾಗುವುದು. ವಿಷ್ಣುಸರ್ವೋತ್ತಮತ್ವ ಜ್ಞಾನ ಉಂಟಾಗುವುದು.

೩. ಆ ಸರ್ವೋತ್ತಮನಾದ ಹರಿಯೇ ಸುರ-ಅಂದರೆ, ದೇವತೆಗಳಿಂದಲೂ ಅಸುರ-ಅಂದರೆ, ದೈತ್ಯರಿಂದಲೂ ಅರ್ಚಿತನು (ಪೂಜ್ಯನು) ಎಂಬ ಜ್ಞಾನಪ್ರಾಪ್ತಿ.

ಸುರರು ಶ್ರೀಹರಿಯ ಭಕ್ತರು. ಅವರು ಸಹಜವಾಗಿ ಶ್ರೀಹರಿಯಲ್ಲಿ ಭಕ್ತಿ ಮಾಡುವರು. ಸ್ವರೂಪತಃ, ತಮೋಯೋಗ್ಯರಾದ ಅಸುರರು ಶ್ರೀಹರಿಯಲ್ಲಿ ದ್ವೇಷಮಾಡುವರು. ಅಂದರೆ, ಅಸುರರಿಂದ ಶ್ರೀಹರಿಯು ಹೇಗೆ ಅರ್ಚಿತನು- ಎಂಬ ಶಂಕಾಮಾಡುವುದು. ಅದಕ್ಕೆ ಮೂರು ಪ್ರಕಾರಗಳಲ್ಲಿ ಸಮಾಧಾನ ಹೇಳಿದ್ದಾರೆ-ವ್ಯಾಖ್ಯಾಕಾರರು.

೧. ಅಸು-ಎಂದರೆ ಪ್ರಾಣ-ಎಂದರ್ಥ. ಸಾಂಕೇತರಾಗಿ ಸ್ವರೂ

ಷೇಂದ್ರಿಯಗಳು ಎಂದು ಅರ್ಥೈಯಿಸಬಹುದು. 'ರ' ಎಂದರೆ, ರಮಣ-(ಕ್ರೀಡೆ) ಮಾಡತಕ್ಕವರು. ತಮ್ಮ ಸ್ವರೂಪೇಂದ್ರಿಯಗಳಲ್ಲಿ ಕ್ರೀಡೆಯಾಡ್ವವರು. ಎಂದರೆ, **'ಮುಕ್ತಜೀವರು'** ಸುರ–ಅಂದರೆ, ಸಾಧನೆಯಲ್ಲಿರುವ ದೇವತಾವರ್ಗ (ಸಾತ್ವಿಕಜೀವರು) ಮತ್ತು ಮುಕ್ತರಾದ ಜೀವರು– ಎಂದು ಸುರ-ಅಸುರ- ಎಂಬ ಶಬ್ದಗಳಿಗೆ ಅರ್ಥಮಾಡಿರುತ್ತಾರೆ. ಅಂದರೆ, ಮುಕ್ತಾಮುಕ್ತಾಗಣಾರ್ಚಿತ ಪಾದನೆಂದು ತಿಳಿಯತಕ್ಕವರು.

೨. ಪ್ರಹ್ಲಾದ ನಿಋುತಿವಿಭೀಷಣ–ಬಲಿ ಮುಂತಾದವರು ದೈತ್ಯಕುಲ ಸಂಜಾತರು. ಸ್ವರೂಪತಃ ಉತ್ತಮಚೇತನರು. ಅಂತಹ ಅಸುರರಿಂದ ಅರ್ಚಿತನು ಎಂದು ಅರ್ಥ ಮಾಡಬಹುದು.

೩. ಪುರಾಣೇತಿಹಾಸಗಳಲ್ಲಿ ಕೆಲವು ವಿಶೇಷಪ್ರಸಂಗಗಳಲ್ಲಿ ವೃಷಭಾಸುರ–ಗಯಾಸುರ-ಮುಂತಾದ ದೈತ್ಯರು ದೇವರನ್ನು ಅರ್ಚಿಸಿದ್ದಾರೆ. ತಮ್ಮ ಮರಣಕಾಲದಲ್ಲಿ, ಅವನ ವರವನ್ನು ಬೇಡಿದ ಪ್ರಸಂಗಗಳಿವೆ. ನರಸಿಂಹ ಸಾಲಿಗ್ರಾಮವನ್ನು ನಿತ್ಯವೂ ಪೂಜೆಮಾಡುತ್ತಿದ್ದ ವೃಷಭಾಸುರ. ಅವನೊಡನೆ ಯುದ್ಧಕ್ಕೆ ನಿಂತು, ಮರಣ ಹೊಂದಿದ ಆ ಸಮಯದಲ್ಲಿ, ಆ ಪರ್ವತಕ್ಕೆ ತನ್ನ ಹೆಸರನ್ನೇ ಇಡಬೇಕೆಂದು ಶ್ರೀಹರಿಯಲ್ಲಿ ಪ್ರಾರ್ಥಿಸಿದ. ಅದರಿಂದ "ವೃಷಭಾಚಲ" ವೆಂದು ಹೆಸರಾಯಿತು. ಗಯಾಸುರನ ಪ್ರಾರ್ಥನೆಯಂತೆ, ಗಯಾಕ್ಷೇತ್ರದಲ್ಲಿ ವಿಷ್ಣುಪಾದವನ್ನು ಸ್ಥಾಪಿಸಿ, ಅವನ ಕೋರಿಕೆಯಂತೆ, ಗಯಾಕ್ಷೇತ್ರದಲ್ಲಿ ವಿಷ್ಣುಪಾದದಮೇಲೆ ಪಿಂಡಪ್ರದಾನಮಾಡಿದರೆ, ಪಿತೃಗಳಿಗೆ ಸದ್ಗತಿ ಕರುಣಿಸಲು ಕೇಳಿಕೊಂಡ. ಆದರೆ, ಇಂತಹ ಪ್ರಸಂಗಗಳು ಕೇವಲ ಕೆಲವು ಮಾತ್ರ.

೪. ಸಕಲಜಗತ್ತಿಗೆ ಆಶ್ಚರ್ಯವಸ್ತುವು ಶ್ರೀಹರಿಯು. ಚಿತ್ರ ವಿಚಿತ್ರ ವ್ಯಾಪಾರಗಳುಳ್ಳ ಅದ್ಭುತ ಚರಿತನು. ಇದರಿಂದ–**ಚಿತ್ರಕರ್ಮ** ಎಂದಿದ್ದಾರೆ. ಚಿತ್ರ-ಎಂದರೆ, ಪರಮಾಶ್ಚರ್ಯಕರವಾದ, ಕರ್ಮ-ಎಂದರೆ, ವ್ಯಾಪಾರವಿಶೇಷ ಉಳ್ಳವನು–ಎಂದರ್ಥ.

೫. ಸ್ವಸ್ವರೂಪಾನಂದಪೂರ್ಣನಾದ್ದರಿಂದ, ನಿತ್ಯಾನಂದಸ್ವರೂಪನು. ಅವನಿಗೆ ಜಗತ್ತಿನಿಂದಾಗುವ ಕ್ಲೇಶ ದುಃಖಾದಿಗಳಿಲ್ಲ. ಇದರಿಂದ **ವಿಶೋಕ** ಶಬ್ದ ವಾಚ್ಯನು.

೬. ತನ್ನ ಪ್ರತಿ ಅವತಾರಗಳಲ್ಲೂ. ಕಾರ್ಯಗಳಲ್ಲಿಯೂ, ಅನಂತಾನಂತ ಅವತಾರ, ರೂಪಾತ್ಮಕನು.

೭. ಶ್ರೀಹರಿಯ ಇಚ್ಛೆಯು ಯಾವಾಗಲೂ ಯಥಾರ್ಥರೂಪ ವಾದದ್ದು. ವಸ್ತುಗಳ ಸಹಜವಾದ ಸ್ವರೂಪಗತಸ್ವಭಾವಗಳನ್ನು ಎಂದೆಂದಿಗೂ ಬದಲಾಯಿಸುವುದಿಲ್ಲ. "ಅನ್ಯಥಾಕರ್ಮಲ"– ಎಂಬ ಶಕ್ತಿ ಇದ್ದರೂ, ಸತ್ಯಸಂಕಲ್ಪನಾದ್ದರಿಂದ, ಚೇತನಾಚೇತನರ ಸ್ವಭಾವಗಳನ್ನು ಯಥಾರ್ಥರೂಪದಲ್ಲಿ ಪ್ರಕಟಿಸುವನು. ಅವನ ಸಂಕಲ್ಪಕ್ಕೆ ಚ್ಯುತಿಯಿಲ್ಲ.

೮. ಚರಾಚರಾತ್ಮಕವಾದ ಈ ಜಗತ್ತಿನ ಸೃಷ್ಟಿ-ಪಾಲನೆ-ಸಂಹಾರ ಇತ್ಯಾದಿ ಜಗದ್ವ್ಯಾಪಾರಗಳಿಗೆ ಮೂಲಕಾರಣನು.

೯. ಜ-ಎಂದರೆ ಜನನ, ಮೃತ್ಯು-ಮರಣ-ಇವುಗಳಿಂದ ವಿದೂರನಾದ ನಿತ್ಯ ಶಾಶ್ವತವಸ್ತುವು. ಚತುರ್ವಿಧನಾಶದಿಂದ ದೂರನಾದ ಅಚ್ಯುತನಾಮಕನು ಶಶ್ವದೇಕ ಪ್ರಕಾರನು.

೧೦. ಈ ರೀತಿ, ೧೦ ಜನ್ಮಗಳಲ್ಲಿ ಧ್ಯಾನೋಪಾಸನೆಯನ್ನು ಮಾಡಿದ ತರುವಾಯ, ಮುಂದಿನ ಪದ್ಯದಲ್ಲಿ ಹೇಳುತ್ತಾರೆ. ॥೬॥

## ಪದ್ಯ-೭

**ಮೂಲ :**

**ಮೂರು ಜನುಮಗಳಲ್ಲಿ ದೇಹಾ ।**
**ಗಾರ ಪಶು ಧನ ಪತ್ನಿ ಮಿತ್ರ ಕು ।**
**ಮಾರ ಮಾತಾಪಿತೃಗಳಲ್ಲಿಹ ಸ್ನೇಹದಿಂದಧಿಕ ॥**
**ಮಾರರಮಣನಲಿ ಬಿಡದೆ ಮಾಡುವ ।**
**ಸೂರಿಗಳು ಈ ಉಕ್ತ ಜನುಮವ ।**
**ಮೀರಿ ಪರಮಾತ್ಮನ ಸ್ವದೇಹದಿ ನೋಡಿ ಸುಖಿಸುವರು ॥೭॥**

**ಅವತರಣಿಕೆ :**

ನಿರಂಶಜೀವರ ಮುಂದಿನ ಮೂರು ಜನ್ಮಗಳ ಸಾಧನವಿಚಾರವನ್ನು ತಿಳಿಸುತ್ತಾರೆ. ॥೭॥

**ಪ್ರತಿಪದಾರ್ಥ :**

**ಮೂರು ಜನುಮಗಳಲ್ಲಿ**—ಪೂರ್ವೋಕ್ತ ಹತ್ತು ಜನ್ಮಗಳು ಕಳೆದ ತರುವಾಯ, ಮುಂದೆ ಬರುವ ಮೂರು ಜನ್ಮಗಳಲ್ಲಿ (ಬ್ರಾಹ್ಮಣಜನ್ಮ) **ದೇಹ**—ಪಾಂಚಭೌತಿಕವಾದ ತನ್ನ ಶರೀರ, **ಆಗಾರ**—ತಾನು ವಾಸಿಸುತ್ತಿರುವ ಸ್ವಗೃಹ, **ಪಶು**—ಸಾಕಿದ ಹಸು, ಚಿಕ್ಕ ಮುಂತಾದ ಸ್ವಕೀಯವಾದ ಪ್ರಾಣಿಗಳು, **ಧನ**—ಸ್ವಯಾರ್ಜಿತವಾದ ದ್ರವ್ಯ. ಆಸ್ತಿ, ಧಾನ್ಯಾದಿಗಳು. **ಪತ್ನಿ**—ತನ್ನ ಹೆಂಡತಿ, **ಮಿತ್ರ**—ಸ್ನೇಹಿತರು. **ಕುಮಾರ**—ಸ್ವಪುತ್ರ ಪುತ್ರಿಯರು **ಮಾತಾಪಿತೃಗಳಲ್ಲಿಹ**—ತಾಯಿ ತಂದೆ ಮತ್ತು ಇತರರಲ್ಲಿ ಇಟ್ಟಿರತಕ್ಕ (ಮಾಡತಕ್ಕ) **ಸ್ನೇಹದಿಂದಧಿಕ**— ಅಧಿಕವಾಗಿ. ಸ್ನೇಹರೂಪವಾದ ಭಕ್ತಿಯನ್ನು, **ಮಾರರಮಣನಲಿ**— ಲಕ್ಷ್ಮೀಪತಿಯಾದ ಶ್ರೀಪರಮಾತ್ಮನಲ್ಲಿ, **ಬಿಡದೆ**—ಕ್ಷಣಕಾಲವಾದರೂ ಬಿಡದೆ, ಅಂದರೆ, ಅನವರತವೂ, **ಮಾಡುವ**-ಭಕ್ತಿಯನ್ನು ಮಾಡುವರು. **ಸೂರಿಗಳು**—ಈ ರೀತಿ ಭಕ್ತ್ಯಾತಿಶಯವುಳ್ಳ ಅಧಿಕಾರಿಗಳಾದ ಜ್ಞಾನಿಗಳು. **ಈ ಉಕ್ತ ಜನುಮವ ಮೀರಿ**—ಪ್ರಸಕ್ತ ಪದ್ಯದಲ್ಲಿ ಹೇಳಿರುವ ಮೂರು ಜನ್ಮಗಳನ್ನು ಕಳೆದು, ಮುಂದಿನ ನಾಲ್ಕನೆಯ ಜನ್ಮದಲ್ಲಿ, **ಪರಮಾತ್ಮನ**—ಬಿಂಬರೂಪಿಯಾದ ಶ್ರೀಮನ್ನಾರಾಯಣನನ್ನು **ಸ್ವದೇಹದಿ**—ತಮ್ಮ ಸ್ಥೂಲದೇಹಗತ ಹೃದ್ಗುಹಾದಲ್ಲಿ, **ನೋಡಿ**—ಪ್ರತ್ಯಕ್ಷವಾಗಿ ನೋಡಿ, (ಬಿಂಬಾಪರೋಕ್ಷವನ್ನು ಪಡೆದವರಾಗಿ) **ಸುಖಿಸುವರು**—ಬಿಂಬ ಕ್ರಿಯಾನುಸಂಧಾನದಿಂದ ಸಕಲವ್ಯಾಪಾರಗಳನ್ನು ತಿಳಿದು ಆನಂದಪಡುವರು. ॥೭॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ, ನಿರಂಶರ ವಿಚಾರವೇ ಹೇಳುತಾರೆ.

ಪೂರ್ವೋಕ್ತ ಹತ್ತು ಜನುಮಗಳು ಕಳೆದು, ಅನಂತರ, ಮೂರುಜನ್ಮ ಬ್ರಾಹ್ಮಣ ಜನ್ಮಧರಿಸಿ, ಈ ಮೂರು ಜನ್ಮಗಳಲ್ಲಿ, ತನ್ನ ದೇಹ, ತನ್ನ ಸ್ವಗೃಹ, ತನ್ನ ಸ್ವಕೀಯವಾದ ಪಶುಗಳು, ಸ್ವಾರ್ಜಿತ ಸ್ವಕೀಯವಾದ ದ್ರವ್ಯ ಧಾನ್ಯಾದಿಗಳು, ಹೆಂಡತಿ, ಆಪತ್ಕಾಲದಲ್ಲಿ ರಕ್ಷಕನಾದ ಸ್ನೇಹಿತ, ಸ್ವಪುತ್ರ–ಪುತ್ರಿಯರು, ತಾಯಿ–ತಂದೆಗಳಲ್ಲಿ–ಈ ಯಾವತ್ತೂ ಮಂದಿಗಳಲ್ಲಿರತಕ್ಕ ವಿಷಯಾಸಕ್ತರಾದವರಿಗೆ ಅಜ್ಞಾನದಶಾವಲ್ಲಿ, ದೇವರಲ್ಲಿ ಸ್ನೇಹವಿಲ್ಲದೆ, ದಾರಾದಿಗಳಿಂದ ಮಹಾಸುಖಲಾಭ ಎಂತಲೂ, ಇವರೇ ತಾರಕರೆಂತಲೂ, ಇತ್ಯಾದಿ ಅನೇಕ ಸುಖಲಾಭ ಎಂತಲೂ, ಇದ್ದವನಾಗಿ, ಅತ್ಯಂತ ಸ್ನೇಹ ದೇವರಲ್ಲಿ ಮರೆತು, ದೇವರಲ್ಲಿ ಮಾಡತಕ್ಕ ಸ್ನೇಹ, ದಾರಾಪುತ್ರಾದಿಗಳಲ್ಲಿ ಲೋಗರು ಮಾಡತಾಇರ್ತಾರೆ--ಈ ಮೂರು ಜನ್ಮಗಳಲ್ಲಿ ಆದರೋ ಅಜ್ಞಾನದಶಾವಲ್ಲಿ, ದೇವರನ್ನ ಹ್ಯಾಂಗೆ ಮರೆತರೋ ತದ್ವತ್, ಜ್ಞಾನದಶಾವಲ್ಲಿ ದಾರಾ ಪುತ್ರಾದಿಗಳನ್ನು ಮರೆತು, ಆ ದಾರಾಪುತ್ರಾದಿಗಳಲ್ಲಿ ಮಾಡತಕ್ಕ ಸ್ನೇಹ ದಾವದದೆ, ಆದ ಅವರಲ್ಲಿ ಮಾಡದೆ, ಈ ಸ್ನೇಹವೇನು, ತತೋಪ್ಯಧಿಕ ಸ್ನೇಹವೇನು, ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನಲ್ಲಿ ಅರಲವಕಾಲವಾದರೂ ಬಿಡದೆ ಮಾಡುವರು. ಈ ಪ್ರಕಾರ ಮಾಡತಕ್ಕ ಅಧಿಕಾರಿಗಳು ಜ್ಞಾನಿಗಳು ಎಂತ ಸಾರ್ಥಕನಾಮದಿಂದ ಕರಸೋವರಾಗತಾರೆ. ಈ ಉಕ್ತ ಸೂರಿಗಳು ಪೂರ್ವೋಕ್ತ ಮೂರು ಜನ್ಮವೂ ಮೀರಿ, ನಾಲ್ಕನೇ ಜನ್ಮ ಪ್ರಾಪ್ತವಾದ ಕಾಲದಲ್ಲಿ ತಮ್ಮ ಸ್ವದೇಹವಾದ ಸ್ಥೂಲ ದೇಹಗತ ಹೃದಯಾಕಾಶದಲ್ಲಿ ಉಪಾಸ್ಯಮೂರ್ತಿಯಾದ ವಾಸನಾರೂಪದ ಪರಮಾತ್ಮನ್ನ ಪ್ರತ್ಯಕ್ಷೀಕರಸಿಕೊಂಡು, ಜ್ಞಾನಾನಂದಾದಿಗಳಿಂದ, ಭಗವದ್ದರ್ಶನದಿಂದ ಸುಖಿಸುವರು. ವಾಸನಾರೂಪ ಪ್ರತ್ಯಕ್ಷವಾಗಿ, ತದ್ಗತ ಪರಮಾತ್ಮ

ಪ್ರತಿಮಾಧಿಷ್ಠಾನದ್ವಾರಾ ಜಲಸಾದಿಗಳು ಮಾಡತಾ ಮಾತುಗಳ ಆಡತಾ ಇರ್ತಾನೆ. ನಂತರ, ಅದೇ ಪ್ರಕಾರ ಉಪಾಸನ ಮಾಡತಾ ಬಂದರೆ, ತದ್ಗತನಾದ ಚಿದಾನಂದರೂಪನು ಆ ಪ್ರತಿಮಾ ಭೇದಿಸಿಕೊಂಡು, ತದಾಕಾರದಂತೆ, ಸಂದರ್ಶನವನ್ನ ಕೊಡತಾನೆ. ಆ ರೂಪವನ್ನ ಉಪಸನಾ ಮಾಡತಾ ಬಂದರೆ, ಆ ರೂಪ ಮರೆಯಾಗಿ, ಸ್ಥೂಲದೇಹಗತ ಜೀವಾಕಾರದಾದ, ಕಮಲಕರ್ಣಿಮಧ್ಯಗತ ಅಗ್ರೇಶನಾಮಕ ಶ್ರೀ ಪರಮಾತ್ಮ ಸಂದರ್ಶನ ಕೊಡತಾನೆ. ಅಗ್ಗೆ ಅಪರೋಕ್ಷಾತ್ ಪೂರ್ವಕಾಲೀನಕರ್ಮ ಯಾವತ್ತೂ ಸಂಚಿತವೆಂದು ಕರಸಿ, ಭಗವದಪರೋಕ್ಷದಿಂದ ನಾಶವಾಗತದೆ. ಅಪರೋಕ್ಷಾನಂತರ, ಭೋಗಿಸತಕ್ಕ ಕರ್ಮ ಪ್ರಾರಬ್ಧಕರ್ಮ ಎಂದೆನಿಸಿತದೆ. ಈ ಪ್ರಾರಬ್ಧಕರ್ಮದಲ್ಲಿ ಅನೇಕ ವೈಚಿತ್ರ್ಯಗಳು ಅವೆ. ನಾನಾ ಯೋನಿಗಳು ಬರತಕ್ಕ ಕರ್ಮಗಳು ಅವೆ. ಇದರಲ್ಲಿ ಪೂರ್ವೋಕ್ತ ಪ್ರಕಾರ ಸಾವಿರದ ಹದಿಮೂರು ಜನ್ಮಕ್ರಮ ತಪ್ಪದೇ ಬಂದೋಪಾದಿಯಲ್ಲಿ ಬರೋದಿಲ್ಲ. ಮಧ್ಯೇ ಮಧ್ಯೇ, ನೀಚಜನ್ಮ ಬಂದ ಕಾಲಕ್ಕೂ ಜ್ಞಾನ ತಿರೋಧಾನವಿಲ್ಲ. ಈ ಪ್ರಾರಬ್ಧಕರ್ಮ ಲಿಂಗಭಂಗವಾಗೋವರಿಗೂ ಇರತದೆ. ಈ ಪ್ರಾರಬ್ಧಕರ್ಮಭೋಗಕಾಲದಲ್ಲೂ ನಾನಾ ವಿಧವಾಗಿ ಕರ್ಮಾಂಕುರವಾಗಿ, ಉತ್ತರೋತ್ತರ ಭೋಗ ಮಾಡತಕ್ಕ ಆಗಾಮಿಕರ್ಮ ಎಂತ ಕರಸತಾರೆ. ಆದರೂ ತಲ್ಲೇಪವಿಲ್ಲ, ನಿರ್ಲೇಪ ಎಂಬುದು ಇಂಥಾದ್ದು. ಆದ್ದರಿಂದ, ಅಪರೋಕ್ಷಾತ್ಪೂರ್ವಕಾಲೀನಕರ್ಮ ಸಂಚಿತ ಎಂತಲೂ, ಅಪರೋಕ್ಷಾನಂತರ ಕಾಲೀನಕರ್ಮ ಆಗಾಮಿ ಎಂತಲೂ, ಒಂದು ನಾಶ ಒಂದು ನಿರ್ಲೇಪ, ಪ್ರಾರಬ್ಧ ಕರ್ಮ ಭೋಗದಿಂದ ಕ್ಷಯ-ಎಂತ ತಿಳಿಯಬೇಕು. ಇಲ್ಲಿಗೆ ನಿರಂಶರಾದ ಮಾನುಷರ ಗಂಧರ್ವರಾರಭ್ಯ ತೃಣಾಂತವರಿಗೂ ಈ ನೇಮ ಸರ್ವರಿಗೂ ಒಂದೇ. ಆದರೂ, ಅಪರೋಕ್ಷಕಾಲದಲ್ಲೂ, ಗುಣೋಪಾಸನದಲ್ಲೂ ನ್ಯೂನಾಧಿಕ್ಯಗಳು ಇರತವೆ. ಅದರ ವಿಸ್ತಾರ ಮುಂದೆ ಹೇಳತಾರೆ. ನಿರಂಶರ ವಿಚಾರ ಮುಗಿಯಿತು. ಸಾಂಶರಾದ ದೇವಗಂಧರ್ವರಾರಭ್ಯ ಬ್ರಹ್ಮಾಂತವರಿಗೂ ವಿಚಾರ ಮುಂದೆ ಹೇಳತಾರೆ. ॥೭॥

## ೨. ಭಾವಪ್ರಕಾಶಿಕೆ

ಹಿಂದಿನ ಪದ್ಯದಲ್ಲಿ ಹೇಳಿದ ೧೦ ಜನ್ಮಗಳು ಕಳೆದ ನಂತರ, ಮೂರು ಜನ್ಮಗಳಲ್ಲಿ ಹೆಂಡಿರು ಮಕ್ಕಳು ಮೊದಲಾದವರಲ್ಲಿ ಮಾಡುವ ಪ್ರೀತಿಗಿಂತಲೂ ಅಧಿಕವಾದ ಪ್ರೀತಿಯನ್ನು ಪರಮಾತ್ಮನಲ್ಲಿ ಮಾಡಿದ ನಂತರ, ಅಪರೋಕ್ಷವಾಗುವುದು. ಅಂದರೆ, ತಮ್ಮ ದೇಹದೊಳಗೆ ಪರಮಾತ್ಮನನ್ನು ಕಾಣುವರು. ಹೀಗೆ, ೩ನೆಯ ಪದ್ಯ ಮೊದಲು ೭ನೆಯ ಪದ್ಯದವರೆಗೂ ತೃಣ ಮೊದಲಾದ ೭ ವಿಧ ಕರ್ಮಯೋಗಿ ಜೀವರ ಸಾಧನವನ್ನು ಹೇಳಿದರು. ಒಟ್ಟು ಈ ಪದ್ಯದ ತಾತ್ಪರ್ಯವೇನೆಂದರೆ :– ನಿರಂಶಾ ಸತ್ಸಾಧನಾಯೋಜಿತ ಜನ್ಮ ಸಹಸ್ರತಃ ॥ ಜ್ಞಾನಂತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯಚ॥ ದೃಷ್ಟ್ವಾ ಹೃದಿಸ್ಥಂ ಮುಚ್ಯಂತೇ ಹ್ಯತಸ್ತೇ ಕರ್ಮಯೋಗಿನಃ"--ನಿರಂಶರಾದ ಜೀವರು ಸಹಸ್ರ ಜನ್ಮಗಳಲ್ಲಿ ಸತ್ಸಾಧನವನ್ನು ಮಾಡಿ, ಆಮೇಲೆ, ಹತ್ತು ಜನ್ಮಗಳಲ್ಲಿ ಜ್ಞಾನವನ್ನು ಸಂಪಾದಿಸಿ,೩ ಜನ್ಮಗಳಲ್ಲಿ ದೃಢಸ್ನೇಹವನ್ನು ಮಾಡಿ, ಅಪರೋಕ್ಷದಲ್ಲಿ ಪರಮಾತ್ಮನನ್ನು ಕಂಡು, ಮುಕ್ತರಾಗುವರೆಂದು ಪ್ರಕಾಶಸಂಹಿತೆಯಲ್ಲಿ ಹೇಳಿದರ್ಥವನ್ನೇ ಇಲ್ಲಿ ಹೇಳಿರುವರು. ॥೭॥

## ೩. ಭಾವದರ್ಪಣ

ಮೂರು ಜನ್ಮ। ನಿರಂಶಾಃ ಸತ್ಸಾಧನಾಯೋಜಿತಜನ್ಮಸಹಸ್ರತಃ। ಜ್ಞಾನಂ ತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯಚ। ದೃಷ್ಟ್ವಾ ಹೃದಿಸ್ಥಂ ಮುಚ್ಯಂತೇ ಹ್ಯತಸ್ತೇ ಕರ್ಮಯೋಗಿನ"--ಇತಿ ಪ್ರಕಾಶಸಂಹಿತೋಕ್ತೇಃ. ॥೭॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಮೂರು' ಇತಿ॥ 'ಆಗಾರ'--ಮನೆ. 'ಮಾ--ರಮಾ॥ ಉಕ್ತಜನ್ಮ ಇತಿ ಮಂಜರೀ ಪದಾನುವಾದಃ॥ 'ನಿರಂಶಾಃ ಸತ್ಸಾಧನಾ ಯೋ ಜಿತಜನ್ಮ ಸಹಸ್ರತಃ ॥ ಜ್ಞಾನಂ ತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯ ಚ॥ ದೃಷ್ಟ್ವಾ

ಹೃದಿಸ್ಥಂ ಮುಚ್ಯಂತೇ ಹ್ಯತಸ್ತೇ ಕರ್ಮಯೋಗಿನಃ ತೃಣಾದಿಸಾಧನವಿಚಾರಸ್ತು ಮಂಜರ್ಯಾಂ ಸ್ಫುಟಃ ನೇಹ ಪ್ರದರ್ಶ್ಯತೇ ॥ ಶ್ರೀ ಹರ್ಯಾಜ್ಞಯಾ ಈರ ಆಜಃ ಋಜ್ವಾದಿ ತಾತ್ವಿಕಾತಿರಿಕ್ತಾನ್ ಕೃಪಯಾ ಇತರತ್ರಜಾನ್ ಕರ್ಮಭಿಃ ಭಾರತೇ ಜನಯತಃ ॥ ಉಕ್ತಂಚ॥ ತೃಣಾದಿಸರ್ವಜೀವಾನಾಂ ಸ್ವರೂಪೋದ್ಧಾರ ಆಗತೇ॥ ಕಾಲೇ ತತ್ತದ್ಯೋಗ್ಯಜೀವಸಾಧಸ್ಯೋಚಿತಕಾಲಕೇ ॥ ಶ್ರೀಹರಿರ್ಬ್ರಹ್ಮ ವಾಯೂಚ ಸಭಾವರ್ತಿ ಚ ತದಾಜ್ಞಯಾ ॥ ಏತದದ್ವೀಪವರ್ಷ ಜಾಯ ಮಾನಾನ್ ಓ ಸರ್ವಶಃ। ಸ್ವಕರ್ಮವಶಗಾನ್ ಸ್ವರ್ಗಾಂತರಿಕ್ಷ ಧರಣೀಚರಾನ್॥ ನಾನಾಯೋನಿಗತಾನ್ ಜೀವಾನ್ ಆತಲಾದ್ಯಧರಸ್ಥಿತಾನ್।। ಉದ್ಧರ್ತುಕಾಮಃ ಭಗವಾನ್ ಭಾರತೇ ಜನಯಿಷ್ಯತಿ।। ತತ್ರ ಮಾನುಷಯೋಸ್ತುತ್ಥಾನ್ ತತ್ರಾಪಿ ಬ್ರಾಹ್ಮಣೋತ್ತಮಾನ್ ।। ತತ್ರ ಸ್ವರೂಪೋರುವ್ಯಕ್ತಿಕಾರಕ ಕರ್ಮಣಾ ಸಂಯೋಜ್ಯ ಸರ್ವಂ ತದ್ಯೋಗ್ಯ ಜ್ಞಾನದೇಷ್ಟ್ಯ ಗುರೂತ್ತಮಾನ್ಃ । ಭಿನ್ನದೇಶೇ ಭಿನ್ನಕಾಲೇ ಯೋಜಯತ್ಯಖಿಲಾನ್ ಹರಿಃ।। ಇತಿ ಪ್ರಕಾಶ ಸಂಹಿತಾಯಾಂ।। ।।೭।।

## ಕನ್ನಡಾರ್ಥ

'ಆಗಾರಸ'–ಮನೆ, 'ಮಾ-ರಮಾ. (ಲಕ್ಷ್ಮೀ) 'ಉಕ್ತಜನ್ಮ'-ಎಂಬುದು 'ತತ್ವಮಂಜರೀ ಗ್ರಂಥಾನುಸಾರವು. ನಿರಂಶಜೀವರು, ಹರಿಸರ್ವೋತ್ತಮ ಜ್ಞಾನಭಕ್ತಿಪುರಸ್ಸರವಾಗಿ,ಸಾವಿರ ಜನ್ಮಗಳಲ್ಲಿ ಸಾಧನ ಮಾಡಬೇಕು. ಅನಂತರ, ಹತ್ತು ಜನ್ಮಗಳಿಂದ ಜ್ಞಾನವನ್ನೂ, ಅನಂತರ, ಮೂರು ಜನ್ಮಗಳಿಂದ ಭಕ್ತಿ ಯನ್ನೂ ಹೊಂದುತ್ತಾರೆ. ಅನಂತರ, ಹೃದಯಸ್ಥಿತ ಹರಿಯನ್ನು ಸಾಕ್ಷಾತ್ಕರಿಸಿ ಮುಕ್ತರಾಗುತ್ತಾರೆ. ಆದುದರಿಂದ, ಅವರು ಕರ್ಮಯೋಗಿಗಳು. ತೃಣ ಮುಂತಾದ ಜೀವರ ಸಾಧನವಿಚಾರವನ್ನು 'ಮಂಜರಿ' ಯಲ್ಲಿ ಸ್ಪಷ್ಟವಿದ್ದುದ ರಿಂದ, ಇಲ್ಲಿ ಮತ್ತೆ ತೋರಿಸುವುದಿಲ್ಲ. ಶ್ರೀಹರಿಯ ಆಜ್ಞೆಯಿಂದ ಬ್ರಹ್ಮ, ವಾಯುಗಳು,ಋಜು–ಮುಂತಾದ ತಾತ್ವಿಕರನ್ನುಳಿದು, ಬೇರೆಯವರಾದ ಕರ್ಮ

ಗಳಿಂದ ಬೇರೆ ದೇಶದಲ್ಲಿ ಹುಟ್ಟಿರುವವರನ್ನು ಕೃಪೆಯಿಂದ ಭಾರತದಲ್ಲಿ ಹುಟ್ಟಿಸುತ್ತಾರೆ. - ತೃಣಜೀವಾದಿಗಳ ಸ್ವರೂಪೋದ್ಧಾರಕಾಲವು ಪ್ರಾಪ್ತವಾದಾಗ, ಅವರವರ ಯೋಗ್ಯವಾದ ಸಾಧನೋಚಿತಕಾಲದಲ್ಲಿ, ಸ್ವಕರ್ಮವಶದಲ್ಲಿದ್ದು, ಸ್ವರ್ಗ, ಅಂತರಿಕ್ಷಗಳಲ್ಲಿಯೂ, ಅತಲ ಮುಂತಾದ ಕೆಳಗಿನ ಲೋಕಗಳಲ್ಲಿಯು ಇದ್ದು, ನಾನಾಯೋನಿಸಗಳಲ್ಲಿರುವ ಜೀವರಾಶಿಗಳನ್ನು ಉದ್ಧರಿಸುವ ಇಚ್ಛೆಯಿಂದ, ಬ್ರಹ್ಮವಾಯು-ಅವರ ಪತ್ನಿಯರನ್ನು ಭಾರತಕ್ಕೆ ಕಳಿಸುವನು ಮತ್ತು ಅವರನ್ನು ಭಾರತದಲ್ಲಿ ಹುಟ್ಟಿಸುತ್ತಾನೆ. ಮಾನುಷಯೋನಿಯಲ್ಲಿ ಹುಟ್ಟಿದ, ಅದರಲ್ಲೂ, ಬ್ರಾಹ್ಮಣೋತ್ತಮರಿಗೆ ಅವರ ಸ್ವರೂಪಾಭಿವ್ಯಕ್ತಿ ಕಾರಕ ಕರ್ಮಗಳಿಂದ ಸಂಯೋಜನ ಮಾಡಿಸಿ, ಅವರವರಿಗೆ ಯೋಗ್ಯವಾದ ಜ್ಞಾನಾದಿಗಳನ್ನು ಕೊಡುವ ಗುರುಗಳನ್ನು ಕೂಡಿಸುತ್ತಾನೆ. ಮತ್ತು ಭಿನ್ನದೇಶ, ಭಿನ್ನ ಕಾಲಗಳಲ್ಲಿ, ಅವರ ಸಮ್ಮೇಳನವನ್ನು ಪರಿಯು ಒದಗಿಸಿ ಕೊಡುತ್ತಾನೆ- ಎಂದು ಪ್ರಕಾಶಸಂಹಿತೆಯಲ್ಲಿ ಹೇಳಲಾಗಿದೆ. ॥೭॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಮೂರು ಜನ್ಮಗಳಲ್ಲಿ ದೇಹ, ಆಗಾರನೆಂಬ ಮನೆ, ಪಶು ಧನ, ಪತ್ನಿ ಮಿತ್ರ, ಕುಮಾರ, ಮಾತಾಪಿತೃಗಳಲ್ಲಿರುವ ಸ್ನೇಹಕ್ಕಿಂತ ಅಧಿಕವಾಗಿ ರಮಾರಮಣ ಶ್ರೀಹರಿಯಲ್ಲಿ ಸ್ನೇಹರೂಪ ಭಕ್ತಿಪಡೆದವ ಜ್ಞಾನಿಗಳು, ಮೇಲೆ ಹೇಳಿದ ಜನ್ಮಗಳು ಕಳೆದನಂತರ, ಪರಮಾತ್ಮನನ್ನು ಸ್ವದೇಹದಲ್ಲಿ ನೋಡಿ ಸಂತೋಷಿಸುವರು.

> ನಿರಂಶಾಃ ಸತ್ಸಾಧನಯೋಚಿತಜನ್ಮ ಸಹಸ್ರತಃ ।
> ಜ್ಞಾನಂತು ದಶಭಿಃ ಪ್ರಾಪ್ಯಸದ್ಭಕ್ತಿಂ ತ್ರಿಭಿರಾಪ್ಯ ಚ॥
> ದೃಷ್ಟ್ವಾ ಹೃದಿಸ್ಥಂ ಮುಚ್ಯಂತೇಹ್ಯತಸ್ತೇ ಕರ್ಮಯೋಗಿನಃ ॥

ಎಂಬ ಪ್ರಕಾಶಸಂಹಿತಾರ್ಥ ವಿವರಿಸಿತು. ॥೭॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಹಿಂದಿನ ಪದ್ಯಗಳಲ್ಲಿ ವಿವರಿಸಿದಂತೆ, ಸಹಸ್ರಜನ್ಮಗಳಲ್ಲಿ ವಿಪ್ರಕುಲದಲ್ಲಿ ಜನಿಸಿದ ತರುವಾಯ ಸಾಧನಮಾಡಿ, ಮುಂದಿನ ಹತ್ತು ಬ್ರಾಹ್ಮಣಜನ್ಮಗಳಲ್ಲಿ ಉತ್ತಮ ಜ್ಞಾನಭಾಗ್ಯವನ್ನು ಪಡೆಯುವರು. ಅನಂತರ, ಮೂರು ಜನ್ಮಗಳಲ್ಲಿ ಶ್ರೀಹರಿಯಲ್ಲಿ ಅತಿಶಯವಾದ ಭಕ್ತಿಯನ್ನು ಮಾಡುವರು.

2. ಈ ಮೂರು ಜನ್ಮಗಳಲ್ಲಿ. ಸಾಧನಶರೀರವಾದ ತಮ್ಮ ಸ್ಥೂಲ ದೇಹ, ಸ್ವಯಾರ್ಜಿತವಾದ ಸ್ವಗೃಹ, ಸ್ವಕೀಯವಾದ ಹಸು, ಬೆಕ್ಕು-ಮುಂತಾದ ಸಾಕಿದ ಪ್ರಾಣಿಗಳು, ಸ್ವಯಾರ್ಜಿತವಾದ ದ್ರವ್ಯ ಆಸ್ತಿ, ಧಾನ್ಯಾದಿಗಳು, ಅಗ್ನಿಸಾಕ್ಷಿಯಾಗಿ ಪ್ರಾಣಿಗ್ರಹಣಮಾಡಿಕೊಂಡ ಪತ್ನೀ, ಸ್ವಬಂಧು-ಬಾಂಧವರು, ಮಿತ್ರವರ್ಗ, ಸ್ವಪುತ್ರ ಪುತ್ರಿಯರು. ಮಾತಾಪಿತೃಗಳು- ಇತ್ಯಾದಿ ಅನು ಬಂಧಿಗಳಲ್ಲಿ ಇಟ್ಟಿರುವ ಪ್ರೇಮಕ್ಕಿಂತ ಅತ್ಯಧಿಕವಾಗಿ, ಅವಿಚ್ಛಿನ್ನವಾದ ಪ್ರೇಮ ಪ್ರವಾಹರೂಪವೆಂಬ ಸ್ನೇಹವೆಂಬ ಭಕ್ತಿಭಾವವನ್ನು ಲಕ್ಷ್ಮೀಪತಿಯಾದ ಶ್ರೀ ಹರಿಯಲ್ಲಿ (ಮಾರಮಣನಲ್ಲಿ) ನಿರಂತರವೂ ಮಾಡುತ್ತಾ, ಭಕ್ತಯೋಗಿಗಳೆಂದು ಕರೆಯಿಸುವರು. ಇಂತಹ ಭಾಗವತೋತ್ತಮರಾದ ಭಗವದ್ಭಕ್ತರು **ಸೂರಿಗಳೆನಿಸುವರು** (ಜ್ಞಾನಿಗಳು).

3. ಅಂತಹ ಭಗವದ್ಭಕ್ತರಾದ ಸೂರಿಗಳು ಪ್ರಸಕ್ತಪದ್ಯದಲ್ಲಿ ಹೇಳಿರುವ ಮೂರು ಜನ್ಮಗಳನ್ನು ತಾಳಿ, ತರುವಾಯ, ಮುಂದಿನ ಜನ್ಮದಲ್ಲಿ (ಉಕ್ತಜನು ಮನ ಮೀರಿ) ಜ್ಞಾನಭಕ್ತಿಪೂರ್ವಕವಾಗಿ ಸ್ವದೇಹಸ್ಥಬಿಂಬಮೂರ್ತಿಯನ್ನು ಉಪಾಸಿಸುವರು. ಎಂತಹ ಬಿಂಬೋಪಾಸನೆಯಿಂದ ಪಕ್ವದಶಯನ್ನು ಹೊಂದಿ, ತಮ್ಮ ಸ್ಥೂಲದೇಹಗತ ದಹರಾಕಾಶದಲ್ಲಿರುವ ಹೃತ್ಪದ್ಮಸ್ಥಿತ ಶ್ರೀಪರಮಾತ್ಮ ನನ್ನು ಪ್ರತ್ಯಕ್ಷೀಕರಿಸಿಕೊಳ್ಳುವರು. ಆ ಬಿಂಬಾಪರೋಕ್ಷದ್ವಾರಾ, ಶ್ರೀಹರಿ ಯನ್ನು ನೋಡಿ, ಅವನ ಸಂದರ್ಶನಭಾಗ್ಯವನ್ನು ಪಡೆದು ಆನಂದಿಸುರು.

**ಪ್ರಮಾಣ :-**

"ನಿರಂಶಾ ಸತ್ಸಾಧನಾಯೋಚಿತ ಜನ್ಮ ಸಹಸ್ರತಃ ।
ಜ್ಞಾನಂತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯ ಚ ॥
ದೃಷ್ಟ್ವಾತ್ವ ಹೃದಿಸ್ಥಂ ಮುಚ್ಯಂತೇಽಪ್ಯತಸ್ತೇ ಕರ್ಮಯೋಗಿನಃ ॥

**—ಇತಿ ಪ್ರಕಾಶಸಂಹಿತೋಕ್ತೇಃ :-**

**ತಾತ್ಪರ್ಯ :-**

1. ನಿರಂಶಜೀವರಾದ ಈ ವಿವಿಧ ಚೇತನರು ಸಹಸ್ರಜನ್ಮಗಳಲ್ಲಿ ಸತ್ಕಾರ್ಮಾಚರಣಾಸಕ್ತರಾಗಿ, ಕರ್ಮಯೋಗಿಗಳೆನಿಸುವರು.

2. ಮುಂದಿನ ಹತ್ತು ಜನ್ಮಗಳಲ್ಲಿ ಹರಿಸರ್ವೋತ್ತಮತ್ವ, ಪಂಚಭೇಧ, ತಾರತಮ್ಯಜ್ಞಾನವನ್ನು ಹೊಂದುವರು.

3. ಮುಂದಿನ ಜನ್ಮಗಳಲ್ಲಿ ಭಕ್ತಿಯೋಗಿಗಳಾಗಿ ಸಾಧನಮಾಡುವರು.

4. ಮುಂದಿನ ನಾಲ್ಕನೆಯ ಪಕ್ವಜನ್ಮದಲ್ಲಿ ಬಿಂಬಾಪರೋಕ್ಷವನ್ನು ಹೊಂದುವರು. ॥೭॥

## ಪದ್ಯ-೮

**ಮೂಲ :-**

**ದೇವಗಾಯಕಜಾನ ಚಿರಪಿತೃ ।**
**ದೇವರೆಲ್ಲರು ಜ್ಞಾನಯೋಗಿಗ ।**
**ಳಾವಕಾಲಕು ಪುಷ್ಕರ ಶನೈಶ್ಚರ ಉಷಾ ಸ್ವಾಹಾ ॥**
**ದೇವಿ ಬುಧ ಸನಕಾದಿಗಳು ಮೋ ।**
**ಘಾವಳಿಪ ಪರ್ಜನ್ಯ ಸಾಂಶರು ।**
**ಈ ಉಭಯಗಣದೊಳಗಿವರು ವಿಜ್ಞಾನಯೋಗಿಗಗಳು ॥೮॥**

**ಅವತರಣಿಕೆ :**

ಸಾಂಶರಾದ ಅಜಾನಜರು ಮತ್ತು ಕರ್ಮಜರ ವಿಚಾರ ಹೇಳುತ್ತಾರೆ. ॥೮॥

**ಪ್ರತಿಪದಾರ್ಥ :**

**ಅಜಾನ**— ಅಜಾನಜದೇವತೆಗಳಾದ, **ದೇವಗಾಯಕ**— ದೇವ ಗಂಧರ್ವರು (ಸಾಂಶರಾದ ದೇವತಾಗಣದಲ್ಲಿ ಅತ್ಯಂತ ಅಧಮರು). **ಚಿರ ಪಿತೃ**— ದೇವಗಂಧರ್ವರಿಗಿಂತಲೂ ಉತ್ತಮರಾದ ಚಿರಪಿತೃಗಳು, **ದೇವರೆಲ್ಲ**— ದೇವತೆಗಳೆಲ್ಲ. **ಜ್ಞಾನಯೋಗಿಗಳು**— ಜ್ಞಾನಯೋಗಿಗಳೆಂದು ಕರೆಯಿಸು ವರು. **ಆವಕಾಲಕು** — ಯಾವ ಕಾಲಕ್ಕೂ, **ಪುಷ್ಕರ**— ಕರ್ಮಾಭಿಮಾನಿ ಯಾದ ಪುಷ್ಕರನು ಉತ್ತಮನು. **ಶನೈಶ್ಚರ**— ಶನಿಯು (ಧೂಮ್ರಾಭಿಮಾನಿ) ಪುಷ್ಕರನಿಗಿಂತ ಉತ್ತಮನು. **ಉಷಾ**— ಅಶ್ವಿನಿದೇವತೆಗಳ ಪತ್ನಿ ಉಷಾದೇವಿ ಶನಿಗಿಂತ ಉತ್ತಮಳು. **ಬುಧ**— ಉಷಾಗಿಂತ ಬುಧನು ಉತ್ತಮನು. **ಸ್ವಾಹಾದೇವಿ**— ಅಗ್ನಿಪತ್ನಿ ಸ್ವಾಹಾದೇವಿಯು ಬುಧನಿಗಿಂತಲೂ ಉತ್ತಮಳು. **ಮೇಘಾವಳಿಪ ಪರ್ಜನ್ಯ**— ಮೇಘಾಭಿಮಾನಿಯಾದ ಪರ್ಜ ನ್ಯನು ಸ್ವಾಹಾದೇವಿಗಿಂತಲೂ ಉತ್ತಮನು. **ಸನಕಾದಿಗಳು**— ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರ-ಇವರು ಪರ್ಜನ್ಯನಿಗಿಂತಲೂ ಉತ್ತ ಮರು. **ಈ ಉಭಯಗಣದೊಳಗೆ**— ಅಜಾನಜರು ಮತ್ತು ಕರ್ಮಜರು- ಈ ಎರಡು ಗಣದೊಳಗೆ, **ಇವರು**— ಈ ಕರ್ಮಜರು ಅಜಾನಜರ ದೃಷ್ಟಿ ಯಿಂದ ವಿಜ್ಞಾನಯೋಗಿಗಳೆಂದು ಕರೆಯಿಸುತ್ತಾರೆ. **ಸಾಂಶರು**— ಈ ಉಭ ಯರೂ ಸಾಂಶರಾದ ದೇವತೆಗಳು. ॥೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸಾಂಶರೊಳಗೆ ಆಜಾನಜರು, ಕರ್ಮಜರು-ಇವರ ವಿಚಾರ ಹೇಳತಾರೆ.

ಆಜಾನಜದೇವತೆಗಳು ಯಾರೆಂದರೆ, ಸಾಂಶರಾದ ದೇವತೆಗಳೊಳಗೆ ಅಧಮರಾದವರು ದೇವಗಂಧರ್ವರು. ಇವರಿಗಿಂತಲೂ ಅಧಮರು ಸಾಂಶರಾದ ದೇವತೆಗಳೊಳಗೆ ಇಲ್ಲ. ಬ್ರಹ್ಮದೇವರಿಗಿಂತಲೂ ಉತ್ತಮರು ದೇವತೆಗಳೊಳಗೆ ದಾರೂ ಇಲ್ಲ. ಅಧಮತಾರತಮ್ಯರಾದ ದೇವಗಂಧರ್ವರಾರಭ್ಯ ದೇವತಾ ವಿಚಾರ ಹೇಳತಾರೆ. ದೇವಗಾಯಕರೆಂದರೆ- ಸ್ವರ್ಗಲೋಕದಲ್ಲಿ ಗಾನಮಾಡ ತಕ್ಕ ದೇವಗಂಧರ್ವರು. ದೇವಗಂಧರ್ವರಗಿಂತಲೂ ಚಿರಪಿತೃಗಳು ಉತ್ತಮರು. ಪುಷ್ಕರನ ವ್ಯತಿರಿಕ್ತ ಪುಷ್ಕರಗೆ ಅವರರಾದ ದೇವಗಂಧರ್ವಾಂತರರಿಗೂ ಮಧ್ಯಗತರಾದ ದೇವತೆಗಳೆಲ್ಲರೂ ಆಜಾನಜರು ಎಂದು. ಇವರಿಂದ ಉತ್ಪನ್ನರಾದವರು ಅನಾಖ್ಯಾತ ಆಜಾನಜರು. ಅಂತೂ ಎರಡು ವಿಧ. (ಅಂಶಾವತರಣ ಸಂಧಿಯಲ್ಲಿ ವಿದಿತವಾಗಿ ಅದೆ). ಆಜಾನಜರು ಉತ್ತಮರು. ಇವರಿಂದ ಜನಿತರಾದ ಆಜಾನಜರು ಅವರರು, ಅನಾಖ್ಯಾತರು. ಈ ಉಭಯರಾದ ಆಜಾನಜದೇವತೆಗಳೆಲ್ಲರು, ಎಂದರೆ, ವಿವರ— ಆಜಾನಜರು ೯೨ ಮಂದಿ, ಗಂಧರ್ವರು. ೩,೯೯,೯೯,೯೦೦ ಋಷಿಗಳು, ೯೦೮ ಮಂದಿ ಅಪ್ಸರಸ್ತ್ರೀಯರು—

**ಘೃತಾಚೀ ಮೇನಕಾ ರಂಭಾ ಊರ್ವಶೀಚ ತಿಲೋತ್ತಮಾ ।**
**ಸುಕೇಶಾ ಶಬರಿ ಚೈವ ಮಂಜುಘೋಷಾ ಚ ಪಿಂಗಳಾ ॥**
**ಇತ್ಯಾದಿಕಂ ಹ್ಯಪ್ಸರಸಾಂ ಸಹಸ್ರಂ ಪರಿಕೀರ್ತಿತಂ ।**
**ಅಜಾನಜಸಮಾಖ್ಯಾತಾಃ ॥**

ಸಾವಿರದೊಳಗೆ ಕರ್ಮಜರಲ್ಲಿ ಸೇರಿದವರು ೯೨ ಮಂದಿ ಹೊಗತಾ,

ಉಳಿದವರು ೯೦೮ ಮಂದಿ, ೧೬-೧೦೦ ಮಂದಿ ಅಗ್ನಿಪುತ್ರರಾದ ಗೋಪ ಸ್ತ್ರೀಯರು, ಅಗ್ನಿಪುತ್ರರು ಪವಮಾನ, ಸಿಂಧು, ಆಜಾನಜಯೋನಿಜರಾದ-ಅನಾಖ್ಯಾತ ಆಜಾನಜರು, ಆಜಾನಜರಿಗಿಂತಲೂ ಅವರರು. ವಿಬುಧರು ೧೦೦. ದೇವಭೃತ್ಯರಾದ ಪಿತೃಗಳು ೧೦೦. ದೇವಭೃತ್ಯರಾದ ಅಸುರರು ೧೦೦. ದೇವ ಗಾಯನ ಮಾಡುವ ಗಂಧರ್ವರು ೧೦೦. ನೃತ್ಯಮಾಡುವ ಅಪ್ಸರರು ೧೦೦. ದೇವಕಾರ್ಯದಲ್ಲಿ ಸಿದ್ಧರಾದ ಸಿದ್ಧಸಾಂಕೇತರು ೨೦. ವಾಹನ ಹೊರುವ ಯಕ್ಷರು ೨೦. ಶಿಬಿಕಾ ಹೊರುವ ರಾಕ್ಷಸರು ೩೦. ಪರಿಚಾರಕ ಚಾರಣರು ೩೦. ಸೇವಾ ಮಾಡುವ ಭೂತರು ೨೦. ಕಿನ್ನರರು ೨೦, ಪಿಶಾಚರು ೨೦. ಕುಬೇರಭೃತ್ಯರಾದ ಗುಹ್ಯಕರು ೭. ಪ್ರೇತರು ೨೦. ವಿಧ್ಯಾಧರರು ೨೦. ವರುಣಭೃತ್ಯರಾದ ನಾಗರು ೫. ಈ ಸರ್ವರೂ ಯಜ್ಞದಲ್ಲಿ ಸ್ವಲ್ಪ ಹವಿರ್ಭಾಗಕ್ಕೆ ಪಾತ್ರರಾದ ಪ್ರಯುಕ್ತ, ಮುಗ್ಗಭೋಗಿಗಳೆಂದು ಎನಿಸಿಕೊಂಬೋರು. ಆಜಾನಜದೇವಯೋನಿಜರಾದ ಅನಾಖ್ಯಾತಆಜಾನಜರೆಂದು ಕರಸುವ, ಈ ಕೆಳಗೆ ಹೇಳತಕ್ಕವರು, ಮೇಲೆ ಹೇಳಿದ ವಿಬುಧಾದಿಗಳಿಗಿಂತ ನೀಚರು.

ನೂರು ಕಡಿಮೆ ನೂರುಕೋಟಿ ಋಷಿಗಳು. ಅನಾಖ್ಯಾತ ಆಜಾನಜರಾದ ನೂರು ಕಡಿಮೆ ನೂರುಕೋಟ ಋಷಿಗಳಿಗಿಂತಲೂ ಅವರರಾದವರು– ಚಿರಪಿತೃಗಳು. ಇವರಿಗಿಂತಲೂ ದೇವಗಂಧರ್ವರು ಕಡಿಮೆ. ಎರಡನೇ ಸಂಖ್ಯಾ ಆರಂಭಮಾಡಿ, ಐದನೇ ಸಂಖ್ಯಾದವರಿಗೂ ಆಜಾನಜದೇವಯೋನಿಜರು ಅನಾಖ್ಯಾತರು. ಈ ಅನಾಖ್ಯಾತರು ನಾಲ್ಕು ವಿಧ ತಾರತಮ್ಯದಿಂದ ಸಹಿತರಾದವರು. ಮೊದಲ ಸಂಖ್ಯಾದವರು ಆಜಾನಜರು. ಅಂತೂ, ಆಜಾನಜರ ಸಮೂಹ ೯,೨೩,೯೯,೯೯,೯೦೦. ಇವರಲ್ಲಿ ೯೯,೯೯,೯೯,೯೯೦೦ ಋಷಿಗಳು ಹೋಗತಾ ಬಾಕಿ, ೮,೨೪,೦೦,೦೦,೦೦೦-ಇವರು ಮೂವತ್ಮೂರುಕೋಟಿ ದೇವತೆಗಳಲ್ಲಿ ಸೇರಿದವರು. ತದನ್ಯರು ಸೇರಲಿಲ್ಲ. ಆದರೂ, ಆಜಾನಜರಲ್ಲಿ ಪಠಿತರು ಮಾತ್ರವೇ. ಈ ದೇವತೆಗಳು ಯಾವತ್ತೂ ಮಂದಿ ಜ್ಞಾನಯೋಗಿಗಳೆಂದೂ, ನಿರಂಶರಾದ ಕರ್ಮಯೋಗಿಗಳಾದ ಜ್ಞಾನಯೋಗಿಗಳೆಂದು ಕರಸುವರು. ಈ

ಆಜಾನಜರು **ಕಾರ್ತವೀರ್ಯಾದಿರಾಜೇಭ್ಯಃ ಅಜಾನೇಯಾಶ್ಚನೌವರಾಃ ॥ ವಿಷ್ವಕ್ಸೇನಶಯುಕಾಸ್ಸದಾ ॥** ಈ ಉಭಯವಿಧರಾದ ಆಜಾನಜರಿಗಿಂತಲೂ ಉತ್ತಮರು ದಾರೆಂದರೆ, ಪುಷ್ಕರ ಉತ್ತಮನು. ಶನಿ, ಪುಷ್ಕರನಿಗಿಂತಲೂ ಉತ್ತಮನು. ಶನಿಗಿಂತ ಅಶ್ವಿನಿಗಳ ಭಾರ್ಯಾ ಉಷಾ ಉತ್ತಮಳು. ಉಷಾಗಿಂತ ಬುಧನಿಗಿಂತಲೂ ಸ್ವಾಹಾದೇವಿ ಉತ್ತಮಳು. ಸ್ವಾಹಾದೇವಿಗಿಂತಲೂ ಮೇಘಪಜ್ತಿಗಳಿಗೆ ಅಭಿಮಾನಿಯಾದ ಪರ್ಜನ್ಯ ಉತ್ತಮನು. ಪರ್ಜನ್ಯಾದಿಗಳಿಗಿಂತಲೂ ಸನಕಾದಿಗಳು, ಬಲ್ಯಾದಿಗಳು-ಇವರೇ ಮೊದಲಾದವರು ಉತ್ತಮರು. ಪುಷ್ಕರ ಆರಂಭಮಾಡಿ, ಸನಕಾದಿ ಪರ್ಯಂತ ಕರ್ಮಜರು- ಇವರೊಳಗೆ ಪೂರ್ವೋಕ್ತ ಆಜಾನಜಗಣ ಒಂದು, ಕರ್ಮಜಗಣ ಒಂದು,– ಈ ಎರಡು ಗಣದೊಳಗೆ ಆಜಾನಜರು ಜ್ಞಾನಯೋಗಿಗಳು. ಎರಡನೇಯವರಾದ ಕರ್ಮಜರ ಆಜಾನಜರ ವಿವಕ್ಷಾ ವಿಜ್ಞಾನಯೋಗಿಗಳಂತ ಕರಸತಾರೆ. ಈ ಉಭಯಗಣದವರು ಸಾಂಶರು. ಅನಾದ್ಯನಂತಕಾಲಕ್ಕೂ ಆಜಾನಜರು ಜ್ಞಾನಯೋಗಿಗಳಂತಲೂ ಕರಸತಾರೆ. ಈ ಉಭಯರೂ ಸಾಂಶರು. ॥೮॥

## ೨. ಭಾವಪ್ರಕಾಶಿಕೆ

ದೇವಗಂಧರ್ವರು, ಆಜಾನಜರು, ಚಿರಪಿತೃಗಳು- ಇವರು ಸಾಂಶರಲ್ಲಿ ಪ್ರತೀಕಾಲಂಬನರೆನಿಸುವರು. ಇವರು ಜ್ಞಾನಯೋಗಿಗಳು "ದೇವಗಂಧರ್ವ ಪೂರ್ವಾಶ್ಚಾಜಾನಜಾಂತಾಃ ಸಪುಸ್ತರಃ" ॥ ಪ್ರತೀಕಾಲಂಬನಾಃ ಸಾಂಶಾಃ ಕ್ರಮಾಚ್ಚ ಜ್ಞಾನಯೋಗಿನಃ ॥– ಎಂಬ ಪ್ರಕಾಶಸಂಹಿತೆಯ ವಾಕ್ಯದಿಂದ, ಈ ಅರ್ಥವು ಸಿದ್ಧವಾಗುವುದು. ಪುಷ್ಕರ, ಶನೈಶ್ಚರ, ಉಷಾ, ಸ್ವಾಹಾ, ಬುಧ, ಸನಕಾದಿಗಳು, ಪರ್ಜನ್ಯ-ಇವರು ಸಾಂಶರಲ್ಲಿ ಅಪ್ರತೀಕಾಲಂಬನರು ಮತ್ತು ವಿಜ್ಞಾನಯೋಗಿಗಳೆನಿಸುವರು. "ಅಪ್ರತೀಕಾಲಂಬನಾಶ್ಚ ಪ್ರಾಯೋ ವಿಜ್ಞಾನಯೋಗಿನಃ ॥"–ಪ್ರಾಯಃ ಅಪ್ರತೀಕಾಲಂಬನರೆಲ್ಲರೂ ವಿಜ್ಞಾನಯೋಗಿಗಳೆನಿಸುವರೆಂಬ ಪ್ರಕಾಶಸಂಹಿತೆಯ ವಾಕ್ಯವು ಇದಕ್ಕೆ ಆಧಾರವಾಗಿರುವುದು. ॥೮॥

## ೩. ಭಾವದರ್ಪಣ

ದೇವಗಂಧರ್ವ ಪ್ರಾರಂಭವಾಡಿ, ಪರ್ಜನ್ಯನವರಿಗೂ ಸಾಂಶರು. ಇವರಲ್ಲಿ ಜ್ಞಾನ, ವಿಜ್ಞಾನಯೋಗಿಗಳೆಂದು ಉಭಯ ಗಣವೂ ಅದೆ–ಎಂದು ಹೇಳುತ್ತಾರೆ । ದೇವಗಾಯಕೇತಿ । ತಚ್ಚೋಕ್ತಂ ಪ್ರಕಾಸಂಹಿತಾಯಾಂ । "ದೇವಗಂಧರ್ವಪೂರ್ವಾಶ್ಚಾಜಾನಜಾಂತಾಃ ಸಮಸ್ತಶಃ, ಪ್ರತೀಕಾಲಂಬನಾ ಸಾಂಶಾಃ ಕ್ರಮಾಚ್ಚ ಜ್ಞಾನಯೋಗಿನಃ"- । ವಿಜ್ಞಾನ। "ಅಪ್ರತೀಕಾಲಂಬನಾಶ್ಚ ಪ್ರಾಯೋಃವಿಜ್ಞಾನಯೋಗಿನಃ । ಕರ್ಮದೇವಾಜಾನಜಾದ್ಯಾ ದೇವದಾಸಾಃ ಕ್ರಮಾವರಾಃ । ದೇವಗಂಧರ್ವಪರ್ಯಂತಾ ಸಾಂಶಾಃ ಸರ್ವೇಪ್ರಕೀರ್ತಿತಾ"-– ಇತಿ. ‖೮‖

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಜ್ಞಾನಯೋಗಿನಃ ನಿರ್ದಿಶತಿ–"ದೇವಗಾಯಕ"-–ಇತಿ ‖ ಪಿತೃದೇವಾಃ ‖ ಏತೇ ಜ್ಞಾನಯೋಗಿನಃ ‖ ಪುಷ್ಕರಾದಿ ಪರ್ಜನ್ಯಾಂತಾಃ ವಿಜ್ಞಾನಯೋಗಿನಃ‖ ಉಭಯೇ ಸಾಂಶಾಃ ‖ ಪ್ರತೀಕಾಲಂಬಾಃ ‖ ತತ್ರ ವಿಜ್ಞಾನಯೋಗಿನಃ ಕ್ವಚಿದ ಪ್ರತೀಕಾಲಂಬಾಃ ‖ ದೇವಗಂಧರ್ವಪೂರ್ವಾಸ್ತ್ವಜಾನಜಾಂತಾಃ ಸಮಸ್ತಶಃ ‖ ಪ್ರತೀಕಾಲಂಬನಾಃ ಸಾಂಶಾಃ ಕ್ರಯೋಬ್ಧಾಃ ಜ್ಞಾನಯೋಗಿನಃ ‖ ಅಪ್ರತೀಕಾಲಂಬನಾಶ್ಚ ಪ್ರಾಯಃ ವಿಜ್ಞಾನಯೋಗಿನಃ ‖೮‖

## ಕನ್ನಡಾರ್ಥ

ಈ ಪದ್ಯದಿಂದ, ಜ್ಞಾನಯೋಗಿಗಳನ್ನು ತಿಳಿಸುತ್ತಾರೆ. ದೇವಗಂಧರ್ವರು, ಆಜಾನಜರು, ಚಿರಪಿತೃಗಳು– ಇವರು ಜ್ಞಾನಯೋಗಿಗಳು. ಪುಷ್ಕರನನ್ನಾರಂಭಿಸಿ, ಪರ್ಜನ್ಯನವರೆಗಿನವರು ವಿಜ್ಞಾನಯೋಗಿಗಳು, ಇವರೀರ್ವರೂ

ಸಾಂಶರು. ಇವರಲ್ಲಿ ಜ್ಞಾನಯೋಗಿಗಳೂ, ಕೆಲವು ವಿಜ್ಞಾನ ಯೋಗಿಗಳೂ, ಪ್ರತೀಕಾಲಂಬನರೂ ಇರುತ್ತಾರೆ. ದೇವಗಂಧರ್ವರನ್ನಾರಂಭಿಸಿ, ಆಜಾನಜ ಪರ್ಯಂತರರಾದ ಜ್ಞಾನಯೋಗಿಗಳೆಲ್ಲರೂ ಪ್ರತೀಕಾಲಂಬನರು. ಸಾಂಶರು. ಕ್ರಮಾನುಸಾರವಾಗಿ ಉಚ್ಚರು. ವಿಜ್ಞಾನಯೋಗಿಗಳು ಪ್ರಾಯಃ ಅಪ್ರತೀ-ಕಾಲಂಬನರು. ॥೮॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ದೇವಗಾಯಕರೆಂಬ ದೇವಗಂಧರ್ವರು, ಆಜಾನಜರೆಂಬ ದೇವಕುಲೋತ್ಪನ್ನರು, ಚಿರಪಿತೃಗಳೆಂಬ ದೇವತೆಗಳು-ಇವರೆಲ್ಲರೂ ಸದಾ ಜ್ಞಾನಯೋಗಿ—ಗಳು. ಪುಷ್ಕರ, ಶನೈಶ್ಚರ, ಅಶ್ವಿನೀಪತ್ನಿ ಉಷಾ, ಅಗ್ನಿಪತ್ನಿ ಸ್ವಾಹಾದೇವಿ, ಬುಧ, ಸನಕಾದಿಗಳು, ಮೇಘಾಭಿಮಾನಿ ಪರ್ಜನ್ಯನೆಂಬ ಸೂರ್ಯ-ಸಹ ಸಾಂಶ-ದೇವತೆಗಳು. ಈ ಉಭಯಗಣದವರೂ ವಿಜ್ಞಾನಯೋಗಿಗಳು. ॥೮॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಇನ್ನು **ವಿಜ್ಞಾನಯೋಗಿ**-ಗಳೆಂದು ಕರೆಯಿಸುವ ಸಾಂಶರಾದ ದೇವತೆಗಳು ವಿಚಾರ ತಿಳಿಸುತ್ತಾರೆ.

೨. ಸಾಂಶರಾದ ದೇವತಾಗಣದಲ್ಲಿ ಎರಡು ಪ್ರಕಾರ :–

೧. ದೇವಗಂಧರ್ವರು-ಆಜಾನಜರು–ಚಿರಪಿತೃಗಳು. ಈ ಗಣಕ್ಕೆ ಸೇರಿದ ದೇವತಾವರ್ಗ **ಜ್ಞಾನಯೋಗಿ**-ಗಳೆನಿಸುವರು. ಇವರು ಪ್ರತೀಕಾಲಂಬನರು. ಅಂದರೆ, ಅಧಿಷ್ಠಾನಗತವಾದ ಪ್ರತೀಕದಲ್ಲಿ ಶ್ರೀಪರಮಾತ್ಮನನ್ನು ಉಪಾಸನೆ ಮಾಡಿ, ತದ್ವಾರಾ, ಅವನ ಸಂದರ್ಶನವನ್ನು ಪಡೆಯುವರು.

೨. ಪುಷ್ಕರ-ಶನೈಶ್ಚರ-ಉಷಾ-ಸ್ವಾಹಾ-ಬುಧ–ಸನಕಾದಿಗಳು-ಪರ್ಜನ್ಯ -ಈ ವರ್ಗದ ದೇವತಾಗಣದವರು **ವಿಜ್ಞಾನಯೋಗಿ**—ಗಳೆನಿಸುವರು. ಸಾಂಶರಾದ ದೇವತೆಗಳಲ್ಲಿ ಇವರು ಅಪ್ರತೀಕಾಲಂಬನರು. ವ್ಯಾಪ್ತ್ಯೋಪಾಸಕ-ರಾಗಿದ್ದು. ಧ್ಯಾನಮಾಡುವ ಅಧಿಕಾರಿವರ್ಗ.

**ಪ್ರಮಾಣ :–**

"ದೇವಗಂಧರ್ವ ಪೂರ್ವಾಶ್ಚ ಜಾನಜಾಂತಾಃ ಸಮಸ್ತಶಃ ॥
ಪ್ರತೀಕಾಲಂಬನಾ ಸಾಂಶಾಃ ಕ್ರಮಾಶ್ಚ ಜ್ಞಾನಯೋಗಿನಃ ॥
ಅಪ್ರತೀಕಾಲಂಬನಾಶ್ಚ ಪ್ರಾಯೋ ವಿಜ್ಞಾನಯೋಗಿನಃ ।
ಕರ್ಮದೇವಾಜಾನಜಾದ್ಯಾ ದೇವ ದಾಸಾಃ ಕ್ರಮಾವರಾಃ ।
ದೇವಗಂಧರ್ವ ಪರ್ಯಂತಾ ಸಾಂಶಾಃ ಸರ್ವೇ ಪ್ರಕೀರ್ತಿತಾಃ ॥

**—ಇತಿ ಪ್ರಕಾಶಸಂಹಿತೋಕ್ತೇಃ ॥**

**೩. ದೇವಗಾಯಕರು :-**

ದೇವಸಭೆಯಲ್ಲಿ (ಇಂದ್ರನಸಭಾ) ಉತ್ತಮರಾದ ಗಾನವನ್ನು ಹೇಳುವ ದೇವಗಂಧರ್ವರೂ ಇವರಲ್ಲಿ ತುಂಬುರರು ಪ್ರಸಿದ್ಧಗಾಯಕರು. ಇವರು **ಅಜಾನಜದೇವತೆಗಳು**. ಸಾಂಶರಾದ ದೇವತಾಗಣದಲ್ಲಿ ದೇವಗಂಧರ್ವರೇ ಅತ್ಯಂತ ಕೆಳಗಿನವರು, ಅವರತಮರು. ಕರ್ಮಯೋಗಿಗಳಿಗಿಂತ ಉತ್ತಮ ಕಕ್ಷಾಪನ್ನರು.

**ಚಿರಪಿತೃಗಳು :–**

ಪಿತೃಗಣದಲ್ಲಿ ಚಿರಪಿತೃಗಳು ಉತ್ತಮರು. ಅವರಸ್ಥಾನ ನಿರ್ದಿಷ್ಟ ವಾದದ್ದು. ಚಿರಪಿತೃಗಳು ದೇವಗಂಧರ್ವರಿಗಿಂತ ತಾರತಮ್ಯದಲ್ಲಿ ಉತ್ತಮರು.

ದೇವಗಂಧರ್ವರು–ಚಿರಪಿತೃಗಳು–ಅಜಾನಜರು–ಜ್ಞಾನಯೋಗಿಗಳು ಮತ್ತು ಪ್ರತೀಕಾಲಂಬನರು.

ಆಜಾನಜರಿಂದ ಜನ್ಯರಾದವರೇ **ಅನಾಖ್ಯಾತ ಅಜಾನಜರು.** ಆಜಾನಜರು ಉತ್ತಮರು. ಅನಾಖ್ಯಾತ ಆಜಾನಜವರ್ಗ ಅವರರು. ಇವರಲ್ಲಿರುವ ವರ್ಗ ವಿವರಣೆಯು ಕೊನೆಯಲ್ಲಿ **ವಿಶೇಷ ವಿಚಾರ**-ದಲ್ಲಿ ಕೊಡಲ್ಪಟ್ಟಿದೆ.

೪. ಇನ್ನು ವಿಜ್ಞಾನಯೋಗಿಗಳೆಂದು ಕರೆಯಿಸುವ ಅಪ್ರತೀಕಾಲಂಬನರಾದ **ದೇವತೆಗಳ ವಿವರಣೆ :-**

**ಪುಷ್ಕರ :–** ಈತನು ಕರ್ಮಾಭಿಮಾನಿದೇವತಾ. ಜೀವರಲ್ಲಿ (ತನಗಿಂತ ಅವರರಾದ) ನಡೆಯುವ ಶುಭ-ಅಶುಭ-ಮಿಶ್ರವಾದ ಸಕಲಕರ್ಮಗಳಿಗೆ ಅಭಿಮಾನಿಯು. ಬಿಂಬನ ಪ್ರೇರಣಾನುಸಾರ ಶ್ರೀವಾಯುದೇವರು ತತ್ತ್ವದೇವತೆಗಳ ದ್ವಾರಾ, ಪುಷ್ಕರನ ಮೂಲಕ ಸರ್ವ ಶುಭಕರ್ಮಗಳನ್ನು ನಡೆಯಿಸುವರು. ಅಸುರರಲ್ಲಿದ್ದು, ಪುಷ್ಕರನ ದ್ವಾರಾ ಸಕಲ ಪಾಪಕರ್ಮಗಳ ಆಚರಣೆ. ಆ ಕರ್ಮಗಳ ಫಲ ಭೋಗವು ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ. ದ್ವಂದ್ವಾತೀತರಾದ ಜೀವರಿಗೆ ವಿಧಿ ನಿಷೇಧಗಳ ಸಂಪರ್ಕವಿಲ್ಲ. ತ್ರಿಗುಣಾತೀತರಾದ ಜೀವರಿಗೆ (ನಿರ್ಗುಣರಿಗೆ) ಕರ್ಮದ ಲೇಪನವೇ ಇಲ್ಲ.

**ಶನೈಶ್ಚರ :-**

ಶನಿಯು ಸೂರ್ಯಪುತ್ರನು. ಛಾಯಾದೇವಿಸಂಭೂತನು. ನವಗ್ರಹಗಳಲ್ಲಿ ಒಬ್ಬನು. ಜೀವರ ಅನಾದಿಕರ್ಮಗಳ ಪರಂಪರೆಗನುಗುಣವಾಗಿ, ಕರ್ಮಫಲವನ್ನಿತ್ತು ಕಾಡಿಸುವನು. ಇವನು ಪೃಥ್ವೀತತ್ತ್ವದ ಅಭಿಮಾನಿಯು, ಇವನು ಪುಷ್ಕರನಿಗಿಂತ ಉತ್ತಮನು.

**ಉಷಾ :-**

ಗಂಗಾಭಿಮಾನಿಗಳಾದ, ನಾಸಿಕೇಂದ್ರಿಯಕ್ಕೆ ಅಭಿಮಾನಿಗಳಾದ ಅಶ್ವಿನೀ

ದೇವತೆಗಳ ಪತ್ನಿಯು ಉಷಾದೇವಿ. ಈಕೆಯೂ ನಾಸಿಕೇಂದ್ರಿಯಾಭಿಮಾನಿಯು. ಶನಿಗಿಂತ ಉತ್ತಮಳು.

**ಬುಧ :**

ಚಂದ್ರಪುತ್ರನಾದ ಬುಧನು ಮಂಗಳಪ್ರದನು. ನವಗ್ರಹಗಳಲ್ಲಿ ಒಬ್ಬನು ಉಷಾದೇವಿಗಿಂತ ಉತ್ತಮನು.

**ಸ್ವಾಹಾದೇವಿ :–**

ಅಗ್ನಿಪತ್ನಿಯಾದ ಸ್ವಾಹಾದೇವಿಯು ಅಗ್ನಿಯಂತೆ ತೇಜೋಭಿಮಾನಿ ಮತ್ತು ವಾಗಭಿಮಾನಿದೇವತಾ. ಬುಧನಿಗಿಂತ ಉತ್ತಮಳು.

**ಸನಕಾದಿಗಳು :–**

ಸನಕ–ಸನಂದನ–ಸನತ್ಸುಜಾತ-ಸನತ್ಕುಮಾರ–ಈ ನಾಲ್ವರು ಬ್ರಹ್ಮನ ಮಾನಸಪುತ್ರರು. ವಿಜ್ಞಾನಯೋಗಿಗಳು–ಬ್ರಹ್ಮಜ್ಞಾನಿಗಳು-ಅಸ್ಖಲಿತ ಬ್ರಹ್ಮಚಾರಿಗಳು–ನಿತ್ಯಸಂಚಾರಿಗಳು-ಪರ್ಜನ್ಯ ದೇವತೆಗಿಂತಲೂ ಉತ್ತಮರು.

**ಪರ್ಜನ್ಯ :–**

ಮೇಘಾಭಿಮಾನಿಗಳಾದ ದೇವತಾಗಣಕ್ಕೆ ಪರ್ಜನ್ಯದೇವತೆಗಳೆಂದು ಹೆಸರು. ನಕ್ಷತ್ರಗಳ ಸಂಖ್ಯೆ ಅಶ್ವಿನ್ಯಾದಿ ೨೭. ಅದರಂತೆ, ಪರ್ಜನ್ಯರ ಸಂಖ್ಯೆ —೨೭. ಇವರು ದೇವೇಂದ್ರನ ಅಧೀನರು. ಅವನ ಆದೇಶದಂತೆ, ಕಾಲಕಾಲಕ್ಕೆ ಮೇಘಗಳ ದ್ವಾರಾ, ಮಳೆಯನ್ನು ಭೂಮಿಗೆ ಸುರಿಸುವರು. ಪರ್ಜನ್ಯರು ಸನಕಾದಿಗಳಿಗಿಂತ ಅವರರು. ಸ್ವಾಹಾದೇವಿಗಿಂತ ಉತ್ತಮರು.

ಪ್ರತೀಕಾಲಂಬನರಾದ ಜ್ಞಾನಯೋಗಿಗಳು ಮತ್ತು ಅಪ್ರತೀಕಾಲಂಬನ

ರಾದ ವಿಜ್ಞಾನಯೋಗಿಗಳು. ಈ ಉಭಯ ಗಣದವರು ಕರ್ಮಯೋಗಿಗಳಿಗಿಂತ ಉತ್ತಮರು ಮತ್ತು ಜ್ಞಾನಿಗಳು.

**ವಿಶೇಷ ವಿಚಾರ**

೧. ಅಜಾನಜರಾದ ದೇವಗಂಧರ್ವರಗಳ ಸಂಖ್ಯೆ- ೯೨.

೨. ಋಷಿಗಳ ಸಂಖ್ಯೆ- ೨,೯೯,೯೯,೯೦೦ (ಎರಡು ಕೋಟಿ ತೊಂಭತ್ತು ತೊಂಭತ್ತು ಲಕ್ಷ, ತೊಂಭತ್ತು ತೊಂಭತ್ತು ಸಾವಿರದ ಒಂಭೈನೂರು).

೩. ಅಪ್ಸರಸ್ತ್ರೀಯರು- ೯೦೮.

**ಪ್ರಮಾಣ :**

ಘೃತಾಚೀ ಮೇನಕಾ ರಂಭಾ ಊರ್ವಶೀ ಚ ತಿಲೋತ್ತಮಾ ।
ಸುಕೇಶಾ ಶಬರಿಚ್ಚೈವ ಮಂಜುಘೋಷಾ ಚ ಪಿಂಗಳಾ ॥
ಇತ್ಯಾದಿಕಂ ಹ್ಯಪ್ಸರಸಾಂ ಸಹಸ್ರಂ ಪ್ರಕೀರ್ತಿತಂ ।
ಅಜಾನಜಸಮಾಖ್ಯಾತಾಃ । ॥

೧೦೦೦-ಸಂಖ್ಯೆಯಲ್ಲಿ ಕರ್ಮಜದೇವತಾಗಣಕ್ಕೆ ಸೇರಿದ ೯೨ ಮಂದಿ ಕಳೆದು, ಉಳಿದವರು-೯೦೮ ಮಂದಿ ಅಪ್ಸರಸ್ತ್ರೀಯರು.

೪. ಅಗ್ನಿಪುತ್ರಿಯರಾದ ಗೋಪಸ್ತ್ರೀಯರು- ೧೬,೧೦೦.

ಈ ಅಗ್ನಿಪುತ್ರರು ಅಜಾನಜಯೋನಿಜರಾದ ಅನಾಖ್ಯಾತ ಅಜಾನಜರು ಮತ್ತು ಅಜಾನಜರಿಗಿಂತ ಅವರರು.

೫. ವಿಬುಧರು-೧೦೦.

೬. ದೇವಭೃತ್ಯರಾದ ಪಿತೃಗಳು- ೧೦೦.

೭. ದೇವಭೃತ್ಯರಾದ ಅಸುರರು- ೧೦೦.

೮. ಗಂಧರ್ವಗಾಯಕರು– ೧೦೦.

೯. ನೃತ್ಯ ಮಾಡುವ ಅಪ್ಸರೆಯರು- ೧೦೦.

೧೦. ದೇವಕಾರ್ಯದಲ್ಲಿ ಸಿದ್ಧರಾದ ಸಿದ್ಧರು– ೭೦.

೧೧. ವಾಹನ ಹೊರುವ ಯಕ್ಷರು- ೭೦.

೧೨. ಶಿಬಿಕಾ (ಮೇನೆ) ಹೊರುವ ರಾಕ್ಷಸರು–೩೦.

೧೩. ಪರಿಚಾರಕ ಚಾರಣರು- ೩೦.

೧೪. ಸೇವಾಕರ್ತರಾದ ಭೂತರು– ೭೦.

೧೫. ಕಿನ್ನರವರ್ಗ- ೭೦.

೧೬. ಪಿಶಾಚರು-೭೦.

೧೭. ಕುಬೇರನ ಭೃತ್ಯರಾದ ಗುಹ್ಯಕರು-೭.

೧೮. ಪ್ರೇತರು– ೭೦.

೧೯. ವಿದ್ಯಾಧರರು- ೭೦.

೨೦. ವರುಣಭೃತ್ಯಕಾರ ನಾಗರು– ೫.

ಈ ಸರ್ವರೂ ಯಜ್ಞದಲ್ಲಿ ಸ್ವಲ್ಪ ಹವಿರ್ಭಾಗಪಾತ್ರರು. ॥೮॥

## ಪದ್ಯ-೯

**ಮೂಲ :**

**ಭರತಖಂಡದಿ ನೂರು ಜನುಮವ ।**
**ಧರಿಸಿ ನಿಷ್ಕಾಮಕ ಸುಕರ್ಮ ।**
**ಚರಿಸಿದಾನಂತರದಿ ದಶಸಾಹಸ್ರ ಜನುಮದಲಿ॥**
**ಉರುತರ ಜ್ಞಾನವನು ಪಡದೈ ।**
**ದಾರುದಶ ದೇಹದಲಿ ಭಕುತಿಯ ।**
**ನಿರವಧಿಕದಲಿ ಮಾಡಿ ಕಾಂಬರು ಬಿಂಬರೂಪವನು ॥೯॥**

**ಅವತರಣಿಕೆ :**

ಅಜಾನಜದೇವತೆಗಳ ಹಾಗೂ ಕರ್ಮಜ ದೇವತೆಗಳ ಅಪರೋಕ್ಷಕ್ಕಾಗಿ ಸಾಧನಜನ್ಮಗಳ ವಿಚಾರವನ್ನು ತಿಳಿಸುತ್ತಾರೆ. ॥ ೯ ॥

**ಪ್ರತಿಪದಾರ್ಥ**

**ಭರತಖಂಡದಿ**—ಸಾಧನಕ್ಷೇತ್ರವಾದ ಈ ಭರತಖಂಡದಲ್ಲಿ, **ನೂರು ಜನುಮವ ಧರಿಸಿ**—ನೂರು ಸಂಖ್ಯಾತವಾದ ಜನ್ಮಗಳನ್ನು ಧರಿಸಿ, **ನಿಷ್ಕಾಮುಕ**— ಕಾಮರಹಿತವಾದ, **ಸುಕರ್ಮ** — ಸತ್ಕರ್ಮರೂಪವಾದ ಯಜ್ಞ ಯಾಗಾದಿ ಕರ್ಮಗಳನ್ನು, **ಆಚರಿಸಿದಾನಂತರದಿ** — ಆಚರಿಸಿದ ತರುವಾಯ, **ದಶಸಾಹಸ್ರ ಜನುಮಂದಲಿ**—ಹತ್ತುಸಾವಿರ ಜನ್ಮಗಳನ್ನು ತಾಳಿ, **ಉರುತರ**—ಅತ್ಯಂತಶ್ರೇಷ್ಠವಾದ, **ಜ್ಞಾನವನು**— ಜ್ಞಾನವನ್ನು, **ಪಡೆದು**—ಸಂಪಾದಿಸಿ, **ಐದು ಆರು ದಶ ದೇಹದಲಿ**—ಮುನ್ನೂರು ಜನ್ಮಯುಕ್ತವಾದ ದೇಹಗಳಲ್ಲಿ (ಐದುಆರು—೫x೬—೩೦ ದಶ—೩೦x೧೦= ೩೦೦) **ಭಕುತಿಯು**— ಭಕ್ತಿಯನ್ನು, **ನಿರವಧಿಕದಲಿ ಮಾಡಿ**—ತಮ್ಮ ಸ್ವರೂಪಯೋಗ್ಯತೆಯನ್ನು ಮೀರದೆ ಮಾಡಿ, **ಬಿಂಬ ರೂಪವನು**— ತಮ್ಮ ಹೃದಯಾಕಾಶಗತ ಬಿಂಬವನ್ನು, **ಕಾಂಬರು**— ಕಾಣುತ್ತಾರೆ. ॥ ೯ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಆಜಾನಜರ, ಕರ್ಮಜರ ಅಪರೋಕ್ಷಕ್ಕಾಗಿ ಸಾಧನಜನ್ಮಗಳನ್ನು ಹೇಳುತಾರೆ.

ಭರತಖಂಡದಲ್ಲಿ ಸಾಧನಭೂಮಿ. ದೇವ-ಮಾನುಷರಿಗೆ ವಿಭಾಗ–ಭರತ ಖಂಡದ ವಿಸ್ತೀರ್ಣ-೯೦೦೦ ಯೋಜನ. ಇದರಲ್ಲಿ ೮೦೦೦ ಸಾವಿರ ಯೋಜನ ಭೋಗಭೂಮಿ, ೧೦೦೦ ಯೋಜನ ಸಾಧನಭೂಮಿ. ಇದರಲ್ಲಿ ೧೦೦ ಯೋಜನ ಸಗರರಾಯನ ಮಕ್ಕಳು ಮಾಡಿದ ಭೂಖನನದಿಂದ ಸಮುದ್ರದಾಗೆ ಸೇರಿ ಹೋದದ್ದು. ಇನ್ನು ೯೦೦ ಯೋಜನ ಉಳಿಯಿತು. ಇದು ಸಾಧನ ಭೂಮಿ. ಇದರೊಳಗೆ ೪೫೦ ಯೋಜನ ಮಾನುಷ ಸಾಧನಭೂಮಿ. ೧೦೦ ಯೋಜನ, ರಾಮೇಶ್ವರ ನವಪಾಷಾಣಾರಭ್ಯ ಕೃಷ್ಣಾ ನದೀವರೆಗೆ. ೧೫೦ ಯೋಜನ ಕೃಷ್ಣಾರಭ್ಯ ಗಂಗಾತೀರದವರೆಗೆ. ೨೦೦ ಯೋಜನ ಗಂಗಾರಭ್ಯ ಚಿಕ್ಕಬದರೀವರೆಗೆ. ಅಂತೂ, ೪೫೦ ಯೋಜನ ಮಾನುಷ ಸಾಧನಭೂಮಿ. ೪೫೦ ಯೋಜನ ಚಿಕ್ಕ ಬದರೀ ಆರಭ್ಯ ಹಿಮಾಚಲದವರೆಗೆ ತದೇವ ದೇವಸಾಧನ ಭೂಮಿ. ಅಂತೂ. ೯೦೦ ಪೂರ್ವೋಕ್ತಪ್ರಕಾರ ದೇವತಾಸಾಧನ ಯೋಗ್ಯವಾದ ಭರತಖಂಡ ಪ್ರದೇಶದಲ್ಲಿ ದೇವತಾಶರೀರಗಳಿಂದ ಮಾನಸಪೂಜಾ, ವಾಸನಾ ಪ್ರತೀಕಾಂತರ್ಗತ ಮಾನಸಪೂಜಾ ಮಾಡುತ್ತಾ, ಕಲ್ಪಾಂತಸಾಧನ ಆಗಿ, ಅಂತ ಕಲ್ಪವಾದ ಅಪರೋಕ್ಷಕಲ್ಪದಲ್ಲಿ, ಮಾನುಷ ಸಾಧನಾ ಭರತಖಂಡಪ್ರದೇಶದಲ್ಲೀ ನೂರುಜನ್ಮ ಧರಿಸಿ, ಕಾಮರಹಿತವಾದ ಸತ್ಕರ್ಮರೂಪವಾದ ಯಜ್ಞ-ಯಾಗಾದಿ ಕರ್ಮಗಳ ಆಚರಣೆ ಮಾಡಿದನಂತರದಲ್ಲಿ, ಹತ್ತು ಸಾವಿರಜನ್ಮಧರಿಸಿ, ಈ ಜನ್ಮದಲ್ಲಿ ಅತ್ಯಂತ ಶ್ರೇಷ್ಟತರವಾದ ಜ್ಞಾನವನ್ನು ಸಂಪಾದಿಸಿ, ಮೂವತ್ತು, ಹತ್ತರಿಂದ ಗುಣಿಸಿದರೆ ಮುನ್ನೂರು, ಈ ಮುನ್ನೂರು ಜನ್ಮಗಳ ದೇಹಗಳಲ್ಲಿ ಭಕ್ತಿಯನ್ನು ಪರಮಾತ್ಮನಲ್ಲಿ ತಮ್ಮ ತಮ್ಮ ಯೋಗ್ಯತಾಕ್ಕೆ ಮಿಂಚದಂತೆ ಮಾಡಿ, ವಾಸನಾ ಮಯ ಅಪರೋಕ್ಷ, ಪೂರ್ವೋಕ್ತಜನ್ಮಗಳ ನಂತರ ಮಾಡೋ ಉಪಾಸನಾ ದಿಂದ ಹೃದಯಾಕಾಶದಲ್ಲಿ ಬಿಂಬರೂಪವನ್ನ ಕಾಣುತಾರೆ.

**ಆತಾತ್ತ್ವಿಕಾ ದೇವದಾಸಾಃ ಸತ್ಕರ್ಮ ದಶಜನ್ಮಭಿಃ ಕೃತ್ವಾ ದಶ ಸಹಸ್ರೋರಜನ್ಮಭಿಃ ಜ್ಞಾನವಮಾಪ್ಯ ಚ ॥ ಭಕ್ತಿಂ ತ್ರಿಶತ್ಯೈರಾಪ್ಯ ಮುಚ್ಯಂತೇ ಜ್ಞಾನಯೋಗಿನಃ ॥**

**—ಇತಿ ಪ್ರಕಾಶಸಂಹಿತಾಯಾಂ ॥**

ಜ್ಞಾನಯೋಗಿಗಳು ಅಜಾನಜರು, ವಿಜ್ಞಾನಯೋಗಿಗಳು, ಕರ್ಮಜದೇವತೆಗಳು. ಜ್ಞಾನಿಯೋಗಿಗಳ ದಿಕ್ಪ್ರದರ್ಶನ ಮಾಡಿ, ವಿಜ್ಞಾನಯೋಗಿಗಳನ್ನ ಪ್ರಮಾಣದಲ್ಲಿ ಹೇಳಲಿಲ್ಲ.

ಆದ್ದರಿಂದ, ಉಭಯರಿಗೂ ಸಾಧನಜನ್ಮಗಳು ಒಂದೇಪ್ರಕಾರ.

| | ಸತ್ಕರ್ಮಾನುಷ್ಠಾನ ಜನ್ಮಗಳು | ಜ್ಞಾನಾನುಷ್ಠಾನ ಜನ್ಮಗಳು | ಭಕ್ತಿಯಿಂದ ಅನುಷ್ಠಾನ ಜನ್ಮಗಳು |
|---|---|---|---|
| ಮಾನುಷ ಗಂಧರ್ವರಾರಭ್ಯ ತೃಣಾಂತವರೆಗೆ. | ೧೦೦೦೦. | ೧೦. | ೩೦. |
| ಅಜಾನಜರಿಗೆ ಮತ್ತು ಕರ್ಮಜರಿಗೆ. | ೧೦. | ೧೦,೦೦೦. | ೩೦೦. |

ಈ ಪ್ರಕಾರ, ಈ ಅಜಾನಜರು ಮತ್ತು ಕರ್ಮಜರು ಕಾರಣ ವಿಶೇಷಗಳಿಂದ, ಭಗವಂತನ ಸೇವಾರ್ಥ, ಮಾನುಷಸಾಧನ ಭೂಮಿಯಲ್ಲಿ, ವಿಶಾಧಿವಶಾತ್ ಜನಿಸೋವರಾಗತಾರೆ. ಮುಖ್ಯವಾದ ಸಾಧನಭೂಮಿ ಹಿಮಾಚಲ ಪ್ರದೇಶವೇಯೇ. ॥೯॥

## ೨. ಭಾವಪ್ರಕಾಶಿಕೆ

"ಸತ್ಕರ್ಮಕೃತ್ವಾ ನಿಷ್ಕಾಮಂ ಲಭಂತೇ ಗುರುಸಂತತಿಂ ॥ ಅತಾತ್ವಿಕಾ ದೇವದಾಸಾಃ ಸತ್ಕರ್ಮ ಶತಜನ್ಮಭಿಃ ॥ ಕೃತ್ವಾದಶ ಸಹಸ್ರೈರು ಜನ್ಮಭಿ ಜ್ಞಾನಮಾಪ್ಯ ಚ ॥ಭಕ್ತಿಂ ತ್ರಿಶತಕೈರಾಪ್ಯ ಮುಚ್ಯಂತೇ ಜ್ಞಾನಯೋಗಿನಃ ॥"- ಎಂಬ ಪ್ರಕಾಶಸಂಹಿತೆಯ ವಾಕ್ಯದಿಂದ, ಈ ಪದ್ಯಾರ್ಥವು ಸಿದ್ಧಿಸುವುದು. ಇವರ ಸಾಧನ ಕ್ರಮವೆಂತನೆ. ಭರತಖಂಡದಲ್ಲಿ ೧೦೦ ಜನ್ಮಗಳಲ್ಲಿ ನಿಷ್ಕಾಮ್ಯಕರ್ಮ

ಗಳನ್ನಾಚರಿಸಿ, ಅನಂತರದಲ್ಲಿ, ೧೦ ಸಹಸ್ರಜನ್ಮಗಳಲ್ಲಿ ಉತ್ಕೃಷ್ಟವಾದ ಜ್ಞಾನವನ್ನು ಪಡೆದು, ೩೦೦ ಜನ್ಮಗಳಲ್ಲಿ ಉತ್ತಮವಾದ ಭಕ್ತಿಯನ್ನು ಮಾಡಿ, ಅಪರೋಕ್ಷದಲ್ಲಿ ಪರಮಾತ್ಮನನ್ನು ಕಾಣುವರು. ॥೯॥

## ೩. ಭಾವದರ್ಪಣ

ಇವರುಗಳ ಸಾಧನವೇನೆಂದರೆ-ಸತ್ಕರ್ಮ ನೂರುಜನ್ಮದಿಂದ ಸಾಂಗ ಮಾಡಿ, ಹತ್ತುಸಾವಿರ ಜನ್ಮದಿಂದ ಜ್ಞಾನೋಪಾಸನೆ ಮಾಡಿ, ಮೂನ್ನೂರು ಜನ್ಮ ಭಕ್ತಿಪೂರ್ವಕ ಉಪಾಸನೆ ನಡೆಸಿ, ಹೃದಯಸ್ಥನಾದಂಥ ಬಿಂಬಾಖ್ಯ ಶ್ರೀಶನ್ನ ಕಾಣುತ್ತಾರೆಂದು ಹೇಳುತ್ತಾರೆ । ಭರತೇತಿ । ತದುಕ್ತಂ ಪ್ರಕಾಶ ಸಂಹಿತಾಯಾಂ—"ಸತ್ಕರ್ಮಕೃತ್ವಾ ನಿಷ್ಕಾಮಂ ಲಭಂತೇ ಗುರುಸಂತತಿಃ । ಅತಾತ್ವಿಕಾ ದೇವದಾಸಾಃ ಸತ್ಕರ್ಮ ಶತಜನ್ಮಭಿಃ । ಕೃತ್ವಾ ದಶಸಹಸ್ರೋರು ಜನ್ಮಭಿರ್ಜ್ಞಾನಮಾಪಚ್ಯ । ಭಕ್ತಿಂ ತ್ರಿಶತಕೈರಾಪ್ಯ ಮುಚ್ಯಂತೇ ಜ್ಞಾನ ಯೋಗಿನ"—ಇತಿ. ॥೯॥

## ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

ಜ್ಞಾನಯೋಗಿನಾಂ ಸಾಧನಮಾಹ ॥

'ಭರತ'_ಇತಿ ॥ ಪ್ರಮಾಣೋಪರೋಧಾತ್ ದೂರಸ್ಥಂ ಶತಪದಂ ಅತ್ರ ಸಂಯೋಜ್ಯ ಶತಭವೇಷು ಕರ್ಮಕರಣೋತ್ತರಂ ದಶಸಹಸ್ರೋತ್ತರಂ ಪ್ರಥಮತ್ರಯ ಶತಪ್ರನಕ್ರಮಂ ಧಾರಯೇತ್ ॥ ತ್ರಿಶತೇಷು ಭಕ್ತಿಮಾಪ್ಯ ಅಪರೋಕ್ಷೀಕುರ್ವಂತಿ ಹರಿವ್ ಇತ್ಯೇಕಾನ್ವಯಃ ॥ ಅತಾತ್ವಿಕಾಃ ದೇವದಾಸಾಃ ಸತ್ಕರ್ಮ ಶತಜನ್ಮಭಿಃ ॥ ಕೃತ್ವಾ ದಶಸಹಸ್ರೋರು ಜನ್ಮಭಿಃ ಜ್ಞಾನಮಾಪಚ ॥ ಭಕ್ತಿಂ ತ್ರಿಶತಕೈಃ ಆಪ್ಯ ಮುಚ್ಯಂತೇ ಜ್ಞಾನಯೋಗಿನಃ ॥೯॥

## ಕನ್ನಡಾರ್ಥ

ಪ್ರಮಾಣಾನುಸಾರವಾಗಿ ದೂರದಲ್ಲಿದ್ದ ಶತಪದವನ್ನು ಇಲ್ಲಿ ಅನ್ವಯಿಸಿ, ನೂರು ಜನ್ಮಗಳಲ್ಲಿ ಸತ್ಕರ್ಮಗಳನ್ನು ನಿಷ್ಕಾಮದಿಂದ ಮಾಡಿದ ಅನಂತರ, ಹತ್ತು ಸಾಹಸ್ರ ಜನ್ಮಗಳಿಂದ ಜ್ಞಾನವನ್ನು ಹೊಂದುತ್ತಾರೆ. ಈ ಕ್ರಮವನ್ನು ಇಲ್ಲಿ ಸ್ವೀಕರಿಸಬೇಕು.

"ತಾತ್ವಿಕದೇವತೆಗಳಿಂದ ಭಿನ್ನರಾದ ದೇವದಾಸರು, ನೂರು ಜನ್ಮಗಳಿಂದ ಸತ್ಕರ್ಮಗಳನ್ನು ಆಚರಿಸಿ, ಹತ್ತುಸಾವಿರ ಜನ್ಮಗಳಿಂದ ಜ್ಞಾನವನ್ನು ಪಡೆದು, ಮೂರುನೂರು ಜನ್ಮಗಳಿಂದ ಭಕ್ತಿಯನ್ನು ಹೊಂದಿ, ಅನಂತರ, ಜ್ಞಾನಯೋಗಿಗಳು ಮುಕ್ತರಾಗುತ್ತಾರೆ."—ಎಂದು ಪ್ರಮಾಣಗಳಲ್ಲಿ ಹೇಳಲಾಗಿದೆ. ॥೯॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ

ಭರತಖಂಡದಲ್ಲಿ ಬ್ರಾಹ್ಮಣಜನ್ಮ ನೂರನ್ನು ಹೊಂದಿ, ನಿಷ್ಕಾಮಕರ್ಮಗಳನ್ನು ಸಾಂಗವಾಗಿ ಆಚರಿಸಿ, ತದನಂತರ, ಹತ್ತು ಸಹಸ್ರಜನ್ಮಗಳಲ್ಲಿ ಉತ್ಕೃಷ್ಟ ಜ್ಞಾನಸಾಧನೆಯನ್ನು ಮಾಡಿ, ಜ್ಞಾನ ಪಡೆದು, ಎರಡೊಂದು ಶತವೇಷದಲಿ ಅಂದರೆ, ಮುನ್ನೂರು ಜನ್ಮದಲ್ಲಿ ದೇವರಲ್ಲಿ ನಿರವಧಿಕಭಕ್ತಿಯನ್ನು ಮಾಡಿ, ಸ್ವಾಧಾರ ಬಿಂಬವೆಂಬ ದೇವರ ರೂಪವನ್ನು ಕಾಣುವರು. **ಪ್ರಮಾಣ— ಅತಾತ್ತ್ವಿಕಾ............ಜ್ಞಾನಯೋಗಿನಃ ॥**— ಎಂಬ, ಪ್ರಕಾಶಸಂಹಿತಾದಲ್ಲಿ ಹೇಳುವಂತೆ ಅರ್ಥ ತಿಳಿಯಬೇಕು. (ಸೂಚನೆ :- ಈ ಪ್ರಮಾಣದ ಪೂರ್ಣ ಪಾಠ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲೂ ಕೊಟ್ಟಿದೆ. ನೋಡಿಕೊಳ್ಳುವುದು.) ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸಾಧನ ಭೂಮಿಯೂ ಮತ್ತು ಕರ್ಮಕ್ಷೇತ್ರವೂ ಆದ ಈ ಪವಿತ್ರ

ವಾದ ಭರತಖಂಡದಲ್ಲಿ ನೂರುಜನ್ಮಗಳನ್ನು ಹೊಂದಿ, ಸತ್ಕರ್ಮಗಳನ್ನು ಆಚರಿಸಿ, ನಿಷ್ಕಾಮಮನಸ್ಸಿನಿಂದ ಶ್ರೀ ಹರಿಯನ್ನು ಸ್ಮರಿಸುತ್ತಿರುವರು.

ಭರತಖಂಡದ ವಿಸ್ತೀರ್ಣವು ೯೦೦೦ ಯೋಜನೆಗಳು. ಇದರಲ್ಲಿ, ೮೦೦೦ ಯೋಜನೆ-ಭೋಗಭೂಮಿ. ಉಳಿದ ೧೦೦೦ ಯೋಜನ ಸಾಧನ ಭೂಮಿ. ಇದರಲ್ಲಿ, ೧೦೦ ಯೋಜನೆ ಸಗರರಾಯನ ಮಕ್ಕಳು ಮಾಡಿದ ಭೂಖನನದಿಂದ ಸಮುದ್ರದಲ್ಲಿ ಸೇರಿಹೋಯಿತು. ಉಳಿದ ೩೦೦ ಯೋಜನದಷ್ಟು ಸಾಧನಭೂಮಿ ಎನಿಸಿದೆ. ಇದರಲ್ಲಿ, ೪೫೦ ಯೋಜನವು ಮಾನುಷಸಾಧನಭೂಮಿ. ೧೦೦ ಯೋಜನ ರಾಮೇಶ್ವರ, ನವಪಾಷಾಣಾರಭ್ಯ ಕೃಷ್ಣಾನದಿಯವರೆಗೆ ೧೫೦ ಯೋಜನ. ಕೃಷ್ಣಾರಭ್ಯ ಗಂಗಾತೀರದವರೆಗೆ ೨೦೦ ಯೋಜನ. ಗಂಗಾರಭ್ಯ ಚಿಕ್ಕಬದರೀಪರ್ಯಂತ- ಇದು ದೇವಸಾಧನ ಭೂಮಿ. ಚಿಕ್ಕ ಬದರೀ ಆರಭ್ಯ ಹಿಮಾಚಲದವರೆಗೆ.

೨. ಇಂತು, ೯೦೦ ಯೋಜನಕ್ಷೇತ್ರವುಳ್ಳ ಭರತಖಂಡದ ಸಾಧನ ಭೂಮಿಯಲ್ಲಿ, ೧೦೦ ಜನ್ಮಗಳ ತರುವಾಯ, ದಶಸಹಸ್ರ ಜನ್ಮಗಳಲ್ಲಿ, ಅಂದರೆ, ಹತ್ತುಸಾವಿರ ಜನ್ಮಗಳಲ್ಲಿ (೧೦,೦೦೦) ಜ್ಞಾನೋಪಾಸನೆಯ ದ್ವಾರಾ ಬಿಂಬಾರ್ಚನೆ ಗೈಯ್ಯುವರು.

೩. ೧೦,೦೦೦ ಜನ್ಮಗಳನಂತರ. ಮುನ್ನೂರು ಶ್ರೇಷ್ಠವಾದ ಜನ್ಮಗಳಲ್ಲಿ (ಐದಾರುದಶ = ೫×೬×೧೦ = ೩೦೦ ಸಂಖ್ಯಾಕವಾದ) ನಿರವಧಿಕವಾದ ಭಕ್ತಿಯಿಂದ, ಶ್ರೀಹರಿಯನ್ನು ಉಪಾಸಿಸುತ್ತಾ, ಸ್ಥೂಲಗತಹೃದಯಾಕಾಶದಲ್ಲಿರುವ ಹೃತ್ಪದ್ಮಸ್ಥಿತವಾದ ಬಿಂಬರೂಪಿಯಾದ ಶ್ರೀಹರಿಯನ್ನು ಕಾಂಬರು. ಅಂದರೆ, ಬಿಂಬಾಪರೋಕ್ಷವನ್ನು ಹೊಂದುವರು.

**ಪ್ರಮಾಣ :-**

"ಸತ್ಕರ್ಮ ಕೃತ್ವಾ ನಿಷ್ಕಾಮಂ ಲಭಂತೇ ಗುರುಸಂತತಿಃ ।
ಅತಾತ್ವಿಕಾ ದೇವದಾಸಾಃ ಸತ್ಕರ್ಮ ಶತಜನ್ಮಭಿಃ ॥

ಕೃತ್ವಾ ದಶಸಹಸ್ರಾಣಿ ಜನ್ಮಭಿರ್ಜ್ಞಾನ ಮಾತ್ರತಃ ।
ಭಕ್ತಿಂ ತ್ರಿಶತಕೈರಾಪ್ಯ ಮುಚ್ಯಂತೇ ಜ್ಞಾನಯೋಗಿನಃ॥-

— ಇತಿ ಪ್ರಕಾಶಸಂಹಿತೋಕ್ತೇಃ ॥

| ಕ್ರಮ ಸಂಖ್ಯೆ | ಯಾರಿಗೆ | ಸತ್ಕರ್ಮಾನುಷ್ಠಾನ ಜನ್ಮಗಳ ಸಂಖ್ಯೆ | ಜ್ಞಾನಾನುಷ್ಠಾನ ಜನ್ಮಗಳ ಸಂಖ್ಯೆ | ಭಕ್ತ್ಯಾನುಷ್ಠಾನ ಜನ್ಮಗಳ ಸಂಖ್ಯೆ |
|---|---|---|---|---|
| ೧ | ಮಾನುಷ ಗಂಧರ್ವ ರಾರಭ್ಯ ತೃಣಾಂತ ಜೀವರವರೆಗೆ | ೧೦೦೦೦ | ೧೦ | ೩೦ |
| ೨ | ಅಜಾನಜರಿಗೆ ಮತ್ತು ಕರ್ಮಜರಿಗೆ | ೧೦ | ೧೦,೦೦೦ | ೩೦೦ |

## ಪದ್ಯ-೧೦

**ಮೂಲ :**

**ಸಾಧನಾತ್ಪೂರ್ವದಲಿ ಇವರಿಗೆ॥**
**ನಾದಿಕಾಲ ಪರೋಕ್ಷವಿಲ್ಲ ವಿ।**
**ಷೇಧಕರ್ಮಗಳಿಲ್ಲ ನರಕಪ್ರಾಪ್ತಿ ಮೊದಲಿಲ್ಲ ॥**
**ವೇದಶಾಸ್ತ್ರಗಳಲ್ಲಿ ಇಪ್ಪ ವಿ ।**
**ರೋಧವಾಕ್ಯವ ಪರಿಹರಿಸಿ ಮಧು**
**ಸೂದನನೆ ಸರ್ವೋತ್ತಮನೆಂದು ಸುಖಿಸುವರು ॥೧೨॥**

**ಅವತರಣಿಕೆ :**

ಅಜಾನಜರ ಮತ್ತು ಕರ್ಮಜರ ಸಾಧನವಿಚಾರವನ್ನು ಇನ್ನೂ ತಿಳಿಸುತ್ತಾರೆ. ॥೧೦॥

**ಪ್ರತಿಪದಾರ್ಥ**

**ಇವರಿಗೆ**— ಅಜಾನಜರಾದ ಜ್ಞಾನಯೋಗಿಗಳು ಮತ್ತು ಕರ್ಮಜರಾದ ವಿಜ್ಞಾನಯೋಗಿಗಳು—ಈ ಉಭಯರಿಗೆ, **ಸಾಧನಾತ್ಪೂರ್ವದಲಿ** —ಅಪರೋಕ್ಷಪೂರ್ವದಲ್ಲಿ, **ಅಪರೋಕ್ಷವಿಲ್ಲ** —ಅಪರೋಕ್ಷವಿಲ್ಲ. ಸಾಧನಾನಂತರವೇ ಅಪರೋಕ್ಷ. **ಅನಾದಿಕಾಲ** —ಇವರಿಗೆ ಅಪರೋಕ್ಷಾನಂತರ, ಕಾಲವಿಶೇಷಗಳಲ್ಲಿ ತಿರೋಧಾನವಾಗಿ ಮತ್ತು ಅದಿ ಕಾಣುತ್ತಾ ಇರುತ್ತದೆ. **ನಿಷೇಧಕರ್ಮಗಳು** — ಪಾಪಕರ್ಮಗಳ ಆಚರಣೆ, **ಇಲ್ಲ**— ಅಪರೋಕ್ಷಾತ್ಪೂರ್ವದಲ್ಲಿ ಇಲ್ಲ. **ನರಕಪ್ರಾಪ್ತಿ ಮೊದಲಿಲ್ಲ**—ತತ್ಫಲರೂಪವಾದ ನರಕಾದಿ ವಾಸಗಳು ಯಾವಾಗ್ಯೂ ಇಲ್ಲವೇ ಇಲ್ಲ. **ವೇದಶಾಸ್ತ್ರಗಳಲ್ಲಿಇಪ್ಪ** —ಅಪರೋಕ್ಷಾತ್ಪೂರ್ವದಲ್ಲಿ, ವೇದ ಮತ್ತು ಶಾಸ್ತ್ರಗಳಲ್ಲಿ ಇರತಕ್ಕ, **ವಿರೋಧವಾಕ್ಯ ಪರಿಹರಿಸಿ** — ಪ್ರತೀಕದಲ್ಲಿ ಹರಿ ಸರ್ವೋತ್ತಮ-ವಾಯು ಜೀವೋತ್ತಮ-ಪಂಚಭೇದ- ತಾರತಮ್ಯಗಳಿಗೆ ವಿರೋಧವಾಗಿ ತೋರತಕ್ಕ ವಾಕ್ಯಗಳಲ್ಲಿನ ವಿರೋಧಾರ್ಥಗಳನ್ನು ಪರಿಹರಿಸಿ, ಅದೇ ವಾಕ್ಯಗಳಿಗೆ ಗುಹ್ಯ ಮತ್ತು ಸಮಾಧಿ ಭಾಷಾ ದ್ವಾರಾ, ಈಶ್ವರ ಪರವಾಗಿ ವೇದಾನುಸಾರ ಅರ್ಥೈಯಿಸಿ, **ಮಧುಸೂದನನೆ** — ಮಧುವೈರಿಯಾದ ಶ್ರೀಪರಮಾತ್ಮನೇ, **ಸರ್ವೋತ್ತಮ** —ಬ್ರಹ್ಮದೇವರಿಗಿಂತಲೂ ಶ್ರೀರಮಾದೇವಿ ಉತ್ತಮರು, **ಉತ್ತಮನು**—ರಮಾಬ್ರಹ್ಮಾದಿಗಳಿಗಿಂತಲೂ ಉತ್ತಮೋತ್ತಮನೆಂದು ತಿಳಿದು, **ಸುಖಿಸುವರು**— ಮನಸಾಧ್ಯಾನ ಮಾಡುತ್ತಾ, ಬಿಂಬೋಪಾಸನೆಯಿಂದ ಆನಂದಪಡುತ್ತಾರೆ. ॥೧೦॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಆಜಾನಜರ, ಕರ್ಮಜರ ವಿಚಾರ ಹೇಳತಾರೆ.

ಆಜಾನಜರಾದ ಜ್ಞಾನಯೋಗಿಗಳು, ಕರ್ಮಜರಾದ ವಿಜ್ಞಾನಯೋಗಿಗಳು ಈ ಉಭಯರಿಗೆ, ಅಪರೋಕ್ಷಸಾಧನ ಮಾಡೋದಕ್ಕೆ ಪೂರ್ವದಲ್ಲಿ, ಅಪರೋಕ್ಷ ಇಲ್ಲ. ಸಾಧನಾನಂತರ ಅಪರೋಕ್ಷವೇ ಹೊರ್ತು, ತದ್ವ್ಯತಿರಿಕ್ತ ಅಪರೋಕ್ಷ ವಿಲ್ಲ. ಇವರು ಯಾವತ್ತೂ ಮಂದಿ ಅನ್ನಲಾಗಿ, ವಿಜ್ಞಾನಯೋಗಿಗಳಾದ ಕರ್ಮಜ ರಾದ ಬಲ್ಯಾದಿ, ಸನಕಾದಿ ವಿಜ್ಞಾನಯೋಗಿಗಳಿಗೆ ಹದಿನಾಲ್ಕು ಬ್ರಹ್ಮಕಲ್ಪ ಸಾಧನಿ. ಇದರಲ್ಲಿ ಏಳು ಬ್ರಹ್ಮಕಲ್ಪ, ಸ್ಥೂಲಾಪರೋಕ್ಷ ಸಾಧನಿ, ಏಳು. ಬ್ರಹ್ಮಕಲ್ಪ ಜೀವಾಂತರ್ಗತ ಅಪರೋಕ್ಷ ಸಾಧನಿ. ಆರು ಬ್ರಹ್ಮಕಲ್ಪ ಸ್ಥೂಲಾ ಪರೋಕ್ಷ ಸಾಧನಿ. ಆರು ಬ್ರಹ್ಮಕಲ್ಪ ಜೀವಾಂತರ್ಗತ ಅಪರೋಕ್ಷ ಸಾಧನಿ. ಇದೇ ಪ್ರಕಾರವೇ ಜ್ಞಾನಯೋಗಿಗಳಾದ ಆಜಾನಜರಿಗೂ ಇರೋದಾಗಿ ಅದೆ. ಹಾಂಗೆ ಇರಲಾಗಿ, ಈ ಆಜಾನಜರಿಗೆ, ಕರ್ಮಜರಿಗೆ, ಹತ್ತುಸಾವಿರದ ನಾನೂರು. ಜನ್ಮಕ್ಕೆ ಬಿಂಬಾಪರೋಕ್ಷ.

ಹ್ಯಾಂಗೆಂದರೆ, ಪೂರ್ವೋಕ್ತ ಕಲ್ಪಸಾಧನಿ ಮಾಡಿ, ಪ್ರಾಂತಭಾಗವಾದ ದಾವ ಕಲ್ಪದಲ್ಲಿ ಅಪರೋಕ್ಷ ಆಗಬೇಕೋ, ಆ ಕಲ್ಪದಲ್ಲಿ, ಭರತಖಂಡದಲ್ಲಿ ಹತ್ತು ಸಾವಿರದ ನಾನೂರು ಮಾನುಷಜನ್ಮಧರಿಸಿ ಸಾಧನವಾಗಿ—ಅಂದರೆ, ಮಾನುಷರು ಸಾಧನ ಮಾಡತಕ್ಕ ಭರತಖಂಡಪ್ರದೇಶದಲ್ಲಿ ಜನ್ಮಗಳ ತಾಳಿ, ವಾಸನಾ ಅಪ ರೋಕ್ಷವಾಗತದೆ. ಹತ್ತುಸಾವಿರದ ನಾನೂರು ಜನ್ಮಗಳ ಧರಿಸೀ ಅಪರೋಕ್ಷ ಆಗಬೇಕೆಂಬೋದು ನೇಮ. ಆದ್ದರಿಂದ, ಮಾನುಷದೇಹ ಧರಿಸೀಆಗಬೇಕು. ಇಷ್ಟೂ ಜನ್ಮಗಳ ವ್ಯತಿರಿಕ್ತ ಅನ್ಯವಾದ ಬ್ರಹ್ಮಕಲ್ಪಗಳ ಸಾಧನ ಎಂಬುದು, ಪೂರ್ವೋಕ್ತ ವಿಭಾದ ಮ್ಯಾರಿಗೆ ದೇವತಾಸಾಧನಿ ಭರತಭೂಮಿಯಲ್ಲಿ ದೇವತಾ

ದೇಹದಿಂದ ಸಾಧನ ಮಾಡತಾರೆ. ವ್ಯಾಸರಾಯಪ್ರಭೃತಿಗಳಾದ ಕರ್ಮಜದೇವತೆಗಳು ವಾಸನಾರೂಪವನ್ನ ಅಪರೋಕ್ಷೀಕರಿಸಿಕೊಂಡು, ನಂತರ ಬಿಂಬಾಪರೋಕ್ಷಿಗಳಾಗಿದ್ದಾರೆ. ಸಾಧನಾತ್ಪೂರ್ವ ಇವರಿಗೆ ಅಪರೋಕ್ಷವಿಲ್ಲ ಮತ್ತು ಈ ಆಜಾನಜ, ಕರ್ಮಜರಿಗೆ ಆದ ನಂತರ ಕಾಲವಿಶೇಷದಲ್ಲಿ ತಿರೋಧಾನವಾಗಿ ಮತ್ತೂ ಆದಿ ಕಾಣತಾ ಇರತದೆ.

ಆದ್ದರಿಂದ, ಅನಾದಿ ಅಪರೋಕ್ಷಾನಂತರ ತಿರೋಧಾನವಾಗಿ, ಪುನಃ ಆದಿ ಕಾಣದೇ ಇರುವ ಅಪರೋಕ್ಷಿಗಳಿಂಬೋ ಅಪರೋಕ್ಷವೇನು, ಪಾಪಕರ್ಮಗಳ ಆಚರಣವೇನೂ, ಅನಾದಿ ಅಪರೋಕ್ಷವಿಲ್ಲ. ಅಪರೋಕ್ಷಾತ್ ಪೂರ್ವದಲ್ಲಿ, ಪಾಪಕರ್ಮ ಆಚರಣೆ ಇಲ್ಲ.ಎಂತ ತಾತ್ಪರ್ಯ. ಪಾಪಕರ್ಮಗಳು ಇಲ್ಲದ ಮ್ಯಾಲೆ, ನರಕಪ್ರಾಪ್ತಿ–ಎಂಬುದು ದಾವಾಗ್ಯೂ ಇಲ್ಲ. ಅಪರೋಕ್ಷಾತ್ ಪೂರ್ವದಲ್ಲಿ, ವೇದಶಾಸ್ತ್ರಗಳಲ್ಲಿ ಇರತಕ್ಕ, ಪ್ರತೀಕದಲ್ಲಿ ಹರಿಸರ್ವೋತ್ತಮ, ವಾಯು ಜೀವೋತ್ತಮ, ತಾರತಮ್ಯ, ಪಂಚಭೇದಕ್ಕೆ ವಿರುದ್ಧವಾಗಿ ತೋರತಕ್ಕ ವಾಕ್ಯಗಳಲ್ಲಿನ ವಿರೋಧಾರ್ಥಗಳ ಪರಿಹರಿಸಿ, ಅದೇ ವಾಕ್ಯಗಳಿಗೆ ಗುಹ್ಯ, ಸಮಾಧಿ ಭಾಷಾಗಳಿಂದ ಈಶ್ವರ ಪರವಾಗಿ, ವೇದೋಕ್ತಾನುಸಾರ ಅರ್ಥ ಮಾಡಿ, ಮಧುಸೂದನಾಮಕ ಪರಮಾತ್ಮನೇ, ಬ್ರಹ್ಮದೇವತೆಗಿಂತಲೂ ಉತ್ತಮರಾದವರು ರಮಾದೇವೇರು, ಈ ರಮಾದೇವೇರಿಗಿಂತಲೂ ಉತ್ತಮನಾದ ವರಮಾತ್ಮ ಎಂತ-ದಾರಢ್ಯಮನಸ್ಸುಳ್ಳವರಾಗಿ, ಭಗವದುಪಾಸನಾಮಾಡತಾ ಸುಖಿಸುವರು, ಇಲ್ಲಿಗೆ ಆಜಾನಜ, ಕರ್ಮಜರ ವಿಚಾರ ಮುಗಿಯಿತು. ॥೧೦॥

## ೨. ಭಾವಪ್ರಕಾಶಿಕೆ

ದೇವಗಂಧರ್ವರು ಮೊದಲು. ಪರ್ಜನ್ಯನವರೆಗೂ ಹೇಳಿದ ಸಾಂಶರಾದ ಜ್ಞಾನ ವಿಜ್ಞಾನಯೋಗಿಗಳಿಗೆ, ಮೇಲಿನ ಪದ್ಯದಲ್ಲಿ ಹೇಳಿದ ಸಾಧನ ಮಾಡುವುದಕ್ಕೆ ಮುಂಚೆ ಅನಾದಿಕಾಲದ ಅಪರೋಕ್ಷವಿಲ್ಲ. ನಿಷೇಧಕರ್ಮಾಚರಣೆ ಇಲ್ಲ.

ನರಕಪ್ರಾಪ್ತಿ ಇಲ್ಲ. ವೇದಶಾಸ್ತ್ರಗಳಲ್ಲಿ ಪರಸ್ಪರ ಬರುವ ವಿರೋಧವಾಕ್ಯಗಳನ್ನು ಪರಿಹರಿಸಿ, ನಿಸ್ಸಂಶಯಜ್ಞಾನದಿಂದ ಹರಿಯೇ ಸರ್ವೋತ್ತಮನೆಂದು ಸ್ಮರಿಸಿ, ಆನಂದ ಪಡುತ್ತಿರುವರು. ॥೧೦॥

## ೩. ಭಾವದರ್ಪಣ

ಸಾಧನ । ನರಕೇತಿ । -"ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನೇತಿ"-ಭಾರತನಿರ್ಣಯೋಕ್ತೇಃ ॥೧೦॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

-'ಸಾಧನಾತ್'-ಇತಿ ॥ ಅಪರೋಕ್ಷಃ ಸಾಮಾನ್ಯರೂಪಃ ॥ ವಕ್ಷ್ಯತೇ ಚೈತತ್ ॥ .'ನರಕ'-ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನ. ॥ ॥೧೦॥

# ಕನ್ನಡಾರ್ಥ

ಸಾಮಾನ್ಯರೂಪವಾದ ಅಪರೋಕ್ಷವೆಂದು ಅರ್ಥ. ಇದನ್ನು ಮುಂದೆ ವಿಶದೀಕರಿಸುವೆವು. ದೇವತೆಗಳಿಗೆ ನರಕವಿಲ್ಲ. ತಮಸ್ಸಂತೂ ಹೇಗಾದರೂ ಆಗುವುದೇ ಇಲ್ಲ. ॥೧೦॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಈ ವಿಜ್ಞಾನಯೋಗಿಗಳಿಗೆ, ಸಾಧನೆಗೆ ಪೂರ್ವದಲ್ಲಿ, ಅನಾದಿಕಾಲ ಅಪರೋಕ್ಷವಿಲ್ಲ. ಪಾಪಕರ್ಮಗಳು ಇಲ್ಲ. ನರಕಪ್ರಾಪ್ತಿ ಮೊದಲೇ ಇಲ್ಲ. ವೇದ

ಶಾಸ್ತ್ರಗಳಲ್ಲಿರುವ ವಿರೋಧಾರ್ಥ ಪೋಂದಿಸಿ, ಶ್ರೀವಿಷ್ಣು ಸರ್ವೋತ್ತಮನೆಂದು ಸಾಧಿಸಿ ಹೇಳುವರು. ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ದೇವಗಂಧರ್ವಾದಾರಭ್ಯ ಪರ್ಜನ್ಯ ಪರ್ಯಂತದ ಸಾಂಶರಾದ ಜ್ಞಾನ ವಿಜ್ಞಾನಯೋಗಿಗಳಾದ ದೇವತಾಗಣಕ್ಕೆ ಸಾಧನಾತ್ಪೂರ್ವ ಅನಾದಿಕಾಲದ ಅಪರೋಕ್ಷವಿಲ್ಲ. ಸಾಧನೆಯಾದನಂತರವೇ ಅಪರೋಕ್ಷಪ್ರಾಪ್ತಿ.

೨. ಅವರಿಗೆ ಪಾಪರೂಪವಾದ ನಿಷೇಧಕರ್ಮಾಚರಣೆ ಇಲ್ಲ. ಕಾರಣಾಂತರಗಳಿಂದ ಒದಗುವ ದೋಷವನ್ನು ಶ್ರೀಹರಿಯು ತನ್ನ ಕೃಪಾವೀಕ್ಷಣದಿಂದ ಪರಿಹರಿಸುವನು. ಪಾಪಕರ್ಮಗಳ ಲೇಪವಿಲ್ಲ.

೩. ಪಾಪಕರ್ಮಗಳ ಫಲವು ನರಕಯಾತನೆ. ಇವರಿಗೆ ಪಾಪಕರ್ಮಗಳ ಲೇಪನವಿಲ್ಲದಿರುವುದರಿಂದ, ನರಕಪ್ರಾಪ್ತಿ ಮೊದಲೇ ಇಲ್ಲ.

**ಸಾಧನೆಯ ವಿವರಣೆ :–**

೧. ವಿಜ್ಞಾನಯೋಗಿಗಳಾದ ಕರ್ಮಜರಾದ ಬಲ್ಯಾದಿ, ಸನಕಾದಿಗಳಿಗೆ ೧೪ ಬ್ರಹ್ಮಕಲ್ಪಸಾಧನೆ. ಇದರಲ್ಲಿ ೭ ಬ್ರಹ್ಮಕಲ್ಪ ಸ್ಥೂಲಾಪರೋಕ್ಷಸಾಧನೆ. ಏಳು ಬ್ರಹ್ಮಕಲ್ಪ ಜೀವಾಂತರ್ಗತ ಅಪರೋಕ್ಷ ಸಾಧನೆ.

೨. ಆಜಾನಜದೇವತೆಗಳಿಗೆ, ಕರ್ಮಜರಿಗೆ ೧೦,೪೦೦ ಜನ್ಮಕ್ಕೆ, ಬಿಂಬಾಪರೋಕ್ಷ. ಭರತಖಂಡದಲ್ಲಿ ಮಾನುಷಜನ್ಮ ತಾಳಿ, ಸಾಧನೆ ಮಾಡುವರು.

೩. ವ್ಯಾಸರಾಜಪ್ರಭೃತಿಗಳಾದ ಕರ್ಮಜದೇವತೆಗಳು ವಾಸನಾ–

ರೂಪವಾದ ಅಪರೋಕ್ಷವನ್ನು ಹೊಂದಿ, ಅನಂತರ ಬಿಂಬಾಪರೋಕ್ಷವನು ಹೊಂದುತ್ತಾರೆ. ಸಾಧನಾತ್ಪೂರ್ವ ಇವರಿಗೆ ಅಪರೋಕ್ಷವಿಲ್ಲ.

೪. ಅಜಾನಜರಿಗೆ ಅಪರೋಕ್ಷವಾದ ನಂತರ, ಕೆಲವು ಕಾಲಪರ್ಯಂತ ಗಳಲ್ಲಿ ತಿರೋಧಾನವಾಗುವುದು. ಮತ್ತೆ ಆದಿ ಕಾಣುವರು. ಈ ಕಾರಣದಿಂದ **ಅನಾದಿ ಅಪರೋಕ್ಷವಿಲ್ಲ**–ಎಂದಿದ್ದಾರೆ ದಾಸರಾಯರು.

೫. ವೇದಶಾಸ್ತ್ರಗಳಲ್ಲಿ ಆಪಾತತಃ ತೋರಿಬರುವ ವಿರುದ್ಧವಾಕ್ಯ ಗಳನ್ನು ಸಮನ್ವಯಕ್ರಮದಿಂದ ಪರಿಹರಿಸಿಕೊಳ್ಳುವರು. ಹರಿಸರ್ವೋತ್ತ– ಮತ್ವ- ವಾಯುಜೀವೋತ್ತಮತ್ವ- ಪಂಚಭೇದ--ತಾರತಮ್ಯಕ್ರಮ- ಜಗತ್ತಿನ- ಸತ್ಯತ್ವ- ಈ ವಿಚಾರಗಳಲ್ಲಿ ಯಥಾರ್ಥಜ್ಞಾನವನ್ನು ಹೊಂದಿರುವರು.

೬. ಸರ್ವಪ್ರಕಾರಗಳಿಂದಲೂ ಮಧುವೈರಿಯಾದ ಮಾಧವನೇ ಸರ್ವೋತ್ತಮನು-ಎಂದು ತಿಳಿದು, ಅದನ್ನು ಸಾಧಿಸಿ ತೋರಿಸುವರು. ಪ್ರಸಕ್ತ- ಪದ್ಯದಲ್ಲಿ, ದಾಸರಾಯರು-**ಸರ್ವೋತ್ತಮನೆಂದು**–ಉತ್ತಮ ಶಬ್ದವನ್ನು ಎರ ಡಾವರ್ತಿ ಪ್ರಯೋಗಿಸಿದ್ದಾರೆ. ಮೊದಲನೆಯ "**ಸರ್ವೋತ್ತಮರು**"–ಎಂದರೆ, ಸರ್ವಜೀವರಿಗೂ ಉತ್ತಮರಾದ ಬ್ರಹ್ಮ–ವಾಯುಗಳಿಂದರ್ಥ. (ಜೀವೋತ್ತ ಮರು). ಅವರಿಗಿಂತ ಉತ್ತಮರು ರಮಾದೇವಿಯರು. ರಮಾಬ್ರಹ್ಮಾದಿಗಳಿ- ಗಿಂತ ಉತ್ತಮೋತ್ತಮನು-ಶ್ರೀಹರಿ. ಈ ರೀತಿ ತಿಳಿದು, ಅಂತರಂಗದಲ್ಲಿ ಉಪಾಸಿಸುತ್ತಾ, ಆನಂದಪಡುವರು.

**ಪ್ರಮಾಣ :–** "ದೇವನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂ ಚ ನೇತಿ"॥

—**ಭಾರತತಾತ್ಪರ್ಯನಿರ್ಣಯವಾಕ್ಯ.** ॥೧೦॥

## ಪದ್ಯ-೧೧

**ಮೂಲ :**

ಸತ್ಯಲೋಕಾಧಿಪನ ಪಿಡಿದು ಶ ।
ತಸ್ಥ ದೇವಗಣಾಂತರೆಲ್ಲರು ।
ಭಕ್ತಿಯೋಗಿಗಳೆಂದು ಕರೆಸುವರಾವ ಕಾಲದಲಿ ॥
ಭಕ್ತಿಯೋಗ್ಯರ ಮಧ್ಯದಲಿ ಸ ।
ದ್ಭಕ್ತಿ ವಿಜ್ಞಾನಾದಿ ಗುಣದಿಂ ।
ದುತ್ತಮೋತ್ತಮು ಬ್ರಹ್ಮ ವಾಯು ವಾಣಿ ವಾಗ್ದೇವಿ ॥೧೧॥

**ಅವತರಣಿಕೆ :**

ಬ್ರಹ್ಮದೇವರಿಂದ ಪ್ರಾರಂಭಿಸಿ, ಧನಪ-ವಿಷ್ವಕ್ಸೇನ-ಪರ್ಯಂತ ಇರುವ ಭಕ್ತಿಯೋಗಿಗಳ ಸಾಧನವಿಚಾರವನ್ನು ತಿಳಿಸುತ್ತಾರೆ. ॥೧೧॥

**ಪ್ರತಿಪದಾರ್ಥ :**

**ಸತ್ಯಲೋಕಾಧಿಪನ ಪಿಡಿದು**— ಸತ್ಯಲೋಕದರಸನಾದ ಶ್ರೀಬ್ರಹ್ಮದೇವರನ್ನು ಆರಂಭಮಾಡಿಕೊಂಡು, **ಶತಸ್ಥ ದೇವಗಣಾಂತರೆಲ್ಲರು** — ಧನಪ-ವಿಷಕ್ಸೇನ-ಇತ್ಯಾದಿ ಶತಸ್ಥರಾದ ದೇವಗಂಧರ್ವರೆಲ್ಲರೂ, **ಆವಕಾಲದಲಿ**— ಸದಾ ಸರ್ವಕಾಲಗಳಲ್ಲಿ, **ಭಕ್ತಿಯೋಗಿಗಳೆಂದು**— ಭಕ್ತಿಯೋಗಿಗಳಾದ ದೇವತೆಗಳೆಂದು, **ಕರೆಸುವರು**— ಕರೆಯಿಸುವರಾಗುತ್ತಾರೆ. **ಭಕ್ತಿಯೋಗ್ಯರ ಮಧ್ಯದಲಿ** —ಅಂತಹ ಭಕ್ತಿಯೋಗ್ಯರಾದ ದೇವತೆಗಳ ಮಧ್ಯದಲ್ಲಿ, **ಸದ್ಭಕ್ತಿ ವಿಜ್ಞಾನಾದಿ ಗುಣದಿಂ**—ಸಮೀಚೀನವಾದ ಭಕ್ತಿ, ಉತ್ತಮವಾದ ಜ್ಞಾನ-ಇತ್ಯಾದಿ ಗುಣಗಳಿಂದ, **ಉತ್ತಮೋತ್ತಮು**— ಉತ್ತಮರಾದ

ರುದ್ರಾದಿಗಳಿಗಿಂತಲೂ ಉತ್ತಮರಾದವರು, **ಬ್ರಹ್ಮ**— ಶ್ರೀಚತುರ್ಮುಖ ಬ್ರಹ್ಮದೇವರು, **ವಾಯು**— ಶ್ರೀವಾಯುದೇವರು, **ವಾಣಿ**—ವಾಗಭಿಮಾನಿಯಾದ (ವೇದಾಭಿಮಾನಿ) ಸರಸ್ವತೀದೇವಿ. **ವಾಗ್ದೇವಿ**—ಭಕ್ತಿಗೆ ಅಭಿಮಾನಿಯಾದ ಭಾರತೀದೇವಿ—ಈ ನಾಲ್ವರು (ಪರಶುಕ್ಲತ್ರಯವರ್ಗದವರು), ರುದ್ರಾದಿಗಳಿಗಿಂತ ಉತ್ತಮರು. ॥೧೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಬ್ರಹ್ಮದೇವರಾರಭ್ಯ ಧನಪ, ವಿಷ್ವಕ್ಸೇನ-ಪರ್ಯಂತ ಭಕ್ತಿಯೋಗಿಗಳ ವಿಚಾರ ಹೇಳುತಾರೆ.

ಸತ್ಯಲೋಕಾಧಿಪನಾದ ಬ್ರಹ್ಮದೇವರನ್ನು ಆರಂಭಮಾಡಿ, ಧನಪ, ವಿಷ್ವಕ್ಸೇನಾದಿ ಶತಸ್ಥದೇವಗಣಾಂತ ಮಧ್ಯರಾದ ದೇವತೆಗಳೆಲ್ಲರೂ ಸದಾ ಸರ್ವಕಾಲದಲ್ಲಿ ಭಕ್ತಿಯೋಗಿಗಳೆಂದು ಕರಸೋವರಾಗತಾರೆ. ಪೂರ್ವೋಕ್ತ ಭಕ್ತಿಯೋಗ್ಯರಾದ ಇವರ ಮಧ್ಯದಲ್ಲಿ, ಸಮೀಚೀನವಾದ ಭಕ್ತಿಯೇನು, ಜ್ಞಾನವೇನು-ಇವೇ ಮೊದಲಾದ ಗುಣಗಳಿಂದ ಉತ್ತಮರಾದ ರುದ್ರಾದಿ ದೇವತೆಗಳಿಗಿಂತಲೂ ಉತ್ತಮರಾದವರು. ಬ್ರಹ್ಮದೇವರು, ವಾಯುದೇವರು, ಸರಸ್ವತೀದೇವೇರು, ಭಾರತೀದೇವೇರು-ಈ ನಾಲ್ವರು ರುದ್ರಾದಿಗಳಿಗಿಂತಲೂ ಜ್ಞಾನ-ಭಕ್ತ್ಯಾದಿಗಳಿಂದ ಉತ್ತಮರು. ಕರ್ಮಪ್ರಾಚುರ್ಯದಿಂದ ಕರ್ಮಯೋಗಿಗಳೆಂತಲೂ, ಜ್ಞಾನ ಪ್ರಾಚುರ್ಯದಿಂದ ಜ್ಞಾನಯೋಗಿಗಳೆಂತಲೂ, ಭಕ್ತಿಪ್ರಾಚುರ್ಯದಿಂದ ಭಕ್ತಿಯೋಗಿಗಳೆಂತಲೂ-ಈ ಪ್ರಕಾರ ಪ್ರಾಚುರ್ಯವಿಶೇಷದಿಂದ, ಅವರರು ಆಯಾ ನಾಮಗಳಿಂದ ಕರೆಸಿದರು. ಸರ್ವರಲ್ಲೂ ಕರ್ಮ, ಜ್ಞಾನ, ಭಕ್ತಿ ಪ್ರಾಚುರ್ಯಾಪ್ರಾಚುರ್ಯದಿಂದ ಅವೆ. ॥೧೧॥

## ೨. ಭಾವಪ್ರಕಾಶಿಕೆ

ಬ್ರಹ್ಮದೇವರ ಮೊದಲು, ಬೃಹತ್ತಾತರಮ್ಯ ಸಂಧಿಯಲ್ಲಿ ಹೇಳಿದ ೪೯ ಮರುದ್ಗಣರು, ದ್ವಾದಶಾದಿತ್ಯರು-ಮೊದಲಾದ ದೇವತೆಗಳ ಪೈಕಿ, ಮೇಲಿನ ಕಕ್ಷಾದಲ್ಲಿ ಸೇರಿದ ದೇವತೆಗಳನ್ನು ಬಿಟ್ಟು-ಉಳಿದವರು ಉಕ್ತಶೇಷಶತರೆಂದು ೧೦೦ ದೇವತೆಗಳ ಕಡೆಯಾಗಿ, ಮಧ್ಯವರ್ತಿಗಳಾದ ಎಲ್ಲಾ ದೇವತೆಗಳೂ ಭಕ್ತಿಯೋಗಿಗಳೆನಿಸುವರು. ಈ ಭಕ್ತಿಯೋಗಿಗಳ ಮಧ್ಯದಲ್ಲಿ, ಬ್ರಹ್ಮದೇವರು, ವಾಯುದೇವರು, ಸರಸ್ವತೀದೇವಿಯರು, ಭಾರತಿದೇವಿಯರು-ಇವರು ಸದ್ಭಕ್ತಿಜ್ಞಾನಾದಿಗಳಿಂದ ಉತ್ತಮೋತ್ತಮರೆನಿಸುವರು. ॥೧೧॥

## ೩. ಭಾವದರ್ಪಣ

ಮನಸೋತ್ತಮಾದಿ ಸಮಸ್ತಮುಕ್ತಿಯೋಗ್ಯಚೇತನರಲ್ಲಿ ಸದ್ಭಕ್ತಿಜ್ಞಾನಾದಿಗುಣದಿಂದ ಬ್ರಹ್ಮವಾಯು, ವಾಣಿ, ಭಾರತಿ–ಈ ನಾಲ್ವರೂ ಬಹಳ ಉತ್ತಮರೆಂದು ಹೇಳುತ್ತಾರೆ । ಸತ್ಯ. ॥೧೧॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಭಕ್ತಿಯೋಗಾನ್ ಆಹ-'ಸತ್ಯ'-ಇತಿ ॥-ಶತಸ್ಥ ಪದಂ ಕರ್ಮಯೋಗಿಪರಮ್ ॥ ಉಪಲಕ್ಷಣಯಾ ಕರ್ಮಜಾದಿ ಬ್ರಹ್ಮಾಂತಾಃ ಭಕ್ತಿಯೋಗಾಃ ಇತ್ಯರ್ಥಃ ॥ ಆದಿಪದೋಕ್ತಾ ಶತಸ್ಥಾಃ ಮಿತ್ರ ಜಗನ್ಮಿತ್ರ ಭೃಗ್ವಾದಿ ನಾರದ ವರುಣ ವಿವಸ್ವತ್ ಪ್ರವಹ ಸುರಗುರ್ವಾದ್ಯಹಂ ಪ್ರಾಣ ಇಂದ್ರ ಕಾಮ ಸೌಪರ್ಣಿ ಷಟ್ ಕೃಷ್ಣಮಹಿಲಾಃ ಶೇಷಾದಿತ್ರಿಕಂ ಏತದಧಿಕೌ ಅಜೇರೌ ಸ ಭಾರ್ಯೌ ॥ ತತ್ರ ಸ ಭಾರ್ಯೌ ಬ್ರಹ್ಮವಾಯೂ ಮುಖ್ಯ ಭಕ್ತಿಯೋಗೌ ॥ ಬ್ರಹ್ಮವಾಯ್ವೋಃ ಕಸಾಧನಂ ವಕ್ತುಂ ಉಪೋದ್ಘಾತಮಾಹ–'ಸತ್ಯ'.-ಇತಿ. ॥೧೧॥

## ಕನ್ನಡಾರ್ಥ

ಭಕ್ತಿಯೋಗವುಳ್ಳವರನ್ನು ನಿರೂಪಿಸುತ್ತಾರೆ—'ಸತ್ಯ'-ಎಂಬೀ ಪದ್ಯದಿಂದ. 'ಶತಸ್ಥ'-ಪದಕ್ಕೆ-ಕರ್ಮಯೋಗಿಗಳೆಂದು ಅರ್ಥ. ಆದರೂ, ಕರ್ಮಜರನ್ನಾರಂಭಿಸಿ, ಬ್ರಹ್ಮನವರೆಗಿನವರು ಭಕ್ತಿಯೋಗಿಗಳೆಂದು ಅರ್ಥ. ಅದಿ ಪದೋಕ್ತ ಶತಸ್ಥರು ಯಾರೆಂದರೆ–ಮಿತ್ರ, ವಿಶ್ವಾಮಿತ್ರ, ಭೃಗು–ಮುಂತಾದವರು; ನಾರದ, ವರುಣ, ವಿವಸ್ವತ್, ಪ್ರವಹ, ಬೃಹಸ್ಪತಿ. ಅಹಂಕಾರಿಕ ಪ್ರಾಣ, ಇಂದ್ರ, ಕಾಮ. ಸೌಪರ್ಣಿ, ಆರು ಕೃಷ್ಣಮಹಿಷಿಯರು; ಗರುಡ, ಶೇಷ, ರುದ್ರ, ಈ ಮೂವರು ಇವರು. ಇವರಿಗೆ ಅಧಿಕರು ಪತ್ನೀಸಹಿತರಾದ ಬ್ರಹ್ಮವಾಯುಗಳು; ಸರಸ್ವತೀ, ಭಾರತೀಯುಕ್ತರಾದ ಬ್ರಹ್ಮವಾಯುಗಳು. ಅವರ ಸಾಧನವನ್ನು ನಿರೂಪಿಸುವುದಕ್ಕೋಸ್ಕರ ಉಪೋದ್ಘಾತವನ್ನು ರಚಿಸಿ, ಹೇಳುತ್ತಾರೆ–'ಸತ್ಯ' ಎಂಬ ಪದ್ಯದಿಂದ. ॥೧೮॥

### ಇ ಶ್ರೀಗುರುಹೃದಯಪ್ರಕಾಶಿಕೆ

ಸತ್ಯಲೋಕಾಧಿಪತಿ ಬ್ರಹ್ಮದೇವರು ಮೊದಲು ಮಾಡಿ, ಸೋಮಪಾನಾರ್ಹರೆಂಬ ನೂರು ಜನ ದೇವತೆಗಳವರೆಗೆ, ಭಕ್ತಿಯೋಗಿಗಳೆಂದು ಸದಾ ಕರೆಸುವರು. ಈ ಭಕ್ತಿಯೋಗ್ಯರ ಮಧ್ಯದಲ್ಲಿ, ಸದ್ಭಕ್ತಿ ವಿಜ್ಞಾನವೆಂಬ ಸಾಕ್ಷಾದ್ದರ್ಶನ ಮೊದಲಾದ ಗುಣಗಳಿಂದ, ಉತ್ತಮೋತ್ತಮರು ವಾಣೀ– ಎಂಬ ಭಾರತೀ, ವಾಗ್ದೇವಿ–ಎಂಬ ಸರಸ್ವತೀ, ವಾಯು-ಬ್ರಹ್ಮರುಗಳು.

ಶತಸ್ಥರೆಂದರೆ–ಪ್ರಧಾನವಾಯು ಒಂದು, ತ್ವಗಭಿಮಾನಿ ಅಹಂಕಾರಿಕ ಪ್ರಾಣ ಒಂದು, ಪ್ರವಹವಾಯು ಒಂದು ಅಂತು ಮೂರು. ವಸುಗಳಲ್ಲಿ ಅರ್ಕ ಒಂದು, ಅಗ್ನಿ ಒಂದು. ಅಂತು, ಎರಡು. ಪ್ರಧಾನ ರುದ್ರ ಒಂದು. ದ್ವಾದಶಾದಿತ್ಯರಲ್ಲಿ ವಿವಸ್ವಾನ್ ಒಂದು, ಪರ್ಜನ್ಯ ಒಂದು, ಮಿತ್ರ ಒಂದು, ವರುಣ ಒಂದು. ಉರುಕ್ರಮ ಒಂದು. ಅಂತು ಆರು. ಗುರು ಒಂದು, ಮ್ಯಲೋ

ಕಾಭಿಮಾನಿ ಭಾರತಿ ಒಂದು, ಪಿತೃಗಳಲ್ಲಿ ಯಮ. ಅಂತು, ಹದಿನೈದು ಜನ ಹೋಗುತ್ತಾ ಮಿಕ್ಕ ಎಂಭತ್ತೈದು ಜನ ದೇವತೆಗಳು ಶೇಷಶತಸ್ಥರೆನಿಸುವರು. ಒಟ್ಟು ಈ ನೂರು ಶತಸ್ಥ ದೇವತೆಗಳು, ಸೋಮಪಾನಾರ್ಹರು— ಎಂತ ತಿಳಿಯ ಬೇಕು. ॥೧೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಸತ್ಯಲೋಕಕ್ಕೆ ಪ್ರಭುವು ಚತುರ್ಮುಖಬ್ರಹ್ಮದೇವರು. ಋಜುಗಣೋತ್ತಮರು. ಜೀವೋತ್ತಮರು. ಶ್ರೀಮನ್ನಾರಾಯಣನ ಜ್ಯೇಷ್ಠ ಪುತ್ರರು.

೨. ಶತಸ್ಥ ದೇವಗಣ—

ಸೋಮಪಾನಾರ್ಹರಾದ ದೇವತೆಗಳು ೧೦೦ ಮಂದಿ, ಇವರೆಲ್ಲಾ ೧೪ನೆಯ ಪಕ್ಷಕ್ಕೆ ಸೇರಿದವರು. ತದಸ್ಯ ಉತ್ತಮಪಕ್ಷದಲ್ಲಿ ಸೇರಿದವರು ಕೆಲವರು. ಕಡಿಮೆ ಕಕ್ಷಾಪನ್ನವರು ಕೆಲವರು.

ಅವರ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ವರ್ಗ | ೧೮ ನೆಯ ಕಕ್ಷ | ಉತ್ತಮ ಕಕ್ಷ | ಅಧಮ ಕಕ್ಷ | ಒಟ್ಟು |
|---|---|---|---|---|---|
| ೧. | ಆದಿತ್ಯರು | ೫ | ೬ | ೧. ಪರ್ಜನ್ಯನಾಯಕ ಸೂರ್ಯ | ೧೨ |
| ೨. | ಮರುತ್ತರು | ೪೭ | ೧. ಪ್ರವಹವಾಯು<br>೨. ಪ್ರಧಾನ ವಾಯು<br>೩. ಅಹಂಕಾರಿಕ ಪ್ರಾಣ | — | ೪೯+೧ = ೫೦ |
| ೩. | ವಸುಗಳು | ೭ | ೧. ಅಗ್ನಿ | — | ೮ |
| ೪. | ರುದ್ರರು | ೧೦ | ೧. ಕೈಲಾಸಪತಿ ರುದ್ರ | — | ೧೧ |
| ೫. | ವಿಶ್ವೇದೇವತೆಗಳು | ೧೦ | — | — | ೧೦ |
| ೬. | ಋಭು | ೧ | — | — | ೧ |
| ೭. | ಅಶ್ವಿನೀದೇವತೆಗಳು | ೧. ನಾಸತ್ಯ ೨. ದಸ್ರ | — | — | ೨ |
| ೮. | ಇತರೆ | — | ದ್ಯಾವಾ–ದ್ಯು ಲೋಕಾಭಿಮಾನಿ ಭಾರತೀ | ಪೃಥ್ವೀ | ೨ |
| ೯. | ಪಿತೃದೇವತೆಗಳು | — | ೧. ಯಮ ೨. ಸೋಮ | ಕವ್ಯವಹ ಪಿತೃದೇವತೆ | ೩ |
| ೧೦. | ಇತರೆ | — | ೧. ಬೃಹಸ್ಪತೀ | — | ೧ |
| | ಒಟ್ಟು ಸಂಖ್ಯಾ | ೮೨ | ೧೫ | ೩ | ೧೦೦ |

| | | |
|---|---|---|
| ೧. ಉತ್ತಮ ಕಕ್ಷಾಪನ್ನರ ಸಂಖ್ಯೆ | = | ೧೫ |
| ೨. ೧೮ನೆಯ ಕಕ್ಷ | = | ೮೨ |
| ೩. ಅಧಮ ಕಕ್ಷಾಪನ್ನರ ಸಂಖ್ಯೆ | = | ೩ |
| ಒಟ್ಟು ಶತಸ್ಥರ ಸಂಖ್ಯೆ | = | ೧೦೦ |

ಈ ೧೦೦ ಮಂದಿಯಲ್ಲಿ, ಉತ್ತಮಕಕ್ಷಾಪನ್ನರಾದ ೧೫ ಮಂದಿ ಹೋಗ ಲಾಗಿ, ಉಳಿದ ೮೫ ಮಂದಿಗೆ **ಶೇಷಶತಸ್ಥ**-ರೆಂದು ಹೆಸರು.

ಅಂದರೆ, ಬ್ರಹ್ಮದೇವರಿಂದ ಪ್ರಾರಂಭಿಸಿ, ಶತಸ್ಥ ದೇವಗಣಕ್ಕೆ ಸೇರಿ ದವರ ಪರ್ಯಂತ ಇರುವ ದೇವತಾಗಣ ಸದಾ ಸರ್ವಕಾಲಗಳಲ್ಲಿ **ಭಕ್ತಿ ಯೋಗಿಗಳೆಂದು**—ಪ್ರಖ್ಯಾತರಾಗಿದ್ದಾರೆ.

೩, ಇಂತಹ ಭಕ್ತಿಯೋಗಿಗಳಾದ ದೇವತಾಸಮೂಹದ ಮಧ್ಯೆ ನಾಲ್ಕುಮಂದಿ ಸಮಚೀನವಾದ ಭಕ್ತಿ ಮತ್ತು ಸುಜ್ಞಾನಾದಿಗಳಿಂದ ಉತ್ತ ಮೋತ್ತಮರಾದವರೆಂದು ಕರೆಯಿಸುವರು.

ಆ ನಾಲ್ಕುಮಂದಿ ಯಾರೆಂದರೆ :-

೧, ಚತುರ್ಮುಖ ಬ್ರಹ್ಮದೇವರು. (ಸರಸ್ವತೀರಮಣರು)
೨. ಶ್ರೀವಾಯುದೇವರು (ಭಾರತೀರಮಣರು)
೩. ವಾಣಿ-ಎಂಬ ಹೆಸರಿನ ಶ್ರೀಸರಸ್ವತೀದೇವಿ
೪. ವಾಗ್ದೇವಿ-ಎಂದೆನಿಸುವ ಶ್ರೀಭಾರತೀದೇವಿ.

ಈ ನಾಲ್ವರು ಪರಶುಕ್ಲತ್ರಯರು. ಅಂದರೆ, ಅತಿರೋಹಿತ ವಿಮಲ ವಿಜ್ಞಾನಿಗಳು. ಯಾವ ಕಾರಣಕ್ಕೂ ಕಲ್ಯಾವೇಶವಿಲ್ಲ. ಭಗವದ್ವಿಷಯದಲ್ಲಿ ಸಮಚೀನ ಭಕ್ತಿ-ಜ್ಞಾನವನ್ನು ಉಳ್ಳವರು. ವೇದಗಳಿಗೆ ಮುಖ್ಯಾಭಿಮಾನಿ

ಶ್ರೀರಮಾ. ಅನಂತರ ಸರಸ್ವತೀ ಮತ್ತು ಭಾರತೀದೇವಿಯರು ಅವಾಂತರಾಭಿಮಾನಿಗಳು. ವಾಗ್ರೂಪವಲ್ಲಿ ವೇದಗಳು ಅಭಿವ್ಯಕ್ತವಾಗುವುವು. ಇದರಿಂದ, ವಾಗಭಿಮಾನಿಯಾದ್ದರಿಂದ, ಶ್ರೀಸರಸ್ವತಿಗೆ–**ವಾಣಿ**-ಎಂತ ನಾಮ.

ಭಕ್ತಿಗೆ ಅಭಿಮಾನಿಗಳು ಶ್ರೀಭಾರತೀದೇವಿಯರು. ಭಕ್ತ್ಯತಿಶಯದಿಂದ ಶ್ರೀಹರಿಯ ಮಹಾಮಹಿಮೆಗಳನ್ನು ಸ್ತೋತ್ರರೂಪದಲ್ಲಿ ಹಾಡಲು, ಭಕ್ತರಿಗೆ ಅನುಗ್ರಹಿಸುವವಳು–ಭಾರತೀದೇವಿಯಾದ್ದರಿಂದ, ಅವರಿಗೆ **ವಾಗ್ದೇವಿ**–ಎಂದು ಕರೆದಿದ್ದಾರೆ. ಎರಡೂ ಏಕಾರ್ಥವನ್ನು ಹೊಂದಿದ್ದರೂ, ಕಾರ್ಯಾಭಿವ್ಯಕ್ತಿ ಬೇರೆ ಬೇರೆ. ॥೧೧॥

## ಪದ್ಯ-೧೨

**ಮೂಲ :**

**ಋಜುಗಣಕೆ ಭಕ್ತ್ಯಾದಿಗುಣ ಸಾ।**
**ಹಜವೆನಿಸುವುವು ಕ್ರಮದಿ ವೃದ್ಧ್ಯಾ।**
**ಬ್ಜಜಪದವಿ ಪರ್ಯಂತ ಬಿಂಬೋಪಾಸನವು ಅಧಿಕ॥**
**ವೃಜಿನವರ್ಜಿತರಿವರೊಳಗೆ ತ್ರಿಗು।**
**ಣಜ ವಿಕಾರಗಳಿಲ್ಲವೆಂದಿಗು।**
**ದ್ವಿಜ ಫಣಿಪ ಮೃಡ ಶಕ್ರ ಮೊದಲಾದವರೊಳಿರುತಿಹುದು**
**॥೧೨॥**

**ಅವತರಣಿಕೆ :**

ಪ್ರಸಕ್ತಪದ್ಯದಿಂದ ಋಜುಗಣದವರ ವಿಚಾರವನ್ನು ತಿಳಿಸುತ್ತಾರೆ. ॥೧೨॥

**ಪ್ರತಿಪದಾರ್ಥ :**

**ಋಜುಗಣಕೆ :**— ವರ್ತಮಾನ ಬ್ರಹ್ಮಕಲ್ಪದಲ್ಲಿ ಬ್ರಹ್ಮಪದಯೋಗರಾದ ೨೦೦ ಮಂದಿ ಋಜುಗಣಕ್ಕೆ ಸೇರಿದವರಿಗೆ, (ಋಜುಗಣಸ್ಥರು) **ಭಕ್ತ್ಯಾದಿ**—ಶ್ರೀಹರಿಯಲ್ಲಿ ನಿರತಿಶಯ, ನಿರ್ವ್ಯಾಜ್ಯ ಭಕ್ತಿ ಏನು, ಉತ್ತಮ ಮಟ್ಟದ ಜ್ಞಾನವೇನು, ಆದರ್ಶವಾದ ವೈರಾಗ್ಯಭಾಗ್ಯವೇನು – ಇತ್ಯಾದಿ **ಗುಣ**—ಗುಣಸಮೂಹಗಳು, **ಸಾಹಜವೆನಿಸುವುವು**— ಸೃಷ್ಟಿಗೆ ಬಂದ ಕೂಡಲೇ. ಅಪ್ರಯತ್ನವಾಗಿ (ಸಾಧನೆ ಬೇಕಿಲ್ಲ) ಸ್ವಾಭಾವಿಕವಾಗಿ ಇರುವುವು. **ಕ್ರಮದಿ**—ಕ್ರಮೇಣ ಪ್ರತಿಕಲ್ಪದಲ್ಲೂ, **ಅಬ್ಜಜಪದವಿಪರ್ಯಂತ**—ಬ್ರಹ್ಮಪದವಿಪರ್ಯಂತವಾಗಿ, **ವೃದ್ಧಿ**—ವೃದ್ಧಿಯಾಗುತ್ತವೆ. (ಇತರ ರುದ್ರಾದಿಗಳಂತೆ ಮಧ್ಯೆ ತಿರೋಧಾನವಿಲ್ಲ.) **ಬಿಂಬೋಪಾಸನವು**—ಹೃದಯಾಕಾಶಗತಬಿಂಬನ ಉಪಾಸನವು, ಸೃಷ್ಟರಾಗೋಣವೇ ಆರಂಭವಾಗುವುದು. **ಅಧಿಕ**—ತಿರೋಧಾನರಹಿತವಾಗಿ ಕ್ರಮೇಣ ಅಧಿಕವಾಗುತ್ತಾ ಹೋಗುವುದು. **ವೃಜಿನವರ್ಜಿತರು**— ಅಸುರಾವೇಶ, ಅಜ್ಞಾನ-ಇತ್ಯಾದಿ ದೋಷಗಳಿಂದ ಸದಾ ರಹಿತರು. ಮೂಲದಲ್ಲಿಯೂ, ಅವತಾರದಲ್ಲೂ ಪಾಪವರ್ಜಿತರು. ಶುದ್ಧಾತ್ಮರು. **ಇವರೊಳಗೆ**— ಈ ಋಜುಗಣಸ್ಥರಲ್ಲಿ, **ತ್ರಿಗುಣಜ**—ತ್ರಿಗುಣಾತ್ಮಕವಾದ ಲಿಂಗದೇಹದಿಂದ ಉಂಟಾಗುವ, **ಎಂದಿಗೂವಿಕಾರಗಳಿಲ್ಲ**-ಯಾವ ಕಾಲಕ್ಕೂ ಯಾವ ವಿಕಾರಾದಿ ದೋಷಗಳೂ ಇಲ್ಲ. (ಗುಣಜ ಕರ್ಮಲೇಪ ಇವರಿಗಿಲ್ಲ.) ಅವರಿಗೆ ಸರ್ವವೂ ಪುಣ್ಯಕರ್ಮಗಳೇ ಆಗಿವೆ. **ದ್ವಿಜ**—ಇವರಿಗೆ ವ್ಯತಿರಿಕ್ತರಾದ ಗರುಡದೇವರು, **ಫಣಿಪ**—ಶೇಷದೇವರು, **ಮೃಡ**—ರುದ್ರದೇವರು, **ಶಕ್ರ**—ಇಂದ್ರದೇವರು—**ಮೊದಲಾದವರೊಳು**—ಮೊದಲಾಗಿ ಶತಸ್ಥದೇವತೆಗಳ ಪರ್ಯಂತ, **ಇರುತಿಹವು**— ಅಪರೋಕ್ಷಾನಂತರ, ತಿರೋಧಾನ, ಅಸುರಾವೇಶ ತ್ರಿಗುಣಜನ್ಯವಾದ ವಿಕಾರಗಳು ಅಜ್ಞಾನ—ಇವು ಯಾವತ್ತೂ ಇರುತ್ತವೆ. ॥೧೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ವಿಚಾರ ಹೇಳತಾರೆ.

ವರ್ತಮಾನ ಬ್ರಹ್ಮಕಲ್ಪದಲ್ಲಿ ಸೃಷ್ಟಿಗೆ ಬಂದಿರುವ ಬ್ರಹ್ಮಪದಯೋಗ್ಯರಾದ ಋಜುಗಣ ಇನ್ನೂರು ಮಂದಿ ಎಂದರೆ, ಪ್ರತಿಬ್ರಹ್ಮಕಲ್ಪಕ್ಕೂ ಸೃಷ್ಟಿಗಾಗ ತಕ್ಕವರು ಒಬ್ಬರೇವೆ. ಆದರೆ, ಇನ್ನೂರು ಮಂದಿ-ಏಕಕಾಲಕ್ಕೆ ದಾವಾಗ ಬಂದರೆಂದರೆ, ಅನಾದಿಯಿಂದ ಇನ್ನೂರು ಮಂದಿ ಇದ್ದಾರೆ. ಆ ಬಂದ ಕ್ರಮ ಈಶ್ವರನೇ ಬಲ್ಲ. ಯದ್ಯಪಿ, ಪ್ರತಿಬ್ರಹ್ಮಕಲ್ಪಕ್ಕೂ ಇನ್ನೂರು ಮಂದಿ ಇರ್ತಾರೆ. ಅದರಲ್ಲಿ ಸೇರಿದ ಬ್ರಹ್ಮದೇವರು ಮುಕ್ತರಾದರೆ, ಇನ್ನೂರಕ್ಕೆ ಕಡಿಮೆ ಆಗತದೆ. ಕಡಿಮೆ ಬಿದ್ದ ಒಬ್ಬ ಋಜುವನ್ನು ಅಸೃಜ್ಯರಾಶಿಯಿಂದ ತೆಗೆದು ಸೃಷ್ಟಿಗೆ ತಂದು, ಯಥಾಪ್ರಕಾರ ಇನ್ನೂರ ಮಂದಿ ಪೂರ್ತಿಮಾಡತಾನೆ. ಈ ಪ್ರಕಾರವೇ, ದೇವತಾಗಣರಾದ ರುದ್ರಾದಿ ದೇವಗಂಧರ್ವಾಂತವರಿಗೂ ಇದೇ ನೇಮ. ಪ್ರಕೃತ ಪೂರ್ವೋಕ್ತ ಪ್ರಕಾರ ಇರತಕ್ಕ ಋಜುಗಣರಾದ ಬ್ರಹ್ಮಪದಕ್ಕೆ ಯೋಗ್ಯರಾದ ಇನ್ನೂರು ಮಂದಿಗೆ ಭಕ್ತಿಯೇನು, ಜ್ಞಾನವೇನು, ವಿರಕ್ತಿಯೇನು-ಇವು ಯಾವತ್ತೂ ಗುಣಗಳು ಸೃಷ್ಟರಾಗೋಣವೇ ಅಪ್ರಯತ್ನದಿಂದ ಸಹಜವಾಗಿ ಇರೋವಾಗತವೆ. ರುದ್ರಾದಿಗಳಿಗೆ ಜ್ಞಾನ ಭಕ್ತಿ ವೈರಾಗ್ಯಗಳು-ಗುರೂಪದೇಶದಿಂದ ಸಾಧ್ಯವು. ಬ್ರಹ್ಮಾದಿ ಋಜುಗಳಿಗೆ ಸಹಜವಾಗಿ ಇದ್ದದ್ದನ್ನೇ ಗುರುಮುಖದಿಂದ ಉಪದೇಶ ತೆಗೆದುಕೊಳ್ಳತಾರೆ. ಈ ಋಜುಗಳ ಸ್ವಜವಾದ ಜ್ಞಾನ ಭಕ್ತಿ ವೈರಾಗ್ಯಗಳು ರುದ್ರಾದಿಗಳೋಪಾದಿ ತಿರೋಧಾನವಿಲ್ಲದೆ, ಸೃಷ್ಟಿಕಾಲದಲ್ಲಿ ಇದ್ದದ್ದು, ಕ್ರಮವಾಗಿ ಅಂತ್ಯಪದವಾದ ಬ್ರಹ್ಮಪದವಿ ಪರಿಯಂತ ವೃದ್ಧಿ ಆಗತಾ ಬರತವೇ ಹೊರತು, ರುದ್ರಾದಿಗಳೋಪಾದಿಯಲ್ಲಿ ಮಧ್ಯೇ ತಿರೋಧಾನವಾಗೋದಿಲ್ಲ. ಮತ್ತು ಇವಲ್ಲದೆ, ಹೃದಯಾಕಾಶದಲ್ಲಿ ಬಿಂಬೋ

ಪಾಸನೆ ಎಂಬುದು ಸೃಷ್ಟಿರಾಗೋಣವೇ ಆರಂಭ ಮಾಡತಾರೆ. ಆ ಉಪಾಸನೆಕ್ಕೆ ತಿರೋಧಾನವಿಲ್ಲ. ಅಧಿಕವಾಗತಾ ಬರತದೆ. ಅಸುರಾವೇಶ ಅಜ್ಞಾನಾದಿ ದೋಷವರ್ಜಿತರು. ಮೂಲಾವತಾರದಲ್ಲಿ ಪಾಪವರ್ಜಿತರು. ಈ ಋಜು ಗಣದೊಳಗೆ ಸರ್ವರಿಗೂ ತ್ರಿಗುಣಾತ್ಮಕಲಿಂಗದೇಹವದೆ. ಆ ಗುಣಗಳಿಂದ ಜನಿತವಾಗಿ ವಿಕಾರವಿಲ್ಲ. ದೋಷಗಳ ಜನನವೂ ಇಲ್ಲ. ಎಲ್ಲಾನೂ ಪುಣ್ಯ ಕರ್ಮಗಳಾಗೇ ಇರತವೆ. ಲಿಂಗಭಂಗವಾಗೋವರಿಗೂ ಮಧ್ಯಕಾಲಗಳಲ್ಲಿ ದಾವಾಗ್ಯೂ ತ್ರಿಗುಣಜವಿಕಾರವಿಲ್ಲ. ಇವರ ವ್ಯತಿರಿಕ್ತರಾದ ಗರುಡದೇವರು, ಶೇಷದೇವರು, ರುದ್ರದೇವರು, ಇಂದ್ರದೇವರು-ಮೊದಲಾಗಿ ಶತಸ್ಥದೇವತೆ ಗಳ ಪರಿಯಂತ ದೇವತೆಗಳೊಳು, ಅಪರೋಕ್ಷಾನಂತರ ತಿರೋಧಾನವೇನು, ಅಸುರಾವೇಶವೇನು, ತ್ರಿಗುಣಜವಿಕಾರವೇನು. ಅಜ್ಞಾನವೇನು- ಇವು ಯಾವತ್ತೂ ಇರತವೆ. ಬ್ರಹ್ಮದೇವರಾರಭ್ಯ ಶತಸ್ಥರವರೆಗೆ ಮುಖ್ಯತಾತ್ತ್ವಿಕರು, ಕರ್ಮಜರು ಅಮುಖ್ಯತಾತ್ತ್ವಿಕರು, ಆಜಾನಜರು ಅತಾತ್ತ್ವಿಕರು-ಎಂತ ದೇವತೆ ಗಳೊಳಗೆ ಮೂರು ವಿಧ ಇರತದೆ. ॥೧೨॥

## ೨. ಭಾವಪ್ರಕಾಶಿಕೆ

೧೦೦ ಕಲ್ಪಸಾಧನೆಯಿಂದ ಬ್ರಹ್ಮಪದವಿಯನ್ನು ಹೊಂದುವ ಯೋಗ್ಯತೆ ಉಳ್ಳವರು ಋಜುಗಣದವರು; ಇವರಿಗೆ ಭಕ್ತ್ಯಾದಿಗುಣಗಳು ಅಪರೋಕ್ಷವೂ ಅನಾದಿಕಾಲದಿಂದಿರುವುದು. ಕ್ರಮವಾಗಿ ಕಲ್ಪಸಾಧನವಾಗುತ್ತಾ, ಆಗುತ್ತಾ, ಭಕ್ತ್ಯಾದಿಗಳು ಬಿಂಬೋಪಾಸನೆ-ಮೊದಲಾದವುಗಳು ಹೆಚ್ಚುತ್ತಾ ಬಂದು, ಬ್ರಹ್ಮಪದವಿಯನ್ನು ಹೊಂದುವಾಗ ಪೂರ್ಣವಾಗುವದು. ಈ ಋಜಗಣ ದವರಿಗೆ ಪಾಪ ಸಂಬಂಧವು ಲೇಶವೂ ಇರುವುದಿಲ್ಲ. ಸತ್ವಾದಿ ಪ್ರಾಕೃತಿಗುಣ ಜನ್ಯವಾದ ಯಾವ ವಿಧವಿಕಾರಗಳೂ ಇರುವುದಿಲ್ಲ. ಈ ವಿಕಾರಾದಿಗಳು ಗರುಡ, ಶೇಷ, ರುದ್ರ, ಇಂದ್ರ-ಮೊದಲಾದ ದೇವತೆಗಳಲ್ಲಿರವುವು. ಋಜುವೋನಾಮ ಯೇದಾವಾಃ ಯೋಗ್ಯಾಬ್ರಹ್ಮಪದಸ್ಯತು"- ಎಂಬೀ ಮೊದಲಾದ ಭಾಗವತ

ತಾತ್ಪರ್ಯ ವಚನಗಳಿಂದ ಬ್ರಹ್ಮಪದವಿಯು ಈ ಋಜುಗಣದವರ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ. ॥೧೨॥

### ೩. ಭಾವದರ್ಪಣ

ಋಜುಗಣ। "ಅನಾದಿಕಾಲತಃ ಸರ್ವದೋಷಹೀನಾ ಗುಣಾಧಿಕಾಃ। ಕ್ರಮಾತ್ ಪ್ರವರ್ಧಮಾನಾಸ್ಯುರಾಮುಕ್ತೇಸ್ತು ತತೋ ವ್ಯಯಃ। ಅಪರೋಕ್ಷಂಚ ಪೂರ್ಣಸ್ಯಾತ್ತೇಷಾಂ ಜ್ಞಾನಂ ಸದೈವಹೀತಿ" – ಸತತ್ವರತ್ನಮಾಲೋಕ್ತೇಃ ॥೧೨॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಋಜುಸ್ವರೂಪಂ ಆಹ-"ಋಜು" ಇತಿ॥ 'ಸ್ವಾಭಾವಿಕ'-ಅತಿರೋಹಿತಃ ಕ್ರಮ ಕ್ರಮೇಣ ವರ್ಧಮಾನಮಾಮುಕ್ತೇಃ॥ 'ಜಂಬಿ–ಯಾವತ್ ಜ್ಞಾನಂ ವಾಯುದೇವಸ್ಯ ತಾವತ್ ಜ್ಞಾನಂ ಋಜೂನಾಮ್॥ ಕ್ರಮೇಣೈಷಾಂ ಜ್ಞಾನವತಾಂ ಋಜೂನಾಂ ಅಸ್ಪಷ್ಟತಾರೂಪಃ ಜ್ಞಾನಗತಃ ವಿಶೇಷಃ॥ 'ವೃಜಿನ'— ಪರಶುಕ್ಲತ್ರಯವತ್ ಇತ್ಯುಕ್ತೇಃ॥ ವಿಶೇಷಸ್ತು ಮಾರುದ್ವಿಲಾಸೇ॥ 'ವಿಕಾರಃ'-ಕ್ರೋಧಾದಿಃ॥ 'ದ್ವಿಜೇತಿ'–'ವಿಭಾಧತೇಸ್ಮಾನ್ನಾ'-ಇತ್ಯುಕ್ತೇಃ ॥೧೨॥

## ಕನ್ನಡಾರ್ಥ

ಋಜುಗಳ ಸ್ವರೂಪವನ್ನು ಹೇಳುತ್ತಾರೆ–'ಋಜು'-ಈ ಪದ್ಯದಿಂದ. 'ಸಹಜ'-ಸ್ವಾಭಾವಿಕ. ತಿರೋಧಾನವನ್ನು ಹೊಂದಲಾರದು. 'ಕ್ರಮದಿ'-ಋಜುಗಳ ಜ್ಞಾನವು ಮುಕ್ತಿಯುವರೆಗೆ ಬೆಳೆಯುವಂತಹುದು.

'ಬಿಂಬ'-ಹೇ ವಿಷ್ಣುವೇ! ನನಗಿರುವಷ್ಟು ಜ್ಞಾನವು ವಾಯುದೇವನಿಗೂ ಇರುತ್ತದೆ. ಅವನಿಗಿರುವ ಬಿಂಬಜ್ಞಾನವು ನನಗೂ ಇದೆ. ಋಜುಗಳಿಗೂ ಆ ಜ್ಞಾನವು ಇರುತ್ತದೆ" ಹೀಗೆ, ಋಜುಗಳ ಬಗ್ಗೆ ಪ್ರಮಾಣಗಳಿವೆ. ಈ ಜ್ಞಾನವುಳ್ಳ ಋಜುಗಳಲ್ಲಿ-'ಅಸ್ಪಷ್ಟತೆ' ಎಂಬುದು ಜ್ಞಾನದಲ್ಲಿರುವ ವಿಶೇಷ. 'ವೃಜಿನ' ವರ್ಜಿತರು. ಯಾಕೆಂದರೆ, ಇವರು ಪರಶುಕ್ಲತ್ರಯರಲ್ಲಿ ಸೇರಿದವರು.ಎಂದು ಪ್ರಮಾಣಗಳಲ್ಲಿ ಹೇಳಲಾಗಿದೆ. ಹೆಚ್ಚಿನ ವಿವರಗಳನ್ನು 'ಮರುದ್ವಿಲಾಸ'ವೆಂಬ ಗ್ರಂಥದಲ್ಲಿ ನೋಡಬಹುದು.

'ವಿಕಾರ': ಕ್ರೋಧ-ಮುಂತಾದ ವಿಕಾರಗಳು.

'ದ್ವಿಜ ಫಣಿ ಮೃಡ ಶಕ್ರ'-ಮುಂತಾದವರಲ್ಲಿ, ಕಾಮ-ಕ್ರೋಧ ಮುಂತಾದ ವಿಕಾರಗಳಿರುವುವು. 'ವಿಭಾಧತೇಃಸ್ಮಾನ್'- ಎಂಬ ಪ್ರಮಾಣಗಳಿಂದ ಪ್ರಮಿತವಾದದ್ದು. ॥೧೨॥

## ಶ್ರೀಗುರುಹೃದಯಪ್ರಕಾಶಿಕೆ

ಋಜುಗಳೆಂಬ ಬ್ರಹ್ಮಪದವಿಯೋಗ್ಯ ಜೀವರಿಗೆ ಭಕ್ತ್ಯಾದಿಗುಣಗಳು ಸಹಜ. ಅಂದರೆ, ಸ್ವಾಭಾವಿಕವು. ಆದರೂ, ಬ್ರಹ್ಮಪದವಿ ಬರುವವರೆಗೆ ಕ್ರಮವಾಗಿ ಭಕ್ತ್ಯಾದಿಗಳು ವೃದ್ಧಿಯಿಂದ ಬಿಂಬೋಪಾಸನೆಯು ಅಧಿಕ ಪ್ರಕಾಶವಾವುದು. ವೃಜಿನವೆಂಬ ದೋಷದಿಂದ ಈ ಋಜುಗಳು ವರ್ಜಿತರು. ತ್ರಿಗುಣವಿಕಾರರಹಿತರು. ಆದರೆ, ದ್ವಿಜಪನೆಂಬ ಗರುಡ, ಫಣಿಪನೆಂಬ ಶೇಷ, ಮೃಡನೆಂಬ ರುದ್ರ, ಶಕ್ರನೆಂಬ ಇಂದ್ರ-ಮೊದಲಾದವರಲ್ಲಿ ತ್ರಿಗುಣವಿಕಾರ ಅಜ್ಞಾನಾದಿಗಳು ಇರುವುವು. ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಬ್ರಹ್ಮಪದಯೋಗ್ಯರಾದ ದೇವತಾಗಣಕ್ಕೆ ಋಜುಗಳೆಂದು

ಅಂತಹ ಋಜುಗಣಸ್ಥರು ಪ್ರತಿ ಬ್ರಹ್ಮಕಲ್ಪದಲ್ಲಿ ೨೦೦ ಮಂದಿ ಇರುವರು. ಇವರಲ್ಲಿ, ಸತ್ಯಲೋಕಾಧಿಪತಿಗಳಾದ ಚತುರ್ಮುಖ ಬ್ರಹ್ಮದೇವರು ಋಜುಗಣ ದರಸರು. ೯೯ ಬ್ರಹ್ಮ ಕಲ್ಪಗಳ ಸಾಧನಾ ನಂತರ, ಮೊದಲನೆಯ ಋಜುವು ಬ್ರಹ್ಮಪದವಿಗೆ ಬರುವನು. ಬ್ರಹ್ಮಪದವಿಯಿಂದ ಆವನಿಗೆ ಮುಕ್ತಿ. ಪ್ರಸಕ ಬ್ರಹ್ಮದೇವರಿಗೆ **ಶತಾನಂದ**—ರೆಂದು ಹೆಸರು. ೧೦೦ನೆಯ ಕಲ್ಪದಲ್ಲಿ ಬ್ರಹ ಪದವಿ ಪ್ರಾಪ್ತಿ. ೯೯ನೆಯ ಸ್ಥಾನ ಶ್ರೀ ವಾಯುದೇವರರು. ಅವರು ಭಾವೀ ಬ್ರಹ್ಮರು. ೯೮ನೆಯ ಸ್ಥಾನಗತ ಲಾತವ್ಯರೆಂಬ—ಋಜುಗಳು ಭಾವೀ ಮರುತರು.

೨. ಇಂತಹ ಋಜಗಣಕ್ಕೆ ಸೇರಿದ ಪ್ರತಿಯೊಬ್ಬ ಋಜುವಿಗೂ ಶ್ರೀಹರಿಯಲ್ಲಿ ಇರುವ ಭಕ್ತಿಯು ಸಮಿಚೀನವಾಗಿರುವುದು. ಅದು ಸ್ವಾಭಾವಿಕ ವಾಗಿರುವುದು. ಅಂತೆಯೇ, ಅವರ ಉತ್ತಮಮಟ್ಟದ ಜ್ಞಾನ ವೈರಾಗ್ಯಾದಿ ಸಮಸ್ತಗುಣಗಳೂ ಸಹಜಸ್ಥಿತಿಯಲ್ಲಿರುವುವು. ಸೃಷ್ಟಿಗೆ ಬಂದ ಕೂಡಲೇ ಅಭಿವ್ಯಕ್ತಿಯಾಗುವುವು. ಸಾಧನದ್ವಾರಾ ಬಂದುದಲ್ಲ. ಋಜುಗಣಸ್ಥರು ಸ್ವರೂಪತಃ ಭಗವದ್ಭಕ್ತರು. ಅತಿರೋಹಿತವಿಮಲವಿಜ್ಞಾನಿಗಳು. ಸಿದ್ಧ ಸಾಧಕರು. ಜಾತಾಪರೋಕ್ಷಿಗಳು. ಬಿಂಬೋಪಾಸನೆ ಅವರಿಗೆ ಸೃಷ್ಟಿಯ ಆದಿಯಿಂದಲೇ ಸಹಜವಾಗಿ ಬಂದುದು. ಅನಾದ್ಯಪರೋಕ್ಷಿಗಳು.

೩. ಕ್ರಮಕ್ರಮವಾಗಿ, ಪ್ರತಿಕಲ್ಪದಲ್ಲಿಯೂ, ಆ ಸಹಜಗುಣಗಳು ಅಭಿವೃದ್ಧಿಯಾಗುತ್ತಾ ಅಭಿವ್ಯಕ್ತವಾಗುವುವು. ಬ್ರಹ್ಮಪವಿಗೆ ಬಂದಾಗ, ಪೂರ್ಣ ಪ್ರಮಾಣದಲ್ಲಿರುವುವು. ಇದರಿಂದ, ಜೀವೋತ್ತಮರೆನಿಸುವರು. ಅಬ್ಜ— ಎಂದರೆ, ಶ್ರೀಹರಿಯನಾಭೀಕಮಲ. ಅಬ್ಜಜ—ಎಂದರೆ, ಅಂತಹ ನಾಭೀ ಕಮಲ ಸಂಜಾತರಾದ ಬ್ರಹ್ಮದೇವರು.

೪. ವೃಜಿನ—ಅಂದರೆ, ಪಾಪಗಳು. ಎಲ್ಲಾ ಋಜುಗಳೂ ಆದಿಯಿಂದಲೂ ಪಾಪವರ್ಜಿತರು. ಅವರ ಕಾರ್ಯಗಳೆಲ್ಲವೂ ಪುಣ್ಯರೂಪವಾಗಿಯೇ ಇರುವುವು

ಪಾಪಸ್ಪರ್ಶ ಲವಲೇಶವೂ ಇಲ್ಲ. ಲಿಂಗದೇಹವು ತ್ರಿಗುಣಾತ್ಮಕವಾದದ್ದು. ಅನಾದಿಕರ್ಮ ಬೀಜಗಳ ನೆಲೆಯದು. ತ್ರಿಗುಣಗಳ ಸಂಬಂಧವೇ ಋಜುಗಳಿಗೆ ಇಲ್ಲ. ಈ ಕಾರಣದಿಂದ, ತ್ರಿಗುಣಜನ್ಯವಾದ ವಿಕಾರಗಳಾವುವೂ ಇಲ್ಲ. ಅಸುರಾವೇಶ, ಜ್ಞಾನತಿರೋಧಾನ. ಅಜ್ಞಾನ-ಇತ್ಯಾದಿ ವಿಕಾರಗಳಿಂದ ದೂರರು. ಕಲ್ಯಾದಿ ಆವೇಶವೆಂದಿಗೂ ಇಲ್ಲ. ಅತಿರೋಹಿತವಿಮಲ ವಿಜ್ಞಾನಿಗಳು ಪರಶುಕ್ಲತ್ರಯವರ್ಗಕ್ಕೆ ಸೇರಿದವರು–ಬ್ರಹ್ಮ–ವಾಯುಗಳು. ಅಖಿಣಾತ್ಮಕರು.

೫. ಋಜುಗಳ ವ್ಯತಿರಿಕ್ತ, ಇತರ ದೇವತೆಗಳಾದ ಗರುಡದೇವರು, (ದ್ವಿಜ) ಸರ್ಪಶ್ರೇಷ್ಠರಾದ ಶೇಷದೇವರು. ಮೃಡನಾಮಕರಾದ ಶ್ರೀರುದ್ರದೇವರು, ಶಕ್ರನಾಮಕರಾದ ಇಂದ್ರದೇವರು- ಮೊದಲಾಗಿ ಶತಸ್ಥರ ಪರ್ಯಂತ ಇರುವ ದೇವತಾಗಣಕ್ಕೆ ಹೀಗೆ ಇಲ್ಲ. ಅವರೂ ಜಾತ್ಯಾಪರೋಕ್ಷಗಳಾದರೂ, ನಿತ್ಯಾಪರೋಕ್ಷಗಳಲ್ಲ. (ಋಜುಗಳಂತೆ). ಅಪರೋಕ್ಷ ತಿರೋಧನವುಂಟು. ಅಸುರಾವೇಶ, ಕಲಿಯ ಪ್ರಭಾವ, ಅಜ್ಞಾನಾದಿ ತ್ರಿಗುಣಜನ್ಯವಾದ ವಿಕಾರಗಳು ಉಂಟು. ಋಜುಗಳಿಗೆ ಲಿಂಗದೇಹವು ಕೇವಲ ಔಪಚಾರಿಕವಾಗಿರುವುದು. ದಗ್ಧಪಟದಂತೆ ಇರುವುದು. ತ್ರಿಗುಣಗಳಲೇಪವಿಲ್ಲ. ಜೀವಕೋಟಿಗೆ ಸೇರಿದವರಾದ್ದರಿಂದ, ಲಿಂಗದೇಹ ಔಪಚಾರಿಕವಾಗಿ (ನೆಪಮಾತ್ರ) ಇದೆ. ॥೧೨॥

## ಪದ್ಯ-೧೩

**ಮೂಲ :**

**ಸಾಧನಾತ್ಪೂರ್ವದಲಿ ಈ ಋ ।**
**ಜ್ವಾದಿ ಕಾತ್ರ್ಯಕರೆನಿಪ ಸುರಗಣ ।**
**ನಾದಿ ಸಾಮಾನ್ಯಾಪರೋಕ್ಷಗಳೆಂದು ಕರೆಸುವರು ॥**
**ಸಾಧನೋತ್ತರ ಸ್ವಸ್ಥ ಬಿಂಬ ಉ ।**
**ಪಾಧಿರಹಿತಾದಿತ್ಯನಂದದಿ ।**
**ಸಾದರದಿ ನೋಡುವರು ಅಧಿಕಾರಾನುಸಾರಾದಲಿ ॥೧೩॥**

**ಅವತರಣಿಕೆ**

ಋಜಗಣಸ್ಥರ ವಿಚಾರವನ್ನು ಈ ಪದ್ಯದಲ್ಲಿಯೂ ಸಹ ತಿಳಿಸು ತ್ತಾರೆ. ॥೧೩॥

**ಪ್ರತಿಪದಾರ್ಥ**

**ಋಜ್ವಾದಿ ಕಾತ್ರ್ಯಕರೆನಿಪ**—ಪೂರ್ವೋಕ್ತ ಋಜುಗಳು ಆದಿಯಾಗಿ ಶತಸ್ಥದೇವಗಣಾಂತ ಇರುವ ಮುಖ್ಯತತ್ವಾಭಿಮಾನಿಗಳು ಎಂದು ಕರೆಯಿಸುವ, **ಸುರಗಣ**—ದೇವತಾಗಣವನ್ನು, **ಸಾಧನಾತ್ಪೂರ್ವದಲಿ**—ಸಾಧನಾಪೂರ್ವದಲ್ಲಿ, **ಸಾಮಾನ್ಯಪರೋಕ್ಷಿಗಳೆಂದು**—ಸಾಮಾನ್ಯ ಅಪರೋಕ್ಷಿಗಳು-ಎಂಬುದಾಗಿ, **ಕರೆಸುವರು** — ಕರೆಯಿಸುವವರಾಗುತ್ತಾರೆ. **ಸಾಧನೋತ್ತರ**—ಸಾಧನಾನಂತರದಲ್ಲಿ, **ಸ್ವಸ್ಥ ಬಿಂಬ** — ಸ್ವಕೀಯವಾದ ಜೀವಾಕಾರ ಬಿಂಬಾಪರೋಕ್ಷಕ್ಕೆ ಸಾಧನಮಾಡತಾ ಬಂದರೆ. ಪ್ರಥಮತಃ-ಜೀವಾಕಾರ ಬಿಂಬನನ್ನೂ ಸ್ಥೂಲದೇಹದಲ್ಲಿ, **ಉಪಾಧಿರಹಿತ ಆದಿತ್ಯ**

**ನಂದದಿ**—ಮೋಡಗಳಿಂದ ಉಪಾಧಿರಹಿತವಾದ ಸೂರ್ಯನಂತೆ (ಮೇಘಗಳಿಂದ ದೂರನಾದ ಸೂರ್ಯನು ಸ್ಪಷ್ಟವಾಗಿ ಕಾಣಿಸುವಂತೆ), **ಅಧಿಕಾರಾನುಸಾರದಲಿ**—ಅವರವರ ಅಧಿಕಾರ (ಸ್ವರೂಪಯೋಗ್ಯತಾಗನುಗುಣವಾಗಿ) **ಸಾದರದಿ**—ಭಕ್ತಿಪೂರ್ವಕವಾಗಿ, **ನೋಡುವರು**—ಬಿಂಬನಾದ ಅಗ್ರೇಶನನ್ನು ಅಪರೋಕ್ಷದಿಂದ ಕಾಣುತ್ತಾರೆ. ॥೧೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಇನ್ನೂರುಮಂದಿ ಋಜುಗಳೇ ಆದಿಯಾಗಿ ಶತಸ್ಥದೇವಗಣಾಂತವರಿಗೂ, ಮುಖ್ಯತತ್ತ್ವಾಭಿಮಾನಿಗಳು—ಎಂತ ಅನಂತಕ್ಕ ಈ ದೇವತಾಗಣ ಸಾಧನಾಪೂರ್ವದಲ್ಲಿ, ಸಾಮಾನ್ಯಅಪರೋಕ್ಷಿಗಳೆಂತ ಕರಸೋವರಾಗತಾರೆ. ಎಂದರೆ, ಪ್ಯಾಲೆ ಸಾಮಾನ್ಯಪರೋಕ್ಷ, ವಿಶೇಷಾಪರೋಕ್ಷ—ಅಂತ ಎರಡು— ಈ ಋಜ್ವಾದಿ ತಾತ್ತ್ವಿಕರಿಗೆ ಅನೆ—ಎಂತ ಹೇಳಿದಂತಾಯಿತು. ಸಾಮಾನ್ಯಾಪರೋಕ್ಷ—ಎಂದರೆ, ಸ್ಥೂಲದೇಹದಲ್ಲಿ ಅಷ್ಟದಳಕಮಲಕರ್ಣಿಕಾಮಧ್ಯಗತನಾದ ಅಗ್ರೇಶ—ಎಂತಲೂ, ಪ್ರಾಜ್ಞ—ಎಂತಲೂ ನಾಮಧೇಯನಾದ ಜೀವಾಕಾರನಾದ ಬಿಂಬವ್ಯತಿರಿಕ್ತ ಅನ್ಯವಾದ ಮೂಲೇಶ, ಪ್ರಾದೇಶರೂಪಗಳ, ಸಾಧನವಿಲ್ಲದ್ದೇವೆ. ಅಪರೋಕ್ಷ, ಮತ್ತು ಜೀವಾಕಾರನಾದ ಅಗ್ರೇಶನ ಅಪರೋಕ್ಷ ಸ್ಥೂಲದೇಹದಲ್ಲಿ ಸಾಧನಾನಂತರ, ಅಪರೋಕ್ಷಿಕರಿಸಿಕೊಂಬೋಣ—ಇದೇ ವಿಶೇಷಾಪರೋಕ್ಷವೆಂತಲೂ ಎರಡು ಪ್ರಕಾರ. ಅಪರೋಕ್ಷ. ಸ್ಥೂಲದೇಹಗತ ಜೀವಾಕಾರನಾದ ಬಿಂಬನ್ನ ಅಪರೋಕ್ಷೀಕರಿಸಿಕೋಬೇಕಾದರೆ, ಸಾಧನಾನಂತರವೇ ಹೊರ್ತು, ತತ್ಪೂರ್ವದಲ್ಲಿ ಇಲ್ಲ. ಋಜ್ವಾದಿತಾತ್ತ್ವಿಕರು ತಮ್ಮ ತಮ್ಮ ಸ್ವಕೀಯವಾದ ಜೀವಾಕಾರ ಬಿಂಬಾಪರೋಕ್ಷಕೆ ಸಾಧನ ಮಾಡತಾ ಬಂದರೆ,

ಪ್ರಥಮತಃ ಜೀವಾಕಾರಬಿಂಬ ಸ್ಥೂಲದೇಹದಲ್ಲಿ ಮೇಘವೆಂಬೋ ಉಪಾಧಿಗತ ಸೂರ್ಯನೋಪಾದಿಯಲ್ಲಿ ಕಾಣತಾ ಬಂದು, ಸಾಧನ ಪೂರ್ತಿ ಆಗೋಣವೆ ಮೇಘವೆಂಬ ಉಪಾಧಿಯಿಂದ ರಹಿತನಾದ ಸೂರ್ಯನೋಪಾದಿಯಲ್ಲಿ ಅವರವರ ಯೋಗ್ಯತಾನುಸಾರ ಸಹಿತರಾಗಿ, ದಾರು ದಾರು ಎಷ್ಟು ಸೂರ್ಯಕಾಂತಿಯಿಂದ ಯುಕ್ತರಾಗಿ ಬಿಂಬನ್ನ ಕಾಣಬೇಕೋ, ಆಯಾ ಅಧಿಕಾರಾನುಸಾರದಲ್ಲಿ ಬಿಂಬನಾದ ಅಗ್ರೇಶನ್ನ ಅಪರೋಕ್ಷದಿಂದ ನೋಡವರಾಗತಾರೆ. ಪೂರ್ವೋಕ್ತ ಸಾಮಾನ್ಯಾಪರೋಕ್ಷವೇನು, ಪುನಃ ತಿರೋಧಾನವಾಗಿ ಆದಿ ಕಾಣೋದಿಲ್ಲ. ಆದ್ದರಿಂದ ಋಜ್ವಾದಿ ತಾತ್ತ್ವಿಕರು ಈ ವಿವಕ್ಷಾದಿಂದ, ಅನಾದಿಅಪರೋಕ್ಷಿಗಳೆಂದು ಕರಸೋವರಾದರು. ಇದರಲ್ಲಿ ವಿಶೇಷ ಒಂದದೆ, ಅದರ ವಿವರ–

೧. ಸಮಸ್ತದೇವತಿಗಳು ಅಂಶವಿಶೇಷದಿಂದ ಅಂಡದ ಹೊರಗೆ ಇದ್ದಾರೆ. ಅಂಡದ ಹೊರಭಾಗಗತ ತತ್ತ್ವಗಳು ಅಸಂಸೃಷ್ಟಗಳು. ಅಲ್ಲಿ ಇರತಕ್ಕ ಋಜ್ವಾದಿ ತಾತ್ತ್ವಿಕರೇ ಮೊದಲಾದ ದೇವತೆಗಳಿಗೆ ಅಸಂಸೃಷ್ಟಸ್ಥೂಲ ದೇಹಗಳು ಬಂದು, ಅಲ್ಲೇ ಇದ್ದುಕೊಂಡು, ಸಾಧನಮಾಡತಾ ಇದ್ದಾರೆ.

೨. ತದನಂತರ, ಅಂಡದ ಒಳಗೆ ದೇವತಿಗಳು ಯಾವತ್ತೂ ಮಂದಿ ಅಂಶವಿಶೇಷದಿಂದ ಸಂಸೃಷ್ಟಸ್ಥೂಲದೇಹಗಳ ಧರಿಸಿ, ಸಾಧನಮಾಡತಾ ಇದ್ದಾರೆ. ಅಂತು, ಎರಡು ಪ್ರಕಾರ. ಅಂಡದ ಹೊರಗಿನ ಋಜ್ವಾದಿ ಶತಸ್ಥ ದೇವಗಣಾಂತರಾದ, ಭಕ್ತಿಯೋಗಿಗಳಾದ ಮುಖ್ಯತಾತ್ತ್ವಿಕರಿಗೆ ಸಾಮಾನ್ಯಪರೋಕ್ಷ, ವಿಶೇಷಾಪರೋಕ್ಷ- ಎರಡಕ್ಕೂ ತಿರೋಧಾನವೂ, ಪುನಃ ಆದಿ ಕಾಣೋಣವೂ ಎರಡೂ ಇಲ್ಲವಾದ್ದರಿಂದ, ಅನಾದಿಅಪರೋಕ್ಷಿಗಳೆಂದು ಕರಸೋವರಾದರು. ಋಜ್ವಾದಿ ತಾತ್ತ್ವಿಕರಾದವರು, ಅಂಡದ ಒಳಗೆ ಸಂಸೃಷ್ಟ ದೇಹವನ್ನು ಧರಿಸುವರು. ಆಗ್ಗೆ, ಋಜುಗಣಕ್ಕೆ ಅಪರೋಕ್ಷ ತಿರೋಧಾನವಿಲ್ಲದೆ, ಅಂಡದ ಹೊರಗಿನೋಪಾದಿಯಲ್ಲಿ, ಯಥಾಪ್ರಸಾರ ಅಪರೋಕ್ಷ ಇರೋದಾಗಿ ಇರತದೆ. ಆದ್ದರಿಂದ, ಋಜುಗಳು ಅನಾದಿಅಪರೋಕ್ಷಿಗಳೆಂತಲೂ, ಸದಾ ಅಪರೋಕ್ಷಿಗಳೆಂದಲೂ ಕರಸೋವರಾದರು. ತದನ್ಯ ರುದ್ರಾದಿ ಶತಸ್ಥ

ದೇವಗಣಾಂತ ಅಂಶವಿಶೇಷದಿಂದ ಅಂಡದ ಒಳಗೆ ಪ್ರವೇಶರಾಗಿ, ಸಂಸೃಷ್ಟ ಸ್ಥೂಲದೇಹಗಳ ಧರಿಸೋಂವರಾಗತಾರೆ. ಈ ಕಾಲದ ಅಸುರಾವೇಶವೂ, ಅಜ್ಞಾನವೂ, ತ್ರಿಗುಣಜವಿಕಾರವೂ, ಅಪರೋಕ್ಷತಿರೋಧಾನವೂ ಆಗಿ ಪುನಃ ಆದಿ ಕಾಣತಾ ಇರತದೆ. ಆದ್ದರಿಂದ, ಇವರು ಅಂಡದ ಹೊರಗಿನ ಅಂಶ ವಿವಕ್ಷಯಾ ಅಪರೋಕ್ಷಿಗಳೆಂತಲೂ, ಅಂಡದ ಒಳಗಿನ ಅಂಶವಿವಕ್ಷಯಾ ಅನಾದಿ ಅಪರೋಕ್ಷಿಗಳಲ್ಲವೆಂತಲೂ ಕರಸತಾರೆ. ಅಂಡದ ಹೊರಗಿನ ದೇವತಾಂಶಕ್ಕೆ ಎಂದರೆ, ಸಮಸ್ತದೇವತೆಗಳಿಗೂ ಅಸುರಾವೇಶ ಮೊದಲಾದ ದೋಷಗಳು ಒಂದೂ ಇಲ್ಲ. ಅಲ್ಲಿ ಅಸುರರ ಪ್ರವೇಶವಿಲ್ಲ. ಕರ್ಮಜ, ಆಜಾನಜದೇವತೆ ಗಳಿಗೆ ಸಾಮಾನ್ಯಾಪರೋಕ್ಷ, ವಿಶೇಷಾಪರೋಕ್ಷ–ಎರಡೂ ಸಾಧನಾನಂತರವೇ ಆಗಬೇಕು. ಇವರಿಗೆ ಅಂಡದ ಹೊರಗೆ ಸಾಮಾನ್ಯಾಪರೋಕ್ಷವಿಲ್ಲ. ಋಜ್ವಾದಿ ತಾತ್ತ್ವಿಕರು ಜಾತಾಪರೋಕ್ಷಿಗಳು. ಇದು ಸಾಮಾನ್ಯಾಪರೋಕ್ಷವು. ಆಜಾ ನಜರದೂ, ಕರ್ಮಜರದೂ–ಮ್ಯಾಲೆ ವಿಸ್ತಾರವಾಗಿ ವಿವರಿಸಿದೆ. ಎರಡೂ ಕಡಿ ಸಾಧನ ಮಾಡತಾರೆ. ಅಂಡದ ಒಳಗೆ ಭರತಖಂಡದಲ್ಲಿ ಮಾಡಿದ ಸಾಧನಾದಿಂದ ಅಂಡದ ಒಳಗಿನ ಅಂಶರೂಪ ದಾವಾಗೆ ಅಪರೋಕ್ಷವೋ, ಆಗ್ಗೆ, ಅಂಡದ ಹೊರಗಿನ ಅಂಶಕ್ಕೆ ಅಪರೋಕ್ಷವಾಗತದೆ. ಅಂಡದ ಒಳಗಿನ ಅಂಶಕ್ಕೆ ಅಪರೋಕ್ಷ ತಿರೋಧಾನವಾದಂತೆ, ಅಂಡದ ಹೊರಗಿನ ಅಂಶಕ್ಕೂ ಅಪರೋಕ್ಷ ತಿರೋಧಾನವಾಗತದೆ. ಇದೇ ಪ್ರಕಾರ, ಪುನಃ ಆದಿ ಕಾಣತಾ ಇರತದೆ. ಇದು ಭಕ್ತಿಯೋಗಿಗಳಿಗೆ. ಭಕ್ತಿಯೋಗಿಗಳಾದವರಲ್ಲಿ, ಋಜುಗದವರಿಗೆ ಒಳಗೂ ಹೊರಗೂ ತಿರೋಧಾನವಿಲ್ಲ. ತದನ್ಯ ರುದ್ರಾದಿ ಶತಸ್ಥಾಂತರೊಳಗೆ ತಿರೋಧಾನವಾದರೂ, ಅಂಡದ ಹೊರಗೆ ತಿರೋಧಾನವಿಲ್ಲ. ಈ ಪ್ರಕಾರ ಅನೇಕ ವೈಚಿತ್ರವದೆ. ವಿವರಿಸಲು ಶಕ್ಯವಲ್ಲ. ಈ ಪ್ರಕಾರ ತಿಳಿಯಬೇಕು.

**ಋಜುಗಳಿಗೆ ರಾಶಿಯಲ್ಲಿ ಅಪರೋಕ್ಷವಿಲ್ಲ—**

ಶತಜನ್ಮಗತಾನಾಂ ತು ಋಜೂನಾಂ ಪೂರ್ವಮೇವ ಹಿ ।
ಅಪರೋಕ್ಷಾಭಾವ ಏವ ಹ್ಯಜ್ಞಾನಂ ಸಮುದೀರಿತಂ ॥೧೨॥

ಅಪರೋಕ್ಷಾನಂತರಂ ತು ನಾಸ್ತ್ಯ ಜ್ಞಾನಂ ನ ಸಂಶಯಃ ।
ಶತಜನ್ಮಸು ದೇವೇಶ ಹ್ಯಪರೋಕ್ಷ್ಯೇಣ ಸರ್ವದಾ ॥೨॥
ಪೂರ್ಣಜ್ಞಾನಂ ಮಮಾಸ್ತ್ಯೇವ ನಾತ್ರಕಾರ್ಯ ವಿಚಾರಣಾ ।
ಶತಜನ್ಮಸು ಪೂರ್ವಂ ತು ಹ್ಯಪರೋಕ್ಷಂ ಮಮ ಪ್ರಭೋ ॥೩॥
ನಾಜ್ಞಾನಂ ಚಿಂತನೀಯಂ ಹಿ ಬ್ರಹ್ಮವಾಯುವತೇವ ಹಿ ।
ಅತ್ರ ಕಿಂಚಿದ್ವಿಶೇಷೋಽಸ್ತಿ ಜ್ಞಾತವ್ಯಂ ತತ್ತ್ವಮಿಚ್ಛುಭಿಃ ॥೪॥

—ಇತಿಗಾರುಡೇ॥

**ರುದ್ರಾದಿಶತಸ್ಥಪರ್ಯಂತ ತಾತ್ತ್ವಿಕರ ಅಪರೋಕ್ಷ ವಿಚಾರ—**

ಋಜ್ವಾದಿ ತಾತ್ತ್ವಿಕಾಸ್ಸರ್ವೇ ಕ್ಷಣಾದಿತೋ ಹ್ಯಪರೋಕ್ಷಿಣಃ ।
ಸಾಮಾನ್ಯತೋ ವಿಶೇಷೇಣ ಸ್ವಸ್ವಯೋಗ್ಯಾಪರೋಕ್ಷಿಣಃ ॥
ಕ್ಲಿಪ್ತ ಕಾಲೋಚಿತ ಮಹಾಸಾಧನೇನ ಭವಂತಿ ಹಿ।
ಯತಂತಿ ಹ್ಯಪರೋಕ್ಷಾರ್ಥಂ ಋಜವಃ ಶತಸಂಮಿತಾಃ ॥
ಪೂರ್ವಾಪರೋಕ್ಷಿಣಸ್ತೇ ಚ ಶತಸಂಖ್ಯಾಮಿತಸ್ಸದಾ॥

—ಇತಿ ಪ್ರಕಾಶಸಂಹಿತಾಯಾಂ ॥

**ರುದ್ರಾದಿ ಸರ್ವಜೀವರಿಗೆ ರಾಶಿ ಒಳಗೆ ನಿದ್ರಾ—**

ನಾರಿಕೇಳಫಲಾಕಾರಃ ಲಿಂಗದೇಹಸ್ತ್ರಿವೃನ್ಮತಃ ।
ಮೂರ್ಧ್ನಿ ಛಿದ್ರಯುತೇಗರ್ಭೇ ಅವಕಾಶಯುತಃ ಸದಾ ॥೧॥
ಅಂತರ್ನಿಬದ್ಧಾ ಜೀವಾತ್ಮೇ ತ್ರಿವಿಧಾ ಅಪಿ ಮೋಚನೇ ।
ನಶತ್ಕಾರಮಯಾತ್ಸನ್ನಂ ಮೂರ್ಧ್ನಿ ಛಿದ್ರೋ ವಸತ್ಯಲ್ಪಂ ॥೨॥
ಸರೂಪಿಕಾಜ್ಞಾನದುಃಖಾಃ ದ್ವೇಷಕಾಮೋದಯಾಸ್ಸತಾಂ ।
ರುದ್ಧಾ ಭವಂತಿ ಸಾಮಾನ್ಯವೈಷಮ್ಯೇ ದತಿ ಪೂರ್ವವತ್ ॥೩॥
ಸ್ಫಟಿಕಸ್ಯಪ್ರಭಾಯದ್ವತ್ ಜಪಾಕುಸುಮ ಸನ್ನಿಧೌ ।
ಶ್ವೇತಾಪಿ ರಕ್ತಿಮಾಯುಕ್ತಾ ಭವತ್ಯದ್ಧಾ ಚಿತೋ ತಥಾ ॥೪॥

ಕ್ಷಣೇ ಕ್ಷಣೇಂತರ್ಭ್ರಮತಾಂ ತದಾ ಸರ್ವೇನ ಚಾನ್ಯಥಾ ॥
ಭ್ರಮತಾಂ ಲಿಂಗದೇಹಸ್ಥ ಗುಣತ್ರಯ ಸುಯೋಗತಃ ॥೫॥

—ಇತಿ ಪ್ರಕಾಶಸಂಹಿತಾಯಾಂ ॥

ಗುಣಸಾಮ್ಯದಿಂದ ನಿದ್ರಾ, ಗುಣವೈಷಮ್ಯದಿಂದ ಜಾಗ್ರತಿ. ರಾಶೀಗತ ರಾದ ಅಸೃಜ್ಯರಾದ ಜೀವರು, ಅನಾದಿಯಿಂದ ಗುಣಸಾಮ್ಯ ಐದಿರೋಣದ ರಿಂದ, ನಿದ್ರಾಯುಕ್ತರಾಗಿರೋವರಾಗಿರತಾರೆ. ಸೃಷ್ಟಿಕಾಲದಲ್ಲಿ ಸಾಮ್ಯ ಪರಿಹಾರಮಾಡಿ, ವೈಷಮ್ಯಐದಿಸೋಣದರಿಂದ, ಎಚ್ಚರವಾಗತಾರಂತ ತಾತ್ಪರ್ಯ. ಇದೇ ನೇಮವೇ ಪ್ರಳಯಕಾಲದಲ್ಲಿ. ಸಾಮ್ಯರಾದವರು ಸೃಷ್ಟಿ ಕಾಲದಲ್ಲಿ ವೈಷಮ್ಯ ಐದಿದರೆ, ಪೂರ್ವವತ್ ಜಾಗ್ರತರಾಗತಾರೆಂತ ತಾತ್ಪರ್ಯ.

**ನಿದ್ರಾಯುಕ್ತರಾದ ರಾಶಿಗೆ ಎಚ್ಚರಿಕೆ ಕಾಲವು, ಕರ್ಮಕ್ಕೆ ಆರಂಭಕಾಲವಾಗತದೆ—**

**—ಕರ್ಮಉತ್ಪತ್ತಿಕ್ರಮ—**

ಸೃಷ್ಟಿಕಾಲೇತ್ರಿಧಾ ಭಿನ್ನಜೀವಾನಾಂ ಬುದ್ಧಿರಶ್ಯತೇ ।
ಸಾತ್ತ್ವಿಕೀ ರಾಜಸೀ ಚೇತಿ ತಾಮಸೀ ಚ ಸಮಸ್ತಶಃ ॥೧॥

ಯೋಗ್ಯಾನಾಂ ಸಾತ್ತ್ವಿಕೀ ಬುದ್ಧಿಃ ಬಹುಳಸ್ವಾಲ್ಪಕೀ ಮತಾ ॥
ಮಧ್ಯಮಾನಾಂ ತು ನೀಚಾನಾಂ ರಾಜಸೀ ತಾಮಸೀ ಮತಿಃ ॥೨॥

ಕ್ರಮದ್ವಹುತರ್ಯಾನ್ಯೇ ತು ಸ್ವಲ್ಪಮಾತ್ರೆ ಭವಿಷ್ಯತಃ ।
ಪಂಚಮಾತ್ರಾ ಗತೋ ಜ್ಞಾನಪಂಚಕಂ ಲಿಂಗದೇಹ ಗಂ ॥೩॥

ಅನಾದ್ಯಜ್ಞಾವಮುದ್ದಿಷ್ಟಂ ಬಾಹ್ಯಂ ಸ್ವರೂಪಕಂ ನ ತು ।
ಸಾಕ್ಷೀಂದ್ರಿಯಾಣಾಂ ತು ತಮಸಾ ಯೋಗೇ ತದ್ಧಿ ಭವಿಷ್ಯತಿ ॥೪॥
ಸಾಕ್ಷೀಂದ್ರಿಯಾಣಾಂ ಸ್ವಸ್ಥಮನಸಾ ಸಂಗಮೋ ಯದಿ ।
ಬಾಹ್ಯಾಮಸ್ವಾರೂಪಕಂ ಚ ಕಾಮಕ್ರೋಧಾಧಿಕಂ ಚ ಯತ್ ॥೫॥

ಅನಾದಿಕಾಮೋ ಜೀವಾನಾಂ ತ್ರಿವಿಧಾನಾಂ ಭವಿಷ್ಯತಿ ।
ರಜಃ ಪರಿಚ್ಛೇದಗತ ಜ್ಞಾನೇಂದ್ರಿಯಾಣಾಂ ಕಳಾ ಯದಿ ॥೬॥
ಸಾಕ್ಷೀಂದ್ರಿಯಯುತಾ ಬಾಹ್ಯಶಬ್ದಾದಿಜ್ಞಾ ಭವಿಷ್ಯತಿ ।
ಅನಾದಿಕಾಮಾನಾ ಪ್ರೋಕ್ತಾ ತ್ರಿವಿಧಾನಾಂ ಚಿತಾಮಿಹ ॥೭॥
ರಜಃ ಪರಿಚ್ಛೇದಗತ ಜ್ಞಾನೇಂದ್ರಿಯಾಣಾಂ ಕಳಾಯದಿ ।
ಸಾಕ್ಷೀಂದ್ರಿಯಯುತಾ ಕರ್ಮ ಜನಯತ್ಯಪ್ಯನಾದಿಕಂ ॥೮॥
ಬಾಹ್ಯಾಲಿಂಗಗತಂ ಕರ್ಮ ನ ತು ಸ್ವಾರೂಪಕಂ ಮತಂ ।
ಅನಾದ್ಯವಿದ್ಯಾ ಕಾಮಶ್ ಚ ಅನಾದಿಕಮೇವ ಚ ॥೯॥
ಲಿಂಗಗಯತಿ ಮತ್ವಾ ತು ಬಂಧೋ ಭವತಿ ಚೇತಸಃ ।
ಕಾಲೇನ ಭಾರತೀ ವರ್ಷೇ ಲಬ್ಧ್ವಾ ಜನ್ಮಾಪಿ ಮಾನುಷಂ ॥೧೦॥

ಇತ್ಯಾದಿ ಅನೇಕ ಪ್ರಮಾಣಗಳ ರೀತ್ಯಾ, ರಾಶಿಗತರಾದ ಅಸ್ಪೃಷ್ಯರಿಗೆ (ಅಸ್ಪೃಷ್ಯತ್ವವೇ) ನಿದ್ರಾಕಾಲವೆಂತಲೂ, ಅಲ್ಲಿ ಪ್ರಾಜ್ಞನೇ ಬಿಂಬ-ಎಂತಲೂ, ಶ್ರೀಜಗನ್ನಾಥದಾಸರಾಯರು ಬಿಂಬ ಪ್ರತಿಬಿಂಬ ಸಂಧಿಯಲ್ಲಿ ಹೇಳಿದ್ದಾರೆ. ಪ್ರಾಜ್ಞನಕಾರ್ಯ ನಿದ್ರಾ, ನಂತರ ಎಚ್ಚರಿಕೆ ಕಾಲ, ನಂತರ, ಕರ್ಮ ಉತ್ಪತ್ತಿ ಕ್ರಮ ಪೂರ್ವೋಕ್ತಪ್ರಮಾಣಾನುಸಾರ ತಿಳಿಬೇಕು. ॥೧೧॥

## ೨. ಭಾವಪ್ರಕಾಶಿಕೆ

ಈ ಋಜುಗಣ ಮೊದಲಾದ ತತ್ವಾಭಿಮಾನಿಗಳು ಅನಾದಿಕಾಲದಿಂದಲೂ, ಸಾಮಾನ್ಯಾಕಾರವಾದ ಅಪರೋಕ್ಷವುಳ್ಳವರಾಗಿರುವರು. ಸಾಧನೋತ್ತರದಲ್ಲಿ, ತಮ್ಮ ತಮ್ಮ ಯೋಗ್ಯತಾನುಸಾರವಾಗಿ, ಲೋಪಾದಿಗಳ ಆವರಕವಿಲ್ಲದ ನಿರ್ಮಲಾಕಾಶದ ಮಧ್ಯದಲ್ಲಿನ ಸೂರ್ಯನಂತೆ, ತಮ್ಮ ಬಿಂಬರೂಪಿಯಾದ ಶ್ರೀಪರಮಾತ್ಮನನ್ನು ಕಾಣುವರು. ನೋಡುವ ಅಧಿಕಾರಾನುಸಾರದಲಿ ಎಂಬುವುದರಿಂದ, ಎಲ್ಲರೂ ಒಂದು ಸೂರ್ಯನಂತೆ ನೋಡುವರೆಂಬ

ಸಂಶಯವನ್ನು ಪರಿಹರಿಸಿದಂತಾಯಿತು. ಕೆಲವರು ಒಬ್ಬ ಸೂರ್ಯನಂತೆ, ಕೆಲವರು ೧೦ ಸೂರ್ಯಪ್ರಕಾಶ, ಕೆಲವರು 100, ಕೋಟಿ- ಹೀಗೆ, ಅವರವರ ಯೋಗ್ಯತಾನುಸಾರವಾದ ಪ್ರಕಾಶವುಳ್ಳ ಪರಮಾತ್ಮನನ್ನು ಕಾಣುವರೆಂಬ ತಾತ್ಪರ್ಯ. ॥೧೩॥

## ೩. ಭಾವದರ್ಪಣ

ಸಾಧನ। ಸಾಮಾನ್ಯಾಪರೋಕ್ಷ್ಯ। "ಋಜ್ವಾದಿ ತಾತ್ವಿಕಾಃ ಸರ್ವೇಽನಾದಿತೋಽಹ್ಯಪರೋಕ್ಷಿಣಃ ಸಾಮಾನ್ಯತೋ ವಿಶೇಷೇಣ ಸ್ವಸ್ವಯೋಗ್ಯಾಪರೋಕ್ಷಿಣ"-ಇತಿ ಪ್ರಕಾಶಸಂಹಿತಾವಚನಾತ್। ಆದಿತ್ಯ। "ಸೌರಿಪ್ರಕಾಶಸ್ಯ ಯಥೈವದರ್ಶನಂ ತಥಾ ಮಮ ಜ್ಞಾನಗತೋ ವಿಶೇಷತ"- ಇತಿ। ಗರುಡ ಪುರಾಣೋಕ್ತೇಃ ॥೧೩॥

## ೪. ಶ್ರೀವ್ಯಾಸದಾಸಸದ್ಧಾಂತ ಕೌಮುದೀ

ಅಪರೋಕ್ಷ ವಿಶೇಷಂ ತೇಷಾಂ ಆಹ—"ಸಾಧನ" ಇತಿ॥ ಅತ್ರ ವಿಶೇಷಃ॥ ಅಪರೋಕ್ಷಃ ದ್ವಿವಿಧಃ ॥ ಸಾಮಾನ್ಯ ವಿಶೇಷಭೇದಾತ್॥ ಆದ್ಯಃ ರಾಮಕೃಷ್ಣಾದೀನಾಂ ಭಗವತ್ತ್ವೇನ। ತತ್ರ ನ ಸಾಮಾನ್ಯ ಸೂತ್ರಂ ಮಾನಸಮ್॥ ಸೋಽಪರೋಕ್ಷಃ ಮೋಕ್ಷಾಜನಕತ್ವಾತ್ ತಥಾ ಉಚ್ಯತೇ॥ ದ್ವಿತೀಯಃ ಬಿಂಬ ದರ್ಶನಮ್॥ ಸಾಮಾನ್ಯದರ್ಶನಾತ್ ಲೋಕಾ ಮುಕ್ತಿಯೋಗ್ಯಾ ಸದರ್ಶನಾತ್ ಇತಿ ತತ್ರ ಮಾನಸಮ್॥ ರಾಮಾದೀನಾಂ ಬಹು ಮಾನುಷತ್ವೇನ ದರ್ಶನಂ ಅಪರೋಕ್ಷಾಭಾಸಃ ಅನರ್ಥಹೇತುಃ ॥ ಯಥೋಕ್ತಂ- "ಅವತಾರಾನ್ ಋತೇ ವಿಷ್ಣುಂ ಚಕ್ಷುಷಾ ನ ಹಿ ಪಶ್ಯತಿ॥ ಅವತಾರಾನ್ ಅಪಿ ಯದಾ ಜ್ಞಾನದೃಷ್ಟ್ಯೈವ ಪಶ್ಯತಿ"- ಇತ್ಯುಕ್ತಂ ಕಾಠಕೇ ॥ ಸ್ಥೂಲಹೃದ್ಗಃ ಅಪರೋಸ್ತು ಬಾಹ್ಯಃ ಸ್ಯಾತ್ ಅಪರೋಕ್ಷಕಃ ॥ ರಾಮಕೃಷ್ಣಾದಿ ರೂಪಾಣಿ ಬಹಿಃ ಪಶ್ಯಂತಿ ಪಿ ಕ್ವಚಿತ್ ॥ ಮಾನುಷತ್ವೇನ ಪಶ್ಯಂತಿ ಅಪರೋಕ್ಷೋ ನ ಸಃ ಸ್ಮೃತಃ॥ ಸ್ವರೂಪಚಕ್ಷುಷಾ ದೃಷ್ಟಿಃ ಅಪರೋಕ್ಷ ಇತೀರ್ಯತೇ॥ ಸ ರೂಪಾಖ್ಯಾ ಪರೋಕ್ಷಸ್ತು ಸರ್ವೇಷಾಮೇವ ಮುಕ್ತಯೇ" ॥ಇತಿ॥

ತತ್ರಾಪಿ ವಿಶೇಷಃ ಋಜ್ವತಿರಿಕ್ತಾನಾಂ ಸಾಮಾನ್ಯದೃಷ್ಟಿರಪಿ ಪೂರ್ವೋಕ್ತ ಸಾಧನಸಾಧ್ಯಾ॥ ಋಜೂನಾಂ ಸಹಜೋಯಂ ಬಿಂಬಾಪರೋಕ್ಷಾರ್ಥ ಪ್ರಯತ್ನಃ ಶತ ಜನ್ಮಸು॥ ಉಕ್ತಂ ಚ-ಋಜ್ವಾದಿ ತಾತ್ವಿಕಾಃ ಸರ್ವೇsನಾದಿತೋ ಹ್ಯಪ ರೋಕ್ಷಿಣಃ॥ ಸಾಮಾನ್ಯತೋ ವಿಶೇಷೇಣ ಸ್ವಸ್ವಯೋಗ್ಯ ಪರೋಕ್ಷಿಣಃ॥ ಕ್ಲಪ್ತ ಸಾಧನೋಚಿತ ಮಹಾಸಾಧನೇನ ಭವಂತಿ ಹಿ॥ ಕ್ಲೃಪ್ತಪದಂ ವಿವಕ್ಷ್ಯೇ ಚ ಇತರತ್ರ॥ ಶತಜನ್ಮಕೃತಾನಾಂ ತು ಋಜೂನಾಂ ಪೂರ್ವಮೇವ ಹಿ॥ ಅಪರೋಕ್ಷಾಭಾವ ಹ್ಯಾ ಏವಹ್ಯಜ್ಞಾನಂ ಸಮುದೀರಿತಮ್॥ ಅಪರೋಕ್ಷ ಜ್ಞಾನಾನಂತರಂ ತು ನಾಸ್ತ್ಯಜ್ಞಾನಂ ನ ಸಂಶಯಃ ॥ ಶತಜನ್ಮಸು ದೇವೇಶ ಹ್ಯಾಪರೋಕ್ಷ್ಯೇಣ ಸರ್ವದಾ॥ ಪೂರ್ಣಜ್ಞಾನಂ ಮಮಾಸ್ತ್ಯೇವ ನಾತ್ರ ಕಾರ್ಯಾ ವಿಚಾರಣಾ॥ ಶತಜನ್ಮಸು ಪೂರ್ವಂ ತು ಹ್ಯಾಪರೋಕ್ಷ್ಯಂ ಮಮ ಪ್ರಭೋ ॥ ಪೂರ್ಣಜ್ಞಾನಂ ಸದಾಪ್ಯಸ್ತಿತ್ಯೇವಮಾಹುರ್ಮನೀಷಿಣಃ॥ ಅನ್ಯದಪ್ಯುಕ್ತಮ್॥ ಯತಂತಿ ಹ್ಯಪರೋಕ್ಷಾರ್ಥಂ ಋಜವಃ ಶತಸಮ್ಮಿತಾಃ ॥ ಸದಾ ಅನಂತ ವೇದೋಕ್ತಗುಣೋಚ್ಚಯಾಃ ॥ ಭವಂತಿ ವೇಧಾಃ ಸಂಪೂರ್ಣಸಗುಣೋ॥ ಪಾಸ್ತಿಮಾನಿಹ॥ ಕಲ್ಪೇ ಮುಕ್ತಾಃ ಭವಂತ್ಯೇವ ಪಚ್ಯಂತೇನೈಕದೈವ ಹಿ ಏವಂ ಚ ಬ್ರಹ್ಮಮಾನೇನ ಕಲ್ಪದ್ವಿಶತಕೇನ ಚ । ಪೂರ್ಣಭಕ್ತಿಃ ಪೂರ್ಣ ಗುಣೋಪಾಸ್ತಿಃ ಮುಕ್ತಿಃ ಭವತ್ಯಲಮ್॥ "ಉಪಾಧಿಃ" ಮೇಘಾದಿಃ ॥ ಅಧಿಕಾರಾನುಸಾರಾ । ತತ್ಕ್ರಮಃ ಸಪ್ತಚತ್ವಾರಿಂಶತ್ ಪದವರ್ಣಕೇ ಸ್ಪಷ್ಟೀ ಕರಿಷ್ಯಾಮಃ ॥೧೩॥

## ಕನ್ನಡಾರ್ಥ

ಅವರ ಅಪೇಕ್ಷಿತವಾದ ವಿಶೇಷ ವಿಷಯವನ್ನು ಈ ಪದ್ಯದಿಂದ ತಿಳಿಸು ತ್ತಾರೆ.

ಇಲ್ಲಿ ವಿಶೇಷ—ಸಾಮಾನ್ಯ ಹಾಗೂ ವಿಶೇಷವೆಂದು- ಅಪರೋಕ್ಷವು ಎರಡು ತರಹದ್ದಾಗಿದೆ. ೧ನೆಯದು:–ರಾಮಕೃಷ್ಣ ಮುಂತಾದ ಅವತಾರಗಳನ್ನು ಕೇವಲ ದೇವರೆಂಬ ದರ್ಶನದವು ಸಾಮಾನ್ಯಪರೋಕ್ಷವೆನಿಸುತ್ತದೆ. ಇವರ ಬಗ್ಗೆ ಸಾಮಾನ್ಯಸೂತ್ರವು ಪ್ರಮಾಣವಲ್ಲ. ಈ ಸಾಮಾನ್ಯಪರೋಕ್ಷವು

ಮೋಕ್ಷಕ್ಕೆ ವಿಶೇಷ ಕಾರಣವೆನಿಸಲಾರದು. ಆದುದರಿಂದ, ಸಾಮಾನ್ಯಪರೋಕ್ಷವೆಂದು ಹೆಸರು.

ಬಿಂಬಸಾಕ್ಷಾತ್ಕಾರವು ವಿಶೇಷಾಪರೋಕ್ಷವೆನಿಸುತ್ತದೆ. ಸಾಮಾನ್ಯಅಪರೋಕ್ಷದಿಂದ ಜನರು ಮುಕ್ತಿಯೋಗ್ಯರೆನಿಸುತ್ತಾರೆ.

ಇನ್ನು, ರಾಮಕೃಷ್ಣ ಮುಂತಾದ ಭಗವದವತಾರವನ್ನು ಹೊರಗೆ ಮನುಷ್ಯರೆಂದು ನೋಡುವ ಪ್ರತ್ಯಕ್ಷ ಸಾಕ್ಷಾತ್ಕಾರವು ಸರಿಯಾದ ಅಪರೋಕ್ಷವಲ್ಲ. ಅದು ಅನರ್ಥಕ್ಕೆ ಕಾರಣವಾಗಿರುತ್ತದೆ. "ವಿಷ್ಣುವನ್ನು ಅವತಾರಗಳಲ್ಲಿ ಅಲ್ಲದೇ ಬೇರೆಯಾಗಿ ನೋಡಲು ಸಾಧ್ಯವಿಲ್ಲ. ಅವತಾರಗಳನ್ನೂ ಸಹ ಜ್ಞಾನದೃಷ್ಟಿಯಿಂದಲೇ ನೋಡಬೇಕು.". ಹೀಗೆ ಕಾಠಕದಲ್ಲಿ ಹೇಳಲಾಗಿದೆ.

ಸ್ಥೂಲಹೃದಯದಿಂದ ನೋಡುವ ಅಪರೋಕ್ಷವು ಬಾಹ್ಯಅಪರೋಕ್ಷವೆನಿಸುತ್ತದೆ. ರಾಮಕೃಷ್ಣಾದಿ ರೂಪಗಳನ್ನು ಮನುಷ್ಯರೆಂದು ಬಾಹ್ಯವಾಗಿಯೇ ನೋಡುತ್ತಾರೆ. ಈ ಪ್ರತ್ಯಕ್ಷವು ಅಪರೋಕ್ಷವೆನ್ನಿಸಲಾರದು. ಸ್ವರೂಪಚಕ್ಷುರಿಂದ್ರಿಯದಿಂದದರ್ಶನ ಪಡೆಯುವುದೇ ನಿಜವಾದ ಅಪರೋಕ್ಷವೆನಿಸುತ್ತದೆ. ಸ್ವರೂಪೇಂದ್ರಿಯಗಳಿಂದ ಆಗುವ ಭಗವತ್ಸ್ವರೂಪಸಾಕ್ಷಾತ್ಕಾರವು ಮೋಕ್ಷಕಾರಣವೆನಿಸುತ್ತದೆ.

ಇದರಲ್ಲಿಯೂ, ವಿಶೇಷ:-ಋಜುಗಳನ್ನು ಬಿಟ್ಟು, ಬೇರೆಯವರಿಗೆ ಸಾಮಾನ್ಯಾಪರೋಕ್ಷವು, ಸಹ ಹಿಂದೆ ಹೇಳಿದ ಋಜುಗಳಿಗೆ ಈ ಬಿಂಬಾಪರೋಕ್ಷದ ಬಗ್ಗೆ ಪ್ರಯತ್ನವು ಸ್ವಾಭಾವಿಕವಾಗಿ ನೂರುಜನ್ಮಗಳಲ್ಲಿ ಇದ್ದೇ ಇರುತ್ತದೆ.

"ಋಜು ಮುಂತಾದ ತಾತ್ವಿಕರೆಲ್ಲರಿಗೂ ಅನಾದಿಕಾಲದಿಂದ ಅಪರೋಕ್ಷವಿರುತ್ತದೆ. ಸಾಮಾನ್ಯ ಹಾಗೂ ವಿಶೇಷ ಅಪರೋಕ್ಷಗಳೆರಡೂ ಅವರವರ ಯೋಗ್ಯತಾನುಸಾರವಾಗಿ, ಅವರಲ್ಲಿಗೆ ಆಯಾ ಕ್ಲೃಪ್ತಕಾಲದ ಉಚಿತವಾದ ಸ್ಥಾನಗಳಿಂದ ಬರುತ್ತದೆ"–ಎಂದು ಹೇಳಲಾಗಿದೆ. ಕ್ಲೃಪ್ತ- ಈ ಶಬ್ದಾರ್ಥವನ್ನು ಬೇರೆ ಕಡೆಯಲ್ಲಿ ವಿವರಿಸುವೆವು.

"ನೂರುಜನ್ಮಗಳಲ್ಲಿ ಬರಲಾರದ ಋಜುಗಳಿಗೆ (ನೂರು ಜನ್ಮಗಳ ಪೂರ್ವದಲ್ಲಿ) ವಿಶೇಷ ಅಪರೋಕ್ಷವಿರುವುದಿಲ್ಲ. ಇದೇ ಅವರಿಗೆ ವಿಶೇಷಾಪರೋಕ್ಷ ಅಭಾವವೇ ಅಜ್ಞಾನವೆನಿಸುತ್ತದೆ. ವಿಶೇಷ ಅಪರೋಕ್ಷಜ್ಞಾನವಾದ ದೇವೇಶ! ಅನಂತರ, ಅವರಿಗಅಜ್ಞಾನ ಸಂಶಯಗಳಾವವೂ ಇರುವುದಿಲ್ಲ. ಹೇ ನೂರು ಜನ್ಮಗಳಲ್ಲಿ ಅಪರೋಕ್ಷವಿದ್ದುದರಿಂದ, ಪೂರ್ಣಜ್ಞಾನವು ನನಗೆ ಇದ್ದೇ ಇದೆ; ಇದರಲ್ಲಿ ಸಂಶಯವನ್ನು ತಾಳಬಾರದು. ನೂರು ಜನ್ಮಗಳ ಪೂರ್ವದಲ್ಲಿ ನನಗೆ ಅಪರೋಕ್ಷವಿದ್ದು, ಪೂರ್ಣಜ್ಞಾನವಿದೆಯೆಂದು ಮಹರ್ಷಿಗಳು ಹೇಳುತ್ತಾರೆ."– ಎಂದು ಹೇಳಲಾಗಿದೆ.

ಇನ್ನು ಹೇಳಿದ್ದೇನೆಂದರೆ — "ನೂರು ಸಂಖ್ಯಾಕ ಋಜುಗಳು ಅಪರೋಕ್ಷದ ಸಲುವಾಗಿ ಪ್ರಯತ್ನಿಸುತ್ತಾರೆ. ಅನಂತವೇದೋಕ್ತಗುಣಗಳನ್ನು ಸದಾ ಉಪಾಸಿಸುತ್ತಾರೆ. ಶ್ರೇಷ್ಠಗುಣಗಳನ್ನು ಉಪಾಸಿಸುತ್ತಾ, ಕ್ರಮವಾಗಿ ಸದಾ ಯತ್ನಿಸುತ್ತಾರೆ. ಅವರೇ ಸಂಪೂರ್ಣಗುಣೋಪಾಸನೆಯುಳ್ಳ ಚತುರ್ಮುಖಪದವಿಯನ್ನು ಹೊಂದಿರುತ್ತಾರೆ. ಕಲ್ಪಪರಿಸಮಾಪ್ತಿಯಾದ ಅನಂತರ ಮುಕ್ತರಾಗುತ್ತಾರೆ. ಬ್ರಹ್ಮಮಾಗದಿಂದ ೨೦೦ ಕಲ್ಪಗಳಸಾಧನದಿಂದ ಪೂರ್ಣಜ್ಞಾನ ಭಕ್ತಿಗಳಿಂದ, ಹರಿಯ ಸ್ವಯೋಗ್ಯಪೂರ್ಣಗುಣೋಪಾಸನೆಯಿಂದ ಉತ್ತಮಮುಕ್ತಿಯನ್ನು ಪಡೆಯುತ್ತಾರೆ."

ಸೂರ್ಯನಿಗೆ ಮೇಘ - ಮುಂತಾದವುಗಳು ಉಪಾಧಿಗಳೆನಿಸುವವು. ನಿರಭ್ರಆಕಾಶದಲ್ಲಿ ಮೆರೆಯುವ ರವಿಪ್ರಕಾಶದಂತೆ, ಋಜುಗಳ ಅಪರೋಕ್ಷವಿರುತ್ತದೆ. ಆದರಲ್ಲೂ, ಅವರವರ ಯೋಗ್ಯತಾನುಸಾರವೇ ಆಗಿರುತ್ತದೆ. ಅದರ ಬಗೆಯನ್ನು ೪೭ನೆಯ ಪದ್ಯದ ವ್ಯಾಖ್ಯಾನದಲ್ಲಿ ವಿಶದಪಡಿಸುವೆವು. ॥೧೩॥

## ■ ಶ್ರೀಗುರುಹೃದಯಪ್ರಕಾಶಿಕೆ

ಶತಜನ್ಮ ಸಾಧನಾತ್ಪೂರ್ವದಲ್ಲಿ, ಈ ಋಜ್ವಾದಿ ತಾತ್ತ್ವಿಕರೆಂಬ

ತತ್ತ್ವೇಶರು ಅನಾದಿಸಾಮಾನ್ಯಾಪರೋಕ್ಷಿಗಳೆಂದು ಹೇಳಿಸಿಕೊಳ್ಳುವರು.

ಸಾಧನಾನಂತರ, ತಮ್ಮ ಸ್ವಾಧಾರವೆಂಬ ಬಿಂಬರೂಪವನ್ನು ಉಪಾಧಿರಹಿತಾನಿತ್ಯನಂದದಿ- ಅಂದರೆ, ರಾಹು, ಮೇಘ, ಮೊದಲಾದ ಉಪಾಧಿ- ಎಂಬ ಆಚ್ಛಾದನೆ ಇಲ್ಲದ, ಶುದ್ಧವಾದ ಸೂರ್ಯಮಂಡಲದಂತೆ, ಯೋಗ್ಯತಾನುಸಾರ ಭಕ್ತಿಯಿಂದ ನೋಡುವರು. ॥೧೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಪರೋಕ್ಷದಲ್ಲಿ ಎರಡು ಪ್ರಕಾರ :.

೧. ಸಾಮಾನ್ಯ ಅಪರೋಕ್ಷ. ೨. ವಿಶೇಷ ಅಪರೋಕ್ಷ.

ಶ್ರೀಹರಿಯ ರಾಮಕೃಷ್ಣಾದಿ ಅವತಾರಗಳಲ್ಲಿ, ಅವನ ದರ್ಶನವು ಸಾಮಾನ್ಯ ಅಪರೋಕ್ಷವೆನಿಸುವುದು. ಇದಕ್ಕೆ ಬಾಹ್ಯಪರೋಕ್ಷವೆಂತಲೂ ಹೆಸರು. ಇದು ಮೋಕ್ಷಕ್ಕೆ ವಿಶೇಷ ಕಾರಣವೆನಿಸಲಾರದು.

ಬಿಂಬಾಪರೋಕ್ಷಕ್ಕೆ ವಿಶೇಷಾಪರೋಕ್ಷವೆಂದು ಹೆಸರು. ಇದು ಸ್ವರೂಪ ಚಕ್ಷುರಿಂದ್ರಿಯದಿಂದ (ಅಂತರ್ಕಣ್ಣುಗಳಿಗೆ)ದರ್ಶನವಾಯಿತು. ಸ್ಥೂಲದೇಹ ಗತ ಹೃದಯಾಕಾಶದಲ್ಲಿರುವ ಹೃತ್ಪದ್ಮದಲ್ಲಿ ಕಾಣುವುದೇ ಬಿಂಬಾಪರೋಕ್ಷ. ಆಗ, ಚೇತನನಿಗೆ ಸ್ವರೂಪಜ್ಞಾನವುಂಟಾಗುವುದು. ಬಿಂಬದರ್ಶನದ್ವಾರಾ. ಪ್ರತಿಬಿಂಬದ ಸ್ವರೂಪವಗೋಚರವಾಗುವುದು. ಇದೇ ಮೋಕ್ಷಕ್ಕೆ ಕಾರಣವು,

೨. ಸಮಸ್ತದೇವತೆಗಳು ಅಂಡದ ಹೊರಗೆ, ಅಂಶ ವಿಶೇಷದಿಂದ ವಿದ್ಯಮಾನರಾಗಿರುವರು. ಅಂಡದ ಹೊರಭಾಗಗತ ತತ್ತ್ವಗಳು ಅಸಂಸೃಷ್ಟಗಳು. ಅಲ್ಲಿ ಇರತಕ್ಕ ಋಜ್ವಾದಿ ತಾತ್ತ್ವಿಕರೇ ಮೊದಲಾದ ದೇವತೆಗಳು—ಅಂದರೆ ಋಜುಗಳಿಂದ ಆರಂಭಿಸಿ,ಶತಸ್ಥ ದೇವಗಣಾಂತ ದೇವತಾಸಮೂಹ ಭಕ್ತಿಯೋಗಿಗಳು. ಅವರಿಗೆ ಅಪರೋಕ್ಷತಿರೋಧಾನವಿಲ್ಲ. ಅವರು ಅನಾದಿ ಅಪರೋಕ್ಷಿಗಳೆನಿಸುವರು.

ಆದರೆ, ಅಂಡದ ಒಳಗಿನ ತತ್ತ್ವಗಳು ಸಂಸೃಷ್ಟಗಳು. ಅಂಡಸೃಷ್ಟಿಯಲ್ಲಿ

ಬಂದ ಋಜುಗಳು ಅಪರೋಕ್ಷಿಗಳು. ಅವರಿಗೆ ಅಂಡದ ಹೊರಗೂ ಮತ್ತು ಒಳಗೂ ಅಪರೋಕ್ಷತಿರೋಧಾನ ಯಾವಾಗೂ ಇಲ್ಲ. ಅವರು ಸದಾಪರೋಕ್ಷಿಗಳು. ಆದರೆ, ಅಂಡದ ಒಳಗೆ ಸೃಷ್ಟರಾದ ಋಜುಗಳ ವ್ಯತಿರಿಕ್ತರಾಗಿ, ತದನ್ಯರಾದ ರುದ್ರಾದಿ ಶತಸ್ಥದೇವಗಣಾಂತ ಸುರರು, ಸಂಸೃಷ್ಟಿಸ್ಥೂಲದೇಹಗಳನ್ನು ಧರಿಸುವರು. ಅವರಿಗೆ ಅಸುರಾವೇಶವೂ, ಅಜ್ಞಾನವೂ, ತ್ರಿಗುಣಜವಿಕಾರಾದಿಗಳೂ, ಅಪರೋಕ್ಷತಿರೋಧಾನವೂ ಇರುವುವು. ಇದೇ ಋಜುಗಳಿಗೂ ಮತ್ತು ಇತರ ದೇವತೆಗಳಿಗೂ ಇರುವ ಮುಖ್ಯವ್ಯತ್ಯಾಸ. ಋಜುಗಳು ವಿಶೇಷ ಅಪರೋಕ್ಷಿಗಳು. ಇತರ ದೇವತೆಗಳು ಸಾಮಾನ್ಯಪರೋಕ್ಷಿಗಳು. ಸಕಲದೇವತೆಗಳೂ ಜಾತ್ಯಾಪರೋಕ್ಷಿಗಳಾದರೂ. ಋಜುಗಳಿಂದ ಈ ವ್ಯತ್ಯಾಸವನ್ನು ಋಜುವ್ಯತಿರಿಕ್ತ ದೇವತೆಗಳು ಹೊಂದಿರುತ್ತಾರೆ.

೩. ಸಾಧನೋತ್ತರದಲ್ಲಿ ರುದ್ರಾದಿ ಶತಸ್ಥಗಣಪರ್ಯಂತ ಇರುವ ತಾತ್ವಿಕದೇವತೆಗಳು ತಮ್ಮ ತಮ್ಮ ಅಧಿಕಾರಗಳಿಗನುಗುಣವಾಗಿ (ಸಾಧನೆ ವಿಶೇಷಗಳು ಒಬ್ಬೊಬ್ಬರಿಗೂ ಬೇರೆ ಬೇರೆ) ಸ್ವಬಿಂಬನನ್ನು ಕಾಣುವರು. ಹೇಗೆಂದರೆ, ಉಪಾಧಿರಹಿತಸೂರ್ಯನಂತೆ, ಆಕಾಶದಲ್ಲಿ ಮೋಡಗಳಿಂದ ಸೂರ್ಯನು ಆಚ್ಛಾದಿತನಾಗಿದ್ದರೆ. ಆವನು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಮೋಡಗಳು ಚದುರಿದಾಗ, ಸೂರ್ಯನ ಕಾಂತಿ ಸ್ಪಷ್ಟರಾಗಿ ಕಾಣಿಸುತ್ತದೆ. ಸೂರ್ಯನ ಸಹಜಕಾಂತಿಯನ್ನು ಮೋಡಗಳು ಮರೆಮಾಡಲಾರೆವು. ಆದರೆ, ಮೋಡದಿಂದ ಆಚ್ಛಾದಿತನಾದ ಸೂರ್ಯನನ್ನು ನಾವು ನೋಡಲಾರೆವು.

ಅಂತೆಯೇ, ಸ್ವಬಿಂಬನು ಸದಾಪೂರ್ಣನು. ಪ್ರಕಾಶಪೂರ್ಣನು. ಅಜ್ಞಾನ, ಅಸುರಾವೇಶ- ಮುಂತಾದ ಉಪಾಧಿಗಳು ಮೋಡಗಳಿದ್ದಂತೆ, ಮೋಡಗಳು ಸ್ವಯಂಪ್ರಕಾಶನಿದ್ದರೂ, ಆವನನ್ನು ಮರೆಮಾಡುವಂತೆ. ಅಪರೋಕ್ಷ, ತಿರೋಧಾನಕಾರಣದಿಂದ. ಸ್ವಬಿಂಬದರ್ಶನವಾಗುವುದಿಲ್ಲ. ರುದ್ರಾದಿದೇವತೆಗಳು ತಮ್ಮ ವಿಶೇಷ ಸಾಧನೆಯಿಂದ, ಆ ಉಪಾಧಿಯಿಂದ ದೂರರಾಗಿ, ಬಿಂಬದರ್ಶನವನ್ನು ಪಡೆಯುವರು. ಈ ಕಾರಣದಿಂದ **ಅಧಿಕಾರಾನುಸಾರದಲಿ**— ಎಂದಿದ್ದಾರೆ.

ಕೆಲವರಿಗೆ, ಒಂದು ಸೂರ್ಯಪ್ರಕಾಶದಷ್ಟು. ಅವರಿಗಿಂತ ಉತ್ತಮರಿಗೆ ಎರಡು-ಮೂರು-ನಶನೂರುಪಟ್ಟು. ಅವರವರ ಸ್ವರೂಪಯೋಗ್ಯತೆಗನುಗುಣವಾಗಿ ಬಿಂಬದರ್ಶನರಾಗುವರು. ॥೧೬॥

## ಪದ್ಯ-೧೪

**ಮೂಲ :**

**ಭಿನ್ನಭಕ್ತರು ಎನಿಸುತಿಹರು ಸು ।**
**ಪರ್ಣ ಶೇಷಾದ್ಯಮರರೆಲ್ಲಾ ।**
**ಚ್ಛಿನ್ನಭಕುತರು ನಾಲ್ಕರೆನಿಪರು ಭಾರತೀ ಪ್ರಾಣ ॥**
**ಸೊನ್ನೊಡಲ ವಾಗ್ದೇವಿಯರು ಪಣೆ ।**
**ಗಣ್ಣ ಮೊದಲಾದವರೊಳಗೆ ತ ।**
**ತ್ತನ್ನಿಯಾಮಕರಾಗಿ ವ್ಯಾಪಾರವನೆ ಮಾಡುವರು ॥೧೪॥**

**ಅವತರಣಿಕೆ :**

ಭಿನ್ನಭಕ್ತರಾದ ಗರುಡ, ಶೇಷ ರುದ್ರಾದಿಗಳ ವಿಚಾರವನ್ನು ತಿಳಸುತ್ತಾರೆ. ॥೧೪॥

**ಪ್ರತಿಪದಾರ್ಥ**

**ಭಿನ್ನಭಕ್ತರು**—ಅವಿಚ್ಛಿನ್ನಭಕ್ತರಲ್ಲದ (ಋಜುಗಳ ಅನ್ಯರಾದ) **ಸುಪರ್ಣ** — ಶ್ರೀಗರುಡದೇವರು. **ಶೇಷ** — ಶ್ರೀಶೇಷದೇವರು, **ಆದಿ ಅಮರರೆಲ್ಲಾ**—ಇವರೇ ಮೊದಲಾದ ಶತಸ್ಥಗಣಪರ್ಯಂತವಾಗಿ ಇರುವ ಸಕಲದೇವತೆಗಳು, **ಎನಿಸುತಿಹರು**—ಕರೆಯಿಸುವವರಾಗುತ್ತಾರೆ. (ಅವರ ಭಕ್ತಿಭಾವವು ಋಜುಗಳಂತೆ ಶಶ್ವದೇಕಪ್ರಕಾರ ಇರುವುದಿಲ್ಲ. ಮಧ್ಯೆ ತಿರೋಧಾನವಾಗಿರುತ್ತದೆ) **ಭಾರತಿ**—ಶ್ರೀ ಭಾರತೀದೇವಿ, **ಪ್ರಾಣ**—ಮುಖ್ಯಪ್ರಾಣ ನಾಮಕರಾದ ಶ್ರೀವಾಯುದೇವರು. **ಸೊನ್ನೊಡಲ**— ಹಿರಣ್ಯಗರ್ಭನಾಮಕರಾದ ಶ್ರೀಬ್ರಹ್ಮದೇವರು. **ವಾಗ್ದೇವಿಯರು**— ಬ್ರಹ್ಮಪತ್ನಿಯರ, ವಾಗಭಿ

ಮಾನಿಗಳೂ ಆವ ಶ್ರೀಸರಸ್ವತೀದೇವಿ, **ನಾಲ್ವರು** —ಈ ನಾಲ್ಕುಮಂದಿ. **ಅಚ್ಛಿನ್ನಭಕುತರು**—ಏಕಪ್ರಕಾರವಾದ ಅವಿಚ್ಛಿನ್ನವಾದ ಭಕ್ತರು, **ಎನಿಪರು**—ಎಂದು ಕರೆಯಿಸುವರು. **ಫಣೆಗಣ್ಣ ಮೊದಲಾದ**—ಲಲಾಟನೇತ್ರರಾದ ಶ್ರೀರುದ್ರದೇವರೇ ಮೊದಲಾಗಿ, **ಅವರೊಳಗೆ**— ಆ ದೇವತೆಗಳಲ್ಲಿ **ತತ್ತನ್ನಿಯಾಮಕರಾಗಿ**—ಆಯಾಯ ಚತುರ್ವಿಂಶತಿ ತತ್ತ್ವದೇವತಾನಾಮಗಳಿಂದ, ತತ್ತ್ವಾಭಿಮಾನಿಗಳಾಗಿ, **ವ್ಯಾಪಾರವನೆ** —ಸ್ಥೂಲದೇಹಗತ ಇಂದ್ರಿಯವ್ಯಾಪಾರಗಳನ್ನು, (ಇಂದ್ರಿಯಗಳಕಾರ್ಯ) **ಮಾಡುವರು**—ನಿಯಾಮಕರಾಗಿ ಇದ್ದು ಮಾಡಿ ಮಾಡಿಸುವರು. ॥೧೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಛಿದ್ರಭಕ್ತರು, ಅಚ್ಛಿದ್ರಭಕ್ತರು-ಇವರ ವಿಚಾರ ಹೇಳತಾರೆ.

ಛಿದ್ರಯುಕ್ತರಾದ ಭಕ್ತರೆಂತ ಎನಿಸೋವರಾಗತಾರೆ- ಯಾರು ಎಂದರೆ. ಗರುಡದೇವರು, ಶೇಷದೇವರು- ಇವರೇ ಮೊದಲಾದ ಶತಸ್ಥದೇವಗಣಾಂತ ವರಿಗೂ ಈ ದೇವತೆಗಳು. ಛಿದ್ರಭಕುತಿ, ಎಂದರೆ, ಶಶ್ವದೇಕಪ್ರಕಾರ ಭಕ್ತಿ ಇರದೇ ಮಧ್ಯೆಮಧ್ಯೆ ತಿರೋಧಾನವಾಗತದೆ. ಭಾರತೀದೇವರು, ಇವರ ಪತಿ ಪ್ರಧಾನ ವಾಯುದೇವರು ಇವರಿಬ್ಬರು, ಹಿರಣ್ಯಗರ್ಭರಾದ ಬ್ರಹ್ಮದೇವರು, ಇವರ ಪತ್ನಿ ಸರಸ್ವತೀದೇವೇರು ಇವರಿಬ್ಬರು. ಈ ನಾಲ್ಕುಮಂದಿ ಛಿದ್ರರಹಿತರಾದ ಭಕ್ತರು ಎನಿಸೋವರಾಗತಾರೆ. ಭಕ್ತಿಯೋಗಿಗಳೊಳಗೆ ಈ ಪ್ರಕಾರ ಎರಡು ವಿಧ. ಲಲಾಟನೇತ್ರರಾದ ರುದ್ರದೇವರು- ಈ ಮೊದಲಾದವರ ಸ್ಥೂಲದೇಹಗಳೊಳಗೆ ಆಯಾ ಚತುರ್ವಿಂಶತಿತತ್ತ್ವದೇವತಾನಾಮಗಳಿಂದ, ತತ್ತ್ವಾಭಿಮಾನಿಗಳಾಗಿ, ಏಕಾದಶೇಂದ್ರಿಯಗಳಿಗೆ ನಿಯಾಮಕರಾಗಿ, ಆಯಾ ಇಂದ್ರಿಯವ್ಯಾಪಾರಗಳ ಭಗದಾಜ್ಞಾನದಿಂದ ಮಾಡೋವರಾಗತಾರೆ. ಪೂರ್ವೋಕ್ತ ಬ್ರಹ್ಮಾದಿ ನಾಲ್ಕುಮಂದಿ ಸ್ಥೂಲೇಂದ್ರಿಯಗಳಿಗೆ ರಮಾ–ಮಧುಸೂದನರು

ನಿಯಾಮಕರು. ಪರಂಪರಾದಿಂದ ಸ್ತೋತ್ರವುರೆಲ್ಲಾ ಅವರರಿಗೆ ನಿಯಾಮಕರು ॥೧೪॥

## ೨. ಭಾವಪ್ರಕಾಶಿಕೆ

ಗರುಡ ಶೇಷ ಮೊದಲಾದ ದೇವತೆಗಳು ಭಿನ್ನ ಭಕ್ತರೆನಿಸುವರು. ಭಾರತೀ, ಸರಸ್ವತೀದೇವಿಯರು, ಬ್ರಹ್ಮದೇವರು, ವಾಯುದೇವರು- ಈ ನಾಲ್ವರೂ ಅಭಿನ್ನ ಭಕ್ತರೆನಿಸುವರು. ಇವರು ನಾಲ್ವರೂ, ರುದ್ರ ಮೊದಲಾದ ದೇವತೆಗಳೊಳಗೆ ಇದ್ದು, ಆಯಾಕಾರ್ಯಗಳಿಗೆ ಪ್ರೇರಕರಾಗಿ, ಕರ್ಮಗಳನ್ನು ಮಾಡಿಸುವರು. ॥೧೪॥.

## ೩. ಭಾವದರ್ಪಣ

ಧನ। ಅಚ್ಛಿನ। "ಅಚ್ಛಿನ್ನಭಗವದ್ಧರ್ಮೋ ಕಾಮ್ಯಕರ್ಮವಿವರ್ಜಿತಃ। ಸರ್ವಜ್ಞಾನೋಪದೇಷ್ಟಾ ಚ ಮೋಕ್ಷದಾತಾಖಿಲಸ್ಯಚೇತಿ" ॥ ರತ್ನಮಾಲೋಕ್ತೇಃ। ಜ್ಞಾನ ಭಕ್ತಿ ವೈರಾಗ್ಯ.ಈ ಮೂರರಿಂದಲೂ ಪೂರ್ಣರೆಂಬೋದೇ ನಿಶ್ಚಯ। "ತ್ರಯೋಗ್ಯಾಭ್ಯಾದಿಕೋ ಬ್ರಹ್ಮಾ ಸರ್ವೇಭ್ಯಃ ಪರಮೋ ವಿಭುಃ। ಮಹಾಯೋಗೀಶ್ವರೇಶೇಶಾಸ್ತಸ್ಮಾತ್ ಬ್ರಹ್ಮ ಚತುರ್ಮುಖಃ। ಉತ್ತಮಾಭಕ್ತಿಯೋಗಾಸ್ತು ಜ್ಞಾನಯೋಗಾಸ್ತು ಮಧ್ಯಮಾಃ। ಅಧಮಾ ಕರ್ಮಯೋಗಾಶ್ಚ ಬ್ರಹ್ಮಕಾ ಮುಖ್ಯ ಭಕ್ತಿಭಾಗಿತಿ"- ಏಕಾದಶಸ್ಕಂಧ ತಾತ್ಪರ್ಯೋಕ್ತೇಃ। ಭಿಂನಭಕ್ತಿ ಖಂಡಭಕ್ತಿ ಅಚ್ಛಿಂನ ಅಖಂಡಭಕ್ತಿ ಸೊಂನೊಡಲ- ಬ್ರಹ್ಮಾ. ಪಣೆಗಣ್ಣ-ರುದ್ರ ವಿಂಬರ್ಥ. ॥೧೪॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

'ಭಿನ್ನ' ಇತಿ ॥ ವಕ್ರಯೋಗಿತ್ವಾತ್ ಇತಿ ಶೇಷಃ ॥ "ಯೋಗಸ್ಯ ವಕ್ರತಾ ನಾಮ ಕಾಮ್ಯೇನ ಹರಿಪೂಜನಮ್॥ ಇಂದ್ರಾದಿಕಾನಾಂ ಕದಾಚಿದಸ್ತಿ ಪಕ್ಷೀಂದ್ರ ಯತೋ ನ ಋಜವಃ ಸ್ಮೃತಾಃ ॥ 'ಸೊನ್ನ'-ಸ್ವರ್ಣ॥ 'ಪಣೆಗಣ್ಣ.' ರುದ್ರ. ॥೧೪॥

## ಕನ್ನಡಾರ್ಥ

ಭಿನ್ನಭಕ್ತರೆಂದರೆ–ವಕ್ರವಾದ ಯೋಗವುಳ್ಳವರು-ಎಂದು ಅರ್ಥ. ಕಾಮ್ಯ ಫಲವನ್ನುದ್ದೇಶಿಸಿ ಹರಿಯನ್ನು ಪೂಜಿಸುವುದು ಯೋಗದ ವಕ್ರತೆ- ವಕ್ರ ಯೋಗವೆನಿಸುತ್ತದೆ. "ರುದ್ರ, ಇಂದ್ರ-ಮುಂತಾದವರಿಗೆ ಈ ವಕ್ರಯೋಗವು ಒಮ್ಮೊಮ್ಮೆ ಇರುವುದು." ಯಾಕೆಂದರೆ–ಅವರು ಋಜುಗಳಲ್ಲ. ಆದುದರಿಂದ, ಒಮ್ಮೊಮ್ಮೆ ಕಾಮ್ಯಫಲೋದ್ದೇಶದಿಂದ ಹರಿಯನ್ನು ಪೂಜಿಸುತ್ತಾರೆ.

ಸೊನ್ನ–ಸುವರ್ಣ, ಬಂಗಾರ. ಪಣೆಗಣ್ಣ—ಹಣೆಯಲ್ಲಿ ಕಣ್ಣುಳ್ಳವ, ರುದ್ರ. ॥೧೪॥

### ಶ್ರೀ. ಶ್ರೀಗುರುಹೃದಯಪ್ರಕಾಶಿಕೆ

ಭಿನ್ನಭಕ್ತರು- ಅಂದರೆ, ಕ್ವಚಿತು ಅಜ್ಞಾನಾದಿಗಳಿಂದ ನಿರಂತರ ಭಕ್ತಿ ಇಲ್ಲದವರು. ಸುವರ್ಣನೆಂಬ, ಗರುಡ, ಶೇಷ– ಮೊದಲಾದ ದೇವತೆಗಳು. ಸೊಸ್ನೊಡಲನೆಂಬ ಬ್ರಹ್ಮ, ವಾಯುದೇವರು ವಾಗ್ದೇವಿ, ಭಾರತಿ ಸಹ-ನಾಲ್ಕು ಜನರು ಅಚ್ಛಿನ್ನಭಕ್ತರೆಂದು ಕರೆಸುವರು. ಈ ನಾಲ್ವರು ಪಣೆಗಣ್ಣನೆಂಬ ರುದ್ರ ಮೊದಲಾದವರಲ್ಲಿ ತನ್ನಿಯಾಮಕರಾಗಿ, ಸರ್ವಕಾರ್ಯವನ್ನೂ ನಿರ್ವಹಿಸು ವರು. ॥೧೪॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಹರಿಯ ಭಕ್ತರಲ್ಲಿ ಎರಡು ಪ್ರಕಾರ.

೧. ಅಚ್ಛಿನ್ನಭಕ್ತರು. ೨. ಭಿನ್ನಭಕ್ತರು.

೨. ಶಶ್ವದೇಕಪ್ರಕಾರವಾದ ಏಕಧಾರಾರೂಪವಾದ ಅವಿಚ್ಛಿನ್ನಭಕ್ತಿ ಯನ್ನು ಉಳ್ಳ ಋಜುಗಳು ಅಚ್ಛಿನ್ನಭಕ್ತರು.

ಭಂಗಾರದ ಕಾಂತಿಯಿಂದ ಹೊಳೆಯುತ್ತಿರುವ ರೆಕ್ಕೆಗಳನ್ನು ಹೊಂದಿರುವ ಶ್ರೀಗರುಡದೇವರಿಗೆ **ಸುಪರ್ಣ**ನೆಂದು ಹೆಸರು. (ಸು–ಸುವರ್ಣ ಬಣ್ಣದಂತೆ ಕಾಂತಿಯುಕ್ತ. ಪರ್ಣ-ಪಕ್ಷದ್ವಯಗಳು)

ಶ್ರೀಗರುಡದೇವರು, ಶ್ರೀಶೇಷದೇವರು, ಶ್ರೀರುದ್ರದೇವರು- ಮೊದಲಾಗಿ, ಶತಸ್ಥ ದೇವಗಣ ಪರ್ಯಂತ ಇರುವದೇವತೆಗಳು **ಛಿನ್ನಭಕ್ತ** ರೆನಿಸುವರು.

ಇವರಿಗೆ, ಋಜುಗಳಂತೆ, ಅವಿಚ್ಛಿನ್ನವಾದ ಭಕ್ತಿ ಶ್ರೀಹರಿಯಲ್ಲಿ ಇರುವು ದಿಲ್ಲ. ಕಾಲಕಾಲಕ್ಕೆ ಒದಗುತ್ತಿರುವ ಅಸುರಾವೇಶ, ಅಜ್ಞಾನ, ಅಪರೋಕ್ಷ ತಿರೋಧಾನದಿಂದ ಅವರ ಭಕ್ತಿ ಅವಿಚ್ಛಿನ್ನವಾಗಿರುವುದಿಲ್ಲ.

ಛಿನ್ನಭಕ್ತರೆಂದರೆ,– "ವಕ್ರವಾದ ಯೋಗವುಳ್ಳವರು"— ಎಂದು ಇನ್ನೊಂದರ್ಥ. ಕಾಮ್ಯಫಲವನ್ನುದ್ದೇಶಿಸಿ, ಹರಿಯನ್ನು ಪೂಜಿಸುವುದು ಯೋಗದ ವಕ್ರತೆ". ರುದ್ರ ಇಂದ್ರಾದಿಗಳಿಗೆ ಒಮ್ಮೊಮ್ಮೆ ಕಾಮ್ಯಫಲೋದ್ದೇಶ ದಿಂದ, ಶ್ರೀಹರಿಯನ್ನು ಪೂಜಿಸುವರು. ಇದರಿಂದ, ಇವರು ಛಿನ್ನ ಭಕ್ತರಂದೆನಿಸುವರು.

೩. ಭಕ್ತಿಗೆ ಅಭಿಮಾನಿಗಳಾದ ಭಾರತೀದೇವಿ, ಮುಖ್ಯಪ್ರಾಣರಾದ ಶ್ರೀವಾಯುದೇವರು, ಹಿರಣ್ಯಗರ್ಭನಾಮಕರಾದ ಶ್ರೀಬ್ರಹ್ಮದೇವರು, ಬ್ರಹ್ಮ ಪತ್ನಿಯರಾದ ವೇದಾಭಿಮಾನಿಯಾದ ಶ್ರೀಸರಸ್ವತೀ– ಈ ನಾಲ್ಕುಮಂದಿ **ಅಚ್ಛಿನ್ನಭಕ್ತ**ರೆನಿಸುವರು. ಇವರಿಗೆ **ಪರಶುಕ್ಲತ್ರಯ**ರೆಂದು ಹೆಸರು. ಅವರಿಗೆ ಅಸುರಾವೇಶವಿಲ್ಲ. ಕಲ್ಯಾದಿಬಾಧೆಗಳಿಲ್ಲ. ಅತಿರೋಹಿತವಿಮಲ ವಿಜ್ಞಾನಿಗಳು. ಶ್ರೀಹರಿಯ ವಿಷಯದಲ್ಲಿ ಮಹಾಪ್ರಳಯಕಾಲದಲ್ಲೂ, ಸಮೀಚೀನವಾದ ಜ್ಞಾನಭಕ್ತಿ ಉಳ್ಳವರು. ಸದಾ ಜಾಗ್ರತರಾಗಿರುವವರು.

**ಪೊನ್ನ**—ಎಂದರೆ, ಚಿನ್ನ ಅಥವಾ ಹಿರಣ್ಯ. **ಒಡಲ**—ಎಂದರೆ, ಉದರ- ಗರ್ಭ ಎಂದರ್ಥ. ಅಂದರೆ, ಬ್ರಹ್ಮದೇವರು ಶ್ರೀ ಪದ್ಮನಾಭದೇವ

ಅಪ್ರಾಕೃತವಾದ ಹಿರಣ್ಯಾತ್ಮಕವಾದ ನಾಭೀಕಮಲದಲ್ಲಿ ಸಂಜಾತರಾಗಿರುವುದರಿಂದ, ಅವರಿಗೆ.ಹಿರಣ್ಯಗರ್ಭ ಅಥವಾ ಸೊನ್ನೊಡಲ-ಎಂದು ಹೆಸರು.

ಪೂರ್ವೋಕ್ತ ನಾಲ್ಕುಮಂದಿ ಉತ್ತಮದೇವತೆಗಳು. ರುದ್ರದೇವರು ಇಂದ್ರ-ಮೊದಲಾದ ಸಕಲತತ್ತ್ವದೇವತೆಗಳಲ್ಲಿದ್ದು, ತತ್ವಾನಿಯಾಮಕರಾಗಿರುವರು ಅವರ ದ್ವಾರಾ ಆಯಾಯಾ ತತ್ತ್ವನಾಮಕರಾಗಿ, ಸಕಲಇಂದ್ರಿಯ ಕಾರ್ಯಗಳನ್ನು ಸ್ಥೂಲದೇಹಗತಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವರ ದ್ವಾರಾ ಮಾಡಿ ಮಾಡಿಸುತ್ತಿರುವರು. ಈ ನಾಲ್ವರ ಪ್ರೇರಣೆ-ರುದ್ರಾದಿ ತತ್ತ್ವಾಭಿದೇವತೆಗಳಿಗೆ. ಅವರ ಪ್ರೇರಣೆ ಜೀವನಿಗೆ. ಈರೀತಿ ಬಿಂಬಪ್ರತಿ, ಬಿಂಬದ ಕ್ರಿಯಾಸರಣಿವಿಶೇಷ. ॥೧೪॥

## ಪದ್ಯ-೧೫

**ಮೂಲ :**

**ಹೀನ ಸತ್ಕರ್ಮಗಳೆರಡು ಪವ |**
**ಮಾನದೇವನು ಮಾಳ್ಪನಿದಕನು |**
**ಮಾನವಿಲ್ಲೆಂದೆನುತ ದೃಢಭಕ್ತಿಯಲಿ ಭಜಿಪರ್ಗೆ ||**
**ಪ್ರಾಣಪತಿ ಸಂಪ್ರೀತನಾಗಿ ಕು |**
**ಯೋನಿಗಳ ಕೊಡನೆಲ್ಲ ಕರ್ಮಗ |**
**ಳಾನೆ ಮಾಡುವೆನೆಂಬ ಮನುಜರ ನರಕಕ್ಕೈದಿಸುವ ||೧೫||**

**ಅವತರಣಿಕೆ :**

ಶುಭಾಶುಭರೂಪದ ದ್ವಂದ್ವಕರ್ಮಗಳನ್ನು ಶ್ರೀವಾಯುದೇವರೇ ಮಾಡುತ್ತಾರೆಂದು ತಿಳಿಸುತ್ತಾರೆ. ||೧೫||

**ಪ್ರತಿಪದಾರ್ಥ :**

**ಪವಮಾನದೇವನು**—ಶ್ರೀವಾಯುದೇವರು, **ಹೀನ**—ನೀಚವಾದ ಪಾಪಕರ್ಮಗಳು. **ಸತ್ಕರ್ಮ**—ಪುಣ್ಯಕರ್ಮಗಳು, **ಎರಡು**—ಈ ದ್ವಂದ್ವ ಕರ್ಮಗಳನ್ನೂ, **ಮಾಳ್ಪನು**—ಜೀವರಲ್ಲಿದ್ದು ಮಾಡಿ ಮಾಡಿಸುವರು. **ಇದಕೆ**—ಈ ಮಾತಿಗೆ, **ಅನುಮಾನವಿಲ್ಲೆಂದೆನುತ**—ಲವಲೇಶವೂ ಸಂದೇಹವಿಲ್ಲ—ಎಂಬ ಅನುಸಂಧಾನದಿಂದ, **ದೃಢಭಕ್ತಿಯಲಿ**—ನಿಶ್ಚಲವಾದ ಭಕ್ತಿಭಾವದಿಂದ, **ಭಜಿಪರ್ಗೆ**—ಭಜಿಸತಕ್ಕವರಿಗೆ, **ಪ್ರಾಣಪತಿ**—ಪ್ರಾಣದೇವರಿಗೆ ಪ್ರಭುವಾದ ಶ್ರೀಪರಮಾತ್ಮನು, **ಸಂಪ್ರೀತನಾಗಿ**—ಪ್ರೀತಿಯಿಂದ ಅನುಗ್ರಹಪ್ರದನಾಗಿ, **ಕುಯೋನಿಗಳ**—ನೀಚಯೋನಿಗಳನ್ನು, **ಕೊಡನು**—ಕೊಡುವುದಿಲ್ಲ. **ಎಲ್ಲ ಕರ್ಮಗಳ**—ಪುಣ್ಯ, ಪಾಪ, ಮಿಶ್ರರೂಪವಾದ ಸಕಲಕರ್ಮಗಳನ್ನೂ, **ಆನೆ ಮಾಡುವೆನೆಂಬ**—ನಾನೇ ಮಾಡುತ್ತೇನೆ—ಎನ್ನುವ, **ಮನುಜರ**—ಮಾನವರನ್ನು, **ನರಕಕೆ ಐದಿಸುವ**—ದುಃಖಪ್ರದವಾದ ನರಕಗಳಲ್ಲಿ ಹಾಕುವನು. ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮಗಳು ವಾಯುದೇವರಿಂದಲೇ ಆಗತವೆಂದು ಹೇಳತಾರೆ. ವಾಯುದೇವರು ಸರ್ವೇಂದ್ರಿಯನಿಯಾಮಕರು. ರುದ್ರಾದಿಗಳಿಗೆ ಸರ್ವೇಂದ್ರಿಯ ನಿಯಾಮಕತ್ವ ಇಲ್ಲ. ತೃಣಾಂತ ತ್ರಿವಿಧಜೀವರ ಏಕಾದಶೇಂದ್ರಿಯಗಳ ನಿಯಾಮಕರಾದ್ದರಿಂದ. ಈ ವಾಯುದೇವರು ಸರ್ವಪ್ರಾಣಿಗಳ ಇಂದ್ರಿಯಗಳಲ್ಲಿ ಇದ್ದು, ತದ್ದ್ವಾರಾ, ಪಾಪಕರ್ಮ, ಪುಣ್ಯಕರ್ಮಗಳು. ಈ ಎರಡೂ ಕರ್ಮಗಳ, ಆಯಾ ಪ್ರಾಣಿಗಳ ಸ್ಥೂಲದೇಹಾಕಾರದಿಂದ ಇರತಕ್ಕ ಬಿಂಬಕ್ರಿಯಾ ದ್ವಾರಾ ವಾಯುದೇವರು ಮಾಡತಾರೆ. ತದ್ದ್ವಾರಾ, ಪ್ರಾಣಿಗಳು ಸ್ಥೂಲ

ದೇಹೇಂದ್ರಿಯಾದಿಗಳಿಂದ ಮಾಡತಾರೆ. ಈ ಮಾತು ನಿಶ್ಚಯ. ಇದಕ್ಕೆ ಲೇಶ ವಾದರೂ ಸಂದೇಹವಿಲ್ಲ. ವಾಯುದೇವರ ಮಾಹಾತ್ಮ್ಯ ಇಂಥಾದ್ದು ಅನ್ನತಾ, ಅಚಂಚಲವಾದ ಭಕ್ತಿಯಿಂದ ಎಂದರೆ, ಜೀವೋತ್ತಮರಾದ ವಾಯುದೇವ ರೆಂದು ದೃಢವಾಗಿ ತಿಳಿದು, ಜೀವೋತ್ತಮತ್ವೇನ ಅಚಂಚಲ ಭಕ್ತಿಯಿಂದ, ಅಂತರ್ಗತದಲ್ಲಿ ಪರಮಾತ್ಮನ ತಿಳಿದು, ವಾಯುದೇವರ ಭಜಿಸತಕ್ಕವರಿಗೆ, ಜೀವೋತ್ತಮರಾದ ವಾಯುದೇವರಿಗೆ ಸ್ವಾಮಿಯಾದ ಪರಮಾತ್ಮ, ಈ ಪ್ರಕಾರ ತಿಳಿದ ಅಧಿಕಾರಿಯಲ್ಲಿ, ಚಂದಾಗಿ ಪ್ರೀತಿಯುಕ್ತನಾಗಿ, ಆಯಾ ಪಾಪ ಕರ್ಮಗಳಿಗೆ ಬರಬೇಕಾದ ನೀಚಯೋನಿಗಳ ಕೊಡೋದಿಲ್ಲ. ಆ ಪಾಪಕರ್ಮಗಳಿಗೆ ಪೂರ್ವೋಕ್ತ ಅನುಸಂಧಾನ, ಪ್ರಾಯಶ್ಚಿತ್ತರೂಪವಾಗಿ ಪುಣ್ಯಗಳೇ ಆಗೋ ವಾಗತದೆ. ಎಲ್ಲಾ ಕರ್ಮಗಳನ್ನೂ ತಾವೇ ಮಾಡತೇವೆ-ಎಂತ ಅನತಕ್ಕ, ಮನು ಷ್ಯರ ಪಾಪಕರ್ಮ ಪಾಪವಾಗಿನ್ನೂ, ಪುಣ್ಯಕರ್ಮವೂ ಪಾಪವಾಗಿನ್ನೂ, ಈ ಮನು ಜರ ಕುಯೋನಿಗಳಲ್ಲಿ ತಂದು, ಅನಂತರ ಮಹಾದುಃಖಕರವಾದ ನರಕಕ್ಕೆ ಹಾಕತಾನೆ. ಇವರ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲವಾದ್ದರಿಂದ, ಪಾಪ ಪಾಪವಾಗೇ ನಿಂತು, ಪುಣ್ಯಕ್ಕೆ ಅಹಂ-ಎಂಬ ದುಸ್ಸಂಗತ್ಯದಿಂದ ಪುಣ್ಯವೂ ಪಾಪವಾಗಿ ನೀಚಯೋನಿಪ್ರಾಪ್ತಿಯೂ, ನರಕಾನುಭವವೂ ಎರಡಕ್ಕೂ ಕಾರಣವಾಗೋ ದಾಯಿತು. ಅತ ಏವ ಅಹಂ–ಮಮತಾ ತ್ಯಾಗಮಾಡಬೇಕು. ॥೧೫॥

## ೨. ಭಾವಪ್ರಕಾಶಿಕೆ

ಪುಣ್ಯ-ಪಾಪಗಳಿಗೆ ಸಾಧನವಾದ ಸುಕರ್ಮ- ದುಷ್ಕರ್ಮಗಳೆರಡನ್ನೂ ವಾಯುದೇವರೇ ನಮ್ಮೊಳಗಿದ್ದು ಮಾಡಿಸುವರು ; ಈ ವಿಷಯದಲ್ಲಿ ಸಂಶಯ ವಿಲ್ಲವೆಂದು, ನಿಸ್ಸಂಶಯಜ್ಞಾನದಿಂದ ಭಜನ ಮಾಡುವ ಮನುಷ್ಯರಿಗೆ, ವಾಯು ದೇವರು ಬಹಳ ಪ್ರೀತರಾಗಿ, ನಾಯಿ ನರಿ.ಮೊದಲಾದ ಜನ್ಮಗಳು ಬಾರದಂತೆ ಮಾಡುವರು. ಕರ್ಮಗಳನ್ನು ನಾನೇ ಮಾಡುವೆನೆಂದು ಭಾವಿಸುವ ಮನುಷ್ಯ ರನ್ನು ನರಕದಲ್ಲಿ ಹಾಕುವರು.॥ ೧೫॥

## ೩. ಭಾವದರ್ಪಣ

ಪಾಪ-ಪುಣ್ಯ ಹುಟ್ಟತಕ್ಕಂಥ ಸುಕರ್ಮ ದುಷ್ಕರ್ಮ-ಗಳೆರಡೂ ಪವಮಾನ

ರಾಯನೇ ಮಾಡಿ ಮಾಡಸುತ್ತಾನೆ-ಎಂದರೆ, ಸದ್ಭಕ್ತಿಯಂತಲೂ, ನಾನೇ ಮಾಡುತ್ತೇನೆಂದರೆ, ನರಕಪ್ರಾಪ್ತಿ-ಎಂತಲೂ ಹೇಳುತ್ತಾರೆ-ಹೀನ. ॥೧೫॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

'ಹೀನ'-ಇತಿ ॥೧೫॥

## ಕನ್ನಡಾರ್ಥ

ಈ ಪದ್ಯವು ಸುಲಭವಿದೆ. ॥೧೫॥

೫. ಶ್ರೀಗುರುಹೃದಯ ಪ್ರಕಾಶಿಕೆ

ಹೀನವೆಂಬ ಪಾಪಕರ್ಮ, ಸತ್ಪುಣ್ಯಸಹ ಪವಮಾನನೆಂಬ ಪ್ರಾಣದೇವರು ನಮ್ಮಲ್ಲಿದ್ದು, ನಮ್ಮ ಕರ್ಮ ವ್ಯಕ್ತಿ ಮಾಡುವರು.

ನಾವು ಸ್ವತಂತ್ರರಲ್ಲವೆಂದು ನಿಸ್ಸಂಶಯದಿಂದ ಪ್ರಾಣದೇವರ ಸ್ವಾತಂತ್ರ್ಯ ಗುಣೋಪಾಸಕರಿಗೆ ಅವರ ದೃಢಭಕ್ತಿಯಿಂದ ಪ್ರಾಣದೇವರು ಸಂತುಷ್ಟರಾಗಿ, ದುಷ್ಕರ್ಮ ಪರಿಹರಿಸಿ, ಕುಯೋನಿ-ಎಂಬ ನಿಕೃಷ್ಟಜನ್ಮ ಕೊಡುವುದಿಲ್ಲ, ನಾನೇ ಸ್ವತಂತ್ರ, ಸರ್ವಕರ್ಮಕರ್ತ-ಎಂದು ತಿಳಿವ ಮಿಥ್ಯಾಜ್ಞಾನಿಗಳನ್ನು ನರಕವೈದಿಸುವನು. ಅಂದರೆ, ಹೊಂದಿಸುವನು. ॥೧೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸಕಲಕರ್ಮಗಳೂ ತ್ರಿಗುಣಗಳಿಂದ ಜನ್ಯ. ಸಾತ್ವಿಕಗುಣ ಪ್ರಾಚುರ್ಯದಿಂದ ಪುಣ್ಯಕರ್ಮಗಳ ಆಚರಣೆ. ರಜೋಗುಣೋಪ್ರಾಚುರ್ಯ ದಿಂದ ಪುಣ್ಯ-ಪಾಪಮಿಶ್ರತವಾದ ಮಿಶ್ರಕರ್ಮಗಳ ಅಭಿವ್ಯಕ್ತಿ. ತಮೋಗುಣ ಪ್ರಾಚುರ್ಯದಿಂದ ಪಾಪಕರ್ಮಗಳನುಷ್ಠಾನ'

೨. ಅನಾದಿಕರ್ಮಗಳ ಮೂಲವು ಸ್ವರೂಪದೇಹದ ಸುತ್ತಲೂ ಆವರಣರೂಪದಲ್ಲಿರುವ ಲಿಂಗದೇಹವು, ಇದು ಪ್ರಾಕೃತವಾದ ತ್ರಿಗುಣಾತ್ಮಕವಾದದ್ದು. ೧೬ ಕಳೆಗಳಿಂದ ಯುಕ್ತವಾದದ್ದು. ಶ್ರೀಹರಿಯು ತನ್ನ ಅಘಟನಾಘಟನಾಶಕ್ತಿವಿಶೇಷದಿಂದ ಅಪ್ರಾಕೃತವಾದ ಸ್ವರೂಪದೇಹಕ್ಕೆ ಪ್ರಾಕೃತರೂಪದ ಲಿಂಗೋಪದಾನ ಮಾಡಿಸುವನು. ಇದು ಶ್ರೀಹರಿಯ ಇಚ್ಛೆಯಿಂದ ಪ್ರಾವರಣರೂಪದಲ್ಲಿರುವ ಲಿಂಗದೇಹದ ಪರಿಣಾಮ, ಇದರಿಂದ, ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶವೋ ವ್ಯಾಪ್ತನಾಗಿರುವ ಜೀವರ ದ್ವಾರಾ ಸರ್ವಕರ್ಮಗಳ ಅಭಿವ್ಯಕ್ತಿ ಮತ್ತು ಆಚರಣೆ. ಇದು ಸರ್ವತಂತ್ರ ಸ್ವತಂತ್ರನಾದ ಕರ್ಮಶಬ್ದವಾಚ್ಯನಾದ ಕಮಲಾರಮಣನ ಬಿಂಬಕ್ರಿಯಾದ್ವಾರಾ ನಡೆಯುತ್ತಿರುವುದು. ಮುಖ್ಯಪ್ರಾಣದೇವರು ಶ್ರೀಹರಿಯ ಪ್ರಥಮಾಂಗ ಭೂತರು. ಅವರೇ ಸಕಲತತ್ತ್ವನಿಯಾಮಕದೇವತೆಗಳಿಗೂ ನಿಯಾಮಕರು.

೩. **ಹೀನ** — ಎಂದರೆ, ನೀಚವಾದ ಅಂದರೆ, ಪಾಪಕರ್ಮಗಳು **ಸತ್ಕಾರ್ಯ**—ಎಂದರೆ, ಪುಣ್ಯಕರ್ಮಗಳು. ಪಾಪ ಮತ್ತು ಪುಣ್ಯಕರ್ಮ. ಗಳೆರಡನ್ನು (ಇದರಿಂದ ಮಿಶ್ರಕರ್ಮಗಳೂ ಗ್ರಾಹ್ಯ) ಶ್ರೀಹರಿಯ ಪ್ರೇರಣೆಯಿಂದ ಪವಮಾನನಾಮಕರಾದ ಶ್ರೀವಾಯುದೇವರೇ ಜೀವನ ಪರವಾಗಿ ಮಾಡಿ ಮಾಡಿಸುವರು. ಶ್ರೀಹರಿಗೆ ಪ್ರಥಮಾಂಗಭೂತರೂ, ಅತಿರೋಹಿತ ವಿಮಲವಿಜ್ಞಾನಿಗಳೂ, ಕಲ್ಯಾದಿಬಾಧೆಗಳು ಯಾವಕಾಲಕ್ಕೂ ಇಲ್ಲದ ಪರಮ ಪಾವನಮೂರ್ತಿಗಳಾದ ಮುಖ್ಯಪ್ರಾಣದೇವರಿಗೆ— **ಪವಮಾನ**— ಎಂದು ಹೆಸರು.

ಅಂತಹ ಪವಮಾನನಾಮಕರಾದ ಮುಖ್ಯಪ್ರಾಣದೇವರು (ಪ್ರಧಾನ ವಾಯುದೇವರು) ರುದ್ರಾದಿ ತತ್ತ್ವಾಭಿಮಾನಿಗಳೆಲ್ಲರೂ ಅವರ ದ್ವಾರಾ ಸತ್ಕರ್ಮ–ಗಳನ್ನು ಮಾಡಿ ಮಾಡಿಸುವರು. ಇವೇ ತತ್ತ್ವೇಶರು ಶ್ರೀವಾಯುದೇವರ ಪ್ರೇರಣೆಯಿಂದ ತತ್ತ್ವಾಭಿಮಾನಿಅಸುರರಲ್ಲಿದ್ದು, ಪಾಪಕರ್ಮಗಳನ್ನು, ಮಾಡಿಸುವರು. ಅಂತಹ ತತ್ತ್ವಾಭಿಮಾನಿದೇವತೆಗಳಿಗೆ ಪಾಪಕರ್ಮಲೋಪವಿಲ್ಲ. ಪುರಂಜನನ ದ್ವಾರಾ ಮಿಶ್ರ ಕರ್ಮಗಳ ಆಚರಣೆ.

ಶ್ರೀಹರಿಯ ಬಿಂಬಪ್ರೇರಣೆ ಶ್ರೀವಾಯುದೇವರಿಗೆ, ಶ್ರೀವಾಯುದೇವರ ಪ್ರೇರಣೆ, ಅವರಿಗಿಂತ ಅವರರಾದ ರುದ್ರಾದಿ ತತ್ತ್ವಾಭಿಮಾನಿದೇವತೆಗಳಿಗೆ, ಈ ರೀತಿ-ಸ್ತೋತ್ರಮರಿಂದ ಬಿಂಬ- ಪ್ರತಿಬಿಂಬ ನ್ಯಾಯದಿಂದ, ಬಿಂಬ ಕ್ರಿಯಾಸರಣಿ ಶ್ರೀಹರಿಯೇ ಮುಖ್ಯವಾಗಿ ಶ್ರೀವಾಯುದೇವರ ದ್ವಾರಾ ಸಕಲಕರ್ಮಗಳನ್ನು ಮಾಡಿ, ದೇವತೆ-ಅಸುರಗಳ ದ್ವಾರಾ ಮಾಡಿಸಿ, ಸ್ಥೂಲದೇಹಸ್ಥ ಸಕಲೇಂದ್ರಿಯ ಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ದ್ವಾರಾ ಮಾಡಿ ಮಾಡಿಸುತ್ತಿರು ವನು. ಆದ್ದರಿಂದ, ಶ್ರೀವಾಯುದೇವರ ವ್ಯಾಪಾರ (ಶ್ರೀಹರಿಯನಂತರ) ಅತಿ ಮುಖ್ಯವೆಂದರಾಯಿತು. ಅವರೇ ಸಕಲಕರ್ಮಗಳ (ದ್ವಂದ್ವ-ಹೀನ ಸತ್ಕಾರ್ಯ) ಕ್ರಿಯಾಕೇಂದ್ರ.

ಈ ರೀತಿಯಲ್ಲಿ, ಬಿಂಬನಾದ ಶ್ರೀಹರಿಯ ಪ್ರೇರಣೆಯಿಂದ, ಶ್ರೀವಾಯು ದೇವರೇ, ರುದ್ರಾದಿ ಸಕಲತತ್ತ್ವಾಭಿಮಾನಿಗಳಲ್ಲಿ ನಿಯಾಮಕರಾಗಿದ್ದು, ದ್ವಂದ್ವ ರೂಪವಾದ ಸಕಲಕರ್ಮಗಳನ್ನು ತಾವೇ ಮಾಡಿ ಮಾಡಿಸುತ್ತಾರೆಂದು, ನಿಶ್ಚಲ ವಾದ ಭಕ್ತಿಯಿಂದ ಯಾರು ಭಜಿಸುತ್ತಾರೋ, ಅಂತಹವರಿಗೆ ಮುಖ್ಯಪ್ರಾಣ ದೇವರ ಪ್ರಭುವಾದ ಪ್ರಾಣಪತಿನಾಯಕನಾದ ಶ್ರೀಹರಿಯು ಒಲಿದು, ಪ್ರೀತಿ ಯಿಂದ ಕುಯೋನಿಗಳನ್ನು ಎಂದೆಂದಿಗೂ ಕೊಡುವುದಿಲ್ಲ. ಅಂದರೆ, ನೀಚ ಯೋನಿಗಳಲ್ಲಿ ಜನ್ಮಗಳನ್ನು ಅಂತಹ ಉಪಾಸಕರಿಗೆ ತಪ್ಪಿಸುವನು.

೪. ಸದುಪಾಸನಾಮಾರ್ಗವನ್ನು ಬಿಟ್ಟು, ಯಾವ ಮನುಜರು ತಾವೇ ಸ್ವತಂತ್ರರೆಂದು ತಿಳಿದು, ಅಹಂಕಾರ ಮಕಾರಗ್ರಸ್ತರಾಗಿ, ಸ್ವಾಭಿಮಾನಕರ್ತವ್ಯ ದಿಂದ, ತಾವೇ ಸಕಲಕರ್ಮಗಳನ್ನೂ ಮಾಡುವೆವು-ಎಂದು ತಿಳಿದಿದ್ದಾರೋ, ಅಂತಹ ಮಾನವರನ್ನು ಪ್ರಾಣಪತಿಯಾದ ಶ್ರೀ ಪರಮಾತ್ಮನು ನರಕಾದ್ಯನರ್ಥನ ಗಳಿಗೆ ಗುರಿಮಾಡಿ, ದುಃಖಾನುಭಾವ ಮಾಡಿಸುವನೆಂದು ಪ್ರಸಕ್ತಪದ್ಯದ ತಾತ್ಪರ್ಯ.

ಅಂದರೆ, ಜೀವರ ಸ್ವರೂಪಯೋಗ್ಯತೆ-ಅನಾದಿಕರ್ಮಾನುಸಾರವಾಗಿ, ಶ್ರೀಹರಿಯ ಕರ್ಮಪ್ರೇರಣೆ ಶ್ರೀವಾಯುದೇವರಿಗೆ. ಶ್ರೀಪ್ರಾಣದೇವರು ಸಕಲತತ್ತ್ವಾಭಿಮಾನಿದೇವತೆಗಳು ಮತ್ತು ಅಸುರರಲ್ಲಿ ನಿಯಾಮಕರಾಗಿದ್ದು,

ಸಕಲಕರ್ಮಗಳಿಗೂ ಅವಾಂತರಪ್ರೇರಕರು. ಇದೇ ಜೀವರಲ್ಲಿ ಸದಾ ನುಡಿಯುತ್ತಿರುವ ದ್ವಂದ್ವಕರ್ಮಗಳ ಮರ್ಮ. ॥೧೫॥

## ಪದ್ಯ-೧೬

**ಮೂಲ :**

**ದೇವ ಋಷಿ ಪಿತೃ ನೃಪ ನರರೆ ನೀ ।**
**ವೈವರೊಳು ನೆಲೆಸಿದ್ದು ಅವರ ಸ್ವ ।**
**ಭಾವ ಕರ್ಮವ ಮಾಡಿ ಮಾಡಿಪ ಒಂದು ರೂಪದಲಿ ॥**
**ಭಾವಿಬ್ರಹ್ಮನು ಕೂರ್ಮರೂಪದ ।**
**ಲೀ ವಿರಿಂಚಾಂಡವನು ಬೆನ್ನಲಿ ।**
**ತಾ ವಹಿಸಿ ಲೋಕಗಳ ಪೊರೆವನು ದ್ವಿತೀಯ ರೂಪದಲಿ ॥೧೬॥**

**ಅವತರಣಿಕೆ :**

ಭಾವೀಬ್ರಹ್ಮರಾದ ಶ್ರೀವಾಯುದೇವರ ರೂಪದ್ವಯಗಳ ವಿಚಾರವನು ತಿಳಿಸುತ್ತಾರೆ. ॥೧೬॥

**ಪ್ರತಿಪದಾರ್ಥ :**

**ದೇವ**—ರುದ್ರದೇವರು ಆರಂಭಿಸಿ, ಧನಪ, ವಿಷಕ್ಸೇನಾದಿ ಶತಸ್ಥದೇವ ಗಣಪರ್ಯಂತ ಸಕಲದೇವತಾವರ್ಗ, **ಋಷಿ**—ಬಲ್ಯಾದಿ ಕರ್ಮಜರಿಂದ ಆರಂಭಿಸಿ, ಪುಷ್ಕರಾಂತ ಸಕಲಕರ್ಮಜದೇವತಾವರ್ಗ, **ಪಿತೃ**—ಆಜಾನಜದೇವತಾವರ್ಗ, **ನರರು**—ಚಿರಂಶರಾದ ನರಗಂಧರ್ವ ಪರ್ಯಂತ, **ನೃಪ**—ಮಾನುಷಚಕ್ರವರ್ತಿಗಳಾರಭ್ಯ ತೃಣಾಂತ ಮುಕ್ತಯೋಗ್ಯಚೇತನವರ್ಗ, **ಎನಿಪ**—**ಈ** ಪ್ರಕಾರ ಕರೆಯಿಸುವ, **ಐವರೊಳು**— ಪಂಚವಿಧಜೀವರಲ್ಲಿ, (ತದನ್ಯರಾದ ನಿತ್ಯಸಂಸಾರಿಗಳೂ, ತಮೋಯೋಗ್ಯರೂ ಸಹ ಗ್ರಾಹ್ಯ)

**ನೆಲೆಸಿದ್ದು** -ಶ್ರೀವಾಯುದೇವರು ಆ ಜೀವರ ಸ್ಥೂಲದೇಹದಲ್ಲಿ ಅವಾಸರಾಗಿದ್ದು, **ಅವರ**–ಆ ತ್ರಿವಿಧಜೀವರ. **ಸ್ವಭಾವ ಕರ್ಮವ**—ಅನಾದಿಸ್ವರೂಪಸ್ವಭಾವಕ್ಕೆ ಅನುಗುಣವಾದ ಕರ್ಮಗಳನ್ನು, **ಒಂದು ರೂಪದಲಿ**–ಒಂದಾದ ಅಂಶರೂಪದೀದ, **ಮಾಡಿ ಮಾಡಿಪ**—ತಾನೇ ಬಿಂಬನ ಪ್ರೇರಣಾನುಸಾರಮಾಡಿ, ತತ್ತ್ವದೇವತೆಗಳು, ಅಸುರರ ದ್ವಾರಾ ಮಾಡಿಸುವರು. **ಭಾವಿ ಬ್ರಹ್ಮನು**—ಮುಂದಿನ ಬ್ರಹ್ಮಕಲ್ಪದಲಿ ಬ್ರಹ್ಮಪದವಿಗೆ ಬರುವ ಪ್ರಸಕ್ತಶ್ರೀವಾಯುದೇವರು. **ಕೂರ್ಮರೂಪದಲಿ**— ವಾಯುಕೂರ್ಮನಾಗಿ, **ಬೆನ್ನಲಿ**—ತನ್ನ ಬೆನ್ನಿನ ಮೇಲೆ, **ಈ ವಿರಿಂಚಾಂಡವನು**—ಈ ಬ್ರಹ್ಮಾಂಡವನ್ನು, **ತಾ ವಹಿಸಿ**–ತಾವು ಹೊತ್ತುಕೊಂಡು, **ದ್ವಿತೀಯರೂಪದಲಿ**— ಈ ಎರಡನೆಯದಾದ ಕೂರ್ಮ ರೂಪದಿಂದ, **ಲೋಕಗಳ ಪೊರೆವನು**— ಬ್ರಹ್ಮಾಂಡಾಂತರ್ಗತ ಹದಿನಾಲ್ಕು ಲೋಕಗಳನ್ನು ಸಂರಕ್ಷಿಸುವರು. ॥೧೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಹಾತ್ಮ್ಯ ಹೇಳತಾರೆ.

ರುದ್ರದೇವರು ಆರಂಭಮಾಡಿ, ಧನಪ ವಿಷಕ್ಸೇನಾದಿ ಶತಸ್ಥದೇವತೆ-ಎಲ್ಲಾ ದೇವತೆಗಳೂ, ಋಷಿಸಾಂಕೇತದಿಂದ ಬಲ್ಯಾದಿ ಕರ್ಮಜರ ಆರಂಭಗಣಾಂತ, ಮಾಡಿ, ಪುಷ್ಕರಾಂತ ಕರ್ಮಜದೇವತೆಗಳು, ಪಿತೃಸಾಂಕೇತದಿಂದ ಅಜಾನಜರು, ನರಸಾಂಕೇತದೀದ ನಿರಂಶರಾದ ಗಂಧರ್ವರು, ಮಾನುಷಚಕ್ರವರ್ತಿಗಳು. ಇವರ ಆರಂಭಮಾಡಿ, ತೃಣಾಂತವಲ್ಲಿಗೆ ಗ್ರಾಹ್ಯ. ಈ ಪ್ರಕಾರವರಗೆ ನಾಮಗಳುಳ್ಳ ವರೆನಿಸುವ ಐದುವಿಧ ಜೀವರೊಳು, ತದನ್ಯರಾದ ಇದೇ ಪ್ರಕಾರ ನಿತ್ಯಸಂಸಾರಿಗಳು, ತಮೋಯೋಗ್ಯರೊಳು-ವಾಯುದೇವರು ಸ್ಥೂಲದೇಹಗಳಲ್ಲಿ ಆವಾಸರಾಗಿದ್ದು, ಆಯಾ ತ್ರಿವಿಧ ಪ್ರಾಣಿಗಳಾದವರ ಅನಾದಿಸ್ವರೂಪಸ್ವಭಾವಕ್ಕೆ ಅನುಸರಿಸಿದ ಜ್ಞಾನಾನುಸಾರ ಕರ್ಮಗಳ ಒಂದಾದ ಅಂಶರೂಪದಿಂದ,

ಪೂರ್ವೋಕ್ತಪ್ರಕಾರ ಮಾಡಿ ಮಾಡಿಸುವ, ಮುಂದಿನ ಬ್ರಹ್ಮಕಲ್ಪದಲ್ಲಿ ಬ್ರಹ್ಮಪದಕ್ಕೆ ಬರತಕ್ಕ ಭಾವೀ ಬ್ರಹ್ಮಸಾಂಕೇತರಾದ, ಪೂರ್ವೋಕ್ತ ಜೀವೋತ್ತಮರಾದ ವಾಯುದೇವರು ಕೂರ್ಮಾವತಾರಮಾಡಿ, ಕೂರ್ಮಾಂಶ ದಿಂದ ಈ ಬ್ರಹ್ಮಾಂಡವನ್ನು ಹೊತ್ತುಕೊಂಡು, ಅಂಡದ ಹೊರಗೆ, ಒಂದು ಕೂರ್ಮರೂಪದಿಂದ ಇದ್ದಾರೆ. ಎರಡನೆಯದಾದ ಕೂರ್ಮರೂಪದಿಂದ ಸಮಸ್ತ ಲೋಕಗಳನ್ನು ಈ ಪ್ರಕಾರ ರಕ್ಷಿಸುವನು. ॥೧೬॥

### ೨. ಭಾವಪ್ರಕಾಶಿಕೆ

ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯರೆಂಬ ಐದು ವಿಧ ಮುಕ್ತಿಯೋಗ್ಯಜೀವರಲ್ಲಿ, ವಾಯುದೇವರು ವಾಸಮಾಡುತ್ತಾ, ಅವರವರ ಯೋಗ್ಯತಾನುಸಾರವಾಗಿ, ಕರ್ಮಗಳನ್ನು ಮಾಡಿ, ಮಾಡಿಸಿ ಜನರನ್ನು ಒಂದು ರೂಪದಿಂದ ಉದ್ಧರಿಸುವರು. ಎರಡನೆಯ ಕೂರ್ಮ ರೂಪವನ್ನು ಧರಿಸಿ, ಬ್ರಹ್ಮಾಂಡವನ್ನು ಬೆನ್ನಿಲಿ ಹೊತ್ತು, ಸಕಲಪ್ರಾಣಿಗಳನ್ನು ರಕ್ಷಿಸುವರು. ॥೧೬॥

### ೩. ಭಾವದರ್ಪಣ

ವಾಯುದೇವರು ಎರಡು ರೂಪರಾಗಿ, ಕಾರ್ಯಮಾಡತಕ್ಕ ವಿವರ ಹೇಳು ತ್ತಾರೆ। ದೇವ। ತದುಕ್ತಂ ತತ್ವಸಂಖ್ಯಾನೇ। "ದೇವರ್ಷಿಪಿತೃಪನಾರಾ ಇತಿ ಮುಕ್ತಾಸು ಪಂಚಧೇತಿ" ಕೂರ್ಮರೂಪ। "ಸ ಏವ ಕೂರ್ಮರೂಪೇಣ ಬಿಭರ್ತೀದಂ ಜಗತ್ಸದೇತಿ"-ಸತ್ತತ್ವರತ್ನಮಾಲೋಕ್ತೇಃ ॥೧೬॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

'ದೇವ' ಇತಿ॥ ಶತಕಲ್ಪಸಾಧನ್ಯೇ ಕಲ್ಪಿತ್ವಂ ತತೋಽಪ್ಯನವತಿ ಕಲ್ಪೋತ್ತರಂ ಲಾತವ್ಯತ್ವೇ ವಾಯುತ್ವೇ ತದುತ್ತರಂ ಸಾಧನಂಮಿದಮ್ ॥೧೬॥

## ಕನ್ನಡಾರ್ಥ

ನೂರು ಕಲ್ಪಸಾಧನಗಳಿಂದ ಕಲ್ಕಿಪದವಿಯನ್ನು ಹೊಂದುತ್ತಾರೆ ಅನಂತರ, ೯೮ ಕಲ್ಪಗಳು ಮುಗಿಯುವವರೆಗೆ 'ಲಾತವ್ಯ' ಪದವಿಯಲ್ಲಿರುತ್ತಾರೆ. ಅದರ ಮುಂದಿನ ವಾಯುತ್ವ ಪದವಿಯಲ್ಲಿ ಇರುವಾಗ, ಈ ಪದ್ಯದಲ್ಲಿ ಹೇಳಿರುವ ಸಾಧನವನ್ನು ಮಾಡುವರು. ॥೧೬॥

**೫. ಶ್ರೀಗುರುಹೃದಯ ಪ್ರಕಾಶಿಕೆ**

ಈ ಪ್ರಾಣದೇವರ ಮಹಿಮೆಯನ್ನೇ ನಲವತ್ತೊಂದು ಪದ್ಯದವರೆಗೆ, ಮುಂದೆ ಇಪ್ಪತ್ತಾರು ಪದ್ಯಗಳಿಂದ ಉಪಾಸನಾರ್ಥವಾಗಿ ತಿಳಿಸುತ್ತಾರೆ- ದೇವ ಋಷಿ- ಎಂದು. ಮೊದಲು ಮಾಡಿ. ದೇವ. ಋಷಿ, ಪಿತೃ, ನೃ-ಅಂದರೆ, ಮನುಷ್ಯೋತ್ತಮರು; ನರಪರೆಂಬ ರಾಜರು,- ಈ ಐದು ವಿಧ ಮುಕ್ತಿಯೋಗ್ಯರಲ್ಲಿಯೂ ಅನುಗ್ರಹವಿಶೇಷದಿಂದ ಇದ್ದು, ಅವರವರ ಸ್ವಭಾವ, ಕರ್ಮ ವ್ಯಕ್ತಿ ಮಾಡಿ, ಒಂದು ರೂಪದಿಂದ ಮಾಡಿಸುವರು. ಭಾವೀಬ್ರಹ್ಮನಾದ ಈತ ಕೂರ್ಮ ರೂಪವನ್ನು ಧರಿಸಿ, ಈ ಬ್ರಹ್ಮಾಂಡವನ್ನು ದೇವರಾಜ್ಞೆಯಿಂದ, ತನ್ನ ಬೆನ್ನಿನ ಮೇಲೆ ಹೊತ್ತುಕೊಂಡು, ಎರಡನೇ ರೂಪದಿಂದ, ಲೋಕಗಳನ್ನು ರಕ್ಷಿಸುವರು. ॥೧೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಮುಕ್ತಿಯೋಗ್ಯಜೀವರಲ್ಲಿ, ಐದು ಪ್ರಕಾರ. ಈ ಪಂಚಜೀವರ ವಿವರ-

೧. ದೇವತೆಗಳು. ೨. ಋಷಿಗಳು. ೩. ಪಿತೃಗಳು
೪. ಚಕ್ರವರ್ತಿಗಳು ಮತ್ತು ೫. ಮಾನುಷೋತ್ತಮರು.

೨. ರುದ್ರದೇವರಿಂದ ಆರಂಭಿಸಿ, ಧನಪ, ವಿಷ್ವಕ್ಸೇನಾದಿ ಶತಸ್ಥ ದೇವತಾ ಪರ್ಯಂತ **ದೇವತೆಗಳು.** ಈ ವರ್ಗದಲ್ಲಿ ರುದ್ರಾದಿಗಳಿಗಿಂತ ಉತ್ತಮರಾದ

ಬ್ರಹ್ಮ-ವಾಯು-ಸರಸ್ವತೀ-ಭಾರತೀದೇವಿಯರು. ಋಜುಗಣಸ್ಥರು-ತತ್ತ್ವತ್ರಿಯರೂ ಗ್ರಾಹ್ಯ. ಅವರ ವಿಚಾರ ಹಿಂದಿನ ಪದ್ಯಗಳಲ್ಲಿ ವಿವರಿಸಲ್ಪಟ್ಟಿದೆ.

ಸಪ್ತರ್ಷಿಗಳು-ಪ್ರಖ್ಯಾತರಾದ ಇತರ ಋಷಿವರ್ಗ-ಬಲಿಯಿಂದ ಪ್ರಾರಂಭಿಸಿ, ಕರ್ಮಜರಿಂದ ಪುಷ್ಕರಾಂತ ಸಕಲಜೀವರಸಮೂಹ ಋಷಿವರ್ಗಕ್ಕೆ ಸೇರಿದ್ದಾರೆ.

ಆಜಾನಜ ದೇವತೆಗಳು, ಪಿತೃದೇವತೆಗಳು, ಚಿರಪಿತೃಗಳು, ಪಿತೃವರ್ಗಕ್ಕೆ ಸೇರಿದ್ದಾರೆ.

ಪೃಥು, ನಹುಷ, ಅಂಬರೀಷಾದಿ ಮಾನುಷಚಕ್ರವರ್ತಿಗಳಾರಭ್ಯ ತೃಣಾಂತ ಜೀವರ ಪರ್ಯಂತ ನೃಪರೆನಿಸುವರು.

ನಿರಂಶರಾದ ಮಾನುಷಗಂಧರ್ವರಾದಿ, ಮಾನುಷೋತ್ತಮರಾದ ತೃಣಾಂತ ಪರ್ಯಂತ ನರರೆನಿಸುವರು.

೩. ಪೂರ್ವೋಕ್ತ ಪಂಚಜೀವರ ಸ್ಥೂಲದೇಹದಲ್ಲಿ ಆವಾಹಿತರಾಗಿದ್ದು, ಮುಂದಿನ ಬ್ರಹ್ಮಕಲ್ಪದಲ್ಲಿ ಬ್ರಹ್ಮಪದವಿಗೆ ಬರುವ ಶ್ರೀವಾಯುದೇವರು **(ಭಾವೀಬ್ರಹ್ಮರು)** ಆಯಾಯಾ ಜೀವರ ಅನಾದಿಸ್ವರೂಪಗತ ಸ್ವಭಾವಕ್ಕನುಸಾರವಾಗಿ, ಸಕಲಕರ್ಮಗಳನ್ನು ಬಿಂಬನಾದ ಶ್ರೀಹರಿಯ ಆಜ್ಞಾನುಸಾರ ತಾವೇ, ಜೀವರಪರರಾಗಿ ಮಾಡಿ, ನಿಯಮ್ಯರಾದ ತತ್ತ್ವಾಭಿಮಾನಿದೇವತೆಗಳು-ಅಸುರರ ದ್ವಾರಾ ಮಾಡಿಸುತ್ತಿರುವರು. ಸಾಧನದೇಹವಾದ ಈ ಸ್ಥೂಲ ಶರೀರಗತಸಕಲೇಂದ್ರಿಯಗಳ ದ್ವಾರಾ, ಕರ್ಮಗಳನ್ನು ಮಾಡಿಸುತ್ತಿರುವ ಶ್ರೀವಾಯುದೇವರ ರೂಪ ಇದೊಂದು.

೪. ವಾಯುಕೂರ್ಮರೂಪದಿಂದ **(ಕೂರ್ಮರೂಪವ)** ಸಮಗ್ರ ಬ್ರಹ್ಮಾಂಡವನ್ನೂ ತನ್ನ ಬೆನ್ನಿನ ಮೇಲೆ ಹೊತ್ತುಕೊಂಡು, ಬ್ರಹ್ಮಾಂಡಗತ ೧೪ ಲೋಕಗಳ ಸಂರಕ್ಷಣೆಯನ್ನು ಮಾಡುತ್ತಿರುವ ಭಾವೀಬ್ರಹ್ಮರಾದ ಶ್ರೀವಾಯುದೇವರ ವಾಯುಕೂರ್ಮರೂಪ ಎರಡನೆಯದು.

### ೫. ವಾಯುಕೂರ್ಮರೂಪ-

ಶ್ರೀಮನ್ನಾರಾಯಣನು **ವಿಷ್ಣುಕೂರ್ಮರೂಪದಿಂದ,** ಸಮಗ್ರ ಬ್ರಹ್ಮಾಂಡವನ್ನೂ ಧರಿಸಿದ್ದಾನೆ. ವಿಷ್ಣುಕೂರ್ಮನ ಬಾಲದ ತುದಿಯನ್ನು ಆಧರಿಸಿಕೊಂಡು, ವಾಯುದೇವರು ಕೂರ್ಮರೂಪದಿಂದಿದ್ದಾರೆ. ಬ್ರಹ್ಮಾಂಡದಲ್ಲಿ ಅಗಾಧವಾದ ಜಲರಾಶಿ ಇದೆ. ಈ ಅಂಡೋದಕದಲ್ಲಿ ಇರುವ ವಾಯು ಕೂರ್ಮದ ಪೃಷ್ಠವನ್ನು ಆಶ್ರಯಿಸಿಕೊಂಡು, ಶೇಷನು ಬ್ರಹ್ಮಾಂಡವನ್ನು ಧರಿಸಿರುವನು. ವಾಯುಕೂರ್ಮದ ನಾಲ್ಕು ಪಾದಗಳು ಅಂಡೋದಕದ ನಾಲ್ಕು ಮೂಲೆಗಳಲ್ಲಿ ನೀರಿನಲ್ಲಿ ನೆಲೆಸಿವೆ. ಎಡೆಯು ಭೂಮಿಯನ್ನು ಒತ್ತಿಕೊಂಡಿದೆ. ಪಾರ್ಶ್ವಪೃಷ್ಠ ಸಮೇತವಾಗಿ ಶಿರಸ್ಸು ಭೂಮಿಯನ್ನು ಮೀರಿಕೊಂಡೇ, ಅಂಡೋದಕದಲ್ಲಿ ನೆಲೆಸಿದೆ. ಉದರದಲ್ಲಿ ಆಕಾಶವೂ, ಬೆನ್ನಿನ ಮೇಲೆ ದ್ಯುಲೋಕವೂ ಆಶ್ರಯಿಸಿಕೊಂಡಿವೆ. ಕೂರ್ಮರೂಪಿಯಾದ ವಾಯುದೇವರ ಮುಖವು ಅಂಡೋದಕದಲ್ಲಿ ಪೂರ್ವದಿಕ್ಕಿನಲ್ಲಿಯೂ, ಬಾಹುಗಳು ಆಗ್ನೇಯ ಮತ್ತು ಈಶಾನ್ಯ ದಿಕ್ಕಿನಲ್ಲಿಯೂ, ಪಾದಗಳು ನೈಋತ್ಯ ಹಾಗೂ ವಾಯುವ್ಯ ದಿಕ್ಕಿನಲ್ಲಿಯೂ ಇವೆ. ಈ ವಿಷಯವನ್ನು **ಬೃಹದಾರಣ್ಯಕ ಭಾಷ್ಯದಲ್ಲಿ,** ಶ್ರೀಮದಾಚಾರ್ಯರು ನಿರೂಪಿಸಿರುವರು–

**ಪ್ರಮಾಣ:–**

(೧) 'ಸ ಏಷ ಕೂರ್ಮರೂಪೇಣ ವಾಯುರಂಡೋದಕೇ ಸ್ಥಿತಃ ।
ವಿಷ್ಣುನಾ ಕೂರ್ಮರೂಪೇಣ ಧಾರಿತೋಽನಂತಧಾರಿಕಃ' ॥

**–ಇತಿ ಪ್ರಭಂಜನೇ**

(೨) ವಾಯೋಸ್ತು ಕೂರ್ಮರೂಪಸ್ಯ ಪೂರ್ವಾಂತಶ್ಯೋದಕೇ ಮುಖಮ್।
ಆಗ್ನೇಯ್ಯೈಶಾನಿಗೌ ಬಾಹೂ ಪಾದೌ ನಿರ್ಋತಿ ವಾಯುಗೌ ॥

**–ಬೃಹದಾರಣ್ಯಕೋಪನಿಷದ್ಭಾಷ್ಯ**

## ಪದ್ಯ-೧೭

**ಮೂಲ :**

**ಗುಪ್ತನಾಗಿದ್ದನಿಲದೇವ ದ್ವಿ ।**
**ಸಪ್ತಲೋಕದ ಜೀವರೊಳಗೆ ತ್ರಿ ।**
**ಸಪ್ತಸಾವಿರದಾರುನೂರು ಶ್ವಾಸಜಪಗಳನು ॥**
**ಸುಪ್ತಿ ಸ್ವಪ್ನದಿ ಜಾಗ್ರತಿಗಳ ।**
**ಲಾಪ್ತನಂದದಿ ಮಾಡಿ ಮಾಡಿಸಿ ।**
**ಕ್ಲುಪ್ತ ಭೋಗಗಳೀವ ಪ್ರಾಂತಕೆ ತೃತೀಯರೂಪದಲಿ ॥೧೭॥**

**ಅವತರಣಿಕೆ :**

ಶ್ರೀವಾಯುದೇವರು ಮಾಡುವ ಶ್ವಾಸಕಾರ್ಯರೂಪವಾದ ತೃತೀಯ ರೂಪವನ್ನು ತಿಳಿಸುತ್ತಾರೆ. ॥೧೭॥

**ಪ್ರತಿಪದಾರ್ಥ :**

**ದ್ವಿಸಪ್ತಲೋಕದ**—ಹದಿನಾಲ್ಕು ಲೋಕಗಳಲ್ಲಿರುವ (ದ್ವಿ-ಎರಡು ಸಪ್ತ-ಏಳು. ಅಂದರೆ, ೨×೭=೧೪) **ಜೀವರೊಳಗೆ**—ಸಮಸ್ತತ್ರಿವಿಧಜೀವರ ಸ್ಥೂಲದೇಹಗಳಲ್ಲಿ, **ಅನಿಲದೇವ**-ಪ್ರಧಾನ ವಾಯುದೇವರು, **ಗುಪ್ತನಾಗಿದ್ದು**-ಹೃದಯದ ಅಷ್ಟದಳಕಮಲದಲ್ಲಿ ಕಮಲಕರ್ಣಿಕಾ ಮೂಲಗತ ಮೂಲೇಶನ ಪಾದ ಮೂಲದಲ್ಲಿ ಗುಪ್ತನಾಗಿದ್ದು, **ತ್ರಿಸಪ್ತಸಾವಿರ**—ಇಪ್ಪತ್ತೊಂದು ಸಾವಿರದ (ತ್ರಿ-ಮೂರು ಸಪ್ತ-ಏಳು. ಅಂದರೆ, ೩×೭= ೨೧), **ಆರುನೂರು**-ಆರುನೂರು ಸಂಖ್ಯಾಕವಾದ ಅಂದರೆ, ೨೧,೬೦೦ ಸಂಖ್ಯಾರೂಪವಾದ, **ಶ್ವಾಸಜಪಗಳನು**-ಷಡಕ್ಷರಾತ್ಮಕವಾದ ಶ್ವಾಸಜಪಗಳನ್ನು (ಸೋऽಹಂ-ಸ್ವಾಹಾ-ಹಂಸ), **ಸುಪ್ತಿ**—ಯಾವ ಮನೋವ್ಯಾಪಾರವೂ ಇಲ್ಲದ ಸುಷುಪ್ತ್ಯವಸ್ಥೆಯಲ್ಲಿ (ನಿದ್ರಾಕಾಲದಲ್ಲಿ), **ಸ್ವಪ್ನದಿ**—ದಶೇಂದ್ರಿಯಗಳ ವ್ಯಾಪಾರ ಉಪರತವಾಗಿದ್ದು, ಮನಸ್ಸಿನ ದ್ವಾರಾ ನಡೆಯುವ ಸ್ವಪ್ನಕಾಲದಲ್ಲಿ, **ಜಾಗ್ರತಿಗಳಲಿ** — ಜಾಗ್ರತಕಾಲದಲ್ಲಿ, ಅಂದರೆ,

ಜಾಗ್ರತಿ, ಸ್ವಪ್ನ, ಸುಷುಪ್ತಿ-ಎಂಬ ಅವಸ್ಥಾತ್ರಯಕಾಲಗಳಲ್ಲಿ, **ಆಪ್ತನಂದದಿ**— ಜೀವರಿಗೆ ಪರಮಾಪ್ತಬಂಧುವಿನಂತೆ, **ಮಾಡಿ**—ತಾವೇ ಮಾಡಿ (ರಚಿಸಿ), **ಮಾಡಿಸಿ**—ಜೀವರ ಸ್ಥೂಲದೇಹದ ದ್ವಾರಾ ಮಾಡಿಸಿ, **ಕಲ್ಪಾಂತಕೆ**—ಕಲ್ಪಾಂತಕ್ಕೆ **ಕ್ಲೃಪ್ತ ಭೋಗಗಳನಾ**—ಸ್ವರೂಪಯೋಗ್ಯ ಭೋಗಗಳನ್ನು, **ಈವ**—ಕೊಡುವವನಾಗುತ್ತಾನೆ. **ತೃತೀಯರೂಪದಲಿ**—ಶ್ರೀವಾಯುದೇವರ ಮೂರನೆಯ ರೂಪವಾದ ಹಂಸಮಂತ್ರ ಜಾಪಕರೂಪವು. ॥೧೭॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಾಹಾತ್ಮ್ಯವನ್ನೇ ಹೇಳುತ್ತಾರೆ.

ಹದಿನಾಲ್ಕು ಲೋಕಗತರಾದ ರುದ್ರಾದಿ ಸಮಸ್ತತ್ರಿವಿಧಜೀವರ ಸ್ಥೂಲದೇಹದೊಳು ಪ್ರಧಾನ ವಾಯುದೇವರು, ಹೃದಯದ ಅಷ್ಟದಳಕಮಲದಲ್ಲಿ, ಕಮಲಕರ್ಣಿಕಾ ಮೂಲಗತಮೂಲೇಶನ ಪಾದಮೂಲದಲ್ಲಿ, ಗುಪ್ತನಾಗಿದ್ದು, ಇಪ್ಪತ್ತೊಂದು ಸಾವಿರದ ಆರುನೂರು, ರಾತ್ರಿ ಹಗಲು ಸೇರಿ, ಒಂದು ದಿನದಾಗೆ, ಇಪ್ಪತ್ತೊಂದು ಸಾವಿರದ ಆರುನೂರು ಶ್ವಾಸ ಜಪಗಳನ್ನು, ಪ್ರಾಣಿಗಳ ಜಾಗ್ರತ್ಕಾಲದಲ್ಲೇನು, ಪ್ರಾಣಿಗಳ ದಶೇಂದ್ರಿಯಗಳ ವ್ಯಾಪಾರಗಳು ಉಪರತವಾಗಿ, ಮನೋಇಂದ್ರಿಯ ವ್ಯಾಪಾರ ಮಾತ್ರದಿಂದ ಯುಕ್ತವಾದ ಸ್ವಪ್ನಾವಸ್ಥದಲ್ಲೇನು, ಮನೋವ್ಯಾಪಾರವೂ ಕೂಡ ಇಲ್ಲದ ನಿದ್ರಾಕಾಲದಲ್ಲೇನು, ಈ ಅವಸ್ಥಾತ್ರಯಕಾಲಗಳಲ್ಲೂ, ಮುಕ್ತಿಯೋಗ್ಯರಿಗೆ ಆಪ್ತನಾದ ವಾಯುದೇವರು ಅವರವರ ಅನಾದಿಸ್ವರೂಪಯೋಗ್ಯತಾನುಸಾರ, ತಾವೇ ಮಾಡಿ, ವರ್ಣೋಚ್ಚಾರ ಮಾಡಿ, ಆ ವರ್ಣಗಳನ್ನು ಬಾಹ್ಯಜಡ ಶ್ವಾಸದಲ್ಲಿ ಪ್ರವೇಶ ಮಾಡಿಸಿ, ತದ್ವಾರಾ ವ್ಯಾಪ್ತರಾದ ಜೀವರ ಸ್ಥೂಲದೇಹದಿಂದ ಮಾಡಿಸಿ – ಈ ಮಾಡಿಸೋ ಕ್ರಮ ಪೂರ್ವಸಂಧಿಯಾದ ಶ್ವಾಸಸಂಧಿಯಲ್ಲಿ ಉಕ್ತವಾಗಿ ಆದೆ. ಕಲ್ಪಾಂತಕ್ಕೆ ಸ್ವರೂಪಯೋಗ್ಯಭೋಗಗಳನು ಕೊಡುವನಾಗತ್ತಾನೆ. ಪಕ್ಷಾಧಿಕಾರಿಗಳಾದ ತಮೋ

ಯೋಗ್ಯರಿಗೆ ಗದಾಪ್ರಹಾರದಿಂದ ಲಿಂಗಭಂಗವೂನೂ, ನಿತ್ಯಸಂಸಾರಿಗಳಿಗೆ ಹುಂಕಾರದಿಂದ ಲಿಂಗಭಂಗವೂನೂ, ಪಕ್ವಾಧಿಕಾರಿಗಳಾದ ಮುಕ್ತಿಯೋಗ್ಯರಿಗೆ ಜೀವನ್ಮುಕ್ತರನ್ನಾಗಿ ಮಾಡಿಯೂ, ಅವರುಗಳನ್ನು ಮಹರಾದಿ ಲೋಕಗಳಲ್ಲಿಟ್ಟು, ಭೋಗಗಳ ಕೊಡುವನಾಗುತ್ತಾರೆ. ತೃತೀಯರೂಪದಲ್ಲಿ ಎಂದರೆ, ಮೂರನೇ ದಾದ ಹಂಸಮಂತ್ರ ಜಪಿಸತಕ್ಕ ವಾಯುದೇವರೆಂತ ಅರ್ಥ. ॥೧೭॥

## ೨. ಭಾವಪ್ರಕಾಶಿಕೆ

ವಾಯುದೇವರು ೧೪ ಲೋಕದ ಪ್ರಾಣಿಗಳಲ್ಲೂ, ಯಾರಿಗೂ ಗೊತ್ತಾಗ ದಂತಿದ್ದು, ಸ್ವಪ್ನಾವಸ್ಥೆ, ಜಾಗ್ರತಾವಸ್ಥೆ, ಸುಷುಪ್ತ್ಯವಸ್ಥೆಗಳೆಂಬ, ಮೂರು ಅವಸ್ಥೆಗಳಲ್ಲೂ, ಮುಖ್ಯವಾಗಿ ಸರ್ವಕಾಲದಲ್ಲೂ, ಎಂಬ ತಾತ್ಪರ್ಯ. ಪರಮಾತ್ಮ ನಂತೆ, ೨೧ ಸಾವಿರದ ೬ ನೂರು ಶ್ವಾಸ ಜಪಗಳನ್ನು ಮಾಡಿ ಮಾಡಿಸಿ, ಮೂರನೇ ರೂಪದಿಂದ, ಕಡೆಗೆ ಅವರವರ ಯೋಗ್ಯತಾನುಸಾರವಾಗಿ ಭೋಗವನ್ನು ಕೊಡಿ ಸುವರು. ॥೧೭॥

## ೩. ಭಾವದರ್ಪಣ

ಮೂರನೇ ರೂಪದ ಕಾರ್ಯವನ್ನು ಹೇಳುತ್ತಾರೆ ।ಗುಪ್ತ। ಅನಿಲ–ವಾಯು; ದ್ವಿಸಪ್ತ–ಹದಿನಾಲ್ಕು, ತ್ರಿಸಪ್ತ–ಇಪ್ಪತ್ತೊಂದುಪ್ರಾಂತಕೆ–ಕೊನಿಗೆ. ॥೧೭॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

'ಗುಪ್ತ' ಇತಿ ॥'ತ್ರಿಸಪ್ತ' ಇಪ್ಪತ್ತೊಂದು॥ ಅತ ಏವ ಉಕ್ತಂ-ಅನಿದ್ರ ಇತಿ ॥೧೭॥

# ಕನ್ನಡಾರ್ಥ

'ತ್ರಿಸಪ್ತ' - ಇಪ್ಪತ್ತೊಂದು, ೨೧,೬೦೦ ಶ್ವಾಸಜಪಗಳನ್ನು ಮೂರೂ

ಅವಸ್ಥೆಗಳಲ್ಲಿಯೂ ಮಾಡುವರು. ಆದುದರಿಂದಲೇ, "**ಅನಿದ್ರ**"- ಎಂದು ಹೇಳಿರುತ್ತಾರೆ. ॥೧೭॥

**೫. ಶ್ರೀ ಗುರುಹೃದಯ ಪ್ರಕಾಶಿಕೆ**

ಈ ಅನಿಲದೇವನು ದ್ವಿಸಪ್ತವೆಂಬ ಹದಿನಾಲ್ಕು ಲೋಕದ ಜೀವರಲ್ಲಿಯೂ ಗುಪ್ತನಾಗಿದ್ದು, ತ್ರಿಸಪ್ತವೆಂಬ ಇಪ್ಪತ್ತೊಂದುಸಾವಿರದಾರುನೂರು, ಶ್ವಾಸಜಪ ಗಳನ್ನು, ಒಂದೊಂದು ದಿವಸದಲ್ಲೂ, ಸುಪ್ತಿ ಎಂಬ ನಿದ್ರೆ, ಸ್ವಪ್ನ, ಜಾಗ್ರತೆಯಲ್ಲಿ ಸಹ ಆಪ್ತನಂತೆ ಮಾಡಿ ಮಾಡಿಸಿ, ಅಂದರೆ, ತಾನು ಮೊದಲುಮಾಡಿ, ಜೀವರ ಕೈಲಿ ಮಾಡಿಸಿದಂತೆ ತೋರಿಸಿ, ಆವರವರ ಕ್ಲುಪ್ತ, ಭೋಗಗಳನ್ನು ಕೊನೆಯಲ್ಲಿ ಶ್ರೀಹರಿಯಾಜ್ಞೆಯಿಂದ ಮೂರನೇ ರೂಪದಿಂದ ಕೊಡುವನು. ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಅನಿಲದೇವನು-**

ಶ್ವಾಸಮಂತ್ರಜಾಪಕರಾದ ಶ್ರೀಮುಖ್ಯಪ್ರಾಣದೇವರಿಗೆ **ಅನಿಲದೇವ** ನೆಂದು ಹೆಸರು.

**೨. ಗುಪ್ತನಾಗಿದ್ದು-**

ಪ್ರತಿಜೀವರ ಹೃದಯಾಕಾಶಗತ ಹೃತ್ಪದ್ಮದ ಕರ್ಣಿಕೆಯ ಮೂಲದಲ್ಲಿ ವಿದ್ಯಮಾನನಾಗಿರುವ, ಮೂಲೇಶನಾಮಕ ಬಿಂಬನ ಪಾದಗಳನ್ನು ಆಶ್ರಯಿಸಿ ಕೊಂಡು, ಮುಖ್ಯಪ್ರಾಣದೇವರು ಇದ್ದಾರೆ. ಆ ಅನಿಲದೇವರ ಪಾದಾಶ್ರಯ ವನ್ನಾಗಿ ಜೀವನ ಸ್ಥಾನ. ಜೀವರಲ್ಲಿ ಜನನಾರಭ್ಯ ಮರಣಾಂತರವರೆಗೂ ಶ್ವಾಸ ಕಾರ್ಯ ನಡೆಯುತ್ತಲೇ ಇರುವುದು. ನಾವೇ ಉಸಿರಾಡುತ್ತಿದ್ದೇವೆ-ಎಂಬ ಭ್ರಮೆ ಜೀವರಿಗೆ ಬರುವುದು ಸಹಜ. ಆದರೆ, ಮೂಲೇಶನ ಪಾದಾಶ್ರಿತರಾಗಿ ರುವ ಶ್ರೀವಾಯುದೇವರಿಂದಲೇ ಈ ಶ್ವಾಸಕ್ರಿಯೆ ನಡೆಯುತ್ತಿರುವುದು. ಜೀವ

ರಿಗೆ ಗೋಚರಿಸದೆ, ಶ್ವಾಸಕ್ರಿಯೆಗಳನ್ನು ಮಾಡುತ್ತಾ, ಜೀವರ ಆಯುಸ್ಸನ್ನು ಅಳೆಯುತ್ತಿರುವ ಅನಿಲದೇವರು ಗುಪ್ತರಾಗಿ ಸ್ಥೂಲದಲ್ಲಿ ಆವಾಸವಾಗಿದ್ದಾರೆ.

**೩. ದ್ವಿಸಪ್ತಲೋಕದ–**

ಬ್ರಹ್ಮಾಂಡವು 14 ಲೋಕಗಳನ್ನು ಒಳಗೊಂಡಿದೆ. ಈ ಸಂಖ್ಯೆಯನ್ನು ದಾಸರಾಯರು, ದ್ವಿಸಪ್ತ-ಎಂದಿದ್ದಾರೆ. ಅಂದರೆ, ದ್ವಿ–ಎರಡು, ಸಪ್ತ–ಏಳು, ಅಲ್ಲಿಗೆ ೨x೭ =೧೪-ಎಂದಾಗುವುದು. ಅಂದರೆ, ಚತುರ್ದಶ ಭುವನಗಳೆಂದರ್ಥ.

**೪. ತ್ರಿಸಪ್ತ ಸಾವಿರದಾರುನೂರು–**

ಇಂತೂ ಬ್ರಹ್ಮಾಂಡಗತ ೧೪ ಲೋಕಗಳಲ್ಲಿರುವ ಸಮಸ್ತ ಜೀವರ ಸ್ಥೂಲ ದೇಹದಲ್ಲಿ ಗುಪ್ತವಾಗಿ ನೆಲೆಸಿದ್ದು. ಅನಿಲದೇವರು ಪ್ರತಿದಿವಸವೂ ದಿನ ಒಂದಕ್ಕೆ ೨೧,೬೦೦ ಸಂಖ್ಯಾಕವಾದ ಶ್ವಾಸಜಪಗಳನ್ನು ಮಾಡಿ ಮಾಡಿಸುತ್ತಿದ್ದಾರೆ. ಈ ಸಂಖ್ಯೆಯನ್ನು ದಾಸರಾಯರು-ತ್ರಿಸಪ್ತಸಾವಿರದಾರುನೂರು - ಎಂದಿದ್ದಾರೆ. ಅಂದರೆ. ತ್ರಿ–ಮೂರು, ಸಪ್ತ–ಏಳು, ಅಲ್ಲಿಗೆ ೩x೭ =೨೧, ೨೧,೦೦೦ದ ಮೇಲೆ ಆರುನೂರು–೨೧,೬೦೦ ಶ್ವಾಸಜಪಗಳು.

**೫. ಶ್ವಾಸಜಪಗಳನ್ನು–**

ಒಂದು ಶ್ವಾಸಜಪಕ್ಕೆ **ಹಂಸಮಂತ್ರ** ವೆಂದು ಹೆಸರು. ಇದು ಷಡಕ್ಷರಾತ್ಮಕವಾದದ್ದು. ಅಂದರೆ, ಆರು ಅಕ್ಷರಗಳಿಂದ ಯುಕ್ತವಾದ ಮಂತ್ರ. "ಹಂಸ–ಸೋಹಂ–ಸ್ವಾಹಾ"– ಎಂಬ ಆರು ಅಕ್ಷರಗಳು. ಇದು ೭೨ ಮಹಾಮಂತ್ರಗಳಲ್ಲಿ ಒಂದು.

**೬. ಸುಪ್ತಿ, ಸ್ವಪ್ನದಿ, ಜಾಗ್ರತಿಗಳನು–**

ಎಚ್ಚರಿಕೆಯ ಕಾಲವನ್ನು-ಜಾಗ್ರತಾವಸ್ಥೆ-ಎನ್ನುವರು. ಆಗ ಸ್ಥೂಲದೇಹದ ಸಕಲಏಕಾದಶೇಂದ್ರಿಯಗಳೂ ಜಾಗೃತವಾಗಿರುವುವು.

ದಶೇಂದ್ರಿಯಗಳು ಉಪರತವಾಗಿದ್ದು, ಮನೋಇಂದ್ರಿಯ ಮಾತ್ರ ಜಾಗ್ರತ ವಾಗಿದ್ದು, ಮನೋಪಟಲದಮೇಲೆ ವಾಸನಾಮಯ ರೂಪವಾದ ಸಂಸ್ಕಾರದ ಪರಿ ಣಾಮವಾಗಿ, ತೈಜಸನಾಮಕ ಪರಮಾತ್ಮನು, ತತ್ಕಾಲದಲ್ಲಿ ಸೃಜಿಸುವ ದೃಶ್ಯಗಳು ಸ್ವಪ್ನದ ದ್ವಾರಾ ಕಾಣಸಿಕೊಳ್ಳುವುವು. ಇದು ಸ್ವಪ್ನಾವಸ್ಥೆ. ಮನಸ್ಸೂ ಸಹ. ಉಪರತವಾಗಿ, ಗಾಢನಿದ್ರಾಕಾಲದಲ್ಲಿ ಜೀವರು ಇರುವ ಅವಸ್ಥೆಗೆ ಸುಷುಪ್ತಿ- ಎಂದು ಹೆಸರು. ಇದಕ್ಕೆ ನಿಯಾಮಕ ಭಗವದ್ರೂಪ ಹೃಸ್ಥ, ಪ್ರಾಜ್ಞನಾಮಕನು. ಇಂತು ಜಾಗ್ರತಿ, ಸ್ವಪ್ನ, ಸುಷುಪ್ತಿ - ಎಂಬ ಅವಸ್ಥಾತ್ರಯಕಾಲಗಳಲ್ಲಿ ಅನಿಲ ದೇವರು, ಶ್ವಾಸಕಾರ್ಯಗಳನ್ನು ಎಡಬಿಡದೆ ಮಾಡುತ್ತಿರುವರು.

## ೭. ಆಪ್ತನೆಂದದಿ–

ಶ್ರೀಹರಿಯನಂತರ ಜೀವರಿಗೆ ಪರಮಾಪ್ತಬಂಧುಗಳೆಂದರೆ, ಜೀವೋ ತ್ತಮರಾದ ಶ್ವಾಸಪತಿಗಳು. ಅವರಿಗೆ ವಿಶ್ರಾಂತಿ ಎಂಬುದೇ ಇಲ್ಲ. ಸದಾ ಸರ್ವಕಾಲಗಳಲ್ಲಿಯೂ ಜಾಗೃತರಾಗಿದ್ದು, ಜೀವರ ಸ್ಥೂಲದೇಹದಲ್ಲಿ ಶ್ವಾಸ ಕ್ರಿಯೆ ನಡೆಯಿಸುತ್ತಾ, ಅವರ ಆಯುಸ್ಸಿಗೆ ಮುಖ್ಯಕಾರಣರಾಗಿರುವರು. ಇದ ರಿಂದಲೇ, ಈ ಸ್ಥೂಲಶರೀರವು–ಸಾಧನದೇಹವೆನಿಸುವುದು. ಅದು ಅನಿಲದೇವ ರಿಂದ ದಯದಿಕೊಟ್ಟಿದ್ದು-ಎಂದರ್ಥ. ಇದರಿಂದಲೇ, ಜೀವರಿಗೆ ಜೀವೋತ್ತಮರು. ಪರಮಾತ್ಮ ಬಂಧುಗಳು.

## ೮. ಮಾಡಿ ಮಾಡಿಸಿ–

ತತ್ಕಾಲದಲ್ಲಿ, ಶ್ವಾಸಜಪವನ್ನು ತತ್ತತ್ಸ್ಥಳದಲ್ಲಿ ತಾವೇ ರಚಿಸಿ, ಶ್ವಾಸಕ್ರಿಯಾ ದ್ವಾರಾ ಜೀವರಿಂದ ಮಾಡಿಸಿ, ತ್ರಿವಿಧಜೀವರ ಯೋಗ್ಯತೆಗಳಿಗನುಗುಣವಾಗಿ ನಿತ್ಯ ಸುಖ–ಸುಖ ದುಃಖ ಮಿಶ್ರ–ನಿತ್ಯ ದುಃಖಗಳೆಂಬ - ಅವರವರ ನಿಜಗತಿಗಳನ್ನು ಶ್ರೀ ಮುಕುಂದನ ಆಜ್ಞಾನುಸಾರ ಕೊಡುವರು.

## ೯. ಕ್ಲುಪ್ತ ಭೋಗಗಳೀವ–

ಜೀವರ ಅನಾದಿಕರ್ಮ–ಸ್ವರೂಪ ಯೋಗ್ಯತೆಗಳನ್ನು ಅನುಸರಿಸಿ, ತದನು

ಗುಣವಾಗಿ, ಯೋಗ್ಯತೆ ಮೀರದೆ ಸಾಧನ ಮಾಡಿಸಿ, ತದ್ವಾರಾ ಭೋಗರೂಪವಾದ ಫಲವನ್ನು ಜೀವರಿಗೆ ಉಣಿಸುವವರು. ದ್ವಂದ್ವಕರ್ಮಗಳನ್ನು ಮಾಡುತ್ತಿರುವವರು ದಾಶರಥಿಯ ನಿಜ ದಾಸರಾದ ಮುಖ್ಯಪ್ರಾಣರು.

**೧೦. ಪ್ರಾಂತಕೆ ತೃತೀಯರೂಪದಲಿ–**

ಬ್ರಹ್ಮದೇವರ ಕಲ್ಪಾಂತಕ್ಕೆ **ಪ್ರಾಂತ**-ಎಂದು ಹೆಸರು. ಅಂದರೆ, ಕಲ್ಪಾಂತ್ರದಲ್ಲಿ ತ್ರಿವಿಧ ಜೀವರಿಗೂ ಲಿಂಗಭಂಗವನ್ನೈದಿಸುವ ಅಧಿಕಾರವು ಆ ಮಂಗಳಾಂಗನಿಂದ ಈ ತುಂಗುಮಹಿಮರಿಗೆ ಕೊಡಲ್ಪಟ್ಟಿದೆ. ವಿರಜಾನದಿಯ ಸ್ನಾನದ್ವಾರಾ, ಸಾತ್ವಿಕರಿಗೂ, ಶ್ರೀವಾಯುದೇವರ ಹುಂಕಾರದಿಂದನಿತ್ಯಸಂಸಾರಿಗಳಿಗೂ ಶ್ರೀವಾಯುದೇವರ ಗದಾಪ್ರಹಾರದಿಂದ ತಮೋಯೋಗ್ಯರಿಗೂ, ಲಿಂಗಭಂಗ ತದನಂತರ. ಕರ್ಮವಿಮೋಚನೆ. ತದನಂತರ, ಅವರವರ ನಿಜಗತಿಪ್ರಾಪ್ತಿ.

ಹೀಗೆ, ಶ್ವಾಸಪತಿಗಳಾಗಿ, ತ್ರಿವಿಧಜೀವರ ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದು, ಶ್ವಾಸಕಾರ್ಯವನ್ನು ನಡೆಯಿಸುತ್ತಿರುವ ಶ್ರೀವಾಯುದೇವರ ಈ ರೂಪವು ತೃತೀಯರೂಪವೆನಿಸುವುದು. ॥೧೭॥

## ಪದ್ಯ-೧೮

**ಮೂಲ :**

**ಶುದ್ಧ ಸತ್ವಾತ್ಮಕ ಶರೀರಿದೊ ।**
**ಇದ್ದ ಕಾಲಕು ಲಿಂಗದೇಹವು।**
**ಬದ್ಧವಾಗದು ದಗ್ಧಪಟದೋಪಾದಿ ಇರುತಿಹುದು ||**
**ಸಿದ್ಧಸಾಧನ ಸರ್ವರೊಳಗನ ।**
**ವದ್ಯನೆನಿಸುವ ಗರುಡ ಶೇಷ ಕ ।**
**ಪರ್ದಿ ಮೊದಲಾದಮರರೆಲ್ಲರು ದಾಸರೆನಿಸುವರು ||೧೮||**

**ಅವತರಣಿಕೆ :**

ಶ್ರೀವಾಯುದೇವ ಮಹಾತ್ಮ್ಯವನ್ನು ಇನ್ನೂ ವಿವರಿಸುತ್ತಾರೆ. ॥೧೮॥

**ಪ್ರತಿಪದಾರ್ಥ**

**ಶುದ್ಧ**—ಪರಿಶುದ್ಧವಾದ ಜ್ಞಾನ, ಭಕ್ತಿ, ವೈರಾಗ್ಯಾದಿ ವೈಭವಯುತ ರಾದ, **ಅನವದ್ಯನು**—ಅಜ್ಞಾನ, ಅಸುರಾವೇಶಾದಿ ಯಾವ ದೂಷಗಳೂ ಇಲ್ಲದ, **ಎನಿಸುವ**—ಜೀವೋತ್ತಮರೆಂದು ಕರೆಯಿಸುವ ಶ್ರೀಮುಖ್ಯಪ್ರಾಣ ದೇವರ, **ಲಿಂಗದೇಹವು**—ಅನಾದಿಯಾದ ಲಿಂಗಶರೀರವು, **ದಗ್ಧ ಪಟದೋ ಪಾದಿ**—ಸುಡಲ್ಪಟ್ಟ ಬಟ್ಟೆಯಂತೆ, **ಇರುತಿಹುದು**—ಇರೋದಾಗಿದೆ. **ಶರೀರ ದೊಳು**—ವಾಯುದೇವರ ಸ್ಥೂಲದೇಹವು, **ಸತ್ತ್ವಾತ್ಮಕ**—ನೂರು ಅಂಶ ಸತ್ತ್ವ, ಒಂದಂಶ ರಜ, ಇದರಲ್ಲಿ ನೂರರಲ್ಲಿ ಒಂದಂಶ ತಮ, ಈ ಪ್ರಕಾರ ಸತ್ತ್ವಪ್ರಾಚುರ್ಯವುಳ್ಳದ್ದು. **ಇದ್ದ ಕಾಲಕು**—ಈ ರೀತಿ ವಿದ್ಯಮಾನರಾಗಿ ದ್ದಾಗ್ಯೂ, **ಬದ್ಧವಾಗದು**—ಲಿಂಗದೇಹದಿಂದ ಬದ್ಧರಲ್ಲ. ಅವರ ಜ್ಞಾನಾ ನಂದಾದಿಗಳಿಗೆ ಯಾವಾಗಲೂ ತಿರೋಧಾನವಿಲ್ಲ. **ಸರ್ವರೊಳಗೆ**—ಸಕಲ ತ್ರಿವಿಧಜೀವರ ಸ್ಥೂಲಶರೀರದಲ್ಲಿ, **ಸಾಧನ**—ಹಂಸಮಂತ್ರ ಜಪದಿಂದಲೂ, ದೇಹೇಂದ್ರಿಯಗತ ತತ್ತ್ವದೇವತೆಗಳಿಗೆ ನಿಯಾಮಕತ್ವದಿಂದಲೂ, ಸಾಧನ ಮಾಡುತ್ತಾ, ಆಯಾ ಜೀವರದ್ವಾರಾ ಸಾಧನ ಮಾಡಿಸುತ್ತಾ, **ಸಿದ್ಧ**—ಸಿದ್ಧ ಸಾಧಕರೆನಿಸಿದ್ದಾರೆ. **ಗರುಡ**—ಅಂತಹ ಅನವದ್ಯರಾದ ಶ್ರೀವಾಯುದೇವರಿಗೆ ಗರುಡದೇವರು, **ಶೇಷ**—ಶೇಷದೇವರು, **ಕಪರ್ದಿ**—ರುದ್ರದೇವರು, **ಮೊದ ಲಾದ**—ಇವರೇ ಮುಂತಾದ, **ಅಮರರೆಲ್ಲರು**—ದೇವತೆಗಳೆಲ್ಲರೂ, **ದಾಸ ರೆನಿಸುವರು**—ಭೃತ್ಯರೆಂದು ಕರೆಯಿಸುವರು. ॥೧೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಾಹಾತ್ಮ್ಯ ಹೇಳುತಾರೆ.

ಪರಿಶುದ್ಧವಾದ ಜ್ಞಾನ, ಭಕ್ತಿ, ವೈರಾಗ್ಯದಿಂದ ಸಹಿತರಾದ, ಅಜ್ಞಾನ, ಅಸುರಾವೇಶಾದಿ ದೋಷದೂರರಾದ, ಸರ್ವಜೀವೋತ್ತಮರೆಂದೆನಿಸತಕ್ಕ, ಪ್ರಧಾನ ವಾಯುದೇವರ ಅನಾದಿಲಿಂಗಶರೀರವು, ಸುಡಲ್ಪಟ್ಟ ಅರಿವಿಯೋ ಪಾದಿಯಲ್ಲಿ ಅಕಾರ್ಯಕಾರಿಯಾಗಿ ಇರೋವಾಗಿದೆ. ವಾಯುದೇವರ ಸ್ಥೂಲ ದೇಹದಲ್ಲಿಯಾದರೋ ನೂರು ಅಂಶ ಸತ್ತ್ವ, ಒಂದಂಶ ರಜ, ಇದರಲ್ಲಿ ನೂರು ಅಂಶದೊಳಗೆ ಒಂದಂಶ ತಮ, ಈ ಪ್ರಕಾರ, ಸತ್ತ್ವಪ್ರಾಚುರ್ಯ ಉಳ್ಳದ್ದು- ವಾಯುದೇವರ ಸ್ಥೂಲಶರೀರ. ಲಿಂಗದೇಹದಲ್ಲಿ ಅಣುಸ್ವರೂಪದಿಂದಲೂ. ತಮ್ಮ ಸ್ಥೂಲಶರೀರದಲ್ಲಿ ಪ್ರಕಾಶತೋವ್ಯಾಪ್ತಿರೂಪದಿಂದಲೂ, ಈ ಪ್ರಕಾರ ಉಭಯಶರೀರದಲ್ಲಿ ಇದ್ದ ಕಾಲಕ್ಕೂ, ಇವರ ಜ್ಞಾನಾನಂದಾದಿಗಳು ತಿರೋಧಾನವಾಗವು- ನಿಶ್ಚಯವು. ತ್ರಿವಿಧಜೀವರೊಳಗೆ ಹಂಸಮಂತ್ರ ಜಪಿಸೋಣದರಿಂದಲೂ, ದೇಹೇಂದ್ರಿಯಾದಿಗಳಿಗೆ ನಿಯಾಮಕರಾಗಿಸ್ಟೂ ಸಾಧನ ಮಾಡತ, ಆಯಾ ಪ್ರಾಣಿಗಳಿಂದ ಸಾಧನ ಮಾಡಿಸತಾ, ಇರತಕ್ಕ ವಾಯುದೇವರಿಗೆ, ಗರುಡದೇವರು, ಶೇಷದೇವರು- ರುದ್ರದೇವರು. ಇವರೇ ಮೊದಲಾದ ದೇವತೆಗಳೆಲ್ಲರೂ ಭೃತ್ಯರೆನಿಸುವರು ॥೧೮॥.

## ೨. ಭಾವಪ್ರಕಾಶಿಕೆ

ಬ್ರಹ್ಮವಾಯುಗಳ ಶರೀರಗಳು-"ವಿಶುದ್ಧಸತ್ತ್ವಂ ಬ್ರಹ್ಮಾಖ್ಯಂ"- ಎಂಬ ಭಾಗವತ ದಶಮಸ್ಕಂಧ ತಾತ್ಪರ್ಯ ವಾಕ್ಯದಂತೆ, ವಿಶುದ್ಧವಾದ, ಅಂದರೆ, ರಜೋಗುಣ ತಮೋಗುಣ ಮಿಶ್ರವಿಲ್ಲದ ಶುದ್ಧಸತ್ತ್ವಸ್ವರೂಪವಾದವು. ಲಿಂಗ ಶರೀರವಿದ್ದರೂ, ಅದರಿಂದ ಬದ್ಧರಾಗುವುದಿಲ್ಲ. ಬಟ್ಟೆಯನ್ನು ಸುಟ್ಟರೆ, ಅದು ಬಟ್ಟೆಯಾಕಾರವಾಗಿ ಕಾಣುವುದು. ಕೈಲಿ ಹಿಸುಕಿದರೆ ಬೂದಿಯಾಗುವುದು, ಇದರಂತೆ, ದಗ್ಧಪಟ ನ್ಯಾಯವಾಗಿ ಅವರಿಗೆ ಲಿಂಗಶರೀರವಿರುವುದು. ಇವರಿಗೆ ಸಾಧನಗಳು ಪೂರ್ತಿಯಾಗಿರುವುದರಿಂದ, ಸಿದ್ಧಸಾಧನರೆಂದು ಕರೆಯಲ್ಪಡುವರು. ಸರ್ವಪ್ರಾಣಿಗಳಲ್ಲಿದ್ದರೂ, ನಿರ್ದಿಷ್ಟರಾಗಿರುವರು. ಗರುಡ, ಶೇಷ, ರುದ್ರಾದಿ ದೇವತಾಗಣರು-ಇವರಿಗೆ ದಾಸರೆನಿಸುವರು. ॥೧೮॥

## ೩. ಭಾವದರ್ಪಣ

ಶುದ್ಧಸತ್ತ್ವ । ತದುಕ್ತಂ ಪಂಚರಾತ್ರಾಗಮೇ "ವಾಯುಸ್ತು ಬ್ರಹ್ಮಣಾ

ಪುತ್ರಃ ಪ್ರಕೃತೌ ಸಮಜಾಯತ । ತ್ರಿಗುಣಾತ್ಮಾ ಸಮುದ್ದಿಷ್ಟಃ ಪ್ರಾಯಃ ಸತ್ವಾತ್ಮಕಃ ಸದೇತಿ. ॥೧೮॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

ನನು ಕಥಂ ಬ್ರಹ್ಮವಾಯ್ವೋಃ ಋಜುತ್ವಮ್ ? "ಋಜವಃ ಸಮೀಚೀನಾಃ ನಿರ್ದೋಷಾಃ". ಇತ್ಯುಕ್ತೇಃ ॥ ಸತ್ಯಮ್ ನಿರ್ದೋಷಾ ಏವ ತೇ ॥ ತದುತ್ಪಾದಕಗುಣಾ ಸಂಸ್ಪರ್ಶಾತ್ ಇತಿ ॥ ತತ್ ನ ॥ ಯದ್ರಜ ಇತ್ಯಾದಿನಾ ಮಹತ್ತತ್ವಂ ತದಾತ್ಮಕಂ ವಾಯುಃ ಸಮಜಾಯತೇತ್ಯುಕ್ತ್ವಾ ತ್ರಿಗುಣಾತ್ಮೇತ್ಯುಕ್ತ್ವಾ (ಕ್ತ್ಯೋ) ಉಭಯೋಃ ಗೌಣದೇಹಾವಗತೇಃ ಇತ್ಯಾಶಂಕಾಂ ಪರಿಹರತಿ 'ಶುದ್ಧ' ಇತಿ ॥ 'ಶುದ್ಧಂ' ಸೂಕ್ಷ್ಮಂ ಆಬಂಧಕಮಿತಿ ಯಾವತ್ ॥ ಬಹುಕಲ್ಪೇಷು ಶುದ್ಧಂ ಸಾಧನಂ ಯಸ್ಯ ಇತಿ ॥ ಪುನರ್ದೋಷೋವಶಿಷ್ಯತೇ ಲಿಂಗಸ್ಯ ದುಷ್ಟಗುಣಾತ್ಮಕತ್ವಾತ್ ಇತಿ ನ ಚ ವಾಚ್ಯಮ್ ॥ ಮೋಕ್ತಂ ವಿಸ್ಮಾರ್ಷೀಃ ॥ ಉಕ್ತಂ 'ಶುದ್ಧ' ಇತಿ ॥ ತನ್ನ ॥ ತಸ್ಯ ಮುಕ್ತ್ಯೈಕಭೋಗ್ಯತ್ವಾತ್ ಕಥಂ ತದಾತ್ಮಕತಾ ಇತಿ ॥ ಅತ್ರ ಬ್ರೂಮಃ ॥ ಅತ್ಯಲ್ಪರಜಸ್ತಮೋಗುಣ ಮಿಶ್ರಣಾಭ್ಯಗಮಾತ್ ॥ ನೋಕ್ತದೋಷಃ ॥ ಉಕ್ತಂ ಚ-"ವಿಲೀನಪ್ರಕೃತಿಯಾ"-ಇತಿ ॥ ನ ಚ ಬಂಧಕತ್ವಂ ॥ ದಗ್ಧಪಟವತ್ ಪಿಣ್ಯಾಕವತ್ ನಿರ್ವೀರ್ಯತ್ವಾತ್. ॥ ೧೮ ॥

## ಕನ್ನಡಾರ್ಥ

ಬ್ರಹ್ಮವಾಯುಗಳು ಋಜುಗಳೆನ್ನುವುದು ಹೇಗೆ ? "ಋಜುಗಳು ಸಮೀಚೀನರಾದವರು, ದೋಷವಿಲ್ಲದವರು"-ಎಂದು ಪ್ರಮಾಣಗಳಲ್ಲಿ ಹೇಳಲಾಗಿರುತ್ತದೆ- ಎಂದು ಶಂಕಿಸಬಾರದು. ಯಾಕೆಂದರೆ, ಅವರವರ ಉತ್ಪಾದಕಗಳಿಂದ ಸತ್ವಾದಿ ಗುಣಗಳ ಸ್ಪರ್ಶವು ಅವರಿಗೆ ಇರುವುದಿಲ್ಲ. ಆದರೆ, ಹೀಗೆ ಹೇಳುವುದು ಸಮಂಜಸವೆನಿಸಲಾರದು. ಯಾಕೆಂದರೆ, 'ಯದ್ರಜಃ'- ಎಂಬ ವಾಕ್ಯದಿಂದ ಮಹತ್ತತ್ವಾತ್ಮಕವಾದ ದೇಹವಿದೆ. ಆದರಿಂದ ವಾಯುವು ಹುಟ್ಟಿದನು ಎಂಬ

ವಚನದಿಂದಲೂ, 'ತ್ರಿಗುಣಾತ್ಮಾ'.ಎಂಬ ವಾಕ್ಯದಿಂದಲೂ ಬ್ರಹ್ಮವಾಯುಗಳಿಗೆ ತ್ರಿಗುಣಾತ್ಮಕ ಶರೀರವಿದೆಯೆಂದು ತಿಳಿದುಬರುವುದು". ಈ ಸಂಶಯವನ್ನು 'ಶುದ್ಧ'-ಎಂಬೀ ಪದ್ಯದಿಂದ ಪರಿಹರಿಸುತ್ತಾರೆ.

ಶುದ್ಧಸತ್ವವು ಸೂಕ್ಷ್ಮವಾಗಿ ಅವರ ಶರೀರವಾಗಿದೆ. ಅದರೂ, ಅವರಿಗೆ ಅದು ಬಂಧಕವಾಗಿರುವುದಿಲ್ಲ. ಎಂದು ತಾತ್ಪರ್ಯ. 'ಸಿದ್ಧಸಾಧನ'-ಬಹಳ ಕಲ್ಪಗಳಿಂದ ಸಿದ್ಧಿ ಪಡೆದ ಸಾಧನಗಳುಳ್ಳವರು.

ಲಿಂಗವು ದುಷ್ಟ ತ್ರಿಗುಣಾತ್ಮಕವಾದದ್ದು. ಹೀಗೆ ತಿಳಿಯಬಾರದು. 'ಶುದ್ಧ ಸತ್ವಾತ್ಮಕ'.ಎಂಬ ಪದ್ಯದಲ್ಲಿ ಹೇಳಿದುದನ್ನು ಮರೆಯಬಾರದು. ಈ ಪದ್ಯದಿಂದಲೇ, ಈ ಆಕ್ಷೇಪಕ್ಕೆ ಉತ್ತರವೀಯಲಾಗಿದೆ. ಆದರೂ, ಶುದ್ಧಸತ್ವಾತ್ಮಕ ಶರೀರವನ್ನು ಭೋಗಿಸುವವರು ಕೇವಲ ಮುಕ್ತರೇ! ಆದುದರಿಂದ ಶುದ್ಧಸತ್ವಾತ್ಮಕ ಶರೀರವಾದರೂ, ಮುಕ್ತರಾಗದಿರುವ ಋಜುಗಳಿಗೆ ಹೇಗೆ?-ಎಂಬ ಸಂಶಯ ಬರುತ್ತದೆ. ಈ ಸಂಶಯಕ್ಕೆ ಹೀಗೆ ಪರಿಹಾರ. ಅತ್ಯಲ್ಪ ಪ್ರಮಾಣದಲ್ಲಿ ರಜತಮಗುಣಗಳ ಅಂಶಗಳು ಋಜುಶರೀರದಲ್ಲಿ ಇರುವವೆಂದು ಒಪ್ಪಿತವಾಗಿರುತ್ತದೆ. ಆದುದರಿಂದ, ಯಾವ ದೋಷವೂ ಇರುವುದಿಲ್ಲ. 'ವಿಲೀನ ಪ್ರಕೃತಿತಯಾ'-ಎಂಬ ಶ್ರೀ ಸುಧಾಕಾರರ ವಚನವು, ಇದರಲ್ಲಿ ಸಂವಾದಿಯಾಗಿರುತ್ತದೆ.

ಅತ್ಯಲ್ಪಪ್ರಮಾಣದಲ್ಲಿಯಾದರೂ ರಜ-ತಮಗುಣಗಳಿದ್ದುದರಿಂದ, ಅವು ಋಜುಗಳನ್ನು ಯಾಕೆ ಸಂಸಾರದಲ್ಲಿ ಬಂಧಿಸಬಾರದು?-ಎಂದು ಶಂಕಿಸಬಾರದು. ಯಾಕೆಂದರೆ, ಸುಟ್ಟ ಅರಿವೆಯಂತೆ, ಗಾಣದಿಂದ ಎಣ್ಣೆ ತೆಗೆದು ಉಳಿದ ಹಿಪ್ಪೆ ಹಿಂಡಿಯಂತೆ ಆ ರಜ-ತಮಗುಣಾತ್ಮಕವಾದ ಅವರ ಲಿಂಗಶರೀರವು ನಿರ್ವೀರ್ಯವಾಗಿರುತ್ತದೆ. ॥೧೮॥

## ॥ ಶ್ರೀಗುರುಹೃದಯಪ್ರಕಾಶಿಕೆ

ಈತನು ಶುದ್ಧಸತ್ವಾತ್ಮಕ ಶರೀರದಲ್ಲಿದ್ದಾಗ್ಯೂ, ಲಿಂಗದೇಹ ಈತನನ್ನು ಬಂಧಿಸುವುದಿಲ್ಲ. ಸುಟ್ಟ ಅರಿವೆಯಂತೆ, ಉಪಯೋಗವಿಲ್ಲದೆ ಇರುವುದು. ಸಿದ್ಧ ಸಾಧನ-ಎಂದರೆ, ದೇವರಲ್ಲಿ ಸಂಪೂರ್ಣಭಕ್ತನಾದ್ದರಿಂದ, ಕೃತಕೃತ್ಯನು ಅಥವಾ

ಸ್ವಾಧೀನವಾದ ಕಾರ್ಯಸಾಧಕ ಪದಾರ್ಥಗಳುಳ್ಳವನು. ಸರ್ವರೊಳಗೆ ಇದ್ದಾಗ್ಯೂ, ಅನವದ್ಯನೆನಿಸುವ-ಎಂದರೆ, ನಿರ್ದೋಷನೆನಿಸುವವನು. ಗರುಡ, ಶೇಷ, ರುದ್ರ-ಮೊದಲಾದ ದೇವತೆಗಳು ಈತನಿಗೆ ಭೃತ್ಯರು. ॥೧೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

### ೧. ಶುದ್ಧ ಸತ್ವಾತ್ಮಕಶರೀರ-

ಶ್ರೀವಾಯುದೇವರ ಶರೀರವು ಸೂಕ್ಷ್ಮಸತ್ವಗುಣಾತ್ಮಕವಾದದ್ದು. ಅವ್ಯಕ್ತ ತತ್ತ್ವದಿಂದ ಜನ್ಯವಾದ ಮಹತತ್ತ್ವದಿಂದ ರಚಿತವಾಗಿದೆ. ಸರ್ವ ಋಜುಗಳ ಶರೀರ, ದ್ವಾತ್ರಿಂಶತಿ ಲಕ್ಷಣಗಳಿಂದ ಕೂಡಿದೆ. (32 ಲಕ್ಷಣಯುಕ್ತವಾದ) ಶ್ರೀವಾಯುದೇವರ ಶರೀರವು ಸತ್ತ್ವಪ್ರಚುರವಾದದ್ದು. ನೂರು ಅಂಶ ಸತ್ತ್ವ, ಒಂದಂಶ ರಜ, ಇದರಲ್ಲಿ ನೂರು ಅಂಶದಲ್ಲಿ ಒಂದಂಶ ರಜ-ಹೀಗೆ ಗುಣಗಳ ಪ್ರಮಾಣವಿದೆ. ಸತ್ತ್ವಗುಣವೇ ಅಧಿಕ. ಉಳಿದ ರಜತಮೋಗುಣಗಳು ಅತ್ಯಲ್ಪ. ಇದರಿಂದ ಅವರು ಶುದ್ಧ **ಸತ್ವಾತ್ಮಕಶರೀರವುಳ್ಳವರು.**

**ಪ್ರಮಾಣ-**

"ವಿರುದ್ಧ ಸತ್ವಂ ಬ್ರಹ್ಮಾಖ್ಯಂ"-

**-ಭಾಗವತ ದಶಮಸ್ಕಂಧ ತಾತ್ಪರ್ಯನಿರ್ಣಯ।**

"ವಾಯುಸ್ತು ಬ್ರಹ್ಮಣಃ ಪುತ್ರಃ ಪ್ರಕೃತೌ ಸಮಜಾಯತ।
ತ್ರಿಗುಣಾತ್ಮಾ ಸಮುದ್ದಿಷ್ಟಃ ಪ್ರಾಯಃ ಸತ್ವಾತ್ಮಕಃ ಸದೇತಿ" ॥

**-ಇತಿ ಪಂಚರಾತ್ರಾಗಮೇ।**

### ೨. ಲಿಂಗದೇಹವು ಬದ್ಧವಾಗದು ದಗ್ಧಪಟದೋಪಾದಿ-

ಶ್ರೀವಾಯುದೇವರು ಜೀವಕೋಟಿ ಪ್ರವಿಷ್ಟರು. ಇದರಿಂದ, ಇತರ ಜೀವ

ರಂತೆ, ಇವರ ಸ್ವರೂಪದೇಹಕ್ಕೆ ಅನಾದಿಯಾದ ಲಿಂಗದೇಹಾವರಣವಿದೆ. ಅದರೆ, ಈ ಲಿಂಗಶರೀರವು ಸುಡಲ್ಪಟ್ಟ ಬಟ್ಟೆಯಂತೆ (ದಗ್ಧಪಟವತ್) ಇದೆ. ಇದೆ–ಇಲ್ಲ–ಹೀಗಿದೆ. ಔಪಚಾರಿಕವಾಗಿದೆ. ಅದರ ಪರಿಣಾಮ (ತ್ರಿಗುಣಗಳ ವಿಕಾರ) ಅವರ ದೇಹದ ಮೇಲಿಲ್ಲ. ಲಿಂಗದೇಹದಿಂದ ಬದ್ಧರಾಗಿಲ್ಲ. ತ್ರಿಗುಣಗಳ ವಿಕಾರಗಳಿಗೆ ಒಳಗಾಗುವುದಿಲ್ಲ ಅವರ ದೇಹ.

**೩. ಸಿದ್ಧ ಸಾಧನರು–**

ಸೃಷ್ಟಿಗೆ ಬಂದಾಗಲೇ ಸಾಧನಪೂರ್ತಿಯುಳ್ಳವರು. ಬಹಳ ಕಲ್ಪಗಳಿಂದ (೯೯ ಕಲ್ಪಗಳು) ಸಿದ್ಧಿ ಪಡೆದ ಸಾಧನಸಂಪತ್ತುಳ್ಳವರು. ಶ್ರೀಹರಿಯ ಸೇವೆ ಅವರಿಗೆ ಸಹಜವಾಗಿ ಬಂದ ಗುಣ. ಇದರಿಂದಲೇ ಭಗವತ್ಕಾರ್ಯಸಾಧಕರು.

**೪. ಸರ್ವರೊಳಗೆ ಅನವದ್ಯನು–**

ಅನವದ್ಯ-ನೆಂದರೆ, ದೋಷರಹಿತ-ನೆಂದರ್ಥ. ಶ್ರೀವಾಯುದೇವರು ಅತಿ ರೋಹಿತವಿಮಲವಿಜ್ಞಾನಿಗಳು. ಮಹಾಪ್ರಳಯಕಾಲದಲ್ಲೂ, ಜಾಗ್ರತ್ಸ್ಥಿತಿಯಲ್ಲಿರುವ ಮಹನೀಯರು. ಪರಶುಕ್ಲತ್ರಯವರ್ಗಕ್ಕೆ ಸೇರಿದವರು. ಅವರಿಗೆ ಅಜ್ಞಾನ, ಅಸುರಾವೇಶ-ಇತ್ಯಾದಿ ದೋಷಗಳು ಎಂದೆಂದಿಗೂ ಇಲ್ಲ. ಕಲಿಯ ಬಾಧಾರಹಿತರು. ಅಖಣಾಶ್ಮಸಮರು.

ಗರುಡದೇವರು ಶೇಷದೇವರು- ಕಪರ್ದಿನಾಮಕರಾದ ಶ್ರೀರುದ್ರದೇವರು ಮೊದಲಾದ ದೇವತಾವರ್ಗವೆಲ್ಲಾ, ಶ್ರೀವಾಯುದೇವರ ಕಿಂಕರರು. ಧೂಮ್ರ ವರ್ಣದ ಜಟೆಯನ್ನು (ಕೂದಲು) ಹೊಂದಿರುವುದರಿಂದ, ರುದ್ರನಿಗೆ-"ಕಪರ್ದಿ"- ಎಂದು ಹೆಸರು. ಕಪರ್ದಿಕಾ-ಎಂದರೆ ಧೂಮವರ್ಣದ ಜಟೆ ಎಂದರ್ಥ. ॥೧೮॥

## ಪದ್ಯ-೧೯

**ಮೂಲ :**

**ಗಣರೊಳಗೆ ತಾನಿದ್ದು ಋಜುವೆಂ।**
**ದೆನಿಸಿಕೊಂಬನು ಕಲ್ಪಶತ ಸಾ।**
**ಧನವಗೈದಾನಂತರದಿ ತಾ ಕಲ್ಕಿಯೆನಿಸುವನು ॥**
**ದ್ವಿನವಶೀತಿಯ ಪ್ರಾಂತಭಾಗದಿ ।**
**ಅನಿಲ ಹನುಮದ್ಭೀಮ ರೂಪದಿ ।**
**ದನುಜರೆಲ್ಲರ ಸದೆದು ಮಧ್ವಾಚಾರ್ಯನೆನಿಸಿದನು ॥೧೯॥**

**ಅವತರಣಿಕೆ :**

ಶ್ರೀವಾಯುದೇವರ ಮಹಾತ್ಮ್ಯವೈಭವವನ್ನೇ ಪ್ರಸಕ್ತಪದ್ಯದಲ್ಲಿಯೂ ಮುಂದುವರಿಸುತ್ತಾರೆ. ॥೧೯॥

**ಪ್ರತಿಪದಾರ್ಥ :**

**ಗಣದೊಳಗೆ**—ಪೂರ್ವೋಕ್ತ ಇನ್ನೂರುಮಂದಿ ಋಜುಗಣದಲ್ಲಿ, **ತಾನಿದ್ದು**—ತಾನು ವಿದ್ಯಮಾನವಾಗಿದ್ದು, **ಋಜುವೆಂದನಿಸಿಕೊಂಬನು**—ಋಜು-ಎಂಬ ನಾಮದಿಂದ ಕರೆಯಿಸುತ್ತಾರೆ. **ಕಲ್ಪಶತ**—ಸೃಷ್ಟಿಗೆ ಬಂದಾರಭ್ಯ ನೂರು ಬ್ರಹ್ಮಕಲ್ಪಗಳು, **ಸಾಧನವ**—ಸಾಧನವನ್ನು. **ಗೈದಾನಂತರದಿ**—ಮಾಡಿದ ತರುವಾಯ, **ತಾ**—ಈ ವಾಯುದೇವರು, **ಕಲ್ಕಿಎನಿಸುವನು**—ನೂರಾ ಒಂದನೆಯ ಕಲ್ಪದಲಿ "ಕಲ್ಕಿ" ಹೆಸರಿನಿಂದ ಕರೆಸುವನು. **ದ್ವಿನವಶೀತಿಯ**—೯೮ ಸಂಖ್ಯಾಕವಾದ (ದ್ವಿನವ—೨×೯-೧೮. ಅಶೀತಿಯ-೮೦ ಅಲ್ಲಿಗೆ, ೮೦+೧೮ =೯೮ ಕಲ್ಪಗಳು) **ಪ್ರಾಂತ**—೯೮ನೆಯ ಕಲ್ಪಾಂತದಲ್ಲಿ. **ಭಾಗದಿ**—೯೯ನೆಯ ಬ್ರಹ್ಮಕಲ್ಪದ ಭಾಗ ವಿಶೇಷಕಾಲದಲ್ಲಿ, **ಅನಿಲ**—ವಾಯು. ವೆಂದು ಕರೆಯಿಸಿ, (ವಾಯುಪದವಿಯನ್ನು ಹೊಂದಿ). **ಹನುಮದ್ಭೀಮ**

—ಹನುಮ ಮತ್ತು ಭೀಮ ಎಂಬ, **ರೂಪದಿ**—ಅವತಾರರೂಪಗಳಲ್ಲಿ, **ದನುಜರೆಲ್ಲರ ಸದೆದು**—ಭಗವದ್ವೇಷಿಗಳೂ, ತಮೋಯೋಗ್ಯರೂ ಆದ ದೈತ್ಯರನ್ನೆಲ್ಲ ಸಂಹರಿಸಿ, **ಮಧ್ವಾಚಾರ್ಯನೆನಿಸಿದನು**—ಅದೇ ದೈತ್ಯರು ವಿಪ್ರಕುಲೋತ್ಪನ್ನರಾಗಿ ಅವತರಿಸಿ, ಸಚ್ಛಾಸ್ತ್ರಗಳಿಗೆ ವಿರುದ್ಧವಾದ ಕುಮತಗಳನ್ನು ಪ್ರಚಾರಮಾಡುತ್ತಿರಲಾಗಿ, ಮಧ್ವಾಚಾರ್ಯರೆಂಬ ಅಭಿಧಾನದಿ ಅವತರಿಸಿ, ಮಾಯಾವಾದಿಗಳನ್ನು ಗೆದ್ದು, ಸತ್ಸಿದ್ಧಾಂತ ಸ್ಥಾಪನೆಮಾಡಿದರು. ॥೧೯॥

## ವ್ಯಾಖ್ಯಾನಗಳು

### ೧ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಾಹಾತ್ಮ್ಯ ಹೇಳುತಾರೆ.

ಈ ವಾಯುದೇವರು ಇನ್ನೂರುವಂದಿ ಋಜುಗಣದೊಳಗೆ ತಾವು ಇದ್ದು, ಋಜು-ಎಂಬ ನಾಮದಿಂದ ಯುಕ್ತರಾಗುತ್ತಾರೆ. ಈ ವಾಯುದೇವರು, ಒಬ್ಬ ಬ್ರಹ್ಮದೇವರು ಮುಕ್ತರಾಗೋಣವೇ ಋಜುರಾಶಿಯಿಂದ ಸೃಷ್ಟರಾಗತಾರೆ. ಹೀಂಗೆ, ಆದಿಯಲ್ಲಿ ಸೃಷ್ಟರಾದವರು ಈ ವಾಯುದೇವರು. ಅಗ್ಗ ವಾಯುಶಬ್ದವಾಚ್ಯರಾಗದೆ, ಋಜುಗಳೆಂಬು ಕರಸೋವರಾದರು. ರಾಶಿಯಿಂದ ತೆಗೆದು, ಸೃಷ್ಟಿಗೆ ಬಂದಾರಭ್ಯ, ಬ್ರಹ್ಮಕಲ್ಪಗಳು ನೂರು, ಸಾಧನಮಾಡಿದ ಅನಂತರದಲ್ಲಿ, ಈ ವಾಯುದೇವರು ನೂರಾಒಂದನೇ ಬ್ರಹ್ಮಕಲ್ಪದಲ್ಲಿ **ಕಲ್ಕಿ**-ಎಂತ ಅನಿಸೋವರಾದರು. ನೂರಾಒಂದನೇ ಕಲ್ಪದಾರಭ್ಯ, ನೂರು ಬ್ರಹ್ಮಕಲ್ಪ ಮತ್ತೂ ಸಾಧನ ಮಾಡಬೇಕು. ಕಲ್ಕಿ-ಎಂತ ನಾಮದಿಂದ ಸಾಧನಮಾಡತಾ ಒಂದು, ಹದಿನೆಂಟು ಎಂಭತ್ತು, ಅಂತೂ ತೊಂಭತ್ತೆಂಟು, ಬ್ರಹ್ಮಕಲ್ಪ ಚಂದಾಗಿ ಅಂತ್ಯವಾಗಿ, ತೊಂಭತ್ತೊಂಭತ್ತನೇ ಬ್ರಹ್ಮಕಲ್ಪದ ಭಾಗವಿಶೇಷವಾದ ಕಾಲದಲ್ಲಿ, **ವಾಯುವೆಂತ** ನಾಮಾಂಕಿತರಾಗಿ, ಹನುಮ ಎಂತಲೂ, ಭೀಮ ಎಂತಲೂ, ಅವತಾರ ಮಾಡಿ, ಈ ಎರಡು ರೂಪದಿಂದ ಬಲಕಾರ್ಯಪ್ರದರ್ಶನ ಮಾಡಿ, ಭಗವದ್ದ್ವೇಷಿಗಳು, ಮತ್ತು ಪರಮಾತ್ಮನ ಭಕ್ತರ ದ್ವೇಷಿಗಳಾದ

ರಾಕ್ಷಸರ ಸಂಹರಿಸಿದರು. ಈ ರಾಕ್ಷಸರು ಬ್ರಾಹ್ಮಣರಾಗಿ ಜನಿಸಿದರು. ಇವರುಗಳು ಸಚ್ಛಾಸ್ತ್ರಕ್ಕೆ ವಿರುದ್ಧವಾದ ದುರ್ಭಾಷ್ಯಾದಿಗಳಾಗಿ, ಆಗ್ಗೆ ಮಧ್ವಾಚಾರ್ಯರಾಗಿ ಅವತಾರಮಾಡಿ, ವಾಗ್ಯುದ್ಧದಿಂದ ಮಾಯಾವಾದಿಗಳನ್ನು ಗೆಲಿದು, ಈ ಪ್ರಕಾರ ವಾಯುದೇವರು, ಅವತಾರತ್ರಯಗಳಿಂದ ಸಾಧನೆ ಮಾಡೋವರಾದರು.

**ಪ್ರಮಾಣ–**

**ಮಣಿಮತ್ಪೂರ್ವಕಾ ದುಷ್ಟಾ ದೈತ್ಯಾ ಅಸ್ಯ ಕಲೌ ಯುಗೇ ।**
**ತೇ ಕುಶಾಸ್ತ್ರಂ ಪ್ರವರ್ತಂತೇ ಹರಿವಾಯು ವಿರೋಧಿನಃ ।**
**ಏವಂ ತಮಸಿ ಸಂಪ್ರಾಪ್ತೇ ಬ್ರಹ್ಮರುದ್ರಾದಯಸ್ತದಾ ।**
**ಶರಣ್ಯಂ ಶರಣಂ ಜಗ್ಮುಃ ವಾಸುದೇವಮನಾಮಯಂ ।**
**ತಸ್ಯಾಜ್ಞಯಾ ಮಹಾಬಾಹುಃ ವಾಯುಃ ಸರ್ವಸುರೋತ್ತಮಃ ।**
**ಕಾಪ್ಯಪೀಠೇ ಮಧ್ಯಗೇಹೇ ವಿರ್ವಿಕಾರೋಪ್ಯಜಾಯತ ।**
**ತೃತೀಯಮಸ್ಯ ಋಷಭ ಮಧ್ವೋ ವೋ ನಾಮ ಮಾರುತಃ ।**
**ತವಸ್ಯ ಪ್ರಿಯಮಿತ್ಯಾದೌ ವೇದೇ ಮಧ್ವಃ ಪ್ರಕೀರ್ತಿತಃ ॥**

**–ಇತಿ ಸ್ಕಾಂದಪುರಾಣವಚನ ॥೧೯॥**

## ೨. ಭಾವಪ್ರಕಾಶಿಕೆ

ವಾಯುದೇವರು ಪೂರ್ವದಲ್ಲಿ ಋಜುಗಣದಲ್ಲಿ ಸೇರಿ, ಋಜು-ಎಂಬ ಹೆಸರಿನಿಂದ ನಿದ್ರಾವಸ್ಥೆಯಲ್ಲಿರುತ್ತಾರೆ. ಮೊದಲು ಸೃಷ್ಟಿಗೆ ಬಂದಮೇಲೆ, ೧೦೦ ಕಲ್ಪ ಸಾಧನವಾದ ಮೇಲೆ, ಇವರಿಗೆ ಋಜುವೆಂಬ ಹೆಸರು ಹೋಗಿ, ಕಲ್ಕಿ–ಎಂಬ ಹೆಸರು ಬರುವುದು. ಕಲ್ಕಿಯಾದ ಮೇಲೆ ೧೦೦ ಕಲ್ಪಸಾಧನದಿಂದ, ಬ್ರಹ್ಮಪದವಿಯನ್ನು ಹೊಂದುವರೆಂದು ತಾತ್ಪರ್ಯ. ಈ ವಿಷಯದಲ್ಲಿ ಪುರಂದರದಾಸಾಚಾರ್ಯರ ಸುಳಾದಿ ಇರುವದು. "ಹರಮುಖಾದ್ಯಮರರಿಗೆ ವರನೆನಿಪ ಋಜು ವೊಬ್ಬ ಹರುಷದಿ ಶತಕಲ್ಪಸಾಧನವಗೈದು ತಾನು ಕರೆಸುವ ಕಲ್ಕಿಯೆಂದೂ, ಎರಡೈದು ದಶಕಲ್ಪ ಸಾಧನ ಮಾಡುತಲೆ, ವಿರಂಚಿಯ ತಾನೆನಿಸಿ, ಸತ್ಯಲೋಕವ ನಾಳಿ ಸರ್ವಾಂಗ ಸಾಯುಜ್ಯಾವ ಪಡೆವಾನು". ಇದರಂತೆ, ಚಂಪಾರು ಪ್ರತಿದಿನ

ಋಜುಗಣ ಚೇತನರು ಧರಣೀಶ ಪುರಂದರವಿಠಲನ ಪೂರ್ಣಕರುಣಾಪೂರ್ಣ ಪಾತ್ರರು ಕೇಳೋ ಅಚ್ಛಿನ್ನಭಕ್ತರಿವರು"- ಎಂಬ ಸುಳಾದಿಯಿಂದ ಋಜುಗಣ ದವರು-೧೦೦೦ ಕಲ್ಪಸಾಧನವಾದ ಮೇಲೆ, ಕಲ್ಕಿ ಎನಿಸಿ, ಮತ್ತು ೧೦೦ ಕಲ್ಪಸಾಧನ ದಿಂದ ಬ್ರಹ್ಮಪಟ್ಟಕ್ಕೆ ಬರುವರೆಂಬರ್ಥವು ಸಿದ್ಧಿಸುವುದು. ಅದೇ ಅರ್ಥವನ್ನೇ ದಾಸಾರ್ಯರು ಇಲ್ಲಿ ಹೇಳಿನುವರು. ಹೀಗೆ, ೧೦೦ ಕಲ್ಪಸಾಧನವಾದ ಮೇಲೆ ಕಲ್ಕಿ ಎನಿಸಿ, ಆಮೇಲೆ, ೯೮ ಕಲ್ಪಗಳ ಸಾಧನವ ಕಳೆದು, ೯೯ನೆಯ ಕಲ್ಪಾರಂಭ ದಲ್ಲಿ ವಾಯುವೆನಿಸಿ, ರಾಮಾವತಾರದಲ್ಲಿ ಹನುಮಂತರೂಪದಿಂದಲೂ, ಕೃಷ್ಣಾ ವತಾರದಲ್ಲಿ ಭೀಮಸೇನರೂಪದಿಂದಲೂ, ದೈತ್ಯರನ್ನು ಸಂಹರಿಸಿ, ಕಡೆಗೆ ಆ ದಾಸ ವರು ಬ್ರಾಹ್ಮಣಜಾತಿಯಲ್ಲಿ ಹುಟ್ಟಿ, ಕುಭಾಷ್ಯಾದಿಗಳನ್ನು ರಚಿಸಿ, ಭಗವದ್ಗುಣ ಗಳನ್ನು ಆಚ್ಛಾದಿಸಲು. ಪರಮಾತ್ಮನ ಅಪ್ಪಣೆಯನ್ನು ಪಡೆದು, ಮಧ್ವಾಚಾರ್ಯರಾಗಿ ಅವತರಿಸಿದರು. ॥೧೯॥

## ೩. ಭಾವದರ್ಪಣ

ಗಣದೊಳಗೆ। ತದುಕ್ತಂ ಪುರಂದರದಾಸರಾಜೈಃ । "ಹರಮುಖಾದ್ಯಮರ ರಿಗೆ ವರನೆನಿಪ ಋಜುನೊಬ್ಬ ಹರುಪದಿ ಶತಕಲ್ಪ ಸಾಧನಗೈದು ತಾನು । ಕರಿಸುವ ಕಲಿಕಿಯೆಂದು ಎರಡೈದುದಶಕಲ್ಪ ಸಾಧನ ಮಾಡುತಲೆ । ವಿರಿಂಚಿಯ ತಾ ನೆನಿಸಿ ಸತ್ಯಲೋಕವನಾಳಿ ಸರುವಾಂಗ ಸಾಯುಜ್ಯಾವ ಪಡಿವಾನು। ಇದರಂತೆ ಚರಿಪಾರು ಪ್ರತಿದಿನ ಋಜುಗಣಚೇತನರು ಧರಣೀಶ ಪುರಂದರವಿಠಲನ ಪೂರ್ಣಕರುಣಾಪಾತ್ರರು ಕೇಳೋ ಅಚ್ಛಿನ್ನಭಕ್ತರಿವರು"- । ಎಂದು ಬಹಳ ದೊಡ್ಡವರು ಹೇಳಿದಂಥ ರಹಸ್ಯವನ್ನೇ, ಇಲ್ಲಿ ಪದ್ಯರೂಪದಿಂದ ಜಗನ್ನಾಥದಾಸಾ ಚಾರ್ಯರು ಹೇಳಿರುತ್ತಾರೆ. ॥೧೯॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಸಾಮಾನ್ಯ ವಿಶೇಷ ನಾಮಾಸ್ಯಾಹ–ಗಣೇತಿ ॥ ದ್ವಿನವಾಶೀತೀತಿ ಏವಂ ಚ ಅಷ್ಟನವತಿ ಕಲ್ಪೋರ್ಧ್ವಮ್ ಇತ್ಯರ್ಥಃ-'ದನುಜಾಃ' ಅಕ್ಷಾದ್ಯಾಃ ಕೌರವಾದ್ಯಶ್ಚ॥ ॥೧೯॥

## ಕನ್ನಡಾರ್ಥ

ಋಜು ನೂರು ಕಲ್ಪಸಾಧನಾನಂತರ, ಸಾಮಾನ್ಯನಾಮದಿಂದ ಕಲ್ಕಿ-ಎಂದು ಕರೆಸುವನೆಂದು ಹೇಳಲಾಗಿದೆ. ಹೀಗೆ, ಸಾಮಾನ್ಯ ವಿಶೇಷನಾಮದಿಂದ ಕರೆಸುತ್ತಾರೆ. "ದ್ವಿನವಶೀತಿ" ॥ ೯೮ ಕಲ್ಪಗಳೆಂದು ಅರ್ಥ. ೯೮ ಕಲ್ಪದ ಅನಂತರವೆಂದು ಅರ್ಥ ಮಾಡಬೇಕು. 'ದನುಜರು'- ಅಕ್ಷಕುಮಾರ ಮುಂತಾದವರು ಹನುಮದ್ರೂಪದಲ್ಲಿ, ಕೌರವ ಮುಂತಾದವರು ಭೀಮರೂಪದಲ್ಲಿ. ॥೧೯॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಬ್ರಹ್ಮಪದಯೋಗ್ಯಜೀವಗಣದಲ್ಲಿದ್ದಾಗ, ಋಜುನಾಮದಿಂದ ಕರೆಸುವನು. ನೂರುಕಲ್ಪ ಸಾಧನಾನಂತರ, ಕಲಿಸಂಹಾರಕನಾದ್ದರಿಂದ ಕಲ್ಕೀ ಎನಿಸುವನು. ದ್ವಿನವಶೀತಿಯ ಪ್ರಾಂತಭಾಗದಿ, ಅಂದರೆ, ದ್ವಿನವ-ಎಂದರೆ, ಹದಿನೆಂಟು-ಅಶೀತಿ-ಎಂದರೆ, ಎಂಭತ್ತು. ಅಂತೂ ತೊಂಭತ್ತೆಂಟು ಕಲ್ಪಾನಂತರ, ತೊಂಭತೊಂಭತ್ತನೇ ಕಲ್ಪದಲ್ಲಿ, ಅನಿಳನೆಂಬ ಪ್ರಾಣಪದವನ್ನು ಹೊಂದಿ, ಹನುಮ-ಭೀಮರೂಪದಿಂದ, ದನುಜರೆಲ್ಲರನ್ನು ಸಂಹರಿಸಿದ ನಂತರ, ಕಲಿಯುಗದಲ್ಲಿ ಮಣಿಮಂತ- ಮೊದಲಾದ ಅಸುರರು ಹುಟ್ಟಿ ಬ್ರಹ್ಮನಿರ್ಗುಣ, ಜಗತ್ತೆಲ್ಲಾ ಮಿಥ್ಯಾ-ಎಂಬುದೇ ಮೊದಲಾದ ದುಶ್ಶಾಸ್ತ್ರವನ್ನು ನಿರ್ಮಿಸಿರಲಾಗಿ, ದೇವರ ಆಜ್ಞೆಯಿಂದ ಅವುಗಳನ್ನೆಲ್ಲಾ ನಿರಾಕರಿಸಿ, ಶ್ರೀವೇದವ್ಯಾಸರ ನಿಜಮತ ಸಾಧನಾರ್ಥವಾಗಿ. ಮಧ್ವಾಚಾರ್ಯನೆಂದು ಅವತರಿಸಿದನು.

**ಪ್ರಮಾಣ-**

**ಮಣಿಮಂತಪೂರ್ವಕಾ ದುಷ್ಟಾ ದೈತ್ಯಾ ಅರ್ಸ ಕಲೌಯುಗೇ ।**
**ನಿರ್ವಿಕಾರೋ ಪ್ರಜಾಯಂತ ॥**

(ಈ ಪ್ರಮಾಣದ ಪೂರ್ಣಪಾಠವು ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ) ಎಂಬ ಸ್ಕಾಂದಪುರಾಣ ಶ್ಲೋಕ, ಶ್ರುತಿಗಳ ಅರ್ಥ ವಿವರಿಸಿತು. ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಸೃಷ್ಟಿಯ ಆರಂಭದಲ್ಲಿ, ಶ್ರೀಹರಿಯು ೨೦೦ ಮಂದಿ ಋಜುಗಣಸ್ಥರನ್ನು ಸೃಷ್ಟಿಗೆ ತರುತ್ತಾನೆ. ೧೦೦ ಬ್ರಹ್ಮಕಲ್ಪವಾದ ನಂತರ, ಆ ಋಜುವಿಗೆ-**ಕಲ್ಕಿ**-ಎಂದು ಹೆಸರು. ಕಲಿವಿದಾರಣನಾದ್ದರಿಂದ, "ಕಲ್ಕಿ"–ಎಂತ ನಾಮ.

**ಗಣದೊಳಗೆ**– ಎಂದರು ೨೦೦ ಮಂದಿ ಸಂಖ್ಯಾಕರಾದ ಋಜುಗಣಸ್ಥರೆಂದರ್ಥ. **ಕಲ್ಪಶತ ಸಾಧನಗೈದಾನಂತರದಿ**–

೧೦೦ ಬ್ರಹ್ಮಕಲ್ಪಗಳ ಸಾಧನಾನಂತರ, ಋಜು, ಕಲ್ಕಿ- ಎಂಬ ಪದವಿಗೆ ಬರುವನು.

೨. ಕಲ್ಕಿಪದವಿಯಿಂದ ಪ್ರಾರಂಭಿಸಿ, ೯೮ ಬ್ರಹ್ಮಕಲ್ಪಗಳು ಕಳೆದು, ೯೯ನೆಯ ಕಲ್ಪದಲ್ಲಿ **ಅನಿಲದೇವರು**.ಎಂಬ ಹೆಸರಿನಿಂದ ವಾಯುಪದವಿಗೆ ಬರುವರು.

ಈ ಸಂಖ್ಯೆಯನ್ನು ದಾಸರಾಯರು– **ದ್ವಿನವಶೀತಿಯ**–ಎಂದಿದ್ದಾರೆ. ಅಂದರೆ, ದ್ವಿ-ಎರಡು, ನವ-ಒಂಬತ್ತು, ಅಲ್ಲಿಗೆ ದ್ವಿನವ= ೨×೯ =೧೮ ಎಂದಾಗುವುದು. ಆಶೀತಿ–ಎಂಭತ್ತು. ಕೂಡಿದರೆ- ದ್ವಿನವಶೀತಿ= ೧೮+೮೦ = ೯೮ನೆಯ ಬ್ರಹ್ಮಕಲ್ಪವೆಂದಾಗುವುದು.

ಈ ಕಲ್ಪದ **ಪ್ರಾಂತಭಾಗದಿ**– ಅಂದರೆ, ೯೮ ಕಳೆದು, ೯೯ನೆಯ ಬ್ರಹ್ಮಕಲ್ಪದಲ್ಲಿ ಎಂದರ್ಥ.

**ಅನಿಲ**–ವಾಯುದೇವರು. ಕಲ್ಕಿ–ವಾಯು–ಲಾತವ್ಯ–ಬ್ರಹ್ಮ–ಈ ಶಬ್ದಗಳು ಪದವಿಗಳನ್ನು ಸೂಚಿಸುತ್ತವೆ. ಆ ಪದವಿಗೆ ಬರುವ ಋಜುಗಳು ಅದೇ ಹೆಸರಿನಿಂದ ಕರೆಯಿಸುವರು.

೩. ಶ್ರೀವಾಯುದೇವರು. (ಈಗ ೯೯ನೆಯ ಋಜುಸ್ಥಾನಗತರಾದ) ಹನುಮ ಮತ್ತು ಭೀಮ-ಎಂಬ ಎರಡು ಅವತಾರಗಳನ್ನು, ಶ್ರೀಹರಿಯ ಕಾರ್ಯಸಾಧನೆಗಾಗಿ, ಅವನ ಆದೇಶದಂತೆ ತಾಳಿದರು. ತ್ರೇತೆಯಲ್ಲಿ ಹನುಮದವತಾರು·

ಕೇಸರಿ– ಎಂಬ ಕಪಿಯಿಂದ ಅಂಜನಾದೇವಿಯಲ್ಲಿ ಮಾತಂಗಮುನಿಗಳ ಅನುಗ್ರಹದಿಂದ ಆಂಜನೇಯನಾಗಿ ಪ್ರಾದುರ್ಭವಿಸಿದರು. ಮರುತನಪುತ್ರನಾದ್ದರಿಂದ '**ಮಾರುತಿ**' ಎಂದು ಹೆಸರು. ಅಂಜನಾದೇವಿ ಪುತ್ರನಾದ್ದರಿಂದ, '**ಆಂಜನೇಯ**'- ಎಂತ ನಾಮ. ಜ್ಞಾನವಂತರೂ ಬಲಾಢ್ಯನೂ ಆದುದರಿಂದ, "**ಹನುಮಂತ**"ನೆಂದು ಹೆಸರು. "ಹನೂ" ಶಬ್ದವು ಜ್ಞಾನವಾಚಿ. ದ್ವಾಪರದಲ್ಲಿ, ಶ್ರೀವಾಯುದೇವರ ವರಪ್ರಸಾದದಿಂದ, ಕುಂತಿಯಲ್ಲಿ '**ಭೀಮಸೇನ**'-ನೆಂಬ ನಾಮದಿಂದ ಅವತರಿಸಿದರು.

ಈ ಹನುಮ–ಭೀಮ–ಎರಡು ಅವತಾರಗಳಲ್ಲಿಯೂ, ದುಷ್ಟರಾದ ಅಕ್ಷಕುಮಾರ, ಜರಾಸಂಧ-ಬಕ-ಕೀಚಕ-ಹಿಡಿಂಬಾಸುರ– ಇತ್ಯಾದಿ ದಾನವರನ್ನು ಸಂಹರಿಸಿ, ಲೋಕಕ್ಷೇಮಗೈದು, ಪರಿಕಾರ್ಯಧುರಂಧರರೆನಿಸಿದರು.

೪. ಕಲಿಯುಗ ಪ್ರಾಪ್ತವಾಗುತ್ತಿರಲು, ದೈತ್ಯರು ವಿಪ್ರರ ಜನ್ಮತಾಳಿ, ಯತ್ಯಾಶ್ರಮವಹಿಸಿ, ೨೧ ಕುಮತಗಳನ್ನು ಸ್ಥಾಪಿಸಿ, ಹರಡುತ್ತಿರಲು, **ಶ್ರೀಮನ್ಮಧ್ವಾಚಾರ್ಯ**ರೆಂದು ಖ್ಯಾತನಾಮರಾಗಿ, ಅವರನ್ನು ಖಂಡಿಸಿ, ಹರಿಮತವನ್ನು ಸ್ಥಾಪಿಸಿದರು. ॥೧೯॥

## ಪದ್ಯ–೩೦

**ಮೂಲ :**

ವಿಶ್ವವ್ಯಾಪಕ ಹರಿಗೆ ಶಾ ಸಾ।
ದೃಶ್ಯರೂಪವ ಧರಿಸಿ ಬ್ರಹ್ಮ ಸ।
ರಸ್ವತೀ ಭಾರತಿಗಳಿಂದೊಡಗೂಡಿ ಪವಮಾನ॥
ಶಾಶ್ವತ ಸುಭಕ್ತಿಯಲಿ ಸುಜ್ಞಾನ।
ನ ಸ್ವರೂಪನ ರೂಪ ಗುಣಗಳ।
ನಶ್ವರವು ಎಂದೆನುತ ಪೇಳುವ ಶ್ರುತಿಗಳೊಳಗಿದ್ದು ॥೩೦॥

**ಅವತರಣಿಕೆ :**

ಶ್ರೀಹರಿಗೆ ಪ್ರಥಮಾಂಗಭೂತರೆನಿಸುವ ಶ್ರೀವಾಯುದೇವರ ಮಹಾತ್ಮ್ಯೆಯನ್ನೇ ಹೇಳುತ್ತಾರೆ. ॥೨೦॥

**ಪ್ರತಿಪದಾರ್ಥ :**

**ವಿಶ್ವ**—ನವಾಸರಣಸಹಿತವಾದ ಚರಾಚರಾತ್ಮಕವಾದ ಈ ಜಗತ್ತು, **ವ್ಯಾಪಕ**—ಅದರಲ್ಲಿ ಸರ್ವತ್ರ ತದಾಕಾರ, ಅಖಂಡಾಕಾರದಿಂದ ವ್ಯಾಪ್ತನಾಗಿರುವ, **ಹರಿಗೆ**—ಹರಿನಾಮಕ ಶ್ರೀಪರಮಾತ್ಮನಿಗೆ, **ತಾ**—ತಾವು (ಶ್ರೀವಾಯುದೇವರು) **ಸಾದೃಶ್ಯರೂಪವ**—ಹರಿಯು ವಿರಾಡ್ರೂಪ ಧರಿಸಿದಂತೆ, ತಾವೂ ಸಹ ತತ್ಸದೃಶವಾದ ವಿರಾಡ್ರೂಪವನ್ನು, **ಧರಿಸಿ**—ಧಾರಣಮಾಡಿದವರಾಗಿ, **ಬ್ರಹ್ಮ**—ಶ್ರೀಚತುರ್ಮುಖ ಬ್ರಹ್ಮದೇವರು, **ಸರಸ್ವತೀ**—ಬ್ರಹ್ಮಪತ್ನಿ ಶ್ರೀ ಸರಸ್ವತೀದೇವಿ, **ಭಾರತಿಗಳಿಂದ**—ತಮ್ಮ ಪತ್ನಿ ಶ್ರೀಭಾರತೀದೇವಿ, **ಒಡಗೂಡಿ**—ಈ ಮೂರುಮಂದಿಗಳ ಸಹಿತವಾಗಿ, **ಪವಮಾನ**—ಪರಮಪಾವನ ಮೂರ್ತಿಗಳಾದ ಶ್ರೀ ವಾಯುದೇವರು, **ಸುಭಕ್ತಿಯಲಿ**—ಸಮೀಚೀನವಾದ ಭಕ್ತಿಯಿಂದ, **ಶಾಶ್ವತ**—ಅನಾದ್ಯನಂತಕಾಲಕ್ಕೂ ನಿತ್ಯ ಶಾಶ್ವತನಾದ ಒಬ್ಬನೇ ಆದ (ಏಕಮೇವ ಅದ್ವಿತೀಯನಾದ), **ಸುಜ್ಞಾನಸ್ವರೂಪನ**—ಜ್ಞಾನವನ್ನೇ, ಸ್ವರೂಪವನ್ನಾಗಿ ಉಳ್ಳ (ಜ್ಞಾನಸಪೂರ್ಣನಾದ) ಶ್ರೀ ಪರಮಾತ್ಮನ, **ರೂಪಗುಣಗಳನು**—ಅನಂತರೂಪಗಳೇನು, ಅವತಾರಗಳೇನು, ಗುಣಸಮೂಹಗಳೇನು-ಇವೆಲ್ಲವನ್ನೂ, **ನಶ್ವರವು**—ಶಾಶ್ವತವಲ್ಲವೆಂತಲೂ, ಈಶ್ವರನು ಮಾನವರಂತೆ ಜನನ ಮರಣಾದಿಗಳಿಂದ ಯುಕ್ತನೆಂತಲೂ, **ಎಂದೆನುತ ಹೇಳುವ**—ಎಂದು ಸಾರತಕ್ಕ ಮಾಯಾವಾದಿಗಳ ಕುಶಾಸ್ತ್ರಗಳನ್ನು, **ಶ್ರುತಿಗಳೊಳಗೆ**—ಅಪೌರುಷೇಯವಾದ ವೇದ, ಉಪನಿಷತ್ತುಗಳ ವಾಕ್ಯಗಳಿಂದಲೇ ಖಂಡಿಸಿ, **ಇದ್ದು**—ಯಥಾರ್ಥ ಬೋಧಕವಾದ ಸಚ್ಛಾಸ್ತ್ರಗಳನ್ನು ರಚಿಸಿದ ಮಧ್ವಾಚಾರ್ಯರಾಗಿ ಅವತಾರ ಮಾಡಿದರು. ॥೨೦॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಾಹಾತ್ಮ್ಯ ಹೇಳುತಾರೆ.

ಸಾವಾವರಣಸಹಿತವಾದ ಚರಾಚರ ಜಗತ್ತು. ಇದರಲ್ಲಿ ಹರಿನಾಮಕ ಪರಮಾತ್ಮ ತದಾಕಾರ, ಅಪೀಡಾಕಾರದಿಂದ ವ್ಯಾಪ್ತನಾಗಿದ್ದಾನೆ. ಈ ಪ್ರಕಾರ ವ್ಯಾಪಿಸಿರುವ ಹರಿಗೆ, ವಾಯುದೇವರಾದ ತಾವು, ತಮ್ಮ ಸತಿಯಾದ ಭಾರತಿದೇವೇರು, ಬ್ರಹ್ಮದೇವರು ಸರಸ್ವತೀದೇವೇರು– ಇವರುಗಳಿಂದ, ಈ ಮೂರು ಮಂದಿ ಸಂಗಾತ. ತಮ್ಮ ಸಹ ನಾಲ್ಕುಮಂದಿ, ಹರಿನಾಮಕಪರಮಾತ್ಮ ಪೂರ್ವೋಕ್ತ ಪ್ರಕಾರ ವಿರಾಟ್‌ರೂಪ ಧರಿಸಿದ ಮ್ಯಾರಿಗೆ, ತಾವೂನೂ ತತ್ಸದೃಶ ವಿರಾಟ್‌ರೂಪ ಧರಿಸಿ, ಇಂಥಾ ಮಹಿಮೋಪೇತರಾದ ಈ ವಾಯುದೇವರು ಮಧ್ವಾಚಾರ್ಯರಾಗಿ ಅವತಾರ ಮಾಡಿ, ಭರತಖಂಡದಲ್ಲಿ ಯತ್ಯಾಶ್ರಮ ಧರಿಸಿದವರಾಗಿ, ಸಮೀಚಿನವಾದ ಭಕ್ತಿಯಿಂದ, ಅನಾದ್ಯನಂತಕಾಲಕ್ಕೂ ಶಾಶ್ವತನಾದ, ಒಬ್ಬನಾದ, ಪರಾಧೀನನಲ್ಲದ, ಜ್ಞಾನವೇ ಸ್ವರೂಪನಾದ ಪರಮಾತ್ಮನ ರೂಪವೇನು, ಅವನ ಗುಣಗಳೇನು ಶಾಶ್ವತವಲ್ಲವೆಂತಲೂ, ಉತ್ಪತ್ತಿ ಮರಣಾದಿಗಳಿಂದ ಮುಕ್ತನೆಂತಲೂ ಹೇಳತಕ್ಕ ಪ್ರತ್ಯಕ್ಷಾನುಮಾನಗಳಿಗೆ ವಿರುದ್ಧವಾಗಿ ಹೇಳತಕ್ಕ ಮಾಯಾವಾದಿಶಾಸ್ತ್ರವನ್ನ ಖಂಡಿಸಿ, ಸತ್ಯವನ್ನು ವೇದಶ್ರುತಿಗಳಿಂದ ಸ್ಥಾಪನಾಮಾಡಿ, ಇಂಥಾ ಸತ್ಯವಾದ ಶಾಸ್ತ್ರಗಳಿಗೆ ಅಭಿಮಾನಿಗಳಾಗಿದ್ದಾರೆಂತ ತಾತ್ಪರ್ಯ.

**ಪ್ರಮಾಣ :** ನಶ್ವರವು.ಎಂದು ಹೇಳುವ ಎಂದರೆ,

**ಆನಂದಮಾತ್ರಂ ಅಜರಂ ಪುರಾಣಂ । ಆದಿತ್ಯವರ್ಣಂತಮಸಸ್ತುಪಾರೇ॥ ಏಕಂ ಸಂತಂ ಬಹುಧಾ ಕಲ್ಪಯಂತಿ । ನೈವೇತೇ ಜಾಯತೇ ನ ಮ್ರಿಯತೇ ಅಜರಾಅಮೃಅಶೋಕಾ॥**– ಇತ್ಯಾದ್ಯನೇಕ ಶ್ರುತಿಗಳಿಂದ ದೇವರ ಗುಣಗಳಿಗೆ ನಿಶ್ಯತ್ವ ಸಾಧಿಸತಾರೆ. ॥೨೦॥

## ೨. ಭಾವಪ್ರಕಾಶಿಕೆ

ವಾಯುದೇವರು ಪ್ರಪಂಚದಲ್ಲಿ ಸರ್ವತ್ರವಲ್ಲೂ ವ್ಯಾಪ್ತರಾಗಿ, ಪರಮಾತ್ಮನ ಸಾರೂಪ್ಯದಿಂದ ಬ್ರಹ್ಮದೇವರು, ಸರಸ್ವತೀದೇವಿಯರು, ಭಾರತೀದೇವಿಯರಿಂದ ವೇದಗಳಲ್ಲಿದ್ದು, ಅವಿಚ್ಛಿನ್ನವಾದ ಭಕ್ತಿಯಿಂದ ಪರಮಾತ್ಮನ ರೂಪಗಳು ಶಶ್ವದೇಕಪ್ರಕಾರವಾಗಿರುವುವೆಂದು ಹೊಗಳುತ್ತಿರುವರು. ಯದ್ಯಪಿ ವೇದಾತ್ಮಿಕರು ದುರ್ಗಾದೇವಿಯರಾದರೂ, ವೇದದಲ್ಲಿ ಪ್ರವಿಷ್ಟರಾಗಿ, ಪರಮಾತ್ಮನನ್ನು ಸ್ತುತಿಸುವರೆಂದರ್ಥ. ಅಥವಾ ಮಧ್ವಾಚಾರ್ಯರೂಪದಿಂದ ವೇದಾರ್ಥವನ್ನು ವಿಶದಪಡಿಸಿದರೆಂದರ್ಥ. ॥೨೮॥

## ೩. ಭಾವದರ್ಪಣ

ವಿಶ್ವವ್ಯಾಪಕ ॥೨೮॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ವಿಶ್ವ" ಇತಿ॥ ವ್ಯಾಪಕ ಪದಂ ವಿಷ್ಣು ನಾಮಾರ್ಥಂ॥ ಏವಂ ಚ ನಾಮದ್ವಯಮ್ ॥ ಸಹಸ್ರವಿಸೃತ ಬೃಹತೀ ತಥಾ ಹಿ ಋಕ್ಷ ಆದ್ಯೇಯುಋಕ್॥ ಓಂ ತದಿದಾಸ ಭುವನೇಷು ಜ್ಯೇಷ್ಠ ಘನದಂ ವ ಓದತೀನಾಮ್ ॥ ಯತೋಜಜ್ಞ ಉಗ್ರಸ್ತ್ವೇಷನ್ನಮ್ಣೋರು ನದಂ ಯೋ ಯುವತೀನಾಮ್॥ ಓಂ ಅತ್ರವಿಶ್ವೋವಾಯುರಿತಿ ಶ್ರುತೇಃ ನಾಮ್ಯೈಕದೇಶೇನ ವಿಶಂ ವಾಯುಂ ಅಭೀಷ್ಟದಾನೇನ ವಾತಿ ಗಂಧಯಾತಿ ಸಂಯೋಜಯತಿ ಇತಿ ವಿಶ್ವಃ ॥ ಓಂ ಸದ್ಯೋ ಜಜ್ಞಾನೋ ನಿಋಣಾತಿ ಶತ್ರೂನ್ ಪತಿಂ ಪೋಷ್ಯಾನಾಂ ಅನು ಯಂ ವಿಶ್ವೇಮದಂತ್ಯಮುಷ್ಣೋ ಧೇನೂನಾವಿಷುಧ್ಯಸೋಮ್॥ ಓಂ ವಿಶೇಷೇಣ ಪ್ರಾಣಚೇಷ್ಟಕತ್ವಾತ್ ಐಶ್ವರ್ಯ ಬಲಾದಿಯೋಗಾತ್ ತಥಾ ವ್ಯಾಪ್ತೇಃ ವಿಷ್ಣುಃ॥ "ಸಾದೃಶ್ಯಂ"–ಪ್ರತಿಬಿಂಬಂ "ಆಭಾಸಕೋಸ್ಯಪನನಃ"- ಇತ್ಯುಕ್ತೇಃ "ಇದ್ದು"- ಅಭಿಮಾನಿತ್ವೇನ. ॥೨೦॥

## ಕನ್ನಡಾರ್ಥ

ಈ ಪದ್ಯದಲ್ಲಿ ಇರುವ "ವ್ಯಾಪಕ"-ಪದವು, "ವಿಷ್ಣು"-ಎಂಬ ನಾಮದ ಅರ್ಥವನ್ನು ವಿವರಿಸುವುದು. ಅಂತೂ, ಇಲ್ಲಿ ಎರಡು ನಾಮಗಳು.

(೧) ವಿಶ್ವ—ವಾಯುವಿಗೆ ವಿಶ್ವವೆಂದು ಶ್ರುತಿಯಲ್ಲಿ ಹೇಳಲಾಗಿದೆ. ವಿಶ್ವನೆಂಬ ನಾಮದ ಏಕದೇಶ. "ವಿಶ್"- ಎಂಬ ಶಬ್ದಕ್ಕೂ-"ನಾಮೈಕದೇಶ ಗ್ರಹಣೇನ ನಾಮಗ್ರಹಣಂ"-ಈ ನ್ಯಾಯದಿಂದ ವಾಯವೆಂದು ಅರ್ಥ. 'ವಿಶ್' ವಾಯುವನ್ನು "ವಾತಿ"- ಅಭೀಷ್ಟವನ್ನು ಕೊಟ್ಟು, ಅದರೊಡನೆ ಸಂಯೋಜನ ಮಾಡುತ್ತಾನೆ. ಆದುದರಿಂದ, "ವಿಶ್ವ"-ವಾಯುಪ್ರೇರಕ, ವಾಯ್ವಾಭೀಷ್ಟ ಸಂಯೋಜಕ.

(೨) ವಿಷ್ಣು-(ವ್ಯಾಪಕ) ವಿಶೇಷವಾಗಿ ಪ್ರಾಣಿಗಳನ್ನು ಕ್ರಿಯೆಯಲ್ಲಿ ನಡೆಯಿಸುವವನು; ಅಧಿಕಐಶ್ವರ್ಯ- ಬಲಗಳುಳ್ಳವನು; ವ್ಯಾಪಕಸ್ವಭಾವ"- ಹೀಗೆ ಎರಡೂ ನಾಮಗಳ ಬೃಹತೀಮಂತ್ರಾನುಗುಣವಾದ ಅರ್ಥ॥ "ಸಾದೃಶ್ಯ"-ಎಂದರೆ, ಇಲ್ಲಿ ಸಾಮ್ಯವೆಂದು ಅರ್ಥವಲ್ಲ. "ಪ್ರತಿಬಿಂಬ"-ವೆಂದು ಅರ್ಥ. "ಆಭಾಸಕೋऽಸ್ಯ ಪವನಃ" - ಎಂಬ ನಿರ್ಣಯಶ್ಲೋಕದಲ್ಲಿ ಪರಮಾತ್ಮನಿಗೆ ವಾಯುವು ನಿಜ ಪ್ರತಿಬಿಂಬನು, ಸಾಕ್ಷಾತ್ ಪ್ರತಿಬಿಂಬನು, ಎಂದು ಹೇಳಲಾಗಿರುತ್ತದೆ.

"ಇದ್ದು"—ಅಭಿಮಾನಿರೂಪದಿಂದ ಇದ್ದು"-ಎಂದು ಅರ್ಥ. ॥೨೦॥

### ಆ. ಶ್ರೀಗುರುಹೃದಯಪ್ರಕಾಶಿಕೆ

ವಿಶ್ವವ್ಯಾಪಕನಾದ ಶ್ರೀಹರಿಗೆ ಸಾದೃಶ್ಯವೆಂಬ ಕಿಂಚಿತ್ಸಾದೃಶ್ಯ ಪ್ರತಿಬಿಂಬ ರೂಪವನ್ನು ಪವಮಾನನೆಂಬ ಪ್ರಾಣದೇವರು ಧರಿಸಿ, ತಾನು ಬ್ರಹ್ಮ, ಸರಸ್ವತೀ ಭಾರತಿಯರಿಂದ ಕೂಡಿ, ವೇದದಲ್ಲಿದ್ದು, ಶಾಶ್ವತಸುಭಕ್ತಿಯಿಂದ ಸುಜ್ಞಾನವೆಂಬ ಅಪ್ರಾಕೃತಜ್ಞಾನರೂಪನಾದ ಶ್ರೀಹಯರಿಯ ಅವತಾರ, ರೂಪ, ಆನಂದಾ

ರ್ಗುಣಗಳನ್ನು ಸಹ ಅನಶ್ವರ-ಅಂದರೆ, ಸದಾ ಏಕಪ್ರಕಾರ ಇರುವವೆಂದು ಹೊಗಳುವನು.

**ಪ್ರಮಾಣ— ಆನಂದಮಾತ್ರಮಜರಂ ಪುರಾಣಂ ಆದಿತ್ಯವರ್ಣ ತಮಸಸ್ತುಪಾರೇ||**

**ಏಕಂ ಸಂತಂ ಬಹುಧಾಕಲ್ಪಯಂತಿ |**

**ಸ್ವೈರ್ಸ್ವೈರ್ವೈ ಜಾಯಂತೇ ನಮ್ರಿಯಂತೆ ಅಜರಾ ಅವ್ಯಯಾ ಅಶೋಕಾಃ ||**

ಇತ್ಯಾದ್ಯನೇಕ ಶ್ರುತಿಗಳಿಂದ ದೇವಾರೂಪ ಗುಣಗಳಿಗೆ ನಿತ್ಯತ್ವವು ವೇದ ದಲ್ಲಿ ಸಾಧಿಸುತ್ತೆವೆಂತ ಪ್ರತಿಪಾದಿಸುತ್ತಾರೆ. ||೨೦||

## ಸರ್ವವ್ಯಾಖ್ಯಾನಸಾರ ಸಂಗ್ರಹ

### ೧. ವಿಶ್ವವ್ಯಾಪಕ

'ವಿಶ್ವ'- ಶಬ್ದವು ಪರಮಮುಖ್ಯವೃತ್ತಿಯಿಂದ "ವಿಷ್ಣು"ವನ್ನೇ ಪ್ರತಿಪಾದಿಸುವುದು. "ಪ್ರವಿಶ್"-"ವ್ಯಾಪ್ತೌ"-ಎಂಬ ಪರಿಪಾರದಿಂದ, ಪೂರ್ಣನೂ, ಸರ್ವತ್ರವ್ಯಾಪ್ತನೂ, ಆದ ವಿಷ್ಣುವಿಗೆ ವಿಶ್ವನೆಂದರ್ಥ. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಅಣುರೇಣುತೃಣ ಕಾಷ್ಠಗಳಲ್ಲಿ ಸರ್ವತ್ರ ಪರಿಪೂರ್ಣನಾಗಿ, ವ್ಯಾಪ್ತನಾಗಿರುವುದರಿಂದ, ವಿಶ್ವವ್ಯಾಪಕ ಎಂದು ಹೆಸರು.

ಶ್ರೀವಾಯುದೇವರಿಗೆ "ವಿಶ್ವ"- ಎಂದು ಶ್ರುತಿಯಲ್ಲಿ ಹೇಳಲಾಗಿದೆ. ವಿಶ್ವನೆಂಬ ನಾಮದ ಏಕದೇಶ—"ವಿಶ"ವೆಂಬ ಶಬ್ದಕ್ಕೂ, ನಾಮೈಕದೇಶ ಗ್ರಹಣೇನ ನಾಮಗ್ರಹಣಂ"-ಈ ನ್ಯಾಯದಿಂದಲೂ ವಾಯುವೆಂದರ್ಥವಾಗುವಾಗುವುದು. "ವಾತಿ"-ಅಭೀಷ್ಟವನ್ನೂ ಕೊಟ್ಟು, ಅದರೊಡನೆ ಸಂಯೋಜನ ಮಾಡುವುದರಿಂದ, ಶ್ರೀ ವಾಯುದೇವರಿಗೂ ಸಹ, "ವಿಶ್ವ"ನೆಂತನಾಮ

ಶ್ರೀವಿಷ್ಣುವು ವಾಯುಪ್ರೇರಕ ಮತ್ತು ವಾಯ್ವಾಭೀಷ್ಟಸಂಯೋಜಕ. ಹಾಗೆಯೇ, ಸರ್ವಜೀವರಿಗೂ ವಾಯುದೇವರು ಪ್ರೇರಕರೂ ಮತ್ತು ಅಭೀಷ್ಟ ಸಂಯೋಜಕರು ಆಗಿದ್ದಾರೆ.

## ೨. ಶಾ ಸಾದೃಶ್ಯರೂಪವ ಧರಿಸಿ

ಶ್ರೀವಾಯುದೇವರು ಶ್ರೀಮನ್ನಾರಾಯಣನಿಗೆ ಪ್ರಥಮಾಂಗಭೂತರು. ಮುಖ್ಯಪ್ರತೀಕರು. "ಸಾದೃಶ್ಯ"–ಎಂಬ ಶಬ್ದ ಪ್ರಯೋಗದಿಂದ—"ಸಾಮ್ಯ" ವೆಂಬ ಅರ್ಥವಲ್ಲ. ಮುಖ್ಯಪ್ರತಿಬಿಂಬರೇದರ್ಥ. ಅಭಾಸಕೋನಸ್ಯಪವನ"- ಎಂದು ನಿರ್ಣಯಶ್ಲೋಕವು ಶ್ರೀಹರಿಯು ವಿರಾಡ್ರೂಪಿಯು. ಅವನು ಸವಾವರಣಸಹಿತವಾದ, ಚರಾಚರಾತ್ಮಕವಾದ ಈ ವಿಶ್ವದಲ್ಲಿ ಅಖಂಡಾಕಾರ ದಿಂದ ಸರ್ವತ್ರ ವ್ಯಾಪಿಸಿದ್ದಾನೆ. ಶ್ರೀಹರಿಗೆ ಮುಖ್ಯಪ್ರತಿಬಿಂಬರಾದ ಮುಖ್ಯ ಪ್ರಾಣರೂ ಸಹ, ಅವನಂತೆಯೇ ವಿರಾಡ್ರೂಪಿಗಳು. ಅವನ ಪ್ರತಿಬಿಂಬರಾಗಿ, ವಿಶ್ವಾದ್ಯಾಂತ ವ್ಯಾಪಿಸಿದ್ದಾರೆ. ಇದರಿಂದ, "ವಿಶ್ವ".ಶಬ್ದವು ಶ್ರೀಹರಿಯಂತೆ, ವಾಯುದೇವರಿಗೂ ಅನ್ವಯಿಸುವುದು.

೩. ಪದವಿದೃಷ್ಟಿಯಿಂದ ತಮಗಿಂತ ಕಿಂಚಿತ್ ಅಧಿಕರಾದ ಶ್ರೀ ಬ್ರಹ್ಮ ದೇವರು, ಬ್ರಹ್ಮಪತ್ನಿ ಶ್ರೀಸರಸ್ವತೀ ಮತ್ತು ನಿಜಪತ್ನಿ ಶ್ರೀ ಭಾರತೀದೇವಿ-ಈ ಮೂರು ಮಂದಿಗಳ ಸಹಿತ ಪವಮಾನನಾಮಕರಾದ ಶ್ರೀವಾಯುದೇವರು ಸರ್ವತ್ರ ವಿಶ್ವಾದ್ಯಾಂತ ವ್ಯಾಪಿಸಿದ್ದಾರೆ. ಪರಮಪಾವನರೂ, ಅಖಿಳಾತ್ಮ ಸಮರೂ, ಶ್ರೀಹರಿಯ ಮುಖ್ಯಪ್ರತಿಬಿಂಬರೂ ಆಗಿರುವ, ಶ್ರೀವಾಯು ದೇವರಿಗೆ "**ಪವಮಾನ**".ಎಂದೇ ಹೆಸರು.

## ೪. ಶ್ರುತಿಗಳೊಳಗಿದ್ದು

ಶೃತಿ, ಉಪನಿಷತ್ತುಗಳ ಅರ್ಥಕ್ಕೆ ವಿರೋಧಬಾರದಂತೆ, ಶ್ರುತ್ಯರ್ಥ ಗಳ ಯಥಾರ್ಥ ಜ್ಞಾನಪ್ರದರು– ಶ್ರೀವಾಯುದೇವರು (ಶ್ರೀಮದಾನಂದ ತೀರ್ಥರು.)

ಶ್ರೀವೇದವ್ಯಾಸರ ಅಭಿಪ್ರಾಯಕ್ಕೆ ವಿರುದ್ಧಬಾರದಂತೆ, ಭಾಷ್ಯಾದಿಗಳನ್ನು ರಚಿಸಿದ ಮಹನೀಯರು ಮುನಿಮಧ್ವರು.

ಶ. ಎಂದೆಂದಿಗೂ ವಿಚ್ಛಿನ್ನರಾಗದ, ನಿರಂತರರೂಪದಲ್ಲಿರುವ ಪ್ರೇಮ ಪ್ರವಾಹವೇ **ಶಾಶ್ವತಾನುಭಕ್ತಿ.** ಎನಿಸುವುದು. ಭಕ್ತಿಯು ಮಹಾತ್ಮ್ಯ ಜ್ಞಾನಪೂರ್ವಕವಾಗಿರಬೇಕು. ಸಮೀಚೀನವಾದ ಜ್ಞಾನದಿಂದ ಯುಕ್ತವಾಗಿರ ಬೇಕು. ಶಾಶ್ವತ-ಅಂದರೆ ನಿಶ್ಚಲ, ಅಚಂಚಲರೂಪದಲ್ಲಿರಲ್ಲಿರಬೇಕು. ಅನಂತ ಶಾಶ್ವತ ಸುಭಕ್ತಿಯಲಿ, ಶ್ವಾಸಪತಿಗಳಾದ ಶ್ರೀವಾಯುದೇವರು, ಅನಂತ ಅವ ತಾರ, ರೂಪ, ಗುಣ, ಕ್ರೀಡಾವಿಶಿಷ್ಟನಾದ ಅಪ್ರಮೇಯನ ಗುಣಧರ್ಮಗಳು ಅಪ್ರಾಕೃತವೆಂದೂ, ದೇಶತಃ ಕಾಲತಃ ಗುಣತಃ ಪರಿಪೂರ್ಣನೂ ಆಗಿದ್ದಾ ನೆಂದೂ, ಶ್ರುತಿಗಳಲ್ಲಿ ಉಕ್ತವಾಗಿರುವ ವಾಕ್ಯಗಳನ್ನೇ ಪ್ರಮಾಣಪ್ರಮಿತವಾಗಿ ಶ್ರೀಮದಾನಂದತೀರ್ಥ ಭಗವತ್ಪಾದರಾಗಿ ಸಾರಿದ್ದಾರೆ.

ಆದರೆ, **ಶ್ರೀಸಂಕರ್ಷಣ ಒಡೆಯರ** ವ್ಯಾಖ್ಯಾನದ ಪ್ರಕಾರ–

ಶ್ರೀಹರಿಯ ಗುಣ – ರೂಪ – ಕ್ರಿಯಾದಿಗಳು ಶಾಶ್ವತವಲ್ಲವೆಂತಲೂ, (ನಶ್ವರ) ಆವನು ತನ್ನ ಅವತಾರರೂಪಗಳಲ್ಲಿ ಸಾಮಾನ್ಯ ಮಾನವರಂತೆ, ಜನನ ಮರಣಾದಿಗಳಿಂದ ಮುಕ್ತನೇತಲೂ, ಹೇಳುವ ವೇದಕ್ಕೆ ವಿರುದ್ಧವಾದ ಮಾಯಾವಾದಿಗಳ ವಾಕ್ಯಗಳನ್ನು ಖಂಡಿಸಿ, ಹರಿಯುವರನ್ನು ಸ್ಥಾಪಿಸಿರುವರು- ಆಚಾರ್ಯ ಮಧ್ವರೆಂದ್ದು ಹೇಳಿದ್ದಾರೆ.

ಎರಡೂ ಸಮ್ಮತವೇ. ವಿರೋಧವಿಲ್ಲ. ಒಂದರ್ಥದಲ್ಲಿ ಸ್ವಮತ ಸಂಸ್ಥಾಪನೆ, ಮತ್ತೊಂದರ್ಥದಲ್ಲಿ ಪರವಾದಿಗಳ ಮತಖಂಡನೆ–ಹೀಗಿದೆ ಶ್ರೀವಾಯುದೇವರ ವೈಭವ. ॥೨೦॥

## ಪದ್ಯ-೨೧

**ಮೂಲ :**

**ಖೇಟ ಕುಕ್ಕುಟ ಜಲಟವೆಂಬ ತ್ರಿ ।**
**ಕೋಟಿರೂಪವ ಧರಿಸಿ ಸತತ ನಿ ।**
**ಶಾಟರನ ಸಂಹರಿಸಿ ಸಲಹುವ ಸರ್ವಸಜ್ಜನರ ॥**
**ಕೈಟಭಾರಿಯುಪುರದ ಪ್ರಥಮಕ ।**
**ವಾಟವೆನಿಸುವ ಗರುಡ ಶೇಷ ಲ ।**
**ಲಾಟಲೋಚನ ಮುಖ್ಯಸುರರಿಗೆ ಅವಕಾಲದಲಿ ॥೨೧॥**

**ಅವತರಣಿಕೆ :**

ತ್ರಿಕೋಟಿರೂಪವನ್ನು ಧರಿಸಿ, ಸರ್ವಸಜ್ಜನರ ಪೋಷಕರಾದ ಶ್ರೀವಾಯು ದೇವರ ಮಹಾತ್ಮ್ಯವನ್ನು ಇಲ್ಲಿ ವಿವರಿಸುತ್ತಾರೆ. ॥೨೧॥

**ಪ್ರತಿಪದಾರ್ಥ :**

**ಖೇಟ**-ಆಕಾಶದಲ್ಲಿ ಸಂಚರಿಸತಕ್ಕ ಪಕ್ಷಿವರ್ಗ. (ಖಂ-ಆಕಾಶ,ಟ-ಸಂಚಾರ), **ಕುಕ್ಕುಟ**—ಭೂಮಿಯ ಮೇಲೆ ಸಂಚರಿಸುವ ಪಶು, ಮಾನುಷಾದಿ ರೂಪದ ಪ್ರಾಣಿವರ್ಗ, **ಜಲಟವು**—ಜಲಚರ ಜೀವರ ವರ್ಗ, **ಎಂಬ**—ಈ ರೀತಿಯಲ್ಲಿ ಮೂರು ಪ್ರಕಾರವಾದ ಜೀವರುಗಳಲ್ಲಿ, **ತ್ರಿಕೋಟಿರೂಪವ ಧರಿಸಿ**—ಮೂರು ಕೋಟಿರೂಪಗಳನ್ನು ಧರಿಸಿದವರಾಗಿ, **ಸತತ**-ನಿರಂತರದಲ್ಲಿ, **ನಿಶಾಚಟರನ**—ರಾತ್ರಿಸಂಚಾರಿಗಳಾದ ಅಸುರರನ್ನು, **ಸಂಹರಿಸಿ**—ಬ್ರಹ್ಮನ ಪ್ರತಿದಿನಕಲ್ಪದಲ್ಲೂ ಹನುಮ ಭೀಮಾದ್ಯವತಾರರೂಪಗಳಿಂದ ನಾಶಮಾಡಿ, **ಸರ್ವಸಜ್ಜನರ**—ಸಕಲಸುಜನರುಗಳನ್ನು (ಹರಿಭಕ್ತರನ್ನು), **ಸಲಹುವ**—ಸಂರಕ್ಷಿಸುವ, **ಕೈಟಭಾರಿಯು**—ಕೈಟಭನೆಂಬ ದೈತ್ಯನನ್ನು ಸಂಹರಿಸಿದ ಶ್ರೀಮನ್ನಾರಾಯಣನ, **ಪುರದ**—ವೈಕುಂಠಧಾಮಕ್ಕೆ, **ಪ್ರಥಮ ಕವಾಟವೆನಿಸುವ**—ಮುಖ್ಯದ್ವಾರವೆಂದು ಕರೆಯಿಸುವ, **ಗರುಡ**—ಶ್ರೀಗರುಡದೇವರು, **ಶೇಷ**—

**ಶ್ರೀಶೇಷದೇವರು, ಲಲಾಟಲೋಚನ**— ಫಾಲನೇತ್ರರಾದ ಶ್ರೀರುದ್ರ ದೇವರು, **ಮುಖ್ಯಸುರರಿಗೆ**— ಮೊದಲಾದ ದೇವತೆಗಳಿಗೆ, **ಆವಕಾಲದಲಿ**— ಸರ್ವಕಾಲಗಳಲ್ಲೂ ಸಂರಕ್ಷಕರಾಗಿದ್ದಾರೆ. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ಮಾಹಾತ್ಮ್ಯ ಹೇಳತಾರೆ.

ಆಕಾಶದಲ್ಲಿ ಸಂಚರಿಸತಕ್ಕ ಪಕ್ಷಿಗಳು ೧,೦೦,೦೦,೦೦೦. **ಕುಕ್ಕುಟ**— ಭೂಮಿಯಲ್ಲಿ ಸಂಚರಿಸತಕ್ಕ ಮಾನುಷ್ಯಾದಿ ರೂಪಗಳು ೧,೦೦,೦೦,೦೦೦. ಜಲ ಟವು-ಅಂದರೆ, ಜಲದಲ್ಲಿ ಸಂಚರಿಸತಕ್ಕ ಜಲಚರರೂಪಗಳು ೧,೦೦,೦೦,೦೦೦, ಅಂತು, ಮೂರುಕೋಟಿರೂಪಗಳ ಧರಿಸಿ ತ್ರಿವಿಕ್ರಮದೇವರ ಪೂಜಿಸಿದಂಥ ಮತ್ತು ತ್ರಿಕೋಟಿರೂಪದಿಂದ ಅಂಡದ ಹೊರಗಿದ್ದು, ಅಂಡಭಿರ್ಪರ ರಕ್ಷಿಸು ವಂಥಾ, ನಿರಂತರ ಹರಿಯಲ್ಲಿ, ಅವರ ಭಕ್ತರಲ್ಲಿ ದ್ವೇಷಮಾಡತಕ್ಕ, ನಿಶಿಸಂಚಾರಿ ಗಳಾದ ಅಸುರರನ್ನ, ಬ್ರಹ್ಮನ ಪ್ರತಿದಿನ ಕಲ್ಪದಲ್ಲೂ ಹನುಮಾದ್ಯವತಾರಗಳ ಮಾಡಿ ಸಂಹರಿಸಿ, ಈ ಅಸುರರು ಬ್ರಾಹ್ಮಣರಾಗಿ ಅವತಾರಮಾಡಿದಾಗ, ವಾಗ್ಬಾಣಗಳಿಂದ ಯುದ್ಧಮಾಡಿ, ಅವರನ್ನ ಪರಾಜಯಮಾಡಿ, ಸಚ್ಛಾಸ್ತ್ರ ಸ್ಥಾಪನ ಮಾಡಿ, ಸಮಸ್ತರಾದ ಸಜ್ಜನರನ್ನ ಸಂರಕ್ಷಣ ಮಾಡತಕ್ಕ- ಈ ವಾಯು ದೇವರು, ಕೈಟಭಾರಿ. ಎಂಬ ಪರಮಾತ್ಮನ ವೈಕುಂಠಪುರಕ್ಕೆ ಮುಖ್ಯವಾದ ಪ್ರಥಮ ಬಾಗಿಲು ಎಂತ ಕರಸತಾರೆ. ಇಂಥಾ ಪ್ರಥಮಕವಾಟಸಾಂಕೇತರಾದ ವಾಯುದೇವರ ಬಿಟ್ಟು ಇರತಕ್ಕವರಿಗೆ, ಭಗವದಪರೋಕ್ಷವೂ ವೈಕುಂಠಪ್ರವೇ ಶವೂ ಇಲ್ಲ. ಗರುಡದೇವರು, ಶೇಷದೇವರು, ರುದ್ರದೇವರು- ಇವರುಗಳೇ ಮೊದಲಾದ ದೇವತೆಗಳಿಗೆ ಸರ್ವಕಾಲದಲ್ಲಿ ಪ್ರಥಮಕವಾಟವೆಂದರೆ, ರುದ್ರಾದಿ ಗಳಿಗೆ ಭಾರತೀರಮಣಮುಖ್ಯಪ್ರಾಣಾಂತರ್ಗತ ಪರಮಾತ್ಮನ ಉಪಾಸನೆ, ತದಪರರಾದ ಇಂದ್ರಾದಿಗಳಿಗೆ ರುದ್ರಾದಿಗಳೆಂಬೋ ಕವಾಟ ಒಂದು, ವಾಯು

ಕವಾಟವೊಂದು. ತದವರರಾದವರಿಗೆ ಮೂರುಕವಾಟವಾದ ಗೋಳಕಗಳ ಚಿಂತನೆ. ಕೊನೆಗೆ, ಭಾರತೀರಮಣಮುಖ್ಯಪ್ರಾಣಗೋಳಕ ಚಿಂತಿಸಿ, ಈ ವಾಯು ಗೋಳಕಾಂತರ್ಗತ ಭಗವದುಪಾಸನವೇ ಯುಕ್ತ. ತದನ್ಯಚಿಂತನದಿಂದ, ಭಗವದಪರೋಕ್ಷ ಆಗೋದಿಲ್ಲ ಮತ್ತು ಅಧಿಕಾರಿದೇಹವೇ ಇದರಲ್ಲಿ ಪ್ರಥಮ ಕವಾಟ. ಈ ಪ್ರಕಾರ ಚಿಂತನೆ ಮಾಡಬೇಕು. ॥೨೦॥

## ೨. ಭಾವಪ್ರಕಾಶಿಕೆ

ವಾಯುದೇವರು ಮೂರುಕೋಟಿರೂಪಗಳನ್ನು ಧರಿಸಿ, ರಾಕ್ಷಸರನ್ನು ಕೊಂದು, ಸಜ್ಜನರನ್ನು ರಕ್ಷಿಸುವರು. "ಮಹಾಬಲೋಹಂ ಕಪಿಲಾಖ್ಯ ರೂಪಸ್ತ್ರೀ ಕೋಟಿರೂಪಃ ಪವನಶ್ಚ ಮೇ ಸುತಂ"-ಎಂಬ ನಿರ್ಣಯದ ಲನೆಯ ಅಧ್ಯಾಯದಲ್ಲಿ, ರಾಮದೇವರು ಹೇಳಿದ ವಾಕ್ಯದಿಂದ, ವಾಯುದೇವರು ಮೂರು ಕೋಟಿರೂಪಉಳ್ಳವರೆಂದು ಸಿದ್ಧವಾಗುವುದು. ಆ ರೂಪಗಳಲ್ಲಿ ಕೆಲವು ಅಂತರಿಕ್ಷದಲ್ಲಿ ಸಂಚರಿಸುವ ರೂಪಗಳು. ಈ ರೂಪಗಳಿಂದ ದುಷ್ಟನಿಗ್ರಹ ಮಾಡಿ, ಸಜ್ಜನರನ್ನು ಪಾಲಿಸುವರು. ಗರುಡ, ಶೇಷ, ರುದ್ರಾದಿ- ದೇವತೆಗಳಲ್ಲಿ, ವಾಯುದೇವರು ಪರಮಾತ್ಮನ ಪಟ್ಟಣವಾದ ಬಾಗಿಲಿನಲ್ಲಿ, ಮೊದಲನೆಯ ದ್ವಾರಪಾಲಕನಂತೆ ಇರುವರು. ಅಂದರೆ, ಇವರ ಮೂಲಕ ಉಪಾಸನೆಯನ್ನು ಮಾಡಿ, ಪರಮಾತ್ಮನನ್ನು ಹೊಂದಬೇಕೆಂದು ತಾತ್ಪರ್ಯ: ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ಪರಮಾತ್ಮನನ್ನು ಭಜಿಸಬೇಕಲ್ಲದೆ, ಸಾಕ್ಷಾತ್ತಾಗಿ ಪರಮಾತ್ಮನನ್ನು ಭಜಿಸಲು ಅಧಿಕಾರವಿಲ್ಲವೆಂದರ್ಥ. ॥೨೦॥

## ೩. ಭಾವದರ್ಪಣ

ಪೇಟ। ತದುಕ್ತಂ ಸತ್ತತ್ವರತ್ನಮಾಲಾಯಾಂ। "ಅನಂತಾನ್ಯಸ್ಯ ರೂಪಾಣಿ ತ್ರಿಕೋಟ್ಯಸ್ತು ವಿಶೇಷತಃ"- ಇತಿ. ॥೨೦॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ಪೇಟ" ಇತಿ ॥ ತತ್ತ್ವದಂತರ್ಗತ-ತದ್ರೂಪಲಕ್ಷಣಂ ಮಧ್ವಮಂತ್ರಾರ್ಥ

ಮಂಜರ್ಯಾಮುಕ್ತಮ್ ॥ "ತ್ರಿಕೋಟಿರೂಪಃ ಪವನಶ್ಚ"- ಇತಿ ಪ್ರತಿಜ್ಞಾಯ "ನೀಲಾಂಜನನಿಭಾಃ ಸರ್ವೇ ಸರ್ವೇ ಚಾರುಚತುರ್ಭುಜಾಃ ॥ ಶಂಖಚಕ್ರಗದಾ ಪದ್ಮಾಲಂಕಾರಪರಿಭೂಷಿತಾಃ ॥ ಪೀತವಾಸಸಃ ಇತ್ಯತ್ರ ರುಗ್ಮೈರಾಯುಧೈಃ"- -ಇತಿ ಶ್ರುತಿಃ ಪ್ರಮಾಣೀಕೃತಾ ॥ "ಕವಾಟಂ"-ದ್ವಾರಂ ॥೨೧॥

## ಕನ್ನಡಾರ್ಥ

ಖೇಟ, ಕುಕ್ಕುಟ, ಜಲಟವೆಂಬ-ಪ್ರಾಣಗಳ ಅಂತರ್ಯಾಮಿ-ತದ್ರೂಪವಾದ ರೂಪಗಳು ಎಂದು ಅರ್ಥ. ಮಧ್ವಮಂತ್ರಾರ್ಥಮಂಜರೀನಾಮಕ ಗ್ರಂಥದಲ್ಲಿ, ಪವನನಿಗೆ ಮೂರುಕೋಟಿ ರೂಪಗಳಿರುವುವು- ಎಂದು ಹೇಳಿ- "ನೀಲ ಅಂಜನ (ಕಾಡಿಗೆ)ದಂತೆ ಎಲ್ಲ ರೂಪಗಳು. ಎಲ್ಲ ರೂಪಗಳಲ್ಲಿಯೂ ನಾಲ್ಕು ಬಾಹುಗಳು. ಚಕ್ರ ಶಂಖ ಗದಾ ಪದ್ಮ-ಆಯುಧ ಚಿಹ್ನೆಗಳಿಂದ ಅಲಂಕರಿಸಲ್ಪಟ್ಟವುಗಳು. ಪೀತಾಂಬರ ವಿಭೂಷಿತವಾದವುಗಳು. ಈ ಸಂದರ್ಭದಲ್ಲಿಯೇ, ಬಂಗಾರದ ಆಯುಧಗಳಿಂದ ಯುಕ್ತವಾದವುಗಳು- ಎಂಬುದಾಗಿ ಹೇಳುತ್ತಾರೆ. ಅದರಲ್ಲಿ ಶ್ರುತಿಯನ್ನೂ ಪ್ರಮಾಣವೆಂದು ತೋರಿಸಲಾಗಿದೆ. 'ಕವಾಟ'-ದ್ವಾರ. ॥೨೧॥

### ಆ. ಶ್ರೀಗುರುಹೃದಯ ಪ್ರಕಾಶಿಕೆ

ಖೇಟವೆಂಬ ಅಂತರಿಕ್ಷದಲ್ಲಿ ಸಂಚರಿಸುವಂಥಾವುಗಳು, ಕುಕ್ಕುಟವೆಂಬ ಭೂಸಂಚಾರಿ, ಜಲಟವೆಂಬ ಜಲಸಂಚಾರಿ-ಹೀಗೆ, ಮೂರುವಿಧವಾದ ಮೂರು ಕೋಟಿರೂಪಗಳನ್ನು ಧರಿಸಿ, ಸದಾ ನಿಶಾಟರೆಂಬ ರಾತ್ರಿಂಚರ ರಾಕ್ಷಸರನ್ನು ಸಂಹರಿಸಿ, ಸರ್ವಸಜ್ಜನರನ್ನು ಸಲಹುವವನು. ಕೈಟಭನೆಂಬ ರಾಕ್ಷಸರಿಗೆ ಶತ್ರುವಾದ ದೇವರ ವೈಕುಂಠನಗರಿಗೆ ಪ್ರಥಮರತ್ನಕವಾಟವೆಂಬ ಬಾಗಲಿನಂತೆ ಗರುಡ. ಶೇಷ, ರುದ್ರ. ಮೊದಲಾದ ದೇವತೆಗಳಿಗೆ ಈಶರನ್ನು ಹೊಂದುವುದಕ್ಕೆ ಸದಾ ಆಶ್ರಯನಾಗಿರುವನು.

**ಪ್ರಮಾಣ–** **ತ್ರಿಕೋಟಿರೂಪಃ ಪವನಶ್ಚವೋ ಸುತಃ ।** ಎಂಬ ನಿರ್ಣಯ, **ಸ ಏನಾ ಬ್ರಹ್ಮಗುಂಯುತಿ**- ಇತ್ಯಾದಿ ಶ್ರುತ್ಯರ್ಥ ಸಹ ವಿವರಿಸಿದೆ. ॥೨೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀವಾಯುದೇವರು ಮೂರುಕೋಟಿರೂಪಗಳನ್ನು ಧರಿಸಿರುವರು- (ತ್ರಿಕೋಟಿ ರೂಪವ). ಅವು ಕ್ರಮವಾಗಿ, **ಖೇಟ**– ಆಕಾಶದಲ್ಲಿ ಸಂಚರಿಸುವ ಪಕ್ಷಿವರ್ಗ. ಖಂ–ಎಂದರೆ, ಆಕಾಶ. ಟ–ಎಂದರೆ, ಸಂಚಾರ (ಅಟನ)– ಒಂದುಕೋಟಿ ರೂಪಗಳು.

**ಕುಕ್ಕುಟ**–ಭೂಮಿಯ ಮೇಲೆ ಸಂಚರಿಸುವ ಪಶು, ಮಾನವಾದಿ ರೂಪಗಳು–ಒಂದುಕೋಟಿ. (ಕು–ಎಂದರೆ ಭೂಮಿ).

**ಜಲಟ**–ನೀರಿನಲ್ಲಿ ಸಂಚರಿಸುವ ಮೀನು, ಮೊಸಳೆ- ಇತ್ಯಾದಿ ಜಲಚರ ಪ್ರಾಣಿಗಳು – ಒಂದುಕೋಟಿ ರೂಪಗಳು.

ಮೂರು ವರ್ಗಗಳಿಂದ ಮೂರುಕೋಟಿರೂಪಗಳಾಯಿತು. ಈ ರೂಪಗಳೆಲ್ಲವೂ ನೀಲಿ ದಂತರೂಪಗಳು. ಎಲ್ಲಾ ರೂಪಗಳಲ್ಲಿಯೂ ಚತುರ್ಬಾಹುಗಳು. ಚಕ್ರ ಶಂಖ ಗದಾ ಪದ್ಮವೆಂಬ ನಾಲ್ಕು ವೈಷ್ಣವಾಯುಧಗಳು. ಪೀತಾಂಬರ ವಿಭೂಷಿತ ರೂಪಗಳು. ಆಯುಧಗಳೆಲ್ಲವೂ ಸುವರ್ಣಾತ್ಮಕ–ಈ ರೀತಿ **ಮಧ್ವಮಂತ್ರಾರ್ಥಮಂಜರೀ**– ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

**ಪ್ರಮಾಣ:–**

"ತ್ರಿಕೋಟಿರೂಪಃ ಪವನಸ್ಥ"
"ನೀಲಾಂಜನ ನಿಭಾಃ ಸರ್ವೇ ಸರ್ವೇ ಚಾರು ಚತುರ್ಭುಜಾಃ ।
ಶಂಖ ಚಕ್ರ ಗದಾ ಪದ್ಮಾಲಂಕಾರ ಪರಿಭೂಷಿತಾಃ ।
ಪೀತವಾಸಸಃ ಇತ್ಯತ್ರ ರುಗ್ಮೈರಾಯುಧೈಃ" ॥

**೨. ನಿಶಾಚರನ–**

ರಾತ್ರಿಯಲ್ಲಿ ಸಂಚರಿಸುವ ದೈತ್ಯರನ್ನು "ನಿಶಾಚರರು" – ಎಂದಿದ್ದಾರೆ. ರಾತ್ರಿಯಲ್ಲಿ ದೈತ್ಯರ ಬಲವು ಜಾಸ್ತಿ. ಅಂತಹ ನಿಶಾಚರರನ್ನು ಸತತವೂ ಸಂಹಾರಮಾಡುತ್ತಾ, ಅವರಿಂದ ಉಂಟಾಗುವ ಪೀಡೆಯನ್ನು ಪರಿಹರಿಸಿ, ಸಕಲ ವಿಷ್ಣುಭಕ್ತರಾದ ಸುಜನರನ್ನು ಸಂರಕ್ಷಿಸುವರು.

**೩. ಕೈಟಭಾರಿಯಪುರದ–**

ಮಧು ಮತ್ತು ಕೈಟಭರೆಂಬ ಇಬ್ಬರು ಶೂರರಾದ ದೈತ್ಯರು ಕ್ಷೀರ ಸಮುದ್ರಶಯನನಾದ ಶ್ರೀವಿಷ್ಣುವಿನ ಕಿವಿಯ ಮಲದಿಂದ ಉತ್ಪತ್ತಿಯಾದರು. ಜನಿಸುತ್ತಲೇ, ನಾಭೀಕಮಲಸಂಜಾತರಾದ ಬ್ರಹ್ಮನೊಡನೆ ಕಾಳಗಕ್ಕೆ ನಿಂತರು. ಆಗ ಶ್ರೀಮನ್ನಾರಾಯಣನು ಬ್ರಹ್ಮನನ್ನು ರಕ್ಷಿಸಲು, ಅವರಿಬ್ಬರನ್ನೂ ಅಪ್ಪಳಿಸಿ ಕೊಂದನು. ಕೈಟಭಾಸುರನ ಸಂಹಾರಿ ಶ್ರೀಮನ್ನಾರಾಯಣನು. ಅಂತಹ ಕೈಟಭಾರಿಯ ಪುರವು-ವೈಕುಂಠವೆಂಬ ಮುಕ್ತಿಧಾಮವು.

**೪. ಪ್ರಥಮ ಕವಾಟವೆನಿಸುವ–**

ಕೈಟಭಾರಿಯ ಪುರವಾದ ವೈಕುಂಠದ ಪ್ರಥಮ ಬಾಗಿಲ (ಕವಾಟ)ನ್ನು ದ್ವಾರಪಾಲಕರಾಗಿ ಕಾಯುತ್ತಿರುವವರು ಗರುಡ–ಶೇಷ–ರುದ್ರರು.

ಇಲ್ಲಿ, ಶ್ರೀರುದ್ರದೇವರನ್ನು **ಲಲಾಟಲೋಚನ**–ಎಂದಿದ್ದಾರೆ. ಲಲಾಟ –ಎಂದರೆ, **ಹಣೆ.** ಲೋಚನ-ಎಂದರೆ, ಕಣ್ಣು. ಫಾಲನೇತ್ರರಾದ ಶ್ರೀರುದ್ರ ದೇವರು ಲಲಾಟಲೋಚನರು.

**೫.** ಗರುಡ, ಶೇಷ, ರುದ್ರ- ಮೊದಲಾದ ಸಕಲದೇವತಾವರ್ಗಕ್ಕೆ ಶ್ರೀವಾಯುದೇವರು ಸದಾ ನಿಯಾಮಕರು ಮತ್ತು ಸಂರಕ್ಷಕರು.

ಇಲ್ಲಿ ಮುಕ್ತಿಧಾಮವಾದ ವೈಕುಂಠಪುರಪ್ರವೇಶಕ್ಕೆ ಶೇಷ (ಭಾವೀರುದ್ರ) ಮತ್ತು ಗರುಡರು-ಪ್ರಥಮ ಕವಾಟದ ದ್ವಾರಪಾಲಕರು.

ಅಂದರೆ, (೧) ಗರುಡಮಾರ್ಗ ಮತ್ತು (೨) ಶೇಷಮಾರ್ಗ–ಎಂದು

ಮುಕ್ತಿ ಪಥವು ಎರಡು ಪ್ರಕಾರ-ಈ ಪ್ರಮೇಯವನ್ನು ಇಲ್ಲಿ ವಿವೇಚಿಸಿದ್ದಾರೆ-ದಾಸರಾಯರು. ॥೩೨॥

## ಪದ್ಯ-೩೩

**ಮೂಲ :**

**ಈ ಋಜುಗಳೊಳಗೊಬ್ಬ ಸಾಧನ ।**
**ನೂರು ಕಲ್ಪದಿ ಮಾಡಿ ಕರೆಸುವ ।**
**ಚಾರುತರ ಮಂಗಳಸುನಾಮದಿ ಕಲ್ಪಕಲ್ಪದಲಿ ॥**
**ಸೂರಿಗಳು ಸಂತುತಿಸಿ ವಂದಿಸೆ ।**
**ಘೋರ ದುರಿತಗಳೆಳಿದು ಪೋಪುವು ।**
**ಮಾರಮಣ ಸಂಪ್ರೀತನಾಗುವ ಸರ್ವಕಾಲದಲಿ ॥೩೩॥**

**ಅವತರಣಿಕೆ :**

ಋಜುಗಳ ನಾಮಸ್ಮರಣೆಯಿಂದ ಮಾರಮಣನು ಸಂಪ್ರೀತನಾಗುವನೆಂದು ತಿಳಿಸುತ್ತಾರೆ. ॥೩೩॥

**ಪ್ರತಿಪದಾರ್ಥ :**

**ಈ ಋಜುಗಳೊಳಗೆ**—ಪೂರ್ವೋಕ್ತ ೨೦೦ ಮಂದಿ ಋಜುಗಳಲ್ಲಿ, **ಒಬ್ಬ**—ಅಸೃಜ್ಯರಾಶಿಯಿಂದ ಶ್ರೀಪರಮಾತ್ಮನಿಂದ ಸೃಷ್ಟಿಗೆ ತಂದ, ಒಬ್ಬನಾದ ಋಜುವು, **ಸಾಧನ**—ಸೃಷ್ಟಿಗೆ ತಂದಾರಭ್ಯ ಸಾಧನಾರಂಭಿಸಿ, **ನೂರು ಕಲ್ಪದಿ**— ನೂರು ಬ್ರಹ್ಮಕಲ್ಪಗಳಲ್ಲಿ, **ಮಾಡಿ**—ಸಾಧನೆಯನ್ನು ಮಾಡಿದವನಾಗಿ, **ಕಲ್ಪ ಕಲ್ಪದಲಿ**— ಪ್ರತಿಬ್ರಹ್ಮಕಲ್ಪದಲ್ಲಿ ಒಂದೊಂದು ಕಲ್ಪಕ್ಕೆ, **ಚಾರುತರ**—ಮನೋಹರವಾದ, **ಮಂಗಳ ಸುನಾಮದಿ**—ಶುಭಕರವಾದ

ಸಮೀಚೀನವಾದ ನಾಮದಿಂದ. (ಆಯಾಯ ಪದವಿಗೆ ತಕ್ಕ ಋಜುನಾಮ) **ಕರೆಸುವ**–ಒಬ್ಬನೇ ಋಜು ನೂರುಕಲ್ಪಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಆ ಋಜುಪದವಿಯ ಹೆಸರಿನಿಂದ ಕರೆಯಿಸುವನು. **ಸೂರಿಗಳು**—ಸುಜ್ಞಾನಿಗಳು, **ಸಂತುತಿಸಿ**—ಆ ನೂರು ನಾಮಗಳನ್ನು ಧ್ಯಾನಪೂರ್ವಕವಾಗಿ ಸ್ತೋತ್ರಮಾಡುತ್ತಾ, **ವಂದಿಸೆ**—ನಮಸ್ಕರಿಸಲಾಗಿ, **ಘೋರ ದುರಿತಗಳು**–ಭಯಂಕರವಾದ ಪಾಪಗಳು, **ಅಳಿದು ಪೋಪುವು**–ಪೂರ್ಣವಾಗಿ ನಾಶ ಹೊಂದವುವು. **ಪಾರಮಣ**– ಲಕ್ಷ್ಮೀರಮಣನಾದ ಶ್ರೀಪರಮಾತ್ಮನು **ಸರ್ವಕಾಲದಲಿ**–ಋಜುವಿನ ನೂರು ನಾಮಗಳನ್ನು ಸಂಸ್ಮರಿಸುವ ಸರ್ವಕಾಲಗಳಲ್ಲಿ, **ಸಂಪ್ರೀತನಾಗುವ**–ಪ್ರೀತನಾಗುವನು. ॥೨೨॥.

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರವ್ಯಾಖ್ಯಾನ

ಋಜುಗಳ ನಾಮಸ್ಮರಣ ಮಾಡಬೇಕಂತ ಹೇಳುತ್ತಾರೆ.

ಇನ್ನೂರು ಮಂದಿ ಋಜುಗಳೊಳಗೆ, ಅಸ್ಪೃಶ್ಯರಾಶಿಯಿಂದ ಅದೇ ಬ್ರಹ್ಮಕಲ್ಪದಲ್ಲಿ ಸೃಷ್ಟಿಗೆ ತಂದ ಒಬ್ಬನಾದ ಋಜು, ಸೃಷ್ಟಿಗೆ ಬಂದಾರಭ್ಯ ಸಾಧನಕ್ಕೆ ಆರಂಭಿಸಿ, ನೂರುಬ್ರಹ್ಮಕಲ್ಪ ತನಗೆ ಯೋಗ್ಯವಾದ ಸಾಧನೆಯುಮಾಡಿದವನಾಗಿ, ಸಾಧನಮಾಡಿದ ನೂರುಬ್ರಹ್ಮಕಲ್ಪದೊಳಗೆ, ಪ್ರತಿ ಪ್ರತೀ ಬ್ರಹ್ಮಕಲ್ಪದಲ್ಲೂ, ಒಂದೊಂದು ಬ್ರಹ್ಮಕಲ್ಪಕ್ಕೆ, ಮನೋಹರಕರವಾದ ಮಂಗಳಕರವಾದ ಸಮೀಚೀನವಾದ ನಾಮದಿಂದ, ಒಬ್ಬ ಋಜುವೇ ನೂರುಬ್ರಹ್ಮಕಲ್ಪಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ನೂರುನಾಮದಿಂದ ಕರಸುವನು. ಒಬ್ಬ ಋಜುವಿಗೆ ಒಂದು ಬ್ರಹ್ಮಕಲ್ಪವೆಂಬುದು ಒಂದು ಜನ್ಮಸಾಂಕೇತವು. ಜ್ಞಾನಿಗಳು ಈ ನೂರು ನಾಮವ ಉಚ್ಚಾರಮಾಡುತಾ, ಋಜುಗಳ ಮಾಹಾತ್ಮ್ಯವನ್ನ ಚಂದಾಗಿ ಸ್ತೋತ್ರಮಾಡಿ, ವಂದನ ಮಾಡಿದರೆ, ಪ್ರಾಯಶ್ಚಿತ್ತಕ್ಕೆ ಪರಿಹಾರವಲ್ಲದ ಘೋರವಾದ ಪಾಪಗಳು ನಾಶವಾಗಿ ಹೋಗೋವಾಗತವೆ. ಲಕ್ಷ್ಮೀಪತಿಯಾದ

ಶ್ರೀಪರಮಾತ್ಮ ಈ ಋಜುಗಳ ಸ್ತೋತ್ರದಿಂದ ಚೆದಾಗಿ ಪ್ರೀತನಾಗುವ. ಆದ್ದರಿಂದ, ಸರ್ವದಾ ಋಜುಗಳನ್ನ ಭಜಿಸಬೇಕು. ॥೨೨॥

## ೨. ಭಾವಪ್ರಕಾಶಿಕೆ

ಋಜುಗಳ ಮಧ್ಯದಲ್ಲಿ, ೧೦೦ ಕಲ್ಪಗಳು ಸಾಧನಮಾಡಿ, ಸುರೂಪವನ್ನೂ ಸುನಾಮವನ್ನೂ ಪಡೆದವರು ವಾಯುದೇವರು ಒಬ್ಬರೇ. ಹೀಗೆ, ಪ್ರತಿ ಕಲ್ಪದಲ್ಲೂ ಒಬ್ಬ ಬ್ರಹ್ಮದೇವರು ಮುಕ್ತರಾದ ಕೂಡಲೇ, ಈಗಿನ ವಾಯುದೇವರು ಆ ಪದವಿಗೆ ಬರುವರು. ಋಜುಗಣದಲ್ಲಿ ೯೯ ಕಲ್ಪಸಾಧನವಾದವರೊಬ್ಬರು ವಾಯುದೇವರ ಪದವಿಗೆ ಬರುವರು. ಇವರನ್ನು ಸ್ತುತಿಸಿ, ವಂದಿಸುವ ಜನರಿಗೆ ಪಾಪಗಳೆಲ್ಲವೂ ಪರಿಹಾರವಾಗುವವು. ಪರಮಾತ್ಮನು ಪ್ರಸನ್ನನಾಗುವನು. ॥೨೨॥

## ೩. ಭಾವದರ್ಪಣ

ಈ ಋಜುಗಳು ॥೨೨॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಪ್ರಶಂಸಾಯಾಃ ಕ್ಷಿಪ್ರಪ್ರವರ್ತಕತ್ವಾತ್ ವಾಮನೋಕ್ತನಾಮಾನಿ ವಕ್ತುಂ ಪ್ರಶಸ್ಯ ವಿಧತ್ತೇ—"ಈ" ಇತಿ ॥ "ಅಳಿದು"-ನಷ್ಟೋ ಭೂತ್ವಾ. ॥೨೨॥

## ಕನ್ನಡಾರ್ಥ

ಪ್ರಶಂಸೆಯು ಶೀಘ್ರವಾಗಿ ಪ್ರವೃತ್ತಿಯನ್ನು ಹುಟ್ಟಿಸುತ್ತದೆ. ಆದುದರಿಂದ ವಾಮನಪುರಾಣದಲ್ಲಿ ಹೇಳಲ್ಪಟ್ಟಿರುವ ನಾಮಗಳನ್ನು ಹೇಳಲು ಪ್ರಶಂಸೆಯನ್ನು ಮಾಡಿ ವಿಧಿಸುತ್ತಾರೆ- ಈ ಪದ್ಯದಿಂದ. "ಅಳಿದು"-ನಷ್ಟವಾಗಿ ॥೨೨॥

**ಟೀ. ಶ್ರೀಗುರುಹೃದಯ ಪ್ರಕಾಶಿಕೆ**

ಈ ಋಜುಗಳಿಂದು, ಈ ವಾಯುಪದಕ್ಕೆ ಬರತಕ್ಕ ಋಜುಗಳಲ್ಲಿ ಪತಿ. ಯೊಬ್ಬರೂ ನೂರು ಬ್ರಹ್ಮಕಲ್ಪ ಸಾಧನಮಾಡಿ, ಬ್ರಹ್ಮಪದ ಹೊಂದುವರು ಚಾರುತರವೆಂಬ ಸುಮನೋಹರವಾದ ಹೆಸರುಗಳಿಂದ ಕರೆಸುವ ಋಜುಗಳನ್ನು, ಮುಂದೆ ಹೇಳುವ ನಾಮಾವಳಿಗಳಿಂದ ಜ್ಞಾನಿಗಳು ಸಂಸ್ತುತಿಮಾಡಿ, ವಂದಿಸಲು, ಘೋರದುರಿತವೆಂಬ ಪಾಪ ವಿಪತ್ತುಗಳು ಅಳಿದು ಹೋಪವು. ಎಂದರೆ, ನಷ್ಟವಾಗಿ ಹೋಗುವುವು. ರಮಾಪತಿಯಾದ ದೇವರು ಸದಾ ಪ್ರಿತನಾಗುವನು. ಅಳಿ- ಎಂಬ ಕನ್ನಡ ಧಾತು- ಅಳಿಸು- ಎಂಬಲ್ಲಿ ಕೆಡಿಸು, ಅಂತಲೂ, ದುಃಖಪಡಿಸು— ಎಂತಲೂ ಬಹ್ವರ್ಥ ಕೊಡುವುದು. ॥೨೨॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಅಸ್ಪೃಜ್ಯರಾಶಿಯಿಂದ ಜಗತ್ಸೃಷ್ಟಿಕರ್ತನಾದ ಜಗನ್ನಾಥನು ೨೦೦ ಮಂದಿ ಋಜುಗಳನ್ನು ಸೃಷ್ಟಿಗೆ ತರುವನು. ಆ ೨೦೦ ಮಂದಿಯಲ್ಲಿ, ಒಬ್ಬನಾದ ಋಜುವು (ಮೊದಲನೆಯವನು- ಎಂದು ಇಟ್ಟುಕೊಳ್ಳೋಣ) ಸಾಧನವನ್ನು ಆರಂಭಿಸುವನು. ಹಾಗೆ ಸಾಧನಮಾಡುತ್ತಾ, ನೂರು ಬ್ರಹ್ಮಕಲ್ಪಗಳಲ್ಲಿ ಸಾಧನೆ ಪೂರೈಸಿ, ಕಲ್ಕಿ-ಎಂಬ ಅಭಿಧಾನದಿಂದ ವಿಖ್ಯಾತನಾಗುವನು.

೨. 'ಕಲ್ಕಿ'-ಎಂಬುದು— ೧೦೦ ಕಲ್ಪಗಳ ಸಾಧನಾನಂತರ, ಋಜುವು ಬರುವ ಪದವಿಯು. ಅದು ಸ್ಥಾನನಾಮಸಾಂಕೇತವು. ಕಲ್ಕಿಪದವಿಗೆ ಬಂದಾರಭ್ಯ, ಕ್ರಮಕ್ರಮವಾಗಿ ಆ ಋಜುವೇ ಸಾಧನೆಮಾಡುತ್ತಾ, ಪ್ರತಿಕಲ್ಪದಲ್ಲಿ ಮನೋಹರವಾದ (ಚಾವರ) ಶುಭನಾಮದಿಂದ (ಆಯಾಯ ಋಜುಪದವಿಯಿಂದ) ಕರೆಯಿಸುವನು.

೩. ಆ ಋಜುವು ೯೮ನೆಯ ಬ್ರಹ್ಮಕಲ್ಪದಲ್ಲಿ, **ಲಾತವ್ಯ**ನೆನಿಸುವನು. ೯೯ನೆಯ ಬ್ರಹ್ಮಕಲ್ಪದಲ್ಲಿ **ಶ್ರೀವಾಯುಪದವಿಗೆ** ಬರುವನು. ೧೦೦ನೆಯ

ಕಲ್ಪದಲ್ಲಿ (ಕೊನೆಯ ಕಲ್ಪ) ಬ್ರಹ್ಮನೆಂದೆನಿಸುವನು. ಒಬ್ಬನೇ ಋಜುವಿಗೆ ಪ್ರಥಮದಿಂದಾರಂಭಿಸಿ, ಹೀಗೆ ಪ್ರತಿಕಲ್ಪದಲ್ಲಿಯೂ ಋಜುಗಣಪದವಿಯನ್ನು ಹೊಂದಿ, ಅಂತ್ಯದಲ್ಲಿ ಚತುರ್ಮುಖಬ್ರಹ್ಮನಾಗಿ, ಶ್ರೀಪರಮಾತ್ಮನ ನಾಭೀ ಕಮಲಸಂಜಾತನಾಗುವನು.

೪. ನೂರುಮಂದಿ ಋಜುಗಳ ಹೆಸರುಗಳನ್ನು ಮುಂದಿನ ಪದ್ಯಗಳಲ್ಲಿ ದಾಸರಾಯರು ನಿರೂಪಿಸುತ್ತಾರೆ. ಸುಜ್ಞಾನಿಗಳು (ಸೂರಿಗಳು) ಈ ೧೦೦ ಸಂಖ್ಯಾಕವಾದ ಋಜುಸ್ಥಾನಸಾಂಕೇತವಾದ ಮಂಗಳನಾಮಗಳನ್ನು ಭಕ್ತಿ ಪೂರ್ವಕ ಸಂಸ್ತುತಿಸುತ್ತಾ, ಪ್ರಣಾಮಗೈಯ್ಯಲು, ಪ್ರಾಯಶ್ಚಿತ್ತವಿಲ್ಲದ ಭಯಂ ಕರವಾದ ಪಾಪರಾಶಿಗಳು ಬೇರುಸಹಿತ ನಾಶವಾಗಿಹೋಗುವುವು. ಹೀಗೆ, ಋಜುಗಳ ನಾಮ ಸಂಸ್ಮರಣೆ ಪಾಪಪರಿಹಾರವು. ಈ ರೀತಿ, ಧ್ಯಾನಪೂರ್ವಕ ಸಂಸ್ಮರಣೆ ಮಾಡುತ್ತಿರುವ ಸೂರಿಗಳಿಗೆ, ಸರ್ವಕಾಲದಲ್ಲಿ ಸುತ್ರಾಮನಂದನನ ಸಾರಥಿಯಾದ ಸರ್ವೇಶ್ವರನು ಸಂಪ್ರೀತನಾಗಿ, ಅನುಗ್ರಹಿಸುವನು.

ಋಜುಗಳ ನಾಮೋಚ್ಚಾರಣೆ-ಧ್ಯಾನ-ಮನನ-ವಂದನಾದಿಗಳು– ದುರಿತ ಪರಿಹಾರಕ ಮತ್ತು ಮಾರಮಣನ ಸಂಪ್ರೀತಿಗೆ ಕಾರಣವಾಗುವುವು-ಎಂದು ಹೇಳುತ್ತಾರೆ. ॥೨೨॥

## ಪದ್ಯ-೨೩

**ಮೂಲ :–**

**ಪಾಹಿ ಕಲ್ಕಿ ಸುತೇಜ ದಾಸನೆ ।**
**ಪಾಹಿ ಧರ್ಮಾಧರ್ಮ ಖಂಡನೆ ।**
**ಪಾಹಿ ವರ್ಚಸ್ವೀ ಋಷಭ ನಮೋ ಸಾಧು ಮಹಿಪತಿಯೆ ॥**
**ಪಾಹಿ ಸದ್ಧರ್ಮಜ್ಞ ಧರ್ಮಜ ।**
**ಪಾಹಿ ಸಂಪೂರ್ಣ ಶುಚಿ ವೈಕೃತ ।**
**ಪಾಹಿ ಅಂಜನ ಸರ್ಷಪನೆ ಋರ್ಜಟಿ ಶ್ರದ್ಧಾಹ್ವ ॥೨೩॥**

**ಅವತರಣಿಕೆ :**

**ಕಲ್ಕಿ**–ಎಂಬ ಋಜುವನ್ನು ಆರಂಭಿಸಿಕೊಂಡು, ಋಜುಗಳ ನಾಮಗಳನ್ನು ಒಂದೊಂದಾಗಿ ಹೇಳುತ್ತಾರೆ. ॥೨೩॥

**ಪ್ರತಿಪದಾರ್ಥ**

**ಪಾಹಿ ಕಲ್ಕಿ**—ಒಬ್ಬ ಋಜು ನೂರುಬ್ರಹ್ಮಕಲ್ಪ ಸಾಧನಮಾಡಿ, ೧೦೧ನೆಯ ಕಲ್ಪದಲ್ಲಿ "ಕಲ್ಕಿ"-ಎಂಬ ಹೆಸರಿನಿಂದ ಕರೆಯಿಸುತ್ತಾನೆ. ಅಂತಹ ಕಲ್ಕಿನಾಮಕನಾದ ಋಜುವೇ ನನ್ನನ್ನು ಸಂರಕ್ಷಿಸು. **ಪಾಹಿ ಸುತೇಜ ದಾಸನೆ**—ಸುತೇಜ ಮತ್ತು ದಾಸನಾಮಕನೇ ರಕ್ಷಿಸು. **ಪಾಹಿ ಧರ್ಮೋಧರ್ಮಖಂಡನ**—ಧರ್ಮ. ಎಂಬ ಹೆಸರಿನ ಋಜುವೇ, ಅಧರ್ಮ ಖಂಡನ- ಎಂಬ ಅಭಿಧಾನದ ಋಜುವೇ ನಮ್ಮನ್ನು ಸಲಹು. **ಪಾಹಿ ವರ್ಚಸ್ವೀ ಖಷಣ**—ವರ್ಚಸ್ವೀನಾಮಕ ಋಜುವೇ, ಖಷಾಭಿಧಾನನೇ ರಕ್ಷಿಸು. **ನಮೋ ಸಾಧು ಮಹಿಪತಿಯೇ**—ಸಾಧುನಾಮಕನೇ, ಮಹಿಪತಿ- ಎಂಬ ಹೆಸರಿನ ಋಜುವೇ ನಿನಗೆ ನಮಸ್ಕಾರವು. **ಪಾಹಿ ಸದ್ಧರ್ಮಜ್ಞ** — ಸದ್ಧರ್ಮಜ್ಞನಾಮಕ ಋಜುವೇ ಕಾಪಾಡು. **ಧರ್ಮಜ**—ಧರ್ಮಜನೆಂಬುವನೇ ಸಂರಕ್ಷಿಸು. **ಪಾಹಿ ಸಂಪೂರ್ಣ**—ಸಂಪೂರ್ಣ-ಎಂಬ ಹೆಸರಿನ ಋಜುವೇ ನಮ್ಮನ್ನು ರಕ್ಷಿಸು. **ಶುಚಿ ವೈಕೃತ ಪಾಹಿ**—ಶುಚಿ-ನಾಮಕನೇ, ವೈಕೃತ- ಎಂಬ ಹೆಸರಿನ ಋಜುವೇ, ನಮ್ಮನ್ನು ಸಲಹು. **ಪಾಹಿ ಅಂಜನ**—ಅಂಜನನಾಮಕನೇ, ಸಂರಕ್ಷಿಸು. **ಸರ್ಷಪನೆ**—ಸರ್ಷಪ-ಎಂಬ ಹೆಸರಿನ ಋಜುವೇ ಕಾಪಾಡು. **ಖರ್ಪಟ**—ಖರ್ಪಟ-ಎಂಬ ಹೆಸರಿನ ಋಜುವೇ, **ಶ್ರದ್ಧಾಹ್ವ**—ಶ್ರದ್ಧಾ-ಎಂಬ ಅಭಿಧಾನವುಳ್ಳ ಋಜುವೇ ಸಂರಕ್ಷಿಸು. ॥೨೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ಹೆಸರು ಹೇಳತಾರೆ.

ಒಬ್ಬ ಋಜು ನೂರುಕಲ್ಪ ಸಾಧನಮಾಡಿ, ಅನಂತರ, ನೂರಾಒಂದನೇ ಕಲ್ಪದಲ್ಲಿ ಕಲ್ಕಿ-ಎಂತ ಕರಸತಾನೆ. ಇದೇ ಪ್ರಕಾರ, ಇಲ್ಲಿಂದ ಮುಂದೆ, ಬ್ರಹ್ಮಪದವಾದ ನೂರುಕಲ್ಪದವರೆಗೂ ನೂರುನಾಮಗಳಿಂದ ಒಬ್ಬ ಋಜು ಕರಸತಾನೆ. ಮತ್ತು ನೂರುಕಲ್ಪಸಾಧನಿ ಆದ ಋಜುಗಳು ನೂರು ಮಂದಿ ಇದ್ದಾರೆ. ಆ ನೂರುಮಂದಿಗೂ ಇದೇ ನಾಮ. ವರ್ತಮಾನ ಲಾತವ್ಯಸಂಕೇತ ಋಜು ಸಹಿತ ನೂರುಮಂದಿ ಎಂತ ತಾತ್ಪರ್ಯ. ಕಲ್ಕಿ ಎಂಬುವನೇ, ಸಂರಕ್ಷಣ ಮಾಡು. ಸುತೇಜ- ಎಂಬ, ದಾಸ ಎಂಬವನೇ ರಕ್ಷಿಸು. ಧರ್ಮ- ಎಂಬುವನೇ. ಅಧರ್ಮಖಂಡನ-ಎಂಬುವನೇ, ವರ್ಚಸ್ವಿನಾಮಕನೇ ಸಂರಕ್ಷಿಸು. ಋಷಣನಾಮಕನೇ ನಮಸ್ಕಾರ. ಸಾಧು ಎಂಬುವನೇ, ಮಹೀಪತಿ–ಎಂಬುವನೇ, ಸದ್ಧರ್ಮ ಎಂಬುವನೇ ಸಂರಕ್ಷಿಸು. ಧರ್ಮಜ-ಎಂಬುವನೇ, ಸಂಪೂರ್ಣ-ಎಂಬುವನೇ ಸಂರಕ್ಷಿಸು. ಶುಚಿ- ಎಂಬುವನೇ, ವೈಕೃತ- ಎಂಬುವನೇ ರಕ್ಷಿಸು. ಅಂಜನ–ಎಂಬುವನೇ, ಸರ್ಜವ- ಎಂಬುವನೇ, ಖರ್ಪಟ– ಎಂಬುವನೇ, ಶ್ರದ್ಧಾ- ಎಂಬುವನೇ ರಕ್ಷಿಸು. ॥೨೩॥

## ೨. ಭಾವಪ್ರಕಾಶಿಕೆ

ಋಜುಗಣದವರು ಮೊದಲು ೧೦೦ ಕಲ್ಪಸಾಧನವಾಗುವವರವಿಗೂ ಋಜುವೆನಿಸುವರು. ೧೦೦ ಕಲ್ಪಸಾಧನೆವಾದಕೂಡಲೇ, ಋಜು ಎಂಬ ಹೆಸರು ಹೋಗಿ, ೧೦೧ನೆಯ ಕಲ್ಪದಲ್ಲಿ ಕಲ್ಕಿ ಎಂಬ ಹೆಸರು ಬರುವುದು. ಹೀಗೆ ಕಲ್ಕಿ ಎಂಬ ಹೆಸರಾದ ಮೇಲೆ, ಪ್ರತಿ ಒಂದು ಕಲ್ಪದಲ್ಲೂ, ಒಂದೊಂದು ಹೆಸರಿನಂತೆ ೧೦೦ ಕಲ್ಪದಲ್ಲೂ ೧೦೦ ಹೆಸರು ಬರುವುದು. ಆ ಹೆಸರುಗಳನ್ನು ಹೇಳುತ್ತಾರೆ. ಮೊದಲನೆಯ ಕಲ್ಪದ ಹೆಸರು ಕಲ್ಕಿ. ಕಲಿಯನ್ನು ನಿರಾಕರಿಸುವುದರಿಂದ, ಈ ಹೆಸರು. ಎರಡನೆಯ ಕಲ್ಪದಲ್ಲಿ ಸುತೇಜಾ ಎನ್ನುವರು. ತೇಜಸ್ವಿಯಾದುದರಿಂದ ಆ ಹೆಸರು ಬಂದಿರುವುದು. ಮೂರನೆಯ ಕಲ್ಪದಲ್ಲಿ ಹೆಂಗೆ ಮುಖ್ಯ ದಾಸರಾಗಿರುವುದರಿಂದ, ದಾಸರೆಂದು ಹೆಸರು. ಧರ್ಮಸ್ವರೂಪರಾದುದರಿಂದ, ಧರ್ಮನೆಂದು ನಾಲ್ಕನೆಯ ಹೆಸರು. ಅಧರ್ಮ ಖಂಡಿಸುವುದರಿಂದ, ಅಧರ್ಮ ಖಂಡನನೆಂದು ೫ನೆಯ ಹೆಸರು. ೬ನೆಯ ಹೆಸರು ವರ್ಚಸ್ವೀ. ಶತ್ರು

ಭಯಂಕರನಾದುದರಿಂದ, ಭಿಷಣನೆಂದು ೭ನೆಯ ಹೆಸರು. ಸಜ್ಜನರಿಗೆ ಉಪ ಕಾರಿಯಾದುದರಿಂದ, ಸಾಧು ಎಂದು ೮ನೆಯ ಹೆಸರು. ಪೂಜ್ಯರಾದ ಗರುಡ-ಶೇಷರುದ್ರಾದಿಗಳಿಗೆ ಪ್ರಭುವಾದುದರಿಂದ, ಮಹಿಪತಿ-ಎಂದು ೯ನೆಯ ಹೆಸರು. ಉತ್ತಮವಾದ ಧರ್ಮರಹಸ್ಯವನ್ನು ತಿಳಿದವರಾದುದರಿಂದ, ಸದ್ಧರ್ಮಜರೆಂದು ೧೦ನೆಯ ಕಲ್ಪದನಾಮ. ಧರ್ಮ ಯಾರದೆಶೆಯಿಂದ ಪ್ರಸಿದ್ಧಿ ಹೊಂದಿತೋ, ಅವನಿಗೆ ಧರ್ಮಜರೆಂದು ಹೆಸರು. ಆ ಗುಣವು ವಾಯುದೇವರಲ್ಲಿ ಇದ್ದುದ ರಿಂದ ೧೧ನೆಯ ಹೆಸರು ಧರ್ಮಜ-ಎಂದು. ಸಂಪೂರ್ಣ ಗುಣಉಳ್ಳವರಾದುದ ರಿಂದ, ಸಂಪೂರ್ಣನೆಂದು ೧೨ನೆಯ ಹೆಸರು. ಶುಚಿರ್ಭೂತರಾಗುದರಿಂದ, ನಾಮ ಶುಚಿ- ಎಂದು. ಬ್ರಹ್ಮಾಂಡದೊಳಗೆ ಸ್ಥಾವರ ಜಂಗಮ ಪ್ರಾಣಿಗಳಲ್ಲಿ ವ್ಯಾಪ್ತರಾಗಿರುವುದರಿಂದ, ವೈಕೃತರೆಂದು ೧೪ನೆಯ ಹೆಸರು. ಆಕಾರನಾಮಕ ಪರಮಾತ್ಮನನ್ನು ಜನರಲ್ಲಿ ಪ್ರಸಿದ್ಧಿಪಡಿಸುವುದರಿಂದ, ಅಂಜನನೆಂದು ೧೫ನೆಯ ಹೆಸರು. ಸರ್ಪಪ—ಋಷ ಎಂದರೆ ಜ್ಞಾನ. ಸರ್ಪವೆಂದರೆ, ಜ್ಞಾನ ಉಳ್ಳವರೆಂದರ್ಥ. ಅವರನ್ನು ಪಾಲಿಸುವುದರಿಂದ, ಸರ್ಪಪನೆಂದು ೧೬ನೆಯ ಹೆಸರು. ನೀಚರಾದ ಕಲಿ- ಮೊದಲಾದವರಲ್ಲಿದ್ದು, ಅವರವರ ಸಾಧನಾ ಮಾಡಿಸುವುದರಿಂದ, ೧೭ನೆಯ ಹೆಸರು ವಿರ್ಪಟ ಎಂದು ೧೮ನೆಯ ಹೆಸರು ಶ್ರದ್ಧ. ॥೨೩॥

**೩. ಭಾವದರ್ಪಣ**

ಪಾಹಿ ॥೨೩॥

**೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ**

'ಪಾಹಿ' ಇತಿ॥ ಕಲ್ಕಿಃ ಸುತೇಜಾ ದಾಸಶ್ಚ ಧರ್ಮಾಶ್ವಾಧರ್ಮ ಖಂಡನಃ ॥ ವರ್ಚಸ್ವೀ ಭಿಷಣಶ್ಚೈವ ಸಾಧುಃ ಸುಮಹೀಪತಿಃ ॥ ಧರ್ಮಜ್ಞ-ಧರ್ಮಜೌ ಪಾತಾಂ ಸಂಪೂರ್ಣ ಶುಚಿ ವೈಕೃತಾಃ ॥೨೩॥

## ಕನ್ನಡಾರ್ಥ

"ಕಲ್ಕಿ, ಸುತೇಜ, ದಾಸ, ಧರ್ಮ–ಅಧರ್ಮಖಂಡನ, ವರ್ಚಸ್ವೀ,

ವಿಷಣ, ಸಾಧು–ಸುಮಹೀಪತಿ, ಧರ್ಮಜ್ಞ–ಧರ್ಮಜ, ಸಂಪೂರ್ಣ, ಶುಚಿ, ವೈಕೃತ"– ಈ ನಾಮಗಳು ವಾಮನ ಪುರಾಣ ಸ್ತೋತ್ರಗಳು. ॥೨೩॥

**ಟಿ. ಶ್ರೀಗುರುಹೃದಯ ಪ್ರಕಾಶಿಕೆ**

ಏಳು ಪದ್ಯದಿಂದ ಋಜುಗಳ ನಾಮಾವಳಿಯನ್ನು ಹೇಳಿ, ಪ್ರಾರ್ಥಿಸು ತ್ತಾರೆ–ಕಲ್ಕಿ ಎಂದು ಮೊದಲು ಮಾಡಿ.

ಇಲ್ಲಿ ಮಾಂ ಪಾಹಿ, ನನ್ನನ್ನು ಸಂರಕ್ಷಿಸು-ಎಂಬ ಎರಡು ಪದಗಳನು ಪ್ರತಿಸಂಬೋಧನೆ ನಾಮಪದಕ್ಕೂ ಸಂಬಂಧ ಪಡಿಸಬೇಕು. ಕಲಿಯನ್ನು ನಿವಾರಿಸುವುದರಿಂದ, ಕಲ್ಕಿನಾಮಕನೇ-ನನ್ನನ್ನು ರಕ್ಷಿಸು. ಸುಪರಾಕ್ರಮಿಯಾಗಿ, ಹರಿಭಕ್ತಾಗ್ರೇಸರನಾದ್ದರಿಂದ, ಸುತೇಜ. ದಾಸನಾಮನೇ, ಸರ್ವಾಧಾರನಾಗಿ ಧರ್ಮ–ಎಂಬ ಹೆಸರುಳ್ಳವನೇ-ಮಾಂ ಪಾಹಿ. ಅಧರ್ಮನಾಶಕನೇ ಮಾಂ ಪಾಹಿ. ಮಹಾಕಾಂತಿಯುಕ್ತನಾದ್ದರಿಂದ. ವರ್ಚಸ್ವಿನಾಮಕನೇ, ಶತ್ರುಭಯಂಕರನಾಗಿ ವಿಭೀಷಣ- ಎಂದು ಕರಸುವನೇ, ಸತ್ತ್ವೋದ್ರಿಕ್ತನಾಗಿ ಸಾಧನಾಮಕನೇ, ಪೂಜ್ಯಸ್ವಾಮಿಯಾದ್ದರಿಂದ, ಮಹೀಪತಿನಾಮಕನೇ, ಸದ್ಧರ್ಮವನ್ನು ತಿಳಿದವನೇ, ಮಾಂ ಪಾಹಿ. ಧರ್ಮೋತ್ಪಾದಕನೇ, ಮಾಂ ಪಾಹಿ. ಸಂಪೂರ್ಣನೇ, ಶುಚಿ ರೂಪನೇ, ಅನೇಕರೂಪನಾದ್ದರಿಂದ, ವೈಕೃತನಾಮಕನೇ, ಮಾಂ ಪಾಹಿ. ಭಕ್ತರಿಗೆ ಪುಣ್ಯವನ್ನು ಅಭ್ಯಂಜನ ಮಾಡುವುದರಿಂದ, ಅಂಜನ ನಾಮಕನೇ, ಋಷಜ್ಞಾನೇ- ಎಂಬ ಧಾತುವಿನಿಂದ ಸರ್ಪರೆಂಬ ಜ್ಞಾನರಹಿತರನ್ನ ಪರಿ ಪಾಲಿಸಿ, ಸರ್ಪಪನೆಂಬ ಹೆಸರುಳ್ಳವನೇ, ಖಂ ಬ್ರಹ್ಮ-ಎಂಬ ಶ್ರುತಿರೀತ್ಯಾಖ್ಯ ಎಂಬ ದೇವರಲ್ಲಿ ಸರ್ವಕ್ರಿಯಾ ಸಮರ್ಪಣೆ ಮಾಡಿ ನಡೆಯುತ್ತಿರುವುದರಿಂದ, ಅಟ.ಗತೌ ಎಂಬ ಧಾತುವಿನಿಂದ ಖರ್ಪಟನಾಮಕನೇ ಮಾಂ ಪಾಹಿ. ಶದ್ಧಾ ಹ್ವ ಅಂದರೆ, **ಕರಿಷ್ಯಮಾಣನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸ ಶುದ್ಧ ಬುದ್ಧಿ ಃ**-ಎಂದು ಹೇಳಿರುವಂತೆ, **ಶ್ರನ್ನಾಮಾಸ್ತಿಕ್ಯ ಬುದ್ಧಿ ಸ್ಯಾತ್** ಎಂಬ ವಚನಾನುಸಾರ ಸಂಪೂರ್ಣಾಸ್ತಿಕ್ಯಬುದ್ಧಿಯನ್ನು ದೇವರಲ್ಲಿ ಇಟ್ಟಿರುವುದ ರಿಂದ, ಶದ್ಧಾ-ಎಂಬ ಹೆಸರುಳ್ಳವನೇ, ಮಾಂ ಪಾಹಿ. ॥೨೩॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಕಲ್ಕಿ–

೧೦೧ನೆಯ ಬ್ರಹ್ಮಕಲ್ಪದಲ್ಲಿ ಋಜುಪದವಿಗೆ ಬರುವವನ ಹೆಸರು. ಕಲಿಯನ್ನು ನಿರಾಕರಿಸುವುದರಿಂದ– "ಕಲ್ಕಿ"–ಎಂತ ನಾಮ.

೨. ಸುತೇಜ–

೧೦೨ನೆಯ ಕಲ್ಪದಲ್ಲಿ ಪದವಿಗೆ ಬರುವ ಋಜುವಿನ ನಾಮಸಂಕೇತ- ಪರಮತೇಜಸ್ಸಿನಿಂದ ಕೂಡಿರುವುದರಿಂದ– "ಸುತೇಜ"–ನೆಂದು ಹೆಸರು.

೩. ದಾಸನೆ–

೧೦೩ನೆಯ ಕಲ್ಪದ ಋಜು. ಶ್ರೀಹರಿಯ ಪ್ರಥಮದಾಸರಾಗಿರುವುದರಿಂದ (ಜೀವಕೋಟಿಸ್ಥರಲ್ಲಿ) "ದಾಸ"–ನೆಂಬ ಅಭಿಧಾನ.

೪. ಧರ್ಮ–

೧೦೪ನೆಯ ಪದವಿಗೆ ಬರುವ ಋಜುವಿನ ಹೆಸರು. ಧರ್ಮಸ್ವರೂಪನಾಗಿರುವುದರಿಂದ. "ಧರ್ಮ"- ಎಂದು ಹೆಸರು.

೫. ಅಧರ್ಮ ಖಂಡನ–

೧೦೫ನೆಯ ಬ್ರಹ್ಮಕಲ್ಪದಲ್ಲಿ ಬರುವ ಋಜುಪದವಿಯ ಹೆಸರು. ಅಧರ್ಮವನ್ನು ಖಂಡನಮಾಡುವುದರಿಂದ– "ಅಧರ್ಮ ಖಂಡನ"– ಎಂತ ನಾಮ.

೬. ವರ್ಚಸ್ವೀ–

೧೦೬ನೆಯ ಕಲ್ಪದ ಋಜುವಿನ ಹೆಸರು. ನಿರುಪಮವಾದ ವರ್ಚಸ್ಸಿನಿಂದ ಬೆಳಗುತ್ತಿರುವುದರಿಂದ- "ವರ್ಚಸ್ವೀ"– ಎಂದು ಹೆಸರು.

೭. ಭೀಷಣ-

೧೦೭ನೆಯ ಕಲ್ಪದಲ್ಲಿ ಬರುವ ಋಜುಪದವಿ. ಶತ್ರುಭಯಂಕರನಾದುದರಿಂದ, "ಭೀಷಣ"– ಎಂದು ಹೆಸರು.

**೮. ಸಾಧು-**

ಸಜ್ಜನರಿಗೆ ಉಪಕಾರಿಯಾದ ೧೦೮ನೆಯ ಬ್ರಹ್ಮಕಲ್ಪದ ಋಜುಪದವಿಗೆ ಬರುವವನ ಹೆಸರು.

**೯. ಮಹಿಪತಿಯು–**

೧೦೯ನೆಯ ಋಜುಪದವಿಯ ಅಭಿಧಾನ. ಪೂಜ್ಯರಾದ ಗರುಡಶೇಷ ರುದ್ರಾದಿಗಳಿಗೆ ಪ್ರಭುವಾದ್ದರಿಂದ, "ಮಹಿಪತೀ"– ಎಂದು ಹೆಸರು.

**೧೦. ಸದ್ಧರ್ಮಜ್ಞ–**

ಧರ್ಮದ ರಹಸ್ಯವನ್ನು ತಿಳಿದಿರುವುದರಿಂದ, ೧೧೦ನೆಯ ಋಜುಪದವಿಗೆ ಬರುವ ಜೀವನಿಗೆ, "ಸದ್ಧರ್ಮಜ್ಞ"– ಎಂದು ಹೆಸರು.

**೧೧. ಧರ್ಮಜ–**

೧೧೧ನೆಯ ಪದವಿ. ಧರ್ಮವು ಯಾವಾತನ ತಿಳಿಯಿಂದ ಪ್ರಸಿದ್ಧಿ ಹೊಂದುವುದೋ ಆ ಋಜುವಿಗೆ. "ಧರ್ಮಜ"–ನೆಂದು ಹೆಸರು.

**೧೨. ಸಂಪೂರ್ಣ–**

ಜೀವಕೋಟಿಯಲ್ಲಿ ಪೂರ್ಣ ದ್ವಾತ್ರಿಂಶತಿಲಕ್ಷಣಯುಕ್ತರಾಗಿ, ಸದ್ಗುಣ ಭರಿತರಾಗಿರುವ ಋಜುವು ೧೧೨ ಕಲ್ಪದಲ್ಲಿ ಪದವಿಯಲ್ಲಿರುತ್ತಾನೆ.

**೧೩. ಶುಚಿ-**

೧೧೩ ಬ್ರಹ್ಮಕಲ್ಪದಲ್ಲಿ ಋಜುಪದವಿಗೆ ಬರುವ ಋಜುವಿಗೆ "ಶುಚಿ" ಎಂದು ಹೆಸರು. ಶುಚಿರ್ಭೂತರಾಗಿ ಪರಮಪವಿತ್ರರಾಗಿರುವುದರಿಂದ, "ಶುಚಿ" ಎಂತ ನಾಮ.

**೧೪. ವೈಕೃತ–**

ಬ್ರಹ್ಮಾಂಡದಲ್ಲಿ ಸಕಲಸ್ಥಾವರಜಂಗಮಗಳಲ್ಲಿ ವ್ಯಾಪ್ತರಾಗಿರುವುದ

ರಿಂದ, ೧೧೪ನೆಯ ಬ್ರಹ್ಮಕಲ್ಪದಲ್ಲಿ ಋಜುಪದವಿಗೆ ಬರುವ ಜೀವಿಗೆ "ವೈಕೃತ"-ಎಂದು ಹೆಸರು.

### ೧೫. ಅಂಜನ–

ಅ–ಕಾರನಾಮಕನಾದ ಅಜಶಬ್ದವಾಚ್ಯನಾದ ಶ್ರೀಪರಮಾತ್ಮನನ್ನು ನಿತ್ಯವೂ ಭಜಿಸುತ್ತಿರುವ ೧೧೫ನೆಯ ಬ್ರಹ್ಮಕಲ್ಪದಲ್ಲಿ ಋಜುಪದಸ್ಥನಿಗೆ "ಅಂಜನ"-ಎಂದು ಅಭಿಧಾನ.

### ೧೬. ಸರ್ಪಪನೆ–

ಋಪ–ಎಂದರೆ ಜ್ಞಾನ. ಸಕ್ತ-ಎಂದರೆ ಜ್ಞಾನವುಳ್ಳವನು. ಅಂತಹ ಸುಜ್ಞಾನಿಗಳನ್ನು ಪಾಲಿಸುವುದರಿಂದ– ಸರ್ಪಪ– ಎಂದು ಹೆಸರು. ಇದು ೧೧೬ನೆಯ ಬ್ರಹ್ಮಕಲ್ಪದ ಋಜುಪದವಿ.

### ೧೭. ಖರ್ಪಟ–

೧೧೭ನೆಯ ಬ್ರಹ್ಮಕಲ್ಪದ ಋಜುಪದಸ್ಥನಿಗೆ "ಖರ್ಪಟ"-ಎಂದು ಹೆಸರು. ನೀಚರಾದ ಕಲಿ ಮುಂತಾದ ದೈತ್ಯರಲ್ಲಿದ್ದು, ಅವರವರ ಸಾಧನ ಮಾಡಿಸಿ, ಗತಿಪ್ರದನಾದ್ದರಿಂದ. "ಖರ್ಪಟ"-ಎಂದು ಹೆಸರು.

ಇನ್ನೊಂದರ್ಥ– "ಖಂ"–ಎಂದರೆ ಬ್ರಹ್ಮ- ಎಂಬ ಶ್ರುತಿರೀತ್ಯಾ "ಖ"–ನಾಮಕ ಪರಮಾತ್ಮನಲ್ಲಿ ಸರ್ವಕ್ರಿಯಾಸಮರ್ಪಣೆ ಮಾಡುವುದರಿಂದ, "ಅಟ ಗತೌ"-ಎಂಬ ಧಾತುವಿನ ರೀತ್ಯಾ, "ಖರ್ಪಟ"–ನೆಂದು ಹೆಸರು.

### ೧೮. ಶ್ರದ್ಧಾಖ್ಯ–

"ಶ್ರದ್ಧಾ"–ಎಂಬ ಹೆಸರಿನ (ಆಖ್ಯ) ಋಜು ೧೧೮ನೆಯ ಪದಸ್ಥನು.

"ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸಶುದ್ಧ ಬುದ್ಧಿಃ" –ಎಂಬ ವಚನಾನುಸಾರ, ಸಂಪೂರ್ಣವಾದ ಆಸ್ತಿಕ್ಯಬುದ್ಧಿಯನ್ನು ಶ್ರೀಹರಿಯಲ್ಲಿ ಇಟ್ಟಿರುವುದರಿಂದ, "ಶ್ರದ್ಧಾ"–ಎಂತ ನಾಮ.

**ಗಮನಿಸಿ:-** ನೂರುಕಲ್ಪಸಾಧನಾನಂತರ ಒಬ್ಬ ಋಜುವು ೧೦೧ನೆಯ ಬ್ರಹ್ಮಕಲ್ಪದಲ್ಲಿ "ಕಲ್ಕಿ"- ಎಂದು ಕರೆಯಿಸುವನು. ಆ ಋಜುವೇ ಕ್ರಮ ಕ್ರಮವಾಗಿ. ಮುಂದಿನ ಬ್ರಹ್ಮಕಲ್ಪಗಳಲ್ಲಿ ಸಾಧನಮಾಡುತ್ತಾ, ಪ್ರಸಕ್ತ ೧೧೮ನೆಯ ಕಲ್ಪದಲ್ಲಿ ಋಜುಪದಸ್ಥನಾಗಿ "ಶುಚಿ"- ನಾಮಕನಾಗುವನು.

## ಪದ್ಯ-೩೪

**ಪಾಹಿ ಸಂಧ್ಯಾತ ವಿಜ್ಞಾನನೆ ।**
**ಪಾಹಿ ಮಹವಿಜ್ಞಾನ ಕೀರ್ತನ ।**
**ಪಾಹಿ ಸಂಕೀರ್ತನಾತ್ಮ ಶಕ್ತನೆ ಮಹಾಬುದ್ಧ ಜಯಾ ॥**
**ಪಾಹಿ ಸುಮಹತ್ತರ ಸುವೀರ್ಯನೆ ।**
**ಪಾಹಿ ಮಾಂ ಮೇಧಾವಿ ವಿಜಯ ಜಯ ।**
**ಪಾಹಿ ಮಾಂ ರಂತಿವ್ಮ ಮನು ಮಾಂ ಪಾಹಿ ಮಾಂ ಪಾಹಿ**
**॥ ೩೪ ॥**

**ಅವತರಣಿಕೆ :**

೧೯ನೆಯ ಋಜುವಿನನಾಮದಿಂದ ಆರಂಭಿಸಿ, ಮುಂದಿನ ಪದವಿಗೆ ಬರತಕ್ಕ ಋಜುಪದಸ್ಥರ ಮಂಗಳ ಸುನಾಮಗಳನ್ನು ತಿಳಿಸುತ್ತಾರೆ. ॥೩೪॥

**ಪ್ರತಿಪದಾರ್ಥ :**

**(೧೯) ಪಾಹಿ ಸಂಧ್ಯಾತ**—ಸಂಧ್ಯಾತನಾಮಕ ಋಜುವೇ ನಮ್ಮನ್ನು ರಕ್ಷಿಸು. **(೨೦) ವಿಜ್ಞಾನನೆ**—ವಿಜ್ಞಾನನಾಮಕನೇ ನನ್ನನ್ನು ಸಲಹು. **(೨೧) ಪಾಹಿ ಮಹವಿಜ್ಞಾನ**—ಮಹವಿಜ್ಞಾನ-ಎಂಬ ಹೆಸರಿನ ಋಜುವೇ ನಮ್ಮನ್ನು ಕಾಪಾಡು. **(೨೨) ಕೀರ್ತನ**—ಕೀರ್ತನಾಭಿಧನೇ, ಎಮ್ಮನ್ನು

ಸಂರಕ್ಷಿಸು. (೨೩) **ಪಾಹಿ ಸಂಕೀರ್ಣಾಖ್ಯ**—ಸಂಕೀರ್ಣ ಎಂಬ ಹೆಸರಿನ ಋಜುವೇ ನಮ್ಮನ್ನು ಸಲಹು. (೨೪) **ಕತ್ಥನೆ**—ಕತ್ಥನಾಮಕನೇ, (೨೫) **ಮಹಾಬುದ್ಧ**—ಮಹಾಬುದ್ಧ ಎಂಬ ಹೆಸರಿನ ಋಜುವೇ, (೨೬) **ಜಯಾ**—ಜಯಾನಾಮಕನೇ-ನಮ್ಮನ್ನು ಸಂರಕ್ಷಿಸು. (೩೦) **ಪಾಹಿ ಸುಮಹತ್ತರ**—ಸುಮಹತ್ತರ ಎಂಬ ಹೆಸರಿನ ಋಜುಪದವಿಗೆ ಬರುವವನೇ ಕಾಪಾಡು. (೩೧) **ಸುವೀರ್ಯನೆ**—ಸುವೀರ್ಯನಾಮಕನೇ, (೩೨) **ಪಾಹಿ ಮಾಂ ಮೇಧಾವಿ**—ಮೇಧಾವಿ ಎಂಬ ಅಭಿಧಾನವುಳ್ಳ ಋಜುವೇ ನಮ್ಮನ್ನು ಸಂರಕ್ಷಿಸು. (೩೩) **ವಿಜಯ**—ವಿಜಯನಾಮಕನೇ, (೩೪) **ಜಯ**—ಜಯಾಭಿಧನೇ, (೩೫) **ಪಾಹಿ ಮಾಂ ರಂತಿಮ್ನ**— ರಂತಿಮ್ನ ಎಂಬ ಹೆಸರಿನ ಋಜುವೇ ನಮ್ಮನ್ನು ಸಲಹು. (೩೬) **ಮನು ಮಾಂ ಪಾಹಿ**—ಮನುನಾಮಕ ಋಜುವೇ, ನಮ್ಮನ್ನು ರಕ್ಷಿಸು-ರಕ್ಷಿಸು. ॥೨೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಋಜುಗಳ ವಿಚಾರವೇ ಹೇಳುತಾರೆ.

ಸಂಖ್ಯಾತನಾಮಕನೇ ನನ್ನ ರಕ್ಷಿಸು. ವಿಜ್ಞಾನನಾಮಕನೇ ಸಂರಕ್ಷಿಸು. ಮಹಾವಿಜ್ಞಾನ- ಎಂಬುವನೇ ಸಂರಕ್ಷಿಸು. ಕೀರ್ತನ-ಎಂಬುವನೇ, ಸಂಕೀರ್ಣ ಎಂಬುವನೇ ಸಂರಕ್ಷಿಸು. ಕತ್ಥನನಾಮಕನೇ, ಮಹಾಬುದ್ಧನೆಂಬುವನೇ, ಜಯಾನಾಮಕನೇ ಸಂರಕ್ಷಣ ಮಾಡು. ಸುಮತ್ತರನಾಮಕನೇ, ಸುವೀರ್ಯ ಎಂಬುವನೇ ನನ್ನ ರಕ್ಷಿಸು. ಮೇಧಾವಿ ನಾಮಕನೇ, ವಿಜಯನಾಮಕನೇ, ಜಯ-ಎಂಬುವನೇ ನನ್ನ ರಕ್ಷಿಸು. ರಂತಿಮ್ನನಾಮಕನೇ, ಮನುನಾಮಕನೇ ನನ್ನ ರಕ್ಷಿಸು. ಪೂರ್ವೋಕ್ತ ಋಜುಗಳು ನಮ್ಮನ್ನ ರಕ್ಷಣ ಮಾಡಲಿ, ಎಂತ-ತಾತ್ಪರ್ಯ. ॥೨೪॥

## ೨. ಭಾವಪ್ರಕಾಶಿಕೆ

ಸದಾ ಧ್ಯಾನರತರಾದುದರಿಂದ, ಸಧ್ಯಾತ ಅಥವಾ ಸಂಧ್ಯಾನನೆಂದು ೧೯ನೆಯ ಹೆಸರು. ವಿಶೇಷ ಜ್ಞಾನವುಳ್ಳವರಾದುದರಿಂದ, ವಿಜ್ಞಾನನೆಂದು ೨೦ನೆಯ ಹೆಸರು. ಮಹಾಜ್ಞಾನ ೨೧ನೆಯ ಹೆಸರು. ಸದಾ ಭಗವಂತನ ಗುಣಕೀರ್ತನೆ ಮಾಡುವುದರಿಂದ, ಕೀರ್ತನನೆಂದು ೨೨ನೆಯ ಹೆಸರು. ಮಧ್ಯಮ ಜೀವರಿಗೆ ಮಿಶ್ರಬುದ್ಧಿಯನ್ನು ಹುಟ್ಟಿಸುವುದರಿಂದ, ಸಂಕೀರ್ಣನೆಂದು ೨೩ನೆಯ ಹೆಸರು. ವೇದಶಾಸ್ತ್ರಾರ್ಥಗಳನ್ನು ಸಿದ್ಧಾಂತಮಾಡಿ, ವಾದಿಗಳನ್ನು ಗೆದ್ದಿರುವುದರಿಂದ, ಕತ್ಥನ ಎಂದು ೨೪ನೆಯ ಹೆಸರು. ಬುದ್ಧಿಜಯ ೨೫ನೆಯ ಹೆಸರು. ಮಹತ್ತರ ೨೬ನೆಯ ಹೆಸರು. ಸುವೀರ್ಯ ೨೭ನೆಯ ಹೆಸರು. ಮಹಾಜ್ಞಾನಿಯಾದುದರಿಂದ, ಮೇಧಾವಿ ಎಂದು ೨೮ನೆಯ ಹೆಸರು. ವಿಜಯ ೨೯ನೆಯ ಹೆಸರು. ಜಯ ೩೦. ರಂ-ಎಂದರೆ, ಅಗ್ನಿಬೀಜಾಕ್ಷರವು. ಅದು ಪರಮಾತ್ಮನಲ್ಲಿ ಇರುವುದರಿಂದ ರಂತಿ ಎಂದು ಸಂಕರ್ಷಣಮೂರ್ತಿಯಾದ ಶ್ರೀಹರಿಗೆ ಹೆಸರು. ಅಂತಹಾ ಹರಿಯನ್ನು ಸರ್ವದಾ ಮನಸ್ಸಿನಲ್ಲಿ ಧರಿಸಿರುವುದರಿಂದ, ರಂತಿಮಾನೆಂದು ೩೧ನೆಯ ಹೆಸರು. ಮಂತ್ರಪ್ರತಿಪಾದ್ಯರಾದುದರಿಂದ. ಮನು- ಎಂದು ೩೨ನೆಯ ಹೆಸರು. ॥೨೪॥

## ೩. ಭಾವದರ್ಪಣ

ಪಾಪ ಸಧ್ಯಾನ ॥೨೪॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಅಂಜನಃ ಸರ್ಪಪಃ ಶ್ರದ್ಧಾಖಿಪಟೌ ರಕ್ಷತಾಂ ಸು ಮಾಮ್॥ ಪಾತಾಂ ಸಂಧ್ಯಾತವಿಜ್ಞಾನೌ ಮಹಾವಿಜ್ಞಾನಕೀರ್ತನಃ ॥ ಸಂಕೀರ್ಣಃ ಕತ್ಥನಶ್ಚೈವ ಮಹಾಬುದ್ಧಿರ್ಜಯಸ್ತಥಾ ॥ ಮಹತ್ತರಃ ಸುವೀರ್ಯಶ್ಚ ಮೇಧಾವೀ ರತಿಮಾನ್ ತಥಾ ॥ ಮನುಮಾನ್ ಪಾಂತು ಮೋದ ಪ್ರಮೋದಾಖ್ಯಸಂತಸಾನಂದ ಶರ್ಮಕಾಃ ॥ ಸಂತುಷ್ಟಃ ಪಾಹಿ ಚಾರ್ವಾಂಗಃ ಚಾರುಬಾಹುಪದೌ

ತಥಾ ॥ ಸಾರಸ್ವತ ಸುನೇತ್ರಾಖ್ಯೌ ಸುವೀರ ಪ್ರಾಜ್ಞವಾನರೌ ॥ ಅಲಂಪಟಃ ಸರ್ವವೇತ್ತಾ ಸರ್ವಜಿನ್ಮಿತ್ರ ಏವ ಚ ॥ ಪಾಪನಾಶಃ ಧರ್ಮನೇತಾ ಶಾರದೌಜ ತಪಸ್ವಿಕೌ ॥ ತೇಜಸ್ವಿನಾಮಾ ಚ ಋಜುರೇವಂ ಪಂಚಾಶ ದೀರಿತಾಃ ॥ ದಾನ ಶೀಲಸುಲೀಲೌ ಚ ಯಜ್ಞಃ ಕರ್ತಾ ಸುಪೂರ್ವಕಃ ॥ (ಯಜ್ವೀ) ಜಯಸ್ವೀ ಯಾಗ ಪ್ರವೃತ್ತಶ್ಚ ಪ್ರಾಣ ತ್ರಾಣೋವಮರ್ಷಕಃ ॥ ಧರ್ಮಾದೇಷ್ಟಾ ತಾರಕಶ್ಚ ಕಾಲಃ ಕ್ರೀಡನಕಃ ತಥಾ ॥ ಸುಕರ್ತಾ ಚ ಸುಕಾಲಜ್ಞಃ ಕಾಲಸೂಚಕ ಏವ ಚ ॥ ತಥಾ ಚ ಕಲಿಸಂಹರ್ತಾ ಕಲಿಃ ಕಾಲಸ್ತಥೈವಚ ॥ ಶ್ಯಾಮರೇತಸ ಏವ ಸ್ಯಾತ್ ದಾರತಃ ಸುಬಲಸ್ತಥಾ ॥ ಸಹೋಕಪಿಜ್ಞಾನಗಮ್ಯಾಃ ದಶಯುತ್ ಕಲ ಏವಚ॥ ಸಂಕೀರ್ತಿತವ್ಯಃ ಶ್ರೋತವ್ಯಃ ಮಂತವ್ಯಃ ಕವ್ಯ ಏವ ಚ ॥ ಸರವ್ಯಶ್ಚೈವ ದ್ರಷ್ಟವ್ಯಃ ಗಂತವ್ಯಃ ಕ್ರವ್ಯ ಏವ ಚ ॥ ಸುಭವ್ಯಸೇವ್ಯ ಸ್ಮರ್ತವ್ಯಾಃ ಸ್ವರ್ಗವ್ಯಃ ಭಾವ್ಯ ಏವ ಚ ॥ ಜ್ಞಾತವ್ಯ-ವಕ್ತವ್ಯಗವ್ಯಾಃ ಲಾತವಃ ಗುರು ರಾಜಕಃ ॥ ವಾಯುಶ್ಚೈವ ತಥಾ ಬ್ರಹ್ಮೈತ್ಯೇವಂ ಪಂಚಾಶದೀರಿತಾಃ ॥

(ಪದ್ಯ ೨೪ ಆರಂಭಿಸಿ ೨೯ ಪದ್ಯದವರೆಗೆ ಹೇಳಿದ ಎಲ್ಲ ನಾಮಗಳನ್ನೂ ಒಂದೆಡೆ ಹೇಳಿದ್ದಾರೆ.)

ಈ ಎಲ್ಲ ನಾಮಗಳನ್ನು ವಿಂಗಡಿಸಿ. ವ್ಯಾಸವಾಸಸಿದ್ಧಾಂತಕೌಮುದೀ ಕಾರರು ಬರೆದಂತೆ, ಕನ್ನಡಾರ್ಥದಲ್ಲಿ ಬರೆಯಲಾಗಿದೆ.

## ಕನ್ನಡಾರ್ಥ

೧ ಕಲ್ಕಿ, ೨ ಸುತೇಜ, ೩ ದಾಸ, ೪ ಧರ್ಮ, ೫ ಅಥರ್ವಣ ಖಂಡನ, ೬ ವರ್ಚಸ್ವೀ, ೭ ಖಪಣ, ೮ ಸಾಧು, ೯ ಸುಮಹೀಪತಿ, ೧೦ ಸದ್ಧರ್ಮಜ್ಞ, ೧೧ ಧರ್ಮಜ, ೧೨ ಸಂಪೂರ್ಣ, ೧೩ ಶುಚಿ, ೧೪ ವೈಕೃತ, ೧೫ ಅಂಜನ, ೧೬ ಸರ್ವಪ, ೧೭ ಖರ್ಪಟ, ೧೮ ಶ್ರದ್ಧಾ, ೧೯ ಸಂಧ್ಯಾತ, ೨೦ ವಿಜ್ಞಾನ, ೨೧ ಮಹಾವಿಜ್ಞಾನ, ೨೨ ಕೀರ್ತನ, ೨೩ ಸಂಕೀರ್ಣ, ೨೪ ಕತ್ಥನ, ೨೫ ಮಹಾ

ಬುದ್ಧಿ, ೨೬ ಜಯ, ೨೭ ಮಹತ್ತರ, ೨೮ ಸ್ವವೀರ್ಯ, ೨೯ ಮೇಧಾವಿ, ೩೦ ಅಜಯ, ೩೧ ರತಿಮಾನ್, ೩೨ ಮನು, ೩೩ ಮೋದ, ೩೪ ಪ್ರಮೋದ, ೩೫ ಸಂತಸ, ೩೬ ಆನಂದ, ೩೭ ಸಂತುಷ್ಟ, ೩೮ ಚಾರ್ವಾಂಗ, ೩೯ ಚಾರುಸುಬಾಹು, ೪೦ ಚಾರುಪದ, ೪೧ ಸುಲೋಚನ, ೪೨ ಸಾರಸ್ವತ, ೪೩ ಸುವೀರ, ೪೪ ಪ್ರಾಜ್ಞ, ೪೫ ಕಪಿ, ೪೬ ಅಲಂಪಟ, ೪೭ ಸರ್ವಜ್ಞ, ೪೮ ಸರ್ವಜಿತ್, ೪೯ ಮಿತ್ರ, ೫೦ ಪಾಪವಿನಾಶನ, ೫೧ ಧರ್ಮವಿನೇತಾ. ೫೨ ಶಾರದೋಜ. ೫೩ ತಪಸ್ವೀ, ೫೪ ತೇಜಸ್ವೀ, ೫೫ ದಾನಶೀಲ, ೫೬ ಸುಶೀಲ, ೫೭ ಯಜ್ಞ, ೫೮ ಸುಕರ್ತ, ೫೯ ಯಜ್ವೀ, ೬೦ ಯಾಗವರ್ತಕ, ೬೧ ಪ್ರಾಣ, ೬೨ ತ್ರಾಣ, ೬೩ ಅಮರ್ಷಿ, ೬೪ ಧರ್ಮೋಪದೇಷ್ಟಾ, ೬೫ ತಾರಕ, ೬೬ ಕಾಲ, ೬೭ ಕ್ರೀಡನ ೬೮ ಸುಕರ್ತಾ, ೬೯ ಸುಕಾಲಜ್ಞ, ೭೦ ಕಾಲಸೂಚಕ, ೭೧ ಕಲಿಸಂಹರ್ತಾ, ೭೨ ಕಲಿ, ೭೩ ಕಾಲಿ, ೭೪ ಶಾಮರೇತಸ, ೭೫ ಸದಾರಸ, ೭೬ ಸುಬಲ, ೭೭ ಸಹ, ೭೮ ಕಪಿ, ೭೯ ಗಮ್ಯ, ೮೦ ಜ್ಞಾನ, ೮೧ ದಶಕಲ, ೮೨ ಶ್ರೋತವ್ಯ ೮೩ ಸಂಕೀರ್ತಿತವ್ಯ, ೮೪ ಮಂತವ್ಯ, ೮೫ ಕವ್ಯ, ೮೬ ದ್ರಷ್ಟವ್ಯ, ೮೭ ಸರವ್ಯ, ೮೮ ಗಂತವ್ಯ, ೮೯ ಕ್ರವ್ಯ, ೯೦ ಸ್ಮರ್ತವ್ಯ, ೯೧ ಸೇವ್ಯ, ೯೨ ಸುಭಾವ್ಯ, ೯೩ ಸ್ವರ್ಗವ್ಯ, ೯೪ ಭಾವ್ಯ, ೯೫ ಜ್ಞಾತವ್ಯ, ೯೬ ವಕ್ತವ್ಯ, ೯೭ ಗವ್ಯ, ೯೮ ಲಾತವ್ಯ, ೯೯ ವಾಯು, ೧೦೦ ಬ್ರಹ್ಮ ॥೧೦೦॥೬೦॥೨೪॥೨೯॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಸದಾ ದೇವರ ಧ್ಯಾನಶೀಲನಾದ್ದರಿಂದ, ಸಂಧ್ಯಾತನಾಮಕನೇ, ನಿತ್ಯಾ, ಪರೋಕ್ಷಿಯಾದ್ದರಿಂದ, ವಿಜ್ಞಾನನಾಮಕನೇ, ನಿತ್ಯಾಪರೋಕ್ಷಿ ದೇವತೆಗಳಿಗೆಲ್ಲಾ ಅಧಿಕನಾದ್ದರಿಂದ ಮಹಾವಿಜ್ಞಾನನೇ, ನಿತ್ಯಸಂಸ್ಮರಣೆ ಉಳ್ಳವನಾದ್ದರಿಂದ, ಕೀರ್ತನ-ಎಂದು ಹೆಸರುಳ್ಳವನೇ, ಸರ್ವತ್ರ ಕೂಡಿರುವುದರಿಂದ ಸಂಕೀರ್ಣಾಖ್ಯನೇ, ಇದ್ದ ಸ್ವಬಲವನ್ನು ಹೇಳುವುದರಿಂದ, ಕತ್ಥನ-ಎಂದು ಹೆಸರುಳ್ಳವನೇ, **ಸಹಸ್ರ ಗುಣಮುಷ್ಯೇ ತತ್ತ್ವಯಿ ಸಂಭಾವಯಾಮ್ಯಹಂ.** ಎಂದು ಶ್ರೀಕೃಷ್ಣನು ಅಂಗೀಕರಿಸಿರುವುದರಿಂದ, ಈ ಶ್ಲಾಘನೆ ದೋಷವಿಲ್ಲಾ- ಎಂಬ ಪ್ರಮೇಯ. ಸಂಶಯರಹಿತನಾದ್ದರಿಂದ ಮಹಾಬುದ್ಧಿನಾಮಕನೇ, ಜಯ ನಿನ್ನ ಉತ್ಕರ್ಷ

ವನ್ನು ತೋರಿಸು. ಸರ್ವಜೀವೋತ್ತಮನಾದ್ದರಿಂದ, ಮಹತ್ತರ ನಾಮಕನೇ. ಅತ್ಯಂತ ಬಲವಂತನಾದ್ದರಿಂದ, ಸುವೀರ್ಯನಾಮಕನೆ, ಉತ್ಕೃಷ್ಟಧಾರಣಾಶಕ್ತಿ ಉಳ್ಳವನಾದ್ದರಿಂದ, ಮೇಧಾವೀ ಎನಿಸುವನೇ ಜಯ ಜಯ. **ರಂ ತಿಷ್ಠತ್ಯಸ್ಮಿನ್ನಿತಿ ರಂತಿವೃಕಾಗ್ನಿಃ । ಸ ಅಸ್ಯಾಸ್ತೀತಿ ರಂತಿವರ್ಮಾ.** ರಂ-ಎಂಬೋ ಅಗ್ನಿಬೀಜ ಮುಖ್ಯವಾಚ್ಯತ್ವ ಇರುವುದರಿಂದ, ವೃಕನಾಮಕ ಅಂಗುಷ್ಠ ಪರಿಮಿತ ಅಗ್ನಿನಾಮಕದೇವರೂಪಕ್ಕೆ ರಂತಿ ಎಂದು ಹೆಸರು. ಅದು ಈತನಲ್ಲಿರುವುದರಿಂದ ರಂತಿವರ್ಮಾ ಎಂದು ಹೆಸರುಳ್ಳವನೇ. **ಅಂಗುಷ್ಠಮಾತ್ರಂ ಜಠರೇ ಪ್ರತಿಷ್ಠಿತಂ ಜಾಜ್ವಲ್ಯಮಾನಂ ಮನುಜಾತವೇದಸಂ**- ಎಂಬ ಸುಮಧ್ವವಿಜಯ ಶ್ಲೋಕಾರ್ಥವು ವಿವರಿಸಿತು. ಮನು ಅವಬೋಧನೇ- ಎಂಬ ಧಾತುವಿನಿಂದ ಜ್ಞಾನರೂಪನಾದ್ದರಿಂದ, ಮನುವೆಂದು ನಾಮಉಳ್ಳವನೇ ನನ್ನನ್ನು ರಕ್ಷಿಸು. ॥ ೨೪ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

**(೧೯)** ೧೯ನೆಯ ಬ್ರಹ್ಮಕಲ್ಪದ ಋಜುಪದಸ್ಥರಿಗೆ **ಸಂಧ್ಯಾತ**-ನೆಂದು ಹೆಸರು. ಸದಾ ಶ್ರೀಹರಿಯ ಧ್ಯಾನಶೀಲನಾದ್ದರಿಂದ, "ಸಂಧ್ಯಾತ" ನೆಂದು ಅಭಿಧಾನ.

**(೨೦)** **ವಿಜ್ಞಾನ**-ನಾಮಕ ಋಜುವು ೨೦ನೆಯ ಕಲ್ಪದ ಋಜುಪದಸ್ಥನು, ನಿತ್ಯಾಪರೋಕ್ಷಿಯಾಗಿರುವುದರಿಂದ "ವಿಜ್ಞಾನ"-ವೆಂದು ಹೆಸರು.

**(೨೧)** **ಮಹವಿಜ್ಞಾನ**-ಎಂಬ ಹೆಸರಿನ ಋಜುವು ೨೧ನೆಯ ಕಲ್ಪದ ಋಜುವು. ದೇವತೆಗಳೆಲ್ಲಾ ಅಧಿಕನಾದ್ದರಿಂದ "ಮಹವಿಜ್ಞಾನ"-ಎಂದು ಅಭಿಧಾನ.

**(೨೨)** **ಕೀರ್ತನ**-ಹೆಸರಿನ ಋಜುವು ೨೨ನೆಯ ಕಲ್ಪದವನು. ನಿತ್ಯ ಶ್ರೀಹರಿಯ ಸಂಸ್ಮರಣಯುಕ್ತನಾದ್ದರಿಂದ ಈ ಹೆಸರು.

**(೨೩)** **ಸಂಕೀರ್ಣಾಖ್ಯ**- ೨೩ನೆಯ ಕಲ್ಪದ ಋಜುಪದಸ್ಥನು. ಬ್ರಹ್ಮಾಂಡದಲ್ಲಿ ಸರ್ವತ್ರ ಕೂಡಿರುವುದರಿಂದ, (ವ್ಯಾಪ್ತ)-ಋಜುವಿಗೆ- "ಸಂಕೀರ್ಣ"ನೆಂದು ಹೆಸರು.

(೨೪) **ಕತ್ಥ**-೧೨೪ನೆಯ ಕಲ್ಪದ ಋಜು. ಸ್ವಬಲವನ್ನು ನಿರೂಪಣ ಮಾಡುವುದರಿಂದ, "ಕತ್ಥ"-ಎಂತ ನಾಮ. ಈ ಸ್ವಶ್ಲಾಘನೆ ದೋಷವಿಲ್ಲ. "ಸಹಸ್ರಗುಣಮಪ್ಯೇ ತತ್ತ್ವಯ ಸಂಭಾವಯಾಮ್ಯಹಂ"-ಎಂಬ ಗೀತಾ ಚಾರ್ಯನ ವಚನವು ಇದಕ್ಕೆ ಆಧಾರವು.

(೨೫) **ಮಹಾಬುದ್ಧ**-ಮುಂದಿನ (೧೨೫) ಋಜು. ತತ್ತ್ವದಲ್ಲಿ ಸಂಶಯರಹಿತನು. ಇದರಿಂದ "ಮಹಾಬುದ್ಧ"- ಎಂದು ನಾಮ.

(೨೬) **ಜಯ**-ಉತ್ಕರ್ಷನಾಮಕನು. ೧೨೬ನೆಯ ಕಲ್ಪದ ಋಜು.

(೨೭) **ಸುಮಹತ್ತರ**-ಸರ್ವಜೀವೋತ್ತಮನಾದ್ದರಿಂದ, ಈ ಹೆಸರಿನ ೧೨೭ನೆಯ ಕಲ್ಪದ ಋಜುಪದಸ್ಥನು.

(೨೮) **ಸುವೀರ್ಯನೆ**- ಅತ್ಯಂತ ಬಲಶಾಲಿಯಾದ್ದರಿಂದ "ಸುವೀ ರ್ಯ"ನೆಂಬ ನಾಮ. ಈತನು ೧೨೮ನೆಯ ಬ್ರಹ್ಮಕಲ್ಪದ ಋಜುಪದಸ್ಥನು.

(೨೯) **ಮೇಧಾವಿ**- ೧೨೯ನೆಯ ಕಲ್ಪದ ಋಜು. ಉತ್ಕೃಷ್ಟಧಾರಣ ಶಕ್ತಿಉಳ್ಳವನಾದ್ದರಿಂದ, "ಮೇಧಾವಿ". ಎಂತ ಹೆಸರು.

(೩೦) **ವಿಜಯನಾಮಕ**- ಋಜುವು ೧೩೦ನೆಯ ಕಲ್ಪದ ಋಜು ಪದಸ್ಥನು.

(೩೧) **ರಂತಿಮನ್ (ರಂತಿಮಾನ್)**- "ರಂ"- ಎಂಬ ಅಗ್ನಿಬೀಜ ವಾಚ್ಯತ್ವವಿರುವುದರಿಂದ, ಈ ಹೆಸರು-೧೩೧ನೆಯ ಕಲ್ಪ.

> "ರಂ ತಿಷ್ಠತ್ಯಸ್ಮಿನ್ನಿತಿ ರಂತಿರ್ವ್ಯರಾಗ್ನಿಃ ।
> ಸ ಅಸ್ಯಾಸ್ತೀತಿ ರಂತಿಮಾನ್" ॥
> ಅಂಗುಷ್ಠ ಪರಿಮಾಣದ ಜಠರಾಗ್ನಿಧಾರಕರಾಗಿರುವುದರಿಂದ,
> ರಂತಿಮಾನ್-ಎಂಬ ನಾಮಧೇಯ.

(೩೨) **ಮನು**- ೧೩೨ನೆಯ ಕಲ್ಪದ ಋಜುವಿನ ನಾಮ. ಜ್ಞಾನ ರೂಪನಾದ್ದರಿಂದ, "ಮನು" ನಾಮಕನು. ॥೨೪॥

## ಪದ್ಯ-೨೫

**ಮೂಲ :**

**ಪಾಹಿ ಮೋದ ಪ್ರಮೋದ ಸಂತಸ ।**
**ಪಾಹಿ ಆನಂದ ಸಂತುಷ್ಟನೆ ।**
**ಪಾಹಿ ಮಾಂ ಚಾರ್ವಾಂಗ ಚಾರು ಸುಬಾಹು ಚಾರುಪದ ॥**
**ಪಾಹಿ ಪಾಹಿ ಸುಲೋಚನನೆ ಮಾಂ ।**
**ಪಾಹಿ ಸಾರಸ್ವತ ಸುವೀರ್ಯನೆ ।**
**ಪಾಹಿ ಪ್ರಾಜ್ಞನೆ ಕಪಿಯಲಂಪಟ ಪಾಹಿ ಸರ್ವಜ್ಞ ॥೨೫॥**

**ಅವತರಣಿಕೆ :**

ಋಜುಗಳ ಮಂಗಳ ನಾಮಗಳ ವಿಷಯವನ್ನೇ ಮುಂದುವರಿಸುತ್ತಾರೆ.
॥೨೫॥

**ಪ್ರತಿಪದಾರ್ಥ**

**ಮೋದ**—ಮೋದ-ನಾಮಕನಾದ ಋಜುವೇ, **ಪಾಹಿ**—ಸಂರಕ್ಷಿಸು. **ಪ್ರಮೋದ**—ಪ್ರಮೋದನಾಮಕನೇ, **ಸಂತಸ**—ಸಂತಸ ಎಂಬ ಹೆಸರಿನ ಋಜುವೇ, **ಆನಂದ**—ಆನಂದನಾಮಕನೇ, **ಪಾಹಿ**—ರಕ್ಷಿಸು. **ಸಂತುಷ್ಟನೆ** ಸಂತುಷ್ಟಾಭಿಧನೇ, **ಚಾರ್ವಾಂಗ**—ಚಾರ್ವಾಂಗ-ನಾಮಕನೇ, **ಮಾಂ ಪಾಹಿ** —ನನ್ನನ್ನು (ನಮ್ಮನ್ನು) ಕಾಪಾಡು. **ಚಾರು**—ಚಾರು-ಎಂಬ ಹೆಸರಿನ ಋಜುವೇ, **ಸುಬಾಹು**—ಸುಬಾಹುನಾಮಕನೇ, **ಚಾರುಪದ**—ಚಾರುಪದ ನಾಮಾಭಿಧೇಯನೇ, **ಪಾಹಿ**—ಸಲಹು. **ಸುಲೋಚನನೆ**—ಸುಲೋಚನ ನಾಮಕನೇ, **ಪಾಹಿ**—ಸಂರಕ್ಷಿಸು. **ಸಾರಸ್ವತ**—ಸಾರಸ್ವತ-ನಾಮಕನೇ, **ಪಾಹಿ**—ಸಲಹು. **ಸುವೀರನೆ**—ಸುವೀರ-ಎಂಬ ಹೆಸರಿನ ಋಜುವೇ, **ಪ್ರಾಜ್ಞನೆ**—ಪ್ರಾಜ್ಞ-ನಾಮಕನೇ, **ಪಾಹಿ**—ಕಾಪಾಡು. **ಕಪಿಯು**—ಕಪಿ-

ನಾಮಕನೇ, **ಅಲಂಪಟ**—ಅಲಂಪಟ-ಎಂಬ ಹೆಸರಿನ ಋಜುವೇ, **ಪಾಹಿ**— ಸಂರಕ್ಷಿಸು. **ಸರ್ವಜ್ಞ**—ಸರ್ವಜ್ಞ-ನಾಮಕನೇ, ನಮ್ಮನ್ನು ಸಂರಕ್ಷಿಸು. ॥೨೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ನಾಮಗಳೇ ಹೇಳುತ್ತಾರೆ.

ಮೋದನಾಮಕನೇ ಸಂರಕ್ಷಣ ಮಾಡು. ಪ್ರಮೋದನಾಮಕನೇ, ಸಂತಸ ಎಂಬುವನೇ. ಸಂರಕ್ಷಣೆ ಮಾಡು. ಆನಂದನಾಮಕನೇ, ಸಂತುಷ್ಟನೇ, ನನ್ನ ಸಂರಕ್ಷಣೆ ಮಾಡು. ಚಾರ್ವಾಂಗನಾಮಕನೇ, ಚಾರು ಎಂಬುವನೇ, ಸುಬಾಹು ಎಂಬವನೇ, ಚಾರುಪದ ಎಂಬುವನೇ, ಸುಲೋಚನ ಎಂಬುವನೇ- ಸಂರಕ್ಷಣ ಮಾಡು. ಸಾರಸ್ವತ ಎಂಬವನೇ, ನನ್ನ ಸಂರಕ್ಷಣ ಮಾಡು. ಸುಧೀರ ಎಂಬುವನೇ, ಪ್ರಾಜ್ಞ ಎಂಬುವನೇ, ಕಪಿನಾಮಕನೇ, ಅಲಂಪಟ ಎಂಬವನೇ, ಸರ್ವಜ್ಞ ಎಂಬವನೇ-ಸಂರಕ್ಷಣ ಮಾಡು. ॥೨೫॥

### ೨. ಭಾವಪ್ರಕಾಶಿಕೆ

ಯಾವಾಗಲೂ ಆನಂದಪಡುತ್ತಿರುವುದರಿಂದ, ಮೋದನೆಂದು ೩೩ನೆಯ ಹೆಸರು. ಪ್ರಮೋದ ೩೪ನೆಯ ಹೆಸರು. ಸತ್ವಗುಣಪ್ರಧಾನರಾದುದರಿಂದ, ಸಂತನೆಂದು ೩೫ನೆಯ ಹೆಸರು. ಆನಂದನೆಂದು ೩೬ನೆಯ ಹೆಸರು. ಸಂತುಷ್ಟ ೩೭ನೆಯ ಹೆಸರು. ಮನೋಹರವಾದ ಅಂಗಉಳ್ಳವನಾದುದರಿಂದ, ಚಾರ್ವಾಂಗನೆಂದು ೩೮ನೆಯ ಹೆಸರು. ಮನೋಹರವಾದ ಬಾಹುಉಳ್ಳವನಾದುದರಿಂದ ಚಾರುಬಾಹು ೩೯ನೆಯ ಹೆಸರು. ಚಾರುಪದ ೪೦ನೆಯ ಹೆಸರು. ದಿವ್ಯಜ್ಞಾನದೃಷ್ಟಿಉಳ್ಳವರಾದುದರಿಂದ, ಸುಲೋಚನ ೪೧ನೆಯ ಹೆಸರು. ಸಾರಸ್ವತನೆಂದರೆ, ಸಕಲಶ್ರುತಿಗಳಲ್ಲಿ ಯಥಾರ್ಥಜ್ಞಾನಉಳ್ಳವರೆಂದರ್ಥ. ೪೨ನೆಯ

ಹೆಸರು. ಸುವೀರ-೪೩ನೆಯ ಹೆಸರು. ಪ್ರಾಜ್ಞ-೪೪ನೆಯ ಹೆಸರು. ಸುಖವನ್ನೇ ಅನುಭವಿಸುವುದರಿಂದ, ಕಪಿ, ಕಂ ಎಂದರೆ ಸುಖ. ಅದನ್ನು ಪಾನ ಮಾಡುವುದೆಂದರೆ ಅನುಭವಿಸುವುದೆಂದರ್ಥ. ಆದ್ದರಿಂದ, ಕಪಿ, ಎಂದು ೪೫ನೆಯ ಹೆಸರು. ವಿಷಯಾಸಕ್ತಿಯನ್ನು ಬಿಟ್ಟವರಾದುದರಿಂದ, ಅಲಂಪಟ ೪೬ನೆಯ ಹೆಸರು. ಸರ್ವಜ್ಞ-೪೭ನೆಯ ಹೆಸರು. ||೩೫||

## ಪದ್ಯ-೩೫

### ೧. ಭಾವದರ್ಪಣ

ಪಾಹಿ ವೋದ ||೩೫||

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಈ ಪದ್ಯದ ವ್ಯಾಖ್ಯಾನವನ್ನು ೨೪ನೇ ಪದ್ಯದ ಜೊತೆಯಲ್ಲೇ ಕೊಟ್ಟಿದೆ. ||೩೫||

## ಪದ್ಯ-೩೬

### ೧. ಭಾವದರ್ಪಣ

ಪಾಹಿ ಮಾಂ || ೩೬ ||

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಈ ಪದ್ಯದ ವ್ಯಾಖ್ಯಾನವನ್ನು ೨೪ನೇ ಪದ್ಯದ ಜೊತೆಯಲ್ಲೇ ಕೊಟ್ಟಿದೆ. ||೩೬||

## ಪದ್ಯ-೩೭

### ೧. ಭಾವದರ್ಪಣ

ಪಾಹಿ ಪ್ರಾಣ ||೩೭||

**೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ**

ಈ ಪದ್ಯದ ವ್ಯಾಖ್ಯಾನವನ್ನು ೨೪ನೇ ಪದ್ಯದ ಜೊತೆಯಲ್ಲೇ ಕೊಟ್ಟಿದೆ.

## ಪದ್ಯ–೨೮

**೩. ಭಾವದರ್ಪಣ**

ಪಾಹಿ ಪಾಹಿ ॥ ೨೮ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

ಈ ಪದ್ಯದ ವ್ಯಾಖ್ಯಾನವನ್ನು ೨೪ನೇ ಪದ್ಯದ ಜೊತೆಯಲ್ಲೇ ಕೊಟ್ಟಿದೆ.
॥೨೮॥

## ಪದ್ಯ–೨೯

**೩. ಭಾವದರ್ಪಣ**

ಪಾಹಿ ಸೇವ್ಯ ॥ ೨೯ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

ಈ ಪದ್ಯದ ವ್ಯಾಖ್ಯಾನವನ್ನು ೨೪ನೇ ಪದ್ಯದ ಜೊತೆಯಲ್ಲೇ ಕೊಟ್ಟಿದೆ.
॥೨೯॥

**೫. ಶ್ರೀಗುರುಹೃದಯ ಪ್ರಕಾಶಿಕೆ**

ಐಹಿಕ ಸುಖಪ್ರದನಾದ್ದರಿಂದ, ಮೋದನಾಮಕನೆ, ಪಾಂ ಪಾಹಿ. ಪರ ಲೋಕಸುಖಪ್ರದನಾದ್ದರಿಂದ, ಪ್ರಮೋದನಾಮಕನೇ, ಸ್ವಸ್ಥಚಿತ್ತನಾದ್ದರಿಂದ, ಸಂತಪ- ಎಂದು ಹೆಸರುಳ್ಳವನೇ, ಸರ್ವಜೀವರಿಗಿಂತ ಅಧಿಕಾನಂದನಾದ್ದರಿಂದ, ಆನಂದನಾಮಕನೇ, ಇತರಾಪೇಕ್ಷೆ ಇಲ್ಲದೆ ಇರುವನಾದ್ದರಿಂದ, ಸಂತುಷ್ಟ ನಾಮಕನೇ, ಅತಿಮನೋಹರವಾದ ಅವಯವ ಉಳ್ಳವನಾದ್ದರಿಂದ, ಚಾರ್ವಾಗಂ

ನಾಮಕನೇ, ಮನೋಹರ ಸಲ್ಲಕ್ಷಣಪಾದವುಳ್ಳವನೇ, ಸುಲಕ್ಷಣನೇತ್ರ ಉಳ್ಳವನೇ, ಪಾಹಿ ಮಾಂ ಪಾಹಿ, ಸರಸ್ವತೀ ಎಂಬ ಸರ್ವವೇದ ಜ್ಞಾನವುಳ್ಳವನಾದ್ದರಿಂದ, ಸಾರಸ್ವತನಾಮನೇ, ಮಾಂ ಪಾಹಿ. ಅರಬ್ಧಾಂತಗಾಮಿಯಾದ್ದರಿಂದ, ಸುವೀರನೆ. ಪ್ರಜ್ಞೆ ಎಂಬ ತತ್ತ್ವಜ್ಞಾನ ಸುಖಪಾನವುಳ್ಳವನಾದ್ದರಿಂದ, ಪ್ರಾಜ್ಞಕಪಿ ಎಂದು ಹೆಸರುಳ್ಳವನೆ, ವಿಷಯ ಚಾಪಲ್ಯರಹಿತನಾದ್ದರಿಂದ, ಅಲಂಪಟನೆಂದು ಹೆಸರುಳ್ಳವನೇ ಪಾಹಿ. ಆಲೋಚನೆಯಿಂದ ಸರ್ವ ಜಗದ್ಜ್ಞಾನ ಇರುವವನಾದ್ದರಿಂದ, ಸರ್ವಜ್ಞನಾಮಕನೆ. ॥೨೫॥

## ಸರ್ವವ್ಯಾಖ್ಯಾನಸಾರ ಸಂಗ್ರಹ

(೩೩) **ಪಾಹಿಮೋದ**–ಮೋದನಾಮಕನೇ, ನಮ್ಮನ್ನು ಸಂರಕ್ಷಿಸು ಐಹಿಕ ಸುಖಪ್ರದನು. ೧೩೩ನೆಯ ಕಲ್ಪದ ಋಜು.

(೩೪) **ಪ್ರಮೋದ**-ಪ್ರಮೋದ-ಎಂಬ ಹೆಸರಿನ ಋಜುವೇ ರಕ್ಷಿಸು. ಪರಲೋಕಸುಖಪ್ರದನಾದ್ದರಿಂದ, ಈ ನಾಮ ೧೩೪ನೆಯ ಕಲ್ಪದವನು.

(೩೫) **ಸಂತತ**–ಸಂತತ-ನಾಮಕನೇ ಸಲಹು. ಸ್ವಚ್ಛಚಿತ್ತನಾದ್ದರಿಂದ ಈ ಹೆಸರು.

(೩೬) **ಪಾಹಿ ಆನಂದ**– ಆನಂದಾಭಿಧ ಋಜುವೇ–ಕಾಪಾಡು. ಸರ್ವಜೀವರಿಗಿಂತ ಅಧಿಕವಾದ ಆನಂದವುಳ್ಳವನು. ೧೩೬ನೆಯ ಕಲ್ಪ.

(೩೭) **ಸಂತುಷ್ಟನೆ**– ಸಂತುಷ್ಟನಾಮಕನೇ ಸಂರಕ್ಷಿಸು. ಇತರಾಪೇಕ್ಷಾರಹಿತನು. ೧೭೭ನೆಯ ಕಲ್ಪ.

(೩೮) **ಚಾರ್ವಾಂಗ**-ಚಾರ್ವಾಂಗ-ಎಂಬ ಹೆಸರಿನ ಋಜುವೇ ರಕ್ಷಿಸು. ಅತಿಮನೋಹರವಾದ ಅವಯುವಗಳುಳ್ಳವನು. ೧೩೮ನೆಯ ಕಲ್ಪದ ಋಜು ಪದಸ್ಥನು.

(೩೯) **ಚಾರು**–ಚಾರು-ನಾಮಕನೇ ಸಲಹು. ಮನೋಹರವಾದ ಲಕ್ಷಣಗಳಿಂದ ಯುಕ್ತನು. ೧೩೯ನೆಯ ಕಲ್ಪ.

(೪೦) **ಸುಬಾಹು**–ಸುಬಾಹು–ಎಂಬ ನಾಮಾಭಿಧನೇ, ಸಂರಕ್ಷಿಸು. ಅಧಿಕವಾದ ಬಾಹುಬಲವುಳ್ಳವನು. ೧೪೦ನೆಯ ಕಲ್ಪ.

(೪೧) **ಚಾರುಪದ**–ಚಾರುಪದ–ನಾಮಕನೇ, ರಕ್ಷಿಸು. ಭವ್ಯಸಲ್ಲಕ್ಷಣ ಪಾದಗಳುಳ್ಳವನು. ೧೪೧ನೆಯ ಕಲ್ಪದಲ್ಲಿ ಋಜುಪದವಿಗೆ ಬರುವವನು.

(೪೨) **ಪಾಹಿ ಸುಲೋಚನನೆ** – ಸುಲೋಚನ–ಎಂಬ ಹೆಸರಿನ ಋಜುವೇ, ಕಾಪಾಡು. ಸುಲಕ್ಷಣನೇತ್ರವುಳ್ಳವನಾದ್ದರಿಂದ, ಈ ಹೆಸರು. ೧೪೨ನೆಯ ಬ್ರಹ್ಮಕಲ್ಪ.

(೪೩) **ಮಾಂ ಪಾಹಿ ಸಾರಸ್ವತ**–ಸಾರಸ್ವತ–ನಾಮಕನೇ, ಸಂರಕ್ಷಿಸು. ಸರ್ವವೇದಗಳ ಜ್ಞಾನಯುಕ್ತನು. ೧೪೩ನೆಯ ಕಲ್ಪದ ಋಜುಪದಸ್ಥ.

(೪೪) **ಸುವೀರನೆ** – ಸುವೀರ– ಎಂಬ ನಾಮವುಳ್ಳ ಋಜುವೇ ಕಾಪಾಡು. ಆರಬ್ಧಾಂತರ್ಗಾಮಿಯಾದ್ದರಿಂದ, ಈ ನಾಮ. ೧೪೪ನೆಯ ಕಲ್ಪದ ಋಜುಪದವಿ.

(೪೫) **ಪಾಹಿ ಪ್ರಾಜ್ಞನೆ**– ಪ್ರಾಜ್ಞ–ನಾಮಕನೇ, ಸಲಹು. ತತ್ತ್ವಜ್ಞಾನಯುಕ್ತನಾದ್ದರಿಂದ. ೧೪೫ನೆಯ ಕಲ್ಪ.

(೪೬) **ಕಪಿ**– ಕಪಿ–ಎಂಬ ಹೆಸರಿನ ಋಜುವೇ, ನನ್ನನ್ನು ಪಾಹಿ. ತತ್ತ್ವಜ್ಞಾನಸುಖಪಾನವುಳ್ಳವನಾದ್ದರಿಂದ- ೧೪೬ನೆಯ ಕಲ್ಪದ ಋಜುಪದಸ್ಥನ ಹೆಸರು.

(೪೭) **ಅಲಂಪಟ**– ಅಲಂಪಟ– ನಾಮಕನೇ, ರಕ್ಷಿಸು. ವಿಷಯಚಾಪಲ್ಯರಹಿತನು. ೧೪೭ನೆಯ ಕಲ್ಪ.

(೪೮) **ಪಾಹಿ ಸರ್ವಜ್ಞ** – ಸರ್ವಜ್ಞ -ನಾಮಕನೇ, ಸಂರಕ್ಷಿಸು ಆಲೋಚನೆಯಿಂದ ಸರ್ವಜಗದ್ವ್ಯಾಪಾರವುಳ್ಳವನು೧೪೮ನೆಯ ಕಲ್ಪದ ಋಜು. ॥೨೫॥

(೪೯) **ಸರ್ವಜಿತ್-**

ಸರ್ವಜಿತ್-ಎಂಬುದು ೧೪೯ನೆಯ ಬ್ರಹ್ಮಕಲ್ಪದಲ್ಲಿ ಋಜು ಪದವಿಯ ಹೆಸರು. ಈ ಬ್ರಹ್ಮಾಂಡಗತ ಸರ್ವಜೀವರನ್ನು ಗೆದ್ದವನಾದ್ದರಿಂದ, "ಸರ್ವಜಿತ್"- ಎಂಬ ನಾಮ.

(೫೦) **ಮಿತ್ರನೆ-**

ಆಪದ್ರಕ್ಷಕನಾದ್ದರಿಂದ, ೧೫೦ನೆಯ ಕಲ್ಪದ ಋಜುಪದಸ್ಥನಿಗೆ "ಮಿತ್ರ"- ಎಂದು ಹೆಸರು.

(೫೧) **ಪಾಪವಿನಾಶಕನೆ-**

೧೫೧ನೆಯ ಕಲ್ಪದ ಋಜುವಿಗೆ- "ಪಾಪವಿನಾಶಕ"-ನೆಂಬ ನಾಮ. ಜ್ಞಾನಿಗಳ ಪಾಪಗಳನ್ನು ನಾಶಮಾಡುವನಾದ್ದರಿಂದ, "ಪಾಪವಿನಾಶಕ"- ನಾಮಕನು.

(೫೨) **ಧರ್ಮವಿನೇತ-**

ವಿಶೇಷರೂಪವಾದ ಧರ್ಮವನ್ನು ಸಜ್ಜನರಿಗೆ ಉಪದೇಶ ಮಾಡುವುದರಿಂದ, ೧೫೨ನೆಯ. ಬ್ರಹ್ಮಕಲ್ಪದ ಋಜುಪದಸ್ಥನಿಗೆ ಈ ಹೆಸರು.

(೫೩) **ಶಾರದ-**

೧೫೩ನೆಯ ಬ್ರಹ್ಮಕಲ್ಪದ ಋಜುವು ಕುಶಲಬುದ್ಧಿಯನ್ನುಳ್ಳವನಾದ್ದರಿಂದಲೂ, "ಶಂ ಆರಂ"- ಎಂಬ ಬಾಹ್ಯ ಸುಖದುಃಖದ ಬಂಧನವನ್ನು ಬಿಡಿಸಿ, ಮಂಗಳಪ್ರದನಾದ್ದರಿಂದಲೂ- "ಶಾರದ" ನಾಮಕನಾಗಿದ್ದಾನೆ.

(೫೪) **ಓಜ-**

ಹಿಡಿಯುವ ಶಕ್ತನಾದ್ದರಿಂದ, ೧೫೪ನೆಯ ಬ್ರಹ್ಮಕಲ್ಪದ ಋಜುವಿಗೆ "ಓಜ"- ಎಂತ ಹೆಸರು.

(೫೫) **ಸುತಪಸ್ವೀ–**

೧೫೫ನೆಯ ಕಲ್ಪದ ಋಜುಪದಸ್ಥನು ಜ್ಞಾನಸಿದ್ಧನಾಗಿರುವುದರಿಂದಲೂ, ತಪಸ್ವಿಯಾಗಿರುವುದರಿಂದಲೂ, "ಸುತಪಸ್ವೀ"-ನಾಮಕನಾಗಿದ್ದಾನೆ.

(೫೬) **ತೇಜಸ್ವೀ–**

ಬ್ರಹ್ಮವರ್ಚಸ್ಸಿನಿಂದ ಬೆಳಗುವವನಾದ್ದರಿಂದ, "ತೇಜಸ್ವೀ"– ನಾಮಕ ಋಜುವು ೧೫೬ನೆಯ ಕಲ್ಪದ ಋಜುಪದಸ್ಥನು.

(೫೭) **ದಾನಸುಶೀಲ–**

ಸರ್ವಜೀವರಿಗೂ (ತ್ರಿವಿಧ) ಅವರವರ ಗತಿಪ್ರದನಾಗಿರುವುದರಿಂದ, "ದಾನಸುಶೀಲ"ನೆಂದು ೧೫೭ನೆಯ ಋಜುಪದಸ್ಥನಿಗೆ ಹೆಸರು.

(೫೮) **ಯಜ್ಞಸುಕರ್ತ–**

೧೫೮ನೆಯ ಕಲ್ಪದ ಋಜುವು "ಯಜ್ಞಸುಕರ್ತ"ನೆಂದು ಕರೆಯಿಸುತ್ತಾನೆ. ಭಜನೀಯನಾದ್ದರಿಂದಲೂ, ಸರ್ವಕಾರ್ಯನಿವಾಹಕನಾಗಿರುವುದರಿಂದಲೂ, ಈ ಹೆಸರು.

(೫೯) **ಯಜ್ವೀ–**

ಸರ್ವಕರ್ಮಗಳನ್ನೂ ಯಾಗರೂಪದಿಂದ ಶ್ರೀಹರಿಗೆ ಅರ್ಪಿಸುವುದರಿಂದ, "ಯಜ್ವೀ"ನಾಮಕನು. ಈತನು ೧೫೯ನೆಯ ಕಲ್ಪದ ಋಜುಪದಸ್ಥನು.

(೬೦) **ಯಾಗವರ್ತಕನೇ–**

ಸರ್ವರಿಂದಲೂ ದೇವತಾರಾಧನಾರೂಪವಾದ ಕರ್ಮವನ್ನು ಮಾಡಿಸುವುದರಿಂದ, "ಯಾಗವರ್ತಕ"–ನಾಮಕನಾದ ಋಜುವು ೧೬೦ನೆಯ ಕಲ್ಪದವನು.

ಹೀಗೆ, ಋಜುಗಳ ಮಂಗಳನಾಮಸಂಸ್ಮರಣೆಯಿಂದ, ಆ ಋಜುಗಳು ನಮ್ಮನ್ನು ಸದಾ ಸಂರಕ್ಷಿಸಲೆಂದು ಪ್ರಾರ್ಥಿಸುತ್ತಾರೆ– ದಾಸರಾಯರು. ॥೨೫॥

## ಪದ್ಯ-೨೬

**ಮೂಲ :**

**ಪಾಹಿ ಮಾಂ ಸರ್ವಜಿತ್ ಮಿತ್ರನೆ।**
**ಪಾಹಿ ಪಾಪವಿನಾಶಕನೆ ಮಾಂ।**
**ಪಾಹಿ ಧರ್ಮವಿನೇತ ಶಾರದ ಓಜ ಸುತಪಸ್ವೀ ॥**
**ಪಾಹಿ ಮಾಂ ತೇಜಸ್ವಿ ನಮೋ ಮಾಂ।**
**ಪಾಹಿ ದಾನಸುಶೀಲ ನಮೋ ಮಾಂ।**
**ಪಾಹಿ ಯಜ್ಞಸುಕರ್ತ ಯಜ್ವೀ ಯಾಗವರ್ತಕನೇ ॥೨೬॥**

**ಅವತರಣಿಕೆ :**

**ಸರ್ವಜಿತ್**—ಸರ್ವಜಿತ್-ನಾಮಕನೇ, **ಮಾಂ ಪಾಹಿ**—ನನ್ನನ್ನು ಸಂರಕ್ಷಿಸು. **ಮಿತ್ರನೆ**—ಮಿತ್ರನಾಮಕನೇ, **ಪಾಹಿ**—ರಕ್ಷಿಸು, **ಪಾಪವಿನಾಶಕನೇ ಮಾಂ ಪಾಹಿ**—ಪಾಪವಿನಾಶಕ-ಎಂಬ ಹೆಸರಿನ ಋಜುವೇ, ನನ್ನನ್ನು ಸಲಹು. **ಧರ್ಮವಿನೇತ**—ಧರ್ಮವಿನೇತ ನಾಮಕನೇ, **ಶಾರದ**—ಶಾರದ-ಎಂಬ ಹೆಸರಿನ ಋಜುಪದಸ್ಥನೇ, **ಓಜ**—ಓಜನಾಮಕನೇ, **ಸುತಪಸ್ವೀ**—ಸುತಪಸ್ವೀ-ಎಂಬ ಹೆಸರಿನ ಋಜುವೇ, **ತೇಜಸ್ವಿ ಪಾಹಿ ಮಾಂ**—ತೇಜಸ್ವಿ ನಾಮಕನೇ ನನ್ನನ್ನು ಕಾಪಾಡು. **ದಾನಸುಶೀಲ**—ದಾನಸುಶೀಲ-ನಾಮಕನೇ, **ನಮೋ ಮಾಂ ಪಾಹಿ**—ನಿನಗೆ ನಮನವು, ನನ್ನನ್ನು ರಕ್ಷಿಸು. **ಯಜ್ಞಸುಕರ್ತ**— ಯಜ್ಞಸುಕರ್ತನಾಮಕನೇ, **ಪಾಹಿ**— ಕಾಪಾಡು, **ಯಜ್ವೀ**—ಯಜ್ವೀ-ಎಂಬ ಹೆಸರಿನ ಋಜುಪದಸ್ಥನೇ, **ಯಾಗವರ್ತಕನೇ**-ಯಾಗವರ್ತಕ ನಾಮಕನೇ, **ನಮೋ ಪಾಹಿ**-ನಿನಗೆ ನಮಸ್ಕಾರವು. ನಮ್ಮನ್ನು **ಸಂರಕ್ಷಿಸು.** ॥೨೬॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ನಾಮಗಳೇ ಹೇಳತಾರೆ.

ಸರ್ವಜಿತ್- ಎಂಬವನೇ ನನ್ನ ರಕ್ಷಿಸು. ಮಿತ್ರನೆಂಬವನೇ, ಪಾಪ ವಿನಾಶಕನೆಂಬವನೇ, ರಕ್ಷಿಸು. ಧರ್ಮವಿನೀತನೆಂಬವನೇ, ನನ್ನ ರಕ್ಷಿಸು. ಶಾರದ ನಾಮಕನೇ, ಓಜನಾಮಕನೇ, ಸುತಪಸ್ವಿ- ಎಂಬುವನೇ, ತೇಜಸ್ವಿ- ಎಂಬವನೇ, ನಮಃ ನನ್ನ ರಕ್ಷಿಸು. ದಾನಸುಶೀಲ- ಎಂಬವನೇ, ನನ್ನ ರಕ್ಷಿಸು. ಯಜ್ಞ ಸುಕರ್ತ-ಎಂಬವನೇ ನಮಃ ನನ್ನ ರಕ್ಷಿಸು. ಯಜ್ವೀನಾಮಕನೇ, ಯಾಗ ವರ್ತಕನೆಂಬವನೇ. ॥೨೬॥

## ೨. ಭಾವಪ್ರಕಾಶಿಕೆ

ಸರ್ವಜಿತ್, ಜಗತ್ತನ್ನು ಜಯಿಸುವರೆಂದರ್ಥ. ೪೮ನೆಯ ಹೆಸರು ಜಗನ್ಮಿತ್ರನಾದುದರಿಂದ ಮಿತ್ರ–೪೯ನೆಯ ಹೆಸರು. ಪಾಪವಿನಾಶಕ–೫೦ನೆಯ ಹಸರು. ಸದಾ ಧರ್ಮರತರಾದುದರಿಂದ, ಧರ್ಮ–೫೧ನೆಯ ಹೆಸರು. ವಿನೀತ–೫೨ನೆಯ ಹೆಸರು. ಶತ್ರುಗಳಿಗೆ ಹಿಂಸೆಯನ್ನು ಕೊಡುವುದರಿಂದ ಶಾರದ–೫೩ನೆಯ ಹೆಸರು. ಓಜಸ್ವಿ–೫೪ನೆಯ ಹೆಸರು. ತಪಸ್ವಿ-೫೫ನೆಯ ಹೆಸರು. ತೇಜಸ್ವಿ–೫೬ನೆಯ ಹೆಸರು. ದಾನಶೀಲನಾದುದರಿಂದ, ದಾನ–೫೭ನೆಯ ಹೆಸರು. ಸುಶೀಲ–೫೮ನೆಯ ಹೆಸರು. ಯಜ್ಞ-೫೯ನೆಯ ಹೆಸರು. ಕರ್ತ– ೬೦ನೆಯ ಹೆಸರು. ಯಜ್ವೀ- ೬೧ನೆಯ ಹೆಸರು. ಯಾಗವರ್ತಕ– ೬೨ನೆಯ ಹೆಸರು. ॥೨೬॥

## ೩. ಶ್ರೀಗುರುಹೃದಯ ಪ್ರಕಾಶಿಕೆ

ಈ ಬ್ರಹ್ಮಾಂಡಾಂತರ್ಗತ ಸರ್ವಜೀವರನ್ನು ಗೆದ್ದದ್ದರಿಂದ, ಸರ್ವಜಿತ್ತು ನಾಮಕನೇ, ಅಪ್ರದಕ್ಷಕನಾದ್ದರಿಂದ, ಮಿತ್ರನಾಮಕನೇ, ಮಾಂ ಪಾಹಿ. ಪಾಪ

ಪರಿಹರಿಸುವನೇ, ಧರ್ಮನಿಯಾಮಕನೇ, ಮಾಂ ಪಾಹಿ. ಕುಶಲಬುದ್ಧಿಯಾದ್ದರಿಂದಲೂ, ಶಂ ಅಶಂ-ಎಂಬ ಬಾಹ್ಯಸುಖದುಃಖಬಂಧವನ್ನು, ದ್ಯತಿ-ಅಂದರೆ, ಖಂಡಿಸಿ, ಪರಿಹರಿಸುವುದರಿಂದಲೂ, ಸಹ ಶಾರದ ನಾಮಕನೇ. ಅವಷ್ಟಭ-ಎಂಬ ಬಿಗಿದುಡಿಯುವ ಶಕ್ತನಾದ್ದರಿಂದ, ಓಜೋನಾಮಕನೇ, ಜ್ಞಾನಸಿಥಿಯಾದ್ದರಿಂದ, ತಪಸ್ವೀ-ಎನಿಸಿಕೊಳ್ಳುವನೇ, ಶೌರ್ಯ ಇರುವುದರಿಂದ ತೇಜಸ್ವೀ-ಎಂದು ಹೆಸರುಳ್ಳವನೇ, ಸರ್ವಜೀವರಿಗೂ ತತ್ತದ್ಯೋಗ್ಯಗತಿ ಕೊಡುವದ್ದರಿಂದ, ದಾನಸುಶೀಲ ನಾಮಕನೇ, ಮಾಂ ಪಾಹಿ. ಭಜನೀಯನಾದ್ದರಿಂದ, ಯಜ್ಞನಾಮಕನೇ, ಕಾರ್ಯ ನಿರ್ವಾಹಕನಾದ್ದರಿಂದ, ಸುಕರ್ತನಾಮಕನೇ, ದೇವರನ್ನೇ ಕುರಿತು ಭಜಿಸುವದ್ದರಿಂದ, ಯಜ್ವೀ-ಎಂದು ಹೆಸರುಳ್ಳವನೇ, ಸರ್ವರಿಂದಲೂ ದೇವರಾಧನೆ ಮಾಡಿಸುವದರಿಂದ, ಯಾಗವರ್ತಕನಾಮನೇ ಮಾಂ ಪಾಹಿ. ॥೨೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. **ಸರ್ವಜಿತ್–**

ಈ ಬ್ರಹ್ಮಾಂಡಗತ ಸರ್ವಜೀವರನ್ನು ಗೆದ್ದವನಾದ್ದರಿಂದ. **ಸರ್ವಜಿತ್ ನಾಮಕನೇ**– ನನ್ನನ್ನು ರಕ್ಷಿಸು. ಇದು ೪೯ನೆಯ ಋಜುಪದಸ್ಥನ ಹೆಸರು.

೨. **ಮಿತ್ರನೆ-**

ಆಪದ್ರಕ್ಷಕನಾದ್ದರಿಂದ, **ಮಿತ್ರನಾಮಕನು**– ೫೦ನೆಯ ಋಜು ಪದಸ್ಥನು.

೩. **ಪಾಪವಿನಾಶಕನೇ–**

೫೧ನೆಯ ಋಜುಪದಸ್ಥನಿಗೆ–ಪಾಪವಿನಾಶಕನೆಂದು ಹೆಸರು. ಜ್ಞಾನಿಗಳ ಪಾಪಗಳನ್ನು ನಾಶಮಾಡುವವನು.

೪. **ಧರ್ಮವಿನೇತ–**

ವಿಶೇಷಾಕಾರವಾದ ಧರ್ಮವನ್ನು ಉಪದೇಶಮಾಡುವವನಾದ್ದರಿಂದ,

**ಧರ್ಮವಿಶೀತ** ನಾಮಕ ಋಜುವು ೫೭೨ನೆಯ ಪದಸ್ಥನು. (ಧರ್ಮ ನಿಯಾಮಕನು)

**೫. ಶಾರದ–**

"ಶಂ ಅರಂ"– ಎಂಬ ಬಾಹ್ಯಸುಖ ದುಃಖ ಬಂಧನವನ್ನು ಖಂಡಿಸಿ, ಸಜ್ಜನರಿಗೆ ಮಂಗಳವನ್ನು ಕೊಡುವವನಾದ್ದರಿಂದ, **ಶಾರದನಾಮಕನು** ೫೭೩ನೆಯ ಋಜುಪದಸ್ಥನು.

**೬. ಓಜ-**

೫೭೪ನೆಯ ಋಜುಪದಸ್ಥನ ಹೆಸರು. **ಓಜ–ಎಂದು** ಹಿಡಿಯುವ ಶಕ ನಾದ್ದರಿಂದ, ಓಜನಾಮಕನು "ಅವಷ್ಟಂಭ"-ಎಂಬ ಬಿಗಿದು ಹಿಡಿಯುವ ಶಕ್ತನು.

**೭. ಸುತಪಸ್ವೀ–**

ಜ್ಞಾನಸಿದ್ಧನಾದುದರಿಂದಲೂ, ಮಹಾತಪಸ್ವೀಯಾದುದರಿಂದಲೂ, **ಸುತಪಸ್ವೀ**—ನಾಮಕ ಋಜುವು ೫೭೫ನೆಯ ಪದಾರ್ಹನು.

**೮. ತೇಜಸ್ವೀ–**

ಪರಮಶೌರ್ಯಯುಕ್ತನಾದ್ದರಿಂದ, **ತೇಜಸ್ವೀ**—ನಾಮಕ ಋಜುವು ೫೭೬ನೆಯ ಪದಸ್ಥನು. (ಶೌರ್ಯತಪಸ್ವಿಯು)

**೯. ದಾನಸುಶೀಲ-**

ಸರ್ವರಿಗೂ ಅವರವರ ಯೋಗ್ಯತೆ ಕೊಡುವವನಾದ್ದರಿಂದ-**ದಾನ ಸುಶೀಲನಾಮಕ** ೫೭೭ನೆಯ ಪದಸ್ಥ ಋಜುವಿನನಾಮ.

**೧೦. ಯಜ್ಞಸುಕರ್ತನೆ–**

ಸಜ್ಜನರಿಂದ ಭಜನೀಯನು. ಸಕಲ ಕಾರ್ಯನಿರ್ವಾಹಕನೂ ಆದ್ದರಿಂದ, **ಯಜ್ಞ ಸುಕರ್ತ-ನಾಮಕನು**.೫೭೮ನೆಯ ಋಜು ಪದವಿಯ ಹೆಸರು,

### ೧೧ ಯಜ್ವೀ-

ಯಜ್ವೀ-ಎಂಬುದು ೫೯ನೆಯ ಪದಸ್ಥನ ಹೆಸರು. ಸರ್ವಕರ್ಮಗಳನ್ನು ಯಾಗರೂಪವಾಗಿ ಶ್ರೀಹರಿಗೆ ಅರ್ಪಿಸುವುದರಿಂದ-**ಯಜ್ವೀನಾಮಕನು.** (ಯಜ್-ಯಜ್ಞ-ಯಾಗ)

### ೧೨ ಯಾಗವರ್ತಕನೀ-

ಸರ್ವರಿಂದಲೂ ದೇವತಾರಾಧನೆ ಮಾಡಿಸುವುದರಿಂದ, **ಯಾಗವರ್ತಕ-** ನಾಮಕ ಋಜುವು ೬೦ನೆಯ ಕಲ್ಪದವನು.

ಇಂತು ಪ್ರಸಕ್ತಪದ್ಯದಲ್ಲಿ ಸರ್ವಜಿತ್‌ನಾಮಕ ಋಜುವಿನಿಂದ ಆರಂಭಿಸಿ, **ಯಾಗವರ್ತಕ ನಾಮಕ ಋಜುಪದಸ್ಥನ** ಪರ್ಯಂತ ೪೯ ರಿಂದ ೬೦ ಯಜು ಪದವಿಗಳ ಹೆಸರುಗಳನ್ನು ದಾಸರಾಯರು ಕ್ರಮವಾಗಿ ತಿಳಿಸುತ್ತಾರೆ ಇಂತಹ ನಾಮವಿಶೇಷಗಳುಳ್ಳ ಋಜುಗಳೇ ನಮ್ಮನ್ನು ಸಲಹಿ. ಸಂರಕ್ಷಿಸಿ- ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತಾರೆ. ॥೨೬॥

## ಪದ್ಯ-೨೭

**ಮೂಲ :-**

**ಪಾಹಿ ಪ್ರಾಣ ತ್ರಾಣ ಅಮರ್ಷಿ ।**
**ಪಾಹಿ ಮಾಂ ಉಪದೇಷ್ಟ ಮಾರಕ ।**
**ಪಾಹಿ ಕಾಲಕ್ರೀಡನ ಸುಕರ್ತಾ ಸುಕಾಲಜ್ಞ ॥**
**ಪಾಹಿ ಕಾಲಸುಸೂಚಕನೆ ಮಾಂ ।**
**ಪಾಹಿ ಕಲಿಸಂಹರ್ತ ಕಲಿ ಮಾಂ ।**
**ಪಾಹಿ ಕಾಲ ಶ್ಯಾಮರೇತ ಸದಾರತ ಸುಬಲನೆ ॥೨೭॥**

**ಅವತರಣಿಕೆ :**

ಮುಂದಿನ ಬ್ರಹ್ಮಕಲ್ಪದ ಋಜುಪದಸ್ಥರ ಮಂಗಳನಾಮಗಳನ್ನೇ ಹೇಳುತ್ತಾರೆ. ॥೨೭॥

**ಪ್ರತಿಪದಾರ್ಥ :**

**ಪ್ರಾಣ**–ಪ್ರಾಣ-ನಾಮಕನೇ, **ಪಾಹಿ**–ಸಂರಕ್ಷಿಸು. **ತ್ರಾಣ**–ತ್ರಾಣ-ಎಂಬ ಹೆಸರಿನ ಋಜುವೇ, **ಅಮರ್ಷಿ**–ಅಮರ್ಷಿ-ಎಂಬ ಋಜುಪದಸ್ಥನೇ, **ಮಾಂ ಪಾಹಿ**—ನನ್ನನ್ನು ಕಾಪಾಡು. **ಉಪದೇಷ್ಟ**—ಉಪದೇಷ್ಟ-ನಾಮಕನೇ, **ಮಾರಕ**—ಮಾರಕ ಎಂಬ ಹೆಸರಿನ ಋಜುವೇ, **ಪಾಹಿ**—ಕಾಪಾಡು. **ಕಾಲಕ್ರೀಡನ**—ಕಾಲಕ್ರೀಡನ-ನಾಮಕನೇ, **ಸುಕರ್ತಾ**— ಸುಕರ್ತ-ಎಂಬ ಹೆಸರಿನ ಋಜುಪದಸ್ಥನೇ, **ಸುಕಾಲಜ್ಞ**—ಸುಕಾಲಜ್ಞ-ನಾಮಕನೇ, **ಪಾಹಿ**—ಸಂರಕ್ಷಿಸು, **ಕಾಲಸೂಚಕನೇ**—ಕಾಲಸೂಚಕನೆಂಬ ಹೆಸರಿನ ಋಜುವೇ, **ಮಾಂ ಪಾಹಿ**–ನನ್ನನ್ನು ಸಲಹು. **ಕಲಿಸಂಹರ್ತ**–ಕಲಿಸಂಹರ್ತ-ನಾಮಕನೇ, **ಕಲಿ**–ಕಲಿ ಎಂಬ ಹೆಸರಿನ ಋಜುವೇ, **ಮಾಂ ಪಾಹಿ**–ನನ್ನನ್ನು ಸಂರಕ್ಷಿಸು. **ಶ್ಯಾಮರೇತ**—ಶ್ಯಾಮರೇತನಾಮಕನೇ, **ಕಾಲ**–ಕಾಲ–ಎಂಬ ಹೆಸರಿನ ಋಜುವೇ, **ಸದಾರತ**—ಸದಾರತ-ನಾಮಕನೇ, **ಸುಚಲನೆ**—ಸುಚಲ–ಎಂಬ ಋಜುಪದಸ್ಥನೇ, ನಮ್ಮನ್ನು ಸಂರಕ್ಷಿಸು. ॥೨೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪ್ರಾಣ-ಎಂಬುವನೇ, ಸಂರಕ್ಷಣಮಾಡು. ತ್ರಾಣ-ಎಂಬವನೇ, ಅಮರ್ಷಿ-ಎಂಬವನೇ, ಉಪದೇಷ್ಟ-ಎಂಬವನೇ ನನ್ನ ಸಂರಕ್ಷಿಸು. ಮಾರಕ-ಎಂಬುವನೇ, ಕಾಲಕ್ರೀಡನ-ಎಂಬವನೇ, ಸಂರಕ್ಷಿಸು. ಸುಕರ್ತ-ಎಂಬವನೇ, ಸುಕಾಲಜ್ಞ ಎಂಬುವನಲ್ಲಿ ಕಾಲಸುಸೂಚಕ- ಎಂಬುವನೇ ಸಂರಕ್ಷಿಸು. ಕಲಿಸಂಹರ್ತಾ-ಎಂಬವನೇ, ನನ್ನ ರಕ್ಷಿಸು. ಕಲಿನಾಮಕ, ನನ್ನ ರಕ್ಷಿಸು. ಕಾಲ-ಎಂಬುವನೇ, ಶ್ಯಾಮರೇತಾ ಎಂಬವನೇ, ಸದಾರತ-ಎಂಬುವನೇ, ಸುಚಲ-ಎಂಬುವನೇ, ನನ್ನ ರಕ್ಷಿಸು. ॥೨೭॥

### ೨. ಭಾವಪ್ರಕಾಶಿಕೆ

ಪ್ರಾಣ ೬೩ನೆಯ ಹೆಸರು. ಮಹಾಶಕ್ತಿಯುಳ್ಳವರಾದುದರಿಂದ, ತ್ರಾಣನೆಂದು ೬೪ನೆಯ ಹೆಸರು. ಶತ್ರುಗಳಲ್ಲಿ ಕೋಪಉಳ್ಳವರಾದುದರಿಂದ, ಅಮರ್ಷಿ ಎಂದು ೬೫ನೆಯ ಹೆಸರು. ಉಪದೇಷ್ಟಾ ಲೋಕಗುರು ೬೬ನೆಯ ಹೆಸರು. ಕಾಲಕ್ರೀಡನ ಕಾಲಾನುಸಾರವಾಗಿ ಕ್ರೀಡಿಸುವನು ೬೮ನೆಯ ಹೆಸರು. ಸುಕರ್ತಾ-ಸತ್ಕಾರ್ಯಮಾಡಿಸುವವನು ೬೯ನೆಯ ಹೆಸರು. ಸುಕಾಲಜ್ಞ ಕಾಲಲಕ್ಷಣಗಳನ್ನು ಚೆನ್ನಾಗಿ ತಿಳಿದವನು ೭೦ನೆಯ ಹೆಸರು. ಕಾಲಸೂಚಕ ಕಾಲನಾಮಕ ಪರಮಾತ್ಮನನ್ನು ಜನರಿಗೆ ತಿಳಿಸುವನು-೭೧ನೆಯ ಹೆಸರು. ಕಲೀಸಂಹರ್ತ-೭೨ನೆಯ ಹೆಸರು. ಕಲೀಕಾಲಜ್ಞಾನಉಳ್ಳವನು. "ಕಲಾಅಸ್ಮಿನ್ನಸ್ತೀತಿಕಲೀ"-೭೩ನೆಯ ಹೆಸರು. ಕಾಲ-೭೪ನೆಯ ಹೆಸರು. ಶ್ಯಾಮರೇತ-೭೫ನೆಯ ಹೆಸರು. ಸದಾರತ-ಸುಖಮಯನು.೭೬ನೆಯ ಹೆಸರು. ಸುಬಲ-೭೭ನೆಯ ಹೆಸರು. ಪಾಹಿ. ॥೨೭॥

### ೩. ಶ್ರೀಗುರುಹೃದಯ ಪ್ರಕಾಶಿಕೆ

ಅನ-ಚೇಷ್ಟಾಯಾಂ-ಎಂಬ ಧಾತುವಿನಿಂದ, ವಿಶಿಷ್ಟಚೇಷ್ಟಾಪ್ರದನಾದ್ದರಿಂದ, ಪ್ರಾಣನಾಮಕನೇ, ಸ್ವಾಧೀನಜೀವರನ್ನು ರಕ್ಷಿಸುವುದರಿಂದ, ತ್ರಾಣನಾಮಕನೇ, ದೇವರದ್ವೇಷಿಗಳಲ್ಲಿ ಸದಾಕೋಪವುಳ್ಳವನಾದ್ದರಿಂದ, ಅಮರ್ಷಿ-ಎಂದು ಹೆಸರುಳ್ಳವನೇ, ಸನ್ಮುಕ್ತಿಯೋಗ್ಯರಿಗೆಲ್ಲ ಜ್ಞಾನೋಪದೇಶಕನೇ, ಸರ್ವದೇಹಿಗಳ ಆಯುಃಪೂರ್ತಿಕಾಲ ತಿಳಿದು, ಹಂಸಮಂತ್ರಜಪ ನಿಲ್ಲಿಸುವುದರಿಂದ, ಸರ್ವಮಾರಕನೆಂಬ ನಾಮವುಳ್ಳವನೇ, ಕಾಲಾಭಿಮಾನಿಯಾದ್ದರಿಂದ ಕಾಲನಾಮಕನೇ, ಜಗತ್ತನ್ನ ಆಟವಾಡಿಸುವುದರಿಂದ, ಕ್ರೀಡನ-ಎಂದು ಹೆಸರುಳ್ಳವನೇ, ಸಜ್ಜನಸ್ವಾಮಿಯಾದ್ದರಿಂದ, ಸುಕರ್ತನೆಂದು ಹೆಸರುಳ್ಳವನೇ, ಸಕಲಜೀವರಿಗೂ ಜ್ಞಾನಕೊಡುವುದರಿಂದ, ಸಕಲಜ್ಞನಾಮಕನೇ, ಕಿವಿ ಮುಚ್ಚಿಕೊಂಡರೆ, ಕೇಳುವ ಪ್ರಾಣಘೋಷವನ್ನು ಮರಣಕಾಲದಲ್ಲಿ ಕೇಳದ ಹಾಗೆ ಮಾಡಿ, ಮೃತ್ಯು ಸೂಚಿಸುವುದರಿಂದ, ಕಾಲಸುಸೂಚಕನೆಂದು ಹೆಸರುಳ್ಳವನೇ, ಕಲಿಯನ್ನು ಸಂಹರಿಸುವವನೇ, ದುಷ್ಟರನ್ನು ಬಂಧಿಸುವುದರಿಂದಲೂ, ಅವರಲ್ಲಿ ಕಲಹವುಳ್ಳನಾದ್ದ

ರಿಂದ ಸಹ ಕಲಿನಾಮಕನೇ, **ಕಲಿ–ಬಂಧನೇ**—ಎಂಬ ಧಾತುವಿನಿಂದಲೂ **ಕಲದ್ರವಣೇ**–ಎಂಬ ಧಾತುವಿನಿಂದಲೂ, ದುರ್ಜಪರಾಜಯಕರ್ತನಾದ್ದರಿಂದ, ಕಾಲನಾಮಕನೇ,— **ಶಮೋಮನ್ನಿಷ್ಠತಾಬುದ್ಧಿಃ**— ಎಂಬ ಭಾಗವತವಚನ ದಿಂದ, ಶಮ-ಎಂಬ ದೇವರ ಭಕ್ತ್ಯತಿಶಯವಂತನಾದ್ದರಿಂದ, ಶ್ಯಾಮನೆಂದು, ಹೆಸರುಳ್ಳವನೇ, ಸರ್ವಸ್ನೇಹಿತನಾದ್ದರಿಂದ, ರತ–ಎಂಬ ದೇವರು ಮುಖ್ಯಾಧಿಷ್ಠಾನವಾದ್ದರಿಂದ, ರೇತೋನಾಮಕನೇ– ಅಥವಾ

> **ಯದಾತ್ವಮಭಿವರ್ಷಸ್ಯಥಮಾಃ ಪ್ರಾಣತೇ ಪ್ರಜಾಃ।**
> **ಆನಂದರೂಪಾಸ್ತಿಷ್ಠಂತಿ।**

ಎಂಬ ಶ್ರುತಿಯಿಂದ, **ದೇವಾನಾಂ ರೇತೋವೈವೃಷ್ಟೀ**–ಶ್ರುತಿಯಿಂದಲೂ, ರೇತಸ್ಸೆಂಬ ದೃಷ್ಟಿಯನ್ನುಂಟುಮಾಡುವುವರಿಂದ, ರೇತೋನಾಮಕನೇ, ಸದಾ ಸರ್ವತ್ರ ಸನ್ನಿತನಾಗಿ ಸದಾರತನೆಂದು ಹೆಸರುಳ್ಳವನೇ, ಸಜ್ಜನರಿಗೆ ಬಲಪ್ರದ ದಾದ್ದರಿಂದ ಸುಬಲನಾಮಕನೇ– ನಮೋನಮಃ. ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ

೬೧. "ಅನ—ಚೇಷ್ಟಾಯಾಂ-ಎಂಬ ಧಾತುವಿನರೀತ್ಯಾ, ವಿಶಿಷ್ಟ ಚೇಷ್ಟಾಪ್ರವರ್ತಕನಾದ್ದರಿಂದ, ೧೬೧ನೆಯಕಲ್ಪದ ಋಜುಪದಸ್ಥನಿಗೆ **ಪ್ರಾಣ**— ಎಂದು ಹೆಸರು.

೬೨. ೧೬೨ನೆಯ ಕಲ್ಪದ ಋಜುವಿಗೆ **ತ್ರಾಣ**—ಎಂಬ ನಾಮ. ಸ್ವಾಧೀನಜೀವರನ್ನು ರಕ್ಷಿಸುವುದರಿಂದ–ತ್ರಾಣ ಎಂದು ಹೆಸರು.

೬೩. ದೈವದ್ವೇಷಿಗಳಲ್ಲಿ ಸದಾಕೋಪವುಳ್ಳವನಾದ್ದರಿಂದ, ೧೬೩ನೆಯ ಪದದ ಋಜುವಿಗೆ **ಅಮರ್ಷಿ**—ಎಂದು ಹೆಸರು.

೬೪. ಮುಂದಿನ ಪದದ ಋಜುವು **ಉಪದೇಷ್ಟ**—ನಾಮಕನು. ಸನ್ಮುಕ್ತಿಯೋಗ್ಯ ಜೀವರಿಗೆಲ್ಲಾ ಜ್ಞಾನೋಪದೇಶನಾದ್ದರಿಂದ, ಈ ಅಭಿಧಾನ

**೬೫.** ಸರ್ವದೇಹಿಗಳ ಆಯುಃಪ್ರಮಾಣವನ್ನು ತಿಳಿದು, ಹಂಸಮಂತ್ರ ನಿಸುವುದರಿಂದ, ೧೬೫ನೆಯ ಕಲ್ಪದ ಋಜುಪದಸ್ಥನಿಗೆ **ಮಾರಕ**—ಎಂದು ಹೆಸರು.

**೬೬. ಕಾಲಕ್ರೀಡನ—**

೧೬೬ನೆಯ ಋಜುವಿಗೆ **ಕಾಲಕ್ರೀಡನ**—ಎಂತ ಹೆಸರು. ಕಾಲಾಭಿಮಾನಿಯಾಗಿ, ಜಗತ್ತನ್ನು ಆಟವಾಡಿಸುವುದರಿಂದ, ಈ ನಾಮಾಭಿಧೇಯ.

**೬೭. ಸುಕರ್ತ**

ಸಜ್ಜನರಿಂದ ಒಳ್ಳೇಕಾರ್ಯಗಳನ್ನು ಮಾಡಿಸುವುದರಿಂದ, ಮುಂದಿನ ಋಜುಪದಸ್ಥನಿಗೆ-**ಸುಕರ್ತ**—ಎಂದು ಹೆಸರು.

**೬೮. ಸುಕಾಲಜ್ಞ**

೧೬೮ನೆಯ ಬ್ರಹ್ಮಕಲ್ಪದ ಋಜುವಿಗೆ **ಸುಕಾಲಜ್ಞ**—ಎಂದು ಹೆಸರು. ಸುಕಾಲವುಳ್ಳ ಸಜ್ಜನರಿಗೆ ತಿಳಿಸುವುದರಿಂದ, ಆ ಋಜುವಿಗೆ ಈ ಹೆಸರು.

**೬೯. ಕಾಲಸೂಚಕ**

ಮುಂದಿನ ಋಜುಪದಸ್ಥನಿಗೆ **ಕಾಲಸುಸೂಚಕ**—ಎಂದು ಹೆಸರು, ಕಿವಿ ಮುಚ್ಚಿಕೊಂಡರೆ ಕೇಳುವ ಪ್ರಾಣಘೋಷವನ್ನು ಮರಣಕಾಲದಲ್ಲಿ ಕೇಳದ ಹಾಗೆ ಮಾಡಿ, ಮೃತ್ಯುಸೂಚಕನಾದ್ದರಿಂದ ಈ ಹೆಸರು.

**೭೦. ಕಲಿಸಂಹರ್ತ**

೧೭೦ನೆಯ ಬ್ರಹ್ಮಕಲ್ಪದ ಋಜುಪದಸ್ಥನಿಗೆ **ಕಲಿಸಂಹರ್ತ**—ನೆಂದು ಹೆಸರು. ಅಜ್ಞಾನವನ್ನು. ದೈತ್ಯರನ್ನು, ಕಲಿಯನ್ನು ಸಂಹರಿಸುವನಾದ್ದರಿಂದ ಆ ಋಜುವಿಗೆ ಈ ಹೆಸರು.

**೭೧. ಕಲಿ**

"ಕಲಿ-ಬಂಧನೇ"—ಎಂಬ ಧಾತುವಿನರೀತ್ಯಾ, ದುಷ್ಟರನ್ನು ಬಂಧಿಸುವುದರಿಂದ, ಮುಂದಿನ ಋಜುವಿಗೆ **ಕಲಿ**—ಎಂತ ನಾಮ.

**೭೨. ಕಾಲ**

೧೭೨ನೆಯ ಋಜುಪದಸ್ಥನಿಗೆ ಈ ಹೆಸರು. "ಕಲದ್ರವಣೇ"—

ಎಂಬ ಧಾತುವಿನಿಂದ ದುರ್ಜನರನ್ನು ಪರಾಜಯಗೊಳಿಸುವವನಾದ್ದರಿಂದ, **ಕಾಲನಾಮಕನೇ.**

**೬೨. ಶ್ಯಾಮರೇತ**

"ಶಮೋ ಮನ್ನಿಷ್ಠತಾ ಬುದ್ಧಿ:-ಎಂಬ ಶ್ರೀ ಮದ್ಭಾಗವತವಚನದಿಂದ, ಶ್ರೀಹರಿಯಲ್ಲಿ ಅತಿಶಯಭಕ್ತಿಯುಳ್ಳವನಾದ್ದರಿಂದಲೂ, ಸರ್ವನಿಷ್ಟಹಿತನಾದ್ದರಿಂದಲೂ, "ರೇತ"—ಎಂಬ ಪರಮಾತ್ಮನ ಮುಖ್ಯಾಧಿಷ್ಠಾನನಾದ್ದರಿಂದಲೂ, **"ಶ್ಯಾಮರೇತ"**- ನಾಮಕನೇ-೧೬೩ನೆಯ ಕಲ್ಪದ ಋಜುಪದಸ್ಥನನಾಮ.

**೬೪. ಸದಾರತ**

ಸರ್ವಕಾಲಗಳಲ್ಲಿಯೂ ಶ್ರೀಪರಮಾತ್ಮನಲ್ಲಿ ಆಸಕ್ತನಾದ್ದರಿಂದ, **ಸದಾರತ**–ನಾಮಕನಾದ ೧೬೪ನೆಯ ಋಜುಪದಸ್ಥನೇ.

**೬೫. ಸುಚಲ**

ಸಜ್ಜನರಿಗೆ ಬಲಪ್ರದನಾದ್ದರಿಂದ, ೧೬೫ನೆಯಕಲ್ಪದ ಋಜುಪದಸ್ಥನಿಗೆ ಹೆಸರು.

## ಪದ್ಯ–೨೮

**ಮೂಲ :**

**ಪಾಹಿ ಪಾಹಿ ಸಹೋ ಸದಾಕಪಿ ।**
**ಪಾಹಿ ಗಮ್ಯಜ್ಞಾನ ದಶಕುಲ ।**
**ಪಾಹಿ ಮಾಂ ಶ್ರೋತವ್ಯ ನಮೋ ಸಂಕೀರ್ತವ್ಯ ನಮೋ ॥**
**ಪಾಹಿ ಮಾಂ ಮಂತವ್ಯ ಕವ್ಯನೆ ।**
**ಪಾಹಿ ಮಾಂ ದ್ರಷ್ಟವ್ಯ ಸಖ್ಯನೆ ।**
**ಪಾಹಿ ಮಾಂ ಗಂತವ್ಯ ಕ್ರವ್ಯನೇ ಪಾಹಿ ಸ್ಮರ್ತವ್ಯ ॥೨೮॥**

**ಅವತರಣಿಕೆ :**

ಮುಂದಿನ ಕಲ್ಪಗಳ ಋಜುಪದಸ್ಥರ ಮಂಗಳನಾಮಗಳನ್ನು ಮುಂದು ವರಿಸುತ್ತಾರೆ. ॥೨೮॥

**ಪ್ರತಿಪದಾರ್ಥ :**

**ಸಹೋ**–ಸಹೋನಾಮಕನೇ, **ಪಾಹಿ ಪಾಹಿ**-ಸಂರಕ್ಷಿಸು ಸಂರಕ್ಷಿಸು. **ಸದಾಕಪಿ**-ಸದಾಕಪಿ-ಎಂಬ ಹೆಸರಿನ ಋಜುವೇ, **ಪಾಹಿ**-ರಕ್ಷಿಸು. **ಗವ್ಯ**–ಗವ್ಯನಾಯಕನೇ. **ಜ್ಞಾನ**-ಎಂಬ ಹೆಸರಿನ ಋಜುಪದಸ್ಥನೇ, **ದಶಕುಲ** ದಶಕುಲ-ನಾಮಕನೇ, **ಪಾಹಿಮಾಂ**-ನನ್ನನ್ನು ಕಾಪಾಡು. **ಶ್ರೋತವ್ಯ** ಶ್ರೋತವ್ಯ-ಎಂಬ ಹೆಸರಿನ ಋಜುವೇ, **ನಮೋ**–ನಿನಗೆ ನಮನವು. **ಸಂಕೀರ್ತವ್ಯ ನಮೋ**–ಸಂಕೀರ್ತವ್ಯ—ಎಂಬ ಹೆಸರಿನ ಪದಸ್ಥಋಜುವೇ, ನಿನಗೆ ನಮಸ್ಕಾರವು. **ಮಂತವ್ಯ**–ಮಂತವ್ಯ-ನಾಮಕನೇ, **ಪಾಹಿ ಮಾಂ**. ನನ್ನನ್ನು ಸಲಹು. **ಕವ್ಯನೇ**–ಕವ್ಯನಾಮಕ ಋಜುವೇ, ನನ್ನನ್ನು ಸಂರಕ್ಷಿಸು. **ದ್ರಷ್ಟವ್ಯ**–ದ್ರಷ್ಟವ್ಯ–ನಾಮಕನೇ,– **ಪಾಹಿಂ**–ನನ್ನನ್ನು ರಕ್ಷಿಸು. **ಸಖ್ಯನೇ**–ಸಖ್ಯ-ಎಂಬ ಹೆಸರಿನ ಋಜುಪದಸ್ಥನೇ, **ಗಂತವ್ಯ**–ಗಂತವ್ಯನಾಮಕನೇ, **ಪಾಹಿ ಮಾಂ**–ನನ್ನನ್ನು ಸಲಹು. **ಕ್ರವ್ಯನೆ**-ಕ್ರವ್ಯ-ಎಂಬ ಹೆಸರಿನ ಪದಸ್ಥ ಋಜುವೇ, **ಸ್ಮರ್ತವ್ಯ**-ಸ್ಮರ್ತವ್ಯ-ನಾಮಕನೇ, **ಪಾಹಿ**–ಸಂರಕ್ಷಿಸು. ॥೨೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ನಾಮವೇ ಹೇಳತಾರೆ.

ಸಹೋ-ಎಂಬುವನೇ ರಕ್ಷಿಸು ರಕ್ಷಿಸು. ಸದಾಕಪಿ-ಎಂಬುವನೇ, ಗವ್ಯ-ನಾಮಕನೇ, ರಕ್ಷಿಸು. ಜ್ಞಾನ-ಎಂಬುವನೇ ರಕ್ಷಿಸು. ದಶಕುಲನೆಂಬುವನೇ, ನಸ,

ರಕ್ಷಿಸು. ಶ್ರೋತವ್ಯ-ಎಂಬುವನೇ, ನಮಸ್ಕಾರವು. ಸಂಕೀರ್ತಿತವ್ಯ–ಎಂಬುವನೇ, ನಮಸ್ಕಾರವು. ಮಂತವ್ಯನಾಮಕನೇ, ನನ್ನ ರಕ್ಷಿಸು. ಕವ್ಯ-ಎಂಬವನೇ, ಸಂರಕ್ಷಣಮಾಡು. ದ್ರಷ್ಟವ್ಯನಾಮಕನೇ, ಸಖ್ಯ- ಎಂಬುವನೇ, ನಮಸ್ಕಾರವು. ಗಂತವ್ಯನಾಮಕನೇ, ನನ್ನ ರಕ್ಷಿಸು. ಕ್ರವ್ಯನಾಮಕನೇ, ಸ್ಮರ್ತವ್ಯ-ಎಂಬುವನೇ, ಸಂರಕ್ಷಣ ಮಾಡು. ॥೨೮॥

## ೨. ಭಾವಪ್ರಕಾಶಿಕೆ

ಸಹ-ಸಹನಶಕ್ತಿಯುಳ್ಳವನು. ೭೮ನೆಯ ಹೆಸರು. ಸದಾಕಪಿ-ಸರ್ವಕಾಲದಲ್ಲೂ "ಅಕಪೇರ್ದುಃಖಪೇಷಣತ್ವಾತ್"- ದುಃಖನಾಶಕನು. ೭೯ನೆಯ ಹೆಸರು. ಗಮ್ಯಜ್ಞಾನ-ಹೊಂದಲು ಯೋಗ್ಯವಾದಜ್ಞಾನಉಳ್ಳವನು. ೮೦ನೆಯ ಹೆಸರು. ದಶಕಲ–ದಶ-ಅನಂತವಾದ (ಪೂರ್ಣವಾದ) ಕಲ–ಜ್ಞಾನ ಉಳ್ಳವನು-೮೧ನೆಯ ಹೆಸರು. ಶ್ರೋತ್ರವ್ಯ– ಶ್ರವಣಕ್ಕೆ ಅರ್ಹವಾದ ಮಹಿಮೆಯುಳ್ಳವನು– ೮೨ನೆಯ ಹೆಸರು. ಸಂಕೀರ್ತಿತವ್ಯ– ೮೩ನೆಯ ಹೆಸರು. ಮಂತವ್ಯ-ಮನನಯೋಗ್ಯನು-೮೪ನೆಯ ಹೆಸರು. ಕವಿಗಳಿಂದ (ಜ್ಞಾನಿಗಳಿಂದ) ವರ್ಣಿಸಲು ಯೋಗ್ಯನಾದುದರಿಂದ, ಕವ್ಯ- ೮೫ನೆಯ ಹೆಸರು. ದ್ರಷ್ಟವ್ಯ-ನೋಡಲು ಯೋಗ್ಯನು. ೮೬ನೆಯ ಹೆಸರು. ಸಖ್ಯ-ಸಖ್ಯಕ್ಕೆ ಯೋಗ್ಯನು– ೮೭ನೆಯ ಹೆಸರು. ಗಂತವ್ಯ–ಹೊಂದಲು ಯೋಗ್ಯನು- ೮೮ನೆಯ ಹೆಸರು. ಕ್ರವ್ಯ-ಸೇವೆ ಮಾಡಿಸಿಕೊಳ್ಳಲುಯೋಗ್ಯನು. "ಕೃಕರಣೆ"- ೮೯ನೆಯ ಹೆಸರು. ಸ್ಮರ್ತವ್ಯ–ಸ್ಮರಣೆಮಾಡಲು ಯೋಗ್ಯನು-೯೦ನೆಯ ಹೆಸರು. ॥೨೮॥

## ೩. ಶ್ರೀಗುರುಹೃದಯ ಪ್ರಕಾಶಿಕೆ

ಭಕ್ತಾಪರಾಧಸಹಿಷ್ಣುನಾದ್ದರಿಂದ, ಸಹಃ- ಎಂದು ಹೆಸರುಳ್ಳವನೇ. ಸದಾ ಅಕ-ಎಂಬ ದುಃಖವನ್ನು ಪಿನಷ್ಟಿ-ಅಂದರೆ, ಪುಡಿಪುಡಿ ಮಾಡುವುದರಿಂದ, ಅಂದರೆ, ನಿರಂತರ ದುಃಖಪರಿಹಾರಕನಾದ್ದರಿಂದ, ಸದಾಕಪಿ-ಎಂದು ಹೆಸರುಳ್ಳವನೇ, ಸಜ್ಜನಪ್ರಾಪ್ಯನಾದುದರಿಂದ, ಗಮ್ಯನೆಂದು ಹೆಸರುಳ್ಳವನೇ, ಅಂತಜ್ಞಾನ ಪ್ರೇರಕನಾದ್ದರಿಂದ, ಜ್ಞಾನನಾಮಕನೇ, ದಶೇಂದ್ರಿಯವು ಮನೆಯಂತೆ ಅಧಿಷ್ಠಾನ

ವಾಗಿರುವುದರಿಂದ, ದಶಶಬ್ದೋಕ್ತ: ಸರ್ವವೂ ಅಧಿಷ್ಠಾನವಾದ್ದರಿಂದ, ದಶಕುಲನಾಮಕನೇ, ಶ್ರವಣೀಯನಾದ್ದರಿಂದ, ಶ್ರೋತವ್ಯ. ಎಂದು ಕೇಳತಕ್ಕವನೆಂದು ಹೆಸರುಳ್ಳವನೇ, ನಮೋ. ವಿಶೇಷಕೀರ್ತನೆ ಮಾಡಿಸಿಕೊಳ್ಳುವನೇ, ಮನಸ್ಸಿನಿಂದ ತಿಳಿಸಿಕೊಳ್ಳುವನೇ, ಕವನವೆಂಬ ವರ್ಣನೆಗೆ ಯೋಗ್ಯನಾದ್ದರಿಂದ, ಕವ್ಯನಾಮಕನೇ, ಮಾಂ ಪಾಹಿ. ದರ್ಶನ ಮಾಡಿಸಿಕೊಳ್ಳುವುದಕ್ಕೆ ಅರ್ಹನಾದ್ದರಿಂದ, ದ್ರಷ್ಟವ್ಯನೆಂದು ನೋಡಿಸಿಕೊಳ್ಳತಕ್ಕವನೆಂದು ಹೆಸರುಳ್ಳವನೇ, ಸಹಾಯಕನಾದವನೇ, ಗಮುನ್–ಗತೌ-ಎಂಬ ಧಾತುವಿನಿಂದ, ಚಲಾಚಲರೂಪ ಪ್ರತಿಮಾಧಿಷ್ಠಾನವಿಶೇಷ ಇದ್ದಲ್ಲಿಗೆ ನಡೆದು ಹೋಗಿ, ಪೊಂದಲು ಅರ್ಹನಾದ್ದರಿಂದ, ಗಂತವ್ಯನಾಮಕನೇ, ಕೃ-ಕರಣೇ-ಎಂಬ ಧಾತುವಿನಿಂದ, ಮಂತ್ರ ಜಪಾದಿ ಕ್ರಿಯಾದಿಂದ ಭಜನೀಯನಾದ್ದರಿಂದ, ಕ್ರವ್ಯನಾಮಕನೇ, ತದಶಕ್ತರಿಗೆ ಮನಸಾಸ್ಮರಣೆಗೆ ಸದಾ ವಿಷಯನಾದ್ದರಿಂದ, ಸ್ಮರ್ತವ್ಯನೆಂದು ನಾಮ ಉಳ್ಳವನೇ, ಮಾಂ ಪಾಹಿ ॥೨೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

**೭೬. ಸಹೋ**

ಭಕ್ತಾಪರಾಧಸಹಿಷ್ಣುವಾಗಿರುವುದರಿಂದ, ೧೭೬ನೆಯ ಕಲ್ಪದ ಋಜು ಪದಸ್ಥನಿಗೆ **ಸಹೋ**–ಎಂತನಾಮ.

**೭೭. ಸದಾಕಷಿ–**

ಅಕವೆಂಬ ದುಃಖವನ್ನು ಓನಷ್ಟಿ- ಕುಟ್ಟಿ ಪುಡಿಮಾಡುವುದರಿಂದ, ಮುಂದಿನ ಪದಸ್ಥ ಋಜುವಿಗೆ ಹೆಸರು–**ಸದಾಕಷಿ.**

(ಈ ಋಜುವಿನ ನಾಮ ಸ್ಮರಣೆಯಿಂದ ಸಕಲದುಃಖಗಳೂ ಚೂರ್ಣೀಕೃತವಾಗುವುವು).

**೭೮. ಗವ್ಯ–**

ಸಜ್ಜನರಿಂದ ಪ್ರಾಪ್ಯನಾದ್ದರಿಂದ, ೧೭೮ನೆಯ ಋಜುಪದಸ್ಥನು **ಗವ್ಯ**ನಾಮಕನು.

**೭೯. ಜ್ಞಾನ–**

ಜ್ಞಾನ-ನಾಮಕನಾದ ಋಜುವು ೧೭೯ನೆಯ ಬ್ರಹ್ಮಕಲ್ಪದ ಋಜುವು ಅಂತಃಜ್ಞಾನಪ್ರೇರಕನಾದ್ದರಿಂದ, ಈ ನಾಮಾಭಿಧೇಯ.

**೮೦. ದಶಕುಲ-**

ದೇಹಗತದಶೇಂದ್ರಿಯಗಳೂ ಮನೆಯಂತೆ ಅಧಿಷ್ಠಾನವುಳ್ಳವನಾದ್ದರಿಂದಲೂ, ದಶಶಬ್ದ-ವಾಚ್ಯಸರ್ವವೂ ಅಧಿಷ್ಠಾನವಾಗಿರುವುದರಿಂದಲೂ, ೧೮೦ನೆಯ ಬ್ರಹ್ಮಕಲ್ಪದ ಋಜುಪದಸ್ಥನಿಗೆ-**ದಶಕುಲ**-ಎಂಬ ನಾಮಾಂಕಿತವು.

**೮೧. ಶ್ರೋತವ್ಯ–**

ಸುಶಬ್ದಗಳನ್ನು ಕೇಳುವವನಾದ ಕಾರಣ-ಮುಂದಿನ ಕಲ್ಪದ ಋಜುವಿಗೆ **ಶ್ರೋತವ್ಯ**-ನೆಂದು ಹೆಸರು.

**೮೨. ಸಂಕೀರ್ತವ್ಯ**

ವಿಶೇಷವಾಗಿ ಸಂಕೀರ್ತನ ಮಾಡಿಸಿಕೊಳ್ಳುವವನಾದ್ದರಿಂದ, ೧೮೨ನೆಯ ಬ್ರಹ್ಮಕಲ್ಪದ ಋಜುವು–**ಸಂಕೀರ್ತವ್ಯ**-ನಾಮಕನು.

**೮೩. ಮಂತವ್ಯ**

ಮುಂದಿನ ೧೮೩ನೆಯಕಲ್ಪದ ಋಜುವಿನ ಹೆಸರು–**ಮಂತವ್ಯನೆಂದು**. ಮನಸ್ಸಿನಿಂದ ಧ್ಯೇಯವಸ್ತುವಾದ್ದರಿಂದ ಈ ಹೆಸರು.

**೮೪. ಕವ್ಯ–**

ಕವನವೆಂಬ ವರ್ಣನೆಗೆ ಯೋಗ್ಯನಾದ್ದರಿಂದ, ೧೮೪ನೆಯ ಬ್ರಹ್ಮಕಲ್ಪದ ಋಜು ಪದಸ್ಥನಿಗೆ-**ಕವ್ಯ**-ಎಂಬ ನಾಮ.

**೮೫. ದ್ರಷ್ಟವ್ಯ-**

ದರ್ಶನಮಾಡಿಸಿಕೊಳ್ಳುವುದಕ್ಕೆ ಯೋಗ್ಯನಾದ್ದರಿಂದ-**ದ್ರಷ್ಟವ್ಯ**-ನಾಮಕನು-೧೮೫ನೆಯ ಬ್ರಹ್ಮಕಲ್ಪದ ಋಜುಪದಸ್ಥನು.

**೮೬. ಸಖ್ಯ–**

"ಸರಗತೌ"-ಎಂಬ ಧಾತುವಿನರೀತ್ಯಾ. ಸರ-ಎಂದರೆ, ಅನುಸರಣೆ ಹೊಂದುವುದಕ್ಕೆ ಅರ್ಹನಾದ್ದರಿಂದ-**ಸಖ್ಯ**-ಎಂಬ ಹೆಸರಿನ ಋಜುವು ೧೮೬ನೆಯ ಋಜುಪದಸ್ಥನು.

**೮೭. ಗಂತವ್ಯ–**

"ಗಮಲ್ಯಗತೌ"-ಎಂಬ ಧಾತುವಿನಿಂದ, ಚಲಾಚಲರೂಪ ಪ್ರತಿಮಾಧಿಷ್ಠಾನ ವಿಶೇಷ ಇದ್ದಲ್ಲಿಗೆ, ನಡೆದು ಹೋಗಿ ಹೊಂದಲು ಅರ್ಹನಾದಕಾರಣ "**ಗಂತವ್ಯ**"ನೆಂಬ ೧೮೭ನೆಯ ಬ್ರಹ್ಮಕಲ್ಪದ ಋಜುಪದಸ್ಥನಿಗೆ ಹೆಸರು.

**೮೮. ಕ್ರವ್ಯ–**

"ಕೃ-ಕರಣೆ"-ಎಂಬ ಧಾತುವಿನಿಂದ ರೀತ್ಯಾ, ಮಂತ್ರ ಜಪಾದಿ ಕ್ರಿಯಾ ವಿಶೇಷಗಳಿಂದ ಭಜನೀಯನಾದಕಾರಣ, **ಕ್ರವ್ಯ**—ನೆಂದು ಮುಂದಿನ ಋಜ್ವಿನ ಹೆಸರು.

**೮೯. ಸ್ಮರ್ತವ್ಯ**

ಅಶಕ್ತರಿಗೆ ಮನಸಾಸ್ಮರಣೆಗೆ ಸದಾವಿಷಯನಾದಕಾರಣ **ಸ್ಮರ್ತವ್ಯ**—ನಾಮಕನೇ. ಈ ಋಜುವು ೧೮೯ನೆಯ ಬ್ರಹ್ಮಕಲ್ಪದಲ್ಲಿ ಋಜುಪದವಿಗೆ ಬರುವವನು. ॥೨೮॥

## ಪದ್ಯ-೨೯

**ಮೂಲ :-**

**ಪಾಹಿ ಸೇವ್ಯ ಸುಭವ್ಯ ನಮೋ ಮಾಂ ।**
**ಪಾಹಿ ಸ್ವರ್ಗವ್ಯ ನಮೋ ಭಾವ್ಯನೆ ।**
**ಪಾಹಿ ಮಾಂ ಜ್ಞಾತವ್ಯ ನಮೋ ವಕ್ತ್ರವ್ಯ ಗವ್ಯ ನಮೋ ॥**
**ಪಾಹಿ ಮಾಂ ಲಾತವ್ಯ ವಾಯುವೆ ।**
**ಪಾಹಿ ಬ್ರಹ್ಮ ಬ್ರಾಹ್ಮಣಪ್ರಿಯ ।**
**ಪಾಹಿ ಪಾಹಿ ಸರಸ್ವತೀಪತೆ ಜಗದ್ಗುರುವರ್ಯ ॥೨೯॥**

**ಅವತರಣಿಕೆ**

ಪ್ರಸಕ್ತಪದ್ಯದಿಂದ ಋಜುಗಳ ಶತನಾಮಾವಳಿಯನ್ನು ಮುಕ್ತಾಯ ಗೊಳಿಸುತ್ತಾರೆ. ॥೨೯॥

**ಪ್ರತಿಪದಾರ್ಥ**

**ಸೇವ್ಯ**—ಸೇವ್ಯನಾಮಕನೇ, **ಪಾಹಿ**-ಸಂರಕ್ಷಿಸು. **ಸುಭವ್ಯ**—ಸುಭವ್ಯ ನೆಂಬ ಹೆಸರಿನ ಋಜುಪದಸ್ಥನೇ, **ನಮೋ**—ನಿನಗೆ ನಮಸ್ಕಾರವು. **ಸ್ವರ್ಗವ್ಯ ಪಾಹಿ**—ಸ್ವರ್ಗವ್ಯ-ನಾಮಕನೇ ನನ್ನನ್ನು ರಕ್ಷಿಸು. **ಭಾವ್ಯನಮೋ**— ಭಾವ್ಯ ನಾಮಕನೇ, ನಿನಗೆ ನ ಮಸವು. **ಜ್ಞಾತವ್ಯ ಮಾಂ ಪಾಹಿ**-ಜ್ಞಾತವ್ಯ-ಎಂಬ ಹೆಸರಿನ ಋಜುಪದಸ್ಥನೇ. ನನ್ನನ್ನು ಕಾಪಾಡು. **ವಕ್ತ್ರವ್ಯ ನಮೋ**— ವಕ್ತ್ರವ್ಯನಾಮಕನೇ ನಿನಗೆ ನಮಸ್ಕಾರವು. **ಗವ್ಯ ನಮೋ**—ಗವ್ಯ-ನಾಮಕ ಋಜುವೇ, ನಿನಗೆ ಪ್ರಣಾಮಗಳು. **ಲಾತವ್ಯ**—ಲಾತವ್ಯನಾಮಕ ಋಜುವೆ. **ಮಾಂ ಪಾಹಿ**—ನನ್ನನ್ನು ಸಂರಕ್ಷಿಸು. **ವಾಯುವೆ ಪಾಹಿ**—ವಾಯುನಾಮಕ ಋಜುಪದಸ್ಥನೇ ನನ್ನನ್ನು ರಕ್ಷಿಸು. **ಬ್ರಹ್ಮ**—ಬ್ರಹ್ಮಪದಸ್ಥ ಋಜುವೇ, (ಕೊನೆಯ ಪದವಿ) **ಪಾಹಿ**—ಸಂರಕ್ಷಿಸು. **ಬ್ರಾಹ್ಮಣಪ್ರಿಯ**—ಬ್ರಾಹ್ಮಣರ ಪ್ರಿಯನೇ, **ಸರಸ್ವತೀಪತೇ**—ಸರಸ್ವತಿಯ ರಮಣನೇ, **ಜಗದ್ಗುರುವರ್ಯ**–

ಜಗತ್ತಿಗೇ ಶ್ರೇಷ್ಠಗುರುಸ್ಥಾನಾಪನ್ನನೇ, **ಪಾಹಿ ಪಾಹಿ**—ನಮ್ಮೆಲ್ಲರನ್ನು ಸಂರಕ್ಷಿಸು. ಸಂರಕ್ಷಣೆಂದು ಪ್ರಾರ್ಥಿಸುತ್ತಾರೆ. ॥೨೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅವಶಿಷ್ಟನಾಮಗಳನ್ನು ಹೇಳುತಾರೆ.

ಸವ್ಯ-ಎಂಬುವನೇ ರಕ್ಷಿಸು. ಸುಭವ್ಯ- ಎಂಬುವನೇ, ನಮಸ್ಕಾರ. ಸ್ವರ್ಗವ್ಯ-ಎಂಬುವನೇ, ನನ್ನ ರಕ್ಷಿಸು. ಭಾವ್ಯ, ಎಂಬುವನೇ, ನಮಸ್ಕಾರ. ಜ್ಞಾತವ್ಯ- ಎಂಬುವನೇ ಸಂರಕ್ಷಣಮಾಡು. ವಕ್ತವ್ಯ- ಎಂಬುವನೇ, ನಮಸ್ಕಾರವು. ಗವ್ಯ- ಎಂಬುವನೇ, ನಮಸ್ಕಾರವು. ಆತವ್ಯ ನಾಮಕನೇ ಸಂರಕ್ಷಿಸು. ವಾಯು-ಎಂಬುವನೇ ನನ್ನ ರಕ್ಷಿಸು.

**ಪ್ರಮಾಣ**

**ವಿಷ್ಣೋರ್ಭಕ್ತಿಂ ವರ್ಧಯತಿ ಭಕ್ತಾನಾಂ ಹೃದಿ ಸಂಸ್ಥಿತಃ ।**
**ಅತೋऽಸೌ ವಿಷ್ಣುಭಕ್ತಶ್ಚ ಕೀರ್ತಿತೋ ನಾತ್ರ ಸಂಶಯಃ ॥**
**ಸರ್ವೇಷಾಂ ಚ ಹೃದಿ ಸ್ಥಿತ್ವಾ ಸ್ಮರತೇ ಸರ್ವದಾ ಹರಿಂ ।**
**ಅತೋ ವಾಯುಃ ಸ್ಮೃತಿರ್ನಾಮ್ನಾ ಸ ಬಭೂವ ಖಗೇಶ್ವರ ॥**
**ಸರ್ವೇಷಾಂ ಚ ಹೃದಿ ಸ್ಥಿತ್ವಾ ಜ್ಞಾನಂ ವಿಷ್ಣೋರುದೀರಣಾತ್**
**ಅತೋ ಮೇಧೇತಿನಾಮಾಯಭೂದ್ವಾಯುರೇವ ನ ಸಂಶಯಃ ॥**
**ಯೋಗಿನಾಂ ಹೃದಯೇ ಸ್ಥಿತ್ವಾ ಸದಾ ಧ್ಯಾತಿ ಹರಿಂ ಪರಂ ।**
**ಪಾರ್ಥಕ್ಯೇನಾಪಿ ತಂ ಧ್ಯಾತಿ ಮಹಾಧ್ಯಾತೇತಿ ವಿಶ್ರುತಃ ॥**
**ದೇವನಾಂ ಪುಣ್ಯಪಾಪಾನಾಂ ಸುಖಮೇವೋತ್ತರೋತ್ತರಂ ।**
**ತತ್ಸುಖಾತ್ಪೂತ್ತರೇಷಾಂ ತು ವಾಯುಪರ್ಯಂತಮೇವ ಚ ॥**
**ಭುಂಜತೇ ಸರ್ವದಾ ವೀಂದ್ರ ತತ್ರ ಮುಖ್ಯಸ್ತು ಮಾರುತಃ ॥**
**—ಇತ್ಯಾದಿ ಗರುಡಪುರಾಣೇ ॥**

ಪಾಹಿ ಬ್ರಹ್ಮ-ಬ್ರಹ್ಮ ಎಂಬುವನೇ ರಕ್ಷಿಸು. ಈ ಬ್ರಹ್ಮ ಎಂಥಾವನೆಂದರೆ, ಬ್ರಹ್ಮಜ್ಞಾನಿನಾಂ ಪ್ರಿಯನಾದವ ಮತ್ತು ವಾಣೀದೇವೇರಿಗೆ ಪತಿಯಾದವ ಮತ್ತು ಪೂರ್ವೋಕ್ತ ಋಜುಗಳೊಳಗೆ ಸಾಧನಸಂಪೂರ್ತಿಯಾದ್ದರಿಂದ, ತದ್ವಿವಕ್ಷಯಾ ಶ್ರೇಷ್ಠನಾದವ. ಜಗದ್ಗುರುಗಳಾದ ವಾಯುದೇವರಿಗಿಂತಲೂ ಪದಾಧಿಕ್ಯನಾದವನೇ, ಸಂರಕ್ಷಣ ಮಾಡು-ಸಂರಕ್ಷಣ ಮಾಡು.

**ವಿಶೇಷಾರ್ಥ :**

೨೩ನೇ ಶ್ಲೋಕದಿಂದ ೨೯ನೇ ಶ್ಲೋಕದ ಪರ್ಯಂತ ಹೇಳಿದ ಋಜುಗಳ ನಾಮಗಳನ್ನು ನಿರ್ವಚನಪೂರ್ವಕ ವಿವರಿಸಲ್ಪಟ್ಟಿದೆ—

೧. ಕಲಿಯನ್ನು ನಿರಾಕರಿಸುವದ್ದರಿಂದ ಕಲ್ಕಿ ನಾಮಕನೇ.

೨. ಸುಪರಾಕ್ರಮಿಯಾಗಿ ಭಕ್ತಾಗ್ರೇಸರನಾದ್ದರಿಂದಲೂ, ವಿಶೇಷ ಬ್ರಹ್ಮಪದಸ್ಥಿಯಾದ್ದರಿಂದಲೂ ಸುತೇಜನಾಮಕನೇ.

೩. ಶ್ರೀಪರಮಾತ್ಮಗೆ ಕೇವಲಶಿಷ್ಯನಾದ್ದರಿಂದ ದಾಸನಾಮಕನೇ.

೪. ಧರ್ಮ.

೫. ಅಧರ್ಮಖಂಡನ ಎಂದರೆ, ಅಧರ್ಮ ಮಾಡುವ ಜನರನ್ನ ದಂಡನೆ ಮಾಡತಕ್ಕವನೇ.

೬. ವರ್ಚಸ್ವಿ- ಎಂದರೆ, ಮಹಾಕಾಂತಿಯುಕ್ತನಾಗಿರುವನಾದ್ದರಿಂದ, ವರ್ಚಸ್ವಿ ನಾಮಕನೇ.

೭. ಶತ್ರು ಭಯಂಕರನಾಗಿರುವನಾದ್ದರಿಂದ, ಖಿಷಣನಾಮಕನೇ.

೮. ಸತ್ವೋದ್ರಿಕ್ತನಾದಕಡಿಯಿಂದ, ಸಾಧುನಾಮಕನೇ.

೯. ಪೂಜ್ಯಸ್ವಾಮಿಯಾದುದರಿಂದ, ಮಹೀಪತಿನಾಮಕನೇ.

೧೦. ಸದ್ಧರ್ಮವನ್ನ ತಿಳಿದವನಾದ್ದರಿಂದ, ಸದ್ಧರ್ಮಜ್ಞನಾಮಕನೇ.

೧೧. ಧರ್ಮವನ್ನ ಉತ್ಪತ್ತಿಮಾಡತನಾದಕಡಿಯಿಂದ, ಧರ್ಮಜ ನಾಮಕನೇ,

೧೨. ಸಂಪೂರ್ಣ- ಎಂದರೆ. ಪೂರ್ಣಪ್ರಜ್ಞನಾದ ಶ್ರೀಹರಿಯನ್ನು ಚೆಂದಾಗಿ ತಿಳಿದವನಾದ್ದರಿಂದ ಸಂಪೂರ್ಣನೇ.

೧೩. ಪರಿಶುದ್ಧಜ್ಞಾನವುಳ್ಳವನಾದ್ದರಿಂದ, ಶುಚಿನಾಮಕನೇ.

೧೪. ಅನೇಕರೂಪನಾದ್ದರಿಂದ. ವೈಕೃತನಾಮಕನೇ.

೧೫. ಭಕ್ತರಿಗೆ ಪುಣ್ಯವನ್ನೇ ಅಭ್ಯಂಜನ ಮಾಡುವದ್ದರಿಂದ. ಅಂಜನ ನಾಮಕನೇ. ಇನ್ನೂ 'ಅಕಾರಃ ಸರ್ವಗಾತ್ಮಾ ಪರಬ್ರಹ್ಮಾಭಿದಾಯಕಃ'-ಎಂತ ತಿಳಿದು ಉಪಾಸನಮಾಡುವದ್ದರಿಂದಲೂ, ಅಂಜನನಾಮಕನೇ.

೧೬. ಸರ್ಷಪ-ಎಂದರೆ, ಋಷ, ಜ್ಞಾನೇ-ಎಂಬ ಧಾತುವಿನಿಂದ, ಸರ್ಷ ರೆಂಬ ಜ್ಞಾನಸಹಿತರನ್ನ ಪರಿಪಾಲಿಸುತ್ತಾನಾದ್ದರಿಂದ, ಸರ್ಷಪನಾಮಕನೇ.

೧೭. ಖರ್ಪಟ- ಎಂದರೆ, 'ಖಃ ಖಪತಯೇ ನಮಃ'- ಎಂದು ದೇವರಲ್ಲಿ ಸರ್ವಕ್ರಿಯಾ ಅರ್ಪಿಸಿ ನಡಿಯುತ್ತಾ ಇರುವನಾದ್ದರಿಂದ, ಖರ್ಪಟ ನಾಮಕನೇ. (ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸ ಶುದ್ಧ ಬುದ್ಧಿ ॥).

೧೮. ದೇವರ, ಶ್ರದ್ಧಾಹ್ವ-ಎಂದರೆ, 'ಶ್ರನ್ನಾಮಾಸ್ತಿಕ್ಯಬುದ್ಧಿಸ್ಸ್ಯಾತ್'-ಎಂಬುವ ವಚನಾನುಸಾರ, ಸಂಪೂರ್ಣಾಸ್ತಿಕ್ಯಬುದ್ಧಿ ದೇವರಲ್ಲಿಟ್ಟಿರುವದ್ದರಿಂದ, ಶ್ರದ್ಧಾ-ಎಂತ ನಾಮಪಡೆದವನೇ.

೧೯. ಕೇವಲ ಸದಾ ದೇವರ ಧ್ಯಾನಶೀಲನಾದ್ದರಿಂದ, ಸಂಧ್ಯಾತ ನಾಮಕನೇ.

೨೦. ನಿತ್ಯಾಪರೋಕ್ಷಿದೇವತಿಗಳಿಗೆಲ್ಲ ಅಧಿಕನಾದ್ದರಿಂದ, ವಿಜ್ಞಾನನಾಮಕನೇ.

೨೧. ನಿತ್ಯಾಪರೋಕ್ಷಿಯಾದ್ದರಿಂದ, ಮಹಾವಿಜ್ಞಾನ ನಾಮಕನೇ.

೨೨. ನಿತ್ಯ ಸಂಸ್ಮರಣವುಳ್ಳವನಾದ್ದರಿಂದ, ಕೀರ್ತನನಾಮನೇ.

೨೩. ಸರ್ವತ್ರ ಕೂಡಿರುವದ್ದರಿಂದ, ಸಂಕೀರ್ಣನಾಮಕನೇ.

೨೪. ಇದ್ದ ಸ್ವಬಲವನ್ನ ಹೇಳುವದ್ದರಿಂದ, ಕತ್ಥನಾಮಕನೇ 'ಸಹಸ್ರ

ಗುಣ ಮಪ್ಯೇತಸ್ಮಿಯಿ ಸಂಭಾವಯಾಮ್ಯಹಂ'- ಎಂದು ಶ್ರೀಕೃಷ್ಣ ಅಂಗೀಕರಿಸಿದ್ದರಿಂದ, ಶ್ಲಾಘನದೋಷವಿಲ್ಲೆಂದು ಅರ್ಥ.

೨೫. ಸಂಶಯರಹಿತನಾದ್ದರಿಂದ, ಮಹಾಬುದ್ಧ-ಎಂತ ನಾಮಕನೇ.

೨೬. ಉತ್ಕರ್ಷತೋರಿಸುವವನಾದ್ದರಿಂದ, ಜಯಾನಾಮಕನೇ.

೨೭. ಸರ್ವಜೀವೋತ್ತಮನಾದ್ದರಿಂದ, ಸುಮಹತ್ತರನಾಮಕನೇ.

೨೮. ಅತ್ಯಂತ ಬಲವಂತನಾದ್ದರಿಂದ, ಸುವೀರ್ಯನಾಮಕನೇ.

೨೯. ಉತ್ಕೃಷ್ಟ ಧಾರಣಾಶಕ್ತಿಯಿಂದ, ಮೇಧಾವಿ-ಎನಿಸುವನೇ.

೩೦. ವಿಶೇಷಾಕಾರವಾದ ಜಯಶೀಲನಾದ್ದರಿಂದ, ವಿಜಯನಾಮಕನೇ.

೩೧. ಜಯ-ಎಂಬುವನೇ ರಕ್ಷಿಸು. ರಂತಿವ್ನು-ಎಂದರೆ, ರಂ ತಿಷ್ಠತ್ಯಸ್ಮಿ

೩೨. ರಂತಿವ್ನು-ಎಂದರೆ, ರಂ- ತಿಷ್ಠತ್ಯಸ್ಮಿನ್ನಿತಿ ರಂತಿಃ ವೃಕಾಗ್ನಿಃ ಸ ಅಸ್ಯ ಅಸ್ತೀತಿ ರಂತಿಮಾನ್'-ರಂ-ಎಂಬ ಅಗ್ನಿಬೀಜಮುಖ್ಯವಾಚ್ಯತ್ವ ಇರುವದ್ದರಿಂದ, ವೃಕನಾಮಕ ಅಂಗುಷ್ಟ ಪರಿಮಿತ ಅಗ್ನಿನಾಮಕ ದೇವರ ರೂಪಕ್ಕೆ ರಂತಿ-ಎಂತ ಹೆಸರು. ಇದು ಈತನಲ್ಲಿ ಇರುವದ್ದರಿಂದ, ರಂತಿವ್ನು-ಎಂಬುವನೇ.

೩೩, ಮನು ಅವಬೋಧನೇ- ಎಂಬ ಧಾತುವಿನಿಂದ, ಜ್ಞಾನರೂಪನಾದ್ದರಿಂದ, ಮನು ನಾಮವುಳ್ಳವನೇ.

೩೪. ಐಹಿಕ ಸುಖಪ್ರದನಾದ್ದರಿಂದ, ಮೋದನಾಮಕನೇ.

೩೫. ಪರಲೋಕಪ್ರದನಾದ್ದರಿಂದ, ಪ್ರಮೋದನಾಮಕನೇ.

೩೬. ಸ್ವಚ್ಛಚಿತ್ತನಾದ್ದರಿಂದ ಸಂತ (ಸಂತಸ) ನಾಮಕನೇ.

೩೭. ಸರ್ವಜೀವರಿಗಿಂತ ಆನಂದಅಧಿಕನಾದ್ದರಿಂದ, ಆನಂದ ನಾಮಕನೇ.

೩೮. ಇತರಾಪೇಕ್ಷೆ ಇಲ್ಲದ್ದರಿಂದ, ಸಂತುಷ್ಟನಾಮಕನೇ.

೩೯. ಅತಿಮನೋಹರ ಅವಯವವುಳ್ಳವನಾದ್ದರಿಂದ, ಚಾರ್ವಾಂಗ, ನಾಮಕನೇ.

೪೦. ಮನೋಹರ ಲಕ್ಷಣವುಳ್ಳವನಾದ್ದರಿಂದ, ಚಾರು, ನಾಮಕನೇ.

೪೧. ಅಧಿಕ ಬಾಹುಬಲವುಳ್ಳವನಾದ್ದರಿಂದ, ಸುಬಾಹು ನಾಮಕನೇ

೪೨. ಮನೋಹರ ಸಲ್ಲಕ್ಷಣಪಾದವುಳ್ಳವನಾದ್ದರಿಂದ, ಚಾರುಪದ ನಾಮಕನೇ.

೪೩. ಸುಲಕ್ಷಣ ನೇತ್ರನಾದ್ದರಿಂದ, ಸುಲೋಚನನಾಮಕನೇ.

೪೪. ಸರ್ವವೇದಜ್ಞಾನವುಳ್ಳವನಾದ್ದರಿಂದ, ಸಾರಸ್ವತ ನಾಮಕನೇ.

೪೫. ಆರಬ್ಧಾಂತರ್ಗಾಮಿಯಾದ್ದರಿಂದ, ಸುವೀರ ನಾಮಕನೇ.

೪೬. ದೇವರ ತತ್ತ್ವಜ್ಞಾನವುಳ್ಳವನಾದ್ದರಿಂದ, ಪ್ರಾಜ್ಞ ನಾಮಕನೇ.

೪೭. ತತ್ತ್ವಜ್ಞಾನ ಸುಖಪಾನವುಳ್ಳವನಾದ್ದರಿಂದ, ಕಪಿ ನಾಮಕನೇ.

೪೮. ವಿಷಯಚಾಪಲ್ಯರಹಿತನಾದ್ದರಿಂದ, ಅಲಂಪಟ ನಾಮಕನೇ.

೪೯. ಆಲೋಚನಿಯಿಂದ ಸರ್ವಜಗದ್ವ್ಯಾಪಾರ ಇರುವದ್ದರಿಂದ, ಸರ್ವಜ್ಞನಾಮಕನೇ.

೫೦. ಈ ಬ್ರಹ್ಮಾಂಡಗತ ಸರ್ವಜೀವರನ್ನ ಗೆದ್ದದ್ದರಿಂದ, ಸರ್ವಜಿತ್ ನಾಮಕನೇ.

೫೧. ಆಪದ್ರಕ್ಷಕದಾದ್ದರಿಂದ, ಮಿತ್ರನಾಮಕನೇ.

೫೨. ಜ್ಞಾನಿಗಳ ಪಾಪನಾಶಮಾಡುವದ್ದರಿಂದ, ಪಾಪನಾಶಕ ನಾಮಕನೇ.

೫೩. ವಿಶೇಷಾಕಾರವಾದ ಧರ್ಮವನ್ನುಪದೇಶಮಾಡುವನಾದ್ದರಿಂದ ಧರ್ಮವಿನೇತ ನಾಮಕನೇ.

೫೪. ಕುಶಲಬುದ್ಧಿಯಾದ್ದರಿಂದಲೂ, 'ಶಂ ಆರಂ'– ಎಂಬ ಬಾಹ್ಯ ಸುಖದುಃಖ ಬಂಧನವನ್ನ ಖಂಡಿಸಿ, ಮಂಗಳ ಕೊಡುವನಾದ್ದರಿಂದ, ಶಾರದ ನಾಮಕನೇ.

೫೫. ಹಿಡಿಯುವ ಶಕ್ತನಾದ್ದರಿಂದ, ಓಜ ನಾಮಕನೇ.

೫೬. ಜ್ಞಾನಸಿದ್ಧಿಯಾದ್ದರಿಂದಲೂ, ತಪಸ್ವಿಯಾದ್ದರಿಂದಲೂ ಸುತಪಸ್ವಿ ನಾಮಕನೇ.

೫೭. ಶೌರ್ಯ ತಪಸ್ವಿಯಾದ್ದರಿಂದ, ತೇಜಸ್ವೀ-ಬ್ರಹ್ಮತೇಜಸ್ಸುಳ್ಳವನೇ.

೫೮. ಸರ್ವರಿಗೂ ತತ್ತದ್ಯೋಗ್ಯತೆ ಕೊಡುವದ್ದರಿಂದ, ದಾನ ಸುಶೀಲ ನಾಮಕನೇ.

೫೯. ಭಜನೀಯನಾದ್ದರಿಂದಲೂ, ಕಾರ್ಯನಿರ್ವಾಹಕನಾದ್ದರಿಂದಲೂ, ಯಜ್ಞಸುಕರ್ತನಾಮಕನೇ.

೬೦. ದೇವರನ್ನೇ ಕುರಿತು ಸರ್ವಕರ್ಮ ಯಾಗವಾಗಿ ಅರ್ಪಿಸುವದ್ದರಿಂದ, ಯಜ್ವೀ ನಾಮಕನೇ.

೬೧. ಸರ್ವರಿಂದಲೂ ದೇವತಾರಾಧನೆ ಮಾಡಿಸುವದ್ದರಿಂದ, ಯಾಗ ಪರ್ತಕನಾಮಕನೇ.

೬೨. ಅನ-ಚೇಷ್ಟಾಯಾಂ-ಎಂಬ ಧಾತುವಿನಿಂದ ವಿಶಿಷ್ಟಚೇಷ್ಟಾಪ್ರದ ವಾದ್ದರಿಂದ, ಪ್ರಾಣನಾಮಕನೇ.

೬೩. ಸ್ವಾಧೀನಜೀವರನ್ನು ರಕ್ಷಿಸುವದ್ದರಿಂದ, ತ್ರಾಣನಾಮಕನೇ.

೬೪. ದೇವರ ದ್ವೇಷಿಗಳಲ್ಲಿ ಸದಾ ಕೋಪವುಳ್ಳವನಾದ್ದರಿಂದ, ಅಮರ್ಷಿನಾಮಕನೇ.

೬೫. ಸನ್ಮುಕ್ತಿಯೋಗ್ಯರಿಗೆಲ್ಲ ಜ್ಞಾನೋಪದೇಶಕನಾದ್ದರಿಂದ, ಉಪ ದೇಷ್ಟನಾಮಕನೇ.

೬೬. ಸರ್ವದೇಹಿಗಳ ಆಯುಃಪೂರ್ತಕಾಲ ತಿಳಿದು, ಹಂಸಮಂತ್ರ ನಿಲ್ಲಿಸುವದ್ದರಿಂದ, ಮಾರಕ ನಾಮಕನೇ.

೬೭. ಕಾಲಾಭಿಮಾನಿಯಾಗಿಯೂ, ಜಗತ್ತನ್ನು ಆಟವಾಡಿಸುದ್ದರಿಂದ, ಕಾಲಕ್ರೀಡಿನ ನಾಮಕನೇ.

೬೮. ಸಜ್ಜನರಿಂದ ಒಳ್ಳೆಯ ಕಾರ್ಯ ಮಾಡಿಸುವದ್ದರಿಂದ, ಸುಕರ್ತ ನಾಮಕನೇ.

೬೯. ಸುಕಾಲವುಳ್ಳ ಸಜ್ಜನರಿಗೆ ತಿಳಿಸುವದ್ದರಿಂದ, ಸುಕಾಲಜ್ಞ ನಾಮಕನೇ.

೭೦. ಕಿವಿ ಮುಚ್ಚಿಕೊಂಡರೆ ಕೇಳುವ ಪ್ರಾಣಘೋಷವನ್ನು ಮರಣ ಕಾಲದಲ್ಲಿ ಕೇಳದ ಹಾಂಗೆಮಾಡಿ, ಮೃತ್ಯುಸೂಚಿಸುವದ್ದರಿಂದ, ಕಾಲಸುಸೂಚಕ ನಾಮಕನೇ.

೭೧. ಅಜ್ಞಾನವನ್ನು, ದೈತ್ಯರನ್ನು, ಕಲಿಯನ್ನು ಸಂಹರಿಸುವನಾದ್ದ ರಿಂದ, ಕಲಿಸಂಹರ್ತನಾಮಕನೇ.

೭೨. ಕಲಿ ಬಂಧನೇ-ಎಂಬ ಧಾತುವಿನಿಂದ, ದುಷ್ಟರನ್ನ ಬಂಧಿಸುವದ್ದ ರಿಂದ, ಕಲಿನಾಮಕನೇ.

೭೩. ಕಲದ್ರವಣೇ-ಎಂಬ ಧಾತುವಿನಿಂದ ದುರ್ಜನರನ್ನ ಪರಾಜಯ ಗೊಳಿಸೋವನಾದ್ದರಿಂದ, ಕಾಲನಾಮಕನೇ.

೭೪. 'ಶಮೋ ಮನ್ನಿಷ್ಠತಾ ಬುದ್ಧೇ'-ಎಂಬ ಭಾಗವತ ವಚನದಿಂದ ದೇವರಲ್ಲಿ ಭಕ್ತಿಅತಿಶಯನಾದ್ದರಿಂದಲೂ, ಸರ್ವಸನ್ನಿಹಿತನಾದ್ದರಿಂದಲೂ, ರೇತ-ಎಂಬ ದೇವರ ಮುಖ್ಯಾಧಿಷ್ಠಾನನಾದ್ದರಿಂದ, ರೇತೋನಾಮಕನು (ಶಾಮರೇತ). ಅಥವಾ 'ಯದಾ ತ್ವಮಭಿವರ್ಷಸ್ಯಥೇಮಾಃ ಪ್ರಾಣಪತೇ ಪ್ರಜಾಃ ಆನಂದರೂಪಾಸ್ತಿಷ್ಠಂತಿ'-ಎಂಬ ಶ್ರುತಿಯಿಂದಲೂ, ರೇತಸ್ಸೆಂಬ ವೃಷ್ಟಿ ಯನ್ನು ಉಂಟು ಮಾಡುವದ್ದರಿಂದ, ರೇತ ಎಂಬ-ನಾಮಕನೇ.

೭೫. ಸರ್ವಕಾಲದಲ್ಲೂ ಪರಮಾತ್ಮನಲ್ಲಿ ಆಸಕ್ತಿ ಉಳ್ಳವನಾದ್ದರಿಂದ, ಸದಾರತ ನಾಮಕನೇ.

೭೬. ಸಜ್ಜನರಿಗೆ ಬಲಪ್ರದನಾದ್ದರಿಂದ, ಸುಬಲನಾಮಕನೇ.

೭೭. ಭಕ್ತಾಪರಾಧ ಸಹಿಷ್ಣುವಾದ್ದರಿಂದ, ಸಹೋ ನಾಮಕನೇ.

೭೮. ಅಕವೆಂಬ ದುಃಖವನ್ನ ಪಿಸಪ್ಪಿ-ಕುಟ್ಟಿ ಪುಡಿ ಮಾಡುವದ್ದರಿಂದ, ಸದಾಕಪಿ ನಾಮಕನೇ.

೭೯. ಸಜ್ಜನ ಪ್ರಾಪ್ಯನಾದ್ದರಿಂದ, ಗಮ್ಯನಾಮಕನೇ.

೮೦. ಅಂತಃಜ್ಞಾನಪ್ರೇರಕನಾದ್ದರಿಂದ. ಜ್ಞಾನ ನಾಮಕನೇ.

೮೧. ದಶೇಂದ್ರಿಯವೂ ಮನೆಯಂತೆ ಅಧಿಷ್ಠಾನವಾಗಿರುವದ್ದ

ರಿಂದಲೂ, ದಶಶಬ್ದವಾಚ್ಯ ಸರ್ವವೂ ಅಧಿಷ್ಠಾನವಾಗಿರುವದ್ದರಿಂದಲೂ, ದಶಗುಲ ನಾಮಕನೇ.

೮೨. ಸುಶಬ್ದ ಕೇಳೋಪನಾದ್ದರಿಂದ, ಶ್ರೋತವ್ಯ ನಾಮಕನೇ.

೮೩. ವಿಶೇಷವಾಗಿ ಕೀರ್ತನಮಾಡಿಸಿಕೊಳ್ಳುವನಾದ್ದರಿಂದ, ಸಂಕೀರ್ತಿತವ್ಯ ನಾಮಕನೇ.

೮೪. ಕವನವೆಂಬ ವರ್ಣನೆಗೆ ಯೋಗ್ಯನಾದ್ದರಿಂದ, ಕವ್ಯನಾಮಕನೇ.

೮೫. ಕವನವೆಂಬ ವರ್ಣನೆಗೆ ಯೋಗ್ಯನಾದ್ದರಿಂದ. ಕವ್ಯನಾಮಕನೇ.

೮೬. ದರ್ಶನ ಮಾಡಿಸಿಕೊಳ್ಳುವುದಕ್ಕೆ ಅರ್ಹನಾದ್ದರಿಂದ, ದ್ರಷ್ಟವ್ಯ ನಾಮಕನೇ.

೮೭. ಸರಗತೌ–ಎಂಬ ಧಾತುವಿನಿಂದ, ಸರ–ಎಂದರೆ, ಅನುಸರಣೆ ಮಾಡಿ ಹೊಂದುವುದಕ್ಕೆ ಅರ್ಹನಾದ್ದರಿಂದ. ಸಪ್ಯನಾಮಕನೇ.

೮೮. ಗಮ್ಲೃ ಗತೌ- ಎಂಬ ಧಾತುವಿನಿಂದ, ಚಲಾಚಲರೂಪ ಪ್ರತಿಮಾಧಿಷ್ಠಾನವಿಶೇಷ ಇದ್ದಲ್ಲಿಗೆ, ಸದಾ ಹೋಗಿ ಹೊಂದಲು ಅರ್ಹನಾದ್ದರಿಂದ, ಗಂತವ್ಯನಾಮಕನೇ.

೮೯. ಕೃ ಕರಣೇ–ಎಂಬ ಧಾತುವಿನಿಂದ ಮಂತ್ರ–ಜಪಾದಿಕ್ರಿಯಾದಿಂದ ಭಜನೀಯನಾದ್ದರಿಂದ. ಕ್ರಿಪ್ಯನಾಮಕನೇ.

೯೦. ತದಶಕ್ತರಿಗೆ ಮನಸಾ ಸ್ಮರಣೆಗೆ ಸದಾ, ವಿಷಯನಾದ್ದರಿಂದ ಸ್ಮರ್ತವ್ಯನಾಮಕನೇ.

೯೧. ಯಥಾಯೋಗ್ಯವಾಗಿ ಆರಾಧನಿ ಮಾಡಿಸಿಕೊಳ್ಳುವನಾದ್ದರಿಂದ, ಸೇವ್ಯ (ಸವ್ಯ) ನಾಮಕನೇ.

೯೨. ಪರಮಚತುರನಾದ್ದರಿಂದ, ಸುಭವ್ಯನಾಮಕನೇ.

೯೩. 'ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಂ'- ಎಂಬ ಶ್ರುತ್ಯನುಸಾರ, ಸ್ವರ್ಗದಲ್ಲಿ ರಕ್ಷಕನಾದ್ದರಿಂದ, ಸ್ವರ್ಗವ್ಯನಾಮಕನೇ.

೯೪. ಧ್ಯಾನ ವಿಷಯನಾದ್ದರಿಂದ, ಭಾವ್ಯನಾಮಕನೇ.

೯೫. ಸಚ್ಛಾಸ್ತ್ರ ಮೂಲಕವಾಗಿ ತಿಳಿಸಿಕೊಳ್ಳುವನಾದರಿಂದ, ಜ್ಞಾತವ್ಯ ನಾಮಕನೇ.

೯೬. ವಕ್ತೃವಾದ ಗುರುವಿನಿಂದ ಇತರರ ವಿಷಯಕವಾಗಿ ಹೇಳಿಸಿ ಕೊಳ್ಳುವನಾದ್ದರಿಂದ, ವಕ್ತವ್ಯನಾಮಕನೇ.

೯೭. ವೇದಾದಿಗಳಿಂದ ಗೌಃ- ಎಂಬ ವಾಕ್ಯಕ್ಕೆ ಗೋಚರನಾದ್ದರಿಂದ ಗವ್ಯನಾಮಕನೇ.

೯೮. ಮುಂದಿನಪದ ವಾಯುಪದವುಳ್ಳವನಾದ್ದರಿಂದ, ಲಾತವ್ಯ ನಾಮಕನೇ.

೯೯. ಸರ್ವಜೀವರ ಹೃತ್ಕಮಲದಲ್ಲಿ ಶ್ವಾಸರೂಪಜಪಮಾಡಿ, ಸರ್ವ ಚೇಷ್ಟಾಪ್ರದನಾಗಿಯೂ, ಶ್ರೀಪರಮಾತ್ಮಗೆ ಪ್ರಥಮಾಂಗಭೂತನಾಗಿಯೂ ಇರುವನಾದ್ದರಿಂದ– ವಾಯುನಾಮಕನೇ.

೧೦೦. ಸರ್ವಜೀವರಿಂದಲೂ ಭಕ್ತಿಜ್ಞಾನಾಧಿಕಪೂರ್ಣಗುಣನಾದ್ದ ರಿಂದಲೂ, ಬ್ರಾಹ್ಮಣರಲ್ಲಿ ಪ್ರೀತಿಉಳ್ಳವನಾದ್ದರಿಂದಲೂ, ಸರಸ್ವತೀ ದೇವೇರಿಗೆ ಪತಿಯಾದ್ದರಿಂದಲೂ, ಋಜುಗಳಲ್ಲಿ ಪೂರ್ತಿಯಾದ ಸಾಧನೆ ವುಳ್ಳವನಾದ್ದರಿಂದಲೂ, ಜಗತ್ತಿಗೇ ಮುಖ್ಯಗುರುವಾದ್ದರಿಂದಲೂ ಬ್ರಹ್ಮ ನಾಮಕನೇ. ॥೨೯॥

## ೨. ಭಾವಪ್ರಕಾಶಿಕೆ

ಸೇವ್ಯ ೯೧ನೆಯ ಹೆಸರು. ಸುಭವ್ಯ, ಪರಮ ಚತುರನು, ಕಾರ್ಯ ಕುಶಲನು–೯೨ನೆಯ ಹೆಸರು. ಸ್ವರ್ಗವ್ಯಃ- ಸ್ವನಾಮಕ ಪರಮಾತ್ಮನನ್ನು ಸೋಕಿಸುವ ಯೋಗ್ಯತೆಯುಳ್ಳವನು. ಸ್ವತಂತ್ರತ್ವಾತ್। ಸ್ವತಂತ್ರನಾದುದರಿಂದ ಸ್ವ ಪರಮಾತ್ಮನು, ಅವನು ವಾಸ ಮಾಡುವುದರಿಂದ ಸ್ವರ್ಗವೆಂದರೆ, ವೈಕುಂಠವು, ಭಜಕರಿಗೆ ವೈಕುಂಠವನ್ನು ಕೊಡಿಸುವ ಯೋಗ್ಯತೆಯುಳ್ಳವರಾದುದರಿಂದ, ಸ್ವರ್ಗವ್ಯನೆಂದು ೯೩ನೆಯ ಹೆಸರು. ಭಾವಿಸಲು ಯೋಗ್ಯನಾದುದರಿಂದ, ಭಾವ್ಯ-೯೪ನೆಯ ಹೆಸರು. ಜ್ಞಾತವ್ಯ–ತಿಳಿದುಕೊಳ್ಳಲು ಯೋಗ್ಯನು. ೯೫

ನೆಯ ಹೆಸರು. ವಕ್ತವ್ಯ-ಹೇಳಿಸಿಕೊಳ್ಳಲು ಸ್ತೋತ್ರಾದಿಗಳಿಂದ ಹೊಗಳಿಸಿಕೊಳ್ಳಲು ಯೋಗ್ಯನು- ೯೬ನೆಯ ಹೆಸರು. ಗವ್ಯ-ವೇದಗೋಚರನು- ೯೭ನೆಯ ಹೆಸರು. ಲಾತವ್ಯ-ವಾಯು ಪದವಿಗೆ ಹಿಂದಿನ ಪದವಿಯು ೯೮ನೆಯ ಹೆಸರು. ವಾಯು-೯೯ನೆಯ ಹೆಸರು. ಬ್ರಹ್ಮ-೧೦೦ನೆಯ ಹೆಸರು. ಹೀಗೆ, ೧೦೦ ಕಲ್ಪಗಳಲ್ಲಿ ೧೦೦ ನಾಮಗಳಿಂದ ಪ್ರಸಿದ್ಧನಾಗಿರುವ ಬ್ರಾಹ್ಮಣಪ್ರಿಯನಾದ ಎಲೈ ಸರಸ್ವತೀಪತೇ ! ಜಗದ್ಗುರುವರ್ಯ ! ನಿನಗೆ ನಮಸ್ಕಾರವು, ನಮ್ಮನ್ನು ರಕ್ಷಿಸು ! ರಕ್ಷಿಸು. ॥೨೯॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಯಥಾಯೋಗ್ಯವಾಗಿ ಆರಾಧನೆಮಾಡಿಸಿಕೊಳ್ಳುವನಾದ್ದರಿಂದ, ಸೇವ್ಯನಾಮಕನೇ, ಪರಮಚತುರನಾದ್ದರಿಂದ ಸುಭವ್ಯನಾಮಕನೇ, **ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಂ.** ಎಂಬ ಶ್ರುತ್ಯನುಸಾರ ಸ್ವರ್ಗದಲ್ಲೂ ರಕ್ಷಕನಾದ್ದರಿಂದ ಸ್ವರ್ಗವ್ಯನೆಂದು ಹೆಸರುಳ್ಳವನೇ ನಮೋ. ಧ್ಯಾನವಿಷಯನಾದ್ದರಿಂದ ಭಾವ್ಯ ನಾಮಕನೇ, ಸಚ್ಛಾಸ್ತ್ರ ಮೂಲಕ ತಿಳಿಸಿಕೊಳ್ಳುವನಾದ್ದರಿಂದ, ಜ್ಞಾತವ್ಯನಾಮಕನೇ, ವಕ್ತೃವಾದ ಗುರುವಿನಿಂದ ಇತರ ವಿಷಯವಾಗಿ ಹೇಳಿಸಿಕೊಳ್ಳುವನಾದ್ದರಿಂದ ವಕ್ತವ್ಯನಾಮಕನೇ, ವೇದಾದಿಗಳೆಂಬ ಗೌಃ- ಎಂಬ ವಾಕ್ಕಿಗೆ ಗೋಚರನಾದ್ದರಿಂದ, ಗವ್ಯನಾಮಕನೇ, ಮುಂದಲ ಕಲ್ಪಕ್ಕೆ ಲಾ-ಎಂದರೆ ಅಂಗೀಕರಿಸುವ ವಾಯುಪದವುಳ್ಳವನಾದ್ದರಿಂದ, ಲಾತವ್ಯ ವಾಯುನಾಮಕನೇ, ಸರ್ವಜೀವರಿಗಿಂತಲೂ ಭಕ್ತಿ ಜ್ಞಾನಾದ್ಯಧಿಕ ಪೂರ್ಣಗುಣದಿಂದ ಬ್ರಹ್ಮಾ-ಎಂದು ಹೆಸರುಳ್ಳವನೇ, ಬ್ರಾಹ್ಮಣರಲ್ಲಿ ಪ್ರೀತಿಯುಳ್ಳವನೇ, ಸರಸ್ವತೀಪತಿಯೇ, ಜಗದ್ಗುರು ಶ್ರೇಷ್ಠನೇ, ನಮೋ, ಮಾಂ ಪಾಹಿ- ಎಂದರ್ಥ.

**ಪ್ರಮಾಣ— ವಿಷ್ಣೋರ್ಭಕ್ತಿ....................................॥** ಇತ್ಯಾದಿ **ಗರುಡಪುರಾಣದಲ್ಲಿ** ನಾಮಾರ್ಥಗಳು ಮಾರ್ಗಪ್ರದರ್ಶನ ಮಾಡಿವೆ ॥೨೯॥ **(ಈ ಪ್ರಮಾಣದ ಪೂರ್ಣಪಾಠ ಸಂಕರ್ಷಣಒಡೆಯರ ವ್ಯಾಖ್ಯಾನದಲ್ಲಿ ನೋಡುವುದು).**

## ಸರ್ವವ್ಯಾಖ್ಯಾನಸಾರಸಂಗ್ರಹ

೯೦. **ಸೇವ್ಯ**

೧೯೦ನೆಯ ಬ್ರಹ್ಮಕಲ್ಪದ ಋಜುಪದಸ್ಥನಿಗೆ-**ಸೇವ್ಯ**-ಎಂದು ಹೆಸರು. ಯಥಾಯೋಗ್ಯನಾಗಿ ಆರಾಧನೆಮಾಡಿಸಿಕೊಳ್ಳುವನಾದ್ದರಿಂದ ಈ ಹೆಸರು.

೯೧. **ಸುಭವ್ಯ**

ಪರಮಚತುರನಾದ್ದರಿಂದ, **ಸುಭವ್ಯ**-ನಾಮಕನಾದ ಋಜುವು ೧೯೧ನೆಯ ಕಲ್ಪದ ಋಜುಪದಸ್ಥನು.

೯೨. **ಸ್ವರ್ಗವ್ಯ**

"ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಂ"-ಎಂಬ ಶ್ರುತ್ಯನುಸಾರ, ಸ್ವರ್ಗದಲ್ಲಿ ರಕ್ಷಕನಾಗಿರುವುದರಿಂದ-"**ಸ್ವರ್ಗವ್ಯ**"- ನೆಂಬ ಹೆಸರಿನ ಋಜುವು ೧೯೨ನೆಯ ಬ್ರಹ್ಮ ಕಲ್ಪದ ಋಜುಪದಸ್ಥನು.

೯೩, **ಭಾವ್ಯ**

ಧ್ಯಾನವಿಷಯನಾದ್ದರಿಂದ-**ಭಾವ್ಯ** ನಾಮಕನು, ೧೯೩ನೆಯ ಕಲ್ಪದ ಋಜುಪದಸ್ಥನು.

೯೪. **ಜ್ಞಾತವ್ಯ**

ಮುಂದಿನ ಕಲ್ಪದ ಋಜುಪದಸ್ಥನು ಸಚ್ಛಾಸ್ತ್ರಮೂಲಕ ವೇದ್ಯನಾಗಿರುವ ಕಾರಣ ಅವನಿಗೆ-**ಜ್ಞಾತವ್ಯ**–ನೆಂತ ನಾಮ.

೯೫ **ವಕ್ತವ್ಯ**

**ವಕ್ತವ್ಯ**–ನಾಮಕನೆಂಬ ಋಜುವು ೧೯೫ನೆಯ ಕಲ್ಪದ ಋಜುಪದಸ್ಥನು. ವಕ್ತೃವಾದ ಗುರುವಿನಿಂದ ಇತರರ ವಿಷಯಕವಾಗಿ ಹೇಳಿಸಿಕೊಳ್ಳುವವನಾದ್ದರಿಂದ, **ವಕ್ತವ್ಯ**–ನೆಂದು ಹೆಸರು.

೯೬ **ಗವ್ಯ**

ವೇದಾದಿಗಳಿಂದ "ಗೌ"–ಎಂಬ ವಾಕ್ಯಕ್ಕೆ ಗೋಚರನಾದ್ದರಿಂದ, **ಗವ್ಯ**–ನಾಮಕನಾದ ಋಜುವು ಮುಂದಿನ ಕಲ್ಪದ ಋಜುಪದಸ್ಥನು.

೯೭ **ಲಾತವ್ಯ**

ಮುಂದಿನ ವಾಯುಪದವಿಗೆ ಬರುವುದರಿಂದ, ೯೭ನೆಯ ಕಲ್ಪದ ಋಜು ಪದಸ್ಥನಿಗೆ **ಲಾತವ್ಯ**–ನೆಂದು ಹೆಸರು. "ಲಾತವ್ಯ"-ಶಬ್ದದ ಅರ್ಥವೇ "ಭಾವೀವಾಯುಪದಸ್ಥ"—ನೆಂದರ್ಥ.

೯೮ **ವಾಯು**

ಸರ್ವಜೀವರ ಹೃತ್ಕಮಲದಲ್ಲಿ ಶ್ವಾಸರೂಪ ಜಪಮಾಡಿ, ಸರ್ವಚೇಷ್ಟಾಪ್ರದನಾಗಿಯೂ, ಶ್ರೀ ಪರಮಾತ್ಮನಿಗೆ ಪ್ರಥಮಾಂಗಭೂತನಾಗಿಯೂ ಇರುವ ೯೮ನೆಯ ಕಲ್ಪದ ಋಜುವಿಗೆ **ವಾಯು**—ಎಂದು ಹೆಸರು.

(೯೯) ಬ್ರಹ್ಮ–

೧೯೯ನೆಯ ಪ್ರಸಕ್ತ ಬ್ರಹ್ಮಕಲ್ಪದಲ್ಲಿರುವ ಋಜುಗಣ **ಶ್ರೇಷ್ಠ**ರಿಗೆ ಬ್ರಹ್ಮ–ನೆಂದು ಹೆಸರು.

ಸರ್ವಜೀವರಿಂದಲೂ ಭಕ್ತಿ ಜ್ಞಾನಾಧಿಕಪೂರ್ಣನಾಗಿರುವುದರಿಂದ, (ಬ್ರಾಹ್ಮಣಪ್ರಿಯ) ಶ್ರೀಸರಸ್ವತೀದೇವಿಯರಿಗೆ ಪತಿಯಾದ್ದರಿಂದಲೂ, (ಸರಸ್ವತೀಪತಿ), ಋಜುಗಣದಲ್ಲಿ ಸಾಧನ ಪೂರ್ಣವುಳ್ಳವನಾದ್ದರಿಂದಲೂ, ಜಗತ್ತಿಗೇ ಮುಖ್ಯಗುರುವಾದ್ದರಿಂದಲೂ (ಜಗದ್ಗುರುವರ್ಯ). **"ಬ್ರಹ್ಮ"**-ಎಂದು ಅನ್ವರ್ಥನಾಮವು.

(ಬ್ರಹ್ಮ ಶಬ್ದಕ್ಕೆ ಪೂರ್ಣ-ಎಂದರ್ಥ. ಜೀವೋತ್ತಮರು. ಜೀವರ ವಿವೀಕ್ಷಾ ಸಕಲಗುಣ ಪೂರ್ಣರಾಗಿರುವುದರಿಂದ– "ಬ್ರಹ್ಮ"-ಎಂಬ ನಾಮ. ಇವರು "ಬ್ರಹ್ಮ" ನಾದುಕರಾದರೆ ಶ್ರೀಪರಮಾತ್ಮನು "ಪರಬ್ರಹ್ಮನು")

## ಪದ್ಯ–೩೦

**ಮೂಲ :**

**ವಾಮನಪುರಾಣದಲಿ ಪೇಳಿದ ।**
**ಈ ಮಹಾತ್ಮರ ಪರಮಮಂಗಳ ।**
**ನಾಮಗಳ ಸಂಪ್ರೀತಿಪೂರ್ವಕ ನಿತ್ಯ ಸ್ಮರಿಸುವರ ॥**
**ಶ್ರೀಮನೋರಮನವರು ಬೇಡಿದ ।**
**ಕಾಮಿತಾರ್ಥಗಳಿತ್ತು ತನ್ನ ಶ್ರಿ ।**
**ಧಾಮದೊಳಗನುದಿನದಲಿಬ್ಬಾನಂದ ಪಡಿಸುವನು ॥೩೦॥**

**ಅವತರಣಿಕೆ :**

ವಾಮನಪುರಾಣೋಕ್ತವಾದ ಮಹಾತ್ಮರಾದ ಋಜುಗಳ ಪರಮಮಂಗಳ ನಾಮಸಂಸ್ಮರಣೆಯಿಂದ, ಶ್ರೀರಮಣನು ಸಂಪ್ರೀತನಾಗಿ, ಮೋಕ್ಷಾನಂದವನ್ನೀಯುವನೆಂದು ತಿಳಿಸುತ್ತಾರೆ. ॥೩೦॥

**ಪ್ರತಿಪದಾರ್ಥ :**

**ವಾಮನಪುರಾಣದಲಿ**—ವಾಮನಪುರಾಣದಲ್ಲಿ, **ಪೇಳಿದ**–ಹೇಳಿರುವಂತಹ, **ಈ ಮಹಾತ್ಮರ**—ಪೂರ್ವೋಕ್ತ ನೂರುಮಂದಿ ಮಹಾಮಹಿಮರಾದ ಋಜುಪದಸ್ಥರುಗಳ, **ಪರಮಮಂಗಳನಾಮಗಳ**—ಅತ್ಯಂತ ಶುಭಪ್ರದವಾದ ಹೆಸರುಗಳನ್ನು. **ಸಂಪ್ರೀತಿಪೂರ್ವಕ**—ಭಕ್ತ್ಯಾದರಗಳಿಂದ. **ನಿತ್ಯಸ್ಮರಿಸುವರ**—ಎಡಬಿಡದೆ ಧ್ಯಾನಮಾಡುವರ, **ಶ್ರೀಮನೋರಮನು**—ಶ್ರೀಲಕ್ಷ್ಮೀದೇವಿಗೆ ಆನಂದದಾಯಕನಾದ ಶ್ರೀಪರಮಾತ್ಮನು, **ಅವರು ಬೇಡಿದ**—ಅಂತಹವರು ಕೋರಿದ, **ಕಾಮಿತಾರ್ಥಗಳನು ಇತ್ತು**—ಇಷ್ಟಾರ್ಥಗಳನ್ನು ಕೊಟ್ಟು, **ಶ್ರಿಧಾಮದೊಳಗೆ**—ತನ್ನದೇ ಆದ ವೈಕುಂಠ

ಶ್ವೇತದ್ವೀಪ, ಅನಂತಾಸನ-ಎಂಬ ಮೂರು ಮುಕ್ತಿಸ್ಥಾನಗಳಲ್ಲಿ, **ಇಟ್ಟು ಆನಂದ ಪಡಿಸುವನು**—ಲಿಂಗಭಂಗಾನಂತರ ಇಟ್ಟವನಾಗಿ, ಸದಾ ಸರ್ವಕಾಲಗಳಲ್ಲಿ ಸಂತೋಷಪಡಿಸುವನು. (ಮೋಕ್ಷಾನಂದವನ್ನೀಯುವನು) ॥೩೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಋಜುಗಳ ಸ್ಮರಣೆಯಿಂದ ಆಗತಕ್ಕ ಫಲವನ್ನ ಹೇಳತಾರೆ.

ವಾಮನಪುರಾಣದಲ್ಲಿ ಹೇಳಿರುವಂಥ ಈ ಪೂರ್ವೋಕ್ತರಾದ ನೂರು ಮಂದಿ ಮಹಾತ್ಮರ ಅತ್ಯಂತ ಮಂಗಳಪ್ರದವಾದ ಹೆಸರುಗಳ ಚಂದಾಗಿ, ಆದರಯುಕ್ತರಾಗಿ ಸತತ ಸ್ಮರಣೆ ಮಾಡುವಂಥಾವರಿಗೆ, ಲಕ್ಷ್ಮೀದೇವೇರಿಗೆ ಹರುಷಕೊಡುವಂಥ ಶ್ರೀಪರಮಾತ್ಮನು, ಸತತ ಸ್ಮರಣೆ ಮಾಡುವಂಥಾವರ್ರು ಅಪೇಕ್ಷಿಸಿದ ಜ್ಞಾನ ಭಕ್ತಿ ವೈರಾಗ್ಯವೂ, ತನ್ನ ಅಪರೋಕ್ಷವೂ ಇತ್ಯಾದಿಗಳ ಕೊಟ್ಟವನಾಗಿ ಸ್ವಕೀಯವಾದ ವೈಕುಂಠಾದಿ ಮೂರು ಸ್ಥಾನದೊಳಗೆ, ಲಿಂಗ ಭಂಗಾನಂತರ ಇಟ್ಟವನಾಗಿ, ಸದಾ ಸರ್ವಕಾಲಗಳಲ್ಲೂ ಸಂತೋಷಪಡಿಸತಾನೆ. ಸ್ವರೂಪಾನಂದ ಕೊಡತಾನೆ. ಈ ನೂರು ಮಂದಿ ನೂರುಬ್ರಹ್ಮಕಲ್ಪ ಸಾಧನ ಮಾಡಿದವರು ಅಪರೋಕ್ಷಜ್ಞಾನಿಗಳು ಹೋಗತಾ, ಇನ್ನೂ ನೂರು ಮಂದಿ ಅಪರೋಕ್ಷಕ್ಕಾಗಿ ಸಾಧನ ಮಾಡತಾ ಇದ್ದಾರೆ. ಇದು ವಾಮನಪುರಾಣ ಉತ್ತರ ಖಂಡ ಋಜೂಪೋಖ್ಯಾನದ ವಿಂಶೋಧ್ಯಾಯದಲ್ಲಿದೆ. ॥೩೦॥

### ೨. ಭಾವಪ್ರಕಾಶಿಕೆ

ವಾಮನ ಪುರಾಣದಲ್ಲಿ ಪೇಳಿದ ಈ ಮಹಾತ್ಮರ ಪರಮಮಂಗಳಕರವಾದ ಮೇಲೆ ಹೇಳಿದ ೧೦೦ ನಾಮಗಳನ್ನು ಪ್ರೀತಿಪೂರ್ವಕವಾಗಿ ನಿತ್ಯದಲ್ಲೂ

ಸ್ಮರಿಸುವವರನ್ನು, ಲಕ್ಷ್ಮೀಮನೋಹರನಾದ ಶ್ರೀಹರಿಯು ಅವರು ಬೇಡಿದ ಇಷ್ಟಾರ್ಥವನ್ನು ಪೂರೈಸಿ, ತನ್ನ ಶ್ವೇತದ್ವೀಪ, ಅನಂತಾಸನ, ವೈಕುಂಠಗಳೆಂಬ ಲೋಕಗಳಲ್ಲಿಟ್ಟು ಆನಂದಪಡಿಸುವನು. ॥೩೦॥

## ೩. ಭಾವದರ್ಪಣ

ವಾಮನಪುರಾಣ। ತದುಕ್ತಂ ವಾಮನಪುರಾಣೇ। ಕಲ್ಯಾಸುತಪ ದಾಸಶ ಧರ್ಮಶ್ಚಾಧರ್ಮಖಂಡನಃ । ವರ್ಣಾಶ್ರೀಖಿಷಣಶ್ಚೈವ ಸಾಧುತ್ಶ್ಚೈವ ಮಹೀಪತಿಃ। ಧರ್ಮಶ್ಚ ಧರ್ಮಜಶ್ಚೈವ ಸಂಪೂರ್ಣ ಶುಚಿವೈಕೃತೌ । ಅಂಜನ್ಯ ಸರ್ವಪಶ್ಚೈವ ವಿರ್ಪಟಶ್ಚ ತಥೈವ ಚ । ಶ್ರದ್ಧಾಳುಶ್ಚೈವ ಸದ್ಧ್ಯಾನೋ ಜ್ಞಾನೋ ವಿಜ್ಞಾನಯೇವ ಚ । ಕೀರ್ತಿನಶ್ಚೈವ ಸಂಕೀರ್ಣಃ ಕತ್ಥನಶ್ಚ ತಥೈವಚ । ಮಹಾಬುದ್ಧಿರ್ಜಯಶ್ಚೈವ ತಥೈವಚ ಮಹತ್ತರಃ । ಸುವೀರಶ್ಚೈವ ಮೇಧಾವೀ ವಿಜಯೋ ಜಯ ಏವಚ । ಮನುರ್ಮೋದ ಪ್ರಮೋದಶ್ಚ ಸಂತ ಆನಂತ ಏವಚ । ಸಂತುಷ್ಟಶ್ಚೈವ ಚಾರ್ವಾಂಗೋ ತಥಾ ಚಾರುಸುಬಾಹುಕಃ । ತಥಾ ಚಾರುಪದಶ್ಚಾಪಿ ತಥೈವಚ ಸುಲೋಚನಃ। ಸಾರಸ್ವತ ಸುವೀರಸ್ಯ ಪ್ರಾಜ್ಞಃ ಕಪಿ ಸ ಏವ ಚ। ಲಂಪಟಶ್ಚೈವ ಸರ್ವಜ್ಞಃ ಸರ್ವಜಿನ್ಮಿತ್ರ ಏವಚ ! ತಥಾ ಪಾಪವಿನಾಶಶ್ಚ ಏತೇ ಪಂಚಾಶದೀರಿತಾಃ । ತಥಾ ಧರ್ಮಪ್ರಿಯಶ್ಚ ಶಾರದೋಜೋ ತಥೈವಚ । ಸುತಪಸ್ಕಶ್ಚ ತೇಜಸ್ವೀ ದಾನಶೀಲಸ್ತಥೈವಚ । ಸುಶೀಲಶ್ಚೈವ ಯಜ್ಞಶ್ಚ ಸುಕರ್ತಾಚ ತಥೈವಚ । ಯೋಗವರ್ತಕ ಯಜ್ವೀಚ ಪ್ರಾಣಶ್ಚಾಪಿ ತಥೈವಚ । ತಥಾತ್ರಾಣಶ್ಚಾ ಮುಖುಷಿಃ ಉಪನೇಷ್ಟಾತಥೈವಚ । ತಾರಕಶ್ಚ ತಥಾ ಕಾಲಕ್ರೀಡನಶ್ಚ ತಥೈವಚ । ಸುಕರ್ತಾಚ ಸುಕಾಲಜ್ಞಃ ಕಾಲ ಸೂಚಕ ಏವಚ । ತಥಾಚ ಕಲಿಸಂಹರ್ತಾ ಕಲಿಃ ಕಾಲಸ್ತಥೈವಚ । ಸ್ವಾಮ ರೇತಃ ಸದಾರತಃ ತತಶ್ಚ ಸುಬಲಸ್ತಥಾ । ಸಹಃ ಸದಾಕಪಿಶ್ಚೈವ ಗಮ್ಯಜ್ಞಾನಸ್ತಥೈವಚ। ತಥೈವಸ್ಯಾದ್ದಶಕಲಃ ಶ್ರೋತವ್ಯಶ್ಚ ತಥೈವಚ । ಸಂಕೀರ್ತವ್ಯೋ ಮಂತವ್ಯೋ ಕವ್ಯೋ ದ್ರಷ್ಟವ್ಯ ಏವಚ। ತಥಾ ಸಖ್ಯಶ್ಚಗಂತವ್ಯಃ ಕವ್ಯಃ ಸ್ಮರ್ತವ್ಯ ಏವ ಚ । ಸೇವ್ಯಃ ಸುಭಾವ್ಯಃ ಸ್ವರ್ಗವ್ಯಃ ಭಾವ್ಯೋ ಜ್ಞಾತವ್ಯ ಏವಚ । ಪಕ್ತವ್ಯಶ್ಚೈವ ಗವ್ಯಶ್ಚ ಲಾತವ್ಯಶ್ಚ ತಥೈವಚ। ವಾಯು

| | | | |
|---|---|---|---|
| ೬೧ | ೧೬೧ | **ಪ್ರಾಣ** | "ಅನ- ಚೇಷ್ಟಾಯಾಮ್"- ಎಂಬ ಧಾತುವಿನ ರೀತ್ಯಾ, ವಿಶಿಷ್ಟ ಚೇಷ್ಟಾಪ್ರದನಾದ್ದರಿಂದ |
| ೬೨ | ೧೬೨ | **ತ್ರಾಣ** | ಸ್ವಾಧೀನ ಜೀವಗಣವನ್ನು ರಕ್ಷಿಸುವುದರಿಂದ |
| ೬೩ | ೧೬೩ | **ಅಮರ್ಷ** | ದೇವರ ದ್ವೇಷಿಗಳಲ್ಲಿ ಸದಾ ಕೋಪವುಳ್ಳವನಾದ್ದರಿಂದ |
| ೬೪ | ೧೬೪ | **ಉಪದೇಷ್ಟ** | ಸಮ್ಯಕ್ತಿಯೋಗ್ಯ ಚೇತನಂಗೆಲ್ಲಾ ಜ್ಞಾನೋಪದೇಶಕನು |
| ೬೫ | ೧೬೫ | **ಮಾರಕ** | ಸರ್ವ ದೇಹಿಗಳ ಆಯುಃ ಪೂರ್ತಿಕಾಲ ತಿಳಿದು, ಹಂಸ ಜಪವನ್ನು ನಿಲ್ಲಿಸುವನಾದ್ದರಿಂದ |
| ೬೬ | ೧೬೬ | **ಕಾಲಕ್ರೀಡನ** | ಕಾಲಾಭಿಮಾನಿಯಾಗಿ ಜಗತ್ತನ್ನು ಆಟವಾಡಿಸುವುದರಿಂದ |
| ೬೭ | ೧೬೭ | **ಸುಕರ್ತ** | ಸಜ್ಜನರದ್ವಾರಾ ಸುಕರ್ಮಗಳನ್ನು ಮಾಡಿಸುವನಾದ್ದರಿಂದ |
| ೬೮ | ೧೬೮ | **ಸುಕಾಲಜ್ಞ** | ಸುಕಾಲವುಳ್ಳ ಸಜ್ಜನರಿಗೆ ಜ್ಞಾನಪ್ರದನು. |
| ೬೯ | ೧೬೯ | **ಕಾಲಸುಸೂಚಕ** | ಕಿವಿ ಮುಚ್ಚಿಕೊಂಡರೆ ಕೇಳುವ ಪ್ರಾಣಘೋಷವನ್ನು |

| | | | |
|---|---|---|---|
| | | | ಮರಣ ಕಾಲವಲ್ಲಿ ಕೇಳದ ಹಾಗೆ ಮಾಡಿ. ಮೃತ್ಯು ಸೂಚಿಸುವುದರಿಂದ |
| ೭೦ | ೧೭೦ | **ಕಲಿಸಂಹರ್ತ** | ಅಜ್ಞಾನವನ್ನು, ದೈತ್ಯರನ್ನು. ಕಲಿಯನ್ನು ಸಂಹರಿಸುವವನಾದ್ದರಿಂದ |
| ೭೧ | ೧೭೧ | **ಕಲಿ** | "ಕಲಿ ಬಂಧನೇ"–ಎಂಬ ಧಾತುವಿನರೀತ್ಯಾ ದುಷ್ಟರನ್ನು ಬಂಧಿಸುವುದರಿಂದ |
| ೭೨ | ೧೭೨ | **ಕಾಲ** | "ಕಲದ್ರಪಣೇ"-ಎಂಬ ಧಾತುವಿನ ರೀತ್ಯಾ, ದುರ್ಜನರನ್ನು ಪರಾಭವಗೊಳಿಸುವನಾದ್ದರಿಂದ |
| ೭೩ | ೧೭೩ | **ರೇತ** | "ಶಮೋ ಮನ್ನಿಷ್ಠತಾಬುದ್ಧಿಃ ಎಂಬ ಭಾಗವತವಚನ ರೀತ್ಯಾ, ಶ್ರೀಹರಿಯಲ್ಲಿ ಭಕ್ತ್ಯತಿಶಯವುಳ್ಳವನಾದ್ದರಿಂದಲೂ, ಸರ್ವಸನ್ನಿಹಿತನಾದ್ದರಿಂದಲೂ, "ರೇತ" ಎಂಬ ಶ್ರೀಪರಮಾತ್ಮನ ಮುಖ್ಯಾಧಿಷ್ಠಾನನಾದ್ದರಿಂದಲೂ ಈ ಹೆಸರು. |
| ೭೪ | ೧೭೪ | **ಸದಾರತ** | ಸರ್ವಕಾಲಗಳಲ್ಲಿ ಶ್ರೀಪರಮಾತ್ಮನಲ್ಲಿ ಆಸಕ್ತಿವುಳ್ಳವನಾದ್ದರಿಂದ |
| ೭೫ | ೧೭೫ | **ಸುಬಲ** | ಸಜ್ಜನರಿಗೆ ಬಲಪ್ರದನು |

| | | |
|---|---|---|
| ೧೭೬ | **ಸಹೋ** | ಭಕ್ತಾಪರಾಧಸಹಿಷ್ಣುವಾದ್ದರಿಂದ |
| ೧೭೭ | **ಕಪಿ** | ಅಕವೆಂಬ ದುಃಖವನ್ನು ಕುಟ್ಟಿ ಪುಡಿಮಾಡುವುದರಿಂದ |
| ೧೭೮ | **ಗಮ್ಯ** | ಸಜ್ಜನರಿಂದ ಪ್ರಾಪ್ಯನಾದ್ದರಿಂದ |
| ೧೭೯ | **ಜ್ಞಾನ** | ಅಂತಃಜ್ಞಾನಪ್ರೇರಕನಾದ್ದರಿಂದ |
| ೧೮೦ | **ದಶಕುಲ** | ದಶೇಂದ್ರಿಯಗಳೂ ಮನೆಯಂತೆ ಅಧಿಷ್ಠಾನವಾಗಿರುವುದರಿಂದಲೂ, ದಶಶಬ್ದವಾಚ್ಯ ಸರ್ವವೂ ಅಧಿಷ್ಠಾನವಾಗಿರುವನಾದ್ದರಿಂದಲೂ |
| ೧೮೧ | **ಶ್ರೋತವ್ಯ** | ಸುಶಬ್ದಗಳನ್ನು ಕೇಳುವವನಾದ್ದರಿಂದ |
| ೧೮೨ | **ಸಂಕೀರ್ತತವ್ಯ** | ವಿಶೇಷವಾಗಿ ಕೀರ್ತನ ಮಾಡಿಸಿಕೊಳ್ಳುವವನಾದ್ದರಿಂದ |
| ೧೮೩ | **ಮಂತವ್ಯ** | ಮನಸ್ಸಿನಿಂದ ತಿಳಿಸಿಕೊಳ್ಳುವವನಾದ್ದರಿಂದ |
| ೧೮೪ | **ಕವ್ಯ** | ಕವನವೆಂಬ ವರ್ಣನೆಗೆ ಯೋಗ್ಯನಾದ್ದರಿಂದ |
| ೧೮೫ | **ದ್ರಷ್ಟವ್ಯ** | ದರ್ಶನಮಾಡಿಸಿಕೊಳ್ಳುವುದಕ್ಕೆ ಅರ್ಹನಾದ್ದರಿಂದ |
| ೧೮೬ | **ಸಖ್ಯ** | "ಸರಗತೌ"-ಎಂಬ ಧಾತುವಿನ ರೀತ್ಯಾ, "ಸರ"- ಎಂದರೆ, |

| | | | |
|---|---|---|---|
| | | | ಅನುಸರಣೆಮಾಡಿ ಹೊಂದು ವುದಕ್ಕೆ ಅರ್ಹನಾದ್ದರಿಂದ |
| ೮೭ | ೧೮೭ | ಗಂತವ್ಯ | "ಗಮಲ್ಯಗತೌ".ಎಂಬ ಧಾತುವಿನ ರೀತ್ಯಾ, ಚಲಾಚಲ ರೂಪ ಪ್ರತಿಮಾಧಿಷ್ಠಾನ ವಿಶೇಷ ಇದ್ದಲ್ಲಿಗೆ ನಡೆದು ಹೋಗಿ ಹೋದಲರ್ಹ ನಾದ್ದರಿಂದ |
| ೮೮ | ೧೮೮ | ಕರ್ತವ್ಯ | "ಕೃಕರಣೇ"–ಎಂಬ ಧಾತು ವಿನ ರೀತ್ಯಾ, ಮಂತ್ರಕ್ಕೆಜಪಾದಿ ಕ್ರಿಯೆಗಳಿಂದ ಭಜನೀಯ ನಾದ್ದರಿಂದ |
| ೮೯ | ೧೮೯ | ಸ್ಮರ್ತವ್ಯ | ತದಶಕ್ತರಿಗೆ ಮನಸಾಸ್ಮರಣೆಗೆ ಸಥಾ ವಿಷಯನಾದ್ದರಿಂದ |
| ೯೦ | ೧೯೦ | ಸೇವ್ಯ | ಯಥಾಯೋಗ್ಯವಾಗಿ ಆರಾಧನೆಮಾಡಿಸಿಕೊಳ್ಳುವವ ನಾದ್ದರಿಂದ |
| ೯೧ | ೧೯೧ | ಸುಭವ್ಯ | ಪರಮಚತುರನಾದ್ದರಿಂದ |
| ೯೨ | ೧೯೨ | ಸ್ವರ್ಗವ್ಯ | "ಪ್ರಾಣಸ್ಯೇದಂವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಂ"-ಎಂಬ ಶ್ರುತ್ಯನುಸಾರ, ಸ್ವರ್ಗದಲ್ಲಿ ರಕ್ಷಕನಾದ್ದರಿಂದ ಈ ಹೆಸರು. |
| ೯೩ | ೧೯೩ | ಭಾವ್ಯ | ಧ್ಯಾನವಿಷಯನಾದ್ದರಿಂದ |
| ೯೪ | ೧೯೪ | ಜ್ಞಾತವ್ಯ | ಸಚ್ಛಾಸ್ತ್ರಗಳ ದ್ವಾರಾ ವೇದ್ಯ ನಾಗಿರುವುದರಿಂದ |

| | | | |
|---|---|---|---|
| | | | ಪ್ರಾಣಾಂ ಸಂಕಲ್ಪಯಾಮಾಸ ಸ ಶ್ರಾದ್ಧಿಬುದ್ಧಿ॥) |
| ೧೮ | ೧೧೮ | ಶ್ರದ್ಧಾ | ಎಂಬ "ಶ್ರನ್ನಾಮಾಸ್ತಿಕ್ಯಬುದ್ಧಿಸ್ಸ್ಯಾತ್"–ಎಂಬ ವಚನಾನುಸಾರ ಸಂಪೂರ್ಣವಾದ ಆಸ್ತಿಕ್ಯ ಬುದ್ಧಿಯನ್ನು ಶ್ರೀಹರಿಯಲ್ಲಿ ಇಟ್ಟಿರುವವನು. |
| ೧೯ | ೧೧೯ | ಸಂಧ್ಯಾತ | ಸದಾ ಶ್ರೀಹರಿಯಧ್ಯಾನಶೀಲನಾದ್ದ ಕಾರಣದಿಂದ |
| ೨೦ | ೧೨೦ | ವಿಜ್ಞಾನ | ನಿತ್ಯಾಪರೋಕ್ಷೀದೇವತೆಗಳಿಗಿಂತ ಅಧಿಕನು. |
| ೨೧ | ೧೨೧ | ಮಹಾವಿಜ್ಞಾನ | ನಿತ್ಯಾಪರೋಕ್ಷೀಯಾಗಿರುವುದರಿಂದ ಈ ಹೆಸರು. |
| ೨೨ | ೧೨೨ | ಕೀರ್ತನ | ನಿತ್ಯಸಂಸ್ಮರಣವುಳ್ಳವನು. |
| ೨೩ | ೧೨೩ | ಸಂಕೀರ್ಣ | ಸರ್ವತ್ರ ಕೂಡಿರುವುದರಿಂದ ಈ ನಾಮ. |
| ೨೪ | ೧೨೪ | ಕರ್ತ | ಸ್ವಬಲವನ್ನು ಹೇಳುವವನ "ಸಹಸ್ರಗುಣಮಪ್ಯೇತನ್ಮಯಿ ಸಂಭಾವಯಾಮ್ಯಹಂ"- ಎಂದು ಶ್ರೀಕೃಷ್ಣನು ಅಂಗೀಕರಿಸುವುದರಿಂದ, ಸ್ವಶ್ಲಾಘನ ದೋಷವಾಗಲಾರದು |
| ೨೫ | ೧೨೫ | ಬುದ್ಧ | ಸಂಶಯರಹಿತನಾದ್ದರಿಂದ "ಬುದ್ಧ"ನೆಂತನಾಮ |
| ೨೬ | ೧೨೬ | ಜಯ | ಉತ್ಕರ್ಷತೋರಿಸುವನಾದ ಕಾರಣದಿಂದ. |

| | | | |
|---|---|---|---|
| ೨೭ | ೧೨೭ | **ಸುಮಹತ್ತರ** | ಸರ್ವಜೀವೋತ್ತಮನು |
| ೨೮ | ೧೨೮ | **ಸುವೀರ್ಯ** | ಅತ್ಯಂತ ಬಲವಂತನು |
| ೨೯ | ೧೨೯ | **ಮೇಧಾವೀ** | ಉತ್ಕೃಷ್ಟವಾದ ಧಾರಣಶಕ್ತಿ ಉಳ್ಳವನು. |
| ೩೦ | ೧೩೦ | **ವಿಜಯ** | ವಿಶೇಷಾಕಾರವಾಗಿ ಜಯಶೀಲನಾದ ಕಾರಣ |
| ೩೧ | ೧೩೧ | **ರಂತಿವಹ್ನಿ** | "ರಂ ತಿಷ್ಠಂತ್ಯಸ್ಮಿನ್ನಿತಿ ರಂತಿಃ ವೃಕಾಗ್ನಿಃ ಸ ಅಸ್ಯಾಸ್ತೀತಿ–ರಂತಿಮಾನ್". "ರಂ"-ಎಂಬ ಅಗ್ನಿಬೀಜಮುಖ್ಯವಾಚ್ಯತ್ವ ಇರುವುದರಿಂದ ವೃಕ–ನಾಮಕ ಅಂಗುಷ್ಠ ಪರಿಮಿತ ಅಗ್ನಿನಾಮಕ ದೇವರರೂಪಕ್ಕೆ. "ರಂತೀ"– ಎಂದು ಹೆಸರು. ಇದು ಈತನಲ್ಲಿ ಇರುವುದರಿಂದ, "ರಂತಿವಹ್ನಿ"-ನಾಮಕನೇ |
| ೩೨ | ೧೩೨ | **ಮನು** | "ಮನು ಅವಬೋಧನೇ"- ಎಂಬ ಧಾತುವಿನರೀತ್ಯಾ, ಜ್ಞಾನಸರೂಪನಾದ್ದರಿಂದ "ಮನು"–ನಾಮಕನೇ |
| ೩೩ | ೧೩೩ | **ಮೋದ** | ಐಹಿಕ ಸುಖಪ್ರದನಾದ್ದರಿಂದ |
| ೩೪ | ೧೩೪ | **ಪ್ರಮೋದ** | ಪರಲೋಕಸುಖಪ್ರದನಾದ್ದರಿಂದ |
| ೩೫ | ೧೩೫ | **ಸಂತ** | ಸ್ವಚ್ಛಚಿತ್ತನಾದವನು |
| ೩೬ | ೧೩೬ | **ಆನಂದ** | ಸರ್ವಜೀವರಿಗಿಂತ ಅಧಿಕಾನಂದವುಳ್ಳವನು. |

| | | | |
|---|---|---|---|
| ೩೭ | ೧೩೭ | **ಸಂತುಷ್ಟ** | ಇತರಾಪೇಕ್ಷಾರಹಿತನಾದ್ದರಿಂದ |
| ೩೮ | ೧೩೮ | **ಚಾರ್ವಾಂಗ** | ಅತಿಮನೋಹರವಾದ ಅವಯವವುಳ್ಳವನು. |
| ೩೯ | ೧೩೯ | **ಚಾರು** | ಮನೋಹರಲಕ್ಷಣ ಉಳ್ಳವನು. |
| ೪೦ | ೧೪೦ | **ಸುಬಾಹು** | ಅಧಿಕ ಬಾಹುಬಲವುಳ್ಳವನು |
| ೪೧ | ೧೪೧ | **ಚಾರುಪದ** | ಮನೋಹರ ಸಲ್ಲಕ್ಷಣಪಾದವುಳ್ಳವನು |
| ೪೨ | ೧೪೨ | **ಸುಲೋಚನ** | ಸುಲ್ಲಕ್ಷಣನೇತ್ರವುಳ್ಳವನು |
| ೪೩ | ೧೪೩ | **ಸಾರಸ್ವತ** | ಸರ್ವವೇದಗಳ ಜ್ಞಾನವುಳ್ಳವನು |
| ೪೪ | ೧೪೪ | **ಕಪಿ** | ತತ್ತ್ವಜ್ಞಾನಸುಖಪಾನವುಳ್ಳವನು |
| ೪೫ | ೧೪೫ | **ಸುವೀರ** | ಅರಬ್ದಾಂತಗಾಮಿವಾಗಿರುವುದರಿಂದ |
| ೪೬ | ೧೪೬ | **ಪ್ರಾಜ್ಞ** | ಶ್ರೀಹರಿಯು ವಿಷಯಕವಾದ ತತ್ತ್ವಜ್ಞಾನವೇತ್ತನು |
| ೪೭ | ೧೪೭ | **ಅಲಂಪಟ** | ವಿಷಯಗಳಲ್ಲಿ ಚಾಪಲ್ಯರಹಿತನು |
| ೪೮ | ೧೪೮ | **ಸರ್ವಜ್ಞ** | ಆಲೋಚನೆಯಿಂದ ಸರ್ವಜಗದ್ವ್ಯಾಪಾರ ಉಳ್ಳವನು |
| ೪೯ | ೧೪೯ | **ಸರ್ವಜಿತ್** | ಈ ಬ್ರಹ್ಮಾಂಡಗತ ಸರ್ವಜೀವರನ್ನು ಗೆದ್ದವನು. |
| ೫೦ | ೧೫೦ | **ಮಿತ್ರ** | ಆಪದ್ರಕ್ಷಕನು |
| ೫೧ | ೧೫೧ | **ಪಾಪವಿನಾಶನ** | ಜ್ಞಾನಿಗಳ ಪಾಪಗಳನ್ನು ನಾಶಮಾಡುವವನು |

| | | | |
|---|---|---|---|
| ೫೨ | ೧೫೨ | **ಧರ್ಮವಿನೇತ** | ವಿಶೇಷಾಕಾರವಾದ ಧರ್ಮವನ್ನು ಉಪದೇಶಮಾಡುವನಾದ್ದರಿಂದ |
| ೫೩ | ೧೫೩ | **ಶಾರದ** | "ಶಂ ಅರ್ದ"-ಎಂಬ ಬಾಹ್ಯ ಸುಖದುಃಖಬಂಧನಗಳನ್ನು ಬಿಡಿಸಿ, ಮಂಗಳಪ್ರದನು ಮತ್ತು ಕುಶಲ ಬುದ್ಧಿಯುಳ್ಳವನಾದ್ದರಿಂದ |
| ೫೪ | ೧೫೪ | **ಓಜ** | ಒಡಿಯುವಶಕ್ತನಾದ್ದರಿಂದ |
| ೫೫ | ೧೫೫ | **ಸುತಪಸ್ವೀ** | ಜ್ಞಾನಸಿದ್ಧನು ಮತ್ತು ಮಹಾತಪಸ್ವಿಯಾದ್ದರಿಂದ |
| ೫೬ | ೧೫೬ | **ತೇಜಸ್ವೀ** | ಶೌರ್ಯ ತಪಸ್ವಿಯಾದ್ದರಿಂದ ಬ್ರಹ್ಮತೇಜಸ್ಸುಳ್ಳವನೇ |
| ೫೭ | ೧೫೭ | **ದಾನಸುಶೀಲ** | ಸರ್ವರಿಗೂ ತತ್ತ್ವದ್ಯೋಗತಿ ಪ್ರದನಾದ್ದರಿಂದ |
| ೫೮ | ೧೫೮ | **ಯಜ್ಞಸುಕರ್ತ** | ಭಜನೀಯನು ಮತ್ತು ಕಾರ್ಯನಿರ್ವಾಹಾದ್ದರಿಂದ |
| ೫೯ | ೧೫೯ | **ಯಜ್ವೀ** | ದೇವರನ್ನೇಕುರಿತು, ಅವನ ಪ್ರೀತ್ಯರ್ಥವಾಗಿ ಸರ್ವಕರ್ಮಗಳನ್ನು ಯಾಗರೂಪವಾಗಿ ಅರ್ಪಿಸುವುದರಿಂದ |
| ೬೦ | ೧೬೦ | **ಯಾಗವರ್ತಕ** | ಸರ್ವರಿಂದಲೂ ದೇವತಾರಾಧನೆ ಮಾಡಿಸುವುದರಿಂದ |

ಶ್ಚೈವ ತಥಾ ಬ್ರಹ್ಮೇತ್ಯೇವಂ ಪಂಚಾಶದೀರಿತಾಃ । ಇತ್ಯೇತಚ್ಛತಕಂ ನಾಮ ಋಜೂನಾಂ ಯಃ ಪಠೇತ್ಸದಾ ।ತೈರ್ದತ್ತಾಂ ಪದವೀ ಯಾತಿ ವಾಸುದೇವಾಭಿ ವೀಕ್ಷಿತಾಮಿತಿ". ॥೩೦॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ನಾಮಾನ್ಯಪ್ರಸಿದ್ಧಾನಿ ಇತ್ಯಾಹ–"ವಾಮನ" ಇತಿ ॥ "ಇತ್ಯೇತಚ್ಛತಕಂ ನಾಮ್ನಾಂ ಋಜೂನಾಂ ಯಃ ಸ್ಮರೇತ್ ಸದಾ॥ ತೈರ್ದತ್ತಾಂ ಪದವೀಂ ಯಾತಿ ವಾಸುದೇವಾಭಿವೀಕ್ಷಿತಾಂ"॥ ಇತ್ಯೇವ ತತ್ರೋಕ್ತೇಃ ಸರ್ವಂ ಅನಾಕುಲವ್ ॥ ॥೩೦॥

## ಕನ್ನಡಾರ್ಥ

ಈ ನಾಮಗಳು ಅಪ್ರಸಿದ್ಧವಲ್ಲವೆಂಬುದಾಗಿ ಈ ಪದ್ಯದಿಂದ ಹೇಳುತ್ತಾರೆ.

ಈ ಋಜುಗಳ ನೂರು ನಾಮಗಳನ್ನು ಸದಾ ಪಠಿಸುವವರಿಗೆ, ಸಕಲಾಭೀಷ್ಟಗಳಾಗುವವು. ಈ ವಿಷಯದಲ್ಲಿ ವಾಮನಪುರಾಣದ ಮೂಲೋಕ್ತ ಶ್ಲೋಕಗಳು ಆಧಾರ. ಅದುದರಿಂದ, ಯಾವುದರಲ್ಲಿಯೂ ದೋಷವಿಲ್ಲ. ॥೩೦॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ವಾಮನಪುರಾಣದಲ್ಲಿ ಹೇಳಿದ ಈ ಮಹಾತ್ಮರಾದ ಋಜುಗಳ ನಾಮಾವಳಿಗಳನ್ನು ಸಂಪ್ರೀತಿಯಿಂದ ಸದಾ ಸ್ಮರಿಸುವರನ್ನು, ಶ್ರೀಮನೋಹರನಾದ ದೇವರು, ತನ್ನ ತ್ರಿಧಾಮವೆಂಬ ಪರಮಮಂಗಳ ಶ್ವೇತದ್ವೀಪ, ಅನಂತಾಸನ,

ವೈಕುಂಠಗಳಲ್ಲಿಟ್ಟು ಆನಂದಪಡಿಸುವನು. ಸದಾ ಅವರು ಬೇಡಿದ ಇಷ್ಟಾರ್ಥ ಗಳನ್ನು ಕೊಡುವನು. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ವಾಮನಪುರಾಣವು**—ಶ್ರೀ ವೇದವ್ಯಾಸರಿಂದ ರಚಿತವಾದ 18 ಪುರಾಣಗಳಲ್ಲಿ ಒಂದು ಸಾತ್ವಿಕ ಪುರಾಣ. ಈ ಪುರಾಣಗತ ಉತ್ತರಭಾಗದ **ಋಜುವೋಖ್ಯಾನ**—ಎಂಬ ಪರಿಶೋಧ್ಯಾಯದಲ್ಲಿ, ಹಿಂದಿನ ಪದ್ಯಗಳಲ್ಲಿ ಹೇಳಿರುವ ೧೦೦ ಮಂದಿ ಋಜುಪದಸ್ಥರ ಪರಮಮಂಗಳನಾಮಗಳು ಉಲ್ಲೇಖಿತವಾಗಿವೆ.

೨. ಅತ್ಯಂತ **ಶ್ರೇಷ್ಠ**ವೂ, ಪರಮ ಶುಭಪ್ರದವೂ ಆದ ೧೦೦ ಮಂದಿ ಋಜುಗಳ ನಾಮಾವಳಿಗಳನ್ನು ಎಡೆಬಿಡದೆ, ಭಕ್ತಿಪೂರ್ವಕ ಪಠಿಸುತ್ತಿರಬೇಕೆಂದು ದಾಸರಾಯರು ತಿಳಿಸುತ್ತಾರೆ. ಅಂತಹ ಋಜುಗಳ ನಾಮಸಂಸ್ಮರಣೆ ಉಳ್ಳವರಿಗೆ, ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನು ಪರಮಾನುಗ್ರಹ ಮಾಡುವನು.

**೩. ಶ್ರೀ ಮನೋರಮನು–**

"ಶ್ರೀ"- ಎಂದರೆ, ಶುಭಪ್ರದನಾದ ಮಂಗಳನಾಮಧೇಯಗಳಾದ ಶ್ರೀಲಕ್ಷ್ಮೀದೇವಿ. ಅವಳ ಮನಸ್ಸಿಗೆ ಆನಂದಪ್ರದನಾದ್ದರಿಂದ, ಶ್ರೀಹರಿಯು "ಶ್ರೀಮನೋರಮನು". ಅಂತಹ ಶ್ರೀಮನೋರಮನ ಪ್ರಥಮಾಂಗಭೂತರೂ ಮತ್ತು ಅವಿಚ್ಛಿನ್ನಭಕ್ತರೂ ಆದವರು ಋಜುಗಣಸ್ಥರು. ಅವರ ನಾಮ ಸಂಸ್ಮರಣೆಯಿಂದ, ಬಿಂಬನಾದ ಶ್ರೀಮನೋರಮನು ಸಂಪ್ರೀತನಾಗುವುದರಲ್ಲಿ ಸಂದೇಹವೇ ಇಲ್ಲ.

೪. ಆ ಶ್ರೀಮನೋರಮನು ನಿರಂತರವೂ ಋಜುಗಳ ಶತ ನಾಮಾವಳಿಗಳನ್ನು ಭಕ್ತಿಪೂರ್ವಕ ಆದರಪುರಸ್ಸರವಾಗಿ ಪಠಿಸುತ್ತಿರುವವರ ಸಕಲೇಷ್ಟಾರ್ಥಗಳನ್ನು ಪೂರೈಸುವನು. ಅವರ ಸಕಲಕಾಮಿತಾರ್ಥಗಳ ನ್ನಿತ್ತು, ಇಹದಲ್ಲಿ ಸುಖಿ, ಪರದಲ್ಲಿ ಮುಕ್ತಿಯ ಆನಂದರಾಗಿ, ಸಾಧನ ಸಂಪತ್ತು ಗಳಾದ ಸಮೀಚೀನ ಜ್ಞಾನ-ಸುದೃಢವಾದ ಭಕ್ತಿ-ಪರಮ ವೈರಾಗ್ಯಭಾಗ್ಯ ಗಳನ್ನು ಕೊಡುವನು.

೫. ಲಿಂಗಭಂಗದ್ವಾರಾ, ಅವರ ಸಕಲಕರ್ಮಗಳನ್ನು ವಿಮೋಚನ ಗೊಳಿಸಿ, ಪವಿತ್ರೀಕರಿಸಿ, ತನ್ನ ಮುಕ್ತಿಧಾಮಗಳಾದ, ಶ್ವೇತದ್ವೀಪ-ಅನಂತಾಸನ-ವೈಕುಂಠ-ಎಂಬ ತ್ರಿಧಾಮಗಳಲ್ಲಿ, ಅವರವರ ಸ್ವರೂಪಯೋಗ್ಯತಾನುಸಾರ ಇಟ್ಟು, ಅವರ ಸ್ವರೂಪಗತಆನಂದವನ್ನು ಅಭಿವ್ಯಕ್ತಿಮಾಡಿ ಸ್ವಸ್ವರೂಪಾನಂದಾನುಭವರೂಪವಾದ ಮುಕ್ತಿಯನ್ನು ಕೊಡುವನು-ಎಂದು ದಾಸರಾಯರು ಋಜುಗಳ ಶತನಾಮಾವಳಿಯ ಸಂಸ್ಮರಣೆಯ ಫಲಸ್ತುತಿಯನ್ನು ತಿಳಿಸುತ್ತಾರೆ.

**ಋಜುಗಣಸ್ಥರ ಶತನಾಮವಳಿಯ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.**

| ಕ್ರಮ ಸಂಖ್ಯೆ | ಪ್ರತ್ಯೇಕ ಸಂಖ್ಯೆ | ಋಜು ಪದವಿಯ ಹೆಸರು | ಶಬ್ದಾರ್ಥ ವಿವರಣೆ |
|---|---|---|---|
| ೧ | ೧೦೧ | **ಕಲ್ಕಿ** | ಕಲಿಯನ್ನು ನಿರಾಕರಿಸುವವನು |
| ೨ | ೧೦೨ | **ಸುತೇಜ** | ಸುಪರಾಕ್ರಮಿ–ಭಕ್ತಾಗ್ರೇಸರ–ವಿಶೇಷಬ್ರಹ್ಮ ವರ್ಚಸ್ವಿ |
| ೩ | ೧೦೩ | **ದಾಸ** | ಶ್ರೀಪರಮಾತ್ಮನಿಗೆ ಪ್ರಥಮ ಕಿಂಕರನು. ಶ್ರೀಲಕ್ಷ್ಮಿತರುವಾಯ |
| ೪ | ೧೦೪ | **ಧರ್ಮ** | ಧರ್ಮಾಧರ್ಮಸ್ವರೂಪಿಯು |
| ೫ | ೧೦೫ | **ಅಧರ್ಮ ಖಂಡನ** | ಅಧರ್ಮಗಳನ್ನು ದಂಡನ ಖಂಡನ ಮಾಡುವವನು |
| ೬ | ೧೦೬ | **ವರ್ಚಸ್ವಿ** | ಮಹಾಕಾಂತಿಯುಕ್ತನು |
| ೭ | ೧೦೭ | **ಭೀಷಣ** | ಶತ್ರು ಭಯಂಕರನು |
| ೮ | ೧೦೮ | **ಸಾಧು** | ಸತ್ವೋದ್ರಿಕ್ತನು |

| | | | |
|---|---|---|---|
| ೯ | ೧೦೯ | **ಮಹೀಪತಿ** | ಪೂಜ್ಯ ಪ್ರಭುವಾದ್ದರಿಂದ |
| ೧೦ | ೧೧೦ | **ಸದ್ಧರ್ಮಜ್ಞ** | ಸದ್ಧರ್ಮವನ್ನು ತಿಳಿದವನು. |
| ೧೧ | ೧೧೧ | **ಧರ್ಮಜ** | ಧರ್ಮವನ್ನು ಉತ್ಪತ್ತಿ ಮಾಡುವ ಕಾರಣದಿಂದ |
| ೧೨ | ೧೧೨ | **ಸಂಪೂರ್ಣ** | ಪೂರ್ಣಪ್ರಜ್ಞನಾದ ಶ್ರೀಹರಿಯನ್ನು ಚೆಂದಾಗಿ ತಿಳಿದಿರುವವನು. |
| ೧೩ | ೧೧೩ | **ಶುಭ್ರ** | ಪರಿಶುದ್ಧ ಜ್ಞಾನವುಳ್ಳವನು |
| ೧೪ | ೧೧೪ | **ವೈಕೃತ** | ಅನೇಕ ರೂಪಧರನು. |
| ೧೫ | ೧೧೫ | **ಆಂಜನ** | ಭಕ್ತರಿಗೆ ಪುಣ್ಯವನ್ನು ಅಭ್ಯಂಜನ ಮಾಡುವವನು. (ಧಾರೆ ಎರೆಯುವವನು.) ಅಕಾರ : ಸರ್ವವಾಗಾತ್ಮಾ ಪರಬ್ರಹ್ಮಾಭಿದಾಯಕ- ಎಂದು ತಿಳಿದು ಉಪಾಸನಮಾಡುವುದರಿಂದ "ಆಂಜನನಾಮಕನೇ. |
| ೧೬ | ೧೧೬ | **ಸರ್ಷಪ** | "ಋಷಿ ಜ್ಞಾನೇ"–ಎಂಬ ಧಾತುವಿನ ರೀತ್ಯಾ, ಸರ್ಷರೆಂಬ ಜ್ಞಾನಿಗಳನ್ನು ಪರಿಪಾಲಿಸುವವನು. |
| ೧೭ | ೧೧೭ | **ಖರ್ಪಟಿ** | "ಖಂ- ಖಪತಯೇನಮಃ"– ಶ್ರೀಹರಿಯಲ್ಲಿ ಸರ್ವಕ್ರಿಯ ಸಮರ್ಪಣೆ ಮಾಡುವವನು. ಕರಿಷ್ಯಮಾಣಾನಿ ಚ ತಸ್ಯ |

| | | | |
|---|---|---|---|
| ೯೫ | ೧೯೫ | ವಕ್ತ್ರವ್ಯ | ವಕ್ತೃವಾದ ಗುರುವಿನಿಂದ ಇತರರ ವಿಷಯಕವಾಗಿ ಹೇಳಿಸಿಕೊಳ್ಳುವವನಾದ್ದರಿಂದ |
| ೯೬ | ೧೯೬ | ಗವ್ಯ | ವೇದಾದಿಗಳಿಂದ "ಗೌಃ"- ಎಂಬ ವಾಕ್ಯಕ್ಕೆ ಗೋಚರನಾದ್ದರಿಂದ |
| ೯೭ | ೧೯೭ | ಲಾತವ್ಯ | ಮುಂದಿನ ವಾಯುಪದವಿಗೆ ಬರುವನಾದ್ದರಿಂದ |
| ೯೮ | ೧೯೮ | ವಾಯು | ಸರ್ವಜೀವರ ಹೃತ್ಕಮಲದಲ್ಲಿ ಶ್ವಾಸರೂಪಜಪ ಮಾಡಿ, ಸರ್ವಚೇಷ್ಟಾಪ್ರದನಾಗಿ, ಶ್ರೀ ಪರಮಾತ್ಮನಿಗೆ ಪ್ರಥಮಾಂಗಭೂತನಾಗಿರುವುದರಿಂದ "ವಾಯು" ನಾಮಕನು. |
| ೯೯ | ೧೯೯ | ಬ್ರಹ್ಮ | ಸರ್ವ ಜೀವರಿಂದಲೂ ಭಕ್ತಿ ಜ್ಞಾನ ಅಧಿಕಪೂರ್ಣನಾಗಿರುವುದರಿಂದಲೂ, ಬ್ರಾಹ್ಮಣರಲ್ಲಿ ಪ್ರೀತಿ ಉಳ್ಳವನಾದ್ದರಿಂದಲೂ ಸರಸ್ವತಿಪತಿಯಾದ್ದರಿಂದಲೂ ಋಜುಗಣಸ್ಥರಲ್ಲಿ ಸಾಧನ ಪೂರ್ಣವುಳ್ಳ ಋಜುಶ್ರೇಷ್ಠನಾಗಿರುವುದರಿಂದಲೂ, ಜಗತ್ತಿಗೆ ಮುಖ್ಯಗುರುವಾಗಿರುವುದರಿಂದಲೂ, "ಬ್ರಹ್ಮ"ನಾಮಕನೇ. |

## ಪದ್ಯ-೩೧

**ಮೂಲ :**

**ಈ ಸಮೀರಗೆ ನೂರು ಜನುಮ ಮ ।**
**ಹಾಸುಖ ಪ್ರಾರಬ್ಧ ಭೋಗ ಪ್ರ ।**
**ಯಾಸವಿಲ್ಲದಲೈದಿದನು ಲೋಕಾಧಿಪತ್ಯವನು ॥**
**ಭೂಸುರನ ಒಪ್ಪಿಡಿಯವಲಿಗೆ ವಿ ।**
**ಶೇಷ ಸೌಖ್ಯವನಿತ್ತ ದಾಶನ ।**
**ದಾಸವರ್ಯನು ಲೋಕಪತಿಯೆನಿಸುವುದು ಅಚ್ಚರವೆ ॥೩೧॥**

**ಅವತರಣಿಕೆ :**

ಶ್ರೀವಾಯುದೇವರ ನೂರುಜನ್ಮ ಪ್ರಾರಬ್ಧಭೋಗದ ವಿಚಾರವನ್ನು ತಿಳಿಸುತ್ತಾರೆ. ॥೩.೨॥

**ಪ್ರತಿಪದಾರ್ಥ :**

**ಈ ಸಮೀರಗೆ**—ವರ್ತಮಾನ ವಾಯುಪದಸ್ಥರಾದ ಪ್ರಧಾನವಾಯು ದೇವರಿಗೆ, **ನೂರುಜನ್ಮ**—ನೂರು ಜನ್ಮ ಸಾಧನಾನಂತರ, **ಪ್ರಾರಬ್ಧ ಭೋಗ**—ಸ್ಥೂಲಾಪರೋಕ್ಷವನ್ನು ಹೊಂದಿ, ಕಲ್ಕಿ ಎಂಬ ಹೆಸರನ್ನು ಪಡೆದು, ತದಾರಭ್ಯ ಬ್ರಹ್ಮ ಪದಪರ್ಯಂತ ನೂರುಬ್ರಹ್ಮಕಲ್ಪಸಾಂಕೇತವಾದ ನೂರು ಜನ್ಮ ಪ್ರಾರಬ್ಧಕರ್ಮ ಭೋಗ ಮಾಡುತ್ತಾರೆ. (ಅಪರೋಕ್ಷಾನಂತರ ಕಾಲೀನ ಕರ್ಮವೇ ಪ್ರಾರಬ್ಧಕರ್ಮವೆನಿಸುವುವು) **ಮಹಾಸುಖ**—ಅತ್ಯಂತಸುಖ ಕರವಾದ ಸುಖಪ್ರಾರಬ್ಧವನ್ನು (ಋಜುಗಳಿಗೆ ದುಃಖಪ್ರಾರಬ್ಧವಿಲ್ಲ.) **ಪ್ರಯಾಸವಿಲ್ಲದಲೆ**–ಏನೇನೂ ಶ್ರಮವಿಲ್ಲದ್ದಾಂಗೆ, **ಲೋಕಾಧಿಪತ್ಯವನು**–ಸತ್ಯಲೋಕಾಧಿಪತ್ಯವನ್ನು, **ಐದಿದನು**—ತಮ್ಮ ನೂರನೆಯ ಜನ್ಮದಲ್ಲಿ ಪಡೆಯುವನಾದನು (೧೧ಜನ್ಮ ಸುಖಪ್ರಾರಬ್ಧಭೋಗ ತರುವಾಯ ೨೦೦ನೆಯ

ಕಲ್ಪದಲ್ಲಿ ಸತ್ಯಲೋಕಾಧಿಪತ್ಯಪ್ರಾಪ್ತಿ) **ಭೂಸುರನ**—ವಿಪ್ರೋತ್ತಮನಾದ ಸುಧಾಮನ, **ಒಪ್ಪಿಡಿಯವಲಿಗೆ**—ಹಿಡಿ ಅವಲಕ್ಕಿಗೆ, **ವಿಶೇಷ ಸೌಖ್ಯವನಿತ್ತ**—ಅತ್ಯಂತ ಶ್ರೇಷ್ಠವಾದ ಆನಂದವನ್ನು ಕೊಡುವವನಾದನು. **ದಾತನ**—ಅಂತಹ ದಾನಶೂರನಾದ ಶ್ರೀಪರಮಾತ್ಮನ, **ದಾಸವರ್ಯನು**—ರುದ್ರಾದಿಗಳಿಗಿಂತ ಉತ್ತಮನಾದ ಶ್ರೇಷ್ಠದಾಸರಾದ ಶ್ರೀ ವಾಯುದೇವರು, **ಲೋಕಪತಿ ಎನಿಸುವ್ರುದು**— ಸತ್ಯಲೋಕಾಧಿಪತಿ-ಎಂತ ಕರೆಯಿಸುವುದು, **ಅಚ್ಚರವೆ**—ಏನು ಆಶ್ಚರ್ಯ ! ಆಶ್ಚರ್ಯವೇನೂ ಇಲ್ಲ ಎಂದರ್ಥ. ॥೩೦॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ನೂರುಜನ್ಮ ಪ್ರಾರಬ್ಧಭೋಗ ವಾಯುದೇವರಿಗೆ- ಎಂದು ಹೇಳುತ್ತಾರೆ.

ವರ್ತಮಾನ ಪ್ರಧಾನವಾಯುದೇವರಿಗೆ ನೂರುಜನ್ಮ ಸಾಧನಾನಂತರ ಸ್ಥೂಲಾಪರೋಕ್ಷವನ್ನು ಹೊಂದಿ, ಕಲ್ಪ- ಎಂತ ನಾಮ ಪಡೆದು, ತದಾರಭ್ಯ ಬ್ರಹ್ಮಪದಪರ್ಯಂತ ನೂರುಬ್ರಹ್ಮಕಲ್ಪಸಾಂಕೇತವಾದ ನೂರುಜನ್ಮ ಪ್ರಾರಬ್ಧ ಕರ್ಮಭೋಗ ಮಾಡಬೇಕು. ಅಪರೋಕ್ಷಾತ್ಪೂರ್ವಕಾಲೀನಕರ್ಮ ಪ್ರಾರಬ್ಧ ಭೋಗ ಎಂತ ಕರೆಸೋದಿಲ್ಲ. ಅಪರೋಕ್ಷಾನಂತರಕಾಲೀನಕರ್ಮವೇ ಪ್ರಾರಬ್ಧ ಕರ್ಮ- ಎಂತ ಎನಿಸೋದಾಗತದೆ. ಆದ್ದರಿಂದ, ಅಪರೋಕ್ಷಾನಂತರ ಬ್ರಹ್ಮ ಪದಾಂತವರಿಗೂ ಭೋಗವಾಡತಕ್ಕ ಕರ್ಮ ಪ್ರಾರಬ್ಧಕರ್ಮ. ಋಜುಗಳಿಗೆ ದುಃಖಪ್ರಾರಬ್ಧವಿಲ್ಲ, ಸುಖಪ್ರಾರಬ್ಧವೇ. ಇದು ಮಹಾಸುಖಕರವಾದದ್ದು. ಆದ್ದರಿಂದ,ಪ್ರಯಾಸವಿಲ್ಲದೆ ಭೋಗಮಾಡಿ, ಸತ್ಯಲೋಕಾಧಿಪತ್ಯವನ್ನು ನೂರನೇ ಜನ್ಮದಲ್ಲಿ ಪಡೆತಾರೆ. ವರ್ತಮಾನ ಸತ್ಯಾಲೋಕಾಧಿಪ ಬ್ರಹ್ಮದೇವರು, ತತ್ಪೂರ್ವದಲ್ಲಿ ತೊಂಭತ್ತೊಂಭತ್ತುಜನ್ಮ ಸುಖಪ್ರಾರಬ್ಧಭೋಗಮಾಡಿ, ನೂರನೆಯದ ಈ ಕಲ್ಪದಲ್ಲಿ ಸತ್ಯಲೋಕಾಧಿಪತ್ಯವನ್ನು ಪಡೆದಿದ್ದಾರೆ. ವಾಯು ದೇವರಿಗೆ ಈಗ್ಗೆ ತೊಂಭತ್ತೊಂಭತ್ತನೇ ಜನ್ಮ. ಮುಂದೆ ನೂರನೇ ಜನ್ಮದಲ್ಲಿ

ಸತ್ಯಲೋಕಾಧಿಪರಾಗುತ್ತಾರೆ. ಈಗಿನ ಬ್ರಹ್ಮ ಮುಂದಿನ ಕಲ್ಪಕ್ಕೆ ಇರೋದಿಲ್ಲ. ಈ ಕಲ್ಪದಲ್ಲಿ ಮುಕ್ತರಾಗುತ್ತಾರೆ. ಬ್ರಾಹ್ಮಣನಾದ ಸುಧಾಮನ ಒಂದು ಹಿಡಿ ಅವಲಕ್ಕಿಗೆ ಅತಿಸೌಖ್ಯ ಪರಮಾತ್ಮ ಕೊಡೋವನಾದ. ಇಂಥಾ ದಾತನಾದ ಪರಮಾತ್ಮನ ದಾಸರಾದ ರುದ್ರಾದಿಗಳಿಗಿಂತಲೂ ಶ್ರೇಷ್ಠದಾಸರಾದ ವಾಯು ದೇವರು ಸತ್ಯಲೋಕಾಧಿಪತಿ–ಎನಿಸುವುದು ಏನು ಆಶ್ಚರ್ಯ. ಅಂದರೆ, ಆಶ್ಚರ್ಯ ವಲ್ಲ ಎಂತ ತಾತ್ಪರ್ಯ. ॥೩೧॥

## ೨. ಭಾವಪ್ರಕಾಶಿಕೆ

ಈ ವಾಯುದೇವರು ಒಟ್ಟು ೧೦೦ ಕಲ್ಪ ಸುಖಪ್ರಾರಬ್ಧವನ್ನು ಅನುಭವಿಸಿ, ಬ್ರಹ್ಮಪದವಿಯನ್ನು ಹೊಂದಿದರು. ಶ್ರೀ ಕೃಷ್ಣರೂಪಿಯಾದ ಪರಮಾತ್ಮನು ಕುಚೇಲನ ಒಂದು ಹಿಡಿ ಅವಲಕ್ಕಿಗೆ ಮೆಚ್ಚಿ, ಅವನಿಗೆ ಇಹದಲ್ಲಿ ಮಹದೈಶ್ವರ್ಯ ವನ್ನು ಕೊಟ್ಟು, ಪರಲೋಕದಲ್ಲಿ ಮುಕ್ತಿಯನ್ನು ಕೊಟ್ಟನು. ಇಂತಹ ದಾತನ ದಾಸವರ್ಯರಾದ ವಾಯುದೇವರಿಗೆ ಲೋಕಾಧಿಪತ್ಯ ಬರುವುದು ಆಶ್ಚರ್ಯ ವೇನು ? ॥೩೧॥

## ೩. ಭಾವದರ್ಪಣ

ಈ ವಾಯುದೇವರು ನೂರು ಕಲ್ಪ ಸುಖಪ್ರಾರಬ್ಧ ಭೋಗಿಸಿದ ನಂತರ, ಮೋಕ್ಷ ಅಗತಕ್ಕದಾದ್ದರಿಂದ, ಆ ವಿಚಾರ ಹೇಳುತ್ತಾರೆ! ಈ ಸಮೀರ! "ಬ್ರಹ್ಮಣಾಂ ಶತಕಾಲಾತ್ತು ಪೂರ್ವಪ್ರಾರಬ್ಧ ಸಂಕ್ಷಯಃ"-ಇತಿ **ಅನುವ್ಯಾಖ್ಯಾನ ಮಾನೋಕ್ತೇಃ** । ಅಚ್ಚರವೆ–ಆಶ್ಚರ್ಯವೇ, ದಾಸಪತಿ-ವಾಯು. ॥೩೧॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

ಪ್ರಾಸಂಗಿಕಂ ಪರಿಸಮಾಪ್ಯ ಪ್ರಕೃತಂ ಅನುಸರತಿ-"**ಈ** ಸಮೀರ" ಇತಿ॥ "ಪ್ರಯಾಸಃ"–ದುಃಖಾತ್ಮಾ॥ ನೇಃ ಮಾಸ್ವಯರ್ಥಂ ಇತ್ಯಾರ್ಹ"-ಭೂಸುರ" ಇತಿ. ॥೩೧॥

## ಕನ್ನಡಾರ್ಥ

ಪ್ರಾಸಂಗಿಕವಾಗಿ ಪ್ರಾಪ್ತವಾದ ವಿಷಯದ ನಿರೂಪಣೆಯನ್ನು ಮುಗಿಯಿಸಿ, ಪ್ರಕೃತವಾದ ವಿಷಯವನ್ನು ಮುಂದುವರಿಸುತ್ತಾರೆ—"ಈ ಸಮೀರ"- ಈ ಪದ್ಯದಿಂದ.

"ಪ್ರಯಾಸ"-ದುಃಖಸ್ವಭಾವ ಎಂದು ಅರ್ಥ. ವಾಯುದೇವರಲ್ಲಿ ಇದು ಆಶ್ಚರ್ಯಕರವೇನೂ ಅಲ್ಲ- ಎಂಬುದನ್ನು ತಿಳಿಸುತ್ತಾರೆ—'ಭೂಸುರ'- ಎಂಬ ಚರಣದಿಂದ. ॥೩೧॥

**ಶ. ಗುರುಹೃದಯ ಪ್ರಕಾಶಿಕೆ**

ಈ ವಾಯುದೇವರಿಗೆ ನೂರು ಜನ್ಮ ಮಹಾಸುಖಪ್ರಾರಬ್ಧ ಭೋಗವನ್ನು ಲೇಶ ಪ್ರಯಾಸವಿಲ್ಲದೆ ಹೊಂದಿದ ನಂತರ, ಬ್ರಹ್ಮಲೋಕಾಧಿಪತ್ಯವನ್ನು ಈತ ಹೊಂದಿದನು. ಸುಧಾಮನೆಂಬ ಬ್ರಾಹ್ಮಣನ ಒಂದು ಹಿಡಿ ಅವಲಕ್ಕಿಗೆ ವಿಶೇಷಸೌಖ್ಯವನ್ನು ಕೊಟ್ಟ ಮಹಾದಾತೃವಾದ ಶ್ರೀಹರಿಯ ದಾಸವರ್ಯರಾದ ಪ್ರಾಣದೇವರು ಚತುರ್ದಶಲೋಕಾಧಿಪತಿಯಾಗುವುದು ಆಶ್ಚರ್ಯವೇನೂ ಅಲ್ಲ. ॥೩೧॥

## ಸರ್ವವ್ಯಾಖ್ಯಾನಸಾರಸಂಗ್ರಹ

೧ ಮಹಾಪ್ರಳಯಕಾಲದಲ್ಲೂ ಸದಾ ಜಾಗ್ರತರಾಗಿರುವ ಭಾವೀ ಬ್ರಹ್ಮರಾದ ಶ್ರೀವಾಯುದೇವರಿಗೆ **ಸಮೀರ**—ಎಂದು ಹೆಸರು. ಅಂದರೆ, ಪ್ರಧಾನವಾಯುದೇವರು— ಎಂದರ್ಥ.

೨ ಅವರಿಗೆ ನೂರು ಜನುಮ ಮಹಾಸುಖ ಮತ್ತು ಪ್ರಾರಬ್ಧಭೋಗ. **ಕಲ್ಕಿ**-ಎಂಬ ಋಜುಪದಕ್ಕೆ ಬಂದು, ಅಲ್ಲಿಂದ ಪ್ರಾರಂಭಿಸಿ, ೯೯ನೆಯ ಕಲ್ಪದಲ್ಲಿ

ವಾಯುಪದಸ್ಥನಾಗಿ, ಮುಂದಿನ ೧೦೦ನೆಯ ಬ್ರಹ್ಮಕಲ್ಪದಲ್ಲಿ ಸತ್ಯಲೋಕಾಧಿಪತಿಯಾಗಿ, ಬ್ರಹ್ಮಪದವಿಗೆ ಬರುವ ವಾಯುದೇವರು. ಪ್ರತಿಬ್ರಹ್ಮಕಲ್ಪವೂ ಜನ್ಮ ಸಾಂಕೇತ. ನೂರು ಜನ್ಮಗಳೆಂದರೆ, ಕಲ್ಕಿ ಪದವಿಯಿಂದ ಆರಂಭಿಸಿ, ಮುಂದಿನ ೧೦೦ ಬ್ರಹ್ಮಕಲ್ಪದ ಪರ್ಯಂತ ಎಂದರ್ಥ. ವಾಯುದೇವರ ಆನಂದ ಇತರ ಜೀವರಿಗಿಂತ ಅತ್ಯಂತ ಮಿಗಿಲು. ಇದರಿಂದ ಜೀವೋತ್ತಮರು ಮಹಾಸುಖಿ (ಮಹದಾನಂದ) ಅವರ ಕರ್ಮಾನುಭೋಗ ಅಪರೋಕ್ಷಾತ್ ಪೂರ್ವಕಾಲೀನ ಕರ್ಮವು ಪ್ರಾರಬ್ಧಕರ್ಮವೆನಿಸುವುದಿಲ್ಲ. ಅಪರೋಕ್ಷಾನಂತರದ ಕರ್ಮಭೋಗವೇ ಪ್ರಾರಬ್ಧ ಸುಖಾಸುಖವವು. ಋಜುಗಣಸ್ಥರಿಗೆ ದುಃಖಪ್ರಾರಬ್ಧವು ಎಂದೆಂದಿಗೂ ಇಲ್ಲ.

೩ ಈ ಮಹಾಸುಖರೂಪವಾದ ಪ್ರಾರಬ್ಧಕರ್ಮವನ್ನು ಪ್ರಯಾಸವಿಲ್ಲದೆ ಅನುಭೋಗಿಸುತ್ತಾರೆ. ಅದರ ಅನುಭವರೂಪವಾದ ಪರಿಣಾಮವು ಅವರಿಗಿಲ್ಲ. ಅವರ ಸಾಧನೆ ಸಹಜವಾದದ್ದು. ಶ್ರಮದೀದ ಶ್ರೀಹರಿಯು ಸಾಕ್ಷಾತ್ಕಾರವಾಗಬೇಕಾಗಿಲ್ಲ. ಭಗವದಪರೋಕ್ಷ ಅವರಿಗೆ ಅತ್ಯಂತ ಸಹಜ. ಶ್ರಮರಹಿತ- ಸ್ವಾಭಾವಿಕ.

೪ ೯೯ನೆಯ ಋಜುಪದಸ್ಥರಾದ ವಾಯುದೇವರು ಪ್ರಯಾಸವಿಲ್ಲದೇ ೧೦೦ನೆಯ ಬ್ರಹ್ಮಕಲ್ಪದಲ್ಲಿ ಶ್ರೀಹರಿಯ ನಾಭೀಕಮಲಸಂಜಾತರಾಗಿ, ಬ್ರಹ್ಮಪದವಿಯನ್ನು ಪಡೆದು, ಸತ್ಯಲೋಕಾಧಿಪತಿ ಎನಿಸುವರು.

೫ ಭಕ್ತೋತ್ತಮವಾದ ಸುಧಾಮನು ತಂದ ಮೂರು ಹಿಡಿ ಅವಲಕ್ಕಿಯಲ್ಲಿ ಯದುಕುಲ ಲಲಾಮ ಶ್ರೀಕೃಷ್ಣನು ಒಂದು ಹಿಡಿಯಷ್ಟು ಮಾತ್ರ ತೆಗೆದುಕೊಂಡು, ಬಡವನಾದ ಕುಚೇಲನಿಗೆ ಇಹದಲ್ಲಿ ಸೌಭಾಗ್ಯ ಸಂಪತ್ತುಗಳನ್ನು ಅನುಗ್ರಹಿಸಿದನು. ಪರದಲ್ಲಿ ಮುಕ್ತಿಪದವಿಯನಿತ್ತನು. ಅವನೆಂತಹ ದಾತನು-ಅಂದರೆ, ದಾನಶೂರನೆಂದು ಕೊಂಡಾಡುತ್ತಾರೆ.ದಾಸರಾಯರು.

೬ ಅಂತಹ ಉದಾರದಾನಿಯು ಜೀವೋತ್ತಮರೂ ತನ್ನ ಏಕಾಂತ ಭಕ್ತರೂ, ಪ್ರಥಮಾಂಗಭೂತರೂ ಆದ ಶ್ರೀವಾಯುದೇವರಿಗೆ ಸತ್ಯಲೋಕಾಧಿ

ಪತ್ಯವನ್ನು ಇತ್ತ ವಿಷಯ ಅಂತಹ ಆಶ್ಚರ್ಯವೇನಿಲ್ಲ!- ಎಂದು ಉದ್ಗಾರ ತೆಗೆದಿದ್ದಾರೆ-ದಾಸವರ್ಯರು.

**ಪ್ರಮಾಣ**—ಬ್ರಹ್ಮಾಣಾಂ ಶತಕಾಲಾತ್ತು ಪೂರ್ವಪ್ರಾರಬ್ಧ ಸಂಕ್ಷಯ"-

**ಇತಿ ಅನುವ್ಯಾಖ್ಯಾನೇ**

## ಪದ್ಯ-೩೨

**ಮೂಲ :**

**ದ್ವಿಶತಕಲ್ಪಗಳಲ್ಲಿ ಬಿಡದೀ |**
**ಹೆಸರಿನಿಂದಲಿ ಕರೆಸಿದನು ತ |**
**ನ್ನೊಶದಮರರೊಳಗಿಟ್ಟು ಮಾಡುವನವರ ಸಾಧನವ ||**
**ಅಸದುಪಾಸನಗೈವ ಕಲ್ಯಾ |**
**ದ್ಯಸುರ ಪರ ಸಂಹರಿಸಿ ತಾ ಪೊಂ |**
**ಬಸಿರಪದವೈದಿದನು ಗುರುಪವಮಾನ ಸತಿಯೊಡನೆ ||೩೨||**

**ಅವತರಣಿಕೆ**

ಶ್ರೀವಾಯುದೇವರ ವಿಚಾರವನ್ನೇ ಮತ್ತೂ ಹೇಳುತ್ತಾರೆ. ||೩೨||

**ಪ್ರತಿಪದಾರ್ಥ**

**ದ್ವಿಶತಕಲ್ಪಗಳಲ್ಲಿ**—ಇನ್ನೂರು ಬ್ರಹ್ಮಕಲ್ಪಗಳಲ್ಲಿ (ದ್ವಿಶತ-೨x೧೦೦= ೨೦೦), **ಬಿಡದೆ**= ಬಿಡದೇನೇ (ನಾಮಗಳ ಹೊರತು ಬೇರೆ ಹೆಸರುಗಳಿಲ್ಲ.) **ಈ ಪೆಸರಿನಿಂದಲಿ**— ಈ ಪೂರ್ವೋಕ್ತನಾಮಗಳಿಂದ, **ಕರೆಸಿದನು**—ಕರೆಸು ವವನಾದನು. **ತನ್ನ ವಶದ ಅಮರರೊಳಗೆ**—ತನ್ನ ಅಧೀನದಲ್ಲಿರುವ ರುದ್ರಾದಿ ಸಕಲದೇವತೆಗಳಲ್ಲಿ (ಪಾ-ತನ್ನಂಶವ— ಶ್ರೀವಾಯುದೇವರು

ತಮ್ಮ ಅಂಶವನ್ನು ಸ್ವಾಧೀನರಾದ ದೇವತೆಗಳಲ್ಲಿ ಇಟ್ಟು-ಎಂದರ್ಥ ಮಾತ್ರ ನೇಕು **ಇಟ್ಟು**—ತಾವು ವಿದ್ಯಮಾನರಾಗಿದ್ದು, **ಅವರ ಸಾಧನ ಮಾಡುವನು**—ಆಯಾಯಾ ದೇವತೆಗಳ ಸಾಧನಗಳನ್ನು ತಾವೇ ಮಾಡಿ, ಅವರ ದ್ವಾರಾ ಮಾಡಿಸುವರು. **ಅಸದುಪಾಸನೆಗೈವ**—"ಅಹಂ ಬ್ರಹ್ಮಾಸ್ಮಿ"-ಎಂತಲೂ. ತಾರತಮ್ಯ, ಪಂಚಭೇಧಗಳೇ ಇಲ್ಲಾ- ಎಂತಲೂ, ಸೋಽಹಂ ಉಪಾಸಕರಾದ, **ಕಲ್ಯಾದಿ ಅಸುರ**—ಕಲಿಯೇ ಮೊದಲಾದ ಅಸುರರಾದ ತತ್ತ್ವದೈತ್ಯರನ್ನು, **ಪರ**—ಶ್ರೀವಿಷ್ಣುಪ್ರೀತ್ಯರ್ಥವಾಗಿ, **ಸಂಹರಿಸಿ**—ಹನುಮ ಭೀಮಾವತಾರಗಳಿಂದ ಸಂಹರಿಸಿ, ಮಧ್ವಾವತಾರದಿಂದ ಅವರ ಕುಮತ ಗಳನ್ನು ಭಂಗಗೊಳಿಸಿ, **ತಾ**—ಆ ವಾಯುದೇವರು, **ಗುರುಪವಮಾನ**—ತ್ರೈಲೋಕ್ಯಾಚಾರ್ಯರಾದ ಪಾವನಮೂರ್ತಿಗಳಾದ ಪವಮಾನರು, **ಸತಿಯೊಡನೆ**—ತಮ್ಮ ಪತ್ನಿಯಾದ ಶ್ರೀಭಾರತೀದೇವಿಯರ ಸಹಿತರಾಗಿ. **ಪೊಂಬಸಿರ ಪದವ**-ಹಿರಣ್ಯಗರ್ಭನಾಮಕರಾದ ಬ್ರಹ್ಮದೇವರ ಪದವಿಯನ್ನು, **ಐದಿದನು**—ಹೊಂದುವವರಾಗುತ್ತಾರೆ. ವರ್ತಮಾನ ಶ್ರೀ ವಾಯುದೇವರೇ ಮುಂದಿನ ಬ್ರಹ್ಮಕಲ್ಪದಲ್ಲಿ ಬ್ರಹ್ಮದೇವರಾಗುವರು. (ಭಾವೀ ಬ್ರಹ್ಮರು). ॥೩೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಪರೋಕ್ಷಿಗಳಾದವರ ನಾಮವೂ ವಾಯುದೇವರ ವಿಚಾರವೂ ಹೇಳುತ್ತಾರೆ.

ಒಬ್ಬ ಋಜುವಿಗೆ ಲಿಂಗಭಂಗವಾಗಬೇಕಾದರೆ, ನೂರು ಬ್ರಹ್ಮಕಲ್ಪ ಸಾಧನ. ಇದು ನೂರು ಜನ್ಮಸಾಂಕೇತವು. ಈ ಜನ್ಮಗಳಲ್ಲಿ ಈ ಪೂರ್ವೋಕ್ತ ನಾಮಗಳಿಂದ ಬಿಡದೇನೇ (ಈ ನಾಮಗಳ ಬಿಟ್ಟು ಬೇರೆ ಹೆಸರಿನಿಂದ ಕರಸೋದಿಲ್ಲ) ಕರಸೋವರಾದರು. ವರ್ತಮಾನ ವಾಯುದೇವರು ಅನಪರೋಕ್ಷಿಗಳಾದ ನೂರು ಜನ್ಮಗಳಲ್ಲಿ, ಪೂರ್ವೋಕ್ತ ಸಂಖ್ಯಾನಾಮ

ಗಳಿಂದಲೂ, ಒಂದೊಂದು ಜನ್ಮದಲ್ಲಿ ಒಂದೊಂದು ನಾಮದ ಮ್ಯಾರಿಗೆ ನೂರು ಜನ್ಮಗಳಲ್ಲಿ ಆದೇ ಸಂಖ್ಯಾನಾಮಗಳಿಂದಲೂ, ಅದೇ ಪ್ರಕಾರ ಅಪರೋಕ್ಷಾನಂತರ ನೂರು ಜನ್ಮಗಳಲ್ಲಿಯೂ ಇದೇ ನೂರು ನಾಮಗಳಿಂದ ಕರೆಸಿದರು. ದ್ವಿಶತ ಕಲ್ಪಗಳಲ್ಲಿ, ಇದೇ ನಾಮವೇ ಆವರ್ತಿಸವು ಬ್ಯಾರೆ ಇಲ್ಲ ಇದೇ ನೇಮ ಸರ್ವ ಋಜುಗಳಿಗೆ. ಈ ವಾಯುದೇವರು ಅಂಶವ- ಎಂದರೆ, ತನ್ನ ಅಂಶವನ್ನು ತತ್ವಾಭಿಮಾನಿದೇವತೆಗಳಲ್ಲಿ, ಕಲ್ಯಾದಿ ಅಸುರರಾದ ತತ್ತ್ವ ದೈತ್ಯರಲ್ಲಿ, ಇನ್ನೂ ಭಗವದ್ಭಕ್ತರಾದ ಸಮಸ್ತಮುಕ್ತಿಯೋಗ್ಯರಲ್ಲಿ, ಹಾಂಗೇ ಭಗವಂತನಲ್ಲಿ ದ್ವೇಷಪರರಾದ ಸಮಸ್ತತಮೋಯೋಗ್ಯರಲ್ಲಿ ಈ ಪ್ರಕಾರ ತ್ರಿವಿಧ ಜೀವರಲ್ಲಿ ಇಟ್ಟವರಾಗಿ, ತಮ್ಮ ಸಾಧನ ತಾವು ಮಾಡುತ ಆಯಾ ಪ್ರಾಣಿಗಳ ಯೋಗ್ಯತಾನುಸಾರ ಅವರವರಿಂದ ಸಾಧನ ಮಾಡಿಸುತಾರೆ. ಪರಮಾತ್ಮನೇ ನಾನು ಎಂತಲೂ, ಆನಂದತಾರತಮ್ಯ ಇಲ್ಲ- ಎಂತಲೂ, ಈ ಪ್ರಕಾರ ಸೋಹಂ- ಉಪಾಸಕರಾದ ಭಗದ್ದ್ವೇಷಿಗಳ ವಾಯುದೇವರು ಹನುಮದ್ಭೀಮ ಅವತಾರಗಳಿಂದ ಸಂಹಾರ ಮಾಡಿ, ಮಧ್ವಾವತಾರದಿಂದ ವಾಗ್ಯುದ್ಧದಿಂದ ಅವರ ಉತ್ಸಾಹಗಳ ಸಂಹಾರ ಮಾಡಿ, ಅನಂತರ ಜಗದ್ಗುರು ಗಳಾದ ಈ ವಾಯುದೇವರು ತಮ್ಮ ಪತ್ನಿಯಾದ ಭಾರತೀದೇವೀರ ಸಹಿತ ರಾಗಿ, ತಾವು ಹಿರಣ್ಯಗರ್ಭರಾದ ಬ್ರಹ್ಮನ ಪದ, ಈ ಸೂರನೇ ಬ್ರಹ್ಮಕಲ್ಪದಲ್ಲಿ ಐದೋವರಾಗತಾರೆ. ವರ್ತಮಾನ ಬ್ರಹ್ಮದೇವರು, ಹೀಂದೆ ವಾಯುಪದಸ್ಥ ರಾಗಿದ್ದ ಕಾಲದಲ್ಲಿ, ಪೂರ್ವೋಕ್ತ ಸಾಧನಮಾಡಿ, ಬ್ರಹ್ಮಪದ ಐದಿದ್ದಾರೆ. ಈ ವಾಯುದೇವರೂನೂ ಇದೇ ಪ್ರಕಾರ, ಬ್ರಹ್ಮಪದ ಐದೋವರಾಗತಾರೆ ॥೩.೨॥

## ೨. ಭಾವಪ್ರಕಾಶಿಕೆ

ಋಜುಗಣದವರಿಗೆ ಒಟ್ಟು ೨೦೦ ಕಲ್ಪ ಸಾಧನವೆಂದು ಮೇಲೆ ಹೇಳಲ್ಪಟ್ಟದೆ. ಮೊದಲು ೧೦೦ ಕಲ್ಪಗಳವರೆಗೂ ಋಜುವೆಂತಲೂ, ೧೦೧ ಮೊದಲು, ಕಲ್ಕಿ ಮೊದಲಾದ ೯೭ನೆಯ ಹೆಸರವರೆಗೂ ಹೇಳಿದ ಹೆಸರುಗಳಿಂದ ೯೭ ಕಲ್ಪಗಳನ್ನು ಕಳೆದು, ೯೮ ಲಾತವ್ಯರೆಂತ ಹೆಸರು ಪಡೆಯುವರು. ೯೯

ನೆಯ ಕಲ್ಪದಲ್ಲಿ ವಾಯುಪದವಿಗೆ ಬರುವರು. ೧೦೦ನೆಯ ಕಲ್ಪ ಬ್ರಹ್ಮ ದೇವರು. ಆದ್ಯಂತ ೨೦೦ ಕಲ್ಪ ಸ್ಥಾನಪಾಗಬೇಕು. ವಾಯುಪದವಿ ಯಲ್ಲಿರುವಾಗ ತತ್ತ್ವಾಭಿಮಾನಿದೇವತೆಗಳನ್ನು ತನ್ನೊಳಗಿಟುಕೊಂಡು ತ್ರಿವಿಧ ಜೀವರು ಸಾಧಿಸಬೇಕಾದ ಸಾಧನಗಳನ್ನು ಅವರವರಿಂದ ಮಾಡಿಸಿ, ಅವರವರ ಯೋಗ್ಯತಾನುಸಾರವಾದ ಗತಿ ಕೊಡಿಸುವರು. ಅನ್ಯಥಾ ಉಪಾಸನೆ ಮಾಡುತ್ತಿರುವ ಕಲಿ-ಮೊದಲಾದ ದೈತ್ಯರನ್ನು ಸಂಹರಿಸಿ, ಭಾರತೀ ದೇವಿಯರಿಂದೊಡಗೂಡಿ, ಬ್ರಹ್ಮಪದವಿಯನ್ನೈದುವರು. ॥೩೨॥

## ೩. ಭಾವದರ್ಪಣ

ದ್ವಿಶತ । ಕಲ್ಪಾದಿಗಳಲ್ಲಿ ಸೋಹಮುಪಾಸನೆಯು ಮಾಡುವನೆಂಬರ್ಥ । ತದುಕ್ತಂ ಪುರಂದರದಾಸರಾಜೈಃ । "ದಾಸೋಹಂ ಎಂಬುವನು ಸಾತ್ತ್ವಿಕ ಜನ ದಲ್ಲಿದ್ದು । ಮೋಸದ ದೈತ್ಯರಲ್ಲಿ ಸೋಹಂ ಎಂದೂ । ಶ್ವಾಸಜಪಗಳ ಮಾತರಿಶ್ವದೇವಾ ಶ್ರೀಶನಾಜ್ಞವ ವಹಿಸಿ ಶಿರದಲ್ಲಿ ವಾಸುದೇವ ರಂಗ ಪುರಂದರವಿಠಲನ ಶ್ವಾಸಜಪದಿಂದ ಪ್ರೀತಿಯ ಪಡಿಸುವಾ". ॥೩೨॥

## ೪ ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

'ದ್ವಿಶತ' ಇತಿ ॥ ಮಾನವಮುಕ್ತಂ ಪುರಸ್ತಾತ್ ॥ 'ಅಸತ್'- ಇತಿ ॥ ವಿವೃತಮೇತತ್ ॥ "ಪೊಂಬಸರು"-ಬ್ರಹ್ಮಾ. ॥೩೨॥

## ಕನ್ನಡಾರ್ಥ

## ೫. ಶ್ರೀಗುರುಹೃದಯ ಪ್ರಕಾಶಿಕೆ

ದ್ವಿಶತ- ಎಂದರೆ, ಪೂರ್ವಪರಾರ್ಧವೆಂದೂ, ಅಪರಪರಾರ್ಧವೆಂದೂ ಎರಡು ವಿಧ ಕರಸುವ ಬ್ರಹ್ಮ ಶತಕಲ್ಪಗಳಲ್ಲಿ, ಮೇಲೆ ಹೇಳಿದ ನೂರು ನಾಮಗಳಿಂದ ಕರಸಿದನು. ತನ್ನ ವಶಗರಾದ ದೇವತೆಗಳಲ್ಲಿದ್ದು, ಅವರವರ ಸಾಧನ ವ್ಯಕ್ತಿ ಮಾಡುವನು. ಅಸದುಪಾಸನೆ-ಎಂದರೆ, ತಾನೇ ಬ್ರಹ್ಮನೆಂದು ಭಾವಿಸುವುದೇ ಮೊದಲಾದ ಮಿಥ್ಯೋಪಾಸನೆ ಮಾಡುವ ಕಲ್ಯಾದಿ ಅಸುರಾಧಿಪರನ್ನ ಸಂಹರಿಸಿ, ಗುರುಪವಮಾನರೆಂಬ ಪ್ರಾಣದೇವರು, ತಾವು ಸ್ವಪತ್ನೀ ಭಾರತೀ ದೇವಿಯಿಂದ ಸಹಿತರಾಗಿ, ಪೊಂಬಸುರನೆಂಬ ಹಿರಣ್ಯಗರ್ಭನಾಮಕ ಬ್ರಹ್ಮ ಪದವಿಯನ್ನು ಹೊಂದುವರು.

**ಏವಂಚ ಬ್ರಹ್ಮಮಾನೇನ ಕಲ್ಪದ್ವಿಶಕೇನ ಚ |**
**ಪೂರ್ಣ ಭಕ್ತಃ ಪೂರ್ಣಗುಣೋಪಾಸ್ತಿರ್ಮುಕ್ತೋ ಭವತ್ಯಲಂ ||**

ಎಂಬ **ಪ್ರಕಾಶಸಂಹಿತಾರ್ಥ** ವಿವರಿಸಿತು. ||೩೨||

# ಸರ್ವವ್ಯಾಖ್ಯಾನಸಾರಸಂಗ್ರಹ

## ೧. ದ್ವಿಶತಕಲ್ಪಗಳಲ್ಲಿ-

ದ್ವಿ-ಎಂದರೆ, ಎರಡು. ಶತ. ಎಂದರೆ, ನೂರು. ಆಲ್ಲಿಗೆ ದ್ವಿಶತ= ೨ × ೧೦೦ = ೨೦೦ ಬ್ರಹ್ಮಕಲ್ಪಗಳೆಂದು ಪರಿಗಣನೆ.

ಶ್ರೀ ಪರಮಾತ್ಮನು ತನ್ನ ಸಂಕಲ್ಪಾನುಸಾರ ತೊಡಗುವ ಸೃಷ್ಟಿಕಾರ್ಯದಲ್ಲಿ, ೨೦೦ ಮಂದಿ ಋಜಗಣಸ್ಥ ಜೀವರನ್ನು ಸೃಷ್ಟಿಗೆ ತರುವನು.

ಅವರಲ್ಲಿ ಮೊದಲನೆಯ ಋಜುವಿಗೆ ಲಿಂಭಭಂಗವಾಗಿ, ಮೋಕ್ಷವಾಗಬೇಕಾದರೆ, ಅವನು ಮಾಡುವ ಸಾಧನ-೨೦೦ ಬ್ರಹ್ಮಕಲ್ಪ ಪರ್ಯಂತ.

ಈ ಅವಧಿಯು ಪೂರ್ವಾರ್ಧ ಮತ್ತು ಪರಾರ್ಧವೆಂದು ಎರಡು ಪ್ರಕಾರ.

ಪೂರ್ವಾರ್ಧದ ಅವಧಿಯು ಮೊದಲನೆಯ ೧೦೦ ಬ್ರಹ್ಮಕಲ್ಪಗಳು. ಸೃಷ್ಟಿಗೆ ಬಂದಾರಭ್ಯ ೧ ರಿಂದ ೧೦೦ನೆಯ ಬ್ರಹ್ಮಕಲ್ಪ ಪರ್ಯಂತ, ಆ ಜೀವನಿಗೆ ಋಜು-ಎಂದು ಹೆಸರು. ತದನಂತರ, ೧೦೦ನೆಯ ಬ್ರಹ್ಮಕಲ್ಪದಲ್ಲಿ ಆ ಋಜುವು **ಕಲ್ಕಿ**—ಎಂದು ಕರೆಸುತ್ತಾನೆ. ಆ ಕಲ್ಕಿನಾಮಕ ಋಜುವು ಕ್ರಮಕ್ರಮವಾಗಿ ಮುಂದಿನ ಬ್ರಹ್ಮಕಲ್ಪಗಳಲ್ಲಿ ಸಾಧನೆ ಮಾಡುತ್ತಾ, ೯೯ನೆಯ ಪದವಿಗೆ ಬಂದುದು-**ವಾಯು**—ಎಂದೆನಿಸುವನು.

ಅದೇ ವಾಯುವು ಮುಂದಿನ ಬ್ರಹ್ಮಕಲ್ಪದಲ್ಲಿ- ಅಂದರೆ, ೨೦೦ನೆಯ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುತ್ತಾನೆ. ಇದರಿಂದ, **ದ್ವಿಶತಕಲ್ಪಗಳಲ್ಲಿ**— ಎಂದಿದ್ದಾರೆ.

೨. ಅಂತಹ ವಾಯುಪದಸ್ಥನಾದ ಋಜುವಿಗೆ ೧೦೦ನೆಯ ಕಲ್ಪದಿಂದ ಪ್ರಾರಂಭಿಸಿ, ೧೯೮ನೆಯ ಕಲ್ಪ ಪ್ರರ್ಯಂತ ಕ್ರಮವಾಗಿ ಕಲ್ಕಿ..........ಲಾತವ್ಯ ಎಂಬ ಹೆಸರಿನಿಂದಲೇ ಕರೆಯಸಲ್ಪಡುತ್ತಾನೆ. ಈ ನಾಮಗಳು ಆಯಾಯಾ ಋಜುಪದವಿಗಳ ಹೆಸರುಗಳಾಗಿವೆ.

೩. ಪ್ರಧಾನವಾಯುದೇವರ ನಿಯಂತ್ರಣದಲ್ಲಿ ತತ್ತ್ವಾಭಿಮಾನಿ ದೇವತೆಗಳು ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದು, ತತ್ತ್ವವ್ಯಾಪಾರಗಳನ್ನು ನಿರ್ವಹಿಸುತ್ತಿರುವರು. ಶ್ರೀವಾಯುದೇವರು ಆ ತತ್ತ್ವಾಭಿಮಾನಿದೇವತೆಗಳಲ್ಲಿದ್ದು, ಅವರ ದ್ವಾರಾ ತತ್ತ್ವವ್ಯಾಪಾರವನ್ನು ಮಾಡಿ ಮಾಡಿಸುತ್ತಿರುವರು. ಇದೇ ಆ ದೇವತೆಗಳ ಸಾಧನಾಕ್ರಮ.

೪. ಸೋಹಂ-ಉಪಾಸಕರಾದ ಕಲ್ಯಾದಿ ತತ್ತ್ವಾಭಿಮಾನಿ ಅಸುರರಲ್ಲಿದ್ದು, ಅವರ ದ್ವಾರಾ, ದುಸ್ಸಾಧನಗಳನ್ನು ಮಾಡಿಸಿ, ಅವರ ದುರ್ಗತಿಗೆ ಕಾರಣರಾಗುವರು. ಹನುಮ ಭೀಮಾವತಾರಗಳಲ್ಲಿ ದುರುಳ ದೈತ್ಯರನ್ನು ಸಂಹರಿಸಿದರು. ಮಧ್ವಾವತಾರದಲ್ಲಿ ಮಣಿಮಂತ ಮುಂತಾದಿ ದೈತ್ಯರುಗಳು ಪ್ರಸಾರ ಮಾಡಿದ ದುರ್ಮಾಗಗಳನ್ನು ಖಂಡಿಸಿ, ಅವರ ತೇಜೋಭಂಗಮಾಡಿ, ಕುಮತಗಳ ನಾಶಕ್ಕೆ ಕಾರಣರಾದರು.

ಇದು ೧೯೯ನೆಯ ಋಜುಪದಸ್ಥರಾದ ಶ್ರೀ ವಾಯುದೇವರು ಮಾಡುವ ಭಗವತ್ಕಾರ್ಯ ಸಾಧನರೂಪವಾದ ವ್ಯಾಪಾರ.

ಅದೇ ವಾಯುದೇವರು ಮುಂದಿನ ೨೦೦ನೆಯ ಕಲ್ಪದಲ್ಲಿ (ತಾವು ಸೃಷ್ಟಿಗೆ ಬಂಧಾರಭ್ಯ) ಶ್ರೀಹರಿಯ ನಾಭೀಕಮಲಸಂಜಾತರಾಗಿ ಬ್ರಹ್ಮ ಪದವಿಯನ್ನು ಹೊಂದುವರು.

ಬ್ರಹ್ಮಪದವಿಯನ್ನು — **ಪೊಂಬಸಿರಿಪದವೈದಿನು**— ಎಂದಿದ್ದಾರೆ-ದಾಸರಾಯರು. ಪೊನ್ನು-ಭಂಗಾರ, ಬಸಿರು-ಗರ್ಭ. ಪೊಂಬಸಿರ-ಎಂದರೆ, ಹಿರಣ್ಯಗರ್ಭನಾಮಕರಾದ ಬ್ರಹ್ಮದೇವರು. ಅವರ ಪದವಿ ಎಂದರ್ಥ. ಶ್ರೀಹರಿಯ ನಾಭೀಕಮಲವು ಲಕ್ಷ್ಮ್ಯಾತ್ಮಕವಾಗಿದ್ದು, ಸುವರ್ಣಾತ್ಮಕವಾಗಿರುವುದು. ಇದರಿಂದ, ಸವರ್ಣಾತ್ಮಕಕಮಲಸಂಜಾತರಾದ ಬ್ರಹ್ಮದೇವರಿಗೆ "ಹಿರಣ್ಯಗರ್ಭ"- ಎಂತ ನಾಮ.

ಶ್ರೀವಾಯುದೇವರು ಭಾವೀಬ್ರಹ್ಮರು. ಅಂತೆಯೇ, ಅವರ ಪತ್ನಿಯಾದ ಶ್ರೀಭಾರತೀದೇವಿಯರು ಭಾವೀಸರಸ್ವತಿಯರು. ಇದರಿಂದ, **ಸತಿಯೊಡನೆ**— ಎಂಬ ಶಬ್ದ ಪ್ರಯೋಗ ಮಾಡಿದ್ದಾರೆ.

೫. ಶ್ರೀವಾಯುದೇವರು ತ್ರೈಲೋಕ್ಯಾಚಾರ್ಯರು. ಇದರಿಂದ, "ಗುರು"- ನಾಮಕರು. ಅತಿರೋಹಿತವಿಮಲ ವಿಜ್ಞಾನಿಗಳಾದ ವಾಯುದೇವರ ದೇಹ ಸತ್ವ ಪ್ರಚುರವಾದ ಶರೀರ. ಸತ್ವಾಧಿಕ್ಯವಾದ ಮಹತ್ವದಿಂದ ಅವರ ಶರೀರ ನಿರ್ಮಾಣವಾಗಿದೆ. ಅಲ್ಲದೆ, ಶ್ರೀ ಹರಿಯ ಮುಖಪ್ರತೀಕರು. ಇದರಿಂದ "ಪವಮಾನ"-ನಾಮಕರು. ॥೩೨॥

## ಪದ್ಯ-೩೩

ಮೂಲ :-

ಅನಿಮಿಷರ ನಾಮದಲಿ ಕರೆಸುವ ।
ಅನಿಲದೇವನು ಒಂದು ಕಲ್ಪದಿ ।
ವನಜಸಂಭವನೆನಿಸಿ ಎಂಭತ್ತೇಳುವರೆ ವರುಷ ॥
ಗುಣತ್ರಯವರ್ಜಿತನ ಮಂಗಳ ।
ಗುಣಕ್ರಿಯ ಸುರೂಪಗಳುಪಾ ।
ಸನವು ಅವ್ಯಕ್ತಾದಿ ಪೃಥ್ವ್ಯಂತರದಿ ಇರುತಿಹುದು ॥೩೩॥

**ಅವತರಣಿಕೆ**

ಶ್ರೀವಾಯುದೇವರ ಸಾಧನವಿಷಯವನ್ನೇ ತಿಳಿಸುತ್ತಾರೆ. ॥೩೩॥

**ಪ್ರತಿಪದಾರ್ಥ**

**ಅನಿಲದೇವನು**–ಶ್ರೀವಾಯುದೇವರು. **ಒಂದು ಕಲ್ಪದಿ**–೯೯ನೆಯ ಕಲ್ಪದಲ್ಲಿ (ಸೃಷ್ಟ್ಯಾರಾಭ್ಯ ೯೯ನೆಯ ಬ್ರಹ್ಮಕಲ್ಪವಾಗುವುದು) **ಅನಿಮಿಷರ ನಾಮದಲಿ**–ಆಯಾಯಾ ತತ್ತ್ವಾಭಿಮಾನಿಗಳ ಹೆಸರಿನಿಂದಲೇ, **ಕರೆಸುವ**–ಕರೆಸುವವನಾಗುತ್ತಾರೆ. **ಎಂಬತ್ತೇಳುವರೆ ವರುಷ**—ಅಂಡದ ಹೊರಗೆ, ವಾಸುದೇವನಿಂದ ನೂರನೆಯ ಕಲ್ಪದಲ್ಲಿ ಪುರುಷನಾಮಕ ಬ್ರಹ್ಮನೆಂಬ ಹೆಸರಿನಿಂದ ಜನಿಸಿ, ತದಾರಭ್ಯ ಪ್ರಳಯಾಂತವರೆಗೂ, ನೂರುವರ್ಷಕಾಲದ ಬ್ರಹ್ಮಕಲ್ಪದಲ್ಲಿ ಎಂಭತ್ತೇಳುವರೆ ವರುಷದ ಅವಧಿಯು ಸ್ಥಿತಿಕಾಲ-ಉಳಿದ ಹನ್ನೆರಡುವರೇ ವರುಷದ ಅವಧಿಯು ಪ್ರಳಯಕಾಲವೆನ್ನಿಸುತ್ತದೆ. ಈ ರೀತಿ ಎಂಬತ್ತೇಳುವರೆ ವರುಷಗಳಲ್ಲಿ. **ವನಜಸಂಭವನೆನಿಸಿ**—ಐವತ್ತನೆಯ ವರುಷದ ಅಂತ್ಯದಿನದ ರಾತ್ರಿಯಲ್ಲಿ ಕಮಲಸಂಜಾತರೆಂದು ಕರೆಯಿಸಿ, **ಅವ್ಯಕ್ತಾದಿ**=ಅಂಡದ ಹೊರಗೆ, ರಮಾಭಿಮನ್ಯಮಾನವಾದ ಅವ್ಯಕ್ತತತ್ತ್ವದಲ್ಲಿ ಪ್ರವೇಶವೇ

ಇಲ್ಲದೇ ದೂರದಿಂದ ನೋಡುತ್ತಾ, ಮಹತ್ತತ್ತ್ವದಾರಭ್ಯ, **ಪೃಥ್ವ್ಯಂತರದಿ**— ಪೃಥ್ವೀತತ್ತ್ವಪರ್ಯಂತ ವ್ಯಾಪ್ತರಾಗಿ, **ಗುಣತ್ರಯವರ್ಜಿತನ**— ಪ್ರಾಕೃತಗುಣತ್ರಯಗಳಿಂದ ರಹಿತನಾದ ಶ್ರೀಪರಮಾತ್ಮನ, **ಮಂಗಳ**— ಪರಮಶುಭಮಯಗಳಾದ **ಗುಣ ಕ್ರಿಯ ಸುರೂಪಗಳ**— ಅನಂತಾನಂತ ಗುಣಸಮೂಹಗಳು ಕ್ರಿಯಾವಿಶೇಷಗಳು— ರೂಪಗಳು, **ಉಪಾಸನವು**— ಇವುಗಳ ಉಪಾಸನೆಯು, **ಇರುತಿಹುದು**— ನೂರನೆಯದಾದ ಬ್ರಹ್ಮಕಲ್ಪದಲ್ಲಿ ಇರೋದಾಗಿ ಇದೆ. ॥೩೩॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರ ವಿಚಾರವೇ ಹೇಳತಾರೆ.

ಈ ವಾಯುದೇವರು ತೊಂಬತ್ತೊಂಬತ್ತನೇ ಕಲ್ಪದಲ್ಲಿ, ದೇವತೆಗಳ ಮಧ್ಯದಲ್ಲಿ ಜೀವೋತ್ತಮರೆಂಬ ನಾಮದಲ್ಲಿ ಕರಸೋವರಾಗತಾರೆ. ಅಂಡದ ಹೊರಗೆ ವಾಸುದೇವನಿಂದ ನೂರನೇ ಬ್ರಹ್ಮಕಲ್ಪದಲ್ಲಿ ಪುರುಷನಾಮಕ ಬ್ರಹ್ಮನೆಂದು ಜನಿಸಿ, ತದಾರಭ್ಯ ಪ್ರಳಯಾಂತವರಿಗೂ ನೂರುವರ್ಷ ಎಂತ ಕರಸಿ, ಒಂದು ಬ್ರಹ್ಮಕಲ್ಪ-ಎಂತ ಸಾಂಕೇತವಾಗತದೆ. ಈ ನೂರರಲ್ಲಿ ಎಂಭತ್ತೇಳೂವರೆ ವರುಷ ಸ್ಥಿತಿಕಾಲ. ಹನ್ನೆರಡುವರೇವರುಷ ಪ್ರಳಯಕಾಲ. ಈ ಪ್ರಕಾರ ಎಂಭತ್ತೇಳೂವರೆವರುಷದಲ್ಲಿ, ಐವತ್ತನೇವರುಷ ಅಂತ್ಯದಿನ ರಾತ್ರಿಯಲ್ಲಿ ಪದ್ಮನಾಭದೇವರ ನಾಭೀಕಮಲದಿಂದ, ಪುನಃ ಅಂಡದ ಹೊರಗೆ ಸಂಭವರೆನಿಸಿ, ಪ್ರಳಯಕಾಲ ವ್ಯತಿರಿಕ್ತ ಮೂವತ್ತೇಳುವರೆ ವರುಷ, ಅಂಡದ ಹೊರಗೆ ರಮಾಭಿಮನ್ಯಮಾನವಾದ ಅವ್ಯಕ್ತದಲ್ಲಿ ಪ್ರವೇಶವಿಲ್ಲದೆ, ದೂರದಿಂದ ನೋಡುತಾ, ಮಹತತ್ತ್ವದಾರಭ್ಯ ಅಂತ್ಯತತ್ತ್ವವಾದ ಪ್ರಥ್ವೀತತ್ತ್ವಪರಿಯಂತ ವ್ಯಾಪ್ತರಾಗಿ, ಪ್ರಾಕೃತಗುಣತ್ರಯಗಳಿಂದ ಶೂನ್ಯನಾದ ಪರಮಾತ್ಮನ ಮಂಗಳಕರಗಳಾದ ಗುಣಗಳೇನು, ಕ್ರಿಯೆಗಳೇನು, ರೂಪಗಳೇನು— ಇವುಗಳ ಉಪಾಸನವು ನೂರನೇದಾದ ಕಲ್ಪದಲ್ಲಿ ಇರೋದಾಗಿ ಅದೆ. ॥೩೩॥

### ೨. ಭಾವಪ್ರಕಾಶಿಕೆ

ವಾಯುದೇವರು ವಾಯುಪದವಿಯಲ್ಲಿ ಒಂದು ಕಲ್ಪದಲ್ಲಿ ಜೀವೋತ್ತಮ ರೆನಿಸಿ, ದೇವತೆಗಳೊಂದಿಗೆ ಗಣನೆಯಲ್ಲಿರುವರು. ಬ್ರಹ್ಮಪದವಿಗೆ ಬಂದ ನಂತರ, ಬ್ರಹ್ಮಮಾನದಿಂದ ೧೦೦ ವರ್ಷದ ಕಲ್ಪದ ಮಧ್ಯದಲ್ಲಿ ೧೨॥ ವರ್ಷ ಸಂಧಿಕಾಲ ಹೋಗುವುದು. ಉಳಿದ ೮೭॥ ವರ್ಷಗಳು-ಅವ್ಯಕ್ತ ತತ್ವದವರೆಗೂ ಇರುವ ತತ್ವಗಳಲ್ಲಿ ವ್ಯಾಪ್ತರಾಗಿದ್ದು, ಪ್ರಾಕೃತಗುಣಗಳಿಂದ ಬದ್ಧನಲ್ಲದ ಶ್ರೀಪರಮಾತ್ಮನಮಂಗಳಕರವಾದ. ಅನಂದಾದಿ ಗುಣಗಳನ್ನು, ಸೃಷ್ಟ್ಯಾದಿ ಕ್ರಿಯೆಗಳನ್ನು, ರಾಮಕೃಷ್ಣಾದಿ ಅನಂತಾನಂತ ರೂಪಗಳನ್ನು ಉಪಾಸನೆ ಮಾಡುವರು. ॥೩೩॥

### ೩. ಭಾವದರ್ಪಣ

ಅನಿಮಿಷ ॥೩೩॥

### ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

"ಅನಿಮಿಷ" ಇತಿ॥ "ಅನಿಮಿಷಾಃ" ದೇವಾಃ॥ ಅಂತರ್ಯಾಮಿತ್ವೇನ॥ ಎಂಭತ್ತೇಳುವರೆ"—ಸಾರ್ಧದ್ವಾದಶ ವರ್ಷಾಃಪ್ರಲಯಕಾಲಶಬ್ದಿತಾಃ ಏವಂ ಮಂಜರೀಪರ್ವತೀ॥ ಅವ್ಯಕ್ತಾದಿಗತ ರೂಪಾಣಿ ಉಪಾಸ್ತೇ ಇತ್ಯರ್ಥಃ ॥೩೩॥

## ಕನ್ನಡಾರ್ಥ

ದೇವತೆಗಳಿಗೆ ಅನಿಮಿಷರೆಂಬ ಹೆಸರು ಇರುತ್ತದೆ. ಅವರಲ್ಲಿ ಅಂತರ್ಯಾಮಿ ರೂಪದಿಂದ ವಾಯುದೇವರು, ಬ್ರಹ್ಮದೇವರು ಇರುತ್ತಾರೆ.

ಅವರ ಸಾಧನ ೮೭॥ ವರ್ಷ. ಅಂದರೆ ೧೨॥ ವರ್ಷ ಪ್ರಳಯಕಾಲ. ಎನಿಸಿರುತ್ತದೆ. ಹೀಗೆ ಮಂಜರಿಯಲ್ಲಿ ನಿರೂಪಿಸಿರುತ್ತಾರೆ. ಅವ್ಯಕ್ತ ಮುಂತಾ ದುವುಗಳಲ್ಲಿ ಇರುವ ಭಗವಂತನ ರೂಪಗಳನ್ನು ಉಪಾಸಿಸುತ್ತಾರೆ- ಎಂದು ಅರ್ಥ॥. ॥೩೩॥

### ೫. ಶ್ರೀಗುರುಹೃದಯ ಪ್ರಕಾಶಿಕೆ

ಅನಿಮಿಷರೆಂಬ ಸರ್ವದೇವತೆಗಳ ನಾಮದಿಂದಲೂ ಕರೆಸುವ-ಎಂದರೆ, ರಮಾ-ನಾರಾಯಣರ ನಂತರ, ಸರ್ವದೇವತಾನಾಮವಾಚ್ಯನಾದ ಅನಿಲನೆಂಬ ಪ್ರಾಣದೇವರು ಒಂದು ಬ್ರಹ್ಮಕಲ್ಪದಲ್ಲಿ ವನಜಸಂಭವನೆಂಬ ಚತುರ್ಮುಖಬ್ರಹ್ಮ ಪದವನ್ನು ಹೊಂದಿ, ಬ್ರಹ್ಮಾಯುರ್ಮಾನ ಎಂಭತ್ತೇಳೂವರೆ ವರ್ಷ ಪರಿಯಂತ, ಪ್ರಾಕೃತಗುಣತ್ರಯವರ್ಜಿತ ದೇವರ ಶುಭಜ್ಞಾನಾದಿ ಗುಣ ಸುರೂಪಗಳ ಉಪಾಸನೆಯನ್ನು ಅವ್ಯಕ್ತವೆಂಬ ಪ್ರಕೃತಿ ಮೊದಲು, ಪೃಥ್ವೀತತ್ತ್ವಪರ್ಯಂತ ಇಪ್ಪತ್ನಾಲ್ಕು ತತ್ತ್ವಗಳಲ್ಲೂ ಆಚರಿಸುವರು. ಅಚೆ ಹನ್ನೆರಡೂವರೆ ವರುಷ ಲಯಕಾಲವೆಂದರ್ಥ. ॥೩೩॥

## ಸರ್ವವ್ಯಾಖ್ಯಾನಸಾರಸಂಗ್ರಹ

### ೧. ಅನಿಲದೇವನು

ಪ್ರಧಾನವಾಯುದೇವರೇ ಭಾವೀಬ್ರಹ್ಮರು. ಅವರ ನಿಯಂತ್ರಣ ದಲ್ಲಿ ಶ್ರೀಹರಿಯ ಆದೇಶದಂತೆ, ಸಕಲತತ್ತ್ವಾಭಿಮಾನಿದೇವತೆಗಳು ಸಕಲ ಜೀವರ ಸ್ಥೂಲದೇಹರಲ್ಲಿ ವಿದ್ಯಮಾನರಾಗಿದ್ದು, ಅವರವರ ತತ್ತ್ವಕಾರ್ಯ ಗಳನ್ನು ನಿಯಮಬದ್ಧವಾಗಿ ಮಾಡುತ್ತಿರುವರು. ಅನಿಲದೇವರು ಆಯಾ ತತ್ತ್ವಾಭಿಮಾನಿದೇವತೆಗಳ (**ಅನಿಮಿಷರ**) ಹೆಸರಿನಿಂದಲೇ ಕರೆಯಿಸುವರು. (**ನಾಮವಲಿ ಕರೆಸುವ**) ಸಕಲತತ್ತ್ವಕಾರ್ಯಗಳನ್ನು ತಾವೇ ಬಿಂಬ ಪ್ರೇರಣಾನುಸಾರಮಾಡಿ, ತತ್ತ್ವೇಶರ ದ್ವಾರಾ, ಮಾಡಿಸುವರು.

### ೨. ಒಂದು ಕಲ್ಪದಿ–

ಕಲ್ಕಿ ಪದವಿಯಿಂದ ಆರಂಭಿಸಿ, ೯೯ನೆಯ ಬ್ರಹ್ಮಕಲ್ಪದಲ್ಲಿ ವಾಯು ಪದವಿಗೆ ಬರುವರು. (ಸೃಷ್ಟ್ಯಾರಾಭ್ಯ ೯೯ನೆಯ ಬ್ರಹ್ಮಕಲ್ಪ). ಮುಂದಿನ ಕಲ್ಪವೇ ೧೦೦ನೆಯ ಬ್ರಹ್ಮಕಲ್ಪ. ಆ ನೂರನೆಯ ಬ್ರಹ್ಮಕಲ್ಪದಲ್ಲಿ ಬ್ರಹ್ಮಾಂಡದ ಹೊರಗೆ ಶ್ರೀವಾಸುದೇವನಾಮಕ ಶ್ರೀಪರಮಾತ್ಮನಿಂದ ಮಾಯಾದೇವಿಯಲ್ಲಿ ಪುರುಷನಾಮಕರೆಂಬ ಬ್ರಹ್ಮದೇವರಾಗಿ ಜನಿಸುವರು.

೩. ವನಜಸಂಭವನೆನಿಸಿ–

ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭಿಯಲ್ಲಿ ಅವನ ಸಂಕಲ್ಪದಂತೆ, ಸುವರ್ಣಾತ್ಮಕವಾದ ಕಮಲವು ಉತ್ಪನ್ನವಾಯಿತು. ಈ ಕಮಲದಲ್ಲಿ ಶ್ರೀ ಲಕ್ಷ್ಮೀದೇವಿಯು ಪ್ರವೇಶಿಸಿದ್ದರಿಂದ, ಆ ಕಮಲವು ಲಕ್ಷ್ಮ್ಯಾತ್ಮಕವಾಯಿತು. ಅದರಲ್ಲಿ ಸಂಜಾತರಾದ ಬ್ರಹ್ಮದೇವರಿಗೆ (ಭಾವೀ ಬ್ರಹ್ಮರಾದ ವಾಯುದೇವರು ಹಿರಣ್ಯಗರ್ಭ"-ರೆಂದು ಹೆಸರು).

ಈ ಕಲ್ಪದ ಅವಧಿಯು ೧೦೦ ಬ್ರಹ್ಮವರ್ಷಗಳು. ಅದರಲ್ಲಿ ಎರಡು ವಿಭಾಗ.

೧. ಎಂಭತ್ತೇಳುವರೆ ವರುಷಗಳು ಸ್ಥಿತಿಕಾಲ. ೨. ಉಳಿದ ಹನ್ನೆರಡು ವರ್ಷಗಳು ಪ್ರಳಯಕಾಲವು. ಉಳಿದ ಅವಧಿಯು ಸಂಧ್ಯಕಾಲ ವೆನಿಸುವುದು.

ಪ್ರಮಾಣ

"ಸಾರ್ಧದ್ವಾದಶ ವರ್ಷಾಣಿ ಪ್ರಲಯಕಾಲ ಈಪ್ಸಿತಾ॥"

ಏವಂ ಮಂಜರೀಗ್ರಂಥೇ–

ಅಂದರೆ, ದ್ವಾದಶ = ೧೨. ಸಾರ್ಧ ದ್ವಾದಶ= ೧೨/½ ವರ್ಷಗಳು– ಎಂದರ್ಥ. ಇದೇ ಪ್ರಳಯಕಾಲವು.

೪. ಸ್ಥಿತಿಕಾಲವೆನಿಪ ಈ ಎಂಭತ್ತೇಳುವರೆ ವರ್ಷಗಳ ಅವಧಿಕಾಲದಲ್ಲಿ ವಾಯುದೇವರೇ, ೧೦೦ನೆಯ ಬ್ರಹ್ಮಕಲ್ಪದಲ್ಲಿ ಬ್ರಹ್ಮರಾಗಿ, ಹಿರಣ್ಯಗರ್ಭ ನಾಮಕರಾಗಿ ವನಜಸಂಭವರೆನಿಸುವರು. ಅಂಡದ ಹೊರಗೆ, ಅವ್ಯಕ್ತತತ್ವದಲ್ಲಿ ಪ್ರವೇಶವಿಲ್ಲದವರಾಗಿ ದೂರದಿಂದ ನೋಡುತ್ತಿರುವರು. ಅವ್ಯಕ್ತತತ್ವವು ರಮಾಭಿಮನ್ಯವಾದುದು. ಅಲ್ಲಿಂದ ಮಹತ್ತತ್ತ್ವದಿಂದ ಆರಂಭಿಸಿ, ಕೊನೆಯ ಪೃಥ್ವೀ ತತ್ತ್ವದ ಪರ್ಯಂತ ಬ್ರಹ್ಮಾಂಡದಲ್ಲಿ ವ್ಯಾಪ್ತರಾಗಿ, ಪ್ರಾಕೃತ ಗುಣತ್ರಯ ಗಳಿಂದ ದೂರನಾದ, ಅಪ್ರಾಕೃತನ ಗುಣ–ರೂಪ– ಕ್ರಿಯಾವಿಶೇಷಗಳನ್ನು ಶಿಕ್ಷಿಪವಾಗಿ ಉಪಾಸನಾ ಮಾಡುತ್ತಿರುವರು. ॥೩೩॥

## ಪದ್ಯ-೩೪

**ಮೂಲ :**

**ಮಹಿತ ಋಜುಗಣಕೊಂದೆ ಪರಮೋ|**
**ತ್ಸಹವಿವರ್ಜಿತವೆಂಬ ದೋಷವು|**
**ವಿಹಿತವೇ ಸರಿ ಇದನು ಪೇಳದೆ ಮುಕ್ತಬ್ರಹ್ಮರಿಗೆ ||**
**ಬಹುದು ಸಾಮ್ಯ ಜ್ಞಾನ ಭಕುತಿಯು |**
**ದ್ರುಹಿಣಪದ ಪರಿಯಂತ ವೃದ್ಧಿಯು |**
**ಬಹಿರುಪಾಸನೆಯುಂಟನಂತರ ಬಿಂಬದರ್ಶನವು ||೩೪||**

**ಅವತರಣಿಕೆ :**

ಋಜುಗಣದವ ವಿಚಾರ ವಿಶೇಷವನ್ನು ತಿಳಿಸುತ್ತಾರೆ. ||೩೪||

**ಪ್ರತಿಪದಾರ್ಥ**

**ಮಹಿತ**—ಪೂಜ್ಯರಾದ, **ಋಜುಗಣಕೆ**— ೨೦೦ ಮಂದಿ ಋಜುಗಣಸ್ಥರಿಗೆ, **ಒಂದೇ**—ಒಂದೇ ಒಂದಾದ (ಏಕೈಕವಾದ) **ದೋಷವು**—ನ್ಯೂನತೆಯು, **ಪರಮ ಉತ್ಸಾಹವರ್ಜಿತ**— ಅತ್ಯಂತ ಅತಿಶಯವಾದ ಉತ್ಸಾಹದಿಂದ (ಬ್ರಹ್ಮದೇವರ ವಿವೀಕ್ಷಾ) ವರ್ಜಿತರಾಗಿರುವ- ಅಂದರೆ, ಬ್ರಹ್ಮಪದವಿಯು ೨೦೦ನೆಯ ಕಲ್ಪಕ್ಕೆ ಬರುವ ಅತ್ಯಂತ ಪದವಿ. ಆಪದಸ್ಥ ಬ್ರಹ್ಮದೇವರಿಗೆ ಇರುವಂತೆ, ಇಳಿದ ೧೯೯ ಮಂದಿಗೆ ಉತ್ಸಾಹವಿರುವುದಿಲ್ಲ. ೨೦೦ ಋಜುಗಳೂ ಸಮಾನಕಕ್ಷಾಪನ್ನರಾದರೂ, ಪ್ರತಿಋಜುವಿಗೂ ಸಾಧನ, ವ್ಯತ್ಯಾಸ, ಆದರಿಂದ, ಉತ್ಸಾಹ ವ್ಯತ್ಯಾಸವೂ ಇರೋದಾಗಿ ಇದೆ. ಮುಂದಿನ ಪದವಿಗೆ ಹೋಗುತ್ತಾ, ಹೋಗುತ್ತಾ ಉತ್ಸಾಹಾಧಿಕ್ಯವು ಹೆಚ್ಚುವುದು. **ಒಂದೇ ದೋಷವು ವಿಹಿತವೇ ಸರಿ**—ಇದನ್ನು ದೋಷವೆಂದು ಪರಿಗಣಿಸಿದರೂ, ಅದು ಸಹಜವೂ ಯುಕ್ತವೂ ಆಗಿದೆ. ಇದು ಋಜುಗಳಿಗೆ ದೋಷ

ಬಾಧಕವಾಗುವುದಿಲ್ಲ. **ಇದನ್ನು ಹೇಳದೆ**— ಇಂತಹ ವ್ಯತ್ಯಾಸರೂಪವಾದ ದೋಷವನ್ನು ಹೇಳದಿದ್ದ ಪಕ್ಷದಲ್ಲಿ, **ಮುಕ್ತಬ್ರಹ್ಮರಿಗೆ**— ಲಿಂಗಭಂಗವನ್ನು ಹೊಂದಿ, ಮುಕ್ತರಾದ ಬ್ರಹ್ಮರಿಗೆ **ಸಾಮ್ಯ**—ಸಾಮ್ಯ ಹೇಳುವ ದೋಷ ಬರುವುದು. ಈ ಸಾಮ್ಯ ಅನಾದಿಯಿಂದ ಇಲ್ಲ. **ದ್ರುಹಿಣ ಪದ್ವ ಪರಿಯಂತ** ಈ ೨೦೦ ಮಂದಿ ಋಜುಗಣಸ್ಥರಿಗೆ ಅಂತ್ಯನಾದ ೨೦೦ ಮಂದಿ ಋಜುಗಣಸ್ಥರಿಗೆ ಅಂತ್ಯವಾದ ೨೦೦ ನೆಯ ಬ್ರಹ್ಮಪದವಿ ಬರುವವರೆಗೂ. **ಜ್ಞಾನ ಭಕುತಿಯ ವೃದ್ಧಿಯುಂ** — ಜ್ಞಾನ-ಭಕ್ತಿ- ವೈರಾಗ್ಯಾದಿಗಳ ಅಭಿವೃದ್ಧಿಯು, ಪದವಿಯಿಂದ ಪದವಿಗೆ ಹೆಚ್ಚಾಗುತ್ತಾ ಹೋಗುವುದು. ಬ್ರಹ್ಮಪದವಿಯಲ್ಲಿ "ಶತಾನಂದ" -ರೆನಿಸಿ. ಪೂರ್ಣಸ್ಥಿತಿಗೆ ಬರುವುದು. (ರುದ್ರಾದಿಗಳಂತೆ ತಿರೋಧಾನವಿಲ್ಲ.) **ಬಹಿರುಪಾಸನೆ ಉಂಟು**— ಸ್ಥೂಲದೇಹದಲ್ಲೂ ಬ್ರಹ್ಮಾಂಡದಲ್ಲೂ ಸರ್ವತ್ರ ಉಪಾಸನೆ ಇದೆ. **ಅನಂತರ ಬಿಂಬ ದರ್ಶನವು**—ಉಪಾಸನಾರೂಪವಾದ ಸಾಧನಾನಂತರ, ಜೀವಾಂತರ್ಗತ ವಾದ ಬಿಂಬದರ್ಶನರಾಗುವುದು. ॥೩೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಋಜುಗಣದವರ ವಿಚಾರ ಹೇಳುತ್ತಾರೆ.

ಏಕಕಾಲಾವಚ್ಛೇದೇನ ಇರತಕ್ಕ ಪೂಜ್ಯರಾದ ಇನ್ನೂರುಮಂದಿ ಋಜುಗಳು ಒಂದೇ ಕಾಲದಲ್ಲಿ ಸೃಷ್ಟಿಯೊಳಗೆ ಇರೋವರಾಗಿದ್ದಾರೆ. (ಏಕಕಾಲದಲ್ಲಿ ಇನ್ನೂರು ಮಂದಿ ಇರೋಕ್ರಮು ಈಶ್ವರನೇ ಬಲ್ಲ). ಏಕಕಾಲವಚ್ಛೇದೇನ ಇರತಕ್ಕ ಋಜುಗಳಾದ ಇನ್ನೂರು ಮಂದಿಯ ಗಣಕ್ಕೆ ಅತ್ಯಂತವಾಗಿ ಅತಿಶಯವಾದ ಉತ್ಸಾಹ ಬ್ರಹ್ಮದೇವರಿಗೆ ಮಾತ್ರವೇ. ತದನ್ಯ ನೂರತೊಂಭತ್ತೊಂಭತ್ತು ಮಂದಿಗೆ, ಬ್ರಹ್ಮದೇವರೋಪಾದಿಯಲ್ಲಿ ಉತ್ಸಾಹವಿರದೇ, ಅವ

ರಿಂದ ವರ್ಜಿತರಾಗಿ ಇದ್ದಾರೆ. ಏಕಕಾಲವಚ್ಛೇದೇನ ಇದ್ದ ಮ್ಯಾಲೆ ಸಾಧನ ಉತ್ಸಾಹ ಸರ್ವರಿಗೂ ಸಂಪೂರ್ಣವಿರ ಬೇಕು, ಹಾಗೆ ಇರದೆ, ಪ್ರತಿ ಋಜುವಿಗೂ ಸಾಧನವ್ಯತ್ಯಾಸ, ಉತ್ಸಾಹವ್ಯತ್ಯಾಸವೂ ಇರೋದಾಗಿ, ಸಮವರ್ಜಿತರಾಗಿ ವಿಷಯದಿಂದ ಇರೋಕರಾಗಿದ್ದಾರೆ (ಇದರ ಕಾರಣವೂ ದೇವರೇ ಬಲ್ಲ.) ಪರವೋತ್ಸಾಹವರ್ಜಿತರೆಂಬ ಒಂದಾದ ಈ ದೋಷವು ಇರೋದಾಗಿ ಆದೆ. ತದನ್ಯ ದೋಷದಾವದೂ ಇಲ್ಲ. ಈ ದೋಷವಿಹಿತ ವಾದದ್ದೇ ಸರಿ. ಇದು ಋಜುಗಳಿಗೆ ದೋಷಬಾಧಕವಲ್ಲ. ಇಂಥಾ ದೋಷವನ್ನು ಹೇಳದ ಹೋದರೆ, ಸಾಧನತಾರತಮ್ಯ ಕೆಟ್ಟು, ಲಿಂಗಭಂಗದಾಗಿ ಮುಕ್ತರಾದ ಬ್ರಹ್ಮರಿಗೆ ಬಹಳವಾಗಿ ಸಾಮ್ಯವಲ್ಲಿದವರ ಸಾಮ್ಯ- ವಿಂತ.ಹೇಳ ಬೇಕಾಗತದೆ. ಇಂಥಾ ದುಸ್ಸಾಮ್ಯ ಅಂಗೀಕರಿಸಬೇಕಾಗತದೆ. ಇಂಥಾ ಸಾಮ್ಯ ಅನಾದಿಯಿಂದ ಇಲ್ಲ. ಈಗಲೂ ಇಲ್ಲ. ಈ ಇನ್ನೂರು ಮಂದಿ ಋಜುಗಳಿಗೆ ಇನ್ನೂರನೇ ಪರ್ಯಾದ ಅಜಪದ ಪರಿಯಂತ ಜ್ಞಾನ ಭಕ್ತಿ ವೈರಾಗ್ಯಾದಿಗಳ ಅಭಿವೃದ್ಧಿಯು. ಇವುಗಳು ಅಧಿಕವೇ ಪೂರ್ಣ. ರುದ್ರಾದಿಗಳೋಪಾದಿ ಯಲ್ಲಿ ತಿರೋಧಾನವಾಗಿ ಮತ್ತು ವ್ಯಕ್ತವಾಗೋದಿಲ್ಲ. ಸ್ವರೂಪಕ್ಕೆ ಬಾಧ್ಯ ವಾದ ಸ್ಥೂಲದೇಹದಲ್ಲೂ, ಸ್ಥೂಲದೇಹಕ್ಕೆ ಬಾಧ್ಯವಾದ ಬ್ರಹ್ಮಾಂಡದಲ್ಲೂ ಭಗವದುಪಾಸನ ಉಂಟು. ಈ ಉಪಾಸನ ಪೂರೈಸಿದ ನಂತರ, ಜೀವಾಂತರ್ಗತ ನಾದ ಬಿಂಬ ದರ್ಶನವಾಗೋದಾಗತದೆ. ॥೩೯॥

## ೨. ಭಾವಪ್ರಕಾಶಿಕೆ :–

ಪೂಜ್ಯರಾದ ಋಜುಗಣದವರಿಗೆ ಒಂದು ದೋಷ ಮಾತ್ರವಿರುವುದು. ಒಬ್ಬೊಬ್ಬರರೂ ೨೦೦ ಕಲ್ಪಸಾಧನ ಆಗಬೇಕಾಗಿರುವುದರಿಂದ, ಈಗಲೆ ನಾವು ಭಗವಂತನನ್ನು ನೋಡುವುದೆಂಬ ಕಾಲವಿಳಂಬದಿಂದ ಉಪಾಸನೆಯ ವಿಷಯ ದಲ್ಲಿ ಅತ್ಯಂತ ಉತ್ಸಾಹವಿರುವುದಿಲ್ಲ. ಲೋಕದಲ್ಲಿ ಯಾರಿಗಾದರೂ ನಾಳೆ ಬೆಳಗಾದರೆ ನನಗೆ ದೊಡ್ಡ ಪದವಿಯು ಬರುವುದೆಂದು ತಿಳಿದವನಿಗೆ ಎಷ್ಟು ಉತ್ಸಾಹವಿರುವುದೋ, (೫೦-೬೦)ವರ್ಷಗಳ ಮೇಲೆ ದೊಡ್ಡ ಪದವಿ ಬರುತ್ತದೆ- ಎಂದು ತಿಳಿದವನಿಗೆ, ಆ ಉತ್ಸಾಹವು ಬರುವುದೆ? ಅದರಂತೆ, ಋಜುಗಣ

ದವರಿಗೂ ಆ ದೋಷ ಬಂದಿದ್ದೀ ಇರುವುದು. ಆದರೆ, ಆ ದೋಷವು ಅವರಿಗೆ ಇದೆ-ಎಂದು ಹೇಳುವುದು ಯುಕ್ತವೇ ಸರಿ! ಇಲ್ಲವಾದರೆ, ಮುಕ್ತರಾದ ಬ್ರಹ್ಮದೇವರು ಋಜುಗಣದವರು. ಪದವಿಗೆ ಬಂದವರು, ಬಾರದವರು– ಎಲ್ಲರು ಸಮವೆಂದು ಹೇಳಬೇಕಾಗುವುದು. ಆದ್ದರಿಂದ. ದೋಷವು ಯುಕ್ತವೇ ಸರಿ ಎಂದರು. ಕಲ್ಪಸಾಧನೆ ಹೆಚ್ಚಿದ ಹಾಗೆಲ್ಲಾ ಜ್ಞಾನಭಕ್ತಿಯು ಹೆಚ್ಚುತ್ತಲೇ ಬರುವುದು. ಇವರಿಗೆ ವ್ಯಾಪ್ತ್ಯೋಪಾಸನೆ ಯುಂಟು. ಬಿಂಬಾಪರೋಕ್ಷವು ಸಾಧನಾ ನಂತರದಲ್ಲಿ ಆಗುವುದು. ಅದಕ್ಕೆ ಪೂರ್ವದಲ್ಲಿ ಸಾಮಾನ್ಯವಾಗಿ ಅಪರೋಕ್ಷವು, ಸಾಧನಾನಂತರ ವಿಶೇಷಾ ಪರೋಕ್ಷವೂ ಉಂಟೆಂಬ ತಾತ್ಪರ್ಯ. ॥೩೪॥

**೩. ಭಾವದರ್ಪಣ :–**

ಮುಕ್ತಬ್ರಹ್ಮನ ಸಾಮ್ಯ ಬಂದೀತೆಂದು ಪರಮೋತ್ಸಾಹದಿಂದ ವರ್ಜಿತ ನೆಂದು ಬ್ರಹ್ಮದೇವರಿಗೆ ಹೇಳಿದ್ದಕ್ಕೆ ಪರಮೋತ್ಸಾಹದ ಶಬ್ದಾರ್ಥವೇನೆಂದರಿತು ಸೃಷ್ಟ್ಯಾದಿ ವ್ಯಾಪಾರೇಚ್ಛಾ ಶೂನ್ಯವಾದ ಭಗವದುಪಾಸನೆಯೇ ಪರಮೋತ್ಸಾಹ ಎನಿಸಿಕೊಳ್ಳುತ್ತದೆ. ಇಂಥಾದ್ದು ರಹಿತನಾದ್ದರಿಂದ, ಒಂದು ದೋಷ ಹೇಳು ತ್ತಾರೆ. । ಮಹಿತೇತಿ। "ಅನಾದಿಕಾಲತಃ ಸರ್ವೇ ದೋಷಹೀನಾ ಗುಣಾಧಿಕಾಃ। ಋಜೂನಾಮೇಕದೋಷೋಽಸ್ತಿ ಪರಮೋತ್ಸಾಹವರ್ಜನಮಿತಿ"–ಸತ್ತತ್ವರತ್ನಮಾ ಲೋಕ್ತೇಃ ॥೩೪॥

**೪ ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-**

ನನು ಏವಂ ನಿರ್ದುಷ್ಟೇ ಋಜುತ್ವೇ ಮುಕ್ತಸಾಮ್ಯಂ ಸ್ಯಾತ್ ಇತ್ಯತ ಆಹ-"ಮಹಿತ" ಇತಿ॥ ಪೂಜ್ಯ॥ ಪರಮೋತ್ಸಾಹಃ ಮುಕ್ತ್ಯರ್ಥೋದ್ಯೋಗಃ ॥ ತದ್ರಾಹಿತ್ಯಂ ತದಲ್ಪತಾ॥ ನದೋಷರೂಪಮ್॥ ಏವಂ ಚ ಸಾಮ್ಯಂ ನಿರಸ್ಯ ಋಜುತ್ವಮಪ್ಯಪೀಡಿತಮ್ ॥ ಋಜೂನಾಂ ಏಕ ಏವಾಸ್ತಿ ಪರಮೋತ್ಸಾಹ ವರ್ಜನಮ್ ॥ ಸಗುಣಾಲ್ಪತ್ವಮಾತ್ರತ್ವಾತ್ ನರ್ಜುತ್ವೇನ ವಿರುಧ್ಯತೇ॥

ಇತ್ಯೇತದ್ವ್ಯಾಖ್ಯಾ ಸುಧಾಯಾಂ ಸ್ಪಷ್ಟಮೇತತ್॥ ಬಹಿರುಪಾಸನಾ ಸಾಮಾನ್ಯಾ ಪರೋಕ್ಷಃ ಕಲ್ಕ್ಯರ್ವಾಕ್ ಜನ್ಮಸು॥ ವಿವೃತಂ ಚ ನಾನಾಪರೋಕ್ಷ ಸ್ವರೂಪವಮ್॥ ವೃದ್ಧಿಪದಂ ತಂತ್ರೇಣ ಉಪಾತ್ತಮ್॥ ಕ್ರಮೇಣ ಬಿಂಬದರ್ಶನೇಪಿ ಸ್ಪಷ್ಟತಾಖ್ಯವೃದ್ಧಿಂ ಬ್ರೂತೇ. ॥೩೪॥

## ಕನ್ನಡಾರ್ಥ

ಹೀಗೆ ಋಜುಸ್ವಭಾವವು ನಿರ್ದುಷ್ಟವಾದರೆ, ಅವರಿಗೆ ಮುಕ್ತರಿಂದ ಸಾಮ್ಯ ಬರುವುದಿಲ್ಲ. ಹೀಗೆ ಶಂಕಿಸಿದರೆ, ಅದಕ್ಕೆ ಉತ್ತರ ರೂಪವಾಗಿ-"ಮಹಿತ"– ಈ ಪದ್ಯವನ್ನು ಹೇಳುತ್ತಾರೆ. "ಮಹಿತ"–ಪೂಜ್ಯ. "ಪರಮೋತ್ಸಾಹಃ"– ಮುಕ್ತಿಯ ಸಲುವಾಗಿ ಉದ್ಯುಕ್ತವಾಗಿರುವುದು. "ತದ್ರಾಹಿತಂ"–ಅದರಿಂದ, ರಹಿತವಾಗಿರುವುದು. ಎಂದರೆ, ಅವರಲ್ಲಿ ಸ್ವಲ್ಪೇ ತೊಡಗಿರುವುದು. ಎಂದು ಅರ್ಥ, ಇದು ಋಜುಗಳ ದೋಷವಲ್ಲ. ಹೀಗೆ ಹೇಳುವುದರಿಂದ, ಮುಕ್ತಸಾಮವನ್ನು ನಿರಾಕರಿಸಿದ್ದಾಗುತ್ತದೆ. ಮುಕ್ತಿಯ ಸಲುವಾಗಿ ಪರಮೋತ್ಸಾಹವಿಲ್ಲದಿರುವುದೊಂದೇ ಒಂದು ಧರ್ಮ. ಹೀಗೆ ಇರುವ ಈ ಧರ್ಮವು ಋಜುತ್ವವನ್ನು ವಿರೋಧಿಸುವುದಿಲ್ಲ. ಈ ವಿಷಯವು– "ಸಗುಣಾಲ್ಪಮಾತ್ರತ್ವಾತ್"– ಈ ಅನುವ್ಯಾಖ್ಯಾನದ ವ್ಯಾಖ್ಯಾಸುಧೆಯಲ್ಲಿ ಹೆಚ್ಚು ವಿಶದೀಕೃತವಾಗಿರುತ್ತದೆ. ಉಪಾಸನೆಯು ಬಹಿಃಸಾಮಾನ್ಯಾಪರೋಕ್ಷವು ಇರುತ್ತದೆ. ಸಾಮಾನ್ಯಾಪರೋಕ್ಷದ ಸ್ವರೂಪವನ್ನು ಹಿಂದೆ ನಿರೂಪಿಸಿರುತ್ತೇವೆ.

ಇಲ್ಲಿಯ "ವೃದ್ಧಿ". ಈ ಪದಕ್ಕೆ ತಂತ್ರದಿಂದ ಪುನರಾವೃತ್ತಿಗುತ್ತದೆ. "ಸ್ಪಷ್ಟತಾ"-ಎಂಬ ಜ್ಞಾನಗತವಾದ ವಿಶೇಷವು ಬಿಂಬದರ್ಶನವಿದ್ದರೂ, ಕ್ರಮದಿಂದ ವೃದ್ಧಿಯಾಗುತ್ತದೆಯೆಂದು ಹೇಳುತ್ತಾರೆ. ॥೩೪॥

### ೫. ಶ್ರೀಗುರುಹೃದಯ ಪ್ರಕಾಶಿಕೆ

ಮಹಿತವೆಂಬ ಪೂಜ್ಯರಾದ ಋಜುಗಣಕ್ಕೆ ಪರಮೋತ್ಸಾಹವೆಂಬ

ಅತಿಶಯಾನಂತ ಇದ್ದಾಗ್ಯೂ, ಅಭಿಮಾನ ವರ್ಜಿತರುವ ದೋಷವು ಸಹಜ ವೆಂಬ ಸ್ವಾಭಾವಿಕ ಗುಣವು. ಈ ದೋಷ ಹೇಳಗೋಡದೆ. ವಾಸ್ತವ್ರಹ್ಮ ಸಾಮ್ಯ ಬರುವುದು; ಆದ್ದರಿಂದ, ಆ ದೋಷ ಹೇಳತಕ್ಕದ್ದೇ ಸರಿ ಎಂದರ್ಥ. ಈ ಋಜುಗಣಕ್ಕೆ ಸ್ವಾಭಾವಿಕ ಜ್ಞಾನ ಭಕ್ತ್ಯಾದಿಗುಣಗಳು ಬ್ರಹ್ಮಪದ ಬರುವ ವರೆಗೂ ಸಾಧನದಿಂದ ವೃದ್ಧಿ ಹೊಂದುವುವು. ಬಿಂಬಾವತಾರಗಳ ಉಪಾಸನೆ ಉಂಟು. ಬ್ರಹ್ಮಪದ ಪ್ರಾಪ್ತಿಯಾದಾಗ, ಸ್ವಬಿಂಬರೂಪ ಸ್ಪಷ್ಟ ದರ್ಶನವಾಗುವುದು.

ಪ್ರಮಾಣ :-
ಋಜೂನಾಂ ಏಕ ಏ ಶಾಸ್ತಿ ಪರನೋಕ್ತಾಹ ವರ್ಜನಂ ।
ಸ ಗುಣಾಲ್ಪತ್ವಮಾತ್ರತ್ವಾನ್ನಿರ್ಜನತ್ವೇನ ವಿರುಧ್ಯತೇ ॥
ಎಂಬ ಅನುವ್ಯಾಖ್ಯಾನಾರ್ಥವು ವಿವರಿಸಿತು. ॥೩೩॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಭಗವತ್ಸಂಕಲ್ಪಾನುಸಾರ, ಅಸೃಜ್ಯರಾಶಿಯಿಂದ ಬ್ರಹ್ಮಪದವಿಗೆ ಸಾಧನ ಮಾಡುವ ೨೦೦ ಮಂದಿ ಋಜುಗಳು ಸೃಷ್ಟಿಗೆ ಬರುತ್ತಾರೆ. ಇವರೆಲ್ಲರೂ ಜಾತಾಪರೋಕ್ಷಿಗಳು. ಇವರು ಪರಮಪೂಜರಾದ್ದರಿಂದ-**ಮಹಿತ** ರೆಂದು ಕರೆದಿದ್ದಾರೆ ದಾಸರಾಯರು.

೨. ಈ ಗಣದಲ್ಲಿ ಪೂರ್ವಾರ್ಧ ೧೦೦ ಮಂದಿ ಋಜುಗಳು ಮತ್ತು ಉತ್ತರಾರ್ಧ ಉಳಿದ ೧೦೦ನೆಯ ಋಜುಗಳು ಎಂದು ಎರಡು ಪ್ರಕಾರ. ಪೂರ್ವಾರ್ಧಗಣದಲ್ಲಿ ೧೦೦ನೆಯ ಋಜುವು ಸಾಧನಾನಂತರ, ೧೦೧ನೆಯ ಉತ್ತರಾರ್ಧದ ಪ್ರಥಮ ಪದವಿಗೆ ಬಂದು **ಕಲ್ಕಿ**-ಎಂದು ಕರೆಸುವನು.

೩. ೧೦೧ನೆಯ ಬ್ರಹ್ಮಕಲ್ಪದ ಋಜುಪದದಿಂದ ಆರಂಭಿಸಿ, ೧೯೯ ನೆಯ ವಾಯುಪದವಿ ಪರ್ಯಂತ, ಆ ಋಜುವಿಗೆ ಪ್ರತಿ ಬ್ರಹ್ಮಕಲ್ಪದಲ್ಲಿಯೂ ಜ್ಞಾನ-ಆನಂದಾದಿ ಗುಣಗಳು ಕ್ರಮಕ್ರಮವಾಗಿ ಅಭಿವ್ಯಕ್ತವಾಗಿ (ಸ್ವರೂಪಗತ)

ವೃದ್ಧಿಯಾಗುತ್ತಾ ಹೋಗುವುದು. ಕೊನೆಯಲ್ಲಿ, ೨೦೦ನೇಯ ಬ್ರಹ್ಮಕಲ್ಪದಲ್ಲಿ ಬ್ರಹ್ಮಪದವಿಯನ್ನು ಹೊಂದಿ, ಜೀವರುಗಳ ವಿವೀಕ್ಷಾ ಪೂರ್ಣವಾಗುವುದು. ಈ ಪೂರ್ಣತೆ ಹೊಂದುವುದರಿಂದಲೇ. ಬ್ರಹ್ಮ-ನೆಂತ ಹೆಸರು. ಬ್ರಹ್ಮಪದವಿ ಗಿಂತ ಮುಂಚಿತವಾದ ಋಜುಪದಸ್ಥರಿಗೆ ಬ್ರಹ್ಮದೇವರಿಗಿರುವಷ್ಟು ಪೂರ್ಣ ಪ್ರಮಾಣದಲ್ಲಿ ಜ್ಞಾನ-ಭಕ್ತಿ-ವೈರಾಗ್ಯಾದಿ ಸಕಲ ಗುಣಧರ್ಮಗಳು ಅಭಿವ್ಯಕ್ತ ವಾಗಿರುವುದಿಲ್ಲ. ಒಂದೊಂದು ಕಲ್ಪದಲ್ಲೂ ಅಭಿವ್ಯಕ್ತವಾಗುತ್ತಾ, ೨೦೦ನೆಯ ಕಲ್ಪದಲ್ಲಿ ಪೂರ್ಣಗೊಳ್ಳುವುವು. ಈ ದೃಷ್ಟಿಯಿಂದ ಉಳಿದ ಋಜುಗಳಿಗೂ ಬ್ರಹ್ಮನಿಗೂ ಸಾಮ್ಯದಲ್ಲಿ ವ್ಯತ್ಯಾಸವಿರುವುದು. ಬ್ರಹ್ಮನಿಗೂ ಮುಕ್ತಬ್ರಹ್ಮ ರಿಗೂ ಸಾಮ್ಯ ವ್ಯತ್ಯಾಸವುಂಟು. ಪದವಿ ವ್ಯತ್ಯಾಸದಂತೆ ಸಾಮ್ಯವುವ್ಯತ್ಯಾಸವು ಇದೆ. ಇದು ಋಜುಗಳಿಗೆ ದೋಷವೆನಿಸುವುದಿಲ್ಲ. ಈ ಸಾಮ್ಯ ಬೇಧವೇಬ ದೋಷವು ಬಾಧಕವಲ್ಲ- ಅವರ ಸಾಧನೆಗೆ. ಅದು ವಿಹಿತವೇ ಆಗಿದೆ.

**ಪ್ರಮಾಣ**

"ಅನಾದಿಕಾಲತಃ ಸರ್ವೇ ದೋಷಹೀನಾ ಗುಣಾಧಿಕಾಃ ।
ಋಜೂನಾಮೇಕ ದೋಷೋಸ್ತಿ ಪರಮೋತ್ಸಾಹವರ್ಜನಮಿತಿ॥

**ಇತಿ ಸತ್ತತ್ವರತ್ನಾಮಾಲೋಕ್ತೇಃ॥**

ಅಂದರೆ, ಈ ಸಾಮವ್ಯತ್ಯಾಸವು ಋಜುಗಳಿಗೆ ಅನಾದಿಕಾಲದಿಂದ ಇದೆ. ಮುಕ್ತಿಯ ಸಲುವಾಗಿ ಪರಮ ಉತ್ಸಾಹವಿಲ್ಲದಿರುವುದೊಂದೇ ಒಂದು ಧರ್ಮ ಈ ಧರ್ಮವು ಋಜುತ್ವಕ್ಕೆ ವಿರೋಧಿಯಲ್ಲ. ೨೦೦ ಮಂದಿ ಋಜುಗಳೂ ಸಮಾನಸ್ಕಂದರೇ. ಪದವಿ ಪ್ರಯುಕ್ತ ನ್ಯೂನಾಧಿಕ ಉಳ್ಳವರಾಗುತ್ತಾರೆ.

೪. ಈ ರೀತಿಯ ಉತ್ಸಾಹಾಧಿಕ್ಯ ಜ್ಞಾನ-ಭಕ್ತಿ-ವೈರಾಗ್ಯಾದಿಗಳ ಅಭಿವೃದ್ಧಿಯು ಬ್ರಹ್ಮಪದ ಪರ್ಯಂತ ಇರುವುದು. **(ದ್ರುಹಿಣ ಪದಪರಿ ಯಂತ)**

೫. ರುದ್ರಾದಿಗಳಂತೆ, ಋಜುಗಣಸ್ಥರಿಗೆ ಜ್ಞಾನತಿರೋಧಾನವಿಲ್ಲ. ಎಲ್ಲರೂ ಅತಿರೋಹಿತವಿಮಲವಿಜ್ಞಾನಿಗಳು. ಸ್ಥೂಲದೇಹಗತ ಬ್ರಹ್ಮಾಂಡಗತ ಬಹಿರುಪಾಸನೆ ಅವರಿಗೆ ಸರ್ವತ್ರ ಉಂಟು. ನಂತರ, ಬಿಂಬದರ್ಶನ ಭಾಗ್ಯ. ॥೩೪॥

## ಪದ್ಯ-೩೫

**ಮೂಲ:-**

**ಜ್ಞಾನರಹಿತ ಭಯುತ್ವ ಪೇಳ್ವ ಪು।**
**ರಾಣ ದೈತ್ಯರ ಮೋಹಕವು ಚತು।**
**ರಾನನಗೆ ಕೊಡುವುದೆ ಮೋಹಾಜ್ಞಾನ ಭಯ ಶೋಕ ॥**
**ಭಾನುಮಂಡಲ ಚಲಿಸಿದಂದದಿ।**
**ಕಾಣುವುದು ದೃಗ್ದೋಷದಿಂದಲಿ।**
**ಶ್ರೀನಿವಾಸನ ಪ್ರೀತಿಗೋಸುಗ ತೋರ್ದನಲ್ಲದಲೆ ॥೩೫॥**

**ಅವತರಣಿಕೆ :-**

ಬ್ರಹ್ಮದೇವರಿಗೆ ಅಜ್ಞಾನಾದಿ ದೋಷಗಳಿಲ್ಲವೆಂದು ತಿಳಿಸುತ್ತಾರೆ. ॥೩೫॥

**ಪ್ರತಿಪದಾರ್ಥ :-**

**ಚತುರಾನನಗೆ**— ಚತುರ್ಮುಖಶ್ರೀಬ್ರಹ್ಮದೇವರಿಗೆ, **ಜ್ಞಾನ ರಹಿತ**—ಕಾಲವಿಶೇಷದಲ್ಲಿ ಅಜ್ಞಾನ (ಜ್ಞಾನತಿರೋಧಾನ), **ಭಯುತ್ವ**-ಭಯವಾಗಲೀ **ಪೇಳ್ವ**—ಹೇಳುವ, **ಪುರಾಣ**—ಪುರಾಣಗತವಿಕದೇಶವಾಕ್ಯಗಳು, **ದೈತ್ಯರ ಮೋಹಕವು**—ದೈತ್ಯರಿಗೆಮೋಹವನ್ನುಂಟುಮಾಡುವ ವಾಕ್ಯಗಳು. **ಮೋಹ**—ಮೋಹರೂಪವಾದ ದೋಷ, **ಅಜ್ಞಾನ ಭಯ ಶೋಕ**—ಅಜ್ಞಾನವಾಗಲೀ, ಭಯವಾಗಲೀ, ದುಃಖವಾಗಲೀ, **ಚತುರಾನನಗೆ ಕೊಡುವುದೇ**—ಬ್ರಹ್ಮದೇವರಿಗೆ ಎಂದಾದರೂ ಇವೆಯೇ?-ಎಂದರೆ, ಎಂದೆಂದಿಗೂ ಇಲ್ಲವೆಂದರ್ಥ, **ದೃಗ್ದೋಷದಿಂದಲಿ**—ಕಣ್ಣಿನಲ್ಲಿರುವ ದೋಷದ ಕಾರಣದಿಂದ, **ಭಾನುಮಂಡಲ ಚಲಿಸದಿಂದದಿ** — ಸೂರ್ಯಮಂಡಲವು ಚಕ್ರಾಕಾರದಲ್ಲಿ ಸಂಚರಿಸಿದಂತೆ ಕಾಣುವುದು. ಹಾಗೆಯೇ, ಅಸುರರಿಗೆ ಅಜ್ಞಾನ ದೋಷದಿಂದ ಬ್ರಹ್ಮದೇವರಲ್ಲಿ ದೋಷವಿದ್ದಂತೆ ಕಾಣಿಸುವುದು. ಅದು

ಅವರ ಸ್ವರೂಪಗತದೋಷ, **ಶ್ರೀನಿವಾಸನ ಪ್ರೀತಿಗೋಸುಗ**— ದೈತ್ಯರನ್ನು ಮೋಹಿಸಿ. ತದ್ವಾರಾ, ಅವರಿಗೆ ಅಜ್ಞಾನಾಭಿವೃದ್ಧಿ ಮಾಡಲೋಸುಗ ಶ್ರೀಹರಿಯ ಆಜ್ಞಾನುಸಾರ, ಅವನ ಪ್ರೀತ್ಯರ್ಥವಾಗಿ, **ತೋರ್ದನಲ್ಲದೆಲೆ**— ತೋರಿಸುವವರಾಗಿದ್ದಾರೆಯೇ ಹೊರತು, ಅನ್ಯಥಾ ಇಲ್ಲ. (ಕೇವಲ ದೈತ್ಯರ ಮೋಹಕನಾರ್ಥವಾಗಿ, ತಮ್ಮಲ್ಲಿ ದೋಷವಿದೆ-ಎಂದು. ತೋರಿಸಿಕೊಳ್ಳುವರು) ॥೩೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:-

ಬ್ರಹ್ಮದೇವರಿಗೆ ಕಾಲವಿಶೇಷದಲ್ಲಿ ಅಜ್ಞಾನ, ಭಯ-ಎಂದರೆ. ಪದ್ಮನಾಭ ದೇವರ ನಾಭೀಕಮಲದಿಂದ ಜನಿಸಿದಾಗ್ಗೆ, ಬ್ರಹ್ಮದೇವರಿಗೆ ನಾಲ್ಕು ಬಾರಿ ಅಜ್ಞಾನವೂ, ಎರಡು ಬಾರಿ ಭಯವೂ ಪ್ರಾಪ್ತವಾಯಿತೆಂದು ಹೇಳತಕ್ಕ ಪುರಾಣಗತ ಏಕದೇಶವಾಕ್ಯಗಳು, ದೈತ್ಯರ ಸ್ವರೂಪಸ್ವಭಾವ ಮೋಹರೂಪ ವಾದ್ದರಿಂದ, ಆ ಸ್ವರೂಪಾನುಸಾರ ಅವರಿಗೆ ಸಾಧನವಾಗಬೇಕು; ಬ್ರಹ್ಮದೇವ ರಲ್ಲಿ ವಿಪರೀತ ತಿಳಿದ ಹೊರತು, ಅಸುರರಿಗೆ ಸಾಧನ ಪೂರ್ತಿ ಆಗೋದಿಲ್ಲ ಆದ್ದರಿಂದ, ಬ್ರಹ್ಮದೇವರಾದರೋ, ತಮಗೆ ಲಿಂಗದೇಹವದೆ (ವಸ್ತ್ರಪಟದಂತೆ ಅಕಾರ್ಯಕಾರಿಯಾಗಿ ಜ್ಞಾನತಿರೋಧಾನಮಾಡತಕ್ಕದ್ದಲ್ಲ), ಆದರೂ, ಲಿಂಗದೇಹ ಇದ್ದಮ್ಯಾಲೆ, ತತ್ಕಾರ್ಯ ಅಕಾರ್ಯಕಾರಿಯಾಗಿ ಪ್ರದರ್ಶನ ಮಾಡಬೇಕಾಗಿ ತೋರಿಸೋವರಾದರೇ ಹೊರ್ತು, ಮೋಹ, ಅಜ್ಞಾನ, ಭಯ ದುಃಖ-ಬ್ರಹ್ಮ ದೇವರಿಗೆ ಹೇಳೋಣವೆಂಬುದು ಕೂಡುವುದೇ? ಎಂದರೆ, ನೇತ್ರದೋಷದಿಂದ ಸೂರ್ಯಮಂಡಲನ್ನು ಮಧ್ಯಾಹ್ನಕಾಲದಲ್ಲಿ ದೃಷ್ಟಿಸಿ ನೋಡಿದರೆ, ಆ ಮಂಡಲ ಚಕ್ರಾಕಾರವಾಗಿ ಚಲಿಸಿದೋಪಾದಿಯಲ್ಲಿ ನೋಡತಕ್ಕವ ಕಾಣತಾನೆ. ಇವನ ಕಣ್ಣಿಗೆ ಹಾಂಗೆ ಕಂಡಿತೇ ಹೊರ್ತು, ಮಂಡಲವೇನೋ ಚಲಿಸಲಿಲ್ಲ. ತದ್ವತ್, ಅಸುರರ ಅಜ್ಞಾನದೋಷದಿಂದ ಅವರಿಗೆ ಹಾಂಗೆ ತೋರತದೆ ಹೊರ್ತು,

ಬ್ರಹ್ಮದೇವರಿಗೆ ಅಜ್ಞಾನಾದಿ ದೋಷವಿಲ್ಲ. ಅಸುರರನ್ನ ಮೋಹಿಸಿ, ಅವರಿಗೆ ಅಜ್ಞಾನಾಭಿವೃದ್ಧಿ ಮಾಡುವುದು- ಶ್ರೀನಿವಾಸನಿಗೆ ಪ್ರೀತಿಕರವಾದದ್ದು. ಅದ ಕಡಿಯಿಂದ, ದೇವರ ಆಜ್ಞಾನುಸಾರ ತೋರಿಸುವವರಾದರೆ ಹೊರ್ತು, ಬ್ರಹ್ಮ ದೇವರಿಗೆ ಅಜ್ಞಾನಾದಿ ದೋಷವು ಇಲ್ಲ. ತದ್ವತ್, ಋಜುಗಳಿಗೂ ಇಲ್ಲ. ॥೩೫॥

೨. ಭಾವಪ್ರಕಾಶಿಕೆ:-

ಪುರಾಣಗಳಲ್ಲಿ—ಅಂದರೆ, ರಾಮಾಯಣ ಸುಂದರಕಾಂಡದಲ್ಲಿ, ಹನುಮಂತ ದೇವರು ಸೀತೆಯನ್ನು ರಾವಣಾಂತಃಪುರವೆಲ್ಲಾ ಹುಡುಕಿ ಕಾಣದೇ, ಬಹಳ ಶೋಕ ಪಟ್ಟು, ಕಡೆಗೆ ಅಶೋಕವನದಲ್ಲಿ ಸೀತೆಯನ್ನು ಕಂಡರೆಂಬ ವಿಷಯದಲ್ಲಿ ಹನುಮಂತ ದೇವರಿಗೆ ಬಹಳ ಅಜ್ಞಾನವು ಕಂಡು ಬರುವುದು. ಈ ವಿಷಯ ವಾದ ಸಂಶಯ ಪರಿಹಾರವು ಮಹಾ ಭಾರತ ತಾತ್ಪರ್ಯ ನಿರ್ಣಯದಲ್ಲಿ, ಒನೆಯ ಅಧ್ಯಾಯದಲ್ಲಿ-"ಯದ್ಯಪ್ಯೇತೆ ಸಪಶ್ಯಂತಿ ನಿಶಾಚರ ಗಣಾಸ್ತುಯೇ ॥ ದ್ಯುಲೋಕಚಾರಿಣಃ ಸರ್ವೇ ಪಶ್ಯಂತ್ಯಪ್ಯಯ ಏವ ಚ ॥ ತೇಷಾಂ ವಿಡಂಬನಾ ಯ್ಯೆವ ದೈತ್ಯಾನಾಂ ವಂಚನಾಯ ಚ॥ ಪಶ್ಯತಾಂ ಕಲಿಮುಖ್ಯಾನಾಂ ವಿಡಂ ಬೋಯಂ ಕೃತೋ ಭವೇತ್ ॥" ಹನುಮಂತದೇವರು ಸೀತೆಯನ್ನು ಹುಡುಕಿದುದು. ರಾತ್ರಿ ರಾಕ್ಷಸರೆಲ್ಲರೂ ಮಲಗಿರುವಾಗ. ಹೀಗಿರಲು, ದೈತ್ಯರನ್ನ ವಂಚಿಸಲು, ಎಂಬ ಸಮಾಧಾನವು ಹೇಗೆ ಕೂಡುವುದೆಂದರೆ—ಯದ್ಯಪಿ ರಾವಣನ ಮನೆಯಲ್ಲಿರುವ ರಾಕ್ಷಸರು ಮಾತ್ರ ನೋಡಲಿಲ್ಲ, ಆದರೂ ಅಂತರಿಕ್ಷವಾಗು ಗಳಾದ ಎಲ್ಲರೂ ನೋಡುತ್ತಿರುವರು. ಜ್ಞಾನಿಗಳಾದ ಋಷಿಗಳೂ ನೋಡು ತ್ತಿರುವರು. ಆ ದೇವತೆಗಳೂ, ಋಷಿಗಳೂ ಇವರುಗಳಲ್ಲಿ ತಮ್ಮ ವಿಡಂಬನ ವನ್ನು ಪ್ರದರ್ಶನ ಮಾಡುವುದಕ್ಕೂ, ದೈತ್ಯರನ್ನು ವಂಚಿಸುವುದಕ್ಕೂ ನೋಡು ತ್ತಿರುವ ಕಲಿ ಮೊದಲಾದವರನ್ನು ಮೋಹಪಡಿಸುವುದಕ್ಕೂ ಈ ವಿಡಂಬನ ವನ್ನು ಹನುಮಂತದೇವರು ಮಾಡಿದರೆಂದು ಹೇಳಿರುವರು. ಇದರಂತೆ, ಭೀಮಾವತಾರದಲ್ಲಿ ಕೆಲವು ಕಡೆಯಲ್ಲಿ ಕಂಡು ಬರುವುದು. ಇವೆಲ್ಲವೂ ನಿಜ ವಾದುವಲ್ಲ. ಅಜ್ಞರ ಮೋಹಕ್ಕೆಂದು ತಾತ್ಪರ್ಯ ; ಸರ್ವಜ್ಞರಾದ ಬ್ರಹ್ಮ ವಾಯುಗಳಿಗೆ ಅಜ್ಞಾನ ಭಯ ಶೋಕಾದಿಗಳು ಎಲ್ಲಿಯವು? ಭಗವದ್ವಿಷಯಲ್ಲಿ

ಮಾತ್ರ ಸ್ವಲ್ಪ ಅಜ್ಞಾನವೂ, ಕಿಂಚಿದ್ಭಯವೂ ಬ್ರಹ್ಮದೇವರಿಗೆ ಇರುವುದು. ಮಿಕ್ಕ ಜಗದ್ವಿಷಯದಲ್ಲಿ ಇಲ್ಲವೆಂಬ ತಾತ್ಪರ್ಯ. ಭಗವದ್ವಿಷಯದ ಅಜ್ಞಾನವೂ ಕೂಡ ಭಗವತ್ಪ್ರೀತಿಗಾಗಿ ತೋರ್ಪಡಿಸುವರು. ಕಣ್ಣಿನಲ್ಲಿರುವ ಕಾಚ ಕಾಮಲಾದಿ ದೋಷದಿಂದ ಸೂರ್ಯಮಂಡಲವು ಚಲಿಸುವಂತೆ ಕಾಣುವುದು ಹೇಗೋ ಹಾಗೆ, ಅಜ್ಞಾನಿಗಳು ಮಾತ್ರ, ಬ್ರಹ್ಮ ವಾಯುಗಳು ಭಯಶೋಕಾದಿಗಳನ್ನು ಅನುಭವಿಸಿದರೆಂದು ತಮ್ಮ ದೋಷದಿಂದ ತಿಳಿದುಕೊಳ್ಳರೆಂಬ ತಾತ್ಪರ್ಯ. ॥೩೫॥

**೨. ಭಾವದರ್ಪಣ :–**

ಬ್ರಹ್ಮದೇವರಿಗೆ ನಾಲ್ಕಾವರ್ತಿ ಅಜ್ಞಾನ, ಎರಡಾವರ್ತಿ ಭಯ–ಉಂಟೆಂದು ಪುರಾಣವಚನ ಹೇಳುತ್ತದೆ. ಆ ಮೋಹಕಪರಿಹಾರಾರ್ಥವಾಗಿ, ಸಪ್ರಮಾಣಕವಾಗಿ ಅರ್ಥವಿವರ ಮಾಡುತ್ತದೆ–ರಮಾದೇವಿಯಿಂದ ಅಭಿಮನ್ಯಮಾನವಾದ ಅವ್ಯಾಕೃತಾಕಾಶ, ಕಾಲಪ್ರವಾಹ, ಇದು ಚೆನ್ನಾಗಿ ತಿಳಿಯದೇ ಇರೋಣ ಒಂದು। ಪ್ರಕೃತಿ ಪರಮಾಣು ರಮಾದೇವಿಯಿಂದ ತಿಳಿದಷ್ಟು ತಿಳಿಯದೇ ಇರೋಣ ಒಂದು। ರಮಾದೇವಿಯ ಜ್ಞಾನಾನಂದ ಮಹಾತ್ಮೆ ಆದ್ಯಂತ ತೋರದೆ ಇರೋಣ ಒಂದು । ಪರಮಾತ್ಮನ ಗುಣ ಸಾಕಲ್ಯೇನ ತಿಳಿಯದೇ ತೋರೋಣ ಒಂದು । ಈ ನಾಲ್ಕು ಅಜ್ಞಾನ ॥ ಶ್ರೀಪರಮಾತ್ಮನ ಭಯ ಒಂದು । ಈ ೨ ಭಯ ॥ ಈ ಅಜ್ಞಾನ ಭಯಗಳು ಬ್ರಹ್ಮದೇವರಿಗೆ ಸಹಜವಾದವುಗಳೇ ಸರಿ। ಆದರೆ, ಅಜ್ಞಾಧಾರಕನಾದ ಪುತ್ರನ ವಿಷಯವಾಗಿ ಮಾತಾಪಿತೃಗಳ ಪುತ್ರವಾತ್ಸಲ್ಯರೂಪೀ ಪ್ರೇಮವು ಹ್ಯಾಗೆ ಸರ್ವಕಾಲ ಆತನ ಭಯಾಜ್ಞಾನ ಪರಿಹಾರಕವಾದಂಥಾದ್ದಾಗಿಯೇ ಇರುವದೋ, ಹಾಗೆ, ಚತುರಾನನ ಪೂರ್ಣಪ್ರೇಮ ಭಕ್ತಿಯು ಇದ್ದಾಗ್ಯಾದರೂ, ಭಯಾಜ್ಞಾನಗಳಿಂದ ಮೋಹಿತರಾಗಿರುವ ಅಸುರಸ್ವಭಾವದವರು ಮಾತ್ರ ತಮ್ಮ ಸ್ವಭಾವಕ್ಕನುಸಾರವಾಗಿ ಬ್ರಹ್ಮದೇವರಿಗೆ ಸಹ ಭಯ ಮೋಹಾದಿಗಳಿರಬಹುದೆಂದು ತಿಳಿಯುತ್ತಾರೆ। ಆದರೆ, ಈ ತಿಳಿವಳಿಕೆಯೇ ಅವರ ಮೋಹವೆಂದು ಖಂಡಿತವಾಗಿ ತಿಳೀತಕ್ಕದ್ದೆಂದು ಹೇಳುತ್ತಾರೆ। ಜ್ಞಾನರಹಿತ। ತದುಕ್ತಂ-ಗರುಡಬ್ರಹ್ಮಕಾಂಡೇ-"ಮಮಾಜ್ಞಾಂ

ದೃಶ್ಯತೇ ಯತ್ರ ಕುತ್ರ ದೈತ್ಯಾದೀನಾಂ ಮೋಹನಾರ್ಥಂ ಸದೈವ । ತೇನ ಪ್ರೀತಿರ್ದೇವಸ್ಯ ವಿಷ್ಣೋರ್ಭವಿಷ್ಯತೀತ್ಯೇವ ವಿನಿಶ್ಚಿತಾತ್ಮಾ ಕರೋಮ್ಯಹಂ ಶ್ರವಣಂ ಸರ್ವದೈವ ಹರೇಃ ಪ್ರೀತ್ಯರ್ಥಂ ನಿಶ್ಚಯಾರ್ಥಂ ಸತಾಂಹೀತಿ" । ದೃಗ್ದೋಷ–ನೇತ್ರದೋಷವೆಂಬರ್ಥ. ॥೩೫॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ:–

ನನು ಪ್ರಾಕೃತವತ್ ಅಜ್ಞಾನ ಭಯ ಶೋಕಾದ್ಯಾಃ ಅಪಿ ಬ್ರಹ್ಮಣಃ ಶ್ರೂಯಂತೇ-"ಅಜ್ಞಾನಂ ತು ಚತುರ್ವಾರಂ"-ಇತಿ ಪುರಾಣಾದೌ ॥ ಅತಃ ಕಥಂ ಋಜುತಾ? ಕಥಂ ಮಾಂ ತತ್ಸಂಗತಾ ಇತ್ಯತ ಆಹ-"ಜ್ಞಾನ" ಇತಿ॥ ಪ್ರಲಯೇಪ್ಯವಿಶೋಷ ಸೃತೌ ಕಥಂ ತತ್ಸಂಭವಃ? "ವಾಯೋರ್ಮಪು ಪ್ರಲಯೇ ಸೃಷ್ಟಿಕಾಲೇ ತಥಾ ಗಾಯತ್ರ್ಯಾಃ ನಾಸ್ತಿನಾಸ್ತ್ಯೇವ ಮೋಹಃ"॥ ನನು ತದಾ ಭಯಜನಕಾಭಾವಾತ್, ತಥಾತ್ವೇಪಿ ಸೃತೌ ಹರಿಭಕ್ಷಣ, ಕೈಟಭಾದ್ಯುಪದ್ರವಾದೇಃ ಸತ್ವಾತ್ ಯುಜ್ಯತೇ ಭಯಾದಿಕಮಿತಿ ಚೇತ್ ನ ॥ ಅಸುರಮೋಹನಾರ್ಥಂ ತಥಾದರ್ಶನಾದ್ಯುಪಪತ್ತೇಃ॥ ನಿರ್ನಿಮಿತ್ತಂ ಕಿಮರ್ಥಂ ತೇಷಾಂ ಮೋಹನಂ ? ಇತಿ ಚೇತ್ ಸ್ವಾಮಿ ಪ್ರೀತ್ಯರ್ಥಂ ಇತಿ ವದಾಮಃ "ಮಮಾಜ್ಞಾನಂ ದೃಶ್ಯತೇ ಯತ್ರ ಕುತ್ರ ದೈತ್ಯಾನಾಂ ಮೋಹನಾರ್ಥಂ ಸದೈವ॥ ತೇನ ಪ್ರೀತಿ ದೇವ ದೇವಸ್ಯ ವಿಷ್ಣೋಃ ಭವಿಷ್ಯತೀತ್ಯೇವ ವಿನಿಶ್ಚಿತಾತ್ಮಾ"॥- ಇತಿ ವಚನಾತ್॥ ಅಜ್ಞಾನಂ ಶೋಕಾದ್ಯುಪಲಕ್ಷಣಮ್ ॥ ನನ್ವಿದಮೇವ ಮೋಹಕಂ ಕಿಂ ನಸ್ಯಾತ್ ॥ ಏವಂ ಚ ಫಲಿತಮಸ್ಮನ್ಮನೋರಥದ್ರುಮೇಣ॥ ಇತಿ ಚೇತ್ ಮೈವಮ್॥ ಪರಮಸಾತ್ವಿಕತ್ವೇನ ಗಣಿತೇಷ್ವೈವ ಮುಕ್ತಿರಿತಿ ಪರಿಹಾರೇ ಸ್ಥಿತೇಪಿ ಬ್ರೂಮಃ ಸಮಾಧ್ಯಂತರಮ್॥ ಏಕಾದಶ ಭಾಗವತೇ ಬ್ರಹ್ಮಣಃ ಸನಕಾದಿ ಪ್ರಶ್ನಾಜ್ಞಾನ ಪ್ರಕರಣೇ ಮೋಹಮುಪಲಕ್ಷಣೇ ಕೃತ್ಯ ಆಚಾರ್ಯೈಃ ಪ್ರಮಾಣಜ್ಞಾನಾದರಿದ್ರೈಃ ರೀತ್ಯಂತರಂ ಉಕ್ತಂ ಮಾನಮುದಾ ಹರದ್ಭಿ "ಭ್ರಮಂತಿ ಮನಃ ಕ್ವಾಪಿ ಬ್ರಹ್ಮಣೋಃ ವಿಷ್ಣುಮಾಯಯಾ ಸರ್ವಜ್ಞಸ್ಯಾಪಿ ತತ್ರಾತ್ಮಾ ವಕ್ತುಮಿಚ್ಛೇಜ್ಜನಾರ್ದನಃ॥ ತತ್ಜ್ಞಾತ್ವಾ ಚಿಂತಿತಂ ತರ್ಕ

ಚೇತಯತ್ಯಯಮೇವತು॥ ನ ಸ್ವಯಂ ಚೇತಯತ್ಯರ್ಥಂ ಸ ಓತದ್ಭಾವಿತ್ ಸದಾ॥ ಅನ್ಯೇತ್ವಜ್ಞಾನ ಸಂಯುಕ್ತಾ ಮೋಹಮೀಯುರ್ಯಥಾಕ್ರಮಮ್ಯ ತಸ್ಯ ಮಧ್ಯಂದಿನೇ ಸೂರ್ಯೇ ಕ್ಷೋಭವತ್ ಕ್ಷೋಭಮಾತ್ರಕವ್॥ ನೈವಾಜ್ಞಾನಂ ಯಥಾ ಸೂರ್ಯೇ ತಮಶ್ಚಾಪಿ ಕಥಂ ಚನ॥ ಇತಿ ಭಾವವಿವೇಕ ಇತಿ॥ "ಪ್ರಶ್ನಾದೀನಜ್ಞವತ್ ಕರಣಂ ಮೋಹನಾಯಥವಾನಾಮ್"- ಇತ್ಯುಕ್ತೇಃ ಪೂರ್ವಗತಿಮೇವಾಶ್ನುವತೇ॥ ಶ್ರವಣಮಪ್ಯೇವಂ ಹರೇಃ ಪ್ರೀತ್ಯರ್ಥಂ, ನಿಶಯಾರ್ಥಂ ಸತಾಂ ಓತಿ ಪ್ರಯೋಜನಯತ್ರವತ್॥ ನನು ಮೂಲರೂಪಸ್ಯೈವಮಪ್ಯವತಾರೇ ಅಭೇದಧತಿ ಜ್ಞಾನಸ್ಯಾಪರೋಕ್ಷಸ್ಯ ವರ್ಜನಮ್॥ ವಚನಾನಿ- "ಬ್ರಹ್ಮಣಸ್ತ್ವವತಾರೇಷು ಭಾರತ್ಯಾಃ ಜ್ಞಾನವರ್ಜನಮ್॥ ಅವತಾರೇ ತು ಭಾರತ್ಯಾಃ ಕದಾಚಿತ್ ಜ್ಞಾನವರ್ಜನಮ್॥ ಅಪರೋಕ್ಷತಿರೋಭಾವಃ"-ಇತ್ಯಾದೀನಿ, "ಅತೋ ಗಾಯತ್ರೀವತ್ ಭಾರತೀಮ್॥ ಇತ್ಯಾದೀನ್ಯಪಿ ಮೂಲರೂಪಪರಾಣೀತಿ ವಕ್ತು ಮುಚಿತಮಿತಿ ಚೇತ್ ನ " ತದೀಶ್ವರೇಚ್ಛಯೈವೈಕ್ಷತ್॥ ಯದೀಷತ್ತ್ವನ್ಯಾಸ್ತ್ಯೇವೇತಿ ವಾಚ್ಯಮ್॥ "ತಾವನ್ಮಾತ್ರೇಣ ಚಾಜ್ಞಾನಂ ತಸ್ಯ ನೈವಹಿ ಚಿಂತಯೇತ್॥ ಭಾರತ್ಯಾಸ್ತು ಯದಾ ನಾಸ್ತಿ ಸರಸ್ವತ್ಯಾಸ್ತು ಕಿಂ ಪುನಃ॥ ಇತ್ಯಾದಿನಾ ತಥ್ಯಾವಗಮಾತ್ ಇತಿ ಯತ್ಕಿಂಚಿದೇತತ್. ॥೩೫॥

## ಕನ್ನಡಾರ್ಥ

ಪ್ರಾಕೃತಪುರುಷರಿಗೆ ಇರುವಂತೆ, ಬ್ರಹ್ಮದೇವರಿಗೆ ಅಜ್ಞಾನ ಭಯ ಶೋಕಗಳಿರುವವೆಂದು–"ಅಜ್ಞಾನಂ ತು ಚತುರ್ವಾರಂ". ಈ ಮುಂತಾದ ಶ್ರುತಿಗಳು ಹೇಳುತ್ತವೆ. ಆದುದರಿಂದ, ಋಜುತ್ವವು ಹೇಗೆ?- ಅದು ಸಂಗತವಾಗುವುದು ಹೇಗೆ? ಈ ಆಕ್ಷೇಪವನ್ನು ಪರಿಹರಿಸುವುದಕ್ಕೋಸುಗ-"ಜ್ಞಾನರಹಿತ"-ಈ ಪದ್ಯವನ್ನು ಹೇಳಿರುತ್ತಾರೆ.

ಪ್ರಳಯದಲ್ಲಿಯೂ ಸಹ, ಅಜ್ಞಾನ ಮುಂತಾದುವುಗಳಿಲ್ಲದಿರುವಾಗ, ಸೃಷ್ಟಿಯಲ್ಲಿ ಹೇಗೆ ಸಂಭವಿಸುವುವು? ನನಗೂ, ವಾಯುವಿಗೂ ಗಾಯತ್ರೀ (ಸರಸ್ವತಿ)

ದೇವಿಗೂ, ಪ್ರಳಯ, ಸೃಷ್ಟಿಕಾಲಗಳಲ್ಲಿಯೂ ಮೋಹವಿರುವುದೇ ಇಲ್ಲ."— ಹೀಗೆ ಪ್ರಮಾಣ ವಿರುತ್ತದೆ.

ಇನ್ನು, ಪ್ರಳಯದಲ್ಲಿ ಭಯಜನಕವಾವುದೂ ಇಲ್ಲವಾದುದರಿಂದ, ಭಯ ಮುಂತಾದುವುಗಳು ಇರಲಿಕ್ಕಿಲ್ಲ. ಆದರೆ, ಸೃಷ್ಟಿಯಾದ ಅನಂತರ, ಹರಿಯು "ತನ್ನನ್ನು ನುಂಗುವುದು–ಕೈಟಭಾದಿಗಳ ಉಪದ್ರವ."—ಈ ಮುಂತಾದ ಭಯ ಗಳಿರುತ್ತವೆ. ಆದುದರಿಂದ, ಸಂಸಾರಾವಸ್ಥೆಯಲ್ಲಿ ಭಯಾದಿಗಳಿರುವುದು ಯುಕ್ತ ವಾಗಬಹುದು. ಹೀಗೆ ಶಂಕಿಸಬಾರದು. ಯಾಕೆಂದರೆ. ಅಸುರರನ್ನು ಮೋಹಿಸ ವುದಕ್ಕಾ ಸಹ ಭಯಾದಿಗಳನ್ನು ತೋರಿಸುವುದರಿಂದ, ಆ ವೃತ್ತಾಂತಗಳನ್ನು ಹೊಂದಿಸಬಹುದು.

ನಿಮಿತ್ತವಿಲ್ಲದೇ ಅದರನ್ನು ಮೋಹಿಸುವುದೇಕೆ? ಹೀಗೆ ಶಂಕಿಸಬಹುದು. ಆದರೆ, ಅವರನ್ನು ಮೋಹಿಸುವುದೇಕೆ? ಹೀಗೆ ಶಂಕಿಸಬಹುದು. ಆದರೆ, ಅವರನ್ನು ಮೋಹಿಸುವುದು-ಸ್ವಾಮಿ ಶ್ರೀ ಹರಿಯ ಪ್ರೀತಿಗೆ ಕಾರಣವಾಗುವುದು" "ಹೀಗೆ ಉತ್ತರವನ್ನು ಹೇಳುತ್ತೇವೆ.

"ಎಲ್ಲಿಯಾದರೂ ನನಗೆ ಅಜ್ಞಾನವು ಕಂಡು ತಿಳಿದು ಬಂದುದಾದರೆ. ಅದು ದೈತ್ಯರನ್ನು ಮೋಹಿಸುವುದಕ್ಕೋಸ್ಕರವೆಂದೇ ತಿಳಿಯಬೇಕು." ಹಾಗೆ ದೈತ್ಯಮೋಹನದಿಂದ ಶ್ರೀಹರಿಯ ಪ್ರೀತಿಯಾಗುವುದೆಂಬ ನಿಶ್ಚಯದಿಂದಲೇ ಅವರನ್ನು ಮೋಹಿಸುವುದು." ಹೀಗೆ ವಚನಗಳಿರುತ್ತವೆ. "ಅಜ್ಞಾನಂ"— ಎಂಬ ಮಾತಿನಿಂದ ಶೋಕ ಮುಂತಾದವುಗಳನ್ನು ಸಂಗ್ರಹಿಸಬೇಕು.

ಇನ್ನು ಇದೇ ಏಕೆ ಮೋಹಕವೆನಿಸಬಾರದು? ಹೀಗಾದಲ್ಲಿ, ನಮ್ಮ ಮನೋರಥವು ಫಲಿತವಾಗುತ್ತದೆ.—ಎಂದು ಶಂಕಿಸಬಾರದು. ಯಾಕೆಂದರೆ ಪರಮಸಾತ್ವಿಕರಾದುದರಿಂದ, ಅವರ ಅಜ್ಞಾನಪ್ರದರ್ಶವು ದೈತ್ಯಮೋಹಕವೆಂದು ಹೇಳುವುದು ಸರಿ. ಹೀಗಿದ್ದರೂ, ಇನ್ನೂ ಒಂದು ಸಮಾಧಾನವನ್ನು ಭಾಗ ವತ ದಶಮಸ್ಕಂಧದ ತಾತ್ಪರ್ಯದಲ್ಲಿ ಹೇಳಿರುತ್ತಾರೆ. "ಪರಮಾತ್ಮನ ಇಚ್ಛೆ ಯಿಂದ, ಒಮ್ಮೊಮ್ಮೆ ಬ್ರಹ್ಮದೇವರ ಮನಸ್ಸೂ ಭ್ರಮಿಸಿದಂತೆ ತೋರುತ್ತದೆ.

ಬ್ರಹ್ಮದೇವರು ಸರ್ವಜ್ಞರು. ಆದರೂ, ಪರಮಾತ್ಮನ ಇಚ್ಛೆಯನ್ನು ತಿಳಿದು, ಅದರಂತೆ ಬ್ರಹ್ಮದೇವರು ಪರಮಾತ್ಮನನ್ನು ಚಿಂತಿಸುತ್ತಾರೆ. ಬ್ರಹ್ಮದೇವರು ಪರಮಾತ್ಮನ ಭಾವವನ್ನು ಸದಾ ತಿಳಿದಿರುತ್ತಾರೆ. ಆದುದರಿಂದ, ಪರಮಾತ್ಮನ ಚಿತ್ತದಂತೆ ಅನುವರ್ತಿಸುತ್ತಾರೆ. ಮಿಕ್ಕವರು ಅಜ್ಞಾನಸಂಬಂಧ ಉಳ್ಳವರು, ಬ್ರಹ್ಮದೇವರ ಕೆಳಗಿನವರಾದ ರುದ್ರಾದಿ ದೇವತೆಗಳು ಕ್ರಮದಿಂದ ಮೋಹವನ್ನು ಹೊಂದುತ್ತಾರೆ. "ಹೀಗೆ. **ಭಾವವಿವೇಕ ಗ್ರಂಥದಲ್ಲಿ** ಹೇಳಲಾಗಿದೆ." ಎಂದು ಸನಕಾದಿಗಳ ಪ್ರಶ್ನೆಗೆ ಸಂಶಯವನ್ನು ತಿಳಿಸುವ ಸಂದರ್ಭದಲ್ಲಿ ಹೇಳಿರುತ್ತಾರೆ. ಬ್ರಹ್ಮದೇವರ ಜ್ಞಾನವು ಮಧ್ಯಾಹ್ನ ಸೂರ್ಯನಂತೆ ಇರುವುದು. ಸ್ವಲ್ಪ ಅಜ್ಞಾನವೂ ಯಾವ ರೀತಿಯಲ್ಲಿಯೂ ಮೋಹವಿಲ್ಲ."—ಎಂದೂ ಅದರಲ್ಲಿ ನಿರೂಪಿತವಾಗಿದೆ.

ಆದರಂತೆ, ಅಜ್ಞರಂತೆ, ಪ್ರಶ್ನಿಸುವುದು–ಈ ಮುಂತಾದುವುಗಳೂ ಸಹ ಅಧಮಜನರ (ತಾಮಸರ) ಮೋಹನಕ್ಕಾಗಿಯೇ !-ಎಂದು ಹೇಳಿರುವುದರಿಂದ, ಹಿಂದಿನ ಗತಿಯನ್ನೇ ತಿಳಿಯಬೇಕು. ಅದರಂತೆ, ಶ್ರವಣವು ಹರಿಯ ಪ್ರೀತಿಗಾಗಿ ಸಜ್ಜನರ ನಿಶ್ಚಯಕ್ಕಾಗಿ"—ಹೀಗೆ ಮೂರು ಪ್ರಯೋಜನಗಳನ್ನು ತಿಳಿಯಬೇಕು.

ಇನ್ನು, "ಮೂಲರೂಪದಲ್ಲಿ ಅಜ್ಞಾನಗಳಿಲ್ಲದಿರಲಿ. ಅವತಾರಗಳಲ್ಲಿ ಮಾತ್ರ ಅವರ ಅಪರೋಕ್ಷ ಜ್ಞಾನವು ತಿರೋಹಿತವಾಗುತ್ತದೆಂದು ವಚನಗಳು ಹೇಳುತ್ತವೆ-"ಬ್ರಹ್ಮದೇವರಿಗೆ ಅಂಶರೂಪಗಳಲ್ಲಿ, ಭಾರತೀದೇವಿಗೂ, ಜ್ಞಾನ ವಿರುವುದಿಲ್ಲ, ಅವತಾರಗಳಲ್ಲಿಯೂ ಸಹ ಭಾರತೀದೇವಿಗೆ ಕೆಲ ಸಂದರ್ಭ ಳಲ್ಲಿ ಜ್ಞಾನವು ತಿರೋಹಿತವಾಗುವುದು." ಹೀಗೆ ವಚನಗಳಿದ್ದುದರಿಂದ ಗಾಯತ್ರಿಯಂತೆ ಭಾರತೀದೇವಿಗೆ ಜ್ಞಾನಾದಿಗಳಿರುವವೆಂಬ ಮಾತನ್ನೂ ಸಹ ಮೂಲರೂಪಪರವೆಂದು ತಿಳಿಯಬೇಕೆಂಬುದು" ಸಹ ಕೂಡದು. ಹೀಗೆ, ಸಂಶಯವನ್ನು ತರಬಾರದು. ಹೀಗೆ, ಅಜ್ಞಾನವನ್ನು ಪ್ರದರ್ಶಿಸುವುದು, ಈಶ್ವರನ ಇಚ್ಛೆಯನ್ನು ತಿಳಿದು, ಅದರಂತೆ ನಟಿಸುವುದರಿಂದ, ಹೀಗೆಯೇ ಸಮಾಧಾನವನ್ನು ತಿಳಿಯಬೇಕು. ಯಾಕೆಂದರೆ, ಅವರಿಗೆ ಯಾವಾಗಲೂ, ಸ್ವಲ್ಪವೂ ಸಂಶಯಜ್ಞಾನಗಳಿರುವುದಿಲ್ಲ. ಭಾರತಿಯಲ್ಲಿ ಸ್ವಲ್ಪ ಅಜ್ಞಾನವನ್ನೂ,

ಸಹ ಚಿಂತಿಸತಕ್ಕದ್ದಲ್ಲ — ಭಾವಿಸತಕ್ಕದ್ದಲ್ಲ. ಭಾರತೀದೇವಿಯರಲ್ಲಿಯೇ ಅದರ ಶಂಕೆಯನ್ನು ಮಾಡಬಾರದೆಂದಿರುವಾಗ, ಸರಸ್ವತಿಯಲ್ಲಿ ಹೇಳುವುದೇನು ?" ಹೀಗಿರುವ ನಿರವಕಾಶಪ್ರಮಾಣಗಳಿಂದ ಬ್ರಹ್ಮ, ವಾಯು, ಸರಸ್ವತೀ, ಭಾರತೀ—ಇವರಿಗೆ ಅಜ್ಞಾನ—ದುಃಖಾದುವುಗಳು ಇರುವುದೇ ಇಲ್ಲ. ಪ್ರಮಾಣಸಂದರ್ಭಗಳಲ್ಲಿ ಹಾಗೆ ಸಂಶಯಾದಿಗಳ ಉಲ್ಲೇಖವು ಬಂದುದಾದರೆ, ಅವುಗಳನ್ನೆಲ್ಲಾ ಅವರು ದೈತ್ಯರ ಮೋಹನಕ್ಕಾಗಿ ತೋರಿಸಿದುದು"- ಎಂದು ಸಮಾಧಾನದಿಂದ ಕಾಣಬೇಕು. ||೩೫||

**೫. ಶ್ರೀಗುರುಹೃದಯ ಪ್ರಕಾಶಿಕೆ :–**

ಜ್ಞಾನರಹಿತವಾದ ಭಯತ್ವವನ್ನು ಬ್ರಹ್ಮದೇವರಿಗೆ ಹೇಳುವ ಪುರಾಣ ವಾಕ್ಯಗಳು ಮೋಹಕವು. ಎಂದರೆ. ಅವರಿಗೆ ಯೋಗ್ಯವಾದ ವಿಪರೀತ,ಜ್ಞಾನ ಕೊಡುವುದಕ್ಕೆ ಹೇಳುವವೆಂದು ಅರ್ಥ. ಇಚ್ಛಾಮಾತ್ರದಿಂದ ಚತುರ್ದಿಕ್ಕಿನಲ್ಲೂ ಮುಖನಿರ್ಮಾಣ ಮಾಡಿಕೊಂಡ ಮಹಿಮನಿಗೆ ಮೋಹವೆಂಬ ವಿಪರೀತ ಜ್ಞಾನವು, ಜ್ಞಾನಪ್ರತಿಬಂಧಕವಾದ ಅಜ್ಞಾನ, ಭಯ. ಶೋಕಾದಿಗಳು ಕೂಡಲಾರವು. ದೃಗ್ದೋಷದಿಂದಲೀ-ಎಂದರೆ, ಸೂರ್ಯನ ಪ್ರಕಾಶ ನೋಡುವುದಕ್ಕೇ ಶಕ್ತಿ ಸಾಲದೆ, ಕಣ್ಣು ಗಿರಗರನೆ ತಿರುವ ದೋಷದಿಂದಲೇ, ಸೂರ್ಯಮಂಡಲವೇ ಗುಂಡಗೆ ತಿರುಗಿದಂತೆ ಕಾಣುವ ಹಾಗೆ, ಬ್ರಹ್ಮದೇವರು ದೇವರ ಪ್ರೀತಿ ನಿಮಿತ್ತ ಅಯೋಗ್ಯರಿಗೆ ಅಜ್ಞಾದಿಗಳನ್ನು ತೋರಿಸುವವರೇ ಹೊರ್ತು, ಅವರಿಗೆ ಅಜ್ಞಾನಾದಿಗಳು ಇಲ್ಲ. ||೩೫||

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಋಜುಗಣಶ್ರೇಷ್ಠರಾದ ಚತುರ್ಮುಖದೇವರಿಗೆ ಯಾವ ಕಾಲಕ್ಕೂ ಅಜ್ಞಾನ, ಭಯಾದಿ ದೋಷಗಳಿಲ್ಲ.

ಆದರೆ, ಪುರಾಣಗಳಲ್ಲಿ ಬ್ರಹ್ಮದೇವರಿಗೆ ಅಜ್ಞಾನ ಮತ್ತು ಭಯ ಪ್ರಾಪ್ತಿಯಾಗಿರುವ ವಿಚಾರ ಹೇಳಲ್ಪಟ್ಟಿದೆ.

ಪದ್ಮನಾಭದೇವರ ನಾಭೀಕಮಲಸಂಜಾತರಾದ ಬ್ರಹ್ಮದೇವರಿಗೆ ರಮಾಭಿಮನ್ಯವಾದ ಅವ್ಯಾಕೃತಾಕಾಶವನ್ನು ನೋಡಿ, ಏನು ಮಾಡಬೇಕೆಂದು ತೋಚದೆ, ಅಜ್ಞಾನ ಪ್ರದರ್ಶನ ಮಾಡಿದ್ದಾರೆ. ನಂತರ, ನಾಭೀಕಮಲದ ನಾಳ ದ್ವಾರವನ್ನು ಪ್ರವೇಶಿಸಿ, ಅಲ್ಲಿ ಶ್ರೀಪರಮಾತ್ಮನ ಉದರಸ್ಥವಾದ ಅನಂತ ಕೋಟಿ ಬ್ರಹ್ಮಾಂಡಗಳನ್ನು ನೋಡಿ, ಆಶ್ಚರ್ಯವೂ, ಭಯವೂ ಉಂಟಾಯಿತು.

೨. ಲಂಕಾಪಟ್ಟಣವನ್ನು ಪ್ರವೇಶಿಸಿದ ಶ್ರೀಹನುಮಂತನಿಗೆ ಸೀತೆಯನ್ನು ಕಾಣದೇ, ಎಲ್ಲಿರುವಳೆಂದು ವಿಸ್ಮಯದಿಂದ ಆಲೋಚಿಸಿದ ಪ್ರಸಂಗ ವಿಶೇಷ. ಆವರಿಗೆ ಸೀತಾಕೃತಿರೂಪದಲ್ಲಿದ್ದ ಲಕ್ಷ್ಮೀದೇವಿಯ ಬಗ್ಗೆ ಸಂಶಯ, ವಿಪರೀತ ಜ್ಞಾನವಿಲ್ಲ. ಸಂದೇಹಪಟ್ಟಂತೆ ಪ್ರದರ್ಶಿಸಿದರು.

3. ರಮಾದೇವಿಯರ ಅಭಿಮನ್ಯವಾದ ಅವ್ಯಾಕೃತವಾದ-ಕಾಲಪ್ರವಾಹ ಇದು ತಿಳಿಯದೇ ಇರೋಣ- ಎಂಬ ಸಂದೇಹ ಪ್ರದರ್ಶನ ಒಂದು ಪ್ರಸಂಗ ವಿಶೇಷ.

೪. ಪ್ರಕೃತಿಯ ವಿಷಯ ರಮಾದೇವಿ ತಿಳಿದಷ್ಟು ತಾವು ತಿಳಿಯದೇ ಇರುವುದು.

೫. ಲಕ್ಷ್ಮೀದೇವಿಯ ಜ್ಞಾನಾನಂದಮಹಾತ್ಮ್ಯೆಯನ್ನು ಆದ್ಯಂತ ತಿಳಿಯದೇ ಆಲೋಚಿಸಿರುವ ಪ್ರಸಂಗ.

೬. ಪರಮಾತ್ಮನ ಗುಣಸಮೂಹಗಳನ್ನು ಸಾಕಲ್ಯೇನ ತಿಳಿಯದಿರೋಣ.

ಈ ರೀತಿಯಲ್ಲಿ, ಕೆಲವು ಪ್ರಸಂಗವಿಶೇಷಗಳಲ್ಲಿ ಬ್ರಹ್ಮದೇವರು ಅಜ್ಞಾನ-ಸಂದೇಹ-ವಿಪರೀತ ಜ್ಞಾನ, ಭಯ-ಇತ್ಯಾದಿಗಳನ್ನು ಪ್ರದರ್ಶಿಸಿರುತ್ತಾರೆ.

೨. ಅದು ಪುರಾಣದಲ್ಲಿ ಹೇಳಿರುವ ಈ ವಾಕ್ಯಗಳು ಏಕದೇಶವಾಕ್ಯಗಳು ದೈತ್ಯರ ಮೋಹನಾರ್ಥವಾಗಿ ತೋರಿಸಿರುವ ವಿಶೇಷಪ್ರಸಂಗಗಳೇ ಹೊರತು,

ಋಜುಶ್ರೇಷ್ಠರಾದ ಬ್ರಹ್ಮದೇವರಿಗೆ ಅಜ್ಞಾನ–ಸಂದೇಹ–ಭಯ–ಮೋಹ ದುಃಖ-ಇತ್ಯಾದಿ ದೋಷಗಳಾವುವೂ ಎಂದಿಂದಿಗೂ ಇಲ್ಲ.

೩. ನಮ್ಮ ಕಣ್ಣಿನಲ್ಲಿರುವ ದೋಷದಿಂದ ಸೂರ್ಯಮಂಡಲ ಚಲಿಸುವಂತೆ ಕಾಣಸುವುದು. (ತಲೆಸುತ್ತುತ್ತಿರುವಾಗ, ಸುತ್ತಲಿನ ವಸ್ತುಗಳೆಲ್ಲಾ ತಿರುಗಿದಂತೆ ಕಾಣುವಂತೆ) ಇದಕ್ಕೆ ನೇತ್ರಗತ ದೋಷವೇಕಾರಣ. ಸೂರ್ಯನ ಚಲನೆಯಲ್ಲ.

೪. ಅದರಂತೆ, ದೈತ್ಯರಿಗೆ ಅವರ ಸ್ವರೂಪಕ್ಕನುಗುಣವಾದ ಮೋಹವನ್ನುಂಟುಮಾಡಿ, ಅವರಿಗೆ ಬ್ರಹ್ಮದೇವರ ವಿಷಯದಲ್ಲಿ ವಿಪರೀತ ಜ್ಞಾನವನ್ನುಂಟುಮಾಡುವುದು. ಶ್ರೀಹರಿಗೆ ಪ್ರೀತಿಯ ವಿಷಯವಾಗಿದೆ. ಇದರಂತೆ, ಕೇವಲ ವಿಷ್ಣುಪ್ರೀತ್ಯರ್ಥವಾಗಿ ಈ ರೀತಿ ಪ್ರದರ್ಶಿಸುವರು. ॥೩೪॥

## ಪದ್ಯ-೩೬

**ಮೂಲ :**

**ಕಮಲಸಂಭವ ಸರ್ವರೊಳಗು।**
**ಶ್ರಮನೆನಿಸುವನು ಎಲ್ಲ ಕಾಲದಿ।**
**ವಿಮಲ ಭಕುತಿ ಜ್ಞಾನ ವೈರಾಗ್ಯಾದಿ ಗುಣದಿಂದ॥**
**ಸಮುಭ್ಯಧಿಕವಿವರ್ಜಿತನ ಗುಣ।**
**ರಮೆಯು ಮುಖದಿಂದರಿತು ನಿತ್ಯದಿ।**
**ದ್ಯುಮಣಿಕೋಟಿಗಳಂತೆ ಕಾಂಬನು ಬಿಂಬರೂಪವನು ॥೩೬॥**

**ಅವತರಣಿಕೆ :–**

ಬ್ರಹ್ಮದೇವರ ವಿಚಾರವನ್ನು ಹೇಳುತ್ತಾರೆ. ॥೩೬॥

**ಪ್ರತಿಪದಾರ್ಥ :-**

**ಕಮಲಸಂಭವ**—ಬ್ರಹ್ಮದೇವರು, **ಸರ್ವರೊಳಗೆ**—ಸಮಸ್ತತ್ರಿವಿಧ ಜೀವರಾಶಿಗಳಲ್ಲಿ, **ಉತ್ತಮನೆನಿಸುವನು**—ಅತ್ಯಂತ ಶ್ರೇಷ್ಠನೆಂದೆನಿಸುತ್ತಾನೆ. (ಜೀವೋತ್ತಮನು) **ವಿಮಲ**—ದೋಷರಹಿತವಾದ, **ಭಕುತಿ, ಜ್ಞಾನ ವೈರಾಗ್ಯಾದಿ ಗುಣದಿಂದ**—ಭಕ್ತಿ ಜ್ಞಾನ- ವೈರಾಗ್ಯವೇ ಮೊದಲಾದ ಸಮಸ್ತಗುಣಸಮೂಹಗಳಿಂದ, **ಎಲ್ಲ ಕಾಲದಿ**—ಸದಾ ಸರ್ವಕಾಲಗಳಲ್ಲೂ ಉತ್ತಮನು. **ಸಮಭ್ಯಧಿಕವಿವರ್ಜಿತನ**—ತನಗೆ ಸಮರೂ, ತನಗಿಂತ ಶ್ರೇಷ್ಠರೂ ಯಾವ ಕಾಲಕ್ಕೂ ಇಲ್ಲದ ಶ್ರೀಪರಮಾತ್ಮನ, **ಗುಣ**—ಗುಣ ವೃಂದಗಳನ್ನು, **ರಮೆಯ ಮುಖದಿಂದ ಅರಿತು**—ಶ್ರೀಲಕ್ಷ್ಮೀದೇವಿಯರ ದ್ವಾರಾ, ಉಪದಿಷ್ಟರಾಗಿ. ತದನುಗುಣವಾಗಿ, ಉಪಾಸನೆಮಾಡುತ್ತಾ, **ನಿತ್ಯದಿ**—ಯಾವಾಗಲೂ (ಎಡೆಬಿಡದೆ), **ಬಿಂಬರೂಪವನು**—ಸ್ವರೂಪಾಂಶಾಂತ ರ್ಗತ ಬಿಂಬರೂಪೀ ಶ್ರೀಹರಿಯನ್ನು, **ದ್ಯುಮಣಿಕೋಟಿಗಳಂತೆ**—ಕೋಟಿ ಸೂರ್ಯಪ್ರಕಾಶದೋಪಾದಿಯಲ್ಲಿ, **ಕಾಂಬನು** — ಅಪರೋಕ್ಷದಿಂದ ಕಾಣುತ್ತಾರೆ. ॥೩೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಬ್ರಹ್ಮದೇವರ ವಿಚಾರ ಹೇಳತಾರೆ.

ಬ್ರಹ್ಮದೇವರು ಸಮಸ್ತತ್ರಿವಿಧಜೀವರೊಳಗೆ, ಸ್ವರೂಪತಃ ನಿರ್ದೋಷ ಗಳಾದ ಭಕ್ತಿ ಜ್ಞಾನ, ವೈರಾಗ್ಯವೇ- ಮೊದಲಾದ ಗುಣಗಳಿಂದ ಸದಾಕಾಲದಲ್ಲಿ ಉತ್ತಮ- ಎಂತ ಎನಿಸೋವರಾಗತಾರೆ. ಇಂಥಾ ಜ್ಞಾನ ಭಕ್ತ್ಯಾದಿಗಳು. ರುದ್ರಾದಿದೇವತೆಗಳಿಗೆ ಇಲ್ಲ. ಬ್ರಹ್ಮದೇವರ ಸಂಗಡ ಋಜುಗಳೂ ಗ್ರಾಹ್ಯ. ಈ ಬ್ರಹ್ಮದೇವರು ಸಮಾಧಿಕಶೂನ್ಯನಾದ ಪರಮಾತ್ಮನ ಗುಣಗಳೇನು—

ಇವುಗಳನ್ನು ರಮಾದೇವೀರ ಮುಖದಿಂದ ಉಪದಿಷ್ಟಿತರಾಗಿ, ಗುಣೋಪಾಸನೆ ಮಾಡುತ್ತಾ, ಸತತ ತಮ್ಮ ಸ್ವರೂಪಹೃದಯಾಂತರ್ಗತಬಿಂಬರೂಪವನ್ನು ಕೋಟಿಸೂರ್ಯಪ್ರಕಾಶದಂತೆ ಅಪರೋಕ್ಷದಿಂದ ಕಾಣುತ್ತಾರೆ. ॥೩೬॥

೨. ಭಾವಪ್ರಕಾಶಿಕೆ :–

ಬ್ರಹ್ಮದೇವರು ಸರ್ವಕಾಲದಲ್ಲೂ, ನಿರ್ಮಲವಾದ ಭಕ್ತಿ, ಜ್ಞಾನ, ವೈರಾಗ್ಯಾದಿಗುಣಗಳಲ್ಲಿ ಮಿಕ್ಕ ಗರುಡ, ಶೇಷ, ರುದ್ರಾದಿ ಸಕಲದೇವತೆಗಳಿಗಿಂತಲೂ ಉತ್ತಮರೆನಿಸುವರು. ಸಮರೂ ಅಧಿಕರೂ ಇಲ್ಲದ ಶ್ರೀಹರಿಯ ಗುಣಾತಿಶಯಗಳನ್ನು ರಮಾದೇವಿಯರ ಮುಖದಿಂದ ಶ್ರವಣಮಾಡುತ್ತಾ, ಬಿಂಬರೂಪಿಯಾದ ಶ್ರೀಪರಮಾತ್ಮನನ್ನು ಕೋಟಿಸೂರ್ಯಪ್ರಕಾಶವುಳ್ಳವನನ್ನಾಗಿ ಕಾಣುವರು. ॥೩೬॥

೩. ಭಾವದರ್ಪಣ :–

ಅತ್ಯಂತ ಜ್ಞಾನ, ಭಕ್ತ್ಯಾದಿ ಸುಗುಣಯುಕ್ತರಾಗಿ, ಶ್ರೀದೇವಿಮುಖಾರವಿಂದದಿಂದ ಶ್ರೀಶನ ಗುಣಗಳು ತಿಳಿದು, ಉಪಾಸನೆ ಮಾಡುತ್ತಾ, ಕೋಟಿಭಾನುವಿನಂತೆ ಕರಿವರದನ ರೂಪಹೃದಯದಲ್ಲಿ ಕಾಂಬುವನೆಂದು ಹೇಳುತ್ತಾರೆ। ಕಮಲಸಂಭವೇ ॥ ಸಮಭ್ಯಧಿಕ– ಎಂದರೆ, ಸಮವಸ್ತು ಮತ್ತು ಅಧಿಕವಾದವಸ್ತು– ಪರಮಾತ್ಮಗೆ ಇಲ್ಲ ಎಂಬರ್ಥ। ರಮೆಯು–ರಮಾದೇವಿಯು. ॥೩೬॥

೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :–

"ಕಮಲ" ಇತಿ॥ "ಸಮ" ಇತಿ॥ ವೈದಿಕಾದ್ವಯ ಪದಾರ್ಥಕಥನವರ್॥ ಕೋಟಿಪದಂ ಅನಂತಪರಮ್॥ ಅನ್ಯಥಾ ಕರ್ಮದೇವ ಸಾಮ್ಯಾಪಾತಃ॥ ಉಕ್ತಾಂ ಚ- "ಬ್ರಹ್ಮಾದೀನಾಂ ದೃಶ್ಯತೇ ಶ್ರೀನಿವಾಸಃ ಹ್ಯನಂತಸೂರ್ಯಾಧಿಕಕಾಂತಿವತ್" ॥ಇತಿ॥ ॥೩೬॥

## ಕನ್ನಡಾರ್ಥ

"ಸಮಭ್ಯಧಿಕ ವಿವರ್ಜಿತ"- ಈ ಪದವು ವೇದದಲ್ಲಿರುವ "ಅಧ್ವಯವರ್ಮ್-" ಈ ಪದದ ಅರ್ಥವನ್ನು ವಿವರಿಸುವುದು. "ಕೋಟಿ"- ಈ ಪದಕ್ಕೆ "ಅನಂತ" ವೆಂದು ಅರ್ಥ. ಇಲ್ಲದಿದ್ದರೆ, ಕರ್ಮದೇವತೆಗಳಿಂದ ಸಾಮ್ಯವು ಬರುತ್ತದೆ. ಬ್ರಹ್ಮಾದಿಗಳು ಪರಮಾತ್ಮನನ್ನು ಅನಂತಸೂರ್ಯರಿಗಿಂತ ಅಧಿಕಕಾಂತಿವಂತ ನೆಂದು ನೋಡುತ್ತಾರೆ." ಹೀಗೆ ಪ್ರಮಾಣಗಳಿರುವುವು. ॥೨೬॥

### ೫. ಶ್ರೀಗುರುಹೃದಯಪ್ರಕಾಶಿಕೆ :-

ಕಮಲಸಂಭವನೆಂಬ ಬ್ರಹ್ಮದೇವರು, ಸರ್ವಯುಗಗಳಲ್ಲಿಯೂ ಸಾಧನ ಪೂರ್ತಿ ಆಗಿರುವ ನಿಮಿತ್ತ ಉತ್ತಮನು. ನಿರ್ಮಲಜ್ಞಾನ, ಭಕ್ತಿ, ವೈರಾಗ್ಯಾದಿ ಗುಣಗಳಿಂದ, ಸಮರೂ ಅಧಿಕರೂ ಸಹ ಇಲ್ಲದೆ, ಸರ್ವೋತ್ತಮನಾದ ದೇವರ ಜ್ಞಾನಾದಿ ಗುಣಗಳನ್ನು ರವಮಾದೇವಿ ಮುಖದಿಂದ ತಿಳಿದು, ಸದಾ ದ್ಯುಮಣಿ ಎಂಬ ಸೂರ್ಯಕೋಟಿಪ್ರಕಾಶದಂತೆ ಬಿಂಬವೆಂಬ ಸ್ವಾಶ್ರಯರೂಪವನ್ನು ಕಾಣುವರು. ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

### ೧. ಕಮಲಸಂಭವ-

ಶ್ರೀಪದ್ಮನಾಭದೇವರ ನಾಭೀಕಮಲವು ಸುವರ್ಣಾತ್ಮಕವಾದದ್ದು. ಲಕ್ಷ್ಮ್ಯಾತ್ಮಕವಾದ ಆ ಸುವರ್ಣಮಯ ನಾಭೀಕಮಲದಲ್ಲಿ ಸಂಜಾತರಾದ ಚತುರ್ಮುಖಬ್ರಹ್ಮದೇವರು.

### ೨. ಸರ್ವರೊಳಗೆ ಉತ್ತಮನು :-

ಜೀವಕೋಟಿರಾಶಿಯಲ್ಲಿ ಬ್ರಹ್ಮದೇವರು ಉತ್ತಮರು. ಜೀವೋತ್ತಮರು

ಶ್ರೀಲಕ್ಷ್ಮೀನಾರಾಯಣರ ತರುವಾಯ, ತಾರತಮ್ಯಕ್ರಮದಲ್ಲಿ ಬ್ರಹ್ಮದೇವರೇ ಉಳಿದ ಜೀವರುಗಳಿಗಿಂತ ಶ್ರೇಷ್ಠರು.

೩. ಎಲ್ಲಕಾಲದಿ :–

ಸದಾ ಸರ್ವಕಾಲಗಳಲ್ಲಿ ಪರಿಶುದ್ಧವಾದ ಸಮೀಚೀನವಾದ ಭಕ್ತಿ–ಅತಿ ರೋಹಿತವಿಮಲವಿಜ್ಞಾನ–ಪರಮವೈರಾಗ್ಯಗುಣ- ಇತ್ಯಾದಿ ಅನೇಕ ಗುಣಗಳ ಸಮೂಹದಿಂದ ಗರುಡ ಶೇಷ ರುದ್ರಾದಿಗಳಿಗಿಂತ ಉತ್ತಮರು. ರುದ್ರ ಇಂದ್ರಾದಿಗಳಿಗೆ ಈ ಭಾಗ್ಯವಿಲ್ಲ.

೪. ಶ್ರೀಹರಿಗೆ ಯಾವ ಕಾಲದಲ್ಲೂ ಸಮರಾದ ಜೀವರಾರೂ ಇಲ್ಲ– ವೆಂದಮೇಲೆ ಅಧಿಕರಾರಿರುವರು? ಇದರಿಂದ, ಶ್ರೀಹರಿಯು ಸಮಾಭ್ಯಧಿಕ ಶೂನ್ಯನು. **(ಸಮಭ್ಯಧಿಕವಿವರ್ಜಿತನು)** ಅಂತಹ ಸಮಾಭ್ಯಧಿಕ ಶೂನ್ಯನಾದ ಸರ್ವಾಂತರ್ಯಾಮಿಯಾದ ಸರ್ವೇಶ್ವರನಾದ ಶ್ರೀಹರಿಯ ಗುಣಾ ತಿಶಯಗಳನ್ನು ತಮಗಿಂತ ಉತ್ತಮರಾದ ಲಕ್ಷ್ಮೀದೇವಿಯರಿಂದ ಉಪದೇಶ ದ್ವಾರಾ ತಿಳಿಯುವರು. ಶ್ರೀರಮಾದೇವಿಯುವರೇ ಬ್ರಹ್ಮ-ವಾಯುಗಳಿಗೆ ಗುರುಗಳು. ಅವರ ದ್ವಾರಾ, ತತ್ತ್ವೋಪದೇಶ.

೫. ರಮಾದ್ವಾರಾ ಉಪದಿಷ್ಟರಾದ ಶ್ರೀಹರಿಯ ಗುಣಾತಿಶಯ ಗಳನ್ನು ಎಡಬಿಡದೆ, ಸದಾ **(ನಿತ್ಯದಿ)** ಉಪಾಸನೆ ಮಾಡುತ್ತಾರೆ– ಬ್ರಹ್ಮ ದೇವರು. ಕೋಟಿಸೂರ್ಯಪ್ರಕಾಶದಂತೆ ಸ್ವರೂಪಾಂತರ್ಗತನಾದ ಬಿಂಬ ರೂಪೀ ಶ್ರೀ ಹರಿಯನ್ನು ಸದಾ ನೋಡಿ, **(ಅಪರೋಕ್ಷದಿಂದ)** ನಿರಂತರ ಆನಂದ ಪಡುತ್ತಿರುವರು.

(ದ್ಯುಮಣಿ–ಹಗಲಿನ ಮಣಿಯಂತಿರುವ ದಿವಾಕರನು-ಸೂರ್ಯ) ॥೩೬॥

## ಪದ್ಯ-೩೭

**ಮೂಲ :-**

**ಜ್ಞಾನಭಕ್ತ್ಯಾದ್ಯಖಿಳಗುಣ ಚತು।**
**ರಾನನನೊಳಿಪ್ಪಂತೆ ಮುಖ್ಯ।**
**ಪ್ರಾಣನಲಿ ಚಿಂತಿಪುದು ಯತ್ಕಿಂಚಿತು ಕೊರತೆಯಾಗಿ॥**
**ನ್ಯೂನ ಋಜುಗಣ ಜೀವರಲಿ ಕ್ರ।**
**ಮೇಣ ವೃದ್ಧಿ ಜ್ಞಾನ ಭಕುತಿ ಸ।**
**ಮಾನ ಭಾರತಿ ವಾಣಿಗಳಲಿ ಪದಯುಕ್ತ್ಯಧಿಕ ॥೩೭॥**

**ಅವತರಣಿಕೆ :-**

ಬ್ರಹ್ಮದೇವರಿಗೂ ಮತ್ತು ಉಳಿದ ಋಜುಗಣಸ್ಥರಿಗೂ ಪದವಿ ಪ್ರಯುಕ್ತ, ಜ್ಞಾನಾದಿ ತಾರತಮ್ಯ ವಿಚಾರ ತಿಳಿಸುತ್ತಾರೆ. ॥೩೭॥

**ಪ್ರತಿಪದಾರ್ಥ :-**

**ಚತುರಾನನನೊಳು** — ಬ್ರಹ್ಮದೇವರೊಳಿರುವಂತಹ, **ಜ್ಞಾನ ಭಕ್ತ್ಯಾದ್ಯಖಿಳ ಗುಣ**— ಜ್ಞಾನ-ಭಕ್ತಿ-ವೈರಾಗ್ಯ. ಇತ್ಯಾದಿ ಯಾವತ್ತೂ ಗುಣಸಮೂಹಗಳು, **ಇಪ್ಪಂತೆ**—ಬ್ರಹ್ಮದೇವರಲ್ಲಿ ಇರುವಂತೆ, **ಮುಖ್ಯ ಪ್ರಾಣನಲಿ**— ಭಾವೀಬ್ರಹ್ಮರಾದ ಪ್ರಧಾನವಾಯುದೇವರಲ್ಲಿ ಇವೆ. **ಯತ್ಕಿಂಚಿತು ಕೊರತೆಯಾಗಿ**—ಸ್ಪಷ್ಟತ್ವದಲ್ಲಿ ಪದವಿಪ್ರಯುಕ್ತ ಸ್ವಲ್ಪ ಕಡಿಮೆಯಾಗಿದೆ. **ಚಿಂತಿಪುದು**—ಎಂದು ಚಿಂತಿಸುವುದು. **ಋಜುಗಣ ಜೀವರಲಿ**—ವಾಯುದೇವರವ್ಯತಿರಿಕ್ತ ಉಳಿದ ೯೮ ಮಂದಿ ಋಜುಗಳಲ್ಲಿ, **ಕ್ರಮೇಣ ಜ್ಞಾನ, ಭಕುತಿ ವೃದ್ಧಿ** —ಪದವಿಯಿಂದ ಪದವಿಗೆ ಕ್ರಮವಾಗಿ ಜ್ಞಾನ, ಭಕ್ತಿ, ವೈರಾಗ್ಯಾದಿ ಗುಣಗಳೂ ವೃದ್ಧಿಯಾಗುತ್ತಾ, ಸ್ಪಷ್ಟತೆ ಹೆಚ್ಚಾಗುತ್ತಾ ಹೋಗುವುವು. **ಸಮಾನ**—ಆದರೆ, ಈ ೧೦೦ಮಂದಿ ಋಜುಗಣಸ್ಥರೆಲ್ಲರೂ ಮೋಕ್ಷದಲ್ಲಿ ಸಮಾನಲನಂದವುಳ್ಳವರು. ಸ್ಥಿತಿಕಾಲದಲ್ಲಿ ಪದವಿ

ಪ್ರಯುಕ್ತ ಜ್ಞಾನಾನಂದಾದಿಗಳಲ್ಲಿ ತಾರತಮ್ಯ ಉಳ್ಳವರು. **ಭಾರತಿ ವಾಣಿಗಳಲಿ**—ಅದರಂತೆಯೇ, ಬ್ರಹ್ಮಪತ್ನಿ ಸರಸ್ವತೀ ಮತ್ತು ವಾಯುಪತ್ನಿ ಭಾರತೀದೇವಿಯರಲ್ಲಿ, **ಪದ ಪ್ರಯುಕ್ತ**–ಪದವಿ ವಿವೀಕ್ಷಾ, ಪದವಿಯಿಂದ ಮುಂದಿನ ಪದವಿಗೆ, ಎಲ್ಲಾ ಋಜುಪತ್ನಿಯರಿಗೂ ಕ್ರಮೇಣ ಜ್ಞಾನ, ಭಕ್ತಿ, ಆನಂದಾಭಿವ್ಯಕ್ತಿ– ಅಭಿವೃದ್ಧಿಯಾಗುತ್ತಾ ಹೋಗುವುವು. ॥೩೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಬ್ರಹ್ಮನ ಜ್ಞಾನಕ್ಕೂ, ವಾಯ್ವಾದಿಋಜುಗಳ ಜ್ಞಾನಕ್ಕೂ ತಾರತಮ್ಯ ಹೇಳತಾರೆ.

ಬ್ರಹ್ಮದೇವರೊಳಿರುವಂಥಾ ಜ್ಞಾನ, ಭಕ್ತಿ- ಇವೇ ಮೊದಲಾದ ಗುಣಗಳು ಬ್ರಹ್ಮದೇವರಲ್ಲಿ ಇದ್ದಂತೆ, ಅಷ್ಟು ಗುಣಗಳು ಭಾವೀಬ್ರಹ್ಮರಾದ ವಾಯುದೇವರಲ್ಲಿ ಅವೆ. ಆದರೆ, ಸ್ಪಷ್ಟತ್ವದಲ್ಲಿ ಸ್ವಲ್ಪ ಕಡಿಮೆಯಾಗಿ ಅವೆ. ಬ್ರಹ್ಮದೇವರಲ್ಲಿ ಎಷ್ಟು ಗುಣಗಳು ಅವೋ, ಅಷ್ಟೂ ಗುಣಗಳು ವಾಯುದೇವರಲ್ಲಿವೆ- ಎಂತ ತಿಳಿಯಬೇಕು. ವಾಯುದೇವರ ವ್ಯತಿರಿಕ್ತ ಅಪರೋಕ್ಷಿಗಳಾದ ತೊಂಭತ್ತೆಂಟು ಮಂದಿ, ಅನಪರೋಕ್ಷಿಗಳು ನೂರು ಮಂದಿ ಅಂತ, ನೂರತೊಂಭತ್ತೆಂಟು ಮಂದಿ ಋಜುಜೀವರಲ್ಲಿ ವಾಯುವರಿಗಿಂತಲೂ ಕ್ರಮಾತ್, ತಾರತಮ್ಯಾನುಸಾರ ಸ್ಪಷ್ಟತ್ವದಲ್ಲಿ ನ್ಯೂನವು. ಈ ಸ್ಪಷ್ಟತ್ವಕ್ಕೆ ದೃಷ್ಟಾಂತ—ಇನ್ನೂರು ಬತ್ತಿ ಹಚ್ಚಿದ ದೀಪಪ್ರಕಾಶ ಬ್ರಹ್ಮದೇವರಿಗೆ, ನೂರತ್ತೊಂಭತ್ತು ಬತ್ತಿಪ್ರಕಾಶ ವಾಯುದೇವರಿಗೆ, ಇದೇ ಪ್ರಕಾರ ಕಡಿಮೆ ಸ್ಪಷ್ಟತ್ವ ಸರ್ವರಿಗೆ. ಋಜುಗಳು ಸ್ವರೂಪತಃ ೨೦೦ ಮಂದಿ ಸಮಾನರು. ಮೋಕ್ಷದಲ್ಲಿ ಸಮಾನ ಆನಂದವುಳ್ಳವರು. ಸ್ಥಿತಿಕಾಲದಲ್ಲಿ, ಸಾಧನ ತಾರತಮ್ಯದಿಂದಲೂ, ಪದವಿ ಪ್ರಯುಕ್ತ ತಾರತಮ್ಯದಿಂದಲೂ, ಒಬ್ಬರಿಂದ ಮತ್ತೊಬ್ಬರು ಅಧಿಕರೆಂತಲೂ ಕರಸತಾರೆ. ಬ್ರಹ್ಮಪತ್ನಿ ಸರಸ್ವತೀ, ವಾಯುಪತ್ನಿ, ತದಸ್ಯ

ರಾದ ೧೯೮ ಮಂದಿ ಋಜುಪತ್ನೀರು– ಇವರ ಜ್ಞಾನ, ಭಕ್ತ್ಯಾದಿಗಳು, ಬ್ರಹ್ಮ ವಾಯು–ಇತ್ಯಾದಿ ೨೦೦ ಋಜುಗಳು. ಎಲ್ಲರೂ ಇವರುಗಳಲ್ಲಿ ಸ್ವಪ್ನತ್ಕ ಹ್ಯಾಂಗೋ, ತದ್ವತ್, ವಾಣೀ ಭಾರತೀ- ಇವರಗಳಿಗೂ ಹಾಂಗೇ, ಋಜುಗಳಿಗೇನು, ಋಜುಪತ್ನೀರಿಗೇನು-ಜ್ಞಾನ, ಭಕ್ತಿ ಬ್ರಹ್ಮಪದಪರಿಯಂತ ತಿರೋಧಾನ ವಿಲ್ಲದೆ, ಕ್ರಮವಾಗಿ ವೃದ್ಧಿಹೊಂದತಾ ಬರತವೆ. ರುದ್ರಾದಿಗಳಿಗೆ ಮಧ್ಯೇ ಮಧ್ಯೇ ತಿರೋಧಾನವಾಗತಾ ಇರತದೆ. ॥೩೩॥

## ೨. ಭಾವಪ್ರಕಾಶಿಕೆ :–

ಬ್ರಹ್ಮದೇವರಲ್ಲಿ ಜ್ಞಾನ, ಭಕ್ತಿ–ಮೊದಲಾದವುಗಳು ಎಷ್ಟು ಇರುವುವೋ ಅಷ್ಟು ವಾಯುದೇವರಲ್ಲೂ ಇರುವುವು. ಆದರೆ, ಬ್ರಹ್ಮದೇವರಿಗೆ ವಾಯು ದೇವರಿಗಿಂತಲೂ ಒಂದು ಕಲ್ಪ ಸಾಧನ ಹೆಚ್ಚಾಗಿರುವುದರಿಂದ ಪದಪ್ರಿಪ್ರಯುಕ್ತ, ಅಧಿಕ್ಯವು ಬ್ರಹ್ಮ ದೇವರಲ್ಲಿ ಕಿಂಚಿನ್ಮಾತ್ರವಿರುವುದು. ಇವು ಋಜುಗಣದವರಲ್ಲಿ ಮೊದಲಿಗೆ ಕಮ್ಮಿಯಾಗಿದ್ದು, ಕಲ್ಪ ಕಲ್ಪಗಳಲ್ಲಿ ಹೆಚ್ಚುತ್ತಲೇ ಬರುವುದು. ಸರಸ್ವತೀ, ಭಾರತಿಯರಲ್ಲೂ, ಬ್ರಹ್ಮ ವಾಯುಗಳಂತೆ, ಜ್ಞಾನ ಭಕ್ತ್ಯಾದಿಗಳು ಸಮವಾಗಿದ್ದರೂ, ಸರಸ್ವತೀದೇವಿಯರಲ್ಲಿ ಪದವಿಪ್ರಯುಕ್ತವಾದ ಅಧಿಕ್ಯವು ಕೊಂಚವಿರುವುದು. ಯಾವತ್ ಜ್ಞಾನಂ ಚಾಸ್ತಿ ಮೇವಾದೇವಂಸ ತಾವತ್ ಜ್ಞಾನ, ವಾಯುದೇವಸಚಾಸ್ತಿ" ॥– ಇತ್ಯಾದಿ ಗರುಡಪುರಾಣ ಬ್ರಹ್ಮಕಾಂಡ ವಚನವು ಇದಕ್ಕೆ ಆಧಾರವು. ॥೩೭॥

## ೩. ಭಾವದರ್ಪಣ :–

ಬ್ರಹ್ಮದೇವರೂ ವಾಯುದೇವರೂ ಜ್ಞಾನ ಭಕ್ತ್ಯಾದಿ ಗುಣದಲ್ಲಿ ಸಮರೆಂದು ಹೇಳುತ್ತಾರೆ। ಜ್ಞಾನಮಿತಿ। ತದುಕ್ತಂ ಗಾರುಡೇ। ಯಾವತ್‌ಜ್ಞಾನಂ ವಾಯುದೇವಸ್ಯ ಚಾಸ್ತಿ। ತಾವತ್‌ಜ್ಞಾನಂ ಜ್ಞಾನವತಾಂ ಋಜೂನಾಂ ಕ್ರಮೇಣ್ಯೈಷಾಂ ಜ್ಞಾನಿನಾಂ ವೈ ಋಜೂಜೂನಾಮಿತಿ" ॥೩೭॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :–

"ಜ್ಞಾನ" ಇತಿ॥ "ಕೊರತೆ"- ವಾಯುತ್ವೇಕಿಂಚಿದೂನತಾ"–ಇತ್ಯುಕ್ತೇಃ॥

"ಕ್ರಮೇಣ" ಇತಿ "ವರ್ಧಮಾನಮಾಮುಕ್ತೇಃ" ಇತಿ ಮೂಲಮನುಕೃತಮ್॥ ಅಧಿಕ ಭಾವಪ್ರಧಾನಃ। ತತ್ತ್ವಂಜ್ಞಾಂಯಮ್–ಇತಿ ಯೋಜ್ಯಮ್. ॥೩೭॥

## ಕನ್ನಡಾರ್ಥ

ವಾಯುಪದವಿಯಲ್ಲಿ ಬ್ರಹ್ಮಪದವಿಯಲ್ಲಿರುವುದಕ್ಕಿಂತ ಕಿಂಚಿತ್ ನ್ಯೂನತೆ ಇರುತ್ತೆ. "ಕ್ರಮೇಣ"– ಈ ಮಾತು– "ಮುಕ್ತಿಯವರೆಗೆ ಕ್ರಮದಿಂದ ಬೆಳೆಯುತ್ತಿರುವುದು. ಈ ಅಭಿಪ್ರಾಯದ ಮೂಲ– ಟೀಕಾಚಾರ್ಯರ ವಚನವನ್ನು ಅನುಕರಿಸುತ್ತದೆ. "ಅಧಿಕ"-ಈ ಪದವು ಭಾವಪ್ರಧಾನನಿರ್ದೇಶನವಾಗಿದೆ. ಅಂದರೆ, ಅಧಿಕ-ಅಧಿಕ್ಯತ್ವವೆಂದು ಅರ್ಥ. ಈ ಅರ್ಥದಿಂದ ಈ ಪದವನ್ನು ಯೋಚಿಸಬೇಕು. ॥೩೭॥

**೫. ಗುರುಹೃದಯ ಪ್ರಕಾಶಿಕೆ :–**

ಜ್ಞಾನಾಭಕ್ತ್ಯಾದ್ಯಖಿಳಗುಣಗಳು ಬ್ರಹ್ಮನಲ್ಲಿರುವಂತೆ, ಮುಖ್ಯಪ್ರಾಣದೇವರಲ್ಲಿಯೂ ಇರುವವು. ಆದರೆ, ಪದಪ್ರಯುಕ್ತ ಬ್ರಹ್ಮನಿಗಿಂತ ಕಿಂಚಿತ್ ಕಡಿಮೆ ಸಮನಾಗಿಯೇ ಚಿಂತಿಸುವುದು. ಋಜುಗಣಜೀವರಲ್ಲಿ ಕ್ರಮೇಣ ಸಾಧನಾಧಿಕ್ಯದಿಂದ ವೃದ್ಧಿಯಾಗುವುದರಿಂದ, ತತ್ಪೂರ್ವ, ಕ್ರಮೇಣ ನ್ಯೂನವೆಂದ ತಿಳಿಯಬೇಕು. ಭಾರತೀ–ಸರಸ್ವತೀಯರುಗಳಿಗೂ ಜ್ಞಾನ ಭಕ್ತ್ಯಾದಿಗಳು ಸಮ. ಆದರೆ, ಸರಸ್ವತೀ ದೇವೇರಲ್ಲಿ ಪದಪ್ರಯುಕ್ತ ಕಿಂಚಿದಧಿಕವು. ॥೩೭॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಚತುರಾನನೊಳಗೆ ಇಪ್ಪಂತೆ :–**

ಚತುರ್ಮುಖಬ್ರಹ್ಮದೇವರು ಶ್ರೀಹರಿಯ ನಾಭೀಕಮಲಸಂಜಾತರು. ಅವನ ಜ್ಯೇಷ್ಠಪುತ್ರರು. ೧೯೯ನೆಯ ಬ್ರಹ್ಮಕಲ್ಪದಲ್ಲಿ ಋಜುಪದಸ್ಥರಾದ

ವಾಯುದೇವರೇ ೧೦೦ನೆಯಕಲ್ಪದಲ್ಲಿ ಬ್ರಹ್ಮನಾಗಿ ಅವತರಿಸುವರು. ಇಂತಹ ಚತುರಾನನರಿಗೆ "**ಶತಾನಂದ**"ನೆಂದು ಹೆಸರು. ಅವರಿಗೆ ಜ್ಞಾನ, ಆನಂದ, ಭಕ್ತಿ–ವೈರಾಗ್ಯಾದಿ ಸಕಲಸದ್ಗುಣಗಳೂ, ಇತರ ಎಲ್ಲಾ ಜೀವರುಗಳಿಗಿಂತಲೂ ಅಧಿಕ ಪ್ರಮಾಣದಲ್ಲಿವೆ. ಇದರಿಂದ "**ಜೀವೋತ್ತಮ**"–ರೆನಿಸುವರು.

## ೨. ಮುಖ್ಯಪ್ರಾಣನರಿ :–

ಚತುರ್ಮುಖಬ್ರಹ್ಮದೇವರಂತೆಯೇ ಜ್ಞಾನ, ಭಕ್ತ್ಯಾದ್ಯಖಿಳಗುಣಗಳು ಪ್ರಧಾನವಾಯುದೇವರಲ್ಲೂ ಇವೆ. ಆದರೆ, ಪದವಿಪ್ರಯುಕ್ತ ಬ್ರಹ್ಮದೇವರಿಗಿಂತ ಒಂದು ಕಲ್ಪಸಾಧನ ನ್ಯೂನತೆ ಇದೆ. (**ಯುಕ್ತಿಂಚಿತು ಕೊರತೆಯಾಗಿ ಚಿಂತಿಪುದು.**) ಇದರಿಂದ, ಪೂರ್ವೋಕ್ತ ಗುಣಗಳ ಪ್ರಕಾಶಾಭಿವ್ಯಕ್ತಿ ಬ್ರಹ್ಮದೇವರಿಗಿಂತ ಕಿಂಚಿತ್ ನ್ಯೂನವು.

## ೩. ಋಜುಗಣಜೀವರಲಿ :–

ವಾಯುದೇವರಿಗಿಂತ ಪದವಿಯಲ್ಲಿ ನ್ಯೂನರಾಗಿರುವ ಉಳಿದ ೯೮ ಮಂದಿ ಋಜುಗಣಸ್ಥರಲ್ಲಿ, ವಾಯುದೇವರಿಗಿಂತ ಕೆಳಗೆ ಹೋಗುತ್ತಾ, ಜ್ಞಾನ ಭಕುತಿ, ವೈರಾಗ್ಯ, ಆನಂದಾದಿ ಗುಣಗಳು–ಪದವಿ ವಿವೀಕ್ಷಾ ನೂನವಾಗುತ್ತಾ ಹೋಗುವುವು. ಪದವಿ ಹೆಚ್ಚಿದಂತೆಲ್ಲಾ ಕ್ರಮೇಣ ಅವುಗಳ ಅಭಿವಕ್ತಿ ವೃದ್ಧಿಯಾಗುವುದು.

**ವಿಶೇಷವಿಚಾರ :–**

ಸೃಷ್ಟಿಗೆ ತರಲ್ಪಟ್ಟ ೨೦೦ ಮಂದಿ ಋಜುಗಳಲ್ಲಿ ಎರಡು ವರ್ಗಗಳು :–

೧) ಮೊದಲನೆಯ ೧೦೦ ಮಂದಿ (ಪೂರ್ವಾರ್ಧ) ಸಾಧನಾತ್ ಪೂರ್ವದರುವವರು.

೨) ೧೦೧ನೆಯ ಕಲ್ಪದಿಂದ ಕ್ರಮವಾಗಿ, ೨೦೦ನೆಯ ಬ್ರಹ್ಮಪದವಿ ಪರ್ಯಂತ. ಸಾಧನಮಾಡುತ್ತಿರುವರು.

೩) ಅವರಿಗೆ ಕ್ರಮಕ್ರಮವಾಗಿ, ಪದವಿಯಿಂದ ಪದವಿಗೆ, ಜ್ಞಾನ ಭಕ್ತ್ಯಾದಿ ಅಖಿಳಗುಣಗಳ ಅಭಿವಕ್ತ ವೃದ್ಧಿಯಾಗುತ್ತಾ ಹೋಗುವುದು.

**ಉದಾಹರಣೆಗೆ,** ವಾಯುದೇವರಿಗಿರುವಷ್ಟು (೯೯) ಲಾತವ್ಯರಿಗಿಲ್ಲ. (೯೮) ಬ್ರಹ್ಮದೇವರಿಗೆ (೧೦೦ನೆಯಕಲ್ಪ) ವಾಯುದೇವರಿಗಿಂತ ಪದವಿ ಪ್ರಯುಕ್ತ ಅಭಿವ್ಯಕ್ತಿ ಹೆಚ್ಚು.

(೪) ೨೦೦ ಮಂದಿ ಋಜುಗಳೂ ಸಮಾನಸ್ಕಂಧರು. ಆದರೆ, ಅವರ ಸ್ವರೂಪಭೂತಯೋಗ್ಯತಾಗುಣ ಒಂದೇ. ಆದರೆ, ಪದವಿಯಿಂದ ಪದವಿಗೆ ಸ್ವರೂಪಗತಗುಣಗಳು ಅಭಿವೃದ್ಧಿಯಾಗುವುವು.

**೪. ಭಾರತಿ ವಾಣಿಗಳಲಿ–**

ಅಂತೆಯೇ, ಬ್ರಹ್ಮಪತ್ನಿ ಸರಸ್ವತೀದೇವಿಯರು, ವಾಯುಪತ್ನಿ ಭಾರತೀ ದೇವಿಯರಿಗಿಂತ ಒಂದು ಪದವಿ ಪ್ರಯುಕ್ತ ಕಿಂಚಿತ್ ಅಧಿಕರು. (ಬ್ರಹ್ಮ ವಾಯುಗಳಿಗಿದ್ದಂತೆ) ಉಳಿದ ೧೯೮ ಮಂದಿ ಋಜುಗಳ ಪತ್ನಿಯರು ಪದವಿ ವಿವೀಕ್ಷಾ, ಒಬ್ಬರಿಗೊಬ್ಬರು ಕಿಂಚಿತ್ ನ್ಯೂನರಾಗಿದ್ದಾರೆ. (೧೯೮ ರಿಂದ ಕೆಳಗೆ ೧ರವರೆಗೆ).

ಈ ರೀತಿ, ಋಜುಗಣಸ್ಥರ ಪದವಿಪ್ರಯುಕ್ತ ತಾರತಮ್ಯಾಭಿವ್ಯಕ್ತಿಯನ್ನು ಚಿಂತಿಸಬೇಕು.

ಅಂತೆಯೇ, ತತ್ಪತ್ನಿಯರಲ್ಲಿ–

ಉದಾಹರಣೆಗೆ, ಬ್ರಹ್ಮದೇವರಲ್ಲಿ ೧೦೦ ರಷ್ಟು ದೀಪಪ್ರಕಾಶ. ವಾಯು ದೇವರಲ್ಲಿ ೯೯ರಷ್ಟು. ಲಾತವ್ಯರಲ್ಲಿ ೯೮ರಷ್ಟು. ಕೊನೆಯಲ್ಲಿ ಸಾಧನವರ್ಗದ ಋಜುಗಣದಲ್ಲಿ ಪ್ರಥಮ ಋಜುಪದಸ್ಥನಾದ ಕಲ್ಕಿಗೆ ೪ ರಷ್ಟು ಪ್ರಕಾಶ ಮೇಣದ ಬತ್ತಿಯಲ್ಲಿ ಅಥವಾ ಒಂದು ಸೂರ್ಯನ ಪ್ರಕಾಶವನ್ನು ಹೋಲಿಕೆ (ಗಾಗಿ ಪರಿಗಣಿಸಬಹುದು )

## ಪದ್ಯ-೩೮

**ಮೂಲ :–**

ಸೌರಿ ಸೂರ್ಯನ ತೆರದಿ ಬ್ರಹ್ಮ ಸ ।
ಮೀರ ಗಾಯತ್ರಿ ಗಿರಿಗಳೊಳು ।
ತೋರುವುದು ಅಸ್ಪಷ್ಟರೂಪದಿ ಮುಕ್ತಿಪರಿಯಂತ ॥
ವಾರಿಜಾಸನ ವಾಯುವಾಣಿ ।
ಭಾರತಿಗಳಿಗೆ ಮಹಾಪ್ರಳಯದಿ
ಬಾರದಜ್ಞಾನಾದಿದೋಷವು ಹರಿಕೃಪಾಬಲದಿ ॥೩೮॥

**ಅವತರಣಿಕೆ :–**

ಋಜುಗಳ ಸ್ಪಷ್ಟತ್ವ ಜ್ಞಾನವಿಚಾರವನ್ನು ತಿಳಿಸುತ್ತಾರೆ. ॥೩೮॥

**ಪ್ರತಿಪದಾರ್ಥ :–**

**ಬ್ರಹ್ಮ**—ಬ್ರಹ್ಮದೇವರ ಸ್ಪಷ್ಟತ್ವವು, **ಗಾಯತ್ರಿ**—ವೇದಕ್ಕೆ ಮಾತ್ರ ಭೂತವಾದ ಗಾಯತ್ರಿ. **ಗಿರಿಗಳೊಳು**—ವೇದಗಳು. ಇವೆರಡು ಅಧಿಷ್ಠಾನಗಳಲ್ಲಿ, **ಸೂರ್ಯನ ತೆರದಿ** — ಸೂರ್ಯನಪ್ರಕಾಶದಂತೆ, ಇರುವುದು. **ಸಮೀರ**— ಶ್ರೀವಾಯುದೇವರಿಗೂ ಸಹ, ಬ್ರಹ್ಮದೇವರಂತೆಯೇ ಸ್ಪಷ್ಟತ್ವ ಇದೆ. **ಸೌರಿ**—ಸೂರ್ಯಸಂಬಂಧವಾದ ಪ್ರಕಾಶದಲ್ಲಿ, ಇಲ್ಲಿ ಸೌರಿ–ಎಂದರೆ, ದೀಪದ ಪ್ರಕಾಶವೆಂದು ತೆಗೆದುಕೊಳ್ಳಬೇಕು. ದೀಪಪ್ರಕಾಶಗಳ ಪದಾರ್ಥಗಳು ಎಷ್ಟು ಸ್ಪಷ್ಟವಾಗಿ ಕಾಣಿಸುತ್ತವೆಯೋ, ಹಾಗೆ ವಾಯುದೇವರು ಕಾಣುವವರಾಗುತ್ತಾರೆ. **ಗಾಯತ್ರಿ**—ಬ್ರಹ್ಮಪತ್ನಿ ಸರಸ್ವತೀದೇವಿ. **ಗಿರಿಗಳೊಳು**—ವಾಯುಪತ್ನೀ ಭಾರತೀದೇವಿ ಇವರಿಬ್ಬರಲ್ಲಿ–ಅಸ್ಪಷ್ಟ ರೂಪದಿಂದ ಕಾಣುತ್ತವೆ. (ಬ್ರಹ್ಮವಾಯುಗಳ ದೃಷ್ಟಿಯಿಂದ ತಾರತಮ್ಯದಲ್ಲಿ ಅಸ್ಪಷ್ಟತೆ) **ಮುಕ್ತಿಪರಿಯಂತ**—ಲಿಂಗಭಂಗವಾಗಿ ಮುಕ್ತರಾಗುವ ಪರ್ಯಂತ, **ವಾರಿಜಾಸನ**–

ಶ್ರೀಪರಮಾತ್ಮನ ನಾಭೀಕಮಲಸಂಜಾತರಾಗಿರುವ ಶ್ರೀಬ್ರಹ್ಮದೇವರು, **ವಾಯು**—ಭಾವೀಬ್ರಹ್ಮರಾದ ಶ್ರೀವಾಯುದೇವರು, **ವಾಣೀ**—ವೇದಾಭಿಮಾನಿಗಳಾದ ಶ್ರೀಸರಸ್ವತೀ, **ಭಾರತಿಗಳಿಗೆ**—ಭಾರತೀದೇವಿ-ಇವರಿಗೆ, **ಹರಿ ಕೃಪಾಬಲದಿ**-ಶ್ರೀಹರಿಯ ಕೃಪಾಬಲದಿಂದ, **ಅಜ್ಞಾನಾದಿದೋಷವು**-ಅಜ್ಞಾನಾದಿ ಮತ್ಯಾವ ದೋಷಗಳೂ, **ಮಹಾಪ್ರಳಯದಿ**—ಮಹಾಪ್ರಳಯ ಪರ್ಯಂತರವೂ-ಪ್ರಳಯಾನಂತರ ಉದರಪ್ರವೇಶಾನಂತರವೂ, **ಬಾರದು**—ಬರುವುದಿಲ್ಲ. ॥೩೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಋಜುಗಳ ಸ್ಪಷ್ಟತ್ವಜ್ಞಾನವಿಚಾರ ಹೇಳತಾರೆ.

ಬ್ರಹ್ಮದೇವರ ಸ್ಪಷ್ಟತ್ವ- ಎಂಥಾದ್ದೆಂದರೆ, ವೇದಕ್ಕೆ ಮಾತೃಭೂತವಾದ ಗಾಯತ್ರಿ, ವೇದಗಳು- ಈ ಎರಡು ಅಧಿಷ್ಠಾನಗಳೊಳು. ಇದರಂತೆ ಸರ್ವಚರಾಚರ ಅಧಿಷ್ಠಾನಗಳೊಳು, ತನ್ನ ಹೃದಯಾಕಾಶದಲ್ಲಿ ಇದ್ದ ಪರಮಾತ್ಮ, ಈ ಸ್ಥಾನಗತ ಸೂರ್ಯನ ಪ್ರಕಾಶಗತ ಪದಾರ್ಥಗಳು ಹ್ಯಾಂಗೆ, ಸ್ಪಷ್ಟವಾಗಿ ಗೋಚರವಾಗತವೋ, ತದ್ವತ್, ಪೂರ್ವೋಕ್ತ ವೇದಾಧಿಷ್ಠಾನಗತ ಭಗವದ್ರೂಪಗಳು ಮತ್ತು ಅವನ ಗುಣಗಳು ಬ್ರಹ್ಮದೇವರಿಗೆ ಸ್ಪಷ್ಟವಾಗಿ ತೋರೋವಾಗತವೆ. ವಾಯುದೇವರೂನೂ ಪೂರ್ವೋಕ್ತ ಅಧಿಷ್ಠಾನಗತ ಭಗವದ್ರೂಪಗಳ ಕಾಣೋದರಲ್ಲಿ ಸ್ಪಷ್ಟತ್ವ ಎಂಥಾದ್ದೆಂದರೆ. **ಅಸ್ಪಷ್ಟರೂಪೇ ಜ್ಞಾನಬಲೇ ವಿಶೇಷತಃ**-

**ಪ್ರಮಾಣ : ಸೌರಿಪ್ರಕಾಶಸ್ಯ ಯಥೈವ ದರ್ಶನಂ ತಥಾ ಮಮ ಜ್ಞಾನಗತೋ ವಿಶೇಷಃ ॥ ದೀಪಪ್ರಕಾಶಸ್ಯ ಯಥೈವದರ್ಶನಂ ತಥಾಜ್ಞಾನಂ ವಾಯುದೇವಸ್ಯ ಚಾಸ್ತಿ॥ ಅಸ್ಪಷ್ಟತಾ ನ್ಯೂನತಾ ಹ್ಯಸ್ತಿ**

**ವಾಯೋಃ ತಥಾऽಜ್ಞಾನಂ ನೈವ ಸಂಚಿಂತನೀಯಂ। ಚೈತಾದೃಶ ಜ್ಞಾನವ್ಯಕ್ತಿರ್ಮುರಾರೇ ವಾಯ್ವಾದೀನಾಂ ಮೋಕ್ಷಪರ್ಯಂತಮಸ್ತಿ। ವಾಯೋರ್ಮಹಾಪ್ರಳಯೇ ಸೃಷ್ಟಿಕಾಲೇ ತಥಾ ಗಾಯತ್ರ್ಯಾ ನಾಸ್ತಿ ನಾಸ್ತ್ಯೇವ ಮೋಹಃ॥ ಗಾಯತ್ರೀವತ್ ಭಾರತೀ ದೇವದೇವ— ಇತಿ ಗಾರುಡೇ ಬ್ರಹ್ಮಕಾಂಡೇ॥**

ಸೌರಿ-ಎಂದರೆ, ದೀಪವು (ಸೂರ್ಯ-ಸಂಬಂಧಿ, ಸೌರಿ). ದೀಪದಲ್ಲಿರುವ ಪ್ರಕಾಶಗುಣ ಸೂರ್ಯನದು, ಅಗ್ನಿಯದಲ್ಲ. ಆದ್ದರಿಂದ ಸೌರಿ- ಎಂದರೆ ದೀಪ ಎಂತ ಅರ್ಥ— ವಿಷ್ಣುಪುರಾಣದಲ್ಲಿ ಉಕ್ತವಾಗಿಯದೆ. ಆದ್ದರಿಂದ ದೀಪ ಪ್ರಕಾಶಗತ ಪದಾರ್ಥಗಳು ಕಂಡೋಪಾದಿಯಲ್ಲಿ ವಾಯುದೇವರು ಕಾಣೋವರಾಗತಾರೆ. 'ಗಾಯತ್ರಿಗಳೊಳು'- ಈ ಪದ ಇಲ್ಲಿ ಮತ್ತೆ ಆವರ್ತನ ಮಾಡಿಕೋಬೇಕು. (ಈ ಪದ ಮ್ಯಾಲೆ ಬಂದದ್ದು). ಬ್ರಹ್ಮಪತ್ನೀ ಗಾಯತ್ರಿ ದೇವರು, ಗಿರಿ-ಎಂದರೆ, ವಾಯುಪತ್ನಿ ಭಾರತೀದೇವೇರು ಇವರಿಗೆ ಬ್ರಹ್ಮ ವಾಯುಗಳೋಪಾದಿಯಲ್ಲಿ ಪರಸ್ಪರ ಸ್ಪಷ್ಟತ್ವತಾರತಮ್ಯವದೆ. ಪೂರ್ವೋಕ್ತರಾದ ಬ್ರಹ್ಮ-ಸರಸ್ವತೀಗಳಿಗೆ ಸ್ಪಷ್ಟತ್ವ ಇದ್ದೋಪಾದಿಯಲ್ಲಿ ವಾಯು-ಭಾರತಿಗಳಿಗೆ ಇಲ್ಲದೇ, ಅಸ್ಪಷ್ಟರೂಪದಿಂದ ಕಾಣತಾರೆ. ಇದೇ ರೀತ್ಯಾ ಪರಸ್ಪರ ದಂಪತಿಗಳಲ್ಲಿ ತಾರತಮ್ಯ. ಪೂರ್ವೋಕ್ತರಿಗೆ ದಗ್ಧಪಟದೋಪಾದಿಯಲ್ಲಿ ಲಿಂಗ ದೇಹ ಇರೋಣದರಿಂದ, ಆ ಲಿಂಗಭಂಗವಾಗಿ ಮುಕ್ತರಾಗೋ ಪರಿಯಂತ, ಕಿಂಚಿತ್ ಅಸ್ಪಷ್ಟವಾಗಿರೋದಾಗಿ ಇರತದೆ. ಲಿಂಗಭಂಗವಾದ ಮ್ಯಾಲೆ ಆ ಅಸ್ಪಷ್ಟತ್ವ ಪರಿಹಾರವಾಗಿ, ತಮ್ಮ ತಮ್ಮ ಸ್ವರೂಪಹೃದಯಾಂತರ್ಗತ ಬಿಂಬ ಸ್ಪಷ್ಟತ್ವೇನ ದರ್ಶನ. ಪೂರ್ವೋಕ್ತ ಪ್ರಕಾಶಸ್ಪಷ್ಟತೆದಿಂದತೀರತ ಇರತದೆ.

ಬ್ರಹ್ಮದೇವರು, ಭಾವೀಬ್ರಹ್ಮರಾದ ವಾಯುದೇವರು, ಸರಸ್ವತೀ ದೇವೇರು, ಭಾರತೀದೇವೇರು— ಈ ನಾಲ್ಕುಮಂದಿಗಳಿಗೂ ಬಿಂಬನಾದ ಪರಮಾತ್ಮನ ಕೃಪಾಬಲದಿಂದ, ಮಹಾಪ್ರಳಯಪರಿಯಂತ ಮತ್ತು ಪ್ರಳಯವಾಗಿ, ಉದರಪ್ರವೇಶಾನಂತರ, ದಾವಗ್ಯೂ ಅಜ್ಞಾನಾದಿದೋಷವು ಬರೋದಿಲ್ಲ. ಹಾಂಗೇ, ೨೦೦ ಮಂದಿ ಋಜುಗಳಿಗೂನೂ. ರುದ್ರಾದಿಗಳಿಗಾದರೋ, ಉಂಟು. ಬ್ರಹ್ಮದೇವರಿಗೆ ವಾಯುದೇವರ ವಿವಕ್ಷಾ ಸ್ಪಷ್ಟತ್ವ ಅಧಿಕವೆಂತಲೂ, ಈ-ಬ್ರಹ್ಮ

ದೆವರಿಗೆ ಲಿಂಗಭಂಗವಾಗುವವರಿಗೂ ಅಸ್ಪಷ್ಟತ್ವ ಇರತದೆ ಎಂತಲೂ, ಲಿಂಗ ಭಂಗಾನಂತರ ಇರತಕ್ಕ ಸ್ಪಷ್ಟತ್ವ ಈಗ ಇಲ್ಲ-ಎಂತಲೂ ಹೇಳಿದಂತಾಯಿತು. ಇದಕ್ಕೂ ಸೂರ್ಯದೃಷ್ಟಾಂತವೇ. ಸೂರ್ಯಮಂಡಲ ಸೃಷ್ಟಿಸಿ ನೋಡಿದರೆ, ಮಂದ ಕಾಣತದೆ. ಅಸ್ಪಷ್ಟತ್ವ ಹ್ಯಾಂಗೆ ಕಡಿಮಿಯೋ, ತದ್ವತ್, ಎಂತ ತಾತ್ಪರ್ಯ. ೩೮॥

## ೨ ಭಾವಪ್ರಕಾಶಿಕೆ

ದೀಪಗಳನ್ನು ಸಾಧಾರಣವಾಗಿ ಎಲ್ಲರೂ ನೋಡಬಹುದು. ಸೂರ್ಯ ಮಂಡಲವನ್ನು ಹಾಗೆ ನೋಡಲು ಸಾಧ್ಯವಿಲ್ಲ. ಅದರಂತೆ, ಬ್ರಹ್ಮದೇವರು ವಾಯುದೇವರು, ಸರಸ್ವತೀ, ಭಾರತೀಯರು-ಅಪರೋಕ್ಷದಲ್ಲಿ ದೀಪಪ್ರಕಾಶ ದಂತೆ, ಸ್ಪಷ್ಟವಾಗಿ ಭಗವದ್ರೂಪವನ್ನು ಕಾಣುವರು. ಸರ್ವತ್ರಗತ ಭಗವದ್ರೂಪ ಗಳು ಸೂರ್ಯಮಂಡಲ ಪ್ರಕಾಶವು ಕಾಣುವಂತೆ ಅಸ್ಪಷ್ಟವಾಗಿ ಕಾಣುವುದು. ಬ್ರಹ್ಮಾದಿಗಳಿಗೆ ಮುಕ್ತಿಪರ್ಯಂತರವೂ ಅಸ್ಪಷ್ಟವಾಗಿಯೇ ಕಾಣುವುದು. ವಾಯುದೇವರಿಗೆ ಬ್ರಹ್ಮಪದವಿಯಿಂದ ಮುಕ್ತಿಯಾದುದರಿಂದ, ವಾಯು ದೇವರು ಅಸ್ಪಷ್ಟವಾಗಿಯೇ ಭಗವದ್ರೂಪವನ್ನು ಕಾಣುವರು. ಬ್ರಹ್ಮದೇವರು ಮುಕ್ತರಾದಮೇಲೆ ಸ್ಪಷ್ಟವಾಗಿ ಕಾಣುವರು. ಭಗವದ್ರೂಪವನ್ನು ಕಾಣುವುದ ರಲ್ಲಿ ವಾಯುದೇವರಕ್ಕಿಂತಲೂ ಬ್ರಹ್ಮದೇವರು ಸ್ಪಷ್ಟವಾಗಿ ಕಾಣುವರು. ಮುಕ್ತರಾದ ಮೇಲೆ ಅಧಿಕಸ್ಪಷ್ಟವಾಗುವುದು. ಈ ತಾರತಮ್ಯವು ಬ್ರಹ್ಮವಾಯು ಗಳಲ್ಲಿ ಇರುವುದೆಂದು ಚಿಂತಿಸಬೇಕು. ಬ್ರಹ್ಮದೇವರು, ವಾಯುದೇವರು, ಸರಸ್ವತೀ, ಭಾರತೀದೇವಿಯರು- ಇವರಿಗೆ ಮಹಾಪ್ರಳಯದಲ್ಲೂ ಕೂಡ ಪರಮಾತ್ಮನ ಕೃಪಾಬಲದಿಂದ ಅಜ್ಞಾನಾದಿ ದೋಷಗಳು ಬರುವುದಿಲ್ಲ. ಈ ವಿಷಯದಲ್ಲಿ ಗರುಡಪುರಾಣ ಬ್ರಹ್ಮಕಾಂಡದಲ್ಲಿ ಹೇಳಿರುವ-"ಅಸ್ಪಷ್ಟ ರೂಪೇಜ್ಞಾನ ಬಲೇ ವಿಶೇಷಃ ಸೌರಿ ಪ್ರಕಾಶಸ್ಯ ಯಥೈವದರ್ಶನಂ॥ ಕಥಾಮಾಮು ಜ್ಞಾನಗತೋ ವಿಶೇಷಂ ದೀಪಪ್ರಕಾಶಸ್ಯ ಯಥೈವ ದರ್ಶನಂ॥ ತಥಾಜ್ಞಾನಂ ವಾಯುದೇವಸ್ಯ ಚಾಸ್ತಿ ಅಸ್ಪಷ್ಟತಾ ನ್ಯೂನತಾಹ್ಯಸ್ತಿವಾಯೋಃ" ತಥಾS ಜ್ಞಾನಂನೈವ ಸಂಚಿಂತನೀಯಂ ಕ್ವಚಿತ್ಸದೃಶ್ಯಜ್ಞಾನ ವ್ಯಕ್ತಿರ್ಮುರಾ॥ ವಾಯ್ವಾ ದೀನಾಂ ಮೋಕ್ಷಪರ್ಯಂತಮಸ್ತಿವಾಯೋಮುಪ್ರಳಯೇ, ಸೃಷ್ಟಿಕಾಲೇ॥

ತಥಾಗಾಯತ್ರ್ಯಾನಾಸ್ತಿನಾಸ್ತ್ಯೇವಮೋಹಃ ಗಾಯತ್ರೀವದ್ಭಾರತೀ ದೇವದೇವ- ಇತ್ಯಾದಿ ವಾಕ್ಯಗಳು ಆಧಾರವಾಗಿರುವುವು. ಈ ಪದ್ಯಾರ್ಥವೇ ಈ ಶ್ಲೋಕಗಳಲ್ಲಿರುವುದರಿಂದ, ಶ್ಲೋಕಾರ್ಥವನ್ನು ಬೇರೆಯಾಗಿ ಬರೆಯಲಿಲ್ಲ. ॥೩೮॥

## ೩. ಭಾವದರ್ಪಣ :-

ಸೌರೀತಿ। "ಅಸ್ವಪ್ಪರೂಪೇ ಜ್ಞಾನಬಲೇ ವಿಶೇಷಃ ಸೌರಿಪ್ರಕಾಶಂಸ್ಯ ಯಥೈವ ದರ್ಶನಂ॥ ತಥಾ ಜ್ಞಾನಂ ವಾಯುದೇವಸ್ಯ ಚಾನ್ತಿ ಅಸ್ಪಷ್ಟತಾ ನ್ಯೂನತಾ ಹ್ಯಾಸ್ತಿವಾಯೋಃ ತಥಾ ಜ್ಞಾನಂ ನೈವ ಸಂಚಿಂತನೀಯಂ ಏತಾದೃಶೀ ಜ್ಞಾನವ್ಯಕ್ತಿರ್ಮುರಾರೇಃ॥ ವಾಯ್ವಾದೀನಾಂ ಮೋಕ್ಷಪರ್ಯಂತಮಸ್ತಿ ವಾಯೋರ್ಮಮ ಪ್ರಲಯೇ ಸೃಷ್ಟಿಕಾಲೇ। ತಥಾ ಗಾಯತ್ರ್ಯಾ ನಾಸ್ತಿ ನಾಸ್ತ್ಯೇವ ಮೋಹಃ ಗಾಯತ್ರೀವದ್ಭಾರತೀ ದೇವದೇವ॥ ಜ್ಞಾತವ್ಯಮೇವಂ ಹರಿತತ್ತ್ವವೇದಿಭಿರಿತಿ" ॥೩೮॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-

"ಸೌರಿ" ಇತಿ॥ "ತೋರುವುದು" ಜ್ಞಾನಮ್ ॥ "ಸೌರಿ" ಇತ್ಯನೇನ "ಸೌರಿಪ್ರಕಾಶೇ"- ಚ ಯಥೈವ ದರ್ಶನಂ ತಥಾ ಮಮ ಜ್ಞಾನಗತೋ ವಿಶೇಷಃ ॥" ಇತ್ಯಸ್ಯ (ಇತಿ) ಪ್ರತೀಕಂ ಧೃತಮ್ ॥ "ದೀಪಪ್ರಕಾಶೇ ಚ"- ಇತ್ಯುಕ್ತ್ವಾ, "ತಥಾಜ್ಞಾನಂ ವಾಯುದೇವಸ್ಯ"• ಇತಿ ಮೂಲೇ ಪ್ರತೀಯತೇ॥ ನ ತದ್ಯುಕ್ತಮ್ ॥ ತೃಣಜೀವಸಾಮ್ಯಾಪತ್ತೇಃ ॥ ನ ಚ ವಾಚ್ಯಮ್ ದೀಪೋ ನೈಕೋ ವಿವಕ್ಷಿತಃ ॥ ಅನಂತ ಇತ್ಯೇವ ॥ ಯದಿ ಚಂದ್ರಪ್ರಕಾಶಃ ಅರ್ಥಾತ್ ಲಭ್ಯತೇ ॥ ಸ ತು ನ ಸೋಪಾಧಿಕಃ ॥ ಸ್ವಸ್ಯೈವ ಅಪ್ರಕಾಶಶೇ ಪರಪ್ರಕಾಶತ್ವಾ ಸಂಗತೇಃ ॥ ಪೂರ್ಣಕಲಾವಾನೇವೇತ್ಯಾಗತಮ್ ॥ ಸಿ ಸೂರ್ಯ ಇತ್ಯುಚ್ಯತೇ ॥ ವಾಲ್ಮೀಕೀಯೇ ಚ-ರಾಮಾಜ್ಞಯಾ ಚ ಲತಯಾ ರವಿಜೇ ವಿಭಕ್ತೇ ತಚ್ಛೋಭಾ ಸೂರ್ಯೇಣ ನಿರ್ದಿಷ್ಟಾ- "ವಿಪರೀತ ಇವಾಕಾಶೇ ಸೂರ್ಯೋ ನಕ್ಷತ್ರ ಮಾಲಯಾ ॥ ಇತಿ॥ ವಿವೃತಂ ಚೈವಮೇವ ಅನ್ಯೈಃ॥ "ವಿಪರೀತಂ ತು ಸು

ಶರ್ವರೀ, ರಾಕಾಮಧ್ಯಗತಃ ಚಂದ್ರಃ ಸೂರ್ಯ"– ಇತ್ಯಭಿಧಾನಮುದಾ ಹರಿದ್ಭಿಃ॥ ಅಸ್ಪಷ್ಟೇತಿ॥ "ಮುಕ್ತಿ" ಇತಿ ಚ "ಏತಾದೃಶೀ ಜ್ಞಾನ ವ್ಯಕ್ತಿರ್ವಿಶೇಷಃ ವಾಯ್ವಾದೀನಾಂ ಮೋಕ್ಷಪರ್ಯಂತಮಸ್ತಿ॥ ಇತ್ಯಸ್ಯ ವ್ಯಾಖ್ಯಾನವಮ್ ॥೩೭॥

## ಕನ್ನಡಾರ್ಥ

"ತೋರುವುದು"– ಈ ಶಬ್ದಕ್ಕೆ ಜ್ಞಾನವೆಂದು ಅರ್ಥ ತೋರಿಸಿದರೂ, "ಸೌರಿ" ಈ ಪದವನ್ನು ಪ್ರಯೋಗಿಸಿದುದರಿಂದ "ಸೌರಿಪ್ರಕಾಶೇ ಚ ಯದ್ವೈವ ದರ್ಶನಂ" ಈ ಗರುಡ ಬ್ರಹ್ಮಕಾಂಡದ ವಚನ ಪ್ರತೀಕವನ್ನೇ ಪರಿಗ್ರಹಿಸಿದಂತೆ "ದೀಪಪ್ರಕಾಶೇಚ" ಹೀಗೆ ಹೇಳಿ, "ತಥಾ ಜ್ಞಾನಂ" ಹೀಗೆ, ಅಂದರೆ ದೀಪ ಪ್ರಕಾಶದಲ್ಲಿ ಹೇಗೋ ಹಾಗೆ ನನಗೆ ಜ್ಞಾನವೆಂಬ ಅರ್ಥವು ತೋರಬಹುದು. ಆದುದರಿಂದ, ತೃಣಜೀವಸಾಮ್ಯವು ಅವರಲ್ಲಿ ಬರಬೇಕಾಗುತ್ತದೆ. ಇನ್ನು ಅನಂತ ಅನೇಕ ದೀಪಗಳೆಂದು ಅರ್ಥ ಹೇಳುವುದೂ ಸರಿಯಲ್ಲ. ಆದುದರಿಂದ, ಚಂದ್ರಪ್ರಕಾಶವನ್ನು ಅರ್ಥಾತ್ ಪರಿಗ್ರಹಿಸಬೇಕು. ಅದುವೂ ಸೋಪಾಧಿಕ ವಲ್ಲ. ನಿರುಪಾಧಿಕ, ಅಂದರೆ ತನಗೆ ಪ್ರಕಾಶವಿಲ್ಲದವನು ಪರರಿಗೆ ಪ್ರಕಾಶ ನೀಯುವನೆಂಬುದು ಅಸಂಗತವಾಗಿರುತ್ತದೆ. ಆದುದರಿಂದ, ನಿರುಪಾಧಿಕ ಅಥವಾ ಪೂರ್ಣಕಲಾಧರನೆಂಬ ಅರ್ಥ ಹೇಳಬೇಕು; ಅವನನ್ನು ಸೂರ್ಯ ನೆಂದು ಕರೆಯುತ್ತಾರೆ. ಆಕಾಶದಲ್ಲಿ ರಾತ್ರಿಯಲ್ಲಿ ವಾಲ್ಮೀಕಿರಾಮಾಯಣದಲ್ಲಿ– "ಸೂರ್ಯನು ನಕ್ಷತ್ರಮಾಲೆಯಿಂದ ಹೇಗೋ ಹಾಗೆ" ಎಂಬುದಾಗಿ ವರ್ಣಿಸಿರು ತ್ತಾರೆ. ಹೀಗೆ, ಕೋಶಗಳನ್ನು ಉದಾಹರಿಸುತ್ತಾ, ವ್ಯಾಖ್ಯಾನಕಾರರು ಅದನ್ನು ವಿವರಿಸಿರುತ್ತಾರೆ.

ಅಸ್ಪಷ್ಟ "ಮುಕ್ತಿಪರ್ಯಂತ–ಕ್ರಮದಿಂದ" ಜ್ಞಾನವು ಅಭಿವೃದ್ಧಿ ಹೊಂದುವುದು, ಹಾಗೂ ಸ್ಪಷ್ಟತಾವೆಂಬ ವಿಶೇಷವಿಲ್ಲದಿರುವುದು. ಈ ಲಕ್ಷಣವು ವಾಯು ಮುಂತಾದವರ ಬಿಂಬಪ್ರಕಾಶದಲ್ಲಿರುವುದು • ಎಂದು ಹೇಳುವ ಪ್ರಮಾಣದ ಅರ್ಥವಿವರಣೆಯನ್ನೇ– "ಅಸ್ಪಷ್ಟರೂಪದಿ, ಮುಕ್ತಿಪರ್ಯಂತ" ಈ ವಾಕ್ಯವು ತಿಳಿಸುವುದು. ॥೩೭॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಸೂರ್ಯಕಿರಣದಿಂದ ಶುಕ್ಲಪಕ್ಷದಲ್ಲಿ ಚಂದ್ರಮಂಡಲವು ವೃದ್ಧಿಯಾಗುವುದರಿಂದ, ಸೌರಿ- ಅಂದರೆ, ಚಂದ್ರಕಾಂತಿಯಲ್ಲಿ ಅಸ್ಪಷ್ಟವಾದಾಗ್ಯೂ, ಸೂರ್ಯ ಪ್ರಕಾಶದಲ್ಲಿ ಸ್ಪಷ್ಟವಾಗಿ ವಸ್ತುಗಳು ಕಾಣುವಂತೆ- ಬ್ರಹ್ಮಗಿರಿ, ಎಂಬ ಪ್ರಾಣ ಸರಸ್ವತೀ, ಭಾರತೀ- ಇವರುಗಳಲ್ಲಿ ಬಿಂಬಸ್ವರೂಪವು, ಬ್ರಹ್ಮನಿಗಿಂತ ವಾಯುದೇವರಲ್ಲಿ ಅಸ್ಪಷ್ಟ, ಅವರಿಗಿಂತ ಸರಸ್ವತಿ-ಭಾರತೀಯರುಗಳಲ್ಲ ಅಸ್ಪಷ್ಟ. ಹೀಗೆ, ಮುಕ್ತಿಪರ್ಯಂತ ಇರುವುದು. ವಾರಿಜಾಸನನೆಂಬ ಬ್ರಹ್ಮ, ವಾಯು, ವಾಣಿ, ಭಾರತೀಯರುಗಳಿಗೆ ಮಹಾಪ್ರಳಯದಲ್ಲಿಯೂ ಕೂಡಾ ಅಜ್ಞಾನಾದಿ ದೋಷಗಳು ದೇವರ ಕೃಪಾಬಲದಿಂದ ಇಲ್ಲವು. ॥೩೮॥

## ಸರ್ವವ್ಯಾಖ್ಯಾನುಸಾರಸಂಗ್ರಹ

೧. **ಸೌರಿ**-ಎಂದರೆ ಸೂರ್ಯನ ಸಂಬಂಧ-ಎಂದರ್ಥ. ಸಾಮಾನ್ಯಾರ್ಥದಲ್ಲಿ ಪ್ರಕಾಶವನ್ನು ಬೀರುವ "ದೀಪ"-ಎಂದು ತೆಗೆದುಕೊಳ್ಳಬಹುದು. ಸಾಧಾರಣವಾಗಿ ದೀಪಗಳನ್ನು ನಮ್ಮ ಕಣ್ಣಿನಿಂದ ನೋಡಬಹುದು. ಆದರೆ, ಸೂರ್ಯಮಂಡಲವನ್ನು ಹಾಗೆ ತೆರೆದ ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಅದರಂತೆ, ಬ್ರಹ್ಮದೇವರು-ವಾಯುದೇವರು- ಸರಸ್ವತೀ- ಭಾರತೀದೇವಿಯರು- ಅಪರೋಕ್ಷದಲ್ಲಿ ಭಗವದ್ರೂಪವನ್ನು ಸ್ಪಷ್ಟವಾಗಿ ಕಾಣುವರು. ಆದರೆ, ಇವರ ಋಜುಗಣಸ್ಥರಲ್ಲಿ ಈ ಪ್ರಕಾಶದ ಸ್ಪಷ್ಟತೆ ಪದವಿ ಅಪರೋಹಣಕ್ರಮದಲ್ಲಿ ಕಡಿಮೆಯಾಗುತ್ತಾ ಹೋಗುವುದು.

**ಪ್ರಮಾಣ :**

"ಅಸ್ಪಷ್ಟರೂಪೇ ಜ್ಞಾನಬಲೇ ವಿಶೇಷಃ ಸೌರಿಪ್ರಕಾಶಂಸ್ಯ ಯಥೈವ ದರ್ಶನಂ ।

ತಥಾ ಜ್ಞಾನಂ ವಾಯುದೇವಸ್ಯ ಚಾಸ್ತಿ ಅಸ್ಪಷ್ಟತಾ ನ್ಯೂನ್ಯತಾ ಹ್ಯಾಸ್ತಿ ವಾಯೋಃ ॥

ತಥಾ ಜ್ಞಾನಂ ಸ್ತೈವ ಸಂಜಂತಸೀಯಂ ಪಿತಾದೃಷ್ಟಿs ಜ್ಞಾನವ್ಯಕ್ತಿರ್ಮುರಾರೇಃ॥

ವಾಯ್ವಾದೀನಾಂ ಮೋಕ್ಷ ಪರ್ಯಾತಮುಸ್ಮಿ ವಾಯೋರ್ವಾವು ಪ್ರಲಯೇ ಸೃಷ್ಟಿಕಾಲೇ ।

ತಥಾ ಗಾಯತ್ರ್ಯಾನಾಸ್ತಿ ನಾಸ್ತ್ಯೇವ ಪೋಹಃ ಗಾಯತ್ರೀವ ದ್ವಾರತೀ ದೇವ ದೇವ ॥

ಜ್ಞಾತವ್ಯಮೇವಂ ಹರಿತತ್ವ ವೇಧಿಭಿರಿತಿ" ॥

೨. **ಗಾಯತ್ರೀ**-ಎಂದರೆ, ವೇದಕ್ಕೆ ಮಾತ್ರ ಸ್ಥಾನದಲ್ಲಿರುವ "ಗಾಯತ್ರೀ ಮಂತ್ರ"-ಎಂದು ಒಂದು ಅರ್ಥ. ವೇದಾಭಿಮಾನಿಯೂ, ವಾಗಭಿಮಾನಿಯೂ ಆದ ಬ್ರಹ್ಮದೇವರ ಪತ್ನಿ ಶ್ರೀ ಸರಸ್ವತೀದೇವಿಯರಿಗೂ **ಗಾಯತ್ರೀಮಂತ್ರದ ಪ್ರಧಾನ ಪ್ರತಿವಾದ್ಯರೂಪ ಶ್ರೀಹರಿಯೇ.**

೩. **ಗಿರಿಗಳೊಳು**- "ಗಿರಾ"-ಎಂದರೆ ವಾಕ್ಕು. ವೇದವಾಕ್ಯಗಳಲ್ಲಿ ಒಂದರ್ಥ. ಶ್ರೀ ವಾಯುದೇವರ ಪತ್ನೀ ಶ್ರೀಭಾರತೀದೇವಿಯರಿಗೂ ಈ ಹೆಸರು ಸಲ್ಲುವುದು.

ಇದರಿಂದ ಸರಸ್ವತೀ ಮತ್ತು ಭಾರತೀದೇವಿಯರಲ್ಲಿ- ಎಂದು ತೆಗೆದು ಕೊಳ್ಳಬಹುದು.

೪. ಶ್ರೀವಾಯುದೇವರಿಗಿಂತ ಶ್ರೀಬ್ರಹ್ಮದೇವರಲ್ಲಿ ಭಗವದ ಪರೋಕ್ಷದ ಪ್ರಕಾಶದ ಸ್ಪಷ್ಟತೆ ಹೆಚ್ಚು. ಅಂತೆಯೇ, ಸರಸ್ವತಿದೇವಿಯರಲ್ಲಿ ಭಾರತೀದೇವಿಯರಿಗಿಂತ ಸ್ಪಷ್ಟತೆ ಹೆಚ್ಚು. ಶ್ರೀ ಬ್ರಹ್ಮವಾಯುಗಳ ವಿವೇಕ್ಷಾ- ಸರಸ್ವತೀ ಭಾರತೀಯರಿಗೆ ನ್ಯೂನತೆ. ಈ ರೀತಿ ತಾರತಮ್ಯಕ್ರಮ ಗ್ರಹಿಸ ಬೇಕು.

೫. ಶ್ರೀಹರಿಯ ನಾಭೀಕಮಲಪೀಠಸ್ಥರಾದ ಬ್ರಹ್ಮದೇವರಿಗೆ **ವಾರಿಜಾಸನ**-ಎಂದು ಹೆಸರು. ವಾರಿಜಾಸನನಾಮಕರಾದ ಶ್ರೀಬ್ರಹ್ಮ ದೇವರು- ಶ್ರೀವಾಯುದೇವರು- ನಂತರ ವಾಣೀನಾಮಕರಾದ ವಾಗಭಿಮಾನಿ **ಶ್ರೀಸರಸ್ವತೀ**, ತದನಂತರ ಶ್ರೀಭಾರತೀದೇವಿ-ಈ ನಾಲ್ಕು ಮಂದಿಗೆ ಮಾತ್ರ

ಪ್ರಳಯಕಾಲದಲ್ಲಿಯೂ, ಅಜ್ಞಾನಾದಿ ದೋಷಗಳಿಲ್ಲ. ಅವರೆಲ್ಲಾ ಅತಿ ರೋಹಿತ ವಿಮಲವಿಜ್ಞಾನಿಗಳು. ಪರಿಶುಕ್ಲತ್ರಯವರ್ಗಕ್ಕೆ ಸೇರಿದವರು. ಶ್ರೀಹರಿಯ ಉದರಪ್ರವೇಶಾನಂತರವೂ ಅಜ್ಞಾನಾದಿ ದೋಷಗಳಿಲ್ಲ. ಸದಾ ಜಾಗ್ರತರಾಗಿರುವರು. ಇದು **ಶ್ರೀ ಹರಿಯ ಕೃಪಾಬಲದಿಂದಲೇ** ವಿದ್ಯಮಾನವಾಗಿರುವುದು. ॥೩೮॥

## ಪದ್ಯ–೩೯

**ಮೂಲ :**

**ನೂರು ವರುಷಾ ನಂತರದಲಿ ಸ ।**
**ರೋರುಹಾಸನ ತನ್ನ ಕಲ್ಪದ ।**
**ಲಾರು ಮುಕ್ತಿಯನೈದುವರೊ ಅವರವರ ಕರೆದೊಯ್ದು ॥**
**ಶೌರಿಪುರದೊಳಗಿಪ್ಪ ನದಿಯಲಿ ।**
**ಕಾರುಣಿಕ ಸುಸ್ನಾನ ನಿಜಪರಿ ।**
**ವಾರ ಸಹಿತದಿ ಮಾಡಿ ಹರಿಯುದರ ಪ್ರವೇಶಿಸುವ ॥೩೯॥**

**ಅವತರಣಿಕೆ :**

ಬ್ರಹ್ಮದೇವರ ವಿಚಾರವನ್ನು ತಿಳಿಸುತ್ತಾರೆ. ॥೩೯॥

**ಪ್ರತಿಪದಾರ್ಥ :–**

**ಸರೋರುಹಾಸನ**—ಬ್ರಹ್ಮದೇವರು, **ನೂರುವರುಷಾನಂತರದಲಿ**-ತನ್ನ ೧೦೦ ವರ್ಷಗಳ ನಂತರ, (ಬ್ರಹ್ಮದೇವರ ಆಯುಃಪ್ರಮಾಣ) **ತನ್ನ ಕಲ್ಪದಲಿ**—ತಮ್ಮ ಆಳ್ವಿಕೆಯಲ್ಲಿ (೧೦೦ ವರ್ಷಗಳವರೆಗೂ ಸತ್ಯಲೋಕಾಧಿಪತ್ಯ ಮಾಡುವರು), **ಆರು ಮುಕ್ತಿಯನು ಐದುವರೊ**—ಯಾವ ಯಾವ ಜೀವರು ಮುಕ್ತಿಯನ್ನು ಪಡೆಯಬೇಕಾದವರೋ, ಅಂತಹ ಜೀವಗಣವನ್ನು,

**ಅವರವರ**—ಆ ಸಾಂಶ, ನಿರಂಶರಾದ ಜೀವರನ್ನು, **ಕರೆದೊಯ್ದು**—ತಮ್ಮೊಡನೆ ಕರೆದುಕೊಂಡು ಹೋಗಿ, **ಶೌರಿಪುರದೊಳಗಿಪ್ಪ**—ಶ್ರೀಮನ್ನಾರಾಯಣನು ಇರುವ ವೈಕುಂಠಸ್ಥಾನಗತವಾದ, **ನದಿಯುಲಿ**—ವೈಕುಂಠದ ಏಳನೆಯ ಪ್ರಾಕಾರ ಮಧ್ಯದಲ್ಲಿ ಹರಿಯುವ ಲಾಕ್ಷಾಕೃತ್ಮಕವಾಗಿರುವ ರವಾಭಿಘುನ್ನವಾದ ವಿರಜಾನದಿಯಲ್ಲಿ, **ಕಾರುಣಿಕ**—ಕರುಣಾವಂತರಾದ ಶ್ರೀಬ್ರಹ್ಮದೇವರು, **ಸುಸ್ನಾನ**—ಸಮೀಚೀನವಾದ ಸ್ನಾನವನ್ನು, **ನಿಜಪರಿವಾರ ಸಹಿತದಿ ಮಾಡಿ**—ತಮ್ಮೊಡನೆ ಮುಕ್ತರಾಗುವ ಜೀವರೊಡನೆ ಮಾಡಿ, **ಹರಿಯ ಉದರ**—ವಾಸುದೇವನಾಮಕ ಶ್ರೀಪರಮಾತ್ಮನ ಉದರ ಪ್ರದೇಶವನ್ನು, **ಪ್ರವೇಶಿಸುವ**—ಪ್ರವೇಶ ಮಾಡುವವರಾಗುತ್ತಾರೆ. ॥೩೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಬ್ರಹ್ಮದೇವರ ಲಿಂಗಭಂಗವಿಚಾರ ಹೇಳುತ್ತಾರೆ.

ಬ್ರಹ್ಮದೇವರು ಬ್ರಹ್ಮಪದಕ್ಕೆ ಬಂದ ವರ್ತಮಾನ ಬ್ರಹ್ಮಕಲ್ಪ ಎಂಬುದು **ಚತುರ್ಯುಗ ಸಹಸ್ರಾಣಿ ಬ್ರಹ್ಮಣೋದಿನಮುಚ್ಯತೇ.** ಎಂಬ ಪ್ರಮಾಣಾನುಸಾರ, ಇಂಥಾ ಕಾಲಸಾಂಕೇತದಿಂದ ನೂರುವರ್ಷ ಇರೋದಾಗಿ ಇರತದೆ. ಪ್ರತಿ ಬ್ರಹ್ಮಕಲ್ಪಕ್ಕೂ ಇದೇ ನೇಮ. ಈ ನೂರು ವರ್ಷಕ್ಕೆ ಅನುಸರಿಸಿದ್ದು-ಬ್ರಹ್ಮಗೆ ಒಂದು ಜನ್ಮ. ಈ ನೂರು ವರ್ಷ ಬ್ರಹ್ಮಗೆ ಆಯುರ್ಮಾನ-ಆಗ ಬ್ರಹ್ಮದೇವರು ತಮ್ಮ ಸ್ಥೂಲದೇಹತ್ಯಾಗ ಮಾಡತಾರೆ. ತದ್ವತ್ ಸರ್ವ ದೇವತೆಗಳಿಗೂ, ಈ ಪ್ರಕಾರ ನವಾವರಣರಹಿತ ಚರಾಚರಗಳಿಗೂ ನೂರು ವರುಷಕ್ಕೆ ಸರಿಯಾಗಿ ಪ್ರಳಯ ಆಗತದೆ. ನಂತರ, ತಾನು ಸತ್ಯಲೋಕಧಿಪತ್ಯ ಆಳತಕ್ಕ ಬ್ರಹ್ಮಕಲ್ಪದಲ್ಲಿ, ವಿದ್ಯಮಾನರಾದ, ಸಾಂಶ-ನಿರಂಶ ಜೀವರೊಳಗೆ ತನ್ನ ಸಂಗಡ ಲಿಂಗಭಂಗ ಐದತಕ್ಕವರು, ಹಾಂಗೆ ವಾಯುದೇವರು, ಹಾಂಗೆ ತದನ್ಯ ಋಜುಗಳು-ಇವರ ಸಂಗಡ (ವಾಯುದೇವರ ಸಂಗಡ) ಲಿಂಗ

ಭಂಗ ಐದತಕ್ಕವರು ಈ ಪ್ರಕಾರ ದ್ವಿವಿಧ ಜೀವರು ಇರೋವರಾಗಿ ಇದ್ದಾರೆ. ಇವರಲ್ಲಿ ಸಾಧನ ಪೂರ್ತಿಯಾದವರನ್ನ ಈ ತನ್ನ ಕಲ್ಪದಲ್ಲಿ, ತನ್ನ ಸಂಗಡ ದಾರು ದಾರು ಮುಕ್ತಿಯೈದಬೇಕಾದವರೋ, ಆ ಸಾಂಶ ನಿರಂಶರಾದವರನ ಕರಕೊಂಡು ಹೋಗತಾರೆ. ತದನ್ಯ, ಸಾಧನ ಅವಶಿಷ್ಟ ಉಳಿದವರನ್ನ, ಈ ವಾಯುದೇವರು ಬ್ರಹ್ಮಪದಕ್ಕೆ ಬಂದ ನಂತರ, ಇವರ ಸಂಗಡ ಮುಕ್ತರಾಗ ತಕ್ಕವರನ್ನ ಬಿಟ್ಟು ಎಂದರೆ, ಇವರೊಳಗೆ ಸಾಂಶ-ನಿರಂಶರನ್ನ ಬಿಟ್ಟು- ಎಂತ ಅರ್ಥ. ಪರಮಾತ್ಮ ಇರತಕ್ಕ ವೈಕುಂಠಸ್ಥಾನಗತ, ಈ ವೈಕುಂಠಕ್ಕೆ ಏಳನೇ ಪ್ರಾಕಾರ ಮಧ್ಯದಲ್ಲಿ ಇರುವ ಲಕ್ಷ್ಮ್ಯಾತ್ಮಕ ರಮಾಭಿಮನ್ಯವಾದ ಜಲದಿಂದ ಯುಕ್ತ ವಾದ ನದಿಯಲ್ಲಿ, ಕರುಣವುಳ್ಳ ಬ್ರಹ್ಮದೇವರು, ನಿಜಪರಿವಾರರಾದ ಮುಖ್ಯ ತತ್ತ್ವಾಭಿಮಾನಿಗಳಾದ ಗರುಡ ಶೇಷಾದಿ ಶತಸ್ಥ ಪರಿಯಂತ, ಅಮುಖ್ಯ ತತ್ತ್ವಾಭಿಮಾನಿಗಳಾದ ಪುಷ್ಕರಾಂತ ಏತಾದೃಶಪರಿವಾರ ಸಹಿತ, ವೈಕುಂಠ ಗತ ವಿರಜಾನದಿಯಲ್ಲೂ, ತದನ್ಯ ಆತಾತ್ತ್ವಿಕರಾದ ಸಾಂಶರಾದ ಆಜಾನಜ ದೇವತೆಗಳು, ನಿರಂಶರಾದ ಮಾನುಷಗಂಧರ್ವಾರಭ್ಯ ತೃಣಾಂತ ನಿರಂಶರ, ಶ್ವೇತದ್ವೀಪಸ್ಥ ಲಕ್ಷ್ಮ್ಯಾತ್ಮಕ ವಿರಜಾನದಿಯಲ್ಲೂ, ಎಂದರೆ, ಆಜಾನಜರಿಗೆ, ನಿರಂಶ ರಿಗೆ ಲಿಂಗಭಂಗಾನಂತರ ಮುಕ್ತಸ್ಥಾನ, ಮಹರಾದಿ ಸತ್ಯಲೋಕಾಂತವಾದ್ದ ರಿಂದ, ಇವರಿಗೆ ಶ್ವೇತದ್ವೀಪಗತ ವಿರಜಾನದಿ ಸ್ನಾನ. ಈ ಪ್ರಕಾರ ಕಾಲಭೇ- ದಿಂದ, ಸ್ಥಾನಭೇದಗಳಲ್ಲಿ ಸುಸಮೀಚೀನ ಸ್ನಾನವನ್ನು ಮಾಡಿ, ಸರ್ವರಿಗೂ ಮಾಡಿಸಿ, ಲಿಂಗಭಂಗ ಐದಿಸೋವರಾಗತಾರೆ. ತಮ್ಮ ಸಹಿತ ಸರ್ವರಿಗೂ ಈಶ್ವರೇಚ್ಛಾವರಣ ಮಾತ್ರ ಇರೋದಾಗಿ ಇರತದೆ. ಇದು ಸೃಷ್ಟಿ ಪ್ರಾರಂಭ ದಲ್ಲಿ ಶ್ವೇತದ್ವೀಪಗತ ವಾಸುದೇವನ ದ್ವಾರಾ ಅಪಸರಣವಾಗೋದಾಗತದೆ.

ಈ ಪ್ರಕಾರ ಸ್ನಾನ ಮಾಡಿ, ಲಿಂಗಭಂಗವಾಗಿ, ಪರಮಾತ್ಮನಾದ ವಾಸು ದೇವನ ಉದರಪ್ರವೇಶ ಮಾಡತಾರೆ. ವಾಯುದೇವರು ಲಿಂಗಭಂಗವಿಲ್ಲದ ಅಮುಕ್ತರ ಸಹಿತರಾಗಿ, ವಾಸುದೇವ ಉದರಪ್ರವೇಶ ಮಾಡತಾರೆ. ಈ ಪ್ರಕಾರ ತ್ರಿವಿಧಜೀವರೂ, ಅನಂತಕಲ್ಪದ ಮುಕ್ತರೂ, ವಾಸುದೇವನದ್ವಾರಾ ನಾರಾಯಣನ ಉದರಪ್ರವೇಶರಾಗಿ, ಉದರದಲ್ಲಿ ಅವರವರು ಸ್ಥಾನಾಂತರದಲ್ಲಿರ ತಾರೆ. ॥೩೯॥

## ೨. ಭಾವಪ್ರಕಾಶಿಕೆ :-

ಬ್ರಹ್ಮದೇವರ ೧೦೦ ವರ್ಷಕ್ಕೆ ಒಂದು ಬ್ರಹ್ಮ ಕಲ್ಪವೆಂದು ಹೆಸರು. ತತ್ತ್ವಾಭಿಮಾನಿಗಳಾದ ಸೂರ್ಯಾದಿ ದೇವತೆಗಳು ಮೊದಲಾದ ಮುಕ್ತಯೋಗ್ಯರಲ್ಲಿ ೧೦-೨೦ ಕಲ್ಪ ಸಾಧನವನ್ನು ಹೇಳಿರುವವರನ್ನು ಬಿಟ್ಟು, ಮಿಕ್ಕ ಸಾಮಾನ್ಯ ಜೀವರೆಲ್ಲರಿಗೂ ಒಂದೇ ಕಲ್ಪಸಾಧನೆ ಎಂದು ನಿಶ್ಚಯವು. ಈ ಬ್ರಹ್ಮಕಲ್ಪದಲ್ಲಿ ಸೃಷ್ಟಿಗೆ ಬಂದವರು, ಇದೇ ಕಲ್ಪದಲ್ಲೇ ಮುಕ್ತಿಯನ್ನು ಹೊಂದಬೇಕೆಂಬ ನಿಶ್ಚಯವುಂಟು. ಇವರೆಲ್ಲರಿಗೂ ಬ್ರಹ್ಮದೇವರೊಂದಿಗೆ ವಿರಜಾನದಿ ಸ್ನಾನದಿಂದ ಲಿಂಗಶರೀರ ಭಂಗವಾಗಿ, ಮುಕ್ತಿಯಾಗಬೇಕು. ಹೀಗೆ ನಿಯಮವಿರುವುದರಿಂದ, ಈ ಬ್ರಹ್ಮದೇವರಿಗೆ ೧೦೦ ವರ್ಷಗಳಾದ ಮೇಲೆ, ಈ ಬ್ರಹ್ಮ ಕಲ್ಪವು ಮುಗಿಯುವುದು. ಆ ಸಮಯದಲ್ಲಿ, ಈ ಕಲ್ಪದಲ್ಲಿ ಮುಕ್ತರಾಗಬೇಕಾದ ಜೀವರಿಂದೊಡಗೂಡಿ, ಗರುಡ, ಶೇಷ, ಇಂದ್ರರು– ಮೊದಲಾದ ಈ ಕಲ್ಪದಲ್ಲಿ ಮುಕ್ತರಾಗುವ ತಮ್ಮ ಪರಿವಾರದಿಂದೊಡಗೂಡಿ, ವೈಕುಂಠಲೋಕದ ಮಧ್ಯದಲ್ಲಿರುವ ವಿರಜಾನದಿಯಲ್ಲಿ ಸ್ನಾನವನ್ನು ಮಾಡಿ, ಲಿಂಗಭಂಗವಾದ ಕೂಡಲೇ, ಎಲ್ಲರಿಂದಲೂ ಕೂಡಿ, ಪರಮಾತ್ಮನ ಉದರವನ್ನು ಪ್ರವೇಶ ಮಾಡುವರು. ॥೩೯॥

## ೩. ಭಾವದರ್ಪಣ :-

ನೂರು । ಸ್ನಾನ . "ಪ್ರಧಾನಪರಮಂ ವ್ಯೋಮ್ನೋರಂತರಾ ವಿರಜಾ ನದೀ। ತಜ್ಜಲೇತು ತತಃ ಸ್ನಾನಂ ಲಿಂಗಭಂಗೋ ಭವಿಷ್ಯತೀತಿ"– ಪ್ರಕಾಶ ಸಂಹಿತೋಕ್ತೇಃ। ಉದರ ಪ್ರವೇಶಿಸುವ। "ನಿಜಕ್ರಮಾದ್ಭಗ್ನಲಿಂಗಾಃ ವಿಶಂತಿ ಜಠರಂ ಹರೇಃ" ರಿತ್ಯುಕ್ತೇಶ್ಚ । ಸರೋರುಹಾಸನ- ಬ್ರಹ್ಮ, ಐದುವರೋ-ಹೊಂದೋರೋ. ॥೩೯॥

## ೪ ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-

'ನೂರು' ಇತಿ॥ "ಶೌರಿ॥ ಇತ್ಯನೇನ ವಿರಜಾದ್ವ್ಯವಿಧ್ಯಂ ಅಭಿಪ್ರೈತಿ॥ ವೈಕುಂಠಸ್ಯ ವಿರಜಾಯಾಂ ಅತಾತ್ವಿಕಾನ್ ನಿಮಜ್ಜಯ್ಯತ್ರೈ। ತಾತ್ವಿಕೈರ

ವ್ಯಾಕೃತಾಕಾಶಂ ಗತ್ವಾ. ಬ್ರಹ್ಮಾಂಡಾತ್ ಬಹಿಷ್ಠವಿರಜಾಯಾಂ ನಿಜ ಪರಿವಾರೇಣ ತಾತ್ವಿಕೇನ ಸ್ನಾತಿ ॥ ಬುದ್ಧ್ಯಾ ವಿವೇಕೇನ ಮೂಲಂ ಯೋಜ್ಯಮ್ ॥ ॥೩೯॥

## ಕನ್ನಡಾರ್ಥ

'ಶೌರಿ'– ಈ ಮಾತಿನಿಂದ, ವಿರಜಾನದಿಯಲ್ಲಿ ವೈವಿಧ್ಯವಿದೆಯೆಂದು ಅಭಿಪ್ರಾಯವಾಗುತ್ತದೆ. ವೈಕುಂಠದ ವಿರಜಾನದಿಯಲ್ಲಿ ಅತಾತ್ವಿಕರನ್ನು ಸ್ನಾನಮಾಡಿಸಿ, ತಾತ್ವಿಕರೊಡನೆ ಅವ್ಯಾಕೃತಾಕಾಶಕ್ಕೆ ಹೋಗಿ, ಬ್ರಹ್ಮಾಂಡದ ಬಾಹಿರದಲ್ಲಿರುವ ವಿರಜಾನದಿಯಲ್ಲಿ ನಿಜಪರಿವಾರ ತಾತ್ವಿಕರೊಡನೆ, ಸ್ನಾನ ಮಾಡುತ್ತಾರೆ– ಹೀಗೆ ಅಭಿಪ್ರಾಯ. ॥೩೯॥

**ಶ. ಶ್ರೀಗುರುಹೃದಯ ಪ್ರಕಾಶಿಕೆ :–**

ಸರೋರುಹಾಸನನೆಂಬ ಬ್ರಹ್ಮನು, ತನ್ನ ನೂರು ವರ್ಷ ಆದ ನಂತರ ತನ್ನ ಕಲ್ಪದಲ್ಲಿ ಮುಕ್ತಿ ಹೊಂದುವ ಎಲ್ಲರನ್ನೂ ಕರೆದುಕೊಂಡು ಹೋಗಿ ಶೌರಿ– ಎಂಬ ಶ್ರೀಕೃಷ್ಣನ ಪುರವೆಂಬ ವೈಕುಂಠದ ಮುಂಭಾಗದಲ್ಲಿರುವ ವಿರಜಾ ನದಿಯಲ್ಲಿ, ತನ್ನ ಕೂಡ ಕರೆತಂದ ನಿಜಪರಿವಾರ ಸಹಿತ ಸುಸ್ನಾನ ಮಾಡಿ, ಕರುಣಾಳುವಾದ ಬ್ರಹ್ಮನು ಸರ್ವರನ್ನೂ ಒಳಗೊಂಡು, ಶ್ರೀಹರಿಯ ರೂಪಾಂತರ ಉದರವನ್ನು ಪ್ರವೇಶಿಸುವನು. ॥೩೯॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ನೂರುವರುಷಾನಂತರದಲಿ :–**

ಬ್ರಹ್ಮದೇವರ ನೂರು ವರ್ಷಗಳ ಅವಧಿಗೆ ಒಂದು "ಬ್ರಹ್ಮಕಲ್ಪ"–ವೆಂದು

ಹೆಸರು. "ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿನ ಮುಚ್ಯತೇ"-ಎಂಬ ವಚನಾನುಸಾರ, ಕೃತ-ತ್ರೇತ-ದ್ವಾಪರ-ಕಲಿ-ಎಂಬ ನಾಲ್ಕು ಯುಗಗಳ ಒಟ್ಟು ಅವಧಿಗೆ ಒಂದು "ಮಹಾಯುಗ"-ವೆಂದು ಹೆಸರು. ಇಂತಹ ಸಹಸ್ರ ಮಹಾ ಯುಗಗಳಾದರೆ, ಬ್ರಹ್ಮದೇವರಿಗೆ ಒಂದು ಹಗಲು. ಇನ್ನೊಂದು, ಸಹಸ್ರ ಮಹಾಯುಗಗಳಿಗೆ ಒಂದು ರಾತ್ರಿ. ಈ ಪ್ರಕಾರ ೨೦೦೦ ಮಹಾಯುಗಗಳಿಗೆ ಬ್ರಹ್ಮದೇವರ ಒಂದು ದಿನವಾಗುವುದು. ಇದಕ್ಕೆ "ಬ್ರಹ್ಮದಿನಕಲ್ಪ"-ವೆನ್ನು ದರು. ಇಂತಹ ೩೬೦ ದಿನಗಳಿಗೆ ಬ್ರಹ್ಮದೇವರ ಒಂದು ವರ್ಷ. ಇಂತಹ ೧೦೦ ವರ್ಷಗಳಾದರೆ ಒಂದು ಬ್ರಹ್ಮಕಲ್ಪ. ಅಗಾಧವಾದ ಕಾಲಾವಧಿಯು ಬ್ರಹ್ಮದೇವರ ಆಯುಃಪ್ರಮಾಣದ ೧೦೦ ವರ್ಷಗಳ ಅವಧಿಯೇ ಒಂದು ಬ್ರಹ್ಮಕಲ್ಪವು. ಇಂತಹ ಒಂದು ಬ್ರಹ್ಮಕಲ್ಪವು ಕಾಲನಾಮಕವಾದ ಶ್ರೀ ಪರಮಾತ್ಮನ ಕಣ್ಣು ಎವೆ ಆಡಿಸುವ ಕಾಲವೆಂದು ಶಾಸ್ತ್ರಗಳು ಹೇಳುತ್ತವೆ.

**೨. ಸರೋರುಹಾಸನ :-**

ಶೀಪದ್ಮನಾಭನಾಮಕ ಶ್ರೀಹರಿಯ ನಾಭೀಕಮಲದ ಸಂಜಾತರೇ ಶ್ರೀಬ್ರಹ್ಮದೇವರು. ಆ ನಾಭೀಕಮಲಪೀಠಸ್ಥರಾಗಿರುವುದರಿಂದ, ಬ್ರಹ್ಮ ದೇವರಿಗೆ-**ಸರೋರುಹಾಸನ**-ಎಂದು ಹೆಸರು ಸರ-ಉರುಹ-ಸರೋರುಹ- ನೀರನ್ನು ಭೇದಿಸಿಕೊಂಡು ಬರುವ ಕಮಲ. ಆಸನ-ಪೀಠಸ್ಥರು.

೩. ಶ್ರೀಬ್ರಹ್ಮದೇವರು ತಮ್ಮ ಕಲ್ಪದ ೧೦೦ ವರ್ಷಗಳ ಕಾಲ ಸತ್ಯ. ಲೋಕಾಧಿಪತಿಗಳಾಗಿರುವರು. ಹಿಂದಿನ ಶ್ರೀವಾಯುದೇವರೇ ವರ್ತಮಾನ ಬ್ರಹ್ಮದೇವರು. ಬ್ರಹ್ಮದೇವರು ಶ್ರೀಹರಿಯ ನಾಭೀಕಮಲಸಂಜಾತರಾಗಿ, ಜನಿಸಿದಾಗ, ಅವರ ಜೊತೆಯಲ್ಲಿ ಸೃಷ್ಟಿಗೆ ತರಕಲ್ಪವು ಮುಕ್ತಿಯೋಗ್ಯ ಜೀವರೆಲ್ಲಾ ಬ್ರಹ್ಮನ ಜೊತೆಗೆ ಲಿಂಗಭಂಗದ್ವಾರಾ ಮುಕ್ತಿ ಪಡೆಯುವರು. ಜೀವವರ್ಗದಲ್ಲಿ ಮೂರು ಪ್ರಕಾರ :. (೧) ಅಸೃಜ್ಯರು- ಸೃಷ್ಟಿಗೆ ಬಾರ ದಿರುವರು. (೨) ಸೃಜ್ಯವಲ್ಲಿ, ಅದೇ ಬ್ರಹ್ಮಕಲ್ಪದಲ್ಲಿ ಲಿಂಗಭಂಗ ಹೊಂದು ವವರು. (೩) ಲಿಂಗಭಂಗ ಹೊಂದದೇ ಸಲಿಂಗರಾಗಿ ಶ್ರೀಪರಮಾತ್ಮನ, ಉದರ ಪ್ರವೇಶ ಮಾಡುವ ಜೀವರ ವರ್ಗ. (ಮುಕ್ತರು-ಅಮುಕ್ತರು).

ವರ್ತಮಾನ ಬ್ರಹ್ಮಕಲ್ಪದ ಗರುಡ, ಶೇಷ-ಸರಸ್ವತೀ-ಮುಂತಾದ ಮುಕ್ತಿಯನ್ನು ಹೊಂದುವ ಜೀವರನ್ನು ಬ್ರಹ್ಮದೇವರು ತಮ್ಮೊಡನೆ ಕರೆದೊಯ್ಯುವರು. ವರ್ತಮಾನವಾಯುದೇವರು ಭಾವೀಬ್ರಹ್ಮರು. ಲಾತವ್ಯರು ಭಾವೀ ದುರುತರು. ಅಂತೆಯೇ, ಉಳಿದ ಋಜುಪದಸ್ಥರು– ತತ್ವತ್ರಿಯರು ವರ್ತಮಾನರುದ್ರದೇವರು ಅವರಿಗೆ ಶೇಷ ಪದವಿಯಿಂದ ಮುಕ್ತಿ, ವರ್ತಮಾನ ಪಾರ್ವತಿದೇವಿ ಅವರಿಗೆ ಮುಂದಿನ ವಾರುಣೀಪದವಿಯಿಂದ ಮುಕ್ತಿ, ಇವರಿಗೆ ವರ್ತಮಾನ ಬ್ರಹ್ಮಕಲ್ಪದಲ್ಲಿ ಲಿಂಗಭಂಗವಿಲ್ಲ. ಅವರೆಲ್ಲರೂ (ಅಮುಕ್ತರು) ಸಲಿಂಗರಾಗಿ ಶ್ರೀಪರಮಾತ್ಮನ ಉದರ ಪ್ರವೇಶ ಮಾಡುತ್ತಾರೆ.

**೪. ಶೌರಿಪುರದೊಳಗಿಪ್ಪ :-**

ವೈಕುಂಠ– ಅನಂತಾಸನ- ಶ್ವೇತದ್ವೀಪ-. ಎಂಬ ಮೂರು ಸ್ಥಾನಗಳು ಶ್ರೀಪರಮಾತ್ಮನ ನಿವಾಸಮಂದಿರಗಳು. ಇವು ಮುಕ್ತಿಧಾಮಗಳು. ಇವುಗಳಲ್ಲಿ ವೈಕುಂಠಧಾಮದ ಏಳನೆಯ ಪ್ರಾಕಾರ ಮಧ್ಯದಲ್ಲಿ **ವಿರಜಾ ನದಿಯು** ಪ್ರವಹಿಸುತ್ತದೆ. ಇದು ಶ್ರೀಮಾಯಾರಮಣ ವಾಸುದೇವನ ಬೆವರಿನ ಹೊಳೆ. ಲಕ್ಷ್ಮ್ಯಾತ್ಮಕವಾದದ್ದು. ರಮಾಭಿಮನ್ಯವಾದದ್ದು.

**೫. ನದಿಯಲಿ ಕಾರುಣಿಕ ಸುಸ್ನಾನ :–**

ಇಂತಹ ವಿರಜಾನದಿಯಲ್ಲಿ ತನ್ನ ಕಲ್ಪದಲ್ಲಿ ಮುಕ್ತರಾಗುವ ಜೀವಗಣ ದೊಂದಿಗೆ **(ನಿಜ ಪರಿವಾರ ಸಹಿತ)** ಬ್ರಹ್ಮದೇವರು ಸ್ನಾನ ಮಾಡುವರು. ಆಗ, ಆ ಜೀವರಿಗೆ ಅನಾದಿಕಾಲದಿಂದ ಸ್ವರೂಪದೇಹಕ್ಕೆ ಆವರ್ತಕವಾಗಿರುವ ಲಿಂಗದೇಹವೆಂಬ ಉಪಾಧಿಯು ಭಂಗವಾಗುವುದು. ಈ ವಿಧಾನಕ್ಕೆ **"ಲಿಂಗ ಭಂಗ"**ವೆಂದು ಹೆಸರು. ತದ್ವಾರಾ, ಅನಾದಿಕರ್ಮ ವಿಮೋಚನೆ-ಆ ಜೀವರಿಗೆ. ಈ ಕಾರಣದಿಂದ, ವಿರಜಾನದೀ ಸ್ನಾನವನ್ನು **ಸುಸ್ನಾನ**–ವೆಂದು ಕರೆದಿದ್ದಾರೆ ದಾಸರಾಯರು.

೬. ಮುಖ್ಯ ತತ್ತ್ವಾಭಿಮಾನಿಗಳಾದ ಗರುಡ- ಶೇಷ- ಶತಸ್ಥರ

ಪರ್ಯಂತ ಅಮುಖ್ಯತತ್ತ್ವಾಭಿಮಾನಿಗಳಾದ ಪುಷ್ಕರಾಂತರಾಗಿ, ಬ್ರಹ್ಮ ದೇವರು ವೈಕುಂಠಗತ ವಿರಜಾನದಿಯಲ್ಲಿ ಸ್ನಾನ ಮಾಡುವರು.

ತದನ್ಯ ಅತಾತ್ವಿಕರಾದ ಸಾಂಶರಾದ ಆಜಾನಜದೇವತೆಗಳು-ನಿರಂಶ ರಾದ ಮಾನುಷ ಗಂಧರ್ವಾರಭ್ಯ ತೃಣಾಂತ ಜೀವರು-ಇವರೊಡನೆ ಶ್ವೇತ ದ್ವೀಪಸ್ಥ ಲಕ್ಷ್ಮ್ಯಾತ್ಮಕ ವಿರಜಾನದಿಯಲ್ಲಿ ಸುಸ್ನಾನ.

ಈ ಪ್ರಕಾರ, ಕಾಲಭೇದದಿಂದ ಸ್ಥಾನಭೇದಗಳಲ್ಲಿ, ಸುಸಮೀಚಿನವಾದ ಸ್ನಾನದ ದ್ವಾರಾ ಆ ಜೀವರಿಗೆ ಲಿಂಗಭಂಗ, ತದ್ವಾರಾ, ಕರ್ಮಕ್ಷಯ, ತದ ನಂತರ, ಶ್ವೇತದ್ವೀಪಗತ ಮಾಯಾರಮಣ ವಾಸುದೇವನಿಂದ ಸ್ವರೂಪಗತ ಆನಂದಾವಿರ್ಭಾವರೂಪವಾದ ನಿತ್ಯಾನಂದರೂಪವಾದ ಮುಕ್ತಿ. ಪ್ರಾಪ್ತಿ ವಾಸುದೇವನ ದ್ವಾರಾ, ಈಶ್ವರೇಚ್ಛಾರಣ (ಪರಮಾಚ್ಛಾದಿಕ) ಅಪಸರಣ ವಾಗುವುದು.

ಈ ರೀತಿ, ಲಿಂಗಭಂಗಹೊಂದಿದ ಮುಕ್ತಜೀವರೊಡನೆ ಬ್ರಹ್ಮದೇವರು. ಶ್ರೀವಾಸುದೇವನ ಉದರಪ್ರವೇಶ ಮಾಡುವರು.

ಶ್ರೀವಾಯುದೇವರು ಮುಂದಿನ ಕಲ್ಪ-ಕಲ್ಪಗಳಲ್ಲಿ ಮುಕ್ತರಾಗುವ ಅಮುಕ್ತರ ಸಹಿತ ಸಲಿಂಗರಾಗಿ, ವಾಸುದೇವನ ಉದರ ಪ್ರವೇಶ ಮಾಡುವರು. ಈ ರೀತಿ, ತ್ರಿವಿಧಜೀವರಿಗೂ ಶ್ರೀಪರಮಾತ್ಮನ ಉದರ ಪ್ರವೇಶ. ಅನಂತ, ಕಲ್ಪದ ಮುಕ್ತಜೀವರು ನಾರಾಯಣನಲ್ಲಿ ಉದರಸ್ಥಿತರಾಗಿ, ತಮ್ಮ ತಮ್ಮ ತಾರತಮ್ಯಾನುಸಾರ ಸ್ಥಾನಾಂತರಗಳಲ್ಲಿರುವರು. ॥೩೯॥

## ಪದ್ಯ–೪೦

**ಮೂಲ:–**

**ವಾಸುದೇವನ ಉದರದಲಿ ಪ್ರ ।**
**ವೇಶಗೈದಾನಂತರದಿ ನಿ ।**
**ರ್ದೋಷ ಮುಕ್ತರು ಉದರದಿಂ ಪೊರಮಟ್ಟು ಹರುಷದಲಿ ॥**
**ಈಶನಿಂದಾಜ್ಞವ ಪಡೆದನಂ ।**
**ತಾಸನ ಶ್ವೇತದ್ವೀಪ ಮೋಕ್ಷದಿಂ ।**
**ವಾಸವಾಗಿ ವಿಮುಕ್ತದುಃಖರು ಸಂಚರಿಸುತಿಹರು ॥೪೦॥**

**ಅವತರಣಿಕೆ :–**

ಪ್ರಳಯಾನಂತರ ವಿಷಯವನ್ನು ತಿಳಿಸುತ್ತಾರೆ. ॥೪೦॥

**ಪ್ರತಿಪದಾರ್ಥ :–**

**ವಾಸುದೇವನ**—ಶ್ರೀ ವಾಸುದೇವನಾಮಕ ಪರಮಾತ್ಮನ. **ಉದರದಲಿ ಪ್ರವೇಶಗೈದಾನಂತರದಿ**— ಇಚ್ಛಾವರಣರಹಿತರಾದ ಅನಂತಕಲ್ಪದ ನಿರ್ದೋಷಮುಕ್ತರೂ, ಇಚ್ಛಾವರಣಸಹಿತರಾದ ಲಿಂಗಭಂಗ ಮಾತ್ರ ಹೊಂದಿದ ಮುಕ್ತರು ಉಭಯರೂ ಉದರವನ್ನು ಪ್ರವೇಶ ಮಾಡಿದ ಮೇಲೆ, **ನಿರ್ದೋಷಮುಕ್ತರು** — ವಾಸುದೇವನಿಂದ ಇಚ್ಛಾವರಣಾಪಸರಣ ಮಾಡಲ್ಪಟ್ಟವರಾಗಿ, ನಿರ್ದೋಷಮುಕ್ತರೆಂದೆನಿಸಿಕೊಂಡು, **ಉದರದಲಿ ಪೊರಮಟ್ಟು**—ಉದರದಿಂದ ಹೊರಗೆ ಬಂದ ವರಾಗಿ, **ಈಶನಿಂದ**—ಸರ್ವನಿಯಾಮಕನಾದ ವಾಸುದೇವನಿಂದ, **ಆಜ್ಞವ ಪಡೆದು**—ಆಜ್ಞಾನವನ್ನು ಹೊಂದಿದವರಾಗಿ, **ಹರುಷದಲಿ**—ತಮ್ಮ ಸ್ವರೂಪಗತಆನಂದದಲ್ಲಿ, **ಅನಂತಾಸನ**—ಅನಂತಾಸನದಲ್ಲಿ ಕೆಲವು ಅಧಿಕಾರಿಗಳು, **ಶ್ವೇತದ್ವೀಪ**—ಶ್ವೇತದ್ವೀಪದಲ್ಲಿ ಕೆಲವು ಅಧಿಕಾರಿಗಳು, **ಮೋಕ್ಷದಿ**—ಮೋಕ್ಷಸಾಂಕೇತವಾದ

ವೈಕುಂಠದಲ್ಲಿ ಕೆಲವು ಅಧಿಕಾರಿಗಳು, **ವಾಸವಾಗಿ**—ವಾಸಿಸುವವರಾಗಿ, **ವಿನುಮುಕ್ತದುಃಖರು**—ದುಃಖದಿಂದ ದೂರರಾದ ಮುಕ್ತರು, **ಸಂಚರಿಸು ತಿಹರು**—ಸಂಚಾರಮಾಡುತ್ತಾ ಇರುತ್ತಾರೆ. ॥೪೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಪ್ರಳಯಾನಂತರ ವಿಚಾರ ಹೇಳತಾರೆ.

ಪರಮಾತ್ಮನಾದ ವಾಸುದೇವನ ಇಚ್ಛಾವರಣರಹಿತರಾದ ಅನಂತ ಕಲ್ಪದ ಮುಕ್ತರೇನು, ಇಚ್ಛಾವರಣ ಸಹಿತರಾದ ಲಿಂಗಭಂಗ ಮಾತ್ರ ಐದಿದ ದೋಷಮುಕ್ತರಾದ ಮುಕ್ತರೇನು. ಈ ಉಭಯರೂ ಉದರಪ್ರವೇಶ ಮಾಡಿದ ಅನಂತರದಲ್ಲಿ, ವಾಸುದೇವ ನಾರಾಯಣನಲ್ಲಿ ಗುಂಜಾಪುಂಜವತ್ ಪಕೀಳಿಸ ತಾರೆ. ನಂತರ, ಸರ್ವರೂ ತದ್ದ್ವಾರಾ ನಾರಾಯಣನ ಹೃದಯದಿಂದ ಹೊರಟು ಪದ್ಮಸೃಷ್ಟಿಕಾಲದಲ್ಲಿ ಮಾಯಾನಾಮಕರಾದ ಲಕ್ಷ್ಮೀದೇವೇರಿಗೆ ಈಶನಾದ ವಾಸುದೇವನಿಂದ ಇಚ್ಛಾವರಣ ಅಪಸರಣ ಮಾಡಲ್ಪಟ್ಟು, ದೋಷ ರಹಿತರಾದ ಮುಕ್ತರು-ಏತ ಕರಸಿದವರಾಗಿ, ವಾಸುದೇವನ ಆಜ್ಞಾ ಹೊಂದಿ, ಇವರೇನು, ತದನ್ಯರಾದ ಅನಂತಕಲ್ಪದ ವಿಶೇಷಾಕಾರರಾದ ಮುಕ್ತಜೀವರೇನು, ತಮ್ಮ ತಮ್ಮ ಸ್ವರೂಪಾನಂದದಲ್ಲಿ, ಅನಂತಾಸನದಲ್ಲಿ ಕೆಲವು ಅಧಿಕಾರಿಗಳು, ಶ್ವೇತದ್ವೀಪದಲ್ಲಿ ಕೆಲವು ಅಧಿಕಾರಿಗಳು, ಮೋಕ್ಷಸಾಂಕೇತವಾದ ವೈಕುಂಠದಲ್ಲಿ ಕೆಲವು ಅಧಿಕಾರಿಗಳು ಆವಾಸರಾಗಿ, ಸಂಚಾರ ಮಾಡತಾ ಇರತಾರೆ. ॥೪೮॥

### ೨. ಭಾವಪ್ರಕಾಶಿಕೆ :-

ಮುಕ್ತರಾದವರು ಲಿಂಗಭಂಗಾನಂತರದಲ್ಲಿ, ಭಗವದುದರಪ್ರವೇಶ ಮಾಡುವರೆಂದು ಮೇಲಿನ ಪದ್ಯದಲ್ಲಿ ಹೇಳಿದರು. ಆಮೇಲೆ, ಅವರು ಏನು

ಮಾಡುವವರೆಂದರೆ; ಪರಮಾತ್ಮನ ಉದರದಿಂದ ಹೊರಗೆ ಬಂದು, ಸಂತೋಷದಿಂದ ಅನಂತಾಸನ, ಶ್ವೇತದ್ವೀಪ- ಮೊದಲಾದ ಸ್ಥಳಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುತ್ತಾ ಸ್ವರೂಪಾನಂದವನ್ನು ಅನುಭವಿಸುತ್ತಾ, ಮುಕ್ತಿಯಲ್ಲಿ ವಾಸ ಮಾಡುವರು. ॥೯೦॥

**೩. ಭಾವದರ್ಪಣ :-**

ವಾಸುದೇವ । ಪೊರಮಟ್ಟು-ಹೊರಗೆ ಹೊರಟು । "ಬಹಿರ್ನಿರ್ಗತ್ಯತೇ ಜೀವಾಃ ವಾಸುದೇವಾಜ್ಞಯಾ ತದಾ । ವಾಸಂ ಚಕ್ರುಯಥಾಯೋಗ್ಯಂ ಶ್ವೇತ ದ್ವಿಪಾದಿಕೇಷುತೇತಿ"- ಪದ್ಮಪುರಾಣೋಕ್ತೇಃ । ವಿಮುಕ್ತದುಃಖರು- ಎಂದರೆ ದುಃಖರೂಪವಾದ ಲಿಂಗದೇಹದಿಂದ ಮುಕ್ತರಾದವರು ಎಂಬರ್ಥ. ॥೯೦॥

**೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-**

ಯಥೇಷ್ಟಂ ಅಸಂಚಾರಾತ್ ಅಮುಕ್ತ ಇತ್ಯೇವ ॥ ಅತಃ ಉತ್ತರಾವಸ್ಥಾಂ ಅನುವದತಿ-"ವಾಸುದೇವೇತಿ" ॥"ಪೊರಮಟ್ಟು"-ಹೊರ ಹೊರಟು. "ಮೇಶ"- ರಮೇಶ. (ಮಾ-ರಮಾ) "ಸಿತ-ಶ್ವೇತ. ॥೯೦॥

## ಕನ್ನಡಾರ್ಥ

ಸ್ವೈರವಿಹಾರ ಮುಂತಾದುವುಗಳಿಲ್ಲದಿರುವುದರಿಂದ "ಅಮುಕ್ತ"ರೆಂದೇ ಕರೆಯುತ್ತಾರೆ. ಆದುದರಿಂದ, ಮುಕ್ತಿಯಲ್ಲಿಯ ಅವಸ್ಥೆಯನ್ನು "ವಾಸುದೇವನ"-ಈ ಶ್ಲೋಕದಿಂದ ನಿರೂಪಿಸುತ್ತಾರೆ.

"ಪೊರಮಟ್ಟು"-ಹೊರಹೊರಟು, ಸಿತ—ಶ್ವೇತ. ॥೯೦॥

**೫. ಗುರುಹೃದಯ ಪ್ರಕಾಶಿಕೆ :-**

ವಾಸುದೇವನ ಉದರಪ್ರವೇಶಾ ನಂತರ, ಪುನಃ ಸೃಷ್ಟ್ಯಾದಿ ಭಾಗದಲ್ಲಿ

ನಿರ್ದೋಷರೆಂಬ ಲಿಂಗಶರೀರಮುಕ್ತರು ಉದರದಿಂದ ಹೊರಗೆ ಹೊರಟು, ರಮಾಪತಿಯ ಆಜ್ಞೆಯನ್ನು ಪಡೆದು, ಶ್ವೇತದ್ವೀಪಗತಮೂರ್ತಿ ಸಂದರ್ಶನಾನಂತರ, ಸ್ವಾನಂದಪೂರ್ಣರಾಗಿ, ಅನಂತಾಸನ, ಶ್ವೇತದ್ವೀಪ ಮೊದಲಾದ ನಿರ್ದುಃಖಾನಂದದಿಂದ ಸಂಚರಿಸುತ್ತಿರುವರು.

**ಆದ್ಯಸ್ಥಿರ ಚರಾಣಾಂ ಯೋ ವೇದಗರ್ಭಃ ಸಹರ್ಷಿಭಿಃ ।**
**ಯೋಗೇಶ್ವರೈಃ ಕುಮಾರಾದ್ಯೈಸ್ಸಿದ್ಧೈರ್ಯೋಗ ಪ್ರವರ್ತಕೈಃ ॥**
**ಭೇದ ದೃಷ್ಟ್ಯಾಭಿಮಾನೇನ ನಿಸ್ಸಂಗೇನಾಪಿ ಕರ್ಮಣಾ ।**
**ಕರ್ತೃತ್ವಾತ್ಸಗುಣಂ ಬ್ರಹ್ಮಪುರುಷಂ ಪುರುಷರ್ಷಭಃ ॥**
**ಸಸಂಗತ್ಯ ಪುನಃಕಾಲೇ ಕಾಲೇನೇಶ್ವರ ಮೂರ್ತಿನಾ ।**
**ಜಾತೇ ಗುಣವ್ಯತಿಕರೇ ಯಥಾ ಪೂರ್ವಂ ಪ್ರಜಾಯತೇ ॥**

—ಎಂಬ **ಭಾಗವತಾರ್ಥ** ವಿವರಿಸಲ್ಪಟ್ಟಿತು. ॥೪೦॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಲಿಂಗಭಂಗವಾದ ನಂತರ, ಮುಕ್ತಜೀವರು ಶ್ವೇತದ್ವೀಪಗತ ವಾಸುದೇವನಾಮಕ ಶ್ರೀಪರಮಾತ್ಮನ ಉದರವನ್ನು ಪ್ರವೇಶಿಸುವರು. ಅನಂತರ, ಶ್ರೀವಾಸುದೇವನ ಪರಮಾನುಗ್ರಹದಿಂದ ಪರಮಾಚ್ಛಾದಿಕ ಎಂಬ ಆವರಣವು ಅಪಸರಣವಾಗುವುದು. ಆಗ ಅವರು ಸ್ವರೂಪಗತಾನಂದಾವಿರ್ಭಾವರೂಪವಾದ ನಿತ್ಯಾನಂದವನ್ನು ಹೊಂದುವರು. ಅವರಿಗೆ **ನಿರ್ದೋಷಮುಕ್ತ**ರೆಂದು ಹೆಸರು. ಈಶ್ವರೇಚ್ಛಾವರಣ ಸಹಿತರಾಗಿರುವುದೇ ಅವರಿಗೆ ದೋಷವು (ನ್ಯೂನತೆಯು). ಅದರ ಅಪಸರಣವಾಗದ ಹೊರತು, ಮುಕ್ತ್ಯಾನಂದ ಭೋಗವಿಲ್ಲ.

೨. ವಾಸುದೇವನ ಉದರದಿಂದ ಹೊರಬಂದು, ಮೂಲರೂಪಿಯಾದ ಶ್ರೀಮನ್ನಾರಾಯಣನ ಉದರವನ್ನು ಪ್ರವೇಶಿಸುವರು. ಅಲ್ಲಿ, ಶ್ರೀಪರಮಾತ್ಮ

ಸನ್ನಿಧಿಯನ್ನು ಸೇರುವರು. ಶ್ರೀವಾಸುದೇವನು ಮುಕ್ತ ಪ್ರದರೂಪನು. ಶ್ರೀವಾಸುದೇವನ ಉದರವನ್ನು ಸೇರಿದ ಜೀವರಿಗೆ ಶ್ರೀಪರಮಾತ್ಮನ ಇಚ್ಛಾವರಣರೂಪವಾದ **ಪರಮಾಚ್ಛಾಧಿಕೆ** ಎಂಬ ಕೊನೆಯ ಆವರಣವಿರುವುದು. ಇದು ಸೃಷ್ಟಿಯ ಆರಂಭದಲ್ಲಿ ಶ್ರೀಪರಮಾತ್ಮನು ಅಪ್ರಾಕೃತಸ್ವರೂಪವಾದ ಜೀವರ ಸ್ವರೂಪಶರೀರಕ್ಕೆ ತನ್ನ ಇಚ್ಛಾಮಾತ್ರದಿಂದ ಅನಾದಿಯಾದ ಪ್ರಾಕೃತ ರೂಪವಾದ ಲಿಂಗದೇಹದ ಉಪಚಯವೆಂಬ (*ಲಿಂಗೋಪಾದಾನ ಕ್ರಿಯೆ*) ಸಂಬಂಧಿಸುವಾಗ, ಹಾಕುವ ಮಾಯಾರೂಪವಾದ ಶ್ರೀಹರಿಯ ಇಚ್ಛಾವರಣವು. ಈ ಇಚ್ಛಾವರಣವನ್ನು ಶ್ರೀವಾಸುದೇವನು ಶ್ರೀಲಕ್ಷ್ಮೀದೇವಿಯರ ದ್ವಾರಾ, ಅಪಸರಣ ಮಾಡುವನು.

3. ನಂತರ ವಾಸುದೇವನ ಉದರದಿಂದ ಇಚ್ಛಾವರಣರಹಿತವಾದ ಮುಕ್ತಿಯೋಗ್ಯ ಚೇತನರು ಸರ್ವಾಶ್ರಯ ಭೂತನಾದ **ಶ್ರೀಮನ್ನಾರಾಯಣನನ್ನು** ಸೇರುವರು. (ವಾಸುದೇವನಿಂದ ನಾರಾಯಣದೇವರಿಗೆ ಕೊಡಲ್ಪಡುವರು)

4. ಅಲ್ಲಿ ಸರ್ವಜೀವರ ನಿಯಾಮಕನಾದ (ಶ್ರೀಶ) ಶ್ರೀಮನ್ನಾರಾಯಣನ ಆಜ್ಞೆಯನ್ನು ಪಡೆಯುವರು. ಇಚ್ಛಾವರಣವು ಅಪಸರಣವಾದ ಕೂಡಲೇ ಶ್ರೀಮನ್ನಾರಾಯಣನು ಜೀವರ ಸ್ವರೂಪಗತ ಆನಂದಾವಿರ್ಭಾವ ರೂಪವಾದ ಮುಕ್ತಿಸುಖವನ್ನು ನೀಡುವನು.

5. ನಂತರ. ತಮ್ಮ ತಮ್ಮ ಸ್ವರೂಪಗತ ತಾರತಮ್ಯಾನುಸಾರ, ಆ ಜೀವರು. ಅನಂತಾಸನ ಶ್ವೇತದ್ವೀಪ ವೈಕುಂಠ ಮೊದಲಾದ ನಿತ್ಯಮುಕ್ತ ಸ್ಥಾನಗಳಲ್ಲಿ ಆವಾಸವಾಗಿ. ಸಾಂಸಾರಿಕ ದುಃಖದಿಂದ ದೂರವಾಗಿ, ನಿತ್ಯಾನಂದ ರೂಪವಾದ ಸ್ವಸ್ವರೂಪಾನಂದ ಆವಿರ್ಭಾವ ರೂಪವಾದ ಮೋಕ್ಷ ಸುಖವನ್ನು ಅನುಭವಿಸುತ್ತಾ ಮುಕ್ತಿ ಧಾಮಗಳಲ್ಲಿ ಸಂಚರಿಸುತ್ತಿರುತ್ತಾರೆ. ॥40॥

## ಪದ್ಯ ೪೧

**ಮೂಲ :**

> **ಸತ್ತ್ವ ಸತ್ತ್ವ ಮಹಾಸುಸೂಕ್ಷ್ಮವು ।**
> **ಸತ್ತ್ವ ಸತ್ತ್ವಾತ್ಮಕ ಕಳೇವರ ।**
> **ಸತ್ಯಲೋಕಾಧಿಪನೆನಿಪಗತ್ಯಲ್ಪವೆರಡು ಗುಣ ॥**
> **ಮುಕ್ತಿಯೋಗ್ಯವಿದಲ್ಲಜಾಂಡೋ ।**
> **ತ್ಪತ್ತಿಕಾರಣವಲ್ಲ ಹರಿಪ್ರೀ ।**
> **ತ್ಯರ್ಥವಾಗಿ ಜಗದ್ವ್ಯಾಪಾರಗಳ ಮಾಡುವನು ॥** ॥೪೧॥

**ಅವತರಣಿಕೆ :**

ಬ್ರಹ್ಮದೇವರ ಸ್ಥೂಲಶರೀರದ ವಿಚಾರವನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

**ಪ್ರತಿಪದಾರ್ಥ :-**

**ಸತ್ತ್ವ** = ಸೃಷ್ಟಿಗೆ ಕಾರಣವಾದ ಸತ್ತ್ವಗುಣ ಒಂದು. **ಸತ್ತ್ವ** = ಇದರಲ್ಲಿ ವಿಭಾಗವಾಡಿದ ಸತ್ತ್ವ, **ಮಹಾಸುಸೂಕ್ಷ್ಮವು** ಮತ್ತು ಇದರಲ್ಲಿ ವಿಭಾಗವಾದ ಸಮೀಚೀನವಾದ ಅತ್ಯಂತ ಸೂಕ್ಷ್ಮಾಂಶಯುತವಾದ ಸತ್ತ್ವವು, **ಸತ್ತ್ವ ಸತ್ತ್ವಾತ್ಮಕ** = ಈ ರೀತಿ ಮೂರುಪ್ರಕಾರವಾಗಿ ವಿಭಾಗವಾದ ಸತ್ತ್ವಪ್ರಾಚುರ್ಯಗುಣ, **ಅತ್ಯಲ್ಪವೆರಡು ಗುಣ** = ಈ ಸತ್ತ್ವಕ್ಕೆ ಸದೃಶವಲ್ಲದ ಅತ್ಯಲ್ಪ ಪ್ರಮಾಣದ ರಜೋಗುಣ ಮತ್ತು ತಮೋಗುಣ ಇವೆರಡು ಗುಣಗಳು. **ಕಳೇವರ** = ಈ ಪ್ರಕಾರ ಗುಣತ್ರಯಗಳಿಂದ ನಿರ್ಮಿತವಾದ ಮಹತ್ತತ್ತ್ವಾತ್ಮಕ ಶರೀರವುಳ್ಳವನೆಂದು, **ಸತ್ಯಲೋಕಾಧಿಪನು** = ಸತ್ಯಲೋಕಕ್ಕೆ ಪ್ರಭುವಾಗಿರುವ ಶ್ರೀಚತುರ್ಮುಖ ಬ್ರಹ್ಮದೇವರು

**ಎನಿಪಗೆ** = ಎಂದು ಕರೆಸಿಕೊಂಬುವರಿಗೆ. **ಮುಕ್ತಿಯೋಗ್ಯವಿದಲ್ಲ** = ಬ್ರಹ್ಮದೇವರ ಶರೀರಕ್ಕೆ ಬದ್ಧವಾಗಿರುವ ಸತ್ತ್ವಗುಣ, ಲಿಂಗಭಂಗರಾದ ಮುಕ್ತರು, ಸತ್ತ್ವಗುಣದಿಂದ ನಾನಾ ದೇಹಗಳನ್ನು ಧರಿಸಿ, ಭೋಗ ಮಾಡ ತಕ್ಕ ಸತ್ತ್ವಗುಣ ಯಾವುದದೆ ಅದು ಪ್ರತ್ಯೇಕ, ಈ ಸತ್ತ್ವಗುಣ ಬ್ರಹ್ಮದೇವರ ಶರೀರವಾಗಲಿಲ್ಲ. ಬ್ರಹ್ಮನ ಶರೀರಕ್ಕೆ ಬದ್ಧವಾಗಿರುವ ಸತ್ತ್ವಗುಣ ಬ್ಯಾರೆ, **ಅಜಾಂಡೋತ್ಪತ್ತಿಗೆ ಕಾರಣವಲ್ಲ** - ಬ್ರಹ್ಮಾಂಡದ ಉತ್ಪತ್ತಿಗೆ ಕಾರಣವಾದ ಗುಣತ್ರಯಗಳಿಂದ ಆದ ಶರೀರವಲ್ಲವು, **ಹರಿಪ್ರೀತ್ಯರ್ಥವಾಗಿ** = ಬಿಂಬ ನಾದ ಶ್ರೀಪರಮಾತ್ಮನ ಕೇವಲ ಪ್ರೀತ್ಯರ್ಥವಾಗಿ. **ಜಗದ್ವ್ಯಾಪಾರಗಳ** = ಸೃಷ್ಟ್ಯಾದಿ ಜಗತ್ತಿನ ಕ್ರಿಯೆಗಳನ್ನು. **ಮಾಡುವನು** = ಮಾಡುತ್ತಾರೆ.

॥41॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಸೃಷ್ಟಿಗೆ ಕಾರಣವಾದ ಸತ್ತ್ವಗುಣವೊಂದು, (ಸತ್ತ್ವ). ಇದರಲ್ಲಿ ವಿಭಾಗ ಮಾಡಿದ ಸತ್ತ್ವ (ಸತ್ತ್ವ). ಮತ್ತು ಇದರಲ್ಲಿ ವಿಭಾಗ ಮಾಡಿದ ಶ್ರೇಷ್ಠವಾದ, ಸಮೀಚೀನವಾದ ಸೂಕ್ಷ್ಮ ಸತ್ತ್ವವು ಎಂಬೋಣದರಿಂದ (ಮಹಾಸುಸೂಕ್ಷ್ಮವು), ಒಂದು ಸತ್ತ್ವಗುಣವನ್ನ ಮೂರಾವರ್ತಿ ಶೋಧನ ಮಾಡಿದರೆ, ಆದರಿಂದ ನೀತ ನಿರ್ದೋಷವಾದ ಸತ್ತ್ವಗುಣ ಈ ಪ್ರಕಾರ ಸತ್ತ್ವದಲ್ಲಿ ವಿಭಾಗವಾದ ಸತ್ತ್ವದ ಕೂಡ ಗಣನೆಗೆ ಯೋಗ್ಯವಲ್ಲದ, ಅತ್ಯಲ್ಪ ಎಂದು ಹೇಳೋದಕ್ಕೆ ಮಾತ್ರ ಸಾಧ್ಯವಾದ, ರಜೋಗುಣ, ತಮೋಗುಣ, ಎರಡು ಗುಣಗಳು (ಅತ್ಯಲ್ಪವೆರಡು ಗುಣ)), ಅಂತೂ. ಮೂರುಗುಣಗಳು ಸೇರಿ, ಮಹತ್ತತ್ತ್ವಾತ್ಮಕ ಶರೀರವುಳ್ಳವನೆಂದು (ಕಳೇವರ), ಸತ್ಯಲೋಕಾಧಿಪ ಬ್ರಹ್ಮದೇವರು (ಸತ್ಯಲೋಕಾಧಿಪನು), ಎನಿಸಿಕೊಂಬೋವರಿಗೆ (ಎನಿಪಗೆ) ಬ್ರಹ್ಮದೇವರ ಶರೀರಕ್ಕೆ ಬದ್ಧವಾಗಿರುವ ಸತ್ತ್ವಗುಣ, ಲಿಂಗಭಂಗರಾದ ಮುಕ್ತರು, ಸತ್ತ್ವಗುಣದಿಂದ ನಾನಾ ದೇಹಗಳ ಧರಿಸಿ ಭೋಗ ಮಾಡತಕ್ಕ

ಸತ್ತ್ವಗುಣದಾವುದದೆ, ಅದು ಪ್ರತ್ಯೇಕ. ಈ ಸತ್ತ್ವಗುಣ ಬ್ರಹ್ಮನ ಶರೀರವಾಗಲಿಲ್ಲ. ಬ್ರಹ್ಮನ ಶರೀರಕ್ಕೆ ಬದ್ಧವಾಗಿರುವ ಸತ್ತ್ವಗುಣ ಬ್ಯಾರೆ, (ಅಂಡೋತ್ಪತ್ತಿಗೆ ಕಾರಣವಲ್ಲ) ಮತ್ತು ಬ್ರಹ್ಮನ ಶರೀರಕ್ಕೆ ಬದ್ಧ ಸತ್ತ್ವ, ರಜ, ತಮೋಗುಣಗಳು ಬ್ರಹ್ಮಾಂಡದ ಉತ್ಪತ್ತಿಗೆ ಕಾರಕವಾದ ಗುಣತ್ರಯಗಳಿಂದ ಆದ ಶರೀರವ ಎಂದರೆ, ಅಂಥ ಗುಣತ್ರಯಗಳಿಂದಲೂ ಆದ ಶರೀರವಲ್ಲ. ಸರ್ವವಿಲಕ್ಷಣ ಶರೀರವೆಂದರ್ಥ. ಈ ಜಗತ್ತಿನ ಸೃಷ್ಟಿ ಮಾಡೋ ವ್ಯಾಪಾರಗಳ (ಜಗದ್ವ್ಯಾಪಾರಗಳ), ಗುಣತ್ರಯ ಪ್ರತಿಬಂಧಕದಿಂದ ಮಾಡತಾರಾ ಎಂದರೆ, ತತ್ಪ್ರತಿಬಂಧಕದಿಂದಲೂ ಮಾಡೋದಿಲ್ಲ. ಗುಣತ್ರಯಗಳ ಪ್ರತಿಬಂಧಕವೂ ಇಲ್ಲ. ಬಿಂಬನಾದ ಶ್ರೀಪರಮಾತ್ಮನ ಪ್ರೀತ್ಯರ್ಥವಾಗಿ (ಹರಿಪ್ರೀತ್ಯರ್ಥವಾಗಿ) ಜಗದ್ವ್ಯಾಪಾರಗಳ ಮಾಡೋವರಾಗತಾರೆ (ಮಾಡುವರು). ಬ್ರಹ್ಮನ ಶರೀರಕ್ಕೆ ಬದ್ಧವಾಗಿರುವ ಗುಣತ್ರಯಗಳು, ಚರಾಚರ ಪ್ರಪಂಚಕ್ಕೆ ವಿಲಕ್ಷಣವಾದ ಗುಣತ್ರಯಗಳು. ಇಲ್ಲಿಗೆ ಋಜುಗಳ ವಿಚಾರ ಮುಗಿಯಿತು. ಇವರಿಗೆ 200ಕಲ್ಪ ಆದ್ಯಂತ ಸಾಧನ ವಿಚಾರ ಹೇಳಿದಂತಾಯಿತು. ಇನ್ನು ರುದ್ರಾದಿಗಳ ಸಾಧನ ವಿಚಾರ ಹೇಳತಾರೆ.

## 2. ಭಾವಪ್ರಕಾಶಿಕೆ :–

ಸತ್ತ್ವ ಸತ್ತ್ವ ಮಹಾಸುಸೂಕ್ಷ್ಮವು– "ಸತ್ತ್ವ ಸತ್ತ್ವ ಮಹಾಸತ್ತ್ವ ಸೂಕ್ಷ್ಮಸತ್ತ್ವಶ್ಚತುರ್ಮುಖಃ ಎಂಬ ಗರುಡಪುರಾಣದ ವಾಕ್ಯದಂತೆ, ವಿಶುದ್ಧ ಸತ್ತ್ವವೆಂದು ಬ್ರಹ್ಮದೇವರಿಗೆ ಹೆಸರು. ಅದರ ವಿವರ ಸಾತ್ತ್ವಿಕ ಸಾತ್ತ್ವಿಕ ಸಾತ್ತ್ವಿಕ ಸೂಕ್ಷ್ಮಸಾತ್ತ್ವಿಕ ಸ್ವರೂಪಾತ್ಮಕವಾದುದು, ಅವರ ಸ್ವರೂಪ ದೇಹವೆಂದರ್ಥ. ಸತ್ಯಲೋಕಾಧಿಪತಿ ಎನಿಸುವ ಬ್ರಹ್ಮದೇವರಿಗೆ ರಜೋಗುಣ ಮತ್ತು ತಮೋಗುಣಗಳೆರಡೂ ಅತ್ಯಲ್ಪ ಅಂದರೆ ಬಹಳ ಸೂಕ್ಷ್ಮವಾಗಿರುವುವು. ಬ್ರಹ್ಮಪದವಿಯಲ್ಲಿರುವಾಗ ಮಾಡಿದ. ಈ ಒಂದು ಕಲ್ಪ ಸಾಧನೆಯೂ, ಮುಕ್ತಿಯಲ್ಲಿ ಅನುಭವಿಸುವ ಸುಖಸಾಧನಕ್ಕಾಗಿ ಅಲ್ಲ (ಮುಕ್ತಿ ಭೋಗ್ಯವಲ್ಲ) ಬ್ರಹ್ಮಾಂಡೋತ್ಪತ್ತಿಗೆ ಕಾರಣವಲ್ಲ. ಕೇವಲ ಶ್ರೀಹರಿಯ ಪ್ರೀತ್ಯರ್ಥವಾಗಿ ಸೃಷ್ಟ್ಯಾದಿ ಜಗದ್ವ್ಯಾಪಾರಗಳನ್ನು ಭಗವತ್ಸೇವೆ ಎಂ

ಅನುಸಂಧಾನದಿಂದ ಮಾಡುವರೆಂದರ್ಥ.

ಸತ್ತ್ವಗುಣ, ರಜೋಗುಣ ಮತ್ತು ತಮೋಗುಣವೆಂಬ ಮೂರುಗುಣಗಳಲ್ಲಿ ಗುಣಗಳ ಪ್ರಾಧಾನ್ಯದಿಂದ ಸತ್ತ್ವಗುಣಪ್ರಧಾನರು ಸಾತ್ವಿಕರೆಂತಲೂ, ರಜೋಗುಣ ಪ್ರಧಾನರು ರಾಜಸರೆಂತಲೂ, ತಮೋಗುಣ ಪ್ರಧಾನರಾದವರು ತಾಮಸರೆಂತಲೂ ವ್ಯವಹರಿಸಲ್ಪಡುವರು. ಒಬ್ಬೊಬ್ಬರಲ್ಲೂ ಮೂರುಗುಣಗಳು ಇದ್ದೇ ಇರೀವುವು. ಸತ್ತ್ವಗುಣವಧಿಕವಾಗಿ, ರಜೋಗುಣ ಮತ್ತು ತಮೋಗುಣಗಳು ಅತ್ಯಲ್ಪವಾಗಿ ಇರುವವರು ಸಾತ್ತ್ವಿಕ ಸಾತ್ತ್ವಿಕ ರಾಜಸರೆಂದೂ ವ್ಯವಹರಿಸಲ್ಪಡುವರು. ಇದರಂತೆಯೇ, ಸಾತ್ತ್ವಿಕ ಸಾತ್ತ್ವಿಕ ತಾಮಸರೆಂಬಿವೇ ಮೊದಲಾದ ಭೇದಗಳುಂಟು. ಈ ಭೇದಗಳಲ್ಲಿ ಬ್ರಹ್ಮದೇವರು ಸಾತ್ತ್ವಿಕ ಸಾತ್ತ್ವಿಕ ಸೂಕ್ಷ್ಮಸಾತ್ವಿಕರೆಂಬ ಪ್ರಭೇದದಲ್ಲಿ ಸೇರಿದವರು. ರಾಜಸ ತಾಮಸ ಗುಣಗಳು ಅವರಲ್ಲಿ ಅತ್ಯಲ್ಪವಾಗಿರುವುವು. ವಾಯುಪದವಿಯಲ್ಲಿಯೇ ಇವರ ಸಾಧನೆಗಳೆಲ್ಲಾ ಪೂರ್ತಿಯಾಗುವುವು. ಬ್ರಹ್ಮಪದವಿಗೆ ಬಂದ ಮೇಲೆ, ಮಾಡುವ ಸಾಧನವು ಕೇವಲ ಶ್ರೀಹರಿ ಪ್ರೀತಿಗೋಸ್ಕರವಾಗಿ. ಇದರಿಂದ, ಮುಕ್ತಿ ಸಾಧನವೂ ಅಲ್ಲ. ಬ್ರಹ್ಮಾಂಡದ ಉತ್ಪತ್ತಿ ಕಾರಣದಿಂದಲೂ ಅಲ್ಲ. ಮುಕ್ತಿಸಾಧನವೆಲ್ಲಾ ವಾಯುಪದವಿಯ ಪರ್ಯಂತದಲ್ಲೇ ಪೂರೈಸಿರುವುದೆಂದು ತಾತ್ಪರ್ಯ. ॥41॥

## 5. ಶ್ರೀಗುರುಹೃದಯಪ್ರಕಾಶಿಕೆ :—

ಸತ್ಯಲೋಕಾಧಿಪನೆನಿಪ ಬ್ರಹ್ಮದೇವರು ಸತ್ತ್ವ ಸತ್ತ್ವಭಾಗದಲ್ಲೂ ಮಹಾಸುಸೂಕ್ಷ್ಮ ಸತ್ತ್ವಾತ್ಮಕ ಶರೀರ ಉಳ್ಳವನು. ಅದರಲ್ಲೂ ರಜಸ್ತಮವೆಂಬ ಎರಡು ಗುಣಗಳು ಅತ್ಯಲ್ಪವಾಗಿರುವುವು. ಆ ಬ್ರಹ್ಮದೇವನು ಮಾಡುವ ಜಗತ್ಸೃಷ್ಟ್ಯಾದಿ ವ್ಯಾಪಾರಗಳು ಶ್ರೀಹರಿ ಪ್ರೀತ್ಯರ್ಥವಾಗಿಯೇ ಹೊರತು, ಮುಕ್ತಿಗೋಸ್ಕರವಲ್ಲ ಎಂದರೆ, ಮೋಕ್ಷ ಸಂಪಾದನಾರ್ಥವಾಗಿ ಅಲ್ಲ. ಬ್ರಹ್ಮಾಂಡಾದಿಗಳನ್ನು ಸೃಷ್ಟಿಸಬೇಕೆಂಬ ಕಾಮನೆಯೂ ಸಹ ಅಲ್ಲವೆಂದು ತಿಳಿಯಬೇಕು.

**ಪ್ರಮಾಣಗಳು :**

(1) ಯಾವ ದ್ಜ್ಞಾನಂ ಚಾಸ್ತಿಮೋ ವಾಸುದೇವೇ ತಾವದ್ಜ್ಞಾನಂ ವಾಯುದೇವಸ್ಯ ಚಾಸ್ತಿ। ಯಾವದ್ಜ್ಞಾನಂ ವಾಯುದೇವಸ್ಯ ಚಾಸ್ತಿ ತಾವ ದ್ಜ್ಞಾನಂ ಜ್ಞಾನವತಾಂ ಋಜೂಣಾಂ ॥

(2) ಕ್ರಮೇಣೈವ ಜ್ಞಾನಿನಾಂ ವೈ ಋಜೂನಾಂ ಅಸ್ಪಷ್ಟರೂಪೇ ಜ್ಞಾನ ವತೇ ವಿಶೇಷತಃ । ಸೌರಿಪ್ರಕಾಶೇವ ಯಥೈವ ದರ್ಶನಂ ತಥಾ ನುಮಜ್ಞಾನ ಗತೋ ವಿಶೇಷಃ॥ ದೀಪಪ್ರಕಾಶೇನ ಯಥೈವ ದರ್ಶನಂ ತಥಾ ಜ್ಞಾನಂ ವಾಯು ದೇವಸ್ಯ ಚಾಸ್ತಿ । ಅಸ್ಪಷ್ಟತೌ ನಮ್ಯೂನತಾಹ್ಯಸ್ತಿ ವಾಯೌ ತಥಾ ಜ್ಞಾನಂ ನೈವ ಸಂಚಿಂತನೀಯಂ। ಏತಾದೃಶೀ ಜ್ಞಾನವ್ಯಕ್ತಿರ್ಮುರಾದೇಃ ವಾಯ್ವಾದೀನಾಂ ಮೋಕ್ಷ ಪರ್ಯಂತಮಸ್ತಿ। ವಾಯೋರ್ಮಮ ಪ್ರಳಯ ಸೃಷ್ಟಿಕಾಲೇ ಗಾಯತ್ರ್ಯಾಶ್ಚೈವ ನಾಸ್ತಿ ನಾಸ್ತ್ಯೇವ ಮೋಹಃ । ಗಾಯಂತ್ರೀವದ್ಭಾರತೀ ದೇವದೇವ ಜ್ಞಾತವ್ಯೇವಂ ಹರಿತತ್ವವೇದಿಭಿಃ ॥ ಮಮಾಜ್ಞಾನಂ ದೃಶ್ಯತೇ ಯತ್ರ ಕುತ್ರ ದೈತ್ಯಾದೀನಾಂ ಮೋಹನಾರ್ಥಂ ಸದೈವ । ತೇನಪ್ರೀತಿಃ ದೇವ ದೇವಸ್ಯ ವಿಷ್ಣೋಃ ಭವಿಷ್ಯತೀತ್ಯೇವ ವಿನಿಶ್ಚಿತೋರ್ಥಃ ॥

-ಇತ್ಯಾದಿ **ಗರುಡಪುರಾಣ ವಾಕ್ಯಗಳು**, ಬ್ರಹ್ಮ-ವಾಯ್ವಾದಿಗಳಿಗೆ ಅಜ್ಞಾನಾದಿಗಳು ಇಲ್ಲವೆಂಬ ಅರ್ಥದಲ್ಲಿ ಪ್ರಮಾಣವೆಂದು ತಿಳಿಯತಕ್ಕದ್ದು. ॥4॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಚತುರ್ಮುಖ ಬ್ರಹ್ಮದೇವರು ಮತ್ತು ಶ್ರೀವಾಯುದೇವರು ಕ್ಷರ ಕೂಟಸ್ಥರಾದ ಜೀವಕೋಟಿಯಲ್ಲಿ ಅತ್ಯಂತ ಶ್ರೇಷ್ಠರು. ಇದರಿಂದ, ಜೀವೋತ್ತಮರೆನಿಸಿದ್ದಾರೆ.

2. ಕ್ಷರವರ್ಗಕ್ಕೆ ಸೇರಿದ ಚೇತನರಾಶಿಯಲ್ಲಿ ಮೂರುಪ್ರಕಾರ;
1. ಸಾತ್ವಿಕರು, 2. ರಾಜಸರು ಮತ್ತು 3. ತಾಮಸರು

ಮುಕ್ತಿಯೋಗ್ಯರಾದ ಜೀವರೆಲ್ಲರೂ ಸಾತ್ವಿಕ ವರ್ಗಕ್ಕೆ ಸೇರಿದವರು. ನಿತ್ಯ ಸಂಸಾರಿಗಳು (ಮಿಶ್ರ ಜೀವರು) ರಾಜಸರು. ತಮೋಯೋಗ್ಯರಾದ ಜೀವರೆಲ್ಲರೂ ತಾಮಸವರ್ಗಕ್ಕೆ ಸೇರಿದವರು.

3. ಈ ಪ್ರಭೇದವು ಸ್ವರೂಪಾತ್ಮಕವಾಗಿದೆ. ಜೀವರ ಸ್ವರೂಪ ದೇಹವು ಅನಾದಿ ನಿತ್ಯ ಮತ್ತು ಅಪ್ರಾಕೃತ. ಭಗವಂತನಿಂದ ಸೃಷ್ಟವಾದದ್ದಲ್ಲ. ಇದರಿಂದ, ಜೀವರ ಈ ತ್ರೈವಿಧ್ಯವೂ ನಿತ್ಯ ಮತ್ತು ಅನಾದಿ. ಎಂದೆಂದಿಗೂ ವ್ಯತ್ಯಾಸವಾಗುವುದಿಲ್ಲ.

4. ಸತ್ತ್ವ ಗುಣವನ್ನು ಶೋಧಿಸಿದಾಗ, ಶುದ್ಧ ಸತ್ತ್ವಗುಣವು ಪ್ರಾಪ್ತವಾಗುವುದು. ಅಂತಹ ಶುದ್ಧ ಸತ್ತ್ವ ಗುಣದಲ್ಲಿ ಅತ್ಯಂತ ಸೂಕ್ಷ್ಮವಾದ ಸತ್ತ್ವಾಂಶವು ಸತ್ತ್ವ ಸತ್ತ್ವಾತ್ಮಕವೆನಿಸುವುದು. ಶ್ರೀಬ್ರಹ್ಮದೇವರ ಸ್ವರೂಪ ಶರೀರವು ಇಂತಹ ಶುದ್ಧಸತ್ತ್ವಸತ್ತ್ವಾತ್ಮಕ ಸೂಕ್ಷ್ಮಸತ್ತ್ವದಿಂದ ಉಂಟಾಗಿದೆ. ಅದು ಅನಾದಿ ನಿತ್ಯವು.

5. ಅದರಂತೆ ಸ್ವರೂಪದೇಹಕ್ಕೆ ಆವರಣ ರೂಪದಲ್ಲಿರುವ ಲಿಂಗ ದೇಹವು ಪ್ರಕೃತ್ಯಾತ್ಮಕವಾದದ್ದು. ಸ್ವರೂಪದೇಹವು ಪ್ರಾಕೃತ ತ್ರಿಗುಣಗಳಿಂದ ಮುಕ್ತವಾಗಿ, 16 ಕಳೆಗಳಿಂದ ಕೂಡಿದೆ. ಇದೇ ಅನಾದಿ ಕರ್ಮಬೀಜದ ಆಗರವು. ಬ್ರಹ್ಮವಾಯುಗಳು ಜೀವ ಕೋಟಿಗೆ ಸೇರಿದ ಚೇತನರು. ಇದರಿಂದ ಲಿಂಗದೇಹ ಯುಕ್ತರಾಗಿದ್ದಾರೆ. ಅಸೃಷ್ಟ್ಯರಾಶಿಯಲ್ಲಿ ಈ ಲಿಂಗದೇಹವು ಸ್ವರೂಪದೇಹಕ್ಕೆ ಸಂಪರ್ಕ ಹೊಂದಿರದೆ, ಸಾವಕಾಶವಾಗಿರುವುದು. ಶ್ರೀಪರಮಾತ್ಮ ತನ್ನ ಇಚ್ಛಾಶಕ್ತಿಯೆಂಬ ಬಂಧಕಶಕ್ತಿಯಿಂದ ಲಿಂಗದೇಹದ ಸಂಪರ್ಕವನ್ನು ಸ್ವರೂಪ ದೇಹಕ್ಕೆ ಹೊಂದಿಸುವನು. ಈ ಕ್ರಿಯೆಗೆ "ಲಿಂಗೋಪಾದಾನ" ಅಥವಾ "ಲಿಂಗೋಪಚಯ" ಎನ್ನುವರು. ಈ ಇಚ್ಛಾರೂಪವಾದ ಬಂಧಕಶಕ್ತಿಯಿಂದ ಸಾವಕಾಶವಾಗಿರುವ ಲಿಂಗದೇಹವು ನಿರವಕಾಶವಾಗುವುದು. ಆದರಿಂದ ಪ್ರಾಕೃತ ತ್ರಿಗುಣಗಳ ದೆಸೆಯಿಂದ ಜೀವನು ಸೃಷ್ಟ್ಯಾವಸ್ಥೆಗೆ ಬರುವನು. ಸ್ವರೂಪದೇಹಕ್ಕೆ ಭಗವಂತನು ಮಾಡುವ ಲಿಂಗೋಪದಾನ ಕ್ರಿಯೆಯೇ

ಜೀವರ ಸೃಷ್ಟಿಯು. ಬ್ರಹ್ಮದೇವರ ಲಿಂಗಶರೀರವು ಸತ್ತ್ವಪ್ರಚುರಮಯು ವಾಗಿದೆ. ಸಾತ್ವಿಕಗುಣದೊಂದಿಗೆ ಮಿಳಿತವಾಗಿರುವ ರಜೋಗುಣದ ಅಂಶ ಮತ್ತು ತಮೋಗುಣದ ಅಂಶ ಅತ್ಯಲ್ಪ. ಇದರಿಂದ ಕರ್ಮಬಂಧನರೂಪವಾದ ಲಿಂಗದೇಹದ ಸಂಪರ್ಕ ಶ್ರೀಬ್ರಹ್ಮ-ವಾಯುಗಳಿಗೆ ಇಲ್ಲ. ಲಿಂಗದೇಹವು ಔಪಚಾರಿಕವಾಗಿ ದಗ್ಧಪಟದಂತೆ (ಸುಟ್ಟ ಬಟ್ಟೆಯೋಪಾದಿಯಲ್ಲಿ) ಇದೆ. ಅದರ ಪರಿಣಾಮ ಅವರ ಸ್ವರೂಪಶರೀರದ ಮೇಲೆ ಏನೂನು ಇಲ್ಲ.

6. ಬ್ರಹ್ಮ-ವಾಯುಗಳ ಸ್ಥೂಲಶರೀರವು ಮಹತತ್ತ್ವಾತ್ಮಕವಾದದ್ದು ಮಹತ್ತತ್ತ್ವವು ಅವ್ಯಕ್ತತತ್ತ್ವದಿಂದ ಜನ್ಯವಾಗಿದೆ. ಮಹತತ್ತ್ವದ ರಚನಾ ಕ್ರಮದಲ್ಲಿ, ಸತ್ತ್ವಪ್ರಾಚುರ್ಯವೇ ಅತ್ಯಧಿಕವಾಗಿದೆ. ಇದರಿಂದಲೂ, ಬ್ರಹ್ಮ-ವಾಯುಗಳ ದೇಹವು ಸತ್ತ್ವಪ್ರಚುರಮಯುವಾಗಿದೆ. ಇದರಿಂದ ಅನಾದ್ಯನಂತ ಕಾಲದಿಂದಲೂ ಅವರಿಗೆ ಜ್ಞಾನತಿರೋಧಾನವಿಲ್ಲ. ಸದಾ ಅತಿರೋಹಿತವಿಮಲ ವಿಜ್ಞಾನಿಗಳು. ಪರಶುಕ್ಲತ್ರಯವರ್ಗಕ್ಕೆ ಸೇರಿದವರು.

7. ಶ್ರೀಹರಿಯಲ್ಲಿ ಬ್ರಹ್ಮ-ವಾಯುಗಳಿಗಿರತಕ್ಕ ಭಕ್ತಿಯು ನಿರತಿಶಯ ವಾದದ್ದು. ಅವರ ಭಕ್ತಿಸ್ವರೂಪವು ಸಹಜರೀತಿಯಲ್ಲಿದೆ. ಅವರು ಮಾಡುವ ವ್ಯಾಪಾರಗಳೆಲ್ಲವೂ ಕೇವಲ ಭಗವತ್ಪ್ರೀತ್ಯರ್ಥವಾಗಿಯೇ ಹೊರತು, ಕಾಮ್ಯ ರೂಪವಾದ ಕರ್ಮವಲ್ಲ. ಇದರಿಂದ ಸದಾ ಜಾತಾಪರೋಕ್ಷಿಗಳಾದ ಅವರಿಗೆ ಮುಕ್ತಿಯ ಸುಖವು ಸ್ವಾಭಾವಿಕವಾಗಿಯೇ ಸಿದ್ಧಿಸುವುದು. ಸಾಧನಾರೂಪ ವಾದ ವ್ಯಾಪಾರದ ಅಗತ್ಯವಿಲ್ಲ. ಇದರಿಂದ ಅವರು, ಭಗವತ್ಕಾರ್ಯಸಾಧಕ ರೆಂದು ಖ್ಯಾತರಾಗಿದ್ದಾರೆ.

—★—

## ಪದ್ಯ ೪೨

ಮೂಲ :-

ಪಾದನ್ಯೂನ ಶತಾಬ್ದ ಪರಿಯಂ ।
ತೋದಿ ಉಗ್ರತಪಾಹ್ವಯಂದಿ ಲವ ।
ಣೋದಧಿಯೊಳಗೆ ಕಲ್ಪದಶ ತಪವಿದ್ದನಂತರದಿ ॥
ಸಾಧಿಸಿದ ಮಹದೇವ ಪದವಾ ।
ರೈದುನವ ಕಲ್ಪಾವಸಾನಕೆ ।
ಐದುವನು ಶೇಷನಪದವ ಪಾರ್ವತೀಸಹಿತವಾಗಿ ॥ ೪೨ ॥

ಅವತರಣಿಕೆ :

ಪ್ರಸಕ್ತಪದ್ಯದಿಂದ ಶ್ರೀಮಹರುದ್ರದೇವರ ಸಾಧನ ವಿವರಗಳನ್ನು ತಿಳಿಸುತ್ತಾರೆ. ॥42॥

ಪ್ರತಿಪದಾರ್ಥ :

ಮಹದೇವ = ವರ್ತಮಾನ ಕೈಲಾಸಾಧಿಪತಿಯಾದ ಶ್ರೀಮಹರುದ್ರದೇವರು, ಪದವ = ವರ್ತಮಾನ ರುದ್ರಪದವಿಗೆ ಬರಬೇಕಾದರೆ ಸಾಧನ ಮಾಡಿದರು ಹ್ಯಾಂಗೆಂದರೆ, ಶತಾಬ್ದ = ನೂರುವರುಷ ಎಂದರೆ ಒಂದು ಬ್ರಹ್ಮಕಲ್ಪಕ್ಕೆ ಬ್ರಹ್ಮಮಾನದಿಂದ ಆದ್ಯಂತ ವರುಷಗಳು ನೂರು. ಪಾದನ್ಯೂನ = ಪೂರ್ವೋಕ್ತ ಒಂದು ಬ್ರಹ್ಮಕಲ್ಪದ ನೂರುವರುಷಗಳಲ್ಲಿ ಪಾದ ಸಾಂಕೇತವಾದ ವರುಷಗಳು ಇಪ್ಪತ್ತೈದು (25) ಕಡಿಮೆಮಾಡಿದರೆ, ಉಳಿದ ವರುಷಗಳು ಎಪ್ಪತ್ತೈದು (75). ಪರಿಯಂತ = ಈ ಎಪ್ಪತ್ತೈದು ವರುಷ ವಾಯುದೇವರ ಕುರಿತು ತಪಸ್ಸುಮಾಡಿದ್ದು, ಓದಿ = ನಾಲ್ವತ್ತು ದಿನಕಲ್ಪಗಳು ಸಮೀರನಲ್ಲಿ ಶಿಷ್ಯರಾಗಿ, ಅಖಿಲಾಗಮಾರ್ಥಗಳ ಓದಿದ ನಂತರ,

**ಉಗ್ರತಪ** = ಉಗ್ರತಪಸ್ಸುಮಾಡಿ, **ಆಹ್ವಯದಿ** = "ಉಗ್ರತಪ" ಎಂಬ ನಾಮದಿಂದ ಕರೆಯಿಸಿದ ನಂತರ, **ಕಲ್ಪದಶ** = ಹತ್ತು ಬ್ರಹ್ಮನದಿನಕಲ್ಪಗಳ ಪರಿಯಂತ, **ಲವಣೋದಧಿಯೊಳಗೆ** = ಲವಣಸಮುದ್ರದೊಳಗೆ, **ತಪವಿದ್ದ** = ತಪಸ್ಸು ಮಾಡುತ್ತಾ ಇರುವವರಾದರು. **ಸಾಧಿಸಿದ** = ಅನಂತರ, 79ನೆಯ ಕಲ್ಪದಲ್ಲಿ ರುದ್ರಪದವೇನು, ಕೈಲಾಸಾಧಿಪತ್ಯವೇನು ಸಾಧಿಸಿದವರಾದರು. **ಆರೈದುನವ** = 6 × 5 = 30, ನವ ಎಂದರೆ 9, **ಕಲ್ಪಾವಸಾನಕೆ** = 39ನೆಯ ಕಲ್ಪದ ಪ್ರಳಯಾವಸಾನವಾಗಿ, ಪುನಃ ನಾಲ್ವತ್ತನೆಯ ಕಲ್ಪ, ಅಂತು 80 ಕಲ್ಪಗಳು, **ಪಾರ್ವತೀಸಹಿತವಾಗಿ** = ಪಾರ್ವತೀ ದೇವಿಯರಿಂದ ಸಹಿತರಾಗಿ, **ಶೇಷನಪದವ** = ಶೇಷದೇವರ ಪದವಿಯನ್ನು, **ಐದುವನು** = ಹೊಂದುತ್ತಾರೆ.

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ವರ್ತಮಾನಕಾಲದ ಕೈಲಾಸಾಧಿಪತಿಯಾದ ರುದ್ರದೇವರು, ವರ್ತಮಾನ ರುದ್ರಪದವಿಗೆ ಬರಬೇಕಾದರೆ ಸಾಧನಮಾಡಿದ ವಿವರ. ಹ್ಯಾಂಗೆಂದರೆ, ನೂರುವರುಷ ಎಂದರೆ, ಒಂದು ಬ್ರಹ್ಮಕಲ್ಪಕ್ಕೆ ಬ್ರಹ್ಮಮಾನದಿಂದ ಆದ್ಯಂತ ವರುಷಗಳು ನೂರು. ಈ ಶ್ಲೋಕಕ್ಕೆ ಸಮಾನಾಖ್ಯವಾದ ನಾಂದೀಸಂಧಿಯಲ್ಲಿ, 11ನೆಯ ಶ್ಲೋಕವು ಪ್ರಮಾಣತ್ವೇನ ಉದಹರಿಸಿ ಅರ್ಥ ಹೇಳಲ್ಪಡುತ್ತದೆ.

ಕೃತ್ತಿವಾಸನೆ ಹಿಂದೆ ನೀ ನಾ ।
ಲ್ವತ್ತು ಕಲ್ಪ ಸಮೀರರನಲಿ ಶಿ ।
ಷ್ಯತ್ವ ವಹಿಸ್ಯಖಿಳಾಗಮಾರ್ಥಗಳೋದಿ ಜಲಧಿಯೊಳು ॥
ಹತ್ತುಕಲ್ಪದಿ ತಪವಗೈದಾ ।
ದಿತ್ಯರೊಳಗುತ್ತಮನೆನಿಸಿ ಪುರು ।
ಷೋತ್ತಮನ ಪರಿಯಂಕ ಪದವೈದಿದೆಯೊ ಮಹದೇವ ॥11॥

ಪೂರ್ವೋಕ್ತ ಒಂದು ಬ್ರಹ್ಮಕಲ್ಪದ ನೂರುವರುಷಗಳು. ಇದರಲ್ಲಿ ಪಾದಸಾಂಕೇತವಾದ ವರುಷಗಳು ಇಪ್ಪತ್ತೈದು (25) ಕಡಿಮೆಮಾಡಿದರೆ, ಉಳಿದ ವರುಷಗಳು ಎಪ್ಪತ್ತೈದು (75). ಈ 75 ವರ್ಷ ವಾಯುದೇವರ ಕುರಿತು ತಪಸ್ಸುಮಾಡಿದ್ದು. ನಾಂದೀಸಂಧಿಯ 11ನೆಯ ಪದ್ಯದಲ್ಲಿ, "ಹಿಂದೆ"–ಎಂತ ಪ್ರಯೋಗವಿರುವುದರಿಂದ. ಬ್ರಹ್ಮಕಲ್ಪಕ್ಕೆ ಹಿಂದಿನ ಬ್ರಹ್ಮಕಲ್ಪ ಎಂಬ ಸಾಂಕೇತವು. ದಾಪದಾರಭ್ಯ 78ನೆಯ ಕಲ್ಪ, ಎಂದರೆ, ರುದ್ರದೇವರು ಅಸೃಜ್ಯರಾಶಿಯಿಂದ ದಾಪಕಲ್ಪದಲ್ಲಿ ಸೃಷ್ಟಿಗೆಬಂದರೋ, ಆ ಕಲ್ಪದಾರಭ್ಯ ವರ್ತಮಾನ ಕಲ್ಪಕ್ಕೆ. ಹಿಂದಿನ ಕಲ್ಪದವರೆವಿಗೂ, 78 ಕಲ್ಪಗಳಾಗುವವು. 79ನೆಯ ದಾವ ವರ್ತಮಾನಕಲ್ಪದಲ್ಲಿ ರುದ್ರಪದಪ್ರಾಪ್ತಿ. ಮುಂದಿನ 80ನೆಯ ಕಲ್ಪದಲ್ಲಿ ಶೇಷದೇವರ ಪದ ಪ್ರಾಪ್ತಿ. 80ನೆಯ ಕಲ್ಪದ ಅಂತ್ಯಭಾಗವಾದ ಪ್ರಳಯಕಾಲದಲ್ಲಿ ಲಿಂಗಭಂಗವಾಗುತ್ತದೆ. ಇದು ನೇಮವಾದ್ದರಿಂದ ವರ್ತಮಾನ ಪದ್ಯಗತ ಸಾಧನಿ– "ಹಿಂದೆ"– ಎಂಬೋಣದರಿಂದ ಈ ಕಲ್ಪಕ್ಕೆ ಹಿಂದಿನ ಕಲ್ಪವಾದ 78ನೆಯ ಬ್ರಹ್ಮಕಲ್ಪದಲ್ಲಿ ಮಾಡಿದ ಸಾಧನೆ.

ಪೂರ್ವೋಕ್ತ 75 ವರುಷಗಳು ಶ್ರೀವಾಯುದೇವರ ಅನುಗ್ರಹ ಸಂಪಾದಿಸುವುದಕ್ಕಾಗಿ, ವಾಯುದೇವರ ಕುರಿತು ತಪಸ್ಸು ಮಾಡುವವರಾದರು. ವಾಯುದೇವರ ಪ್ರಸಾದ ಸಂಪಾದಿಸಿದ ಮೇಲೆ 25 ವರುಷ ಉಳಿದಿದೆ. ಈ 25 ವರ್ಷದೊಳಗೆ ಹನ್ನೆರಡುವರೆ ವರುಷ ಪ್ರಳಯಕಾಲದ ವರುಷಗಳು. ಇದನ್ನು 25ರಲ್ಲಿ ಕಡಿಮೆಮಾಡಿದರೆ ಉಳಿದ ವರುಷಗಳು ಹನ್ನೆರಡುವರೆ ವರುಷಗಳು. ಇವು ಸ್ಥಿತಿಕಾಲದ ವರುಷಗಳು. ಇವಕ್ಕೆ ದಿನಗಳ ವಿವರ :–

ನಾಲ್ಕುಸಾವಿರದಐದುನೂರು (4500) ದಿನಗಳು. ಇದರಲ್ಲಿ ಸಾಧನಕ್ರಮ ನಾಲ್ವತ್ತು (40) ದಿನಕಲ್ಪಗಳು ಸಮೀರನಲಿ ಶಿಷ್ಯರಾಗಿ ಅಖಿಲಾಗಮಾರ್ಥಗಳನು ಓದಿದ ನಂತರ, ನಾಲ್ಕುಸಾವಿರದನಾನೂರುಐವತ್ತು (4450) ಈ ದಿನಕಲ್ಪಗಳಲ್ಲಿ ಉಗ್ರತಪಸ್ಸುಮಾಡಿ, "ಉಗ್ರತಪ"– ಎಂಬ ನಾಮದಿಂದ ಕರಿಸಿದ ನಂತರ. ಹತ್ತು ಬ್ರಹ್ಮನ ದಿನಕಲ್ಪಗಳು ಲವಣಸಮುದ್ರದ ಒಳಗೆ ತಪಸ್ಸುಮಾಡುತ್ತಾ ಇರುವವರಾದರು. ಅಂತು 4500 ದಿನಗಳಾದುವು.

ಈ ದಿನಗಳಿಗೆ ಹನ್ನೆರಡುವರೆ ವರ್ಷಗಳಾದುವು. ಅನಂತರದಲ್ಲಿ ಉಳಿದ ವರುಷಗಳು, ಹನ್ನೆರಡುವರೆವರುಷಗಳು. ಇವು ಪ್ರಳಯಕಾಲದ ವರ್ಷಗಳಾದ್ದರಿಂದ ಪ್ರಳಯಪ್ರಾಪ್ತವಾಗಿ 78 ಕಲ್ಪದ ವರುಷಗಳು: 100 ಕಲ್ಪಗಳು ಅಂತ್ಯವಾಗಿ ಪ್ರಳಯವಾಗೋದಾಯಿತು. ಅನಂತರ 79ನೆಯ ಕಲ್ಪದಲ್ಲಿ ರುದ್ರಪದವೇನು, ಕೈಲಾಸಾಧಿಪತ್ಯವೇನು ಸಾಧಿಸಿದವರಾದರು. ಹೀಗೆ ಇರತಕ್ಕ ರುದ್ರದೇವರು ಹಿಂದೆ 78ನೆಯ ಕಲ್ಪದಲ್ಲಿ, ಇಷ್ಟು ಸಾಧನೆಮಾಡಿ ರುದ್ರಪದಕ್ಕೆ ಬಂದವರು. ಈ ರುದ್ರಪದದಲ್ಲಿ ಈ 79ನೆಯ ಕಲ್ಪದ ಅಂತ್ಯದವರೆವಿಗೂ ಸಾಧನೆಮಾಡಿ, ಮುಂದಿನ 80ನೆಯ ಕಲ್ಪಕ್ಕೆ ಶೇಷಪದವಿ ಆಳತಾರೆ. ರುದ್ರದೇವರಿಗೆ ಆದ್ಯಂತಸಾಧನೆ 80 ಕಲ್ಪಗಳು. ಇದರಲ್ಲಿ 39 ಹೇಗೆಂದರೆ (ಆರೈದು ನವಕಲ್ಪಾವಸಾನಕೆ) ಆರೈದು $= 6 \times 30$. ನವ ಎಂದರೆ ಒಂಭತ್ತು. ಅಲ್ಲಿಗೆ $30 + 9 = 39$ ಕಲ್ಪಗಳಾಗುವುವು. 39ನೆಯ ಕಲ್ಪದ ಪ್ರಳಯಾವಸಾನವಾಗಿ, ಪುನಃ 40ನೆಯ ಕಲ್ಪಸೃಷ್ಟಿಕಾಲಕ್ಕೆ ಭಗವದಪರೋಕ್ಷ ಸ್ಥೂಲದೇಹದಲ್ಲಿ ಆಗೋದಾಯಿತು. ಅಂತು, ಅಪರೋಕ್ಷಾರ್ಥ 40 ಕಲ್ಪಗಳು, ಅಪರೋಕ್ಷಾನಂತರ 40 ಕಲ್ಪಗಳು. ಅಂತು 80 ಕಲ್ಪಗಳು. ಪಾರ್ವತೀದೇವಿಯರಿಂದ ಸಹಿತರಾಗಿ, ಶೇಷದೇವರ ಪದವಿಯನ್ನು ಹೊಂದುತ್ತಾರೆ. ವರ್ತಮಾನ ಶೇಷದೇವರೂನೂ, ಶೇಷಪದಾತ್ಪೂರ್ವ ಈ ಪ್ರಕಾರ ಸಾಧನೆಮಾಡಿ, ವರ್ತಮಾನಕಲ್ಪದಲ್ಲಿ ಶೇಷಪದವನ್ನು ಐದೋವರಾಗಿದ್ದಾರೆ. ಇದೇ ಪ್ರಕಾರ ವರ್ತಮಾನ ರುದ್ರದೇವರು ಮುಂದಿನ ಬ್ರಹ್ಮಕಲ್ಪಕ್ಕೆ ಶೇಷಪದ ಐದತಾರೆ–ಎಂತ ತಾತ್ಪರ್ಯ.

**ಇದಕ್ಕೆ ಪ್ರಮಾಣ :–**

"ದ್ವಿಪಂಚಾಸೀತ್ಕಲ್ಪಮಿತಾಃ ಶೇಷಾದ್ಯಾಸ್ತು ಸಭಾರ್ಯಕಾಃ ॥ ಎಂಬ **ಪ್ರಕಾಶಸಂಹಿತೆಯ** ಪ್ರಮಾಣವಿದೆ.

**ಅರ್ಥ :–**

ಪಂಚ–ಐದು. ಅಸೀ–ಎಂಟು. ಅಂದರೆ ಐದುಎಂಟುಗಳು, $5 \times 8 =$ 40 ಎಂದರ್ಥ. ಅಷ್ಟಪಂಚ ಖಗೇಶ್ವರ ಎಂತ, ದೇವರು ಗರುಡದೇವರಿಗೆ

ಗರುಡಪುರಾಣದಲ್ಲಿ ಹೇಳಿ, 40 ಎಂತಲೇ ಹೇಳಿದ್ದಾರಾದ್ದರಿಂದ, 40 ಎಂತ ತಾತ್ಪರ್ಯ. ದ್ವಿ-ಎರಡುನಾಲ್ವತ್ತುಗಳು. ಎಂಭತ್ತು ಎಂದರ್ಥ. ಕಲ್ಪಮಿತಾಃ ರುದ್ರದೇವರು ರಾಶಿಯಿಂದ ಸೃಷ್ಟಿಗೆ ಬಂದಾರಭ್ಯ ಲಿಂಗಭಂಗದ ಪರೆವಿಗೂ 80 ಕಲ್ಪ ಎಂತ ಮಿರವೇ ಹೊರ್ತು, ಅದಕ್ಕೆ ಮೇಲೆ ಇಲ್ಲ. ಈ ನೇಮಾ ದಾರದಾರಿಗೆಂದರೆ, ಶೇಷಾದ್ಯಾಸ್ತು ಸಭಾರ್ಯಕಾಃ ಭಾರ್ಯರಿಂದ ಸಹಿತ ರಾದ ಶೇಷ, ಗರುಡರಿಗೆ, ಹಾಂಗೇ ಷಣ್ಮಹಿಷಿಯರಿಗೂ ಆದಿ ಶಬ್ದದಿಂದ ಗ್ರಾಹ್ಯ.

**ಪ್ರಮಾಣ :-**

ಭಾಗವತ (ಚತುರ್ಥಸ್ಕಂಧ) ತಾತ್ಪರ್ಯ, 23ನೆಯ ಅಧ್ಯಾಯ- "ತಥೈವ ಚತ್ವಾರಿಂಶದ್ಭಿಃ ಪದಂ ಶೈವಂ ಚ ಜನ್ಮಭಿಃ ವಿಂಶದ್ಭಿರಿಂದ್ರ ದಶಭಿಃ ಅನ್ಯೇಷಾಮುಪ್ಯದೀರಿತಮಿತಿ-ಪಾಡ್ಗುಣ್ಯೇ ||"

ತಥೈವ-ಬ್ರಹ್ಮದೇವರ ಸಾಧನೆ 200 ಕಲ್ಪ ಸಾಧಿಸಿ ಒಳಗೆ ಅಪರೋಕ್ಷಾತ್ಪೂರ್ವ 100 ಕಲ್ಪಗಳು. ಅಪರೋಕ್ಷಾ ನಂತರ 100 ಕಲ್ಪಗಳು. ಅಂತೂ, ಎರಡುಭಾಗ ಹ್ಯಾಂಗೋ ಹಾಂಗೇವೇ. ಚತ್ವಾರಿಂಶದ್ಭಿಃ 80 ಕಲ್ಪಸಾಧನಿ ಒಳಗೆ ಸೃಷ್ಟಿಗೆ ಬಂದಾರಭ್ಯ 40 ಬ್ರಹ್ಮಕಲ್ಪಗಳಲ್ಲಿ ಸಾಧನಿಮಾಡಿ. ಪದಂ ಶೈವಂ ಚ-ಶೈವಪದ ಹೊಂದಿದರು. 40ನೆಯ ಕಲ್ಪಕ್ಕೆ ಈ ಶಿವಪದವಾದ 40ನೆಯ ಕಲ್ಪದಲ್ಲಿ ಅಪರೋಕ್ಷ, ಜನ್ಮಭಿಃ-ತದಾರಭ್ಯ ಒಂದೋದು ಬ್ರಹ್ಮ ಕಲ್ಪ. ಒಂದೊಂದು ಜನ್ಮಸಾಂಕೇತವಾಗಿ, ಆಯಾ ಜನ್ಮಗಳಿಂದ ಸಾಧನ ಮಾಡುತ್ತಾ ಬಂದು, 40ನೆಯ ಬ್ರಹ್ಮಕಲ್ಪಕ್ಕೆ ಶೇಷರಾದರೆಂದು ತಾತ್ಪರ್ಯ.

ಅಂತೂ, 40 ಕಲ್ಪ ಅಂದರೆ ಬ್ರಹ್ಮಕಲ್ಪ ರುದ್ರ ದೇವರ ಸಾಧನಿ. ಅನ್ಯೇಷಾಂ-ಅನ್ಯರಾದವರು, ವಿಂಶದ್ಭಿ ಇಂದ್ರ-ಪೂರ್ವೋಕ್ತಪ್ರಕಾರವೇ ಇಂದ್ರಗೆ ಅಪರೋಕ್ಷಾತ್ಪೂರ್ವ 20 ಕಲ್ಪ, ನಂತರ 20 ಕಲ್ಪ. ಅಂತೂ 40 ಬ್ರಹ್ಮಕಲ್ಪಸಾಧನೆ. ದಶಭಿಃ-ಸೂರ್ಯಚಂದ್ರಾದಿಗಳಿಗೆ ಅಪರೋಕ್ಷಾತ್ಪೂರ್ವ 10 ಬ್ರಹ್ಮಕಲ್ಪಸಾಧನೆ. ಅನಂತರ 10 ಕಲ್ಪಸಾಧನೆ. ಅಂದರೆ ಅಸ್ಪೃಶ್ಯ

ರಾಶಿಯಿಂದ ಸೃಷ್ಟಿಸಿ ಬಂದಾರಭ್ಯ ಎಂತ ತಾತ್ಪರ್ಯ. ಅಪಿ–ಮತ್ತು ಉತ್ತರೋತ್ತರ ಇರುವ ದೇವತೆಗಳಿಗೂ ಇದೇನೇಮ ಎಂತ ಉದೀರಿತಂ–ಹೇಳಲ್ಪಡುತ್ತಿದೆ.

**ಅನುವ್ಯಾಖ್ಯಾನೇ :–**

"ಸುಶ್ರಾವೋಗ್ರತಪೋನಾಮ ಯೋಗ್ಯೋ ರುದ್ರಪದಸ್ಯ ಯಃ ।
ಸಾರ್ಧಂ ಪರಾರ್ಧಂ ವಿಷ್ಣೋಸ್ತು ಗುಣಾನ್ ಭಕ್ತ್ಯಾ ಸದೋದಿತಃ ॥
ತತ್ರ ಭಾಗಮುಪಾಸಾಂ ಚ ಚಕ್ರೇ ಸಂಭೃತಮಾನಸಃ ।
ದಶಕಲ್ಪ ತಪಶ್ಚೀರ್ಣಂ ರುದ್ರೇಣ ಲವಣಾರ್ಣವೇ ॥

**ಅರ್ಥ :–**

ರುದ್ರಪದಸ್ಯ–ರುದ್ರಪದಕ್ಕೆ ಬರತಕ್ಕ, ಯಃ–40ನೆಯ ಕಲ್ಪದಲ್ಲಿ, ಅಪರೋಕ್ಷ ಹೋದಿದ ದಾವ ಶೈವಸಾಂಕೇತವಾದ ರುದ್ರಗಣ ಪ್ರವಿಷ್ಟರಾದ ಶೈವಸಾಧನಾವಮಾಡತಾ ಬಂದು, 78ನೆಯ ಕಲ್ಪದಲ್ಲಿ 75 ವರ್ಷಗಳು, ಸುಶ್ರಾವ–ಸಮೀಚೀನವಾದ ಭಗವನ್ಮಾಹಾತ್ಮ್ಯ, ಗುರುಗಳಾದ ಶ್ರೀವಾಯು ದೇವರಿಂದ ಶ್ರವಣಮಾಡೋ ಉದ್ದಿಶ್ಯ. ವಾಯುಪ್ರಸಾದಾರ್ಥ ತಪಮಾಡಿ ದವರಾದ್ದರಿಂದ "ಸುಶ್ರಾವ" ಎಂತ ಕರೆಯಿಸಿದರು. ನಂತರ 40 ದಿನಕಲ್ಪ ಸಮೀಚೀನವಾದ ಭಗವತ್ತತ್ವವನ್ನು ವಾಯುದೇವರ ಮುಖದಿಂದ ಶ್ರವಣ ಮಾಡಿ. "ಸುಶ್ರಾವ"–ಎಂತ ಕರಿಸಿದರು. ನಂತರ 4450 ದಿನಕಲ್ಪಗಳು ಉಗ್ರತಪಮಾಡಿ, "ಉಗ್ರತಪ" ಎಂತ ಕರೆಯಿಸಿದರು' ನಂತರ ದಶಕಲ್ಪ–10 ದಿನಕಲ್ಪಗಳಲ್ಲಿ, ಲವಣಾರ್ಣವೇ–ಲವಣಸಮುದ್ರದಲ್ಲಿ ಮುಳುಗಿ, ತಪಶ್ಚೀರ್ಣಂ–ತಪಸ್ಸನ್ನು ಮಾಡಿ, ಉಗ್ರತಪ–"ಉಗ್ರತಪ" ಎಂತ ಕರೆಯಿಸಿದರು. ನಂತರ. ರುದ್ರಃ–ಭಾವೀರುದ್ರರಾದ ಇವರು. ಸಾರ್ಧ–80 ಕಲ್ಪ ಸಾಧನ ಮಾಡೋದರಲ್ಲಿ ಅರ್ಧದಿಂದ ಸಹಿತವಾದ ಪೂರ್ವಾರ್ಧವಾದ 40 ಬ್ರಹ್ಮಕಲ್ಪಗಳಲ್ಲಿ ಅನಪರೋಕ್ಷದಶಾದಲ್ಲೇನು, ಪರಾರ್ಧ–ಅಪರೋಕ್ಷಾನಂತರ ಅನ್ಯವಾದ ಅರ್ಧಸಾಂಕೇತವಾದ 40 ಬ್ರಹ್ಮಕಲ್ಪಗಳಲ್ಲಿ ಏನು,

ಎರಡರಲ್ಲೂ ಭಕ್ತ್ಯಾ–ಭಕ್ತಿಯಿಂದ. ವಿಷ್ಣೋಸ್ತು–ವಿಶೇಷಾಕಾರವಾಗಿ ಪರಮಾತ್ಮನ, ಗುಣಾನ್–ಗುಣಗಳನ್ನು, ಸದಾ ಉದಿತಃ–ಸದಾ ಗಾನಮಾಡುತ್ತಾ, ಸದಾ ಆವನ ಸೇವಾದಲ್ಲೇ ಉದ್ಯುಕ್ತರಾಗಿ ಇರುತಾರೆ. ತತ್ರ–ಆ ಪೂರ್ವಾಪರ ಭಾಗದ್ವಯಂಗಳಲ್ಲಿ. ಭಾಗಂ–ಅಪರೋಕ್ಷಾನಂತರ ಕಾಲೀನಭಾಗವಾದ 40 ಕಲ್ಪಗಳಲ್ಲಿ, ಸಂಭೃತವಮಾನಸಃ–ಸಂಭೃತಮನಸ್ಕರಾಗಿ, ಉಪಾಸಾಂ ಚ ಚಕ್ರೇ–ಭಗವದುಪಾಸನಾ ಮಾಡತಾರೆ. ಇತ್ಯಾದಿ ಪ್ರಮಾಣಗಳಿಂದ ರುದ್ರದೇವರಿಗೆ 80 ಬ್ರಹ್ಮಕಲ್ಪ ಸಾಧನವೆಂದು ತಿಳಿಯಬೇಕು. ॥42॥

## 2. ಭಾವಪ್ರಕಾಶಿಕೆ :–

ಒಂದು ಪಾದ ಕಮ್ಮಿ, ಅಂದರೆ. 75 ವರ್ಷಗಳವರೆವಿಗೂ ಓದಿ, 39ನೆಯ ಕಲ್ಪಸಾಧನೆಯಲ್ಲಿ, ಅಂದರೆ ವಾಯುಪದವಿಗೆ ಹಿಂದಿನ ಕಲ್ಪದಲ್ಲಿ ಇದೇ ವಾಯುದೇವರು ಲಾತವ್ಯರೆಂಬ ಹೆಸರನ್ನು ಪಡೆದಿದ್ದರು. ಅವರಲ್ಲಿ ಭಗವಂತನ ಗುಣಾತಿಶಯಗಳನ್ನು ಶ್ರವಣಮಾಡಿದ ಮೇಲೆ, "ಉಗ್ರತಪ"–ಎಂಬ ಹೆಸರಿನಿಂದ ಲವಣಸಮುದ್ರದಲ್ಲಿ 10 ಕಲ್ಪಗಳವರೆಗೂ ಉಗ್ರವಾದ ತಪಸ್ಸನ್ನು ಮಾಡಿ, ಅನಂತರದಲ್ಲಿ 38 ಕಲ್ಪಸಾಧನಾನಂತರ, 39ನೆಯ ಕಲ್ಪದಲ್ಲಿ ರುದ್ರಪದವಿಯನ್ನು ಸಾಧಿಸಿದರು. ಅರ್ಕೈದುಪವಕಲ್ಪಾವಸಾನಕೆ, ಅಂದರೆ, $6 \times 5 = 30$, $30 + 9 = 39$ ಕಲ್ಪಗಳು. ಹೀಗೆ 39ನೆಯ ಕಲ್ಪವು ಪೂರೈಸಿದ ನಂತರ, 40ನೆಯ ಕಲ್ಪದಲ್ಲಿ ಪಾರ್ವತೀಸಹಿತ ಶೇಷಪದವ ಐದುವನು.

"ಸುಶ್ರಾವ್ಯೋಗ್ರತಪನಾಮ ಯೋಗ್ಯೋರುದ್ರಪದಸ್ಯ ಯಃ । ಸಾರ್ಧಂ ಪರಾರ್ಧಂ ವಿಷ್ಣೋಸ್ತು ಗುಣಾನ್ ಚಕ್ರ್ಯಾ ಸದೋದ್ಧಿತಃ ।"–ಎಂಬ ಅನುವ್ಯಾಖ್ಯಾನವಾಕ್ಯ ಪ್ರಕಾರ, ರುದ್ರಪದವಿಗೆ ಅರ್ಹರಾದವರ ಪೈಕಿ ಒಬ್ಬರು 75 ವರ್ಷಗಳವರೆಗೆ ಲಾತವ್ಯರಲ್ಲಿ ಪರಮಾತ್ಮನ ಗುಣಾತಿಶಯಗಳನ್ನು ಶ್ರವಣಮಾಡಿ, ಅದರ ಮೇಲೆ ಲವಣಸಮುದ್ರದಲ್ಲಿ "ಉಗ್ರತಪ" ಎಂಬ ಹೆಸರಿನಿಂದ 10 ಕಲ್ಪತಪಸ್ಸು ಮಾಡಿ, ತದನಂತರ 38 ಬ್ರಹ್ಮಕಲ್ಪ

ಮುಗಿದು, 39ನೆಯ ಕಲ್ಪದಲ್ಲಿ ರುದ್ರಪದವಿಯನ್ನು ಹೊಂದಿ, ಆ ಕಲ್ಪಾವಸಾನದಲ್ಲಿ, ಅಂದರೆ 40ನೆಯ ಕಲ್ಪದಲ್ಲಿ ಪಾರ್ವತೀಸಮೇತರಾಗಿ ಶೇಷಪದವಿಯನ್ನು ಹೊಂದುವರು. ॥42॥

**4. ಶ್ರೀಗುರುಹೃದಯಪ್ರಕಾಶಿಕೆ :**

ಹೀಗೆ, ಬ್ರಹ್ಮಪದಯೋಗ್ಯ ಜೀವರ ಸ್ವರೂಪಸಾಧನಾದಿಗಳನ್ನು ನಿರೂಪಿಸಿದ ನಂತರ, ರುದ್ರಪದಯೋಗ್ಯರ ಸಾಧನೆಯನ್ನು ನಿರೂಪಿಸುತ್ತಾರೆ, ಪಾದನ್ಯೂನ ಎಂದು.

ಉಗ್ರತಪನೆಂದು ಹೆಸರುಳ್ಳವನಾಗಿ, ಪೂರ್ವದಲ್ಲಿ ರುದ್ರಪದಯೋಗ್ಯನು, ಪಾದಶತಾಬ್ದನ್ಯೂನ ಎಂದರೆ. 75 ವರ್ಷ ಪರ್ಯಂತರವಾಗಿ ಶಾಸ್ತ್ರಾಭ್ಯಾಸ ಮಾಡಿ, ಲವಣಸಮುದ್ರದಲ್ಲಿ ಹತ್ತು ಬ್ರಹ್ಮಕಲ್ಪ ತಪಸ್ಸುಮಾಡಿ. ಮಹಾದೇವ ಎಂಬ ರುದ್ರಪದವನ್ನು ಸಂಪಾದಿಸಿದನು. ಅರೈದುನವಕಲ್ಪಾವಸಾನಕೆ ಅಂದರೆ, 39 ಕಲ್ಪಸಾಧನಾನಂತರ, 40ನೆಯ ಕಲ್ಪಕ್ಕೆ ಪಾರ್ವತೀಸಮೇತನಾಗಿ ಶೇಷಪದವನ್ನು ಹೊಂದುವನೆಂದರ್ಥ. ॥42॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಏಕಾದಶ ರುದ್ರಗಣದ ವ್ಯಕ್ತಿ, ಪಾರ್ವತೀಪತಿ ಶಂಕರನು ರುದ್ರಪದಯೋಗ್ಯನು.

2. ಅಂತಹ ರುದ್ರದೇವರಿಗೆ 80 ಬ್ರಹ್ಮಕಲ್ಪಗಳ ಸಾಧನೆ.

3. ಅದರಲ್ಲಿ ಅಪರೋಕ್ಷಾತ್ಪೂರ್ವ–40 ಕಲ್ಪಗಳ ಸಾಧನ.

4. ಭಗವದಪರೋಕ್ಷಾನಂತರ. ಉಳಿದ 40 ಕಲ್ಪಗಳ ಸಾಧನ.

5. ಅಬ್ದ ಎಂದರೆ ಬ್ರಹ್ಮದೇವರ 100 ವರ್ಷಗಳ ಅವಧಿ. ಅದರಲ್ಲಿ ಪಾದ ಎಂದರೆ ಕಾಲುಭಾಗ. ಅಂದರೆ 25 ವರ್ಷಗಳು. ಈ 25 ವರ್ಷಗಳು ಹೋಗಲಾಗಿ ಉಳಿದ ಅವಧಿ = 75 ವರ್ಷಗಳು. ಇದನ್ನೇ ದಾಸರಾಯರು "ಪಾದನ್ಯೂನ ಶತಾಬ್ದ" ಎಂದಿದ್ದಾರೆ.

6. 40 ಕಲ್ಪಗಳಲ್ಲಿ, ಭಗವದಪರೋಕ್ಷ ಸಾಧನೆಯ ಅವಧಿಯಲ್ಲಿ ಸುಶ್ರಾವ್ಯ ಎಂಬ ಹೆಸರಿನಿಂದ ಪೂರ್ವಕಲ್ಪದ ವಾಯುದೇವರಲ್ಲಿ (ಲಾತವ್ಯ ರಲ್ಲಿ) 40 ದಿನಕಲ್ಪಗಳು ಶಿಷ್ಯತ್ವವಹಿಸಿ, ಸಮಸ್ತ ಶಾಸ್ತ್ರಾಭ್ಯಾಸ ಮಾಡಿದರು.

7. ನಂತರ 10 ದಿನಕಲ್ಪಗಳ ಕಾಲ, "ಉಗ್ರತಪ" ಎಂಬ ಹೆಸರಿನಿಂದ ಲವಣಸಮುದ್ರದಲ್ಲಿ ಘೋರತಪಸ್ಸನ್ನು ಆಚರಿಸಿ, ವರ್ತಮಾನ ರುದ್ರ ಪದವಿಯನ್ನು ಸಾಧಿಸಿದರು.

8. ಪರಾರ್ಧವಾದ 40 ಕಲ್ಪಗಳಲ್ಲಿ 39 ಕಲ್ಪಗಳ ಅಂತ್ಯದಲ್ಲಿ (ಅರ್ಧೈದು ನವಕಲ್ಪಾವಸಾನಕೆ) ರುದ್ರಪದವಿಯಲ್ಲಿದ್ದು, ನಂತರ 40ನೆಯ ಕಲ್ಪದಲ್ಲಿ ಪಾರ್ವತೀಸಹಿತರಾಗಿ ಶೇಷಪದವಿಯನ್ನು ಹೊಂದಿ, ಕಲ್ಪಾಂತರದಲ್ಲಿ ಮುಕ್ತರಾಗುವರು. ॥42॥

## ಪದ್ಯ ೪೩

**ಮೂಲ :**

ಇಂದ್ರಮನು ದಶಕಲ್ಪಗಳಲಿ ಸು ।
ನಂದನಾಮದಿ ಶ್ರವಣಗೈದು ಮು ।
ಕುಂದನಪರೋಕ್ಷಾರ್ಥ ನಾಲ್ಕುಸುಕಲ್ಪ ತಪವಿದ್ದು ॥
ನೊಂದು ಪೊಗೆಯೊಳು ಕೋಟಿವರುಷ ಪು ।
ರಂದರನು ಅದನುಂತನತಂರ ।
ಪೊಂದಿದನು ನಿಜಲೋಕ ಸುರಪತಿ ಕಾಮನಿದರಂತೆ ॥ ॥೪೩॥

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಇಂದ್ರ ಮತ್ತು ಕಾಮ:ರ ಸಾಧನೆಯ ವಿಚಾರ ತಿಳಿಸು ತ್ತಾರೆ. "ಇಂದ್ರಮನು"-ಎಂಬುದರಿಂದ. ॥43॥

**ಪ್ರತಿಪದಾರ್ಥ :–**

**ಇಂದ್ರಮನು** = ಇಂದ್ರದೇವರು, ನಲವತ್ತು ಬ್ರಹ್ಮಕಲ್ಪ ಸಾಧನೆ ಉಳ್ಳವರು, ಸೃಷ್ಟಿ ಆರಭ್ಯ ಎಂತ ತಾತ್ಪರ್ಯ. **ಮುಕುಂದನ** = ಮೋಕ್ಷಪ್ರದನಾದ ಶ್ರೀಪರಮಾತ್ಮನ, **ಅಪರೋಕ್ಷಾರ್ಥ** = ಸ್ಥೂಲಾಪರೋಕ್ಷಾರ್ಥವಾಗಿ, **ಸುನಂದನಾಮದಿ** = "ಸುನಂದ" ಎಂಬ ಹೆಸರಿನಿಂದ, **ನಾಲ್ಕು ಸುಕಲ್ಪ ತಪವಿದ್ದು** = ಸಮೀಚೀನವಾದ ಆನಂದಕೊಡತಕ್ಕ ವೇದಶ್ರವಣ, ಗುರುಗಳಾದ ಶ್ರೀರುದ್ರದೇವರ ಮುಖದಿಂದ ಶ್ರವಣಮಾಡೋ ಉದ್ದಿಶ್ಯ, ಗುರುಪ್ರಸಾದಾರ್ಥ, ನಾಲ್ಕು ದಿನಕಲ್ಪಗಳು ತಪಸ್ಸಿನಲ್ಲಿದ್ದು, **ದಶಕಲ್ಪಗಳಲ್ಲಿ** = ನಂತರ, ಶ್ರೀರುದ್ರದೇವರು ಪ್ರಸನ್ನರಾದ ಮ್ಯಾಲೆ, ಹತ್ತು ದಿನಕಲ್ಪಗಳಲ್ಲಿ. **ಶ್ರವಣಗೈದು** = ಯುಗಳ ದ್ವಾರಾ ವೇದಶ್ರವಣ ಮಾಡಿದನಂತರ, **ಕೋಟಿ ವರುಷ** = ದೇವಮಾನ, ವರುಷಗಳು ಎಂಭತ್ತು ಚಿಲ್ಲರೆ ಮಹಾಯುಗವಾಗುತ್ತದೆ. **ಪೊಗೆಯೊಳು** = ಹೊಗೆಯಲ್ಲಿ ಕೂತು, ತಪಸ್ಸು ಮಾಡಿ, **ನೊಂದು** = ಶ್ರಾಂತರಾಗಿ, **ಅದಲುಂಡ ನಂತರ** – ಧೂಮಪಾನ ಮಾಡಿದ ತರುವಾಯ, **ಪುರಂದರನು** = ಭಾವೀಪುರಂದರನೆಂತ ಕರೆಸೋವರಾದರು. **ಸುರಪತಿ** = ತದನಂತರ 20ನೆಯ ಕಲ್ಪದಲ್ಲಿ "ಸುರಪತಿ" ಎಂತ ಕರೆಸಿ, **ನಿಜಲೋಕೆ** = ಸ್ವರ್ಗಾಧಿಪತ್ಯವನ್ನು, **ಪೊಂದಿದನು** = ಹೊಂದುವವರಾದರು. **ಕಾಮನು ಇದರಂತೆ** = ಇದೇ ರೀತಿಯಲ್ಲಿ ಕಾಮದೇವರ ಸಾಧನ ವಿಚಾರ. **॥43॥**

## ವ್ಯಾಖ್ಯಾನಗಳು

**1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–**

ಇಂದ್ರದೇವರು (ಇಂದ್ರಮನು), ನಲವತ್ತು ಬ್ರಹ್ಮಕಲ್ಪ ಸಾಧನೆ ಉಳ್ಳವರು, ಸೃಷ್ಟಿ ಆರಭ್ಯ ಎಂತ ತಾತ್ಪರ್ಯ. ಮೋಕ್ಷಪ್ರದನಾದ ಶ್ರೀಪರಮಾತ್ಮನ (ಮುಕುಂದನ), ಸ್ಥೂಲಾಪರೋಕ್ಷಾರ್ಥವಾಗಿ (ಅಪರೋಕ್ಷಾರ್ಥ).

ಪೂರ್ವಾರ್ಧವಾದ ಇಪ್ಪತ್ತು ಕಲ್ಪಸಾಧನಿ ಮಾಡಿ, 20ನೆಯ ಬ್ರಹ್ಮಕಲ್ಪಕ್ಕೆ ಅಪರೋಕ್ಷ ಹೊಂದಿದ್ದಾರೆ. ನಂತರ ಉಳಿದಿರುವುದು ಇಪ್ಪತ್ತು ಬ್ರಹ್ಮ ಕಲ್ಪಗಳು. ಇದರಲ್ಲಿ ಹದಿನೇಟು ಬ್ರಹ್ಮಕಲ್ಪಗಳಲ್ಲಿ ಸಾಧನಿ ಮಾಡುತ್ತಾ ಬಂದು, ಹತ್ತಂಭೊತ್ತನೆಯ ಬ್ರಹ್ಮಕಲ್ಪದಲ್ಲಿ ಸಾಧನ ಮಾಡುವ ಕ್ರಮ. ಸುನಂದ ಎಂತ ನಾಮದಿಂದ ಕರಿಸೋವರಾದರು (ಸುನಂದನಾಮದಿ), ಈ 19ನೆಯ ಬ್ರಹ್ಮಕಲ್ಪದಲ್ಲೇ "ಸುನಂದ" ಎಂತ ನಾಮದಿಂದಲೇ, ಸಮೀಚೀನವಾದ ಆನಂದಕೊಡತಕ್ಕ ವೇದಶ್ರವಣ, ಗುರುಗಳಾದ ರುದ್ರದೇವರ ಮುಖದಿಂದ ಶ್ರವಣಮಾಡೋ ಉದ್ದಿಶ್ಯ ಗುರುಪ್ರಸಾದಾರ್ಥ. ನಾಲ್ಕು ದಿನಕಲ್ಪಗಳು ರುದ್ರದೇವರ ಕುರಿತು ತಪಸ್ವಿನಾಗೆ ಇರೋವರಾಗಿದ್ದರು (ನಾಲ್ಕು ಸುಕಲ್ಪ ತಪವಿದ್ದು). ನಂತರ, ರುದ್ರದೇವರು ಪ್ರಸನ್ನರಾದ ಮ್ಯಾಲೆ, ಹತ್ತು ದಿನಕಲ್ಪಗಳಲ್ಲಿ (ದಶಕಲ್ಪಗಳಲ್ಲಿ). ಋಜುಗಳ ದ್ವಾರಾ ವೇದ ಶ್ರವಣಮಾಡಿದ ನಂತರ (ಶ್ರವಣಗೈದು), ದೇವಮಾನ ವರ್ಷಗಳು ಎಂಭತ್ತು ಚಿಲ್ಲರಿ ಮಹಾಯುಗವಾಗುತ್ತದೆ (ಕೋಟಿವರುಷ). ಹೊಗೆಯೊಳಗೆ ಕೂತು. ತಪಸ್ಸು ಮಾಡಿ (ಹೊಗೆಯೊಳು), ಶ್ರಾಂತರಾಗಿ (ನೊಂದು), ಧೂಮಪಾನ ಮಾಡಿ, ಧೂಮದಲ್ಲೇ ಕೂತು ತಪಸ್ಸು ಮಾಡಿದನಂತರ (ಅದನುಂಡನಂತರ), ಭಾಮೀ ಪುರಂದರನೆಂತ ಕರಿಸೋವರಾದರು (ಪುರಂದರನು), ತದನಂತರ, ಇಪ್ಪತ್ತನೆಯ ಕಲ್ಪದಲ್ಲಿ "ಸುರಪತಿ" ಎಂತ ಕರಿಸಿ (ಸುರಪತಿ), ತದನಂತರ ತಮಗೆ ನೈಜವಾದ ಸ್ವರ್ಗಾಧಿಪತ್ಯವನ್ನು (ನಿಜಲೋಕ), ಹೊಂದೋವರಾದರು (ಪೊಂದಿದನು). ಕಾಮದೇವರು (ಕಾಮನು), ಇಂದ್ರದೇವರೋಪಾದಿಯಲ್ಲಿ (ಇದರಂತೆ), ಸಾಧನಿಮಾಡಿ, ಈಗಿನ ತಮ್ಮ ಪದವನ್ನು ತಾವು ಐದೋವರಾದರು. ಇಂದ್ರಕಾಮರಿಗೆ ನಾಲ್ವತ್ತು ಬ್ರಹ್ಮಕಲ್ಪ ಸಾಧನವು. ॥43॥

2. **ಭಾವಪ್ರಕಾಶಿಕೆ :-**

"ದೇ ಮನ್ವಂತರಂ ಶ್ರಕ್ರಪದಯೋಗ್ಯೋ ಗುರುತ್ಮತಃ ಪದಯೋಗ್ಯಾತ್ಸು ಮನಸೋ ಸುನಂದೋನಾಮಚಾಶ್ರೃಣೋತ್ ॥ ಉಪಾಸಾಂ ಚಕ್ರಉದ್ಯುಕ್ತೋ ಮನ್ವಂತರ ಚತುಷ್ಟಯಂ".

ಎಂಬ ಅನುವ್ಯಾಖ್ಯಾನದ ವಾಕ್ಯದಪ್ರಕಾರ– ಈ ಪದ್ಯಾರ್ಥವನ್ನ ಹೀಗೆ ತಿಳಿಯಬೇಕು–

ದೇವೇಂದ್ರನು ಇಂದ್ರಪದವಿಗೆ ಬರುವುದಕ್ಕೆ ಮುಂಚಿತವಾಗಿ, ಸುನಂದ ನೆಂಬ ಹೆಸರಿನಿಂದ, ಗರುಡಪದವಿಯನ್ನು ಹೊಂದಲು ಯೋಗ್ಯನಾದ, ಸುಮನಸ ಎಂಬುವನಿಂದ 10 ಮನ್ವಂತರಗಳು ಭಗವನ್ಮಹಿಮಾ ಶ್ರವಣಮಾಡಿ, ತದ ನಂತರ, ಶ್ರೀಪರಮಾತ್ಮನ ಅಪರೋಕ್ಷಕ್ಕೋಸ್ಕರ 4 ಮನ್ವಂತರಗಳು ತಪಸ್ಸು ಮಾಡಿ, 1 ಕೋಟಿವರ್ಷ ಹೊಗೆಯೊಳಗೆ ತಪಸ್ಸುಮಾಡಿ, ಕಷ್ಟದಿಂದ ಧೂಮ ಪಾನವನ್ನ ಮಾಡಿ, ಇಂದ್ರಪದವಿಯನ್ನು ಪಡೆದು, ಸ್ವರ್ಗದಲ್ಲಿ ವಾಸ ಮಾಡುವನು.

ಮನ್ಮಥನೂ ಇದರಂತೆಯೇ ಸಾಧನ ಮಾಡಿಕೊಂಡು ಪರಮಾತ್ಮನ ಪುತ್ರನಾಗಿರುವನು. ॥43॥

## ಶ. ಶ್ರೀಗುರುಹೃದಯಪ್ರಕಾಶಿಕೆ :–

ಇಂದ್ರಪದಸಾಧನೆ, ತಿಳಿಸುತ್ತಾರೆ, ಇಂದ್ರನೆಂದು. ಇಂದ್ರಪದ ಯೋಗ್ಯಜೀವನು ಸುನಂದನೆಂಬ ಹೆಸರುಳ್ಳವನಾಗಿ, ಪೂರ್ವದಲ್ಲಿ ಹತ್ತು ಮನುಕಲ್ಪ ಶಾಸ್ತ್ರಶ್ರವಣಾದಿಗಳನ್ನು ಮಾಡಿ, ಮೋಕ್ಷಪ್ರದನಾದ ದೇವರ ಸಾಕ್ಷಾತ್ಕಾರಕ್ಕೋಸ್ಕರ, ನಾಲ್ಕು ಬ್ರಹ್ಮಕಲ್ಪ ತಪಸ್ಸುಮಾಡಿ, ಕೋಟಿವರ್ಷ ಹೊಗೆ ಎಂಬ ಧೂಮಪಾನ ಮಾಡಿ, ನೊಂದು ಎಂದರೆ, ಕಷ್ಟಸಾಧನೆ ಮಾಡಿ, ಅನಂತರ, ಪುರಂದರನೆಂಬ ಪದವನ್ನೂ ಸ್ವರ್ಗಲೋಕವನ್ನೂ ಹೊಂದಿದನು. ಕಾಮನೂ ಸಹ, ಹೀಗೆಯೇ ಸಾಧನಿಮಾಡಿರುತ್ತಾನೆಂದರ್ಥ. ಮೇಲ್ಕಂಡ ಎರಡು ಪದ್ಯಗಳಿಗೆ ಪ್ರಮಾಣ.

"ದಶಕಲ್ಪಂ ತಪಶ್ಚೀರ್ಣಂ ರುದ್ರೇಣ ಲವಣಾರ್ಣವೇ । ತ್ವಕ್ತ್ವಾ ಸುಖಾನಿಸರ್ವಾಣಿ ಕ್ಲಿಷ್ಟೇನ ಲವಣಾಂಭಸಾ ॥ ಶಕ್ರೇನ ವರ್ಷಕೋಟಿಶ್ಚ ಧೂಮಃ ಪೀತೋತಿ ದುಃಖಿತಃ ॥ ಎಂಬ ಅನುವ್ಯಾಖ್ಯಾನವೂ ಸಹ ನಿರೂಪಿಸಲ್ಪಟ್ಟಿತು. ॥43॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಿಂದ ಇಂದ್ರದೇವರು ಮತ್ತು ಕಾಮದೇವರ. ಕಲ್ಪಸಾಧನ ವಿಚಾರವನ್ನು ತಿಳಿಸುತ್ತಾರೆ.

2. ಇಂದ್ರಪದವಿಗೆ ಬರತಕ್ಕ ಜೀವರಿಗೆ ಸಾಧನ=40 ಕಲ್ಪಗಳು.

   (i) ಸಾಧನಾತ್ಪೂರ್ವ 20 ಕಲ್ಪಗಳು. (ii) ಸಾಧನೋತ್ತರ 20 ಕಲ್ಪಗಳು.

3. ಸಾಧನೋತ್ತರವಾದ 20 ಕಲ್ಪಗಳಲ್ಲಿ, 19ನೆಯ ಬ್ರಹ್ಮಕಲ್ಪದಲ್ಲಿ **ಸುನಂದ** ಎಂಬ ನಾಮದಿಂದ ಸಾಧನಮಾಡುತ್ತಾ, ನಾಲ್ಕು ಬ್ರಹ್ಮದಿನಕಲ್ಪಗಳ ಕಾಲ, ತಮ್ಮ ಸ್ವೋತ್ತಮ ಬಿಂಬರೂಪರಾದ ಶ್ರೀರುದ್ರದೇವರನ್ನು ಕುರಿತು ತಪಸ್ಸನ್ನ ಮಾಡಿದರು,

4. ಮೋಕ್ಷಪ್ರದನಾದ ಮುಕುಂದನ ಅಪರೋಕ್ಷಾರ್ಥವಾಗಿ ತಪಸ್ಸಿನ ಆಚರಣೆ.

5, ಅದಕ್ಕಿಂತ ಪೂರ್ವದಲ್ಲಿ 10 ಮನುಕಲ್ಪಗಳಲ್ಲಿ **(ಮನುದಶ ಕಲ್ಪಗಳಲಿ)** ಗುರುಗಳ ದ್ವಾರಾ ಸಕಲವೇದಗಳು, ಸಚ್ಛಾಸ್ತ್ರ ಶ್ರವಣ ಮಾಡಿದರು.

6. ತಪಸ್ಸಿನ ದ್ವಾರಾ ಶ್ರೀರುದ್ರದೇವರ ಅನುಗ್ರಹ ಪಡೆದು, ಒಂದು ಕೋಟಿ ವರ್ಷಗಳು ದಟ್ಟವಾದ ಹೊಗೆಯೊಳಗೆ ತಪಸ್ಸುಮಾಡಿದರು. ಈ ಕೋಟಿವರ್ಷಗಳು ಎಂದರೆ ದೇವಮಾನದ ವರ್ಷಗಳು. 80ಕ್ಕೆ ಮೇಲಾದ ಮಹಾಯುಗವಾಗುವುದು.

7. ತಪಸ್ಸಿನಿಂದ ಉಂಟಾದ ದಟ್ಟವಾದ ಧೂಮಪಾನ ಮಾಡಿದ ನಂತರ, **ಪುರಂದರ** ನಾಮಕನಾಗಿ ತನ್ನ ನಿಜವಾದ ಪದವಿಯನ್ನು ಅಂದರೆ,

ಇಂದ್ರಪದವಿಯನ್ನು ಹೊಂದಿ, ಸ್ವರ್ಗಾಧಿಪತ್ಯವನ್ನು ಪಡೆದು, ದೇವತೆಗಳ ಪ್ರಭು ಎಂದೆನಿಸಿದನು. (ಸುರಪತಿ)

8. ಇಂದ್ರದೇವರಂತೆಯೇ ಮನ್ಮಥನ ಸಾಧನೆಯ ಕ್ರಮ ಇದೆ. ಮನ್ಮಥನು ಪದವೀಪ್ರಯುಕ್ತ ಇಂದ್ರನಿಗಿಂತ ಕಿಂಚಿತ್ ಅಧಮರು.

**ಇಂದ್ರ ಮತ್ತು ಕಾಮರ ಸಾಧನೆ ವಿಚಾರ :–**

(1) ಒಟ್ಟು ಕಲ್ಪಸಾಧನಾವಧಿ = 80 ಕಲ್ಪಗಳು.

(2) ಸಾಧನೋತ್ತರ 20 ಕಲ್ಪಗಳಲ್ಲಿ 10 ಮನುಕಲ್ಪಗಳ ಕಾಲ ಗುರುಗಳ ದ್ವಾರಾ ಸಚ್ಛಾಸ್ತ್ರಗಳ ಶ್ರವಣ ಅಧ್ಯಯನಾದಿಗಳು.

(3) ನಂತರ ನಾಲ್ಕು ಬ್ರಹ್ಮದಿನಕಲ್ಪಗಳಲ್ಲಿ ತಪಸ್ಸಿನ ಆಚರಣೆ.

(4) ಒಂದುಕೋಟಿವರ್ಷ ಹೊಗೆಯಲ್ಲಿ ಕೂತು, ಧೂಮವನ್ನ ಉಂಡನಂತರ ನೈಜಪದವಿ ಪ್ರಾಪ್ತಿ.

## ಪದ್ಯ ೪೪

**ಮೂಲ :**

**ಕರೆಸುವರು ಪೂರ್ವದಲಿ ಚಂದ್ರಾ |**
**ರ್ಕ ರತಿಕಾಂತ ಸುರೂಪನಾಮದಿ |**
**ಎರಡೆರಡು ಮನುಕಲ್ಪ ಶ್ರವಣಗೈದು ಮನುಕಲ್ಪ ||**
**ವರತಪೋಬಲದಿಂದಲರ್ವಾಕ್ |**
**ಶಿರಗಳಾಗೀರ್ವೈದುಸಾವಿರ |**
**ವರುಷ ದುಃಖದ ನೀಗಿ ಕಾಂಬರು ಬಿಂಬರೂಪವನು || ೪೪ ||**

**ಅವತರಣಿಕೆ :**

ಪ್ರಸಕ್ತಸಂಧಿಯಿಂದ ಸೂರ್ಯ ಮತ್ತು ಚಂದ್ರರ ಸಾಧನೆಯ ವಿಚಾರ ವನ್ನು ಹೇಳುತ್ತಾರೆ. ॥44॥

**ಪ್ರತಿಪದಾರ್ಥ :**

**ಚಂದ್ರ ಅರ್ಕರು** = ಚಂದ್ರ ಮತ್ತು ಸೂರ್ಯ ಈರ್ವರು, **ಪೂರ್ವ ದಲಿ** = ಪದವಿಹೊಂದುವುದಕ್ಕೆ ಪೂರ್ವದಲಿ, **ಅತಿಶಾಂತ ಸುರೂಪ ನಾಮದಿ** ಅತಿಶಾಂತ ಮತ್ತು ಸುರೂಪರೆಂತ ಹೆಸರುಳ್ಳವರಾಗಿ, **ಎರಡೆರಡು ಮನುಕಲ್ಪ** = ನಾಲ್ಕು ಮನ್ವಂತರಗಳಲ್ಲಿ (ಎರಡೆರಡು = 2 × 2 = 4), **ಶ್ರವಣಗೈದು** = ತಮ್ಮ ಸ್ತೋತ್ರಮಗುರುಗಳ ದ್ವಾರಾ ಭಗವನ್ಮಹಿಮೆಗಳನ್ನು ಶ್ರವಣಮಾಡಿ (ಅಧ್ಯಯನ ಮಾಡಿ), **ಮನುಕಲ್ಪ** = ನಂತರ ಒಂದು ಮನ್ವಂತರಕಾಲ, **ವರತಪೋಬಲದಿಂದಲಿ** = ಉತ್ಕೃಷ್ಟ ವಾದ ತಪೋಬಲದಿಂದ, **ಅರ್ವಾಕ್ ಶಿರಗಳಾಗೀ** = ತಲೆಕೆಳಗಾಗಿ, **ಈರೈದು ಸಾವಿರವರ್ಷ** = ಹತ್ತುಸಾವಿರವರ್ಷಗಳು (5 × 2 = 10) ತಪಸ್ಸು ಮಾಡಿ, **ದುಃಖವನೀಗಿ** = ದುಃಖವನ್ನು ಕಳೆದುಕೊಂಡವರಾಗಿ, **ಬಿಂಬ ರೂಪವನು** = ಅಪರೋಕ್ಷದಲಿ ಸ್ವಬಿಂಬವನ್ನು, **ಕಾಂಬರು** = ಕಾಣುತ್ತಾರೆ. ಅಂದರೆ ಅಪರೋಕ್ಷ ಹೊಂದುತ್ತಾರೆ. ॥44॥

## ವ್ಯಾಖ್ಯಾನಗಳು

### ೪. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಚಂದ್ರ, ಸೂರ್ಯರು, ಈ ಉಭಯರು (ಚಂದ್ರಾರ್ಕರು), ರಾಶಿ ಯಿಂದ ಸೃಷ್ಟಿಗೆ ಬಂದಾರಭ್ಯ ಇಪ್ಪತ್ತು (20) ಬ್ರಹ್ಮಕಲ್ಪವೇ ಅಂತ್ಯವಾದ ಸಾಧನಿಯುಳ್ಳವರು. ಈ ಇಪ್ಪತ್ತುಕಲ್ಪದ ಒಳಗೆ, ಹತ್ತುಕಲ್ಪಸಾಧನಿಮಾಡಿ. ಸ್ಥೂಲದೇಹಗತ ಬಿಂಬರೂಪವನ್ನು ಹತ್ತನೆಯ ಬ್ರಹ್ಮಕಲ್ಪದಲ್ಲಿ ಕಾಣುತ್ತಾರೆ.

(ಬಿಂಬರೂಪವನು ಕಾಂಬರು). ನಂತರ, ಹತ್ತುಕಲ್ಪ ಉಳಿದಿದೆ. ಈ ಉಳಿದ ಹತ್ತುಕಲ್ಪಗಳ ಒಳಗೆ (ಪೂರ್ವದಲ್ಲಿ), ಎಂಟುಕಲ್ಪದವರಿಗೂ ಜನ್ಮಗಳಧರಿಸಿ, ಸಾಧನಮಾಡುತ್ತಾ ಬಂದು, ಗತವಾದ ವರ್ತಮಾನಕಲ್ಪಕ್ಕೆ, ಪೂರ್ವ ಕಲ್ಪವಾದ, ಒಂಭತ್ತನೆಯ ಕಲ್ಪದಲಿ, ಚಂದ್ರ "ಅತಿಶಾಂತ" ಎಂತಲೂ, ಸೂರ್ಯ "ಸುರೂಪ" ಎಂತಲೂ (ಅತಿಶಾಂತಸುರೂಪನಾಮದಿ), ನಾಮ ದಿಂದ ಕರೆಸುವರು (ಕರೆಸುವರು). ಇವರು, ಗುರುಗಳ ಉಪದೇಶಕ್ಕಾಗಿ, ಗುರುಪ್ರಸಾದಾರ್ಥವಾಗಿ ಒಂದು ಮನುಕಲ್ಪ (ಮನುಕಲ್ಪ). ಉತ್ತಮವಾದ ತಪಸ್ಸುಮಾಡಿ (ವರತಪೋಬಲದಿಂದ), ಆ ತಪೋಬಲದಿಂದ ಗುರುಗಳನ್ನು ಪ್ರಸನ್ನೀಕರಿಸಿಕೊಂಡು. ನಾಲ್ಕು ಸಂಖ್ಯಾಕವಾದ (ಎರಡರಡು), ಮನು ಕಲ್ಪಗಳಲ್ಲಿ ಗುರುಮುಖದಿಂದ ಶ್ರವಣಗೈದು (ಶ್ರವಣಗೈದು), ಅನಂತರ, ದೇವಮಾನದಿಂದ ಐದುಸಾವಿರ ವರುಷಗಳು (ಐದುಸಾವಿರವರುಷ), ತಲೆ ಕೆಳಗೆ ಕಾಲುಮ್ಯಾಲೆ ಮಾಡಿ (ಅರ್ವಾಕ್ ಶಿರಗಳಾಗಿ) ತಪಸ್ಸುಮಾಡಿ, ತಪೋ ದುಃಖವನ್ನು ನೀಗಿ (ದುಃಖವನೀಗಿ), ಹತ್ತನೆಯ ಕಲ್ಪವಾದ ವರ್ತಮಾನ ಕಲ್ಪದಲ್ಲಿ, ಚಂದ್ರನು ಚಂದ್ರಪದವನ್ನೂ, ಸೂರ್ಯನು ಸೂರ್ಯಪದವನ್ನೂ ಐದೋವರಾದರು. ಈ ಸಾಧನ ಎಂಬುದು ಇದೇ ಸಂಧಿಯಲ್ಲಿ 9ನೆಯ ಶ್ಲೋಕದಲ್ಲಿ ಹೇಳಿದೆ. ದೇವತಾಸಾಧನಕ್ಕೆ ಯೋಗ್ಯವಾದ ಮಾನುಷ ಪ್ರವೇಶ ವಿಲ್ಲದ 4೫0 ಯೋಜನವಿಸ್ತಾರವಾದ ಭರತಖಂಡದಲ್ಲಿ ಸಾಧನಿಮಾಡಿದರು. ಈ ಪೂರ್ವೋಕ್ತ ಸೂರ್ಯ, ವಿವಸ್ವಾನ್ ನಾಮಕನೆಂದು ತಾತ್ಪರ್ಯ. ||44||

**೨. ಭಾವಪ್ರಕಾಶಿಕೆ -:**

"ಸುರೂಪ ಶಾಂತರೂಪಶ್ಚ ಮನ್ವಂತರ ಚತುಷ್ಟಯಂ । ಅಶೃಣ್ವತಾಂ ಸುಮನಸೋ ಮನ್ವಂತರಮುಪಾಸತಾಂ ॥ ವರ್ಷಾಯುತ ಸಹಸ್ರೇಣ ತಪೋ ರ್ವಾಕ್ ಶಿರಸಾಕೃತಂ" ॥ ಇತ್ಯಾದಿ **ಅನುವಾಖ್ಯಾನವಾಕ್ಯದಂತೆ,** ಚಂದ್ರ ಸೂರ್ಯರು ಪದವಿಗಳನ್ನು ಹೊಂದುವುದಕ್ಕೆ ಪೂರ್ವದಲ್ಲಿ ಅತಿಶಾಂತ ರೂಪ ಮತ್ತು ಸುರೂಪರೆಂಬ ಹೆಸರುಗಳಿಂದ ಗರುಡಪದವಿಗೆ ಯೋಗ್ಯರಾದ ಸುಮನಸರನ್ನು 1 ಮನ್ವಂತರಕಾಲ ಉಪಾಸನೆಮಾಡಿ, ನಾಲ್ಕು ಮನ್ವಂತರ

ಕಾಲ ಅವರಲ್ಲಿ ಭಗವನ್ಮಹಿಮೆಗಳನ್ನು ಶ್ರವಣಮಾಡಿ, ತದನಂತರದಲ್ಲಿ 10 ಸಹಸ್ರ ವರ್ಷಕಾಲ ತಲೆಕೆಳಗಾಗಿ ನಿಂತು, ಉಗ್ರವಾದ ತಪಸ್ಸನ್ನು ಬಹಳ ಕಷ್ಟದಿಂದ ಮಾಡಿ, ಮತ್ತೊಂದು ಸಹಸ್ರವರ್ಷ, ಆಕಾಶದಲ್ಲಿ ಶಯನವಮಾಡಿ, ಸೂರ್ಯಕಿರಣಗಳನ್ನೇ ಪಾನಮಾಡಿ, ಅಪಮೋಕ್ಷದಲ್ಲಿ ಪರಮಾತ್ಮನನ್ನು ಕಾಣುವದು ॥44॥

5. ಶ್ರೀಗುರುಹೃದಯಪ್ರಕಾಶಿಕೆ :

ಚಂದ್ರಾರ್ಕರೆಂಬ ಚಂದ್ರ ಸೂರ್ಯಪದ ಯೋಗ್ಯಜೀವರು, ಪೂರ್ವ ದಲ್ಲಿ ಅತಿಶಾಂತ, ಸುರೂಪ ಎಂದು ಹೆಸರುಳ್ಳವರಾಗಿ, ಎರಡು ಎರಡು ಮನುಕಲ್ಪತನಕ. ಶಾಸ್ತ್ರಶ್ರವಣಾದಿಗಳನ್ನೂ ಮಾಡಿ, ಮನುಕಲ್ಪತನಕ ತಪಸ್ಸು ಮಾಡಿ ತಪೋಬಲದಿಂದ ಈರೈದುಸಾವಿರವೆಂಬ ಹತ್ತುಸಾವಿರವರ್ಷದತನಕ, ಅರ್ವಾಕ್‌ಶಿರಗಳೆಂಬ ತಲೆಕೆಳಗೆ ಮಾಡಿ, ತಪಸ್ಸು ಸಾಧನ ಶ್ರಮಾನಂತರ, ಸ್ವಬಿಂಬನೆಂಬ ಸ್ವಾಧಾರರೂಪನಾದ ದೇವರನ್ನು ಕಾಣುವರು.

"ವರ್ಷಾಯುತಂ ಚ ಸೂರ್ಯೇಣ ತಪೋಽರ್ವಾಕ್ಶಿರಸಾಕೃತಂ । ಸುದುಃಖೇನಸುಖಂ ತ್ವಕ್ತ್ವಾ ಧರ್ಮೇಣಾಕಾಶ ಶಾಯಿನಾ । ಪೀತ್ವಾ ಮರೀಚಯೋ ವರ್ಷಸಾಹಸ್ರಮತಿಸಾದರಮ್" ಎಂಬ **ಅನುವ್ಯಾಖ್ಯಾನಾರ್ಥವು** ವಿವರಿಸಿತು. ॥44॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತ ಸಂಧಿಯಿಂದ ಚಂದ್ರ ಮತ್ತು ಸೂರ್ಯರ ಕಲ್ಪಸಾಧನ ವಿವರಗಳನ್ನು ತಿಳಿಸುತ್ತಾರೆ.

2. ಸೂರ್ಯ ಮತ್ತು ಚಂದ್ರ. ಈರ್ವರ ಕಲ್ಪಸಾಧನಾವಧಿ= 20 ಕಲ್ಪಗಳು.

3. ಸಾಧನಪೂರ್ವ 10 ಕಲ್ಪಗಳು ಮತ್ತು ಸಾಧನೋತ್ತರ ಉಳಿದ 10 ಕಲ್ಪಗಳು.

4. ಸೃಷ್ಟಿಗೆ ಬಂದಾರಭ್ಯ 10 ಕಲ್ಪಗಳು ಸಾಧನಪೂರ್ವ ಅವಧಿ. ನಂತರ ಸಾಧನೋತ್ತರವಾದ 10 ಕಲ್ಪಗಳ ಪೈಕಿ (ಪೂರ್ವದಲ್ಲಿ), ನಾಲ್ಕು ಮನ್ವಂತರಗಳ ಕಾಲ (ಎರಡೆರಡು $2 \times 2 = 4$ ಮನುಕಲ್ಪ). ತದನಂತರ ಉತ್ತಮರಾದ ಗರುಡಪದವಿಗೆ ಬರುವ ಯೋಗ್ಯರಾದ ಗುರುಗಳಲ್ಲಿ ಸಕಲ ಶಾಸ್ತ್ರಾರ್ಥಗಳನ್ನು ಅಧ್ಯಯನ ಮಾಡುವವರಾದರು (ಶ್ರವಣಗೈದು), ಈ ಅವಧಿಯಲ್ಲಿ ಚಂದ್ರಪದವಿಗೆ ಬರುವ ಚೇತನನು, **ಅತಿಶಾಂತ**–ಎಂಬ ಹೆಸರಿನಿಂದಲೂ, ಸೂರ್ಯಪದಯೋಗ್ಯನಾದವನು **ಸುರೂಪ** ಎಂಬ ನಾಮದಿಂದಲೂ (ಅತಿಶಾಂತಸುರೂಪನಾಮದಿ), ಒಂದು ಮನುಕಲ್ಪಕಾಲ ಉಗ್ರವಾದ ತಪಸ್ಸನ್ನು ಆಚರಿಸಿದರು.

ತದನಂತರದಲ್ಲಿ 10 ಸಹಸ್ರ ವರ್ಷಗಳಕಾಲ ತಲೆಕೆಳಗು ಕಾಲು ಮೇಲು ಮಾಡಿ (ಅರ್ವಾಕ್ ಶಿರಗಳಾಗಿ) ಉಗ್ರತಪ್ಸನ್ನು ಮಾಡಿ, ಮತ್ತೊಂದು ಸಹಸ್ರ ವರ್ಷ ಆಕಾಶದಲ್ಲಿ ಶಯನಮಾಡಿ, ತಮ್ಮ ಕಿರಣಗಳನ್ನೇ ಪಾನಮಾಡಿ, ತಪಸ್ಸಿನಿಂದ ಉಂಟಾದ ದುಃಖವನ್ನು ನೀಗಿಕೊಂಡು, ಸ್ವಬಿಂಬನನ್ನು ಅಪರೋಕ್ಷದಲ್ಲಿ ಕಾಣುವರು.

**ಪ್ರಮಾಣ** :–

ಸುರೂಪ ಶಾಂತರೂಪಶ್ಚ ಮನ್ವಂತರ ಚತುಷ್ಟಯಮ್ ।
ಅಶ್ವಿಣ್ವತಾಂ ಸುಮನಸೋ ಮನ್ವಂತರಮುಪಾಸತಾಂ ॥
ವರ್ಷಾಯುತ ಸಹಸ್ರೇಣ ತಪೋರ್ವಾಕ್ ಶಿರಸಾಕೃತಂ ॥
ಸುದುಃಖೇನ ಸುಖಂ ತ್ಯಕ್ತ್ವಾ ಧರ್ಮೇಣಾಕಾಶ ಶಾಯಿನಾ ।
ಪೀತ್ವಾ ಮರೀಚಯೋ ವರ್ಷಸಾಹಸ್ರಮತಿ ಸಾದರವ್ ॥

–ಅನುವ್ಯಾಖ್ಯಾನ ಪ್ರಮಾಣವಾಕ್ಯ.

## ಪದ್ಯ ೪೫

**ಮೂಲ :-**

**ಸಾಧನಗಳಪರೋಕ್ಷಾನಂತರ ।**
**ಐದುವರು ಮೋಕ್ಷವನು ಶಿವ ಶ ।**
**ಕ್ರಾದಿ ದಿವಿಜರು ಉಕ್ತಕ್ರಮದಿಂ ಕಲ್ಪಸಂಖ್ಯೆಯಲಿ ॥**
**ಐದಲೆಯಗೈವತ್ತು ಉಪೇಂದ್ರ ಸ ।**
**ಹೋದರನಿಗಿಪ್ಪತ್ತು ದ್ವಿನವ ತ್ವ ।**
**ಗಾಧಿಪತಿ ಪ್ರಾಣನಿಗೆ ಗುರುವುನುಗಳಿಗೆ ಷೋಡಶವು ॥ ॥೪೫॥**

**ಅವತರಣಿಕೆ :-**

ಸಾಧನಾರ್ಥವಾಗಿ ಬ್ರಹ್ಮಕಲ್ಪಗಳ ವಿವರಗಳನ್ನು ತಿಳಿಸುತ್ತಾರೆ. ॥45॥

**ಪ್ರತಿಪದಾರ್ಥ :-**

**ಆದಿ** = ಜೀವೋತ್ತಮರಾಗಿ ಶ್ರೀವಾಯುದೇವರು, **ಶಿವ** = ಶ್ರೀರುದ್ರದೇವರು, **ಶಕ್ರ** = ಇಂದ್ರದೇವರು, **ದಿವಿಜರು** = ದೇವಗಂಧರ್ವಾಂತ ದೇವತೆಗಳು, **ಸಾಧನಗಳ** = ಅವರವರಿಗೆ ರಾಶಿಯಿಂದ ಸೃಷ್ಟಿಗೆ ಬಂದಾರಭ್ಯ, ಲಿಂಗಭಂಗಪರ್ಯಂತ ಏರ್ಪಟ್ಟಿರುವ ಸಾಧನೆಗಳ, **ಅಪರೋಕ್ಷ** = ಸ್ಥೂಲಹೃದಯಗತ ಶ್ರೀಪರಮಾತ್ಮನನ್ನು ಅಪರೋಕ್ಷೀಕರಿಸಿಕೊಂಡು ತದಾರಭ್ಯ ಅವಶಿಷ್ಟ ಉಳಿದ ಅರ್ಧಕಲ್ಪಗಳ ಸಾಂಕೇತವಾದ ಬ್ರಹ್ಮಕಲ್ಪಗಳಲ್ಲಿ, **ನಂತರ** = ಅನಂತರದಲ್ಲಿ, **ಉಕ್ತಕ್ರಮದಿಂದ** = ಪೂರ್ವೋಕ್ತಪ್ರಕಾರ, **ಐದಲೆಗೈವತ್ತು** = ಐದುತಲೆವುಳ್ಳ ಶ್ರೀರುದ್ರದೇವರಿಗೆ, ಐವತ್ತು ಎಂದರೆ, 40 ದಿನ ಕಲ್ಪಗಳಲ್ಲಿ ಓದಿದ್ದು, 10 ದಿನಕಲ್ಪಗಳಲ್ಲಿ ಲವಣಸಮುದ್ರದಲ್ಲಿ ತಪಸ್ಸು ಮಾಡಿದ್ದು ಅಂತು 50, **ಐವತ್ತು ಕಲ್ಪಸಂಖ್ಯೆಯಲ್ಲಿ** = ಪೂರ್ವೋಕ್ತ

ಪ್ರಕಾರ ಒಂದು ಬ್ರಹ್ಮನದಿನಕಲ್ಪದಲ್ಲಿ, ಒಂದು ಮನುದಿನ ಕಲ್ಪದಲ್ಲಿ ಈ ರೀತಿ ಸಾಧನೆಮಾಡಿ, **ಐದುವರು** - ಅವರವರು ತಮತಮಗೆ ಯೋಗ್ಯವಾದ ಪದ ಐದೋವರಾಗುತ್ತಾರೆ. **ಉಪೇಂದ್ರ ಸಹೋದರನಿಗೆ** = ಸ್ವರ್ಗಗತ ಉಪೇಂದ್ರನಾಮದ ಶ್ರೀಪರಮಾತ್ಮನ ಸಹೋದರ ಇಂದ್ರದೇವರಿಗೆ, **ಇಪ್ಪತ್ತು** = ಅಪರೋಕ್ಷಾತ್ಪೂರ್ವ 20 ಕಲ್ಪಗಳು. ಅಪರೋಕ್ಷಾನಂತರ 20 ಕಲ್ಪಗಳು. ಅಂತು 40 ಕಲ್ಪಗಳು. **ತ್ವಗಾಧಿಪತಿ ಪ್ರಾಣಗೆ.**

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಜೀವೋತ್ತಮರಾದ ಶ್ರೀವಾಯುದೇವರು (ಆದಿ). ರುದ್ರದೇವರು (ಶಿವ), ಇಂದ್ರದೇವರು (ಶಕ್ರ). ದೇವಗಂಧರ್ವಾಂತ ದೇವತೆಗಳು (ದಿವಿ ಜರು). ಅವರವರಿಗೆ ರಾಶಿಯಿಂದ ಸೃಷ್ಟಿಗೆ ಬಂದಾರಭ್ಯ. ಲಿಂಗಭಂಗ ದವರಿಗೂ. ಏರ್ಪಟ್ಟಿರುವ ಆದ್ಯಂತ ಸಾಧನಿ ಬ್ರಹ್ಮಕಲ್ಪಗಳೊಳಗೆ ತದರ್ಧಕಾಲ ಸಾಧನಗಳು ಮಾಡಿ, ಸ್ಥೂಲಹೃದಯದಲ್ಲಿ ಭಗವಂತನ ಅಪರೋಕ್ಷೀಕರಿಸಿ ಕೊಂಡು, ತದಾರಭ್ಯ, ಅವಶಿಷ್ಟ ಉಳಿದ, ಅರ್ಧಕಲ್ಪಗಳ ಸಾಂಕೇತವಾದ ಬ್ರಹ್ಮಕಲ್ಪಗಳಲ್ಲಿ, ಜೀವಾಂತರ್ಗತ ಬಿಂಬಾಪರೋಕ್ಷಕ್ಕಾಗಿ, ಸಾಧನಗಳು ಮಾಡುತ್ತಾ ಬಂದು, ಕೆಲವು ಕಲ್ಪಗಳ, ಅನಂತರದಲ್ಲಿ (ನಂತರ), ಪೂರ್ವೋಕ್ತ ಕ್ರಮದಿಂದ (ಉತ್ಕ್ರಮದಿಂದ). ಉತ್ಕ್ರಮದಾವುದೆಂದರೆ.

(1) ಶ್ರೀವಾಯುದೇವರಿಗೆ–199ನೆಯ ಕಲ್ಪವಾದ ವರ್ತಮಾನ ಕಲ್ಪದಲ್ಲಿ ಮಧ್ವಾಚಾರ್ಯರಾಗಿ, ವೇದವ್ಯಾಸ ದೇವರಲ್ಲಿ ಓದಿ, ಮುಂದಿನ ಕಲ್ಪಕ್ಕೆ ಬ್ರಹ್ಮಪದಕ್ಕೆ ಬರೋಣ.

(2) ಶ್ರೀರುದ್ರದೇವರು, 78ನೆಯ ಬ್ರಹ್ಮಕಲ್ಪದ ನೂರುವರ್ಷಗಳಲ್ಲಿ 76 ವರುಷಗಳು ಗುರುಗಳ ಪ್ರಸಾದಾರ್ಥ ತಪಸ್ಸುಮಾಡೋಣ, ನಲವತ್ತು ದಿನಕಲ್ಪಗಳಲ್ಲಿ ಓದೋಣ, 4460 ದಿನಕಲ್ಪಗಳಲ್ಲಿ ಉಗ್ರತಪಮಾಡೋಣ.

ಇದರಲ್ಲಿ 4450 ದಿನಕಲ್ಪಗಳಲ್ಲಿ ಬಾಹ್ಯದಲ್ಲಿ ಉಗ್ರತಪ, ಹತ್ತುದಿನಕಲ್ಪಗಳಲ್ಲಿ ಲವಣಸಮುದ್ರದಲ್ಲಿ ಉಗ್ರತಪಮಾಡೋಣ-ಈ ಪ್ರಕಾರ ಮಾಡಿ, ಶೇಷಪದ ಐದೋಣ.

(3) ಶ್ರೀಇಂದ್ರಾದೇವರು-79ನೆಯ ಬ್ರಹ್ಮಕಲ್ಪದಲ್ಲಿ (ಅ) ನಾಲ್ಕು ದಿನದಲ್ಲಿ ಗುರುಪ್ರಸಾದಕ್ಕಾಗಿ ತಪಸ್ಸು. (ಆ) ಹತ್ತುದಿನಕಲ್ಪದಲ್ಲಿ ಗುರುಗಳಲ್ಲಿ ಓದೋಣ, (ಇ) ದೇವಮಾನ ಕೋಟಿವರ್ಷ ಧೂಮ್ರಪಾನ ಮಾಡಿ, ಉಗ್ರ ತಪಮಾಡಿ, ಇಂದ್ರಪದ ಐದೋಣ.

(4) ಸೂರ್ಯಚಂದ್ರಾದಿಗಳು, 19ನೆಯ ಬ್ರಹ್ಮಕಲ್ಪದಲ್ಲಿ (ಅ) ಒಂದು ಮನುಕಲ್ಪ ಗುರುಗಳ ಉದ್ದಿಶ್ಯ ತಪಸ್ಸು (ಆ) ನಾಲ್ಕು ಮನುಕಲ್ಪ ಗುರುಗಳಲ್ಲಿ ಓದೋಣ. (ಇ) 5000 ದೇವಮಾನವರ್ಷ ಉಗ್ರತಪಮಾಡಿ, ಸೂರ್ಯ, ಚಂದ್ರಪದ ಪ್ರಾಪ್ತಿ.

ಉತ್ಕ್ರಮದಿಂದ ಎಂಬುದು ಇದೇವೇ. ಈ ಉತ್ಕ್ರಮದಿಂದ ಸಾಧನ ಮಾಡಿ ಪದಪ್ರಾಪ್ತರಾಗುತ್ತಾರೆ. (ಐದಲೆಗೈವತ್ತು) ಐದು ತಲೆಗಳುಳ್ಳ ಶ್ರೀರುದ್ರದೇವರಿಗೆ, ಐವತ್ತು ಎಂದರೆ, 40 ದಿನಕಲ್ಪಗಳಲ್ಲಿ ಓದಿದ್ದು. ಹತ್ತು ದಿನಕಲ್ಪಗಳಲ್ಲಿ ಲವಣಸಮುದ್ರದಲ್ಲಿ ತಪಸ್ಸುಮಾಡಿದ್ದು, ಅಂತು 50. ಐವತ್ತು ಕಲ್ಪಸಂಖ್ಯೆಯಲ್ಲಿ ಪೂರ್ವೋಕ್ತಪ್ರಕಾರ ಒಂದು ಬ್ರಹ್ಮದಿನಕಲ್ಪದಲ್ಲಿ. ಒಂದು ಮನುದಿನಕಲ್ಪದಲ್ಲಿ ಈ ರೀತ್ಯಾಸಾಧನಮಾಡಿ, ಅವರವರು ತಮ ತಮಗೆ ಯೋಗ್ಯವಾದ ಪದ ಐದೋವರಾಗುತ್ತಾರೆ (ಐದುವರು). ಬ್ರಹ್ಮದೇವರಿಗೆ 200 ಕಲ್ಪಗಳು. ಅಪರೋಕ್ಷಾತ್ಪೂರ್ವ-100. ಅಪರೋಕ್ಷಾನಂತರ-100 ಅಂತು 200. ರುದ್ರದೇವರಿಗೆ-80 ಬ್ರಹ್ಮಕಲ್ಪಗಳು. ಇದು ಮೂಲದಲ್ಲಿ ವ್ಯಕ್ತಮಾಡಲಿಲ್ಲ. ಪ್ರಮಾಣಗಳಿಂದ ಸಿದ್ಧ. ಅಪರೋಕ್ಷಾತ್ಪೂರ್ವ-40. ಅಪರೋಕ್ಷಾನಂತರ-40. ಷಣ್ಮಹಿಷಿಯರಿಗೆ 80 ಬ್ರಹ್ಮಕಲ್ಪಗಳು ಪಾರ್ವ ತ್ಯಾದಿಗಳಿಗೆ 80 ಕಲ್ಪಗಳು. ಸ್ವರ್ಗಗತ ಉಪೇಂದ್ರನಾಮಕ ಪರಮಾತ್ಮನ

ಸಹೋದರನಾದ ಇಂದ್ರದೇವರಿಗೆ (ಉಪೇಂದ್ರ ಸಹೋದರನಿಗೆ). ಅಪರೋಕ್ಷಾರತ್ಪೂರ್ವ 20ರಲ್ಲಿ (ಇಪ್ಪತ್ತು). ಅಪರೋಕ್ಷಾನಂತರ 20 ಕಲ್ಪಗಳು. ಅಂತು 40 ಕಲ್ಪಗಳು. ತ್ರಗಿಂದ್ರಿಯಾಭಿಮಾನಿಯಾದ ಅಹಂಕಾರಪ್ರಾಣನಿಗೆ (ತ್ವಗಾಧಿಪತಿ), ಅದರೋಕ್ಷಾತ್ಪೂರ್ವ 18 ಕಲ್ಪಗಳು. ಅಪರೋಕ್ಷಾನಂತರ 18 ಕಲ್ಪಗಳು (ದ್ವಿನವ). ಗುರುಮನುಗಳಿಗೆ ಎಂದರೆ (1) ಬೃಹಸ್ಪತ್ಯಾಚಾರ್ಯರು. (2) ಸ್ವಯಂಭುವಮನು. (3) ಕಾಮಪುತ್ರ ಅನಿರುದ್ಧ. (4) ಕಾಮಪತ್ನಿ ರತೀದೇವಿ. (5) ದಕ್ಷಪ್ರಜೇಶ್ವರ. (6) ಶಚೀದೇವಿ—ಇವರಿಗೆ ಅಪರೋಕ್ಷಾತ್ಪೂರ್ವ 16ರಲ್ಲಿ (ಷೋಡಶವು). ಅಪರೋಕ್ಷಾನಂತರ 16 ಕಲ್ಪಗಳು. ಅಂತು 32 ಕಲ್ಪಗಳು. ಪೂರ್ವೋಕ್ತ ಕಲ್ಪಗಳು ಅಂತ್ಯವಾಗೋಣವೇ, ಲಿಂಗಭಂಗಾಖ್ಯ ಮೋಕ್ಷವನ್ನು ಐದಿ (ಮೋಕ್ಷವನು) ಜೀವಾಕಾರ ಬಿಂಬನನ್ನು ತಮ್ಮ ತಮ್ಮ ಸ್ವರೂಪದಲ್ಲಿ ಸ್ಪಷ್ಟವಾಗಿ ಕಾಣೋವರಾಗುತ್ತಾರೆ. ಈ ಪೂರ್ವೋಕ್ತ ಕಲ್ಪಗಳೆಲ್ಲ ಬ್ರಹ್ಮಕಲ್ಪಗಳೇ (ಮನುಕಲ್ಪವೂ, ದಿನಕಲ್ಪವೂ ಅಲ್ಲ. ಕಲ್ಪಸಂಖ್ಯಾ. "ಬ್ರಹ್ಮಜ್ಞಾನವಿಜ್ಞೇಯಾ ಯೋಗ್ಯ ಚೇತನಾ" ಎಂಬ **ಪ್ರಕಾಶಸಂಹಿತಾ ಪ್ರಮಾಣ**).

## 2. ಭಾವಪ್ರಕಾಶಿಕೆ :—

ರುದ್ರ ಇಂದ್ರಾದಿಗಳಿಗೆ ಮುಂದೆ ಹೇಳುವ ರೀತಿಯಾಗಿ ಕಲ್ಪಸಾಧನಗಳಾದ ಮೇಲೆ, ಅಪರೋಕ್ಷಾನಂತರ ಮುಕ್ತಿಯಾಗುವುದು. ಯಾಲ್ಯಾರಿಗೆ ಎಷ್ಟೆಷ್ಟು ಕಲ್ಪಸಾಧನಗಳೆಂದರೆ— (1) ರುದ್ರದೇವರಿಗೆ 50 ಕಲ್ಪವು (2) ಇಂದ್ರದೇವರಿಗೆ 20 ಕಲ್ಪವೂ ಆಗಬೇಕು. ರುದ್ರದೇವರಿಗೆ ಹೇಳದುದರಿಂದ, ಗರುಡದೇವರೂ ಇವರಿಗೆ ಸಮರಾದುದರಿಂದ, ಇವರಂತೆಯೇ, ಅವರಿಗೂ ಸಾಧನವೆಂದು ತಿಳಿಯಬೇಕು. ಶೇಷಪದವಿಯನ್ನು ಹೊಂದುವವರು ರುದ್ರದೇವರೇ ಆದುದರಿಂದ, ಅವರ ಸಾಧನವು ಬೇರೆಯಾಗಿ ಹೇಳಲಿಲ್ಲ. ಇಂದ್ರನಿಗೆ ಹೇಳಿದಂತೆ, ಮನ್ಮಥನಿಗೂ ತಿಳಿಯಬೇಕು. ಅಹಂಕಾರಿಕ ಪ್ರಾಣನಿಗೆ 18 ಕಲ್ಪಗಳೂ, ಗುರು, ಮನು, ರತಿ, ದಕ್ಷ, ಶಚಿಗಳಿಗೆ—17 ಕಲ್ಪಗಳೆಂದೂ ತಾತ್ಪರ್ಯ. ಈ ಕಲ್ಪಸಾಧನ ವಿಷಯದಲ್ಲಿ—ರುದ್ರದೇವರಿಗೆ 50 ಕಲ್ಪ

ಸಾಧನವೆಂದು ಮೊದಲನೆಯ ಸಂಧಿಯ– "ಕೃತ್ತಿವಾಸನೆ ನೀ ನಾಲ್ವತ್ತು"– ಎಂಬ ಪದ್ಯದ ವಿಶೇಷಾರ್ಥದಲ್ಲಿ ಸಪ್ರಮಾಣವಾಗಿ ವಿವರ ಮಾಡಿರುತ್ತದೆ. ಮತ್ತೆ ಇಲ್ಲಿ ಬರೆಯುವ ಅವಶ್ಯವಿಲ್ಲ. "ವಿಂಶತ್ಕಲ್ಪಮಿತಾಸ್ತ್ವಿಂದ್ರ ಜೀತಾದ್ವಿಸವ ಕಲ್ಪಕಾः॥ ಅಹಂಪ್ರಾಣ ಪದಾರ್ಥಶ್ಚ ಗುರ್ವಾದ್ಯಾಃ ಷ್ಟ ಕಲ್ಪಕಾः॥– ಎಂಬ **ಪ್ರಕಾಶಸಂಹಿತೆಯ** ವಾಕ್ಯವು ಮೇಲಿನ ವಾಕ್ಯಕ್ಕೆ ಆಧಾರವೆಂದು ತಿಳಿಯಬೇಕು. ॥45॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ದೇವತಾವರ್ಗದಲ್ಲಿ ಕಲ್ಪಸಾಧನ ವಿಚಾರ ಎರಡು ಪ್ರಕಾರ :– (1) ಅಪರೋಕ್ಷಾತ್ಪೂರ್ವ (2) ಅಪರೋಕ್ಷಾನಂತರ ಈ ಎರಡು ಅವಧಿಗಳ ಕಲ್ಪ ಸಮಾನವಾಗಿರುತ್ತದೆ.

2. ಇದರಂತೆ, ಶ್ರೀರುದ್ರದೇವರಿಗೆ ಸೃಷ್ಟಿಗೆ ಬಂದಾರಾಧ್ಯ, ಅಪರೋಕ್ಷಾತ್ಪೂರ್ವ 40 ಕಲ್ಪಸಾಧನ. ಅಪರೋಕ್ಷಾನಂತರ 40 ಕಲ್ಪಗಳ ಸಾಧನ· ಈ 40 ಕಲ್ಪಗಳ ಅವಧಿಯಲ್ಲಿ 39ನೆಯ ಕಲ್ಪದಲ್ಲಿ 40 ಬ್ರಹ್ಮದಿನಕಲ್ಪಗಳ ಕಾಲ ಶ್ರೀವಾಯುದೇವರಲ್ಲಿ ಶಾಸ್ತ್ರಾಧ್ಯಯನ. ಮುಂದೆ 10 ಬ್ರಹ್ಮದಿನಕಲ್ಪಗಳಲ್ಲಿ ಲವಣಸಮುದ್ರದಲ್ಲಿ "ಉಗ್ರತಪ" ನಾಮಕರಾಗಿ ಘೋರವಾದ ತಪಸ್ಸಿನ ಆಚರಣೆ. ನಂತರ, ದೇವತಾವರ್ಗದಲ್ಲಿ ಉತ್ತಮರೆನಿಸಿ, ರುದ್ರಪದವಿಯನ್ನು ಹೊಂದುವರು. ಮುಂದಿನ ಕಲ್ಪದಲ್ಲಿ ಶ್ರೀಶೇಷಪದವಿಯನ್ನು ಹೊಂದಿ, ಶ್ರೀಹರಿಯ ಶಯನರೂಪದಲ್ಲಿ ಸೇವಾಮಾಡಿ. ಲಿಂಗಭಂಗವನ್ನು ಹೊಂದಿ ಮುಕ್ತಿಯನ್ನೈದುವರು.

3. ಇದೇ ರೀತಿಯಲ್ಲಿ ಇಂದ್ರ ಮತ್ತು ಮನ್ಮಥರಿಗೆ 40 ಕಲ್ಪಗಳ ಸಾಧನ,

(1) ಅಪರೋಕ್ಷಾತ್ಪೂರ್ವದಲ್ಲಿ 20 ಕಲ್ಪಗಳು, (2) ಅಪರೋಕ್ಷಾನಂತರ ಉಳಿದ 20 ಕಲ್ಪಗಳು.

4. ಇದೇ ರೀತಿಯಲ್ಲಿ (ಉತ್ಕ್ರಮದಿಂದ) ರುದ್ರ, ಇಂದ್ರಾದಿ ದೇವತೆಗಳು (ಶಿವ ಶಕ್ರಾದಿ ದಿವಿಜರು) ಕಲ್ಪಸಂಖ್ಯೆಯಲ್ಲಿ ಸಾಧನಮಾಡಿ, ಅವರವರ ಪದವಿಯನ್ನು ಹೊಂದಿ, ಮುಕ್ತಿಯನ್ನೈದುವರು.

5. **ಅಹಂಕಾರಿಕ ಪ್ರಾಣನು** :- ತ್ವಗಿಂದ್ರಿಯಾಭಿಮಾನಿ ದೇವತಾ. ತ್ವಗಿಂದ್ರಿಯದ ಗುಣ ಸ್ಪರ್ಶಜ್ಞಾನವು. ಇದರಿಂದ ಅಹಂಕಾರಿಕ ಪ್ರಾಣನು ಸ್ಪರ್ಶಗುಣಗ್ರಾಹಕನು.

ತ್ವಗಿಂದ್ರಿಯವು ನಮ್ಮ ಸ್ಥೂಲಶರೀರಾದ್ಯಂತ ವ್ಯಾಪಿಸಿದೆ. ಇದರಿಂದ, ಅಹಂಕಾರಿಕ ಪ್ರಾಣನು-ಶರೀರಾಭಿಮಾನಿಯು. ಅಹಂಕಾರಿಕ ಪ್ರಾಣನು 49 ಮರುದ್ಗಣಗಳಲ್ಲಿ ಸೇರಿದ ದೇವತೆಯು. ಇವನಿಗೆ 36 ಕಲ್ಪಸಾಧನವು. (1) ಅಪರೋಕ್ಷಾತ್ಪೂರ್ವ 18 ಕಲ್ಪಗಳು (ದ್ವಿನವ) ದ್ವಿ = ಎರಡು, ನವ = ಒಂಭತ್ತು ಅಲ್ಲಿಗೆ ದ್ವಿನವ ಎಂದರೆ $2 \times 9 = 18$ ಸಂಖ್ಯಾಸಾಂಕೇತ

6. ಮುಂದಿನ ಕಕ್ಷಾವನ್ನರಾದ ಬೃಹಸ್ಪತ್ಯಾಚಾರ್ಯರು (ಗುರು), ಸ್ವಾಯಂಭೂವಮನು (ಮನು), ರತೀ, ದಕ್ಷಪ್ರಜಾಪತಿ, ಇಂದ್ರಪತ್ನಿ ಶಚೀ ದೇವರಿಗೆ 16 ಕಲ್ಪಗಳ ಸಾಧನ (ಷೋಡಶವು). (1) ಅಪರೋಕ್ಷಾತ್ಪೂರ್ವ 16 ಕಲ್ಪಗಳು, (2) ಅಪರೋಕ್ಷಾನಂತರ 16 ಕಲ್ಪಗಳು. ಅಲ್ಲಿಗೆ 32 ಕಲ್ಪಸಾಧನಗಳು.

**ಪ್ರಮಾಣ :**

"ವಿಂಶತ್ಕಲ್ಪಮಿತಾಸ್ತ್ವಿಂದ್ರ ಜೀವಾದ್ವಿನವ ಕಲ್ಪಕಾಃ ॥ ಅಹಂ ಪ್ರಾಣ ಪದಾರ್ಥಶ್ಚ ಗುರ್ವಾದ್ಯಾದ್ವ್ಯಷ್ಟ ಕಾಲಕಾಃ ॥

**-ಪ್ರಕಾಶ ಸಂಹಿತಾ ಪ್ರಮಾಣ.**

## ಪದ್ಯ ೪೯

**ಮೂಲ :-**

**ಪ್ರವಹಮರುತಗೆ ಹನ್ನೆರಡು ಸೈಂ ।**
**ಧವ ದಿವಾಕರ ಧರ್ಮರಿಗೆ ದಶ ।**
**ನವಸುಕಲ್ಪವು ಮಿತ್ರರಿಗೆ ಶೇಷಶತಜನರಿಗೆಂಟು ॥**
**ಕವಿ ಸನಕ ಸುನಂದನ ಸನ ।**
**ತ್ಕುವರ ಮುನಿಗಳಿಗೇಳು ವರುಣನ ।**
**ಯುವತಿ ಪರ್ಜನ್ಯಾದಿ ಪುಷ್ಕರಗಾರು ಕಲ್ಪದಲಿ ॥** ||೪೬||

**ಅವತರಣಿಕೆ :-**

ಪ್ರವಹವಾಯು, ಚಂದ್ರ, ಸೂರ್ಯ, ಮಿತ್ರನಾಮಕಸೂರ್ಯ, ಶೇಷಶವಸ್ಥರು, ವರುಣ ದೇವರು ಇತ್ಯಾದಿ ದೇವತಾ ವರ್ಗದವರ ಕಲ್ಪಸಾಧನ ವಿಚಾರವನ್ನು ತಿಳಿಸುತ್ತಾರೆ. ॥46॥

**ಪ್ರತಿಪದಾರ್ಥ :-**

**ಪ್ರವಹಮರುತಗೆ** = ಪ್ರವಹವಾಯುವಿಗೆ, **ಹನ್ನೆರಡು** = ಅಪರೋಕ್ಷಾತ್ಪೂರ್ವ 12 ಮತ್ತು ಅಪರೋಕ್ಷಾನಂತರ 12 ಅಂತು 24 ಬ್ರಹ್ಮಕಲ್ಪಗಳ ಸಾಧನ, **ಸೈಂಧವ** = ಕ್ಷೀರಸಮುದ್ರೋತ್ಪನ್ನನಾದ ಚಂದ್ರದೇವರು, **ದಿವಾಕರ** = ವಿವಸ್ವಾನ್‌ನಾಮಕ ಸೂರ್ಯದೇವರು, **ಧರ್ಮರಿಗೆ** = ಯಮದೇವರು, ಹಾಗೆಯೇ ಸ್ವಾಯಂಭುವ ಮನು ಪತ್ನಿ ಶತರೂಪಾದೇವಿ ಈ ನಾಲ್ಕು ಮಂದಿಗೆ, **ದಶ** = ಅಪರೋಕ್ಷಾತ್ಪೂರ್ವ 10 ಕಲ್ಪಗಳು ಮತ್ತು ಅಪರೋಕ್ಷಾನಂತರ 10 ಕಲ್ಪಗಳು, ಅಂತು 20 ಬ್ರಹ್ಮಕಲ್ಪಗಳು, **ಮಿತ್ರರಿಗೆ**

= ವರುಣ ಆರಂಭ ಮಾಡಿ, ಮಿತ್ರಾಂತವರೆಗೆ. **= ಸವಸುಕಲ್ಪವು** = ಅಪರೋಕ್ಷಾತ್ಪೂರ್ವ 9 ಕಲ್ಪಗಳು, ಅಪರೋಕ್ಷಾನಂತರ, 9 ಕಲ್ಪಗಳು, ಅಂತು, 18 ಬ್ರಹ್ಮಕಲ್ಪಗಳು, **ಶೇಷಶತಜನರಿಗೆ** = 100 ಮಂದಿ ಸೋಮಪಾನಾರ್ಹರ ಪೈಕಿ, 15 ಜನಗಳನ್ನು ಬಿಟ್ಟು, ಉಳಿದ 15 ಮಂದಿ ಶೇಷಶತಸ್ಥರಿಗೆ, **ಎಂಟು** = ಅಪರೋಕ್ಷಾತ್ಪೂರ್ವ 8 ಕಲ್ಪಗಳು. ಅಪರೋಕ್ಷಾನಂತರ 8 ಕಲ್ಪಗಳು, ಅಂತು 16 ಬ್ರಹ್ಮಕಲ್ಪಗಳು, **ಕವಿ** = 19ನೆಯ ಕಕ್ಷದ ಶುಕ್ರಾಚಾರ್ಯರು, **ಸನಕ ಸುಸನಂದನ ಸನತ್ಕುವರ** = ಸನಕ ಸನಂದನ ಸನತ್ಕುಮಾರ ಇವರುಗಳಿಗೆ, **ಮುನಿಗಳಿಗೆ** = ಈ ಋಷಿವರ್‍ಯರಿಗೆ, **ಏಳು** = ಅಪರೋಕ್ಷಾತ್ಪೂರ್ವ 7 ಕಲ್ಪಗಳು. ಅಪರೋಕ್ಷಾನಂತರ 7 ಕಲ್ಪಗಳು. ಅಂತು, 14 ಬ್ರಹ್ಮಕಲ್ಪಗಳು, **ವರುಣನ ಯುವತಿ** = 20ನೆಯ ಕಕ್ಷದ ವರುಣನ ಪತ್ನಿ ಗಂಗಾದೇವಿ, **ಪರ್ಜನ್ಯಾದಿ ಪುಷ್ಕರಗೆ** = ಪರ್ಜನ್ಯನಿಂದ ಆರಂಭಿಸಿ, ಪುಷ್ಕರನ ಪರ್‍ಯಂತ **ಆರುಕಲ್ಪದಲಿ** = 6 + 6 = 12 ಬ್ರಹ್ಮಕಲ್ಪಗಳು ಸಾಧನ.

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಪ್ರವಹವಾಯುವಿಗೆ (ಪ್ರವಹಮರುತಗೆ), ಅಪರೋಕ್ಷಾತ್ಪೂರ್ವ 12, ಅಪರೋಕ್ಷಾನಂತರ 12, ಅಂತು, 24 ಬ್ರಹ್ಮಕಲ್ಪಗಳು. (ಹನ್ನೆರಡು) "ಸಿಂಧೋಃ ಅಪತ್ಯಂ ಪುಮಾನ್ ಸೈಂಧವಃ" ಎಂದರೆ, ಕ್ಷೀರಸಾಗರೋತ್ಪನ್ನನಾದ ಚಂದ್ರದೇವರು (ಸೈಂಧವ)· (2) ವಿವಸ್ವಾನ್‌ನಾಮಕಸೂರ್ಯ, (ದಿವಾಕರ), (3) ಯಮದೇವರು (ಧರ್ಮರಿಗೆ) ಹಾಗೂ (4) ಸ್ವಾಯಂಭುವ ಮನುಪತ್ನಿ ಶತರೂಪಾದೇವಿ. ಈ ನಾಲ್ಕುಮಂದಿಗೆ, ಅಪರೋಕ್ಷಾತ್ಪೂರ್ವ 10, ಅಪರೋಕ್ಷಾನಂತರ 10, ಅಂತು 20 ಕಲ್ಪಗಳು. ವರುಣ ಆರಂಭಮಾಡಿ ಮಿತ್ರರಿಗೆ, ಮಿತ್ರಾಂತವರೆಗೆ- 13ನೆಯ ಕಕ್ಷದವರಾದ ವರುಣದೇವರು; 14ನೆಯ ಕಕ್ಷದವರಾದ ನಾರದರು; 15ನೆಯ ಕಕ್ಷದವರಾದ ಭೃಗು, ಅಗ್ನಿ,

ದಕ್ಷಪತ್ನಿ ಪ್ರಸೂತಿ, ಈ ಮೂವರು; 16ನೆಯ ಕಕ್ಷದವರಾದ ಸಪ್ತಋಷಿಗಳು ಮತ್ತು ವಿಶ್ವಾಮಿತ್ರ, ವೈವಸ್ವತಮನು, ಇವರು 9 ಮಂದಿ, 17ನೆಯ ಕಕ್ಷದವರಾದ ಮಿತ್ರನಾಮಕಸೂರ್ಯ, ಗುರುಪತ್ನಿ ತಾರಾದೇವಿ, ನಿರಋತಿ, ಪ್ರವಹ ವಾಯುಪತ್ನಿ ಪ್ರಾವಹೀ ಈ ನಾಲ್ಕುಮಂದಿ. ಈ ರೀತಿ 13, 14, 15, 16 ಮತ್ತು 17–ಈ ನಾಲ್ಕು ಕಕ್ಷಗತರಾದ ವರುಣಾರಭ್ಯ ಮಿತ್ರಾಂತವರೆಗೂ 18 ಮಂದಿಗೆ ಸಮೀಚೀನವಾದ ಬ್ರಹ್ಮಕಲ್ಪಗಳು, ಅಪರೋಕ್ಷಾತ್ಪೂರ್ವ 9 ಬ್ರಹ್ಮಕಲ್ಪಗಳು, ಅಪರೋಕ್ಷನಂತರ 9 ಬ್ರಹ್ಮಕಲ್ಪಗಳು. ಅಂತು 18 ಬ್ರಹ್ಮಕಲ್ಪಗಳು (ನವಸುಕಲ್ಪವು) ಶೇತಶತಸ್ಥರಿಗೆ ಎಂಟು ಅಂದರೆ ರುದ್ರಗಣ, 10. ಆದಿತ್ಯರು 6, ಅಶ್ವಿನೀದೇವತೆಗಳು 2, ಋಭು 1, ವಸುಗಳು 3, ವಿಶ್ವೇದೇವತೆಗಳು 10, ದ್ಯಾವಾಪೃಥ್ವೀ 2. ಮರುತ್ತರು 47, ಅಂತು ಒಟ್ಟು 85 ಮಂದಿ ಶೇಷಶವಸ್ಥರಿಗೆ, ಮತ್ತು ಕುಬೇರ ವಿನಾಯಕ ವಾಯುಪುತ್ರ ವಿಷ್ವಕ್ಸೇನ ಈ ಮೂರುಮಂದಿ ಸೇರಿ 88 ಮಂದಿ ಇವರು 18ನೆಯ ಕಕ್ಷಾಪನ್ನರು, ಇವರಿಗೆ ಎಂಟು ಅಂದರೆ, ಅಪರೋಕ್ಷಾತ್ಪೂರ್ವ 8 ಬ್ರಹ್ಮಕಲ್ಪಗಳು. ಅಪರೋಕ್ಷಾನಂತರ 8 ಬ್ರಹ್ಮಕಲ್ಪಗಳು. ಅಂತು 16 ಬ್ರಹ್ಮಕಲ್ಪಗಳು. 16ನೆಯ ಕಕ್ಷದವರಾದ ಶುಕ್ರಾಚಾರ್ಯರು (ಕವಿ), ಸನಕ, ಸನಂದನ, ಸನತ್ಕುಮಾರ ಇವರುಗಳು. ಈ ಮುನಿಗಳಿಗೇನು (ಮುನಿಗಳಿಗೆ) ಇನ್ನೂ ಈ ಕಕ್ಷದವರಾದ ಇಂದ್ರರು 7, ಪ್ರಹ್ಲಾದ ಮನುಗಳು 11, ವಾಯುಪುತ್ರ ಮರೀಚಿ, ಅಗ್ನಿಪುತ್ರಪಾವಕ ಹರಿ ಅಂಗಾರಕರ ಚಂಡಗಣ 1, ಕಪಾಲ ಕಾಮಧೇನು ಸದ್ಯಭಿಮಾನಿಗಳು 1, ಕೇಚನ ದ್ವಾರಪಾಲಕರು ಚಿಂತಾಮಣಿ ಶಿಕತಾಭಿಮಾನಿಗಳು ಚಿತ್ರಗುಪ್ತರು. ಯಮನ ವಾಹನ ಮಹಿಷ, ಸರೋವರಾಭಿಮಾನಿಗಳು 1, ಹೈಹಯಾದಿ ಧ್ರುವ ಮೊದಲಾದ ಅರಸರು 100, ಪಾರಿಜಾತವೃಕ್ಷ, ಯೂಪಾಭಿಮಾನಿಗಳು, ಒಂದು, ಕಲ್ಪವೃಕ್ಷ, ಉಚ್ಚೈಶ್ರವ, ಋಷಿಗಳು–ಒಂದು, ಪಿತೃಗಳು ಏಳು ವಿಷ್ಣುಪಾರ್ಷದರು ಒಂದು, ಗಂಧರ್ವರು ಎಂಟು, ಐರಾವತ, ಕಾಲಾಖ್ಯರು ಒಂದು, ಅಪ್ಸರಸ್ತ್ರೀಯರು 2, ಔಷಧಾಭಿಮಾನಿಗಳು ಒಂದು, ಅರ್ಚಿರಮಾರ್ಗದಿವಿಜರು ಒಂದು, ಕೂಪಾಭಿಮಾನಿಗಳು ಒಂದು, ಧೂಮಮಾರ್ಗದಿವಿಜರು ಒಂದು, ಏತಾದೃಶರಾದ 19ನೆಯ ಕಕ್ಷದವ

ರಾದ ಬಹುಮಂದಿ ದೇವತೆಗಳಿಗೆ, ಅಪರೋಕ್ಷಾತ್ಪೂರ್ವ 7 ಬ್ರಹ್ಮಕಲ್ಪಗಳು, ಅಪರೋಕ್ಷಾನಂತರ 7 ಬ್ರಹ್ಮಕಲ್ಪಗಳು (ಏಳು), ಅಂತು, 14 ಬ್ರಹ್ಮಕಲ್ಪಗಳು. 20ನೆಯ ಕಕ್ಷದವರಾದ, ಗಂಗಾದೇವಿ (ವರುಣಯುವತಿ), ಯಮಪತ್ನಿ ಶ್ಯಾಮಲಾದೇವಿ, ಚಂದ್ರಪತ್ನಿ ರೋಹಿಣೀ, ಪರ್ಜನ್ಯಾ (ಪರ್ಜನ್ಯ), ಸೂರ್ಯ ಪತ್ನೀ ಸಂಜ್ಞಾದೇವಿ, ಅನಿರುದ್ಧನಪತ್ನಿ ವಿರಾಟ್‌ದೇವಿ ಈ ಆರುಮಂದಿ, ವರುಣಪತ್ನಿ ಆರಂಭವಾಡಿ [ಆದಿ], ಪುಷ್ಕರನವರೆವಿಗೂ [ಪುಷ್ಕರಗೆ], ಈ ಮಧ್ಯದವರಾದ ದೇವತಾಗಣ [21ನೆಯ ಕಕ್ಷ-26ನೆಯ ಸಂಧಿಯಲ್ಲಿ ಹೇಳಿದ ಮ್ಯಾರಿಗೆ ಅನಭಿಮಾನಿದೇವತೆಗಳು, ಕೇಚನವಯನಿಗಳು 22ನೆಯ ಕಕ್ಷದ ಒಂದು ಅಗ್ನಿಪತ್ನಿ ಸ್ವಾಹಾದೇವಿ, 23ನೆಯ ಕಕ್ಷದ ಜಲಾಭಿಮಾನಿ ಬುಧ, 24ನೆಯ ಕಕ್ಷದ ಶನೈಶ್ಚರ, 27ನೆಯ ಕಕ್ಷದ ಪುಷ್ಕರಃ ಇಪ್ಪತ್ತನೇ ಕಕ್ಷ ಅಶ್ವಿನೀಭಾರ್ಯಾ ಉಷಾದೇವಿ, 25ನೆಯ ಕಕ್ಷದ ಧರಣೀದೇವಿ, 26ನೆಯ ಕಕ್ಷದ ಶನೈಶ್ಚರ, 27ನೆಯ ಕಕ್ಷದ ಪುಷ್ಕರ, ಇಪ್ಪತ್ತನೆ ಕಕ್ಷ ವರುಣಪತ್ನಿ ಆರಂಭ ಮಾಡಿ, 27ನೆಯ ಕಕ್ಷದವನಾದ ಪುಷ್ಕರನವರೆವಿಗೂ ಈ ಯಾವತ್ತು ದೇವತೆಗಳಿಗೂ, ಅಪರೋಕ್ಷಾತ್ಪೂರ್ವ 6 ಬ್ರಹ್ಮಕಲ್ಪಗಳು, ಅಪರೋಕ್ಷಾನಂತರ 6 ಬ್ರಹ್ಮಕಲ್ಪಗಳು [ಆರು ಕಲ್ಪದಲ್ಲಿ], ಅಂತು 12 ಬ್ರಹ್ಮ ಕಲ್ಪಗಳಲ್ಲಿ ಲಿಂಗಭಂಗ. ಅಂತು, ಬ್ರಹ್ಮದೇರಾರಭ್ಯ ಪುಷ್ಕರಾಂತವರಿಗೂ ಒಂಭತ್ತುಕೋಟಿ ದೇವತೆಗಳ ಸಾಧನ ಉಕ್ತವಾಯಿತು. ಇನ್ನು ಮ್ಯಾಲೆ ಅಜಾನಜರ ಸಾಧನ ವಿಚಾರ.

**2. ಭಾವಪ್ರಕಾಶಿಕೆ :–**

॥ಪ್ರವಹಸ್ತು ದ್ವಿಷಟ್ಕಲ್ಪೈಃ ಸೂರ್ಯ ದ್ವಾದಶಕಲ್ಪಕಾಃ॥ ಮಿತ್ರಾದೀನಾಂ ಚ ನವಸ್ತೂಕ್ತೆ ಶೇಷಗಣಸ್ಯ ತು॥ ಅಷ್ಟಭಿಃ ಸಪ್ತಭಿಃ ಕಲ್ಪೈಃ ಸನಕಾದಿ ಗಣಸ್ಯ ತು॥ ಷಡ್ಭಿಃ ಪರ್ಜನ್ಯಮಾರಭ್ಯ ಪುಷ್ಕರಾಂತಗಣಸ್ಯ ವೈ॥ ಎಂಬ ಪ್ರಕಾಶಸಂಹಿತೆಯ ವಾಕ್ಯದಿಂದ ಈ ಪದ್ಯಾರ್ಥವು ಹೀಗೆ ತಿಳಿಯಬೇಕು. ಪ್ರವಹವಾಯುವಿಗೆ 12 ಕಲ್ಪಸಾಧನೆಯಿಂದಲೂ, ಸೂರ್ಯ, ಚಂದ್ರ ಯಮ ಮೊದಲಾದವರಿಗೆ 10 ಕಲ್ಪಗಳಿಂದಲೂ, ಮಿತ್ರ, ತಾರೆ ಮೊದಲಾದವರಿಗೆ 9 ಕಲ್ಪಗಳಿಂದಲೂ, ಹಿಂದೆ ಹೇಳಿದ ಮನು, ಸೂರ್ಯ, ಇಂದ್ರ ಮೊದಲಾದ ಸೋಮಪಾನಾರ್ಹರಾದ ದೇವತಾವರ್ಗ 100ರ ಪೈಕಿ, ಪ್ರಧಾನವಾಯು

ಮೊದಲಾದ 15 ದೇವತೆಗಳನ್ನು ಬಿಟ್ಟು, ಉಳಿದ 85 ಮಂದಿ ಶೇಷಶತಸ್ಥರಿಗೆ 8 ಕಲ್ಪಸಾಧನದಿಂದಲೂ, ಭಾರ್ಗವ, ಸನಕ, ಸನಂದನ, ಸನತ್ಕುಮಾರ ಇವರ ಗಳಿಗೆ 7 ಕಲ್ಪಸಾಧನದಿಂದಲೂ, ಗಂಗೆ, ಪರ್ಜನ್ಯ ಆರಂಭಿಸಿ ಪುಷ್ಕರನವರೆ ವಿಗೂ ಇರುವ ದೇವತೆಗಳಿಗೆ 6 ಕಲ್ಪಸಾಧನದಿಂದಲೂ ಅಪರೋಕ್ಷವಾಗಿ ಮುಕ್ತಿಯಾಗುವುದೆಂಬ ಭಾವ. ॥46॥

**5. ಗುರುಹೃದಯಪ್ರಕಾಶಿಕೆ :**

ಪ್ರವಹವಾಯುದೇವರಿಗೆ 12 ಕಲ್ಪಸಾಧನ, ಸ್ವೈಂಧವ ಎಂದರೆ, ಸಮು ದ್ರಾಭಿಮಾನಿ ವರುಣನಿಗೆ, ದಿವಾಕರನೆಂಬ ಸೂರ್ಯನಿಗೆ, ಯಮಧರ್ಮಗೆ ಸಹ 10 ಕಲ್ಪಸಾಧನವು. ಮಿತ್ರನಾಮಕಸೂರ್ಯನಿಗೆ 9 ಕಲ್ಪಸಾಧನ. ಶೇಷಶತ ಸ್ಥರಿಗೆ 8 ಕಲ್ಪಸಾಧನ, ಕವಿ ಎಂಬ ಜ್ಞಾನಿಗಳಾದ ಸನಕ, ಸನಂದನ ಸನತ್ಕು ಮಾರ ಮೊದಲಾದ ಮುನಿಗಳಿಗೆ, 7 ಕಲ್ಪ. ವರುಣಪತ್ನಿಗೆ, ಪರ್ಜನ್ಯನೆಂಬ ಸೂರ್ಯ, ಪುಷ್ಕರನವರೆವಿಗೂ 6 ಕಲ್ಪಸಾಧನ. ॥46॥

## ಸರ್ವವ್ಯಾಖ್ಯಾನಸಾರಸಂಗ್ರಹ

1. 11ನೆಯ ಕಕ್ಷಾಪನ್ನನಾದ **ಪ್ರವಹವಾಯುವಿಗೆ** ಅಪರೋಕ್ಷಾ ತ್ಪೂರ್ವ 12 ಬ್ರಹ್ಮಗಳು, ಅಪರೋಕ್ಷಾನಂತರ 12 ಬ್ರಹ್ಮಕಲ್ಪಗಳು. ಅಂತು **24 ಬ್ರಹ್ಮಕಲ್ಪಗಳ ಸಾಧನ.**

2. 12ನೆಯ ಕಕ್ಷಕ್ಕೆ ಸೇರಿದ ವಿವಸ್ವಾನ್‌ನಾಮಕ ಸೂರ್ಯ. ಚಂದ್ರ [ಸ್ವೈಂಧವ] ಯಮದೇವರು ಮತ್ತು ಸ್ವಾಯಂಭುವಮನುವಿನ ಪತ್ನಿ ಶತ ರೂಪಾದೇವಿ ಈ ನಾಲ್ವರಿಗೆ ಅಪರೋಕ್ಷಾತಪೂರ್ವ 10 ಕಲ್ಪಗಳು, ಅಪರೋ ಕ್ಷಾನಂತರ 10 ಕಲ್ಪಗಳು. ಅಂತು **20 ಕಲ್ಪಗಳ ಸಾಧನೆ.**

**ಮುಖ್ಯಾಂಶ :** ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನದಲ್ಲಿ "ಸೈಂಧವ" ಎಂದರೆ, ಸಮುದ್ರಾಭಿಮಾನಿ ವರುಣ ಎಂದು ಹೇಳಿದೆ. ವರುಣನು 13ನೆಯ ಕಕ್ಷಕ್ಕೆ ಸೇರಿದ ದೇವತೆ ಸೈಂಧವ ಎಂದರೆ, ಕ್ಷೀರಸಮುದ್ರ ಮಥನ ಸಮಯದಲ್ಲಿ ಹುಟ್ಟಿದ ಚಂದ್ರನೆಂದು ಅರ್ಥ. ಮುಂದೆ ಮಿತ್ರರಿಗೆ ಎಂದು ಹೇಳಿರುವುದರಿಂದ, ಅಲ್ಲಿ ವರುಣನನ್ನು ಸೇರಿಸಿಕೊಳ್ಳಬೇಕು. ಇದರಿಂದ ಸೈಂಧವ ಎಂಬ ಶಬ್ದಕ್ಕೆ ಸಿಂಧುಸಂಜಾತನಾದ ಚಂದ್ರನೆಂದು ಪರಿಗಣಿಸಬೇಕು.

3. (1) 13ನೆಯ ಕಕ್ಷಾಪನ್ನನಾದ ವರುಣ, (2) 14ನೆಯ ಕಕ್ಷದ ನಾರದರು, (3) ಭೃಗು, ಪ್ರಸೂತಿ, ಅಗ್ನಿ (15ನೆಯ ಕಕ್ಷ), (4) ಸಪ್ತರ್ಷಿಗಳು, ವಿಶ್ವಾಮಿತ್ರ ಮತ್ತು ವೈವಸ್ವತಮನು (16ನೆಯ ಕಕ್ಷ) ಈ 9 ಮಂದಿ, (5) 17ನೆಯ ಕಕ್ಷಾಪನ್ನರಾದ ಮಿತ್ರನಾಮಕ ಸೂರ್ಯ ಗುರು ಪತ್ನಿ ತಾರಾದೇವಿ ನಿರಋತಿ ಪ್ರವಹ ವಾಯುವಿನ ಪತ್ನಿ ಪ್ರಾವಹೀ ಈ ನಾಲ್ಕುಮಂದಿ, (6) ಸೋಮಪಾನಾರ್ಹರಾದ 100 ದೇವತೆಗಳಲ್ಲಿ 15 ದೇವತೆಗಳನ್ನು ಬಿಟ್ಟು ಉಳಿದ 85 ಮಂದಿ ಶೇತಶತಸ್ಥರು (18ನೆಯ ಕಕ್ಷ) ಮತ್ತು ಅದೇ ಕಕ್ಷಾಪನ್ನರಾದ ಕುಬೇರ, ವಿಷ್ವಕ್ಸೇನ ಮತ್ತು ಗಣಪತಿ ಈ 3 ಮಂದಿ. ಈ ಗಣದವರಿಗೆಲ್ಲಾ ಅಪರೋಕ್ಷಾತ್ಪೂರ್ವ 8 ಬ್ರಹ್ಮಕಲ್ಪಗಳು ಮತ್ತು ಅಪರೋಕ್ಷಾನಂತರ 8 ಕಲ್ಪಗಳು. ಅಂತು ಒಟ್ಟು 16 ಕಲ್ಪಸಾಧನೆ.

4. 19ನೆಯ ಕಕ್ಷಾಪನ್ನರಾದ (1) ಶುಕ್ರಾಚಾರ್ಯರು (ಕವಿ) (2) ಸನಕ, ಸನಂದನ, ಸನತ್ಕುಮಾರ ಈ ಮುನಿಶ್ರೇಷ್ಠರು. ಇವರಿಗೆ ಅಪರೋಕ್ಷಾತ್ಪೂರ್ವ 7 ಕಲ್ಪಗಳು, ಅಪರೋಕ್ಷಾ ನಂತರ 7 ಕಲ್ಪಗಳು, ಅಂತು 14 ಬ್ರಹ್ಮಕಲ್ಪಗಳ ಸಾಧನೆ.

5. 20ನೆಯ ಕಕ್ಷಾಪನ್ನರಾದ (1) ಗಂಗಾದೇವಿ (ವರುಣನ ಯುವತಿ) (2) ಅಗ್ನಿಪತ್ನಿ ಸ್ವಾಹಾದೇವಿ (21ನೆಯ ಕಕ್ಷ), (3) ಚಂದ್ರಪುತ್ರ ಬುಧ, (23ನೆಯ ಕಕ್ಷ), (4) ಅಶ್ವಿನೀ ದೇವತೆಗಳ ಪತ್ನಿ ಉಷಾದೇವಿ (23ನೆಯ ಕಕ್ಷ), (5) ಧರಣೀದೇವಿ (24ನೆಯ ಕಕ್ಷ). (6) ಶನಿ (24ನೆಯ ಕಕ್ಷ)

ಮತ್ತು (7) ಸುಕರ್ಮಾಭಿಮಾನಿಯಾದ ಪುಷ್ಕರನವರೆವಿಗೂ (26ನೆಯ ಕಕ್ಷ) ಅಪರೋಕ್ಷಾತ್ಪೂರ್ವ 6 ಕಲ್ಪಗಳು, ಅಪರೋಕ್ಷಾನಂತರ 6 ಕಲ್ಪಗಳು. ಅಂತು ಒಟ್ಟನಲ್ಲಿ 12 ಕಲ್ಪಗಳ ಸಾಧನೆ. ॥46॥

## ಪದ್ಯ ೪೭

**ಮೂಲ :-**

ಐದು ಕರ್ಮಜಸುರರಿಗಾಜಾ ।
ನಾದಿಗಳಿಗೀರೆರಡು ಕಲ್ಪಾ ।
ರ್ಧಾಧಿಕತ್ರಯ ಗೋಪಿಕಾಸ್ತ್ರೀಯರಿಗೆ ಪಿತೃ ತ್ರಯವು ॥
ಈ ದಿವೌಕಸ ಮನುಜಗಾಯಕ ।
ರೈದುವರು ಎರಡೊಂದು ಕಲ್ಪ ನ ।
ರಾಧಿಪರಿಗರೆಕಲ್ಪದೊಳಗಪರೋಕ್ಷವಿರುತಿಹುದು ॥೪೭॥

**ಅವತರಣಿಕೆ :**

ಅಜಾನಜರ ಮತ್ತು ಮಾನುಷೋತ್ತಮರ ಸಾಧನ ವಿಚಾರ ತಿಳಿಸುತ್ತಾರೆ. ॥47॥

**ಪ್ರತಿಪದಾರ್ಥ :**

**ಕರ್ಮಸುರರಿಗೆ**= ಕರ್ಮಜದೇವತೆಗಳಿಗೆ, **ಐದು**=5 ಕಲ್ಪಗಳು ಹೇಗೆಂದರೆ, ಅಪರೋಕ್ಷಾತ್ಪೂರ್ವ 5 ಕಲ್ಪಗಳು ಮತ್ತು ಅಪರೋಕ್ಷಾನಂತರ 5 ಕಲ್ಪಗಳು ಒಟ್ಟನಲ್ಲಿ 10 ಬ್ರಹ್ಮಕಲ್ಪಸಾಧನ. **ಅಜಾನಾದಿಗಳಿಗೆ**= ಅಜಾನಜದೇವತೆಗಳಿಗೆ, **ಈರೆರಡು**=4 ಕಲ್ಪಗಳು. ಹೇಗೆಂದರೆ ಅಪರೋಕ್ಷಾತ್ಪೂರ್ವ 4 ಕಲ್ಪಗಳು ಮತ್ತು ಅಪರೋಕ್ಷಾನಂತರ 4 ಕಲ್ಪಗಳು. ಒಟ್ಟು 8 ಬ್ರಹ್ಮಕಲ್ಪಗಳ ಸಾಧನ. **ಗೋಪಿಕಾಸ್ತ್ರೀಯರಿಗೆ**=ಗೋಪಿಕಾ

ಸ್ತ್ರೀಯರಿಗೆ. **ಕಲ್ಪಾರ್ಧಾಧಿಕತ್ರಯ** = ಮೂರುಕಲ್ಪದ ಮೇಲೆ ಅರ್ಧ ಕಲ್ಪ ಅಂದರೆ ಮೂರೂವರೆ ಬ್ರಹ್ಮಕಲ್ಪಗಳು. ಹೇಗೆಂದರೆ ಅಪರೋಕ್ಷಾತ್ಪೂರ್ವ ಮೂರೂವರೆ ಕಲ್ಪಗಳು ಮತ್ತು ಅಪರೋಕ್ಷಾನಂತರ ಮೂರೂವರೆ ಕಲ್ಪಗಳು. ಒಟ್ಟಿನಲ್ಲಿ 7 ಬ್ರಹ್ಮಕಲ್ಪಗಳ ಸಾಧನ.

**ಇನ್ನು ಅನಾಖ್ಯಾತರ ವಿಚಾರ–**

**ಪಿತೃ** = ಚಿರಪಿತೃಗಳು. ಈ ವರ್ಗದಲ್ಲಿ ದೇವಗಂದರ್ವರು ಚಿರಪಿತೃಗಳು ತದನ್ಯರು (ವಿಬುಧರ ಆರಧ್ಯ ಚಿರಪಿತೃಪರ್ಯಂತ). **ತ್ರಯವು** = 3 ಕಲ್ಪಗಳು, ಅಪರೋಕ್ಷಾತ್ಪೂರ್ವ 3 ಕಲ್ಪಗಳು, ಅಪರೋಕ್ಷಾಂತರ 3 ಕಲ್ಪಗಳು. ಒಟ್ಟಿನಲ್ಲಿ 6 ಬ್ರಹ್ಮಕಲ್ಪಗಳ ಸಾಧನೆ. **ಈ ದಿವೌಕಸ** = ಈ ಅನಾಖ್ಯಾತದೇವತಾವರ್ಗದಲ್ಲಿ ಅಂತ್ಯರಾದ ದೇವಗಂಧರ್ವರಿಗೆ, **ಎರಡು** = 2 ಕಲ್ಪಗಳು. ಅಪರೋಕ್ಷಾತ್ಪೂರ್ವ 2 ಕಲ್ಪಗಳು ಮತ್ತು ಅಪರೋಕ್ಷಾನಂತರ 2 ಕಲ್ಪಗಳು. ಅಂತು 4 ಬ್ರಹ್ಮಕಲ್ಪಗಳ ಸಾಧನ. **ಮನುಜಗಾಯಕ** = ಮನುಷ್ಯಗಂಧರ್ವರು ಮತ್ತು ಮಾನುಷೋತ್ತಮರಿಗೆ, **ಒಂದು** = ಅಪರೋಕ್ಷಾತ್ಪೂರ್ವ 1 ಕಲ್ಪ ಮತ್ತು ಅಪರೋಕ್ಷಾನಂತರ 1 ಕಲ್ಪ. ಅಂತು 2 ಬ್ರಹ್ಮಕಲ್ಪಗಳಸಾಧನ. **ನರಾಧಿಪರಿಗೆ** = ಚಕ್ರವರ್ತಿಗಳಿಗೆ, **ಅರೆಕಲ್ಪದೊಳು** = ಅರ್ಧಕಲ್ಪ. ಅಂದರೆ ಅಪರೋಕ್ಷಾತ್ಪೂರ್ವ ಅರ್ಧಕಲ್ಪ ಮತ್ತು ಅಪರೋಕ್ಷಾನಂತರ ಅರ್ಧಕಲ್ಪ ಅಂತು 1 ಬ್ರಹ್ಮಕಲ್ಪಸಾಧನ. **ಅಪರೋಕ್ಷ ವಿರುತಿಹುದು** = ಲಿಂಗಭಂಗಾನಂತರ ಜೀವಾಂತವರ್ಗದ ಬಿಂಬಾಪರೋಕ್ಷನಾಗುವುದು. ॥47॥

## ವ್ಯಾಖ್ಯಾನಗಳು

**1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :**

ಆಜಾನಜರ ಸಾಧನವೂ, ಮನುಷ್ಯೋತ್ತಮರ ಸಾಧನವೂ ಹೇಳುತ್ತಾರೆ.

ಆಜಾನಜ ದೇವತೆಗಳಲ್ಲಿ ಎರಡು ಪ್ರಕಾರ, ದಾವದೆಂದರೆ, ಇವರು ಆಜಾನಜರೊಳಗೆ ಉತ್ತಮರು ಆಖ್ಯಾತರು ಎಂತ ಒಂದು ಪ್ರಕಾರ. ಉತ್ತಮ ರಾದ ಕರ್ಮಜಸಾಂಕೇತರಾದ ಪೂರ್ವೋಕ್ತರಾದ ಆಖ್ಯಾತ ಆಜಾನಜರಿಂದ ಉತ್ಪನ್ನರು ಇವರು ಅವರರು. ಅನಾಖ್ಯಾತರೆಂತ ಕರಸತಾರೆ. ಇದು ಇನ್ನೊಂದು ಪ್ರಕಾರ. ಅಂತೂ ಆಜಾನಜರಲ್ಲಿ ಆಖ್ಯಾತರು ಉತ್ತಮರು, ಅನಾಖ್ಯಾತರು ಅವರರು ಎಂತ ಎರಡು ಪ್ರಕಾರ. ಆಖ್ಯಾತರುದಾರೆಂದರೆ, 92 ಮಂದಿ ಗಂಧರ್ವರು, 908 ಮಂದಿ ಅಪ್ಸರಸ್ತ್ರೀಯರು. ಮುನ್ನೂರು ಕಡಿಮಿ ಮೂರು ಕೋಟಿ ಋಷಿಗಳು, ಕ್ರತು ಒಂದು. ಸಿಂಧು ಎರಡು. ಹದಿನಾರುಸಾವಿರದ ಒಂದುನೂರು ಮಂದಿ ಅಗ್ನಿಪುತ್ರರಾದ ಗೋಪಸ್ತ್ರೀಯರು ಮೂರು, ಇವರೇ ಮೊದಲಾದ ಅನೇಕಮಂದಿ ಆಖ್ಯಾತ ಆಜಾನಜರು. ಕರ್ಮಜರಿಂದ ಜನಿತರು. ಇವರಿಗೆ ಕಲ್ಪಸಾಧನ ವಿಚಾರ-ಇವರೇ ಕರ್ಮಜಸಾಂಕೇತರಾದ ಆಜಾನಜಸುರರು ಮುಖ್ಯರು, ಅನಾಖ್ಯಾತರಿಗೆ ಉತ್ತಮರು. ಇವರಿಗೆ ಸಾಧನಿ ಹ್ಯಾಂಗೆಂದರೆ, ಈ ಕರ್ಮಜಸಾಂಕೇತ ಆಜಾನಜಸುರರಿಗೆ, ಐದು ಎಂದರೆ ವಿವರ-92 ಮಂದಿ ಗಂಧರ್ವರು, 908 ಅಪ್ಸರಸ್ತ್ರೀಯರು, ಕ್ರತು. ಸಿಂಧು ಇವರಿಗೇನು, ಇವ ರಲ್ಲದೇ ಇನ್ನೂ ಅನೇಕ ಮಂದಿಗೇನು. ಅಪರೋಕ್ಷಾತ್‌ಪೂರ್ವ ಐದು ಬ್ರಹ್ಮಕಲ್ಪ, ಅಪರೋಕ್ಷಾನಂತರ ಐದುಬ್ರಹ್ಮಕಲ್ಪ, ಅಂತು ಹತ್ತುಬ್ರಹ್ಮಕಲ್ಪ ಗಳು. ನಾಲ್ಕು ಕಲ್ಪಗಳು ಎಂದರೆ, ನೂರುಕಡಿಮಿ ನೂರುಕೋಟಿ ಋಷಿಗಳು. ಇವರ ಸಮಾನರಾದ ಅನೇಕ ಮಂದಿಗಳು ಇವರಿಗೆ ಅಪರೋಕ್ಷಾತ್ ಪೂರ್ವ ನಾಲ್ಕು ಬ್ರಹ್ಮಕಲ್ಪಗಳು, ಅಪರೋಕ್ಷಾನಂತರ ನಾಲ್ಕು ಬ್ರಹ್ಮಕಲ್ಪಗಳು. ಅಂತು ಎಂಟು ಬ್ರಹ್ಮಕಲ್ಪಗಳು. ಅರ್ಧವೇ ಅಧಿಕಾವಾಗಿ ಉಳ್ಳ ಮೂರು ಕಲ್ಪಗಳು ಅಂದರೆ ಮೂರೂವರಿ ಬ್ರಹ್ಮಕಲ್ಪ ಗೋಪಿಕಾಸ್ತ್ರೀಯರಿಗೆ ಅಪ ರೋಕ್ಷಾತ್ಪೂರ್ವ. ಅಪರೋಕ್ಷಾನಂತರ ಮೂರೂವರಿಕಲ್ಪ, ಅಂತು ಏಳು ಬ್ರಹ್ಮಕಲ್ಪಗಳು. ಇನ್ನು ಅನಾಖ್ಯಾತರ ವಿಚಾರ. ಚಿರಪಿತೃಗಳು, ದೇವಗಂಧರ್ವರು ಇವರ ಪರಿಯಂತ ಅನಾಖ್ಯಾತರು. ಆಖ್ಯಾತರ ತರುವಾಯ ಅನಾಖ್ಯಾತರು. 100 ವಿಬುಧಗಣ. 100 ದೇವಭೃತ್ಯರಾದ ಪಿತೃಗಣ, 100 ದೇವಭೃತ್ಯರಾದ ಅಸುರರು, 100 ಗಾಯನಮಾಡುವ ಗಂಧರ್ವರು,

100 ನೃತ್ಯಮಾಡುವ ಅಪ್ಸರರು, 170 ದೇವಕಾರ್ಯಸಿದ್ಧರಾದ ಸಿದ್ಧರು, 170 ವಾಹನಹೊರುವ ಯಕ್ಷರು, 30 ಶಿಬಿಕಾಹೊರುವ ರಾಕ್ಷಸರು, 30 ಪರಿಚರ್ಯೆ ಮಾಡುವ ಚಾರಣರು, 70 ಸೇವಾಮಾಡುವ ಭೂತರು, 70 ಪ್ರೇತರು, 70 ವಿದ್ಯಾಧರರು, 70 ಕಿನ್ನರರು, 70 ಪಿಶಾಚಿಗಳು, 70 ಕುಬೇರಭೃತ್ಯರು, ಗುಹ್ಯಕರು, 5 ವರುಣಭೃತ್ಯರು, ನಾಗರು. ನೂರು ಕಡಿಮೆ ನೂರುಕೋಟಿ ಋಷಿಗಳು, ಚಿರಪಿತೃಗಳು, ದೇವಗಂಧರ್ವರು ಇವರೇ ಮೊದಲಾದ ಅನೇಕಮಂದಿ ಅನಾಖ್ಯಾತರು. ಇವರೊಳಗೆ ಮೂರುಪ್ರಕಾರ– 1. ದೇವಗಂಧರ್ವರು, 2. ಚಿರಪಿತರು. 3. ತದನ್ಯ ಯಾವತ್ತೂ ಮಂದಿ, ಅಂತು ಮೂರು ವಿಧರಿಗೆ ಸಾಧನಿಕಲ್ಪಗಳು ವ್ಯತ್ಯಾಸ. ಅದರನ್ನ ವಿವರಿಸ ಹೇವ್ರು–ಪಿತರು ಎಂದರೆ ವಿಬುಧರು ಆರಂಭಮಾಡಿ ಚಿರಪಿತೃಗಳವರಿಗೆ ಅಪರೋಕ್ಷಾತ್ಪೂರ್ವ ಮೂರು ಬ್ರಹ್ಮಕಲ್ಪ, ಅಪರೋಕ್ಷಾನಂತರ ಮೂರು ಬ್ರಹ್ಮಕಲ್ಪ, ಅಂತು ಆರು ಬ್ರಹ್ಮಕಲ್ಪಗಳು. ಈ ಅನಾಖ್ಯಾತದೇವತೆಗಳಲ್ಲಿ ಅಂತ್ಯದವರಾದ ದೇವಗಂಧರ್ವರು ಎಂತ ತಾತ್ಪರ್ಯ. ದೇವಗಂಧರ್ವರಿಗೆ ಅಪರೋಕ್ಷಾತ್‌ಪೂರ್ವ ಎರಡು ಬ್ರಹ್ಮಕಲ್ಪಗಳು, ಅಪರೋಕ್ಷಾನಂತರ ಎರಡು ಬ್ರಹ್ಮಕಲ್ಪಗಳು, ಅಂತು ನಾಲ್ಕು ಬ್ರಹ್ಮಕಲ್ಪಗಳು. ಮನುಷ್ಯ ಗಂಧರ್ವರು, ಮಾನುಷೋತ್ತಮರು ಇವರಿಗೆ ಅಪರೋಕ್ಷಾತ್ಪೂರ್ವ ಒಂದು ಬ್ರಹ್ಮಕಲ್ಪ, ಅಪರೋಕ್ಷಾನಂತರ ಒಂದು ಬ್ರಹ್ಮಕಲ್ಪ, ಅಂತು ಎರಡು ಬ್ರಹ್ಮ ಕಲ್ಪಗಳು. ಮುಖ್ಯಾಮುಖ್ಯ ಆಜಾನಜರು ಆರಂಭಮಾಡಿ ತೃಣಾಂತವರಿಗೆ ಪೂರ್ವೋಕ್ತ ಪ್ರಕಾರ ಸಾಧನಕಲ್ಪಗಳೆಂತ ಅರ್ಥ. ಪೂರ್ವೋಕ್ತ ಕಲ್ಪಸಂಖ್ಯೆ ಯಲ್ಲಿ ಅರ್ಧಕಲ್ಪಗಳಲ್ಲಿ ಸಾಧನಿಮಾಡಿ ಸ್ಥೂಲಾಪರೋಕ್ಷ ಐದೂವರು, ನಂತರ ನರಾಧಿಪರಿಗೆ ಉಳಿದಿರುವ ಅರ್ಧಕಲ್ಪದೊಳಗೆ ಲಿಂಗಭಂಗವಾಗಿ ಜೀವಾಂತರ್ಗತ ಬಿಂಬಾಪರೋಕ್ಷ ಸ್ಪಷ್ಟವಾಗಿ ಆಗತದೆ. ಬ್ರಹ್ಮದೇವರು ಆರಂಭ ಮಾಡಿ ತೃಣಾಂತವರಿಗೂ ಹೇಳಿದ ಆದ್ಯಂತ ಕಲ್ಪಗಳಲ್ಲಿ, ಅರ್ಧದಲ್ಲಿ ಸ್ಥೂಲಾಪರೋಕ್ಷ, ಅರ್ಧದಲ್ಲಿ ಬಿಂಬಾಪರೋಕ್ಷ ಎಂತ ತಾತ್ಪರ್ಯ. ॥47॥

**2. ಭಾವಪ್ರಕಾಶಿಕೆ :–**

ಕರ್ಮದೇವತೆಗಳಿಗೆ 5 ಕಲ್ಪಗಳೂ, ಆಜಾನಜದೇವತೆಗಳಿಗೆ 4 ಕಲ್ಪಗಳೂ, ಕೃಷ್ಣನ ಅಂಗಸಂಗವನ್ನು ಪಡೆದ ಗೋಪಿಕಾಸ್ತ್ರೀಯರಿಗೆ ಮೂರೂವರೆ ಕಲ್ಪ

ಗಳೂ, ಪಿತೃಗಣಕ್ಕೆ 3 ಕಲ್ಪಗಳೂ, ದೇವಗಂಧರ್ವ ಮನುಷ್ಯಗಂಧರ್ವರಿಗೆ ಎರಡು ಕಲ್ಪಗಳೂ, ಮನುಷ್ಯರಿಗೆ ಒಂದು ಕಲ್ಪವೂ, ತೃಣಜೀವರಿಗೆ ಅರ್ಧ ಕಲ್ಪವೂ ಸಾಧನಾನಂತರ ಅಪರೋಕ್ಷವಾಗುವುದೆಂಬ ತಾತ್ಪರ್ಯ. ಇವುಗಳಿಗೆ ಆಧಾರ ವಾಕ್ಯಗಳು ಪ್ರಕಾಶಸಂಹಿತೆಯಲ್ಲಿ. "ಕರ್ಮದೇವಾಃ ಪಂಚಕಲ್ಪಾ ಪರೋಕ್ಷಿಣಃ ॥ ಚತುರ್ಭಿರಾಜಾನಜಾನಾಂ ಸಾರ್ಧಕಲ್ಪತ್ರಯೇಣ ಹಿ ॥ ಕೃಷ್ಣಾಂಗಸಂಗಗೋಪೀನಾಂ ತ್ರಿಭಿಃ ಪಿತೃಗಣಸ್ಯ ತು ॥ ಗಂಧರ್ವಾಣಾಂ ತು ಕಲ್ಪಾಭ್ಯಾಂ ಮರ್ತ್ಯಾನಾ ತಾಂ ಶಥೈಕತಃ ॥ ಅರ್ಧಕಲ್ಪಂ ತೃಣಾಂತಾನಾಂ ಯೋಗ್ಯಾನಾಂ ಹರಿದರ್ಶನೆ ॥ ನಿಯಮೋಯಂ ಸರ್ವಕಲ್ಪೇಷ್ವೇವಮೇವ ನ ಚಾನ್ಯಥಾ ॥ ಪ್ರೋಕ್ತೈಃ ಕಲ್ಪೈರ್ವಿಮುಚ್ಯಂತೇ ತಾವತ್ಕಲ್ಪೈಸ್ತು ಸಾಧನಂ॥ ತತ್ಪೂರ್ವಮಪರೋಕ್ಷಸ್ಯ ಕರ್ತವ್ಯಮಿತಿ ನಿಶ್ಚಯಃ ॥ ಎಂಬ ಪ್ರಮಾಣ ವಾಕ್ಯ ಗಳೇ ಇವುಗಳಿಗೆ ಆಧಾರವು. ಪದ್ಯಾರ್ಥವೇ ಶ್ಲೋಕಾರ್ಥವಾಗಿರುವುದು. ಕಡೆಯ ಭಾಗದ ಎರಡು ಶ್ಲೋಕದಲ್ಲಿ ವಿಶೇಷಾರ್ಥವುಂಟು. ಅದು ಯಾವು ದೆಂದರೆ ಮೇಲೆ ಹೇಳಿದ ಕಲ್ಪಸಂಖ್ಯೆಯು ಬ್ರಹ್ಮಕಲ್ಪವೆಂದು ತಿಳಿಯಬೇಕು. ಒಬ್ಬೊಬ್ಬರಿಗೆ ಎಷ್ಟೆಷ್ಟು ಕಲ್ಪಸಾಧನ ಹೇಳಲ್ಪಟ್ಟಿದೆಯೋ ಅಷ್ಟಷ್ಟು ಕಲ್ಪ ಸಂಖ್ಯೆಗಳು ಅಪರೋಕ್ಷಾನಂತರ ಮುಕ್ತಿಗೋಸ್ಕರ ಸಾಧನಮಾಡಬೇಕು. ಯಾರು ಯಾರಿಗೆ ಎಷ್ಟೆಷ್ಟು ಕಲ್ಪಸಾಧನವೆಂದು ಹೇಳಲ್ಪಟ್ಟಿದೆಯೋ ಅಷ್ಟಷ್ಟು ಕಲ್ಪ ಅಪರೋಕ್ಷ ಪೂರ್ವದಲ್ಲಿ ಮಾಡಿದನಂತರ ಅಪರೋಕ್ಷವಾಗುವುದು. ಉದಾ ಹರಣೆ ಇಂದ್ರದೇವರಿಗೆ 20 ಕಲ್ಪವೆಂದು ಹೇಳಿದೆ. ಅಪರೋಕ್ಷಕ್ಕೆ ಪೂರ್ವದಲ್ಲಿ 20 ಕಲ್ಪಸಾಧನ ಮಾಡಿದ ಮೇಲೆ ಅಪರೋಕ್ಷವಾಗುವುದು. ಅಪರೋಕ್ಷಾ ನಂತರ ಮುಕ್ತಿಗಾಗಿಯೂ 20 ಕಲ್ಪಸಾಧನ ಮಾಡಬೇಕೆಂಬ ತಾತ್ಪರ್ಯ ; ಇದರಂತೆಯೇ ಎಲ್ಲರಿಗೂ ಸಾಧನವಾಗಬೇಕೆಂಬ ಭಾವ. ॥47॥

3. **ಭಾವದರ್ಪಣ :-**

ಐದು । ದಿನೌಕಸ ಎಂದರೆ ಸ್ವರ್ಗವೇ ಸ್ಥಾನವಾಗಿ ಉಳ್ಳಂಥ ದೇವತೆ ಗಳು. ॥47॥

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :-

45ನೇ ಪದ್ಯದಲ್ಲೇ ಈ ಪದ್ಯದ ತಾತ್ಪರ್ಯವನ್ನೂ ಕೊಟ್ಟಿದೆ.

## 5. ಶ್ರೀಗುರುಹೃದಯಪ್ರಕಾಶಿಕೆ :

ಕರ್ಮಜದೇವತೆಗಳಿಗೆ ಐದುಕಲ್ಪಸಾಧನವು. ಆಜಾನಜದೇವತೆಗಳು ಮೊದಲಾದವರಿಗೆ ಎರಡೆರಡು ಅಂದರೆ ನಾಲ್ಕುಕಲ್ಪಸಾಧನ. ಗೋಪಿಕಾ ಸ್ತ್ರೀಯರಿಗೂ, ಚಿರಪಿತೃಗಣ ಮೂರಕ್ಕೂ ಸಹ ಮೂರುವರೆಕಲ್ಪಸಾಧನವು. ದಿವೌಕಸ ಮನುಜಗಾಯಕರೆಂಬ ದೇವಗಂಧರ್ವ ನರಗಂಧರ್ವರಿಗೆ ಸಹ ಎರಡುಕಲ್ಪದಿಂದ ಸಾಧನೆ. ಒಂದು ಕಲ್ಪಸಾಧನೆ ನರೋಮತ್ತರಿಗೆ. ಅರ್ಧ ಕಲ್ಪಸಾಧನದಿಂದ ಯೋಗ್ಯತೃಣಾಂತ ಜೀವರಿಗೆ ಅಪರೋಕ್ಷ ಉಂಟಾಗುವದು.

**ಪ್ರಮಾಣ :-**

ಏವಮೇವೋತ್ತರೇಷ್ವಪಿ ಸಂಖ್ಯಾನಿಯಮತಸ್ಸುರಾಃ ।
ಮುಚ್ಯಂತೇ ಶಾಸ್ತ್ರವಕ್ಷ್ಯಮಾಣೈಃ ಕಲ್ಪೈರಜಸ್ಸ ತು ।
ದ್ವಿಪಂಚಾಶತ್ಕಲ್ಪಮಿತಾಃ ಶೇಷಾದ್ಯಾಸ್ತು ಸಧಾದ್ಯಕಾಃ ।
ವಿಂಶತ್ಕಲ್ಪಮಿತಾಸ್ತ್ವಿಂದ್ರಜೀವಾಃ ದ್ವಿನವಕಾಲ್ಪಿಕಾಃ ।
ಪ್ರವಹಸ್ತು ದ್ವಿಷಟ್ಕಲ್ಪೈಃ ಸೂರ್ಯಾ ದ್ವಾದಶಕಾಲ್ಪಿಕಾಃ ।
ಮಿತ್ರಾದೀನಾಂ ಚ ನವಭಿಸ್ತೂಕ್ತ ಶೇಷಣಸ್ಯ ತು ।
ಅಷ್ಟಭಿಸ್ಸಪ್ತಭಿಃ ಕಲ್ಪೈಃ ಸನಕಾದಿಗಣಸ್ಯ ಚ ।
ಷಡ್ಭಿಃ ಪರ್ಜನ್ಯಮಾರಭ್ಯ ಪುಷ್ಕರಾಂತಗಣಸ್ಯ ವೈ ।
ಅಪರೋಕ್ಷಃ ಕರ್ಮದೇವಾಃ ಪಂಚಕಲ್ಪಾಽಪರೋಕ್ಷಿಣಃ ।
ಚತುರ್ಭಿರಾಜಾನಜಾನಾಂ ಸಾರ್ಧಕಲ್ಪತ್ರಯೇಣ ಹಿ ।
ಕೃಷ್ಣಾಂಗಸಂಗ ಗೋಪಿನಾಂ ತ್ರಿಭಿಃ ಪಿತೃಗಣಸ್ಯ ತು ।
ಗಂಧರ್ವಾಣಾಂತು ಕಲ್ಪಾಭ್ಯಾಂ ಮರ್ತ್ಯಾನಾಂತು ತಥೈಕತಃ ।
ಅರ್ಧಕಲ್ಪಃ ತೃಣಾಂತಾನಾಂ ಯೋಗ್ಯಾನಾಂ ಹರಿದರ್ಶನೇ ॥

ಎಂಬ ಪ್ರಕಾಶಸಂಹಿತಾವಚನದಿಂದ ಸಾಧನಾಪರೋಕ್ಷಕ್ಕೆ ಪ್ರಮಾಣ. ॥47॥

# ಸರ್ವವ್ಯಾಖ್ಯಾನಸಾರಸಂಗ್ರಹ

## 1. ಐದು ಕರ್ಮಜ–

ಆಜಾನಜದೇವತೆಗಳಲ್ಲಿ ಎರಡು ಪ್ರಕಾರ :–

(1) ಕರ್ಮದೇವತೆಗಳಿಂದ ಜನಿತರಾದ ಆಜಾನಜರು. ಇವರಿಗೆ **ಕರ್ಮಜ**ರೆಂದು ಹೆಸರು. ಇವರು ಆಜಾನಜರೊಳಗೆ ಉತ್ತಮರು. ಇವರನ್ನು "ಆಖ್ಯಾತರು" ಎಂದೂ ಕರೆಯುತ್ತಾರೆ.

(2) ಆಖ್ಯಾತ ಆಜಾನಜರಿಂದ ಉತ್ಪನ್ನರಾದ "ಅನಾಖ್ಯಾತ"ರೆಂದು ಎರಡನೆವಿಧ. ಆಖ್ಯಾತದೇವತೆಗಳ ವಿವರ (ಕರ್ಮಜರು).

1. ಗಂಧರ್ವರು........92 ಮಂದಿ.
2. ಅಪ್ಸರಸ್ತ್ರೀಯರು........908 ಮಂದಿ.
3. ಋಷಿಗಳು........ಮುನ್ನೂರುಕಡಿಮೆ ಮೂರುಕೋಟಿ,
4. ಕ್ರತು........1.
5. ಸಿಂಧು........1.
6. ಅಗ್ನಿಪುತ್ರರಾದ ಗೋಪಿಸ್ತ್ರೀಯರು.........16,100 ಮಂದಿ.

ಇಂತಹ **ಕರ್ಮಜದೇವತೆಗಳಿಗೆ 5 ಕಲ್ಪಸಾಧನೆ.** ಹೇಗೆಂದರೆ ಅಪರೋಕ್ಷಾತ್ಪೂರ್ವ 5 ಕಲ್ಪಗಳು. ಅಪರೋಕ್ಷಾನಂತರ 5 ಕಲ್ಪ, ಒಟ್ಟು 10 ಬ್ರಹ್ಮಕಲ್ಪಸಾಧನೆ.

## 2. ಆಜಾನಾದಿಗಳಿಗೆ ಈರೆರಡು–

ಅನಾಖ್ಯಾತರಾದ ಇತರ ಆಜಾನಾದಿದೇವತೆಗಳಿಗೆ ಈರೆರಡು ಎಂದರೆ $2 \times 2 = 4$ ಕಲ್ಪಗಳು. ಅಪರೋಕ್ಷಾತ್ಪೂರ್ವ 4 ಕಲ್ಪಗಳು. ಅಪರೋಕ್ಷಾನಂತರ 4 ಕಲ್ಪಗಳು. ಒಟ್ಟಿನಲ್ಲಿ 8 ಬ್ರಹ್ಮಕಲ್ಪಗಳ ಸಾಧನೆ.

### 3. ಗೋಪಿಕಾಸ್ತ್ರೀಯರು–

ಅಗ್ನಿಪುತ್ರರಾದ 16,100 ಮಂದಿ ಶ್ರೀಕೃಷ್ಣನ ಅಂಗಸುಖವನ್ನು ಹೊಂದಿದ ಗೋಪಸ್ತ್ರೀಯರಿಗೆ **ಕಲ್ಪಾರ್ಧಾಧಿಕತ್ರಯ**. ಅಂದರೆ ತ್ರಯ– 3 ಕಲ್ಪಗಳು + ಕಲ್ಪಾರ್ಧ = ಅರ್ಧಕಲ್ಪ = ಮೂರುವರೆ ಕಲ್ಪಗಳು ಅಂದರೆ ಅಪರೋಕ್ಷಾತ್ಪೂರ್ವ ಮೂರೂವರೆ ಕಲ್ಪಗಳು. ಅಪರೋಕ್ಷಾನಂತರ ಮೂರೂವರೆ ಕಲ್ಪಗಳು. ಒಟ್ಟು 7 ಬ್ರಹ್ಮಕಲ್ಪಗಳಸಾಧನ.

### 4. ಪಿತೃತ್ರಯವು–

ಚಿರಪಿತೃಗಳಿಗೆ 3 ಕಲ್ಪಗಳು (ತ್ರಯ). ಅಪರೋಕ್ಷಾತ್ಪೂರ್ವ 3 ಕಲ್ಪಗಳು. ಅಪರೋಕ್ಷಾನಂತರ 3 ಕಲ್ಪಗಳು. ಒಟ್ಟು 6 ಬ್ರಹ್ಮಕಲ್ಪಗಳ ಸಾಧನ.

### 5. ದಿವೌಕಸಮನುಜಗಾಯಕರು–

ದೇವಗಂಧರ್ವರಿಗೂ ಮತ್ತು ನರಗಂಧರ್ವರಿಗೂ 3 ಕಲ್ಪಗಳು. ಅವರಿಗೆ ಅಪರೋಕ್ಷಾತ್ಪೂರ್ವ 2 ಕಲ್ಪಗಳು ಮತ್ತು ಅಪರೋಕ್ಷಾನಂತರ 2 ಕಲ್ಪಗಳು. ಒಟ್ಟು 4 ಬ್ರಹ್ಮಕಲ್ಪಗಳಸಾಧನ.

### 6. ಒಂದು ಕಲ್ಪ ನರಾಧಿಪರಿಗೆ–

ಮಾನುಷಚಕ್ರವರ್ತಿಗಳಿಗೆ 1 ಕಲ್ಪಸಾಧನ. ಅಂದರೆ ಅಪರೋಕ್ಷಾತ್ಪೂರ್ವ 1 ಕಲ್ಪ. ಅಪರೋಕ್ಷಾನಂತರ 1 ಕಲ್ಪ. ಒಟ್ಟಿನಲ್ಲಿ 2 ಬ್ರಹ್ಮಕಲ್ಪಸಾಧನ.

### 7. ಅರೆಕಲ್ಪದೊಳಗೆ–

ಉಳಿದ ತೃಣಾಂತ ಮಾನುಷೋತ್ತಮರಿಗೆ ಅರ್ಧಕಲ್ಪ ಅಂದರೆ ಅಪರೋಕ್ಷಾತ್ಪೂರ್ವ ಅರ್ಧಕಲ್ಪ. ಅಪರೋಕ್ಷಾನಂತರ ಅರ್ಧಕಲ್ಪ.

ಒಟ್ಟಿನಲ್ಲಿ 1 ಬ್ರಹ್ಮಕಲ್ಪಸಾಧನ ತೃಣಾಂತ ಮಾನುಷೋತ್ತಮ ಜೀವರಿಗೆ.

8. ಈ ರೀತಿ ಬ್ರಹ್ಮದೇವರಾರಭ್ಯ ತೃಣಾಂತ ಮುಕ್ತಿಯೋಗ್ಯ ಜೀವರಿಗೆ ಅವರವರ ತಾರತಮ್ಯಕ್ಕನುಗುಣವಾಗಿ ಕಲ್ಪಗಳ ಸಾಧನಾವಿಚಾರ. ಇದರಲ್ಲಿ ಎರಡು ಭಾಗ.

(1) ಅಪರೋಕ್ಷ ಪೂರ್ವದಲ್ಲಿ ಆಯಾಯಾ ಪದವಿಗೆ ಬೇಕಾಗುವ ಕಲ್ಪಗಳು.

(2) ಅಪರೋಕ್ಷಾನಂತರ ಅಷ್ಟೇಕಲ್ಪಗಳು.

(3) ಒಟ್ಟಿನಲ್ಲಿ ಆ ಕಲ್ಪ ಪರಿಮಾಣದ ಎರಡರಷ್ಟು ಆಯಾಯಾ ಪದಸ್ಥ ದೇವತೆ ಋಷಿಗಳು ಪಿತೃ ಗಂಧರ್ವ ಮಾನುಷರು ಈ ಪಂಚಜೀವರ ವರ್ಗದವರ ಬ್ರಹ್ಮಕಲ್ಪಸಾಧನಾವಧಿಯನ್ನು ತಿಳಿಯಬೇಕು.

ಬ್ರಹ್ಮದೇವರಿಂದ ಆರಂಭಿಸಿ ತೃಣಾಂತಜೀವಪರ್ಯಂತ, ಆಯಾಯಾ ಪದವಿಗೆ ಬರತಕ್ಕವರ ಕಲ್ಪಸಾಧನ ವಿಚಾರವನ್ನ ಮುಂದಿನ ಪಟ್ಟಿಯಲ್ಲಿ ವಿವರವಾಗಿ ಕೊಟ್ಟಿದೆ. ಇದು **ಕಲ್ಪಸಾಧನಾ ವಿಚಾರದ ವಿಹಂಗಮ ನೋಟ.** ॥47॥

## ಪದ್ಯ ೪೮

ಮೂಲ :

ದೀಪಗಳನನುಸರಿಸಿ ದೀಪ್ತಿಯು ।
ವ್ಯಾಪಿಸಿ ಮಹಾತಿಮಿರ ಕಳೆದು ಪ ।
ರೋಪಕಾರವಮಾಳ್ಪ ತೆರದಂದದಲಿ ಪರಮಾತ್ಮ ॥
ಆ ಪಯೋಜಾಸನನೊಳಿದ್ದು ಸ್ವ ।
ರೂಪಶಕ್ತಿಯು ವ್ಯಕ್ತಗೈಸುತ ।
ತಾ ಪೊಳೆವನವರಂತೆ ಚೇಷ್ಟೆಯ ಮಾಡಿ ಮಾಡಿಸುತ ॥೪೮॥

**ಅವತರಣಿಕೆ :**

ಸರ್ವತಂತ್ರಸ್ವತಂತ್ರನಾದ ಶ್ರೀಪರಮಾತ್ಮನು ಸರ್ವಜೀವರಲ್ಲಿ ಅಂತರ್ಯಾಮಿಯಾಗಿದ್ದು. ಸ್ವರೂಪಶಕ್ತಿ ವ್ಯಕ್ತವಮಾಡುತ್ತಾನೆಂದು ತಿಳಿಸುತ್ತಾರೆ. ॥48॥

**ಪ್ರತಿಪದಾರ್ಥ :–**

**ದೀಪಗಳನುಸರಿಸಿ** = ದೀಪಗಳನ್ನು ಅನುಸರಿಸಿ, **ದೀಪ್ತಿಯು** = ಅದಕ್ಕೆ ತಕ್ಕಂತೆ ಪ್ರಕಾಶವು, **ಮಹಾತಿಮಿರ** = ನಿಬಿಡೀಕೃತವಾದ ಕತ್ತಲೆಯಲ್ಲಿ, **ವ್ಯಾಪಿಸಿ** = ಪ್ರವೇಶವಮಾಡಿ, **ಕಳೆದು** = ಆ ಕತ್ತಲೆಯನ್ನು ಪರಿಹರಿಸಿ, **ಪರೋಪಕಾರವ ಮಾಳ್ಪ** = ಸ್ವಪ್ರಯೋಜನವಿಲ್ಲದೇ ಪರರಿಗೆ ಉಪಕಾರವನ್ನು ಮಾಡುವ, **ತೆರದಂದದಲಿ** = ಆ ದೀಪಗಳಂತೆ, **ಪರಮಾತ್ಮ** = ದೀಪಸದೃಶನಾದ ಶ್ರೀಪರಮಾತ್ಮನು, **ಆ ಪಯೋಜಾಸನ ಕೊಳಿದ್ದು** = ಕಮಲಾಸನರಾದ ಬ್ರಹ್ಮದೇವರೇ ಮೊದಲಾದ ದೇವತೆಗಳಲ್ಲಿದ್ದು. **ಸ್ವರೂಪಶಕ್ತಿಯು ವ್ಯಕ್ತಗೈಸುತ** = ಅವರವರ ಸ್ವರೂಪಗತ ಶಕ್ತಿಯನ್ನು ಅಭಿವ್ಯಕ್ತಮಾಡುತ್ತಾ, **ಅವರಂತೆ** = ಆಯಾಯಾ ಜೀವಾಕಾರನಾಗಿ, **ಚೇಷ್ಟೆಯ ಮಾಡಿ ಮಾಡಿಸುತ** = ಅವರವರ ದ್ವಾರಾ, ಸಕಲ ವ್ಯಾಪಾರಗಳನ್ನೂ ತಾನು ಮಾಡಿಸುತ್ತಾ, **ಪೊಳೆವ** = ಅಪರೋಕ್ಷ ದ್ವಾರಾ ಗೋಚರಿಸುವನು. ॥48॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಸ್ವರೂಪಶಕ್ತಿ ವ್ಯಕ್ತಮಾಡುತಾನೆಂತ ಹೇಳತಾರೆ.

ದೀಪಗಳನ್ನು ಅನುಸರಿಸಿದ ಪ್ರಕಾಶವು, ದೀಪದಲ್ಲಿ ಇರುವ ಪ್ರಕಾಶವು ಸೂರ್ಯನು. ಈ ಪ್ರಕಾಶವು ನಿಬಿಡೀಕೃತವಾದ ತಿಮಿರದಲ್ಲಿ ಪ್ರವೇಶ ಮಾಡಿ,ಆ ಅಂಧಿಕಾರವನ್ನು ಕಳೆದು ಸ್ವಪ್ರಯೋಜನವಿಲ್ಲದೇನೇ ಪರೋಪಕಾರ

ಮಾಡೋದಾಗತದೆ. ಅಂತಹ ದೀಪಗೋಪಾದಿಯಲ್ಲಿ ದೀಪಸದೃಶವಾದ ಪರಮಾತ್ಮನು, ತನ್ನ ಕರುಣಾಕಟಾಕ್ಷವೆಂಬ ಪ್ರಕಾಶದಿಂದ, ಸ್ವರೂಪಸ್ವಭಾವದಲ್ಲಿ ಭಕ್ತರಾದವರ ಬಾಹ್ಯಪ್ರತಿಬಂಧಕದಿಂದ ಪ್ರಾಪ್ತವಾದ ಅಜ್ಞಾನಾಂಧಕಾರ ಪರಿಹಾರಮಾಡಿ. ದೀಪಪ್ರಕಾಶದಲ್ಲಿ ಸರ್ವಪದಾರ್ಥಗಳು ಕಂಡಂತೆ ತನ್ನ ಮಹಾತ್ಮ್ಯ ವ್ಯಕ್ತಮಾಡಿ ತೋರಿಸುತ್ತಾ, ತನ್ನ ಸಂದರ್ಶನಕೊಟ್ಟು ಹಿಂದಿನ ಬ್ರಹ್ಮಕಲ್ಪದಲ್ಲಿ ವರ್ತಮಾನ ಬ್ರಹ್ಮದೇವರು ವಾಯುದೇವರಾಗಿ ಇರಲಿಕ್ಕಾಗಿ, ಅವರ ಅಂತರ್ಗತಭಗವದ್ರೂಪವನ್ನ ಉಪಾಸನಾ ಮಾಡಿದ ಆ ಜೀವರೇ, ಆ ವಾಯುದೇವರು, ವರ್ತಮಾನ ಬ್ರಹ್ಮಕಲ್ಪದಲ್ಲಿ ಬ್ರಹ್ಮರಾಗಿ ಬರೋಣವೇ, ಆದೇ ಜೀವರು ಜೀವನ್ಮುಕ್ತರಾಗಿ ಈ ಬ್ರಹ್ಮನ ಆಶ್ರಯಮಾಡಿದ್ದಾರೆ. ಈ ಜೀವರ ಈ ಪಯೋಜಾಸನನೊಳಿದ್ದು, ಬ್ರಹ್ಮನ ಸಹ ಲಿಂಗಭಂಗ ಐದಿಸಿ, ಸ್ವರೂಪಶಕ್ತಿ ವ್ಯಕ್ತ ಬ್ರಹ್ಮದೇವರ ದ್ವಾರಾ ಮಾಡಿಸುತ್ತಾ, ಆಯಾ ಜೀವಾಂತರ್ಗತದಲ್ಲಿ ಜೀವಾಕಾರದಂತೆ ಬಿಂಬನಾಗಿ ಇರುವ ಪರಮಾತ್ಮ, ಅವರವರ ಸ್ವರೂಪಾಕಾರದಂತೆ ಸ್ಪಷ್ಟವಾಗಿ ತಾನು ಅಪರೋಕ್ಷಾದಿಂದ ಪೊಳೆದು, ಮೋಕ್ಷದಲ್ಲಿ ಆಯಾ ಜೀವರುಗಳಿಂದ, ಬಿಂಬನಾದ ಪರಮಾತ್ಮ ಏಕಾದಶೇಂದ್ರಿಯಗಳಿಂದ ಚೇಷ್ಟೆಗಳನ್ನು ಬಿಂಬನಾದ ತಾನು ಮಾಡಿ, ಜೀವರ ಕಡಿಯಿಂದ ಮಾಡಿಸುತ್ತಾ ಇರ್ತಾನೆ. ॥48॥

## 2. ಭಾವಪ್ರಕಾಶಿಕೆ :-

ಮನಿಯಲ್ಲಿಟ್ಟಿರುವ ದೀಪಗಳು 4-5 ಬತ್ತಿಗಳನ್ನು ಸೇರಿಸಿ ಹಾಕಿ ದೊಡ್ಡದಾದ ದೀಪವನ್ನಿಟ್ಟರೆ ಪ್ರಕಾಶ ಅಧಿಕವಾಗಿಯೂ, ಸಣ್ಣದಾದ ಒಂದೇ ಬತ್ತಿ ಹಾಕಿದರೆ ಅಲ್ಪಪ್ರಕಾಶದಿಂದಲೂ ಹೇಗೆ ಶೋಭಿಸುವುದೋ ಹಾಗೆ ಶ್ರೀಪರಮಾತ್ಮನು ಬ್ರಹ್ಮಾದಿದೇವತೆಗಳು ಮೊದಲು ತೃಣಾಂತಜೀವರಲ್ಲಿದ್ದು ಅವರವರು ಮಾಡಬೇಕಾದ ಕರ್ಮಗಳನ್ನು ತಾನುಮಾಡಿ, ಅವರಿಂದಲೂ ಮಾಡಿಸುತ್ತಾ, ಅವರವರ ಯೋಗ್ಯತಾನುಸಾರವಾಗಿ ಸ್ವರೂಪಶಕ್ತಿಯನ್ನು ವ್ಯಕ್ತಪಡಿಸುತ್ತಾ, ದೀಪದ ಯೋಗ್ಯತಾನುಸಾರವಾಗಿ ಪ್ರಕಾಶವು ಹೆಚ್ಚು ಕಡಿಮೆ

ಯಾಗಿ ಕತ್ತಲು ಪರಿಹಾರಮಾಡಿ ಅಲ್ಲಿರುವ ಪದಾರ್ಥಗಳನ್ನು ವ್ಯಕ್ತಮಾಡಿ ಕೊಡುವಂತೆ, ಬ್ರಹ್ಮಾದಿಗಳಲ್ಲಿ ಅತ್ಯಂತ ಪ್ರಕಾಶಮಾನವಾಗಿ, ಪೂರ್ಣಜ್ಞಾನ ಭಕ್ತ್ಯಾದಿಗಳಿಂದ ಅವರವರ ಸ್ವರೂಪಶಕ್ತಿಯನ್ನು ತೃಣಾಂತಜೀವರಲ್ಲಿ ಅಲ್ಪ ಪ್ರಕಾಶದಿಂದ ಅಲ್ಪಜ್ಞಾನಾದಿಗಳಿಂದ, ಅವರ ಸ್ವರೂಪಶಕ್ತಿಯನ್ನು ವ್ಯಕ್ತಪಡಿಸಿ ತನ್ನ ಪ್ರಕಾಶಾದಿಗಳಿಂದ ಸಹ ಕೆಲವರಲ್ಲಿ ಅಧಿಕಪ್ರಕಾಶದಿಂದಲೂ, ಕೆಲವರಲ್ಲಿ ಅಲ್ಪಪ್ರಕಾಶದಿಂದಲೂ ಪ್ರಕಾಶಗೊಳಿಸುವನು. ॥48॥

**ಶ. ಶ್ರೀಗುರುಹೃದಯಪ್ರಕಾಶಿಕೆ :-**

ದೀಪದ ಬತ್ತಿಯ ಅನುಸಾರವಾಗಿ, ದೀಪ್ತಿ ಎಂಬ ದೀಪವು ಸರ್ವತ್ರ ವ್ಯಾಪಿಸಿ, ಮಹಾತಿಮಿರವೆಂಬ ಕತ್ತಲೆಯನ್ನು ಕಳೆದು, ಪರೋಪಕಾರ ಮಾಡುವಹಾಗೆ ಪರಮಾತ್ಮನು ಆ ಪಯೋಜಾಸನನೆಂಬ ಬ್ರಹ್ಮ ಮೊದಲಾದ ಸರ್ವಜೀವರಲ್ಲಿದ್ದು ತತ್ತತ್ಸ್ವರೂಪ ಶಕ್ತಿಯನ್ನು ವ್ಯಕ್ತಮಾಡುತ್ತಾ ತಾನೂ ಅವರಂತೆ ಪ್ರಕಾಶಿಸುವನು. ಕಾರ್ಯಗಳನ್ನು ವ್ಯಕ್ತಮಾಡಿ ಮಾಡಿಸುವನು. "ಲಿಂಗಾತ್ಮನೋಲಿಂಗಗುಣಾಶ್ಚ ಸಂತಿ" ಎಂಬ ಭಾಗವತಾರ್ಥ ವಿವರಿಸಿತು. ॥48॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ದೀಪದಿಂದ ಉತ್ಪತ್ತಿಯಾಗುವ ಪ್ರಕಾಶದ ಪ್ರಮಾಣವು ದೀಪದ ಯೋಗ್ಯತೆ ಅಥವಾ ಸಾಮರ್ಥ್ಯವನ್ನು ಅವಲಂಬಿಸಿರುವುದು. ಬತ್ತಿ ಸಣ್ಣದಾಗಿದ್ದರೆ ಪ್ರಕಾಶವು ಕಡಿಮೆ. ಬತ್ತಿಯು ಮೇಂದ ಮತ್ತು ಸಂಖ್ಯೆ ಹೆಚ್ಚಿದಷ್ಟು ದೀಪದ ಪ್ರಕಾಶವು ಅಧಿಕವಾಗುತ್ತಾ ಹೋಗುವುದು.

2. ದೀಪದ ಪ್ರಕಾಶವು ಸರ್ವತ್ರವ್ಯಾಪಿಸಿ ಸುತ್ತಲೂ ಆವರಿಸಿರುವ ಕತ್ತಲೆಯನ್ನು ಪರಿಹರಿಸುವುದು. ಆಗ ಕತ್ತಲೆಯಲ್ಲಿ ಕಾಣದಿದ್ದ ವಸ್ತುಗಳು, ದೀಪದ ಬೆಳಕಿನಲ್ಲಿ ಸ್ಪಷ್ಟವಾಗಿ ಗೋಚರಿಸುವುವು.

3. ದೀಪದ ಪ್ರಕಾಶದಿಂದ ದೀಪಕ್ಕೇನೂ ಪ್ರಯೋಜನವಿಲ್ಲ. ಆದರೆ ದೀಪದ ಬೆಳಕಿನಿಂದ ಇತರರಿಗೆ ಪ್ರಯೋಜನವಿದೆ.

4. ದೀಪದ ಪ್ರಕಾಶದೋಪಾದಿಯಲ್ಲಿ ಶ್ರೀಪರಮಾತ್ಮನು ಬ್ರಹ್ಮದೇವರೇ ಮೊದಲಾದ ಸರ್ವಚೇತನರಲ್ಲಿ ಅಂತರ್ಯಾಮಿಯಾಗಿದ್ದು ಪ್ರಕಾಶಿಸುವನು. ಶ್ರೀಪರಮಾತ್ಮನು ದೀಪದ ಸದೃಶನು. ಅವನಿಗೆ ಯಾವ ಜೀವದಿಂದಲೂ ಉಪಕಾರವಾಗಬೇಕಾಗಿಲ್ಲ. ಸ್ವಪ್ರಯೋಜನರಹಿತನು. ಬಿಂಬನಾದ ಶ್ರೀಪರಮಾತ್ಮನು ಸರ್ವಚೇತನರಲ್ಲಿದ್ದು ಅವರವರ ಯೋಗ್ಯತೆಗನುಸಾರವಾಗಿ, ತತ್ತತ್ಸ್ವರೂಪಶಕ್ತಿಗಳನ್ನು ಬಿಂಬಕ್ರಿಯಾದ್ವಾರಾ ಅಭಿವ್ಯಕ್ತಿ ಮಾಡುವನು. ಜೀವಕೃತ ಚೇಷ್ಟೆಗಳನ್ನು ತಾನೇ ಮಾಡಿ, ಜೀವರ ದ್ವಾರಾ ಅವರವರ ಸ್ವರೂಪ ಯೋಗ್ಯತೆಯಂತೆ ಮಾಡಿಸಿ ಅಪರೋಕ್ಷದ್ವಾರಾ ಅವರಲ್ಲಿ ಹೊಳೆಯುವನು. ॥48॥

## ಪದ್ಯ ೪೯

**ಮೂಲ :**

**ಸ್ವೋದರಸ್ಥಿತ ಪ್ರಾಣ ರುದ್ರೇಂ ।**
**ದ್ರಾದಿ ಸುರರಿಗೆ ದೇಹಗಳ ಕೊ ।**
**ಟ್ಟಾದರದಲವರವರ ಸೇವೆಯ ಕೊಂಬನನವರತ ॥**
**ಮೋದ ಬೋಧ ದಯಾಬ್ಧಿ ತನ್ನವ ।**
**ರಾಧಿರೋಗವ ಕಳೆದು ಮಹದಪ ।**
**ರಾಧಗಳ ನೋಡದೆಲೆ ಸಲಹುವ ಸತತ ಸ್ಮರಿಸುವರ ॥ 49 ॥**

**ಅವತರಣಿಕೆ :–**

ಸಾಧನೋದ್ದಿಶ್ಯ ಪ್ರಾಣಾದಿ ದೇವತೆಗಳಿಗೆ ದೇಹಗಳನ್ನು ಕೊಟ್ಟು ಅವರ ದ್ವಾರಾ ಸಾಧನೆ ಮಾಡಿ ಮಾಡಿಸಿ ಅವರನ್ನು ಸದಾ ಸಲಹುವನೆಂದು ತಿಳಿಸುತ್ತಾರೆ. ॥49॥

**ಸ್ವೋದರಸ್ಥಿತ** = ಸ್ವ ಉದರಸ್ಥಿತ. ತನ್ನ ಉದರದಲ್ಲಿ ವಿದ್ಯಮಾನರಾದ, **ಪ್ರಾಣ ರುದ್ರ ಇಂದ್ರಾದಿ ಸುರರಿಗೆ** = ಪ್ರಾಣದೇವರು, ರುದ್ರದೇವರು, ಇಂದ್ರದೇವರು ಮೊದಲಾದ ದೇವತೆಗಳಿಗೆ, **ದೇಹಗಳ ಕೊಟ್ಟು** = ಸ್ಥೂಲ ದೇಹಗಳನ್ನು ಕೊಟ್ಟು, **ಆದರದಲಿ** = ವಾತ್ಸಲ್ಯಪೂರ್ವಕವಾಗಿ, **ಅನವರತ** = ಯಾವಾಗಲೂ, **ಅವರವರ ಸೇವೆಯು ಕೊಂಬನು** = ಅವರವರ ದ್ವಾರಾ ಸೇವೆಯನ್ನು ಸ್ವೀಕರಿಸುವನು, **ಮೋದ** = ಸುಖಸ್ವರೂಪರಾದ ತನ್ನ ಭಕ್ತರಿಗೆ, **ಭೋದ** = ಗುರುಗಳ ದ್ವಾರಾ ಸಮೀಚೀನವಾದ ಜ್ಞಾನವನ್ನು ಬೋಧಿಸಿ, **ದಯಾಬ್ಧಿ** = ಕರುಣಾಸಮುದ್ರನಾದ ಶ್ರೀಪರಮಾತ್ಮನು, **ತನ್ನವರ** = ತನ್ನ ಭಕ್ತರ, **ಅಧಿರೋಗನಕಳೆದು** = ಸಾಧನೆಗೆ ಪ್ರತಿಬಂಧಕಗಳಾದ ಮನೋರೋಗ, ಶಾರೀರಿಕರೋಗಗಳನ್ನು ಪರಿಹರಿಸಿ (ಸಂಸಾರವೆಂಬ ಭವರೋಗವನ್ನು ನೀಗಿಸಿ), **ಮಹದಪರಾಧಗಳ ನೋಡದಲೆ** = ಭಕ್ತರು ಮಾಡಿದ ಮಹತ್ತರವಾದ ತಪ್ಪುಗಳನ್ನು ಪರಿಗಣಿಸದೆ, **ಸತತ ಸ್ಮರಿಸುವರ** = ತನ್ನನ್ನು ಸದಾ ಸ್ಮರಿಸುತ್ತಿರುವ ನಿಜಭಕ್ತರನ್ನು, **ಸಲಹುವ** = ಸಂರಕ್ಷಿಸುವನು ॥49॥

## ವ್ಯಾಖ್ಯಾನಗಳು

### ೧. ಶ್ರೀಶಂಕರ್ಷಣಒಡೆಯರ ವ್ಯಾಖ್ಯಾನ :-

ಪೂರ್ವೋಕ್ತಪ್ರಕಾರ, ಪ್ರಳಯಕಾಲದಲ್ಲಿ, ಸಾಧನಿಪೂರ್ತಿಯಾದ ಜೀವರಿಗೆ ಲಿಂಗಭಂಗ ಐದಿಸಿ, ತನ್ನ ಉದರದಲ್ಲಿ, ಲಿಂಗಭಂಗವಾದವರ, ತದನ್ಯರಾದ ಸಾಧನಿ ಅವಶಿಷ್ಟವುಳ್ಳ, ಲಿಂಗದೇಹ ಸಹಿತರಾದ ಈ ಉಭಯರ, ಪ್ರಳಯ ಕಾಲದಲ್ಲಿ ಉದರದಲ್ಲಿ ಧರಿಸೋವನಾಗಿ, ಪುನಃ ಸೃಷ್ಟಿಕಾಲದಲ್ಲಿ, ಸ್ವೋದರಸ್ಥಿತ ಸಾಧನಿ ಅವಶಿಷ್ಟವುಳ್ಳ ಲಿಂಗಸಹಿತರಾದವರ, ಹಾಂಗೆ ಮುಕ್ತರಾಗೋಣ ದರಿಂದ, ಆ ಜೀವರು ಸೃಷ್ಟಿಯೊಳಗೆ ಕಡಿಮೆ ಆಗೋವರಾಗುತ್ತಾರೆ. ಆ ಕಡಿಮೆ ಪೂರ್ಣ (ಕಡಿಮಿ ಬಿದ್ದುದನ್ನು ತುಂಬಿ ಭರ್ತಿಮಾಡಿಕೊಂಬೋಣ) ಆಗೋದಕ್ಕೋಸ್ಕರ, ಅಸೃಜ್ಯರಾಶಿಯಿಂದ ಆಯಾ ಸಜಾತಿ ಸಲಿಂಗರಾದ ಜೀವ

ರನ್ನು ಈ ಪ್ರಕಾರ ತನ್ನ ಉದರದಲ್ಲಿರತಕ್ಕವರನ್ನು (ಸ್ವೋದರಸ್ಥಿತ), ಪ್ರಾಣದೇವರು, ರುದ್ರದೇವರು, ಇಂದ್ರದೇವರು ಮೊದಲಾದ ತ್ರಿವಿಧಜೀವರನ್ನು ಸೃಷ್ಟಿಕಾಲದಲ್ಲಿ, ಉದರದಿಂದ ಹೊರಗೆ ತೆಗೆದು ಸಾಂಶರಾದ ದೇವಾಸುರರಿಗೆ, ನಿರಂಶರಿಗೆ, ಸ್ಥೂಲದೇಹಗಳ ಕೊಟ್ಟು, ಆದರಪೂರ್ವಕವಾಗಿ, ನಿರಂತರ ತನ್ನ ಸ್ಮರಿಸುವ ಭಕ್ತರ, ದಯಾಸಮುದ್ರನಾದ ಪರಮಾತ್ಮನು, ಸುಖಸ್ವರೂಪರಾದ ತನ್ನ ಭಕ್ತರಿಗೆ (ವೋದ) ಗುರುವಂತರ್ಗತನಾಗಿ, ಗುರುಗಳ ದ್ವಾರಾ ಸಮೀಚೀನಜ್ಞಾನ ಬೋಧ ಮಾಡಿ, ತನ್ನ ಭಕ್ತರಲ್ಲಿ ಅನುಗ್ರಹದಿಂದ, ಅಹಂಮಮತವೆಂಬ ಮನೋರೋಗವೇನು (ಆಧಿ), ಸಾಧನಿಗೆ ಪ್ರತಿಬಂಧಕಗಳಾದ ಜ್ವರಾದಿ ರೋಗಗಳೇನು (ರೋಗವ), ಅಂದರೆ, ಅವಕ್ಕೆ ಕಾರಣವಾದ ಪಾಪಗಳ ಪರಿಹಾರಮಾಡಿ, ಅಹಂ ಬ್ರಹ್ಮ ಎಂಬ ಮಹಾಪರಾಧಗಳ ಮಾಡತಕ್ಕ ದ್ವೇಷಿಗಳಾದ ಅಸುರರ ಕಣ್ಣೆತ್ತಿಯೂ ನೋಡದಲೆ, ಭಕ್ತರು ಮಾಡಿದ ಬ್ರಹ್ಮಹತ್ಯಾದಿ ಮಹಾಪರಾಧಗಳ ಅಪರಾಧತ್ವೇನ ನೋಡದಲೆ, ಲಿಂಗಭಂಗ ಐದಿಸಿ, ವೈಕುಂಠಾದಿ ಲೋಕಗಳಲ್ಲಿ ಇಟ್ಟು ರಕ್ಷಿಸುವನು. ಮಹಾಪರಾಧಿಗಳಾದ ಅಸುರರ ಲಿಂಗಭಂಗ ಐದಿಸಿ, ಅಂಧಂತಮದಲ್ಲಿ ಇಟ್ಟು ದುಃಖಪಡಿಸುವನು. ಮುಕ್ತಿಯೋಗ್ಯರಿಗೆ ಸುಖವೂ, ತಮೋಯೋಗ್ಯರಿಗೆ ದುಃಖವೂ ಕೊಟ್ಟು, ಆಯಾಯಾ ತ್ರಿವಿಧಜೀವರ ಸ್ವರೂಪಾನುಸಾರ ಸ್ಥಿತಿಕಾಲದ ಸಾಧನ ಕಾಲದಲ್ಲಿ ಭಕ್ತಿರೂಪವಾದ ಸೇವಾ ಮುಕ್ತಿಯೋಗ್ಯದಿಂದ, ಮಿಶ್ರದ್ವೇಷರೂಪವಾದ ಸೇವಾ ನಿತ್ಯಸಂಸಾರಿಗಳಿಂದ, ಪೂರ್ಣದ್ವೇಷರೂಪರಾದ ಸೇವಾ ತಮೋಯೋಗ್ಯರಿಂದದ ಮಾಡಿಸಿಕೊಂಡು ತ್ರಿವಿಧ ಜೀವರಿಗೆ ತ್ರಿವಿಧಾಗತಿಗಳನ್ನು ಕೊಡತಾನೆ.

||49||

**ಸ್ವೋದರಸ್ಥಿತ** = ಸ್ವ ಉದರಸ್ಥಿತ. ತನ್ನ ಉದರದಲ್ಲಿ ವಿದ್ಯಮಾನರಾದ, **ಪ್ರಾಣ ರುದ್ರ ಇಂದ್ರಾದಿ ಸುರರಿಗೆ** = ಪ್ರಾಣದೇವರು, ರುದ್ರದೇವರು, ಇಂದ್ರದೇವರು ಮೊದಲಾದ ದೇವತೆಗಳಿಗೆ, **ದೇಹಗಳ ಕೊಟ್ಟು** = ಸ್ಥೂಲ ದೇಹಗಳನ್ನು ಕೊಟ್ಟು. **ಆದರದಲಿ** = ವಾತ್ಸಲ್ಯಪೂರ್ವಕವಾಗಿ, **ಅನವರತ** = ಯಾವಾಗಲೂ, **ಅವರವರ ಸೇವೆಯ ಕೊಂಬನು** = ಅವರವರ ದ್ವಾರಾ ಸೇವೆಯನ್ನು ಸ್ವೀಕರಿಸುವನು, **ವೋದ** = ಸುಖಸ್ವರೂಪರಾದ ತನ್ನ ಭಕ್ತರಿಗೆ, **ಭೋದ** = ಗುರುಗಳ ದ್ವಾರಾ ಸಮೀಚೀನವಾದ ಜ್ಞಾನವನ್ನು ಬೋಧಿಸಿ, **ದಯಾಬ್ಧಿ** = ಕರುಣಾಸಮುದ್ರನಾದ ಶ್ರೀಪರಮಾತ್ಮನು, **ತನ್ನವರ** = ತನ್ನ ಭಕ್ತರ, **ಆಧಿರೋಗನಕಳೆದು** = ಸಾಧನೆಗೆ ಪ್ರತಿಬಂಧಕಗಳಾದ ಮನೋರೋಗ, ಶಾರೀರಿಕರೋಗಗಳನ್ನು ಪರಿಹರಿಸಿ (ಸಂಸಾರವೆಂಬ ಭವರೋಗವನ್ನು ನೀಗಿಸಿ), **ಮಹದಪರಾಧಗಳ ನೋಡದೆಲೆ** = ಭಕ್ತರು ಮಾಡಿದ ಮಹತ್ತರವಾದ ತಪ್ಪುಗಳನ್ನು ಪರಿಗಣಿಸದೆ, **ಸತತ ಸ್ಮರಿಸುವರ** = ತನ್ನನ್ನು ಸದಾ ಸ್ಮರಿಸುತ್ತಿರುವ ನಿಜಭಕ್ತರನ್ನು, **ಸಲಹುವ** = ಸಂರಕ್ಷಿಸುವನು ॥49॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಪೂರ್ವೋಕ್ತಪ್ರಕಾರ, ಪ್ರಳಯಕಾಲದಲ್ಲಿ, ಸಾಧನಿಪೂರ್ತಿಯಾದ ಜೀವರಿಗೆ ಲಿಂಗಭಂಗ ಐದಿಸಿ, ತನ್ನ ಉದರದಲ್ಲಿ, ಲಿಂಗಭಂಗವಾದವರ, ತದನ್ಯರಾದ ಸಾಧನಿ ಅವಶಿಷ್ಟವುಳ್ಳ ಲಿಂಗದೇಹ ಸಹಿತರಾದ ಈ ಉಭಯರ, ಪ್ರಳಯ ಕಾಲದಲ್ಲಿ ಉದರದಲ್ಲಿ ಧರಿಸೋವನಾಗಿ, ಪುನಃ ಸೃಷ್ಟಿಕಾಲದಲ್ಲಿ, ಸ್ವೋದರಸ್ಥಿತ ಸಾಧನಿ ಅವಶಿಷ್ಟವುಳ್ಳ ಲಿಂಗಸಹಿತರಾದವರ, ಹಾಂಗೆ ಮುಕ್ತರಾಗೋಣದರಿಂದ, ಆ ಜೀವರು ಸೃಷ್ಟಿಯೊಳಗೆ ಕಡಿಮೆ ಆಗೋವರಾಗುತ್ತಾರೆ. ಆ ಕಡಿಮೆ ಪೂರ್ಣ (ಕಡಿಮಿ ಬಿದ್ದುದನ್ನು ತುಂಬಿ ಭರ್ತಿಮಾಡಿಕೊಂಬೋಣ) ಆಗೋದಕ್ಕೋಸ್ಕರ, ಅಸೃಜ್ಯರಾಶಿಯಿಂದ ಆಯಾ ಸಜಾತಿ ಸಲಿಂಗರಾದ ಜೀವ

ರನ್ನು ಈ ಪ್ರಕಾರ ತನ್ನ ಉದರದಲ್ಲಿರತಕ್ಕವರನ್ನು (ಸ್ವೋದರಸ್ಥಿತ), ಪ್ರಾಣದೇವರು, ರುದ್ರದೇವರು, ಇಂದ್ರದೇವರು ಮೊದಲಾದ ತ್ರಿವಿಧಜೀವರನ್ನು ಸೃಷ್ಟಿಕಾಲದಲ್ಲಿ, ಉದರದಿಂದ ಹೊರಗೆ ತೆಗೆದು ಸಾಂಶರಾದ ದೇವಾಸುರರಿಗೆ, ನಿರಂಶರಿಗೆ, ಸ್ಥೂಲದೇಹಗಳ ಕೊಟ್ಟು, ಆದರಪೂರ್ವಕವಾಗಿ, ನಿರಂತರ ತನ್ನ ಸ್ಮರಿಸುವ ಭಕ್ತರ, ದಯಾಸಮುದ್ರನಾದ ಪರಮಾತ್ಮನು, ಸುಖಸ್ವರೂಪರಾದ ತನ್ನ ಭಕ್ತರಿಗೆ (ಮೋದ) ಗುರುವಂತರ್ಗತನಾಗಿ, ಗುರುಗಳ ದ್ವಾರಾ ಸಮೀಚೀನಜ್ಞಾನ ಬೋಧ ಮಾಡಿ, ತನ್ನ ಭಕ್ತರಲ್ಲಿ ಅನುಗ್ರಹದಿಂದ, ಅಹಂಮಮತವೆಂಬ ಮನೋರೋಗವೇನು (ಆಧಿ), ಸಾಧನಿಗೆ ಪ್ರತಿಬಂಧಕಗಳಾದ ಜ್ವರಾದಿರೋಗಗಳೇನು (ರೋಗವ). ಅಂದರೆ, ಅವಕ್ಕೆ ಕಾರಣವಾದ ಪಾಪಗಳ ಪರಿಹಾರಮಾಡಿ, ಅಹಂ ಬ್ರಹ್ಮ ಎಂಬ ಮಹಾಪರಾಧಗಳ ಮಾಡತಕ್ಕ ದ್ವೇಷಿಗಳಾದ ಅಸುರರ ಕಣ್ಣೆತ್ತಿಯೂ ನೋಡದಲೆ, ಭಕ್ತರು ಮಾಡಿದ ಬ್ರಹ್ಮಹತ್ಯಾದಿ ಮಹಾಪರಾಧಗಳ ಅಪರಾಧತ್ವೇನ ನೋಡದಲೆ, ಲಿಂಗಭಂಗ ಐದಿಸಿ, ವೈಕುಂಠಾದಿ ಲೋಕಗಳಲ್ಲಿ ಇಟ್ಟು ರಕ್ಷಿಸುವನು. ಮಹಾಪರಾಧಿಗಳಾದ ಅಸುರರ ಲಿಂಗಭಂಗ ಐದಿಸಿ, ಅಂಧಂತಮದಲ್ಲಿ ಇಟ್ಟು ದುಃಖಪಡಿಸುವನು. ಮುಕ್ತಿಯೋಗ್ಯರಿಗೆ ಸುಖವೂ, ತಮೋಯೋಗ್ಯರಿಗೆ ದುಃಖವೂ ಕೊಟ್ಟು, ಆಯಾಯಾ ತ್ರಿವಿಧಜೀವರ ಸ್ವರೂಪಾನುಸಾರ ಸ್ಥಿತಿಕಾಲದ ಸಾಧನಿ ಕಾಲದಲ್ಲಿ ಭಕ್ತಿರೂಪವಾದ ಸೇವಾ ಮುಕ್ತಿಯೋಗ್ಯದಿಂದ, ಮಿಶ್ರದ್ವೇಷರೂಪವಾದ ಸೇವಾ ನಿತ್ಯಸಂಸಾರಿಗಳಿಂದ, ಪೂರ್ಣದ್ವೇಷರೂಪರಾದ ಸೇವಾ ತಮೋಯೋಗ್ಯರಿಂದದ ಮಾಡಿಸಿಕೊಂಡು ತ್ರಿವಿಧ ಜೀವರಿಗೆ ತ್ರಿವಿಧಾಗತಿಗಳನ್ನು ಕೊಡುತಾನೆ.

॥49॥

## ಪದ್ಯ ೫೦

**ಮೂಲ :**

**ಪ್ರತಿ ಪ್ರತೀ ಕಲ್ಪದಲಿ ಸೃಷ್ಟಿ ।**
**ಸ್ಥಿತಿ ಲಯವ ಮಾಡುತಲಿ ನೋದಿಪ ।**
**ಚತುರಮುಖ ಪವಮಾನರನ್ನವ ಮಾಡಿ ಭುಂಜಿಸುವ ॥**
**ಘೃತವೆ ಮೃತ್ಯುಂಜಯನೆನಿಪ ದೇ ।**
**ವತೆಗಳೆ ಉಪಸೇಚನರು ಶ್ರೀ ।**
**ಪತಿಗೆ ಮೂರ್ಜಗವೆಲ್ಲವೋದನತಿಥಿಯೆನಿಸಿಕೊಂಬ ॥ ॥೫೦॥**

**ಅವತರಣಿಕೆ :-**

ಶ್ರೀಪರಮಾತ್ಮನು ತನ್ನಿಂದ ಸೃಷ್ಟವಾದ ಸಮಗ್ರ ಜಗತ್ತನ್ನು ಪ್ರಳಯ ಕಾಲದಲ್ಲಿ ಲಯಗೊಳಿಸಿ, ಬ್ರಹ್ಮಾದಿ ದೇವತೆಗಳನ್ನು ಅನ್ನರೂಪದಲ್ಲಿ ಭಕ್ಷಿಸುವನೆಂದು ಹೇಳುತ್ತಾರೆ. ॥50॥

**ಪ್ರತಿಪದಾರ್ಥ :-**

**ಪ್ರತಿಪತಿಕಲ್ಪದಲಿ** = ಪ್ರತಿಯೊಂದು ಕಲ್ಪದಲ್ಲಿಯೂ, **ಸೃಷ್ಟಿ** = ಲಯಾನಂತರ ಅಸೃಜ್ಯರಾಶಿಯಿಂದ ಜೀವರ ಸೃಷ್ಟಿ ಮತ್ತು ಹಿಂದಿನ ಕಲ್ಪ ಮತ್ತು ಕಲ್ಪಗಳಲ್ಲಿ ಅವಶಿಷ್ಟಸಾಧನವುಳ್ಳ ಜೀವರ ಮತ್ತು ತತ್ತ್ವಗಳ ಸೃಷ್ಟಿ, **ಸ್ಥಿತಿ** = ಸೃಷ್ಟ್ಯಾರಂಭ ಪ್ರಳಯ ಪರ್ಯಂತ ಸೃಷ್ಟವಾದ ಚರಾಚರಾತ್ಮಕವಾದ ಜಗತ್ತಿನ ಪರಿಪಾಲನೆ, **ಲಯವ** - ನಾಶಾದಿಗಳನ್ನು, **ಮಾಡುತಲಿ** = ಈ ಪ್ರಕಾರ ಸೃಷ್ಟಿ-ಸ್ಥಿತಿ-ಲಯಾದಿ ವ್ಯಾಪಾರಗಳನ್ನು ಮಾಡುತ್ತಾ, **ನೋದಿಪ** = ಸ್ವಾನಂದ ಪೂರ್ಣನಾಗಿ, **ಚತುರಮುಖ** = ಚತುರ್ಮುಖ ಬ್ರಹ್ಮ

ದೇವರು, **ಪವಮಾನರ** = ವಾಯುದೇವರು, **ಅನ್ನವ ಮಾಡಿ** = ಇವರಿಬ್ಬರನ್ನು ಅನ್ನವನ್ನಾಗಿ ಮಾಡಿಕೊಂಡು (ಆಹಾರ ರೂಪದಲ್ಲಿ), **ಭುಂಜಿಸುವ** = ನುಂಗುತ್ತಾನೆ (ಭಕ್ಷಿಸುವನು), **ಘೃತವೆ** = ಅನ್ನಕ್ಕೆಹಾಕುವ ತುಪ್ಪ (ಅಭಿಗಾರ) ಎನಿಸುವ, **ಮೃತ್ಯುಂಜಯನೆನಿಪ** = ರುದ್ರದೇವರನ್ನು ಮಾಡಿಕೊಂಡು, **ದೇವತೆಗಳೆ** = ತದನ್ಯರಾದ ಸಕಲ ದೇವತೆಗಳನ್ನೇ, **ಉಪಸೇಚನರು** = ವ್ಯಂಜನಾದಿ ಭೋಜನ ದ್ರವ್ಯಗಳನ್ನಾಗಿ ಮಾಡಿಕೊಂಡು, **ಮೂರ್ಜಗವೆಲ್ಲವು** ಚರಾಚರಾತ್ಮಕವಾದ ಜಗತ್ರಯವೆಲ್ಲಾ, **ಶ್ರೀಪತಿಗೆ** ಶ್ರೀಲಕ್ಷ್ಮೀಪತಿಯಾದ ನಾರಾಯಣನಿಗೆ, **ಓದನ** = ಭೋಜನ ಮಾಡತಕ್ಕ ಅನ್ನ, **ಅತಿಥಿ** = ಅಂತಹ ಭೋಜನಕ್ಕೆ ಯೋಗ್ಯನಾದ ಅತಿಥಿ, **ಎನಿಸಿಕೊಂಬ** = ಎಂಬುದಾಗಿ ಕರೆಯಿಸಿಕೊಳ್ಳುತ್ತಾನೆ. ॥50॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಪರಮಾತ್ಮ ಪ್ರಾಕೃತಭೋಜನ ಮಾಡತಾನೆ ಅಂತ ಹೇಳತಾರೆ.

ಪತ್ರೀಪ್ರತೀ ಬ್ರಹ್ಮಕಲ್ಪವು ಲಯವಾಗಿ, ಅನಂತರದಲ್ಲಿ ಸಾಧನಿ ಅವಶಿಷ್ಟರ, ರಾಶಿಗತರ ಸೃಷ್ಟಿಮಾಡಿ ಪ್ರಳಯ ಪ್ರಾಪ್ತವಾಗೋವರಿಗೂ ಪಾಲನಿ ಮಾಡಿ, ತದನಂತರ ಲಯಕಾಲ ಪ್ರಾಪ್ತವಾಗೋಣವೇ ನಾಶಮಾಡಿ, ಈ ಪ್ರಕಾರ ಸೃಷ್ಟ್ಯಾದಿಗಳ ಮಾಡತಾ, ಸೃಷ್ಟಿಕಾರ್ಯದಿಂದ ಸಂತೋಷವಾಗಲೀ, ಲಯದಿಂದ ದುಃಖವಾಗಲೀ ಎರಡೂ ಇಲ್ಲದೇ ಸ್ವಾನಂದದಿಂದ ಯುಕ್ತನಾಗಿ ಇದ್ದಾನೆ. ಮತ್ತು ಮೋದಸ್ವರೂಪರಾದ ಜೀವರು ಮೋದಿಗಳೆಂದು ಕರಸತಾರೆ. ಇವರನ್ನ ಸದಾ ಜ್ಞಾನಭಕ್ತ್ಯಾದಿಗಳ ಕೊಟ್ಟು ಪಾಲನಿ ಮಾಡತಾ ಇದ್ದಾನೆ. ಈ ಪರಮಾತ್ಮ ಬ್ರಹ್ಮದೇವರು ವಾಯುದೇವರು ಇವರಿಬ್ಬರನ್ನ ಪ್ರಳಯ ಕಾಲದಲ್ಲಿ ಅನ್ನವಾಗಿ ಮಾಡಿಕೊಂಡು, ಅನ್ನಕ್ಕೆ ತುಪ್ಪವನ್ನಾಗಿ ರುದ್ರದೇವರ ಮಾಡಿಕೊಂಡು, ತದನ್ಯರಾದ ದೇವತೆಗಳ ವ್ಯಂಜನಾದಿ ಚಿಲ್ಲರಿ ಭೋಜನದ್ರವ್ಯ

ಗಳನ್ನಾಗಿ ಮಾಡಿಕೊಂಡು, ಈ ಪ್ರಕಾರ ಚರಾಚರ ಜಗತ್ತ್ರಯವೆಲ್ಲ ಲಕ್ಷ್ಮೀಪತಿ ಯಾದ ಶ್ರೀನಾರಾಯಣದೇವರಿಗೆ ಭೋಜನ ಮಾಡತಕ್ಕ ಅನ್ನ ಎಂತ ಅನಿಸಿ, ಈ ಚರಾಚರ ಜಗತ್ತನ್ನು ಅನ್ನುತ್ವೇನ ಭೋಜನಕ್ಕೆ ಯೋಗ್ಯನಾದ ಅತಿಥಿ ಎಂತ ಎನಿಸಿಕೊಂಬೋ ಪರಮಾತ್ಮ ಭೋಜನ ಮಾಡತಾನೆ ಎಂದರೆ, ಪ್ರಳಯ ಕಾಲದಲ್ಲಿ ನಾರಾಯಣ ದೇವರು ಚರಾಚರ ಜಗತ್ತನ್ನು ಉದರದಲ್ಲಿ ಇಡತಾನಾದ್ದರಿಂದ ಚರಾಚರ ಜಗತ್ತು ಅನ್ನಸಾಂಕೇತವಾಗಿ ಭೋಜನ ಎಂತ ಕರಸತದೆ. ಪ್ರಾಕೃತ ಜಡಪದಾರ್ಥ ಈ ರೀತ್ಯಾ ಪ್ರಾಣಿಗಳು ಭಗವದರ್ಪಣ ಮಾಡಿದ್ದು. ಈ ರೀತ್ಯಾ ಭೋಜನ ಮಾಡತಾನೆಂತ ತಾತ್ಪರ್ಯ. ಇದು ಔಪಚಾರಿಕವು. ಪರಮಾತ್ಮನ ಶರೀರಕ್ಕೆ ಸೇರತಕ್ಕ ನಿಜವಾದ ಭೋಜನ ಪದಾರ್ಥ, ತನ್ನ ಅಭಿನ್ನವಾದ ಸ್ವಾಖ್ಯರೂಪಗಳ ಭೋಜನವೇ ನಿಜವಾದ ಭೋಜನವು.

॥50॥

## 2. ಭಾವಪ್ರಕಾಶಿಕೆ :-

ಶ್ರೀಪರಮಾತ್ಮನು ಪ್ರತಿಯೊಂದು ಕಲ್ಪದಲ್ಲೂ ಬ್ರಹ್ಮದೇವರಲ್ಲಿ ಬ್ರಹ್ಮ ನಾಮಕನಾಗಿದ್ದು ಸೃಷ್ಟಿಯನ್ನು, ವಿಷ್ಣುನಾಮಕನಾಗಿ ರಕ್ಷಣೆಯನ್ನೂ, ರುದ್ರ ದೇವರಲ್ಲಿ ರುದ್ರರೂಪಿಯಾಗಿದ್ದು ಸಂಹಾರವನ್ನು ಮಾಡುತ್ತಾ ಆನಂದಪಡುತ್ತಿರುವನು. ಪ್ರತಿ ಪ್ರಳಯಕಾಲದಲ್ಲೂ ಪರಮಾತ್ಮನಿಗೆ ಬ್ರಹ್ಮವಾಯುಗಳು ಅನ್ನವಾಗುವರು. ರುದ್ರದೇವರು ತುಪ್ಪವಾಗುವರು. ಮಿಕ್ಕ ದೇವತೆಗಳು ವ್ಯಂಜನರಾಗುವರು. ಹೀಗೆ ಮೂರು ಲೋಕದಲ್ಲಿರುವವರು ಭಕ್ಷ್ಯಭೋಜ್ಯಾದಿ ರೂಪವಾದ ಅನ್ನವೆಂತಲೂ, ಪರಮಾತ್ಮನು ಅತಿಥಿ ಎಂತಲೂ ಭಾವಿಸಬೇಕು.

॥50॥

## ಭಾವದರ್ಪಣ :-

ಪ್ರತಿಪ್ರತೀತಿ। ಚತುರ್ಮುಖ। "ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಂ. ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾ ವೇದಯತ್ರಸ ಇತಿ ಶ್ರುತೇಃ"। ಉಪಸೇಚನ ಎಂದರೆ ವ್ಯಂಜನಾದಿಗಳು ಎಂಬರ್ಥ. ॥50॥

4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :–

"ಸ್ಥೋದರ" ಇತಿ॥ ಪ್ರತಿ ಇತಿ॥ "ಚತುರ್ಮುಖ" ಇತಿ॥ ಉಭಯೋಃ ವಿಪ್ರಕ್ಷತ್ರತ್ವಾತ್॥ ಉಪಸೇಚನಂ ಘೃತಾದ್ಯುಪಸ್ಕಾರಃ॥ ತಥಾ ಚ ಶ್ರುತಿಃ ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಃ॥ ಮೃತ್ಯುಃ ಯಸ್ಯ ಉಪಸೇಚನಂ ಕ ಇತ್ಥಾ ವೇದ ಯತ್ರ ಸಃ॥ ಇತಿ॥ ಅತಿಥಿಃ॥ ॥50॥

## ಕನ್ನಡಾರ್ಥ

ಚತುರ್ಮುಖನು ಬ್ರಾಹ್ಮಣನು. ಪವಮಾನನು ಕ್ಷತ್ರಿಯನು. ಉಪ ಸೇಚನ–ಉಪಸ್ಕಾರ.

ಪರಮಾತ್ಮನಿಗೆ ಬ್ರಹ್ಮ ಕ್ಷತ್ರ ಸ್ವರೂಪದಲ್ಲಿರುವ ಬ್ರಹ್ಮವಾಯುದೇವರು ಗಳು ಅನ್ನವೂ, ಮೃತ್ಯುಂಜಯನೆನಿಸಿದ ರುದ್ರನು ಘೃತವೂ ಆಗಿರುತ್ತಾರೆ, ಹೀಗೆ ಪರಮಾತ್ಮನನ್ನು ತಿಳಿಯುವುದು ವಿಶಿಷ್ಟಫಲಕಾರಣ ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುತ್ತಾರೆ. ॥50॥

5. ಶ್ರೀಗುರುಹೃದಯಪ್ರಕಾಶಿಕೆ :–

ಹೀಗೆ ಪ್ರತಿಪ್ರತಿ ಬ್ರಹ್ಮಕಲ್ಪದಲ್ಲಿಯೂ ಸೃಷ್ಟಿ ಸ್ಥಿತಿ ಲಯಾದಿಗಳನ್ನು ಮಾಡಿ, ಜೀವರಿಗೆ ಅವರವರ ಸ್ವಯೋಗ್ಯತೆಯನ್ನು ಕೊಡುತ್ತಾ, ಪರ ಮಾತ್ಮನು ನಿತ್ಯಾನಂದಪಡುತ್ತಿರುವನು, ಪ್ರಳಯಕಾಲದಲ್ಲಿ ಚತುರ್ಮುಖನೆಂಬ ಬ್ರಹ್ಮನನ್ನು, ಪವಮಾನನೆಂಬ ಪ್ರಾಣನನ್ನು ಸಹ ಅನ್ನವನ್ನಾಗಿ ಮಾಡಿ ಭೋಜನ ಮಾಡುವನು. ಮೃತ್ಯುಂಜಯನೆಂಬ ರುದ್ರನು ದೇವರಿಗೆ ತುಪ್ಪವೆ ನಿಸಿಕೊಂಬನು. ಇಂದ್ರಾದಿ ದೇವತೆಗಳೆಲ್ಲಾ ದೇವರಿಗೆ ಉಪಸೇಚನವೆಂಬ ರಸ ಮೊದಲಾದ ಶಾಕದಂತೆ ಆಗುವರು. ಶ್ರೀಪತಿಯಾದ ಸ್ವಾಮಿಗೆ ಮೂರು ಲೋಕವೂ ಭೋಜನಪದಾರ್ಥವಾಗುವುದು. ಆತನೇ ಅತಿಥಿ ಎಂಬ ಅನ್ನಾ ಕಾಂಕ್ಷಿಯಂತೆ ತೋರಿ ಸರ್ವರನ್ನೂ ಸಂಹರಿಸುತ್ತಾ ಆನಂದವಾಗಿಯೇ ಇರುವನೆಂದರ್ಥ.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಂ ಇತ್ಯಾದಿ ಶ್ರುತ್ಯರ್ಥವು ವಿವರಿಸಿತು. ॥50॥

## ಸರ್ವವ್ಯಾಖ್ಯಾನಸಾರಸಂಗ್ರಹ

### 1. ಪ್ರತಿಪ್ರತಿಕಲ್ಪದಲಿ

ಒಂದು ಬ್ರಹ್ಮಕಲ್ಪದ ಕೊನೆಯಲ್ಲಿ ಮಹಾ ಪ್ರಳಯವಾಗುವುದು. ನಂತರ ಮುಂದಿನ ಕಲ್ಪದಲ್ಲಿ ಪುನಃ ಸೃಷ್ಟಿ. ಈ ರೀತಿಯಲ್ಲಿ ಪ್ರತಿಕಲ್ಪದಲ್ಲಿ ಸೃಷ್ಟಿ, ಸ್ಥಿತಿ, ಲಯಕಾರ್ಯಗಳು ನಡೆಯುತ್ತಿರುವುವು.

### 2. ಸೃಷ್ಟಿ

ಮುಕ್ತರಾಗುವ ಜೀವರ ಸ್ಥಾನವನ್ನು ತುಂಬಲು ಅಸೃಜ್ಯರಾಶಿಯಿಂದ ಜೀವರಿಗೆ ಲಿಂಗೋಪಚಯದಿಂದ ಸೃಷ್ಟಿ. ಹಿಂದಿನ ಕಲ್ಪದಲ್ಲಿ ಸಾಧನಾವಶಿಷ್ಟ ವುಳ್ಳ ಸಲಿಂಗರಾದ ಜೀವರನ್ನು ಮುಂದಿನ ಕಲ್ಪದಲ್ಲಿ ಸೃಷ್ಟಿಗೆ ತರೋಣ. ಈ ರೀತಿಯಲ್ಲಿ ಶ್ರೀಹರಿಯು ಬ್ರಹ್ಮದೇವರಲ್ಲಿ ಅಜನಾಮಕನಾಗಿ ಅಂತರ್ಯಾಮಿ ಯಾಗಿದ್ದು, ಸೃಷ್ಟಿ ಕಾರ್ಯವನ್ನು ಮಾಡುವನು. ಅಂತೆಯೇ ಗುಣವೈಷಮ್ಯ ದಿಂದ ತತ್ತ್ವಗಳ ನಿರ್ಮಾಣ. ಅದರಿಂದ ಬ್ರಹ್ಮಾಂಡದ ಸೃಷ್ಟಿ. ಈ ರೀತಿ ಚರಾಚರಾತ್ಮಕವಾದ ಜಗತ್ಸೃಷ್ಟಿ.

### 3. ಸ್ಥಿತಿ

ತನ್ನ ಸಂಕಲ್ಪದಿಂದ ಸೃಷ್ಟವಾದ ಚರಾಚರಾತ್ಮಕವಾದ ಜಗತ್ತನ್ನು ಸ್ವಯಂ ವಿಷ್ಣುರೂಪದಿಂದ ಪರಿಪಾಲನೆ ಮಾಡುವನು. ಸಂರಕ್ಷಣಾರೂಪವಾದ ಈ ಕಾರ್ಯವೇ ಸ್ಥಿತಿಯು.

### 4. ಲಯ

ಬ್ರಹ್ಮಕಲ್ಪಾಂತದಲ್ಲಿ ಜಗತ್ತಿನ ಲಯಕಾರ್ಯವನ್ನು ಶ್ರೀಸಂಕರ್ಷಣ ರೂಪೀ ಪರಮಾತ್ಮನು ಶ್ರೀರುದ್ರಾಂತರ್ಗತನಾಗಿದ್ದು ಮಾಡುವನು.

### 5. ಮೋದಿಪ

ಈ ರೀತಿ ಚರಾಚರಾತ್ಮಕವಾದ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ. ಲಯ ಕಾರ್ಯಗಳು ಸರ್ವಸ್ವತಂತ್ರ ಸ್ವತಂತ್ರನಾದ ಸರ್ವೇಶ್ವರನು ನಿರಾಯಾಸವಾಗಿ, ಲೀಲಾಜಾಲವಾಗಿ ಮಾಡುತ್ತಿರುವನು. ಅವನು ಸ್ವಾನಂದ ಮೂರ್ತಿಯು. ಸೃಷ್ಟಿಯಿಂದ ಅವನಿಗೆ ಆನಂದವಿಲ್ಲ. ಲಯದಿಂದ ದುಃಖವಿಲ್ಲ. ಹೀಗೆ ಜಗದ್ವಿಲಕ್ಷಣನಾದ ಜಗದೀಶ್ವರನಿಗೆ ಸೃಷ್ಟಿ, ಸ್ಥಿತಿ. ಲಯಾದಿ ಕಾರ್ಯಗಳು ಲೀಲಾಜಾಲವಾದ ಕ್ರೀಡೆಮಾತ್ರ.

### 6. ಚತುರಮುಖ ಪವಮಾನರ ಅನ್ನವ ಮಾಡಿ

ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರನ್ನು ಮತ್ತು ಪವಮಾನ ನಾಮಕರಾದ ಶ್ರೀಮುಖ್ಯಪ್ರಾಣರನ್ನೇ ತನ್ನ ಅಹಾರರೂಪವಾಗಿ (ಅನ್ನ) ಮಾಡಿಕೊಂಡು ಜಗತ್ತನ್ನು ಭಕ್ಷಿಸುತ್ತಾನೆ. ಇದರಿಂದ ಅವನಿಗೆ "ವಿಶ್ವಭುಕ್"- ಎಂದು ಹೆಸರು.

### 7. ಘೃತವೆ ಮೃತ್ಯುಂಜಯನೆನಿಪ

ಮೃತ್ಯುಂಜಯನಾಮಕರಾದ ಶ್ರೀಮಹರುದ್ರದೇವರು ಬ್ರಹ್ಮವಾಯು ಗಳೆಂಬ ಅನ್ನಕ್ಕೆ ತುಪ್ಪವೆನಿಸುವರು. ರುದ್ರದೇವರು ಶ್ರೀಹರಿಯ ದ್ವಿತೀಯಾಂಗ ಭೂತರು.

### 8. ದೇವತೆಗಳೇ ಉಪಸೇಚನರು

ಶ್ರೀಬ್ರಹ್ಮ, ವಾಯು, ರುದ್ರ ತದನ್ಯ ದೇವತೆಗಳೆಲ್ಲರೂ ವ್ಯಂಜನ (ಶಾಕ ವಸ್ತುಗಳು, ಕಾಯಿಪಲ್ಲೆ) ವೆನಿಸುವರು. ಉಪಸೇಚನವೆಂದರೆ, ವ್ಯಂಜನ ಪದಾರ್ಥ.

9. **ಮೂಜಗವೆಲ್ಲವು ಓದನ**

ಚರಾಚರಾತ್ಮಕವಾದ ಜಗತ್ರಯವು ಶ್ರೀಪತಿಯಾದ ಲಕ್ಷ್ಮೀರಮಣನಿಗೆ ಓದನ (ಭೋಜ್ಯವಸ್ತು–ಅನ್ನ) ಎನಿಸುವುದು.

10. **ಅತಿಥಿಯೆನಿಸಿಕೊಂಬ**

ಇಂತಹ ವಿಶ್ವಭೋಜನರೂಪವಾದ ಮಹಾಸಮಾರಾಧನೆಗೆ ಮುಖ್ಯ ಅತಿಥಿಯೇ ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯು.

**ಮುಖ್ಯಾಂಶಗಳು**

ಮಹಾಪ್ರಳಯಕಾಲದಲ್ಲಿ ಶ್ರೀಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನಿಗೆ

(1) ಬ್ರಹ್ಮ–ವಾಯುಗಳೇ **ಅನ್ನ**ರೆನಿಪರು

(2) ರುದ್ರದೇವರೇ **ಘೃತ**ವೆನಿಪರು

(3) ಇತರ ದೇವತೆಗಳೆಲ್ಲರೂ **ವ್ಯಂಜನ (ಉಪಸೇಚನರು)** ಎನಿಸುವರು

(4) ಜಗತ್ರಯವು **ಓದನ** ಎನಿಸುವುದು

(5) ಶ್ರೀಪತಿಯೇ ಆ ಮಹಾ ಭೋಜನ ಯಜ್ಞದ **ಮುಖ್ಯ ಅತಿಥಿ** ಎನಿಸಿಕೊಂಬನು ॥50॥

## ಪದ್ಯ ೫೧

**ಮೂಲ :-**

**ಗರ್ಭಿಣಿಸ್ತ್ರೀ ಉಂಡಭೋಜನ ।**
**ಗರ್ಭಗತ ಶಿಶು ಉಂಬ ತೆರದಲಿ ।**
**ನಿರ್ಭಯನು ತಾನುಂಡುಣಿಸುವನು ಸರ್ವಜೀವರಿಗೆ ॥**
**ನಿರ್ಬಲಶಿಪರಮಾಣು ಜೀವಗೆ ।**
**ಅಬ್ಬುವುದೆ ಸ್ಥೂಲಾನ್ನ ಭೋಜನ ।**
**ಅರ್ಭಕರು ಪೇಳುವರು ಕೇಳಿದರಿದನೊಂಡಂಬಡರು ॥**
**॥೫೧॥**

**ಅವತರಣಿಕೆ :-**

ಬಿಂಬಕ್ರಿಯಾದ್ವಾರಾ ಜೀವರಿಗೆ ಆಹಾರ ರಸ ಉಪಚಯದ ವಿಚಾರ ವನ್ನು ದೃಷ್ಟಾಂತ ಪೂರ್ವಕ ತಿಳಿಸುತ್ತಾರೆ.

**ಪ್ರತಿಪದಾರ್ಥ :**

**ಗರ್ಭಿಣಿಸ್ತ್ರೀ** = ಗರ್ಭಧರಿಸಿರುವ ಸ್ತ್ರೀಯು, **ಉಂಡ ಭೋಜನ** = ತಾನು ಸ್ವೀಕರಿಸಿದ ಭೋಜನ ಪದಾರ್ಥಗಳು, **ಗರ್ಭಗತ ಶಿಶು** = ಆಕೆಯ ಗರ್ಭದಲ್ಲಿರುವ ಶಿಶುವು, **ಉಂಬತೆರದಲಿ** = ಊಟಮಾಡುವೋಪಾದಿಯಲ್ಲಿ, **ನಿರ್ಭಯನು** = ಯಾರಿಂದಲೂ ಯಾವಕಾಲಕ್ಕೂ ಭೀತಿ ಇಲ್ಲದ ಶ್ರೀಪರಮಾತ್ಮನು, **ಸರ್ವಜೀವರಿಗೆ** = ಸಕಲವಾದ 84ಲಕ್ಷ ಸಾಂಕೇತರಾದ ತ್ರಿವಿಧ ಜೀವ ವರ್ಗಕ್ಕೆ, **ತಾನುಂಡು** = ಶ್ರೀಪರಮಾತ್ಮನು ಬಿಂಬಕ್ರಿಯಾ ದ್ವಾರಾ, ಭೋಜನ ಪದಾರ್ಥಗತ ಸ್ವಾಖ್ಯರಸಗಳನ್ನು ತಾನು ಸ್ವೀಕರಿಸಿ, **ಉಣಿಸುವನು** = ತದ್ದ್ವಾರಾ, ಪ್ರತಿಬಿಂಬ ಭೂತರಾದ ಜೀವರಿಗೆ ಊಟಮಾಡಿ

ಸುವನು, **ನಿರ್ಬಲ** = ಅಸ್ವತಂತ್ರನೂ, ಪ್ರವರ್ತನಸಾಮರ್ಥ್ಯ ರಹಿತನೂ, ಬಿಂಬಾಧೀನನೂ, **ಅತಿ ಪರಮಾಣು** = ಅತ್ಯಂತ ಸೂಕ್ಷ್ಮರೂಪದಲ್ಲಿರುವ, **ಜೀವಗೆ** = ಜೀವನಿಗೆ. **ಸ್ಥೂಲಾನ್ನ ಭೋಜನ** = ಸ್ಥೂಲರಸಾತ್ಮಕವಾದ ಭೋಜನವು, **ಅಬ್ಬುವುದೇ** = ಸ್ವತಃ ಪ್ರವರ್ತನದಿಂದ ಉಪಚಯವಾಗುವುದೇ ? **ಇದನ** = ಸ್ವತಃ ಪ್ರವರ್ತನಶಕ್ತಿಯಿಂದ ಜೀವನಿಗೆ ಭೋಜನವು ಉಪಚಯವಾಗುವುದೆಂದು, **ಅರ್ಭಕರು** ಜ್ಞಾನಶೂನ್ಯರು (ವಾಕ್ಯಳಂತೆ ಸ್ವತಃ ತಿಳಿವಳಿಕೆ ಇಲ್ಲದ ಜನರು). **ಪೇಳುವರು** = ಹೇಳುತ್ತಾರೆ, **ಕೋವಿದರು** = ಆದರೆ ಜ್ಞಾನಿಗಳಾದವರು, **ಒಡಂಬಡರು** = ಅಂಗೀಕರಿಸುವುದಿಲ್ಲ (ತತ್ತ್ವವಿರುದ್ಧವಾದುದರಿಂದ) ॥51॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಜಡರಸ ಜೀವರಿಗೆ ಬಿಂಬಕ್ರಿಯಾ ವ್ಯತಿರಿಕ್ತ ಉಪಚಯವಿಲ್ಲೆಂತ ಹೇಳತಾರೆ.

ಗರ್ಭದಲ್ಲಿ ಶಿಶುವನ್ನು ಧರಿಸಿರುವ ಸ್ತ್ರೀ, ಭೋಜನ ಪದಾರ್ಥಗಳ ಉಂಬೋಣದರಿಂದ ಗರ್ಭದಲ್ಲಿರುವ ಶಿಶು ಉಂಡೋಪಾದಿಯಲ್ಲಿ ಎಂದರೆ, ತಾಯಿಯಾದವಳ ಭೋಜನಕ್ರಿಯಾದಿಂದ ಗರ್ಭಗತ ಶಿಶುವಿನ ಭೋಜನಕ್ರಿಯಾ ನಡಿಯೋದಾಗತದೆ. ಅದರಲ್ಲಿ ಶಿಶುವಿಗೆ ಸೇರತಕ್ಕ ಭಾಗ ಶಿಶುವಿಗೆ, ತಾಯಿಗೆ ಸೇರತಕ್ಕ ಭಾಗ ತಾಯಿಗೆ ಸೇರಿ. ಅವರವರ ಸ್ಥೂಲದೇಹಗಳಿಗೆ ಸೇರೋವಾಗ ತವೆ. ಇದರೋಪಾದಿಯಲ್ಲಿ ದೇವಾಸುರರಿಂದ ಭಯಶೂನ್ಯನಾದ ದೇಹಗತ ದೇಹಾಕಾರನಾದ ಬಿಂಬರೂಪೀ ಪರಮಾತ್ಮ ಮಾತೃಸದೃಶನಾದವ. ಪರಮಾತ್ಮ ಬಿಂಬ, ಜೀವ ಪ್ರತಿಬಿಂಬ. ಪುರುಷ ಮತ್ತು ಪುರುಷನ ಛಾಯದೋಪಾದಿಯಲ್ಲಿ ಬಿಂಬ ಪ್ರತಿಬಿಂಬರು. ಪರಮಾತ್ಮ ತನ್ನ ಬಿಂಬಕ್ರಿಯಾದ್ವಾರಾ ಜೀವ ಭುಕ್ತ ಜಡಪದಾರ್ಥಗತ ತನ್ನ ಸ್ವಾಖ್ಯಭೋಜನದ್ರವ್ಯ ತಾನುಂಡು, ತನ್ನ ಕ್ರಿಯಾ

ದ್ವಾರಾ, ಸ್ಥೂಲದೇಹಗತ ತದಾಕಾರದಿಂದ ವ್ಯಾಪ್ತನಾದ ಜೀವಗೆ ದೇಹದ್ವಾರಾ ಜಡಪದಾರ್ಥಗಳ ಉಣಿಸೋವನಾಗತಾನೆ. ಈ ಪ್ರಕಾರ 84 ಲಕ್ಷ ಸಂಕೇತ ರಾದ ಸರ್ವಜೀವರಿಗೆ ಉಣಿಸೋವನಾಗತಾನೆ. ಜೀವನಾದವ ಸ್ವತಃ ಪ್ರವರ್ತನ ಸಾಮರ್ಥ್ಯದಿಂದ ಶೂನ್ಯನಾದವ, ಬಿಂಬಾಧೀನನಾದವ, ಅತ್ಯಂತ ಪರಮಾಣ ವಾದವ, ಇಂಥಾ ಜೀವಗೆ ಸ್ಥೂಲರಸ ಭೋಜನ ಎಂಬುದು ಸ್ವತಃ ಪ್ರವರ್ತನ ದಿಂದ ಸಾಧ್ಯವಾಗೋದೆ? ಮತ್ತು ಸ್ವರೂಪದೇಹಕ್ಕೆ ಉಪಚಯವಾಗೋದೆ? ಅಬ್ಬಲಾರದು ಎಂತ ತಾತ್ಪರ್ಯ. ಸ್ವತಃ ಪ್ರವರ್ತಿಯಿಂದ ಭೋಜನವು ಜೀವಗೆ ಉಪಚಯವೆಂಬುವುದು, ಇದರನ್ನ ಜ್ಞಾನಶೂನ್ಯರು ಹೇಳುವರು. ಜ್ಞಾನಿಗಳಾ ದವರು ಇದರನ್ನ, ವೇದವಿರುದ್ಧವಾದ್ದರಿಂದ ಅಂಗೀಕರಿಸೋದಿಲ್ಲ. ‖51‖

## ೨. ಭಾವಪ್ರಕಾಶಿಕೆ –:

ಗರ್ಭಿಣಿ ಸ್ತ್ರೀಯರ ಗರ್ಭದಲ್ಲಿರುವ ಮಗುವಿಗೆ, "ಕಲಿಲಂತ್ವೇಕರಾ ತ್ರೇಣ ಪಂಚರಾತ್ರೇಣ ಬುದ್ಬುದಂ। ದಶಾಹೇನ ತು ಕರ್ಕಂಧುಃ ಪೇಶ್ಯಂಡಂ ವಾ ತತಃ ಪರಂ॥ ಮಾಸೇನ ತು ಶಿರೋದ್ವಾಭ್ಯಾಂ ಬಾಹ್ವಂಘ್ರ್ಯಾದ್ಯಂಗವಿಗ್ರಹಃ॥ ನಖ ರೋಮಾಸ್ಥಿ ಚರ್ಮಾಣಿ ಲಿಂಗಚ್ಛಿದ್ರೋದ್ಭವ ಸ್ತ್ರಿಭಿಃ॥ ಚತುರ್ಭಿರ್ಧಾತವಸ್ಸಪ್ತ ಪಂಚಭಿಃ ಕ್ಷುತ್ತೃಡುದ್ಭವಃ" ಎಂಬ ತೃತೀಯ ಸ್ಕಂದ ಭಾಗವತ ವಚನದಿಂದ ಒಂದು ರಾತ್ರಿಯಲ್ಲಿ ಶುಕ್ರಶೋಣಿತ ಮಿಶ್ರವಾಗುವುದು. 5 ದಿವಸಗಳಲ್ಲಿ ನೊರೆಯಂತೆ ಆಗುವುದು. 10 ದಿವಸಗಳಲ್ಲಿ ಬೋರೆಹಣ್ಣಿನಂತೆ ಘಟ್ಟಿಯಾಗು ವುದು. 1 ತಿಂಗಳಿಗೆ ತಲೆಯೂ, ಎರಡನೆಯ ತಿಂಗಳಲ್ಲಿ ಕೈಕಾಲು ಮೊದಲಾದ ಅಂಗಗಳೂ, ಮೂರನೆಯ ತಿಂಗಳಲ್ಲಿ ನಖ, ರೋಮ, ಅಸ್ಥಿ, ಚರ್ಮ, ಲಿಂಗ ಛಿದ್ರ ಮೊದಲಾದವು ಹುಟ್ಟುವವು. ನಾಲ್ಕನೆಯ ತಿಂಗಳಲ್ಲಿ ರಕ್ತ, ಮಾಂಸ, ಮೇದಸ್ ಮೊದಲಾದ ಸಪ್ತಧಾತುಗಳು ಹುಟ್ಟುವವು. 5ನೆಯ ತಿಂಗಳಲ್ಲಿ ಹಸಿವು ಹುಟ್ಟುವುದೆಂದು ಹೇಳಿರುವರು. ಹಸಿವು ಹುಟ್ಟಿದ ಮೇಲೆ ಮತ್ತೂ 4 ತಿಂಗಳು ಗರ್ಭದಲ್ಲಿದ್ದು ಅನ್ನವಿಲ್ಲದೆ ಬದುಕುವುದು ಹೇಗೆಂದರೆ "ಮಾತು ರ್ಜಗ್ಧಾನ್ನಪಾನಾ ದ್ಯೈರೇಧತ್ಕ್ಷುತುರ ಸಮ್ಮತಃ" ತಾಯಿಯು ಭೋಜನ ಪಾನ ಮಾಡಿದ ಅನ್ನಪಾನಗಳಿಂದ ತೃಪ್ತನಾಗಿ ಗರ್ಭದಲ್ಲಿ ವೃದ್ಧಿ ಹೊಂದುವನು

ಎಂದು ಹೇಳಿರುವರು; ಆ ಉಪಮಾನವನ್ನು ಇಲ್ಲಿ ಕೊಟ್ಟಿರುತ್ತಾರೆ; ಗರ್ಭಿಣಿಯೂ ಉಂಡ ಅನ್ನದಿಂದ ಗರ್ಭದಲ್ಲಿರುವ ಮಗು ಹೇಗೆ ಉಂಡು ತೃಪ್ತಿ ಪಡುವುದೋ ಅದರಂತೆಯೇ ಪರಮಾತ್ಮನು, ಸರ್ವಪ್ರಾಣಗತನಾಗಿ ತಾನಿದ್ದು ಉಂಡು ಉಣಿಸುವನು. ಹಾಗಿಲ್ಲದಿದ್ದರೆ ಕೇವಲ ಪರಮಾಣುಸ್ವರೂಪನಾದ ಜೀವನು ಮಹತ್ತರವಾದ ಭೋಜನ ಮಾಡಲು ಸಾಧ್ಯವೇ? ಕೇವಲ ಅಜ್ಞಾನಿಗಳಾದ ಹುಡುಗರಂತಿರುವವರು ಹೀಗೆ ಹೇಳುವರೇ ಹೊರತು ಜ್ಞಾನಿಗಳಾದವರು ಇದನ್ನೆಂದಿಗೂ ಒಪ್ಪಿಕೊಳ್ಳುವುದಿಲ್ಲ. ॥51॥

## ೩. ಭಾವದರ್ಪಣ :–

ಸರ್ವತ್ರಸಾರಭುಜ್‌ದೇವಃ"ಯಂಬೋ ಪ್ರಮಾಣಾನುಸಾರವು "ವಿಶ್ವಂ ಸ್ಥೂಲಂ ಸಮುದ್ದಿಷ್ಟಂ ಸರ್ವಗಮ್ಯತ್ವ ಹೇತುತಃ"। ಎಂಬೋ ಮಾಂಡೂಕ ಭಾಷ್ಯಾನುಸಾರವು ಶ್ರೀಹರಿ ತಾನುಂಡು ಜೀವರಿಗೆ ಉಣಿಸುವನೆಂದು ಗರ್ಭಿಣಿ ಸ್ತ್ರೀ ದೃಷ್ಟಾಂತ ಕೊಡುತ್ತಾರೆ। ಗರ್ಭಿಣೀ। ಗರ್ಭಗತ ಗರ್ಭದಲ್ಲಿದ್ದಂಥ, ನಿರ್ಬಲ ಬಲರಹಿತ ಜೀವ ಎಂಬರ್ಥ. ॥51॥

## 4. ಶ್ರೀವ್ಯಾಸಸಿದ್ಧಾಂತಕೌಮುದಿ :–

"ರಸಾಃ ತದುಪಭೋಗ್ಯಾಃ ಬಹವಃ" ಇತ್ಯುಕ್ತಂ ಉಪಸಂಹರತಿ :– "ಗರ್ಭಿಣೀ" ಇತಿ. ॥51॥

## ಕನ್ನಡಾರ್ಥ

"ಪರಮಾತ್ಮನು ಉಪಭೋಗಿಸುವ ರಸಗಳು ಅನೇಕ (ಬಹಳ) ಎಂಬ ಉಕ್ತಿಯಿದ್ದುದರಿಂದ ಉಪಸಂಹರಿಸುತ್ತಾರೆ–"ಗರ್ಭಿಣಿ" ಈ ಪದ್ಯದಿಂದ. ॥51॥

## 5. ಗುರುಹೃದಯಪ್ರಕಾಶಿಕೆ :

ದೇವರಿಗೆ ಪ್ರಾಕೃತ ದೇಹವಿಲ್ಲವಾದ್ದರಿಂದ, ಪ್ರಾಕೃತರಸ ಭೋಜನ ಹೇಗೆಂಬ ಆಕ್ಷೇಪ ಪರಿಹಾರಾರ್ಥವನ್ನು ತಿಳಿಸುತ್ತಾರೆ. ಈಶ–ಜೀವ ಭೋಗ

ದೃಷ್ಟಾಂತದಿಂದ ಗರ್ಭಿಣೀಸ್ತ್ರೀಯು ಭೋಜನ ಮಾಡಿದ ಒಂದೇ ಅನ್ನಾದಿ ರಸದಲ್ಲಿ, ಆ ಸ್ತ್ರೀದೇಹಕ್ಕೆ ಕೆಲವುಭಾಗ ಉಪಚಯಕರವಾಗಿ, ಒಳಗಿನ ಶಿಶು ದೇಹಕ್ಕೂ ಬೇರೆ ಉಪಯೋಗವಾಗುವ ಹಾಗೆ ಪ್ರಾಕೃತರಸದಲ್ಲೂ ದೇವರ ಸ್ವರಸ ಇರುವುದರಿಂದ, ಪ್ರಾಕೃತರಸ ಸಂಬಂಧ ಇಲ್ಲದೇನೇ ನಿರ್ಭಯ ನಿರ್ದೋಷನಾದ ಸ್ವಾಮಿ, ಗರ್ಭಿಣಿಸ್ತ್ರೀಯಂತೆ, ಸ್ವಾತಂತ್ರ್ಯೇಣ ಸರ್ವರಸವನ್ನೂ ತಾನು ತೆಗೆದುಕೊಂಡು, ತತ್ತದ್ಯೋಗ್ಯರಸವನ್ನು ತತ್ತಜ್ಜೀವರಿಗೆ ಕೊಡುವನು.

**ಸ್ವತಃ ಪ್ರವೃತ್ತ್ಯ ಶಕ್ತ್ಯಾದೀಶಾವಾಸ್ಯಮಿದಂ ಜಗತ್**

ಎಂಬ ಈಶಾವಾಸ್ಯೋಪನಿಷತ್ಪ್ರಮಾಣ ರೀತ್ಯಾ, ಅತಿನಿರ್ಬಲ, ಅತ್ಯಂತ ಪರಮಾಣುರೂಪನಾದ ಅಸ್ವತಂತ್ರಜೀವನಿಗೆ ಸ್ವತಃ ಪ್ರವೃತ್ತಿಲಕ್ಷಣ ಸ್ವತಂತ್ರ ಭೋಜನ ಅಬ್ಬುವುದೇ ಎಂದರೆ, ಹೊಂದಿಕೆ ಆಗುವುದಿಲ್ಲ. ಇದರ ಬಗೆಯನ್ನು ತಿಳಿಯದ ಅರ್ಭಕರೆಂಬ ಬಾಲಕ ಸಮಾನ ಶಾಸ್ತ್ರರಹಸ್ಯ ತಿಳಿಯದವರು ಜೀವನಿಗೆ ಸ್ವತಂತ್ರಭೋಜನಶಕ್ತಿಯನ್ನು ಹೇಳುವರು. ಕೋವಿದರೆಂಬ ವೇದಾಂತ ಬಲ್ಲವರು, ಜೀವನಿಗೆ ಸ್ವತಂತ್ರಭೋಗಶಕ್ತಿಯನ್ನು ಒಡಂಬಡುವುದಿಲ್ಲ.

ಅಪ್ಪುವಿಗೆ ಎಂಬ ಶಬ್ದದ ದ್ವಿತೀಯವರ್ಣ ಸಿಬಂಧನೆಯಿಂದ ಅಬ್ಬುವದೆ ಎಂಬುದಾಗಿ ಆಯಿತು. ॥51॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಸರ್ವತಂತ್ರ ಸ್ವತಂತ್ರನಾದ ಶ್ರೀಪರಮಾತ್ಮನು ಸರ್ವಭೋಜ್ಯ ಪದಾರ್ಥಗತರಸಾಂತರ್ಗತನಾಗಿದ್ದು, ಸ್ವಾಖ್ಯರಸವನ್ನು ಸೇವಿಸುತ್ತಾನೆ. ಆ ಬಿಂಬಕ್ರಿಯಾರೂಪವಾದ ವ್ಯಾಪಾರದಿಂದ ಪ್ರತಿಬಿಂಬಭೂತರಾದ ಜೀವರಿಗೆ ತೃಪ್ತಿಯುಂಟಾಗುವುದು. ಈ ತತ್ತ್ವವನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ.

2. ತನ್ನ ಗರ್ಭದಲ್ಲಿ ಶಿಶುವನ್ನು ಧರಿಸಿರುವ ಗರ್ಭಿಣಿಸ್ತ್ರೀಯು ಭೋಜನ ಮಾಡುವಳು. ಆ ಭೋಜನರಸದಲ್ಲಿ ಒಂದು ಭಾಗ ಗರ್ಭಸ್ಥ ವಾದ ಶಿಶುವಿಗೆ ಸೇರಿ ಅದರ ದೇಹಪೋಷಣೆಯವುಂಟಾಗಿ, ಪಿಂಡಸ್ಥ ಶಿಶುವು ಬೆಳೆಯುವುದು. ಗರ್ಭಿಣಿಸ್ತ್ರೀಯು ಉಂಡಭೋಜನವನ್ನು ಗರ್ಭಗತ ಶಿಶುವು ಉಂಬಂತೆ, ಶ್ರೀಪರಮಾತ್ಮನ ಬಿಂಬಕ್ರಿಯಾ ವಿಶೇಷ.

3. ಸ್ಥಾವರ ಜಂಗಮಾದಿ ಸಕಲ ತ್ರಿವಿಧಜೀವರೂ ಅಸ್ವತಂತ್ರರು. ಭಗವದಧೀನರು. ಅವರಿಗೆ ಸ್ವಯಂ ಪ್ರವರ್ತನ ಸಾಮರ್ಥ್ಯವಿಲ್ಲ. ಜೀವರ ಇಂದ್ರಿಯಗತ ಶಕ್ತಿಯು ಶ್ರೀಹರಿಯ ಬಿಂಬಕ್ರಿಯಾದ್ವಾರಾ ಅಭಿವ್ಯಕ್ತವಾಗಿ ತದ್ದ್ವಾರಾ ಇಂದ್ರಿಯ ವ್ಯಾಪಾರಗಳು ನಡೆಯುವುವು. ಇದರಿಂದ ಜೀವರನ್ನು **ನಿರ್ಬಲ** ಎಂದಿದ್ದಾರೆ ದಾಸರಾಯರು.

4. **ಪರಮಾಣು ಜೀವಗೆ–**

ಬ್ರಹ್ಮಾದಿ ಸರ್ವತೃಣಜೀವಪರ್ಯಂತ, ಅವರ ಶರೀರ ಅತ್ಯಂತ ಸೂಕ್ಷ್ಮವು. ಕುದುರೆಬಾಲದ ತುದಿಯ ಹತ್ತುಸಾವಿರದ ಒಂದನೆಯ ಅಂಶದಷ್ಟು ಸೂಕ್ಷ್ಮತಮವಾಗಿರುವುದು, ಸಮಸ್ತಜೀವರ ಸ್ವರೂಪದೇಹವು. ಇಂತಹ ಪರಮಸೂಕ್ಷ್ಮಪರಿಮಾಣದ ಜೀವರಿಗೆ ಸ್ಥೂಲಾನ್ನವು **ಅಬ್ಬುವುದೇ** ಅಂದರೆ ಸೇರುತ್ತದೆಯೇ ? ಎಂದು ಪ್ರಶ್ನಿಸುತ್ತಾರೆ.

5. **ಅರ್ಭಕರು ಪೇಳುವರು–**

ಅರ್ಭಕ ಎಂದರೆ ಮುಗ್ಧರಾದ ಮಕ್ಕಳು. ಈ ದೃಷ್ಟಾಂತದಿಂದ ಜ್ಞಾನ ರಹಿತರಾದ ಅವಿವೇಕಜನಗಳೆಂದರ್ಥ. ಅಂತಹ ವಿವೇಕಶೂನ್ಯರು, ಜೀವರು ಊಟಮಾಡುವ ಸ್ಥೂಲಾನ್ನದಿಂದ ತೃಪ್ತಿಯಾಗಿ ಶರೀರದ ಉಪಚಯವಾಗುವು ದೆಂದು ತಿಳಿದಿದ್ದಾರೆ.

6. **ಕೋವಿದರು ಇದನು ಒಡಂಬಡರು–**

ಆದರೆ ನಿಜವಾದ ತತ್ತ್ವಜ್ಞಾನಿಗಳು ಈ ವಿಷಯವನ್ನು ಒಪ್ಪುವುದಿಲ್ಲ. ಭೋಜನದ್ರವ್ಯಗಳಲ್ಲಿ ಸಾರಭೂತವಾದ ರಸವಿದೆ. ಆ ರಸದಲ್ಲಿ ಅಂತರ್ಗತ

ನಾಗಿ ಶ್ರೀಹರಿಯಿದ್ದಾನೆ. ರಸಾಂತರ್ಗತ ಈ ಭಗವದ್ರೂಪಕ್ಕೆ "ಸ್ವಾಖ್ಯರಸ" ವೆನ್ನುತ್ತಾರೆ. ಸ್ವಾಖ್ಯರಸಸ್ವೀಕಾರ ಎಂದರೆ ತನ್ನ ರೂಪಗಳಲ್ಲಿ ರಮಣ ಮಾಡುವವನು ಎಂದರ್ಥ. ಇದರಿಂದ ಬಿಂಬಕ್ರಿಯು ನಡೆಯುವುದು. ಅದರ ದ್ವಾರಾ ಪ್ರತಿಬಿಂಬರಾದ ಜೀವರಿಗೆ ತೃಪ್ತಿ–ಉಪಚಯವುಂಟಾಗುವುದು. ಉಂಡು ಉಣಿಸುವನು. ॥51॥

## ಪದ್ಯ ೫೨

**ಮೂಲ :**

**ಅಪಚಯಂಗಳಿಲ್ಲುಂಡುದದರಿಂ ।**
**ದುಪಚಯಂಗಳಿಲ್ಲವರಗಣದೊಳ ।**
**ಗುಪಮರೆನಿಸುವರಿಲ್ಲ ಜನುಮಾದಿಗಳು ಮೊದಲಿಲ್ಲ ॥**
**ಅಪರಿಮಿತಸನ್ಮಹಿಮ ನರಹರಿ ।**
**ಅಪುನಾವರ್ತರನ ಮಾಡುವ ।**
**ಕೃಪಣವತ್ಸಲ ಸ್ವಪದಸೌಖ್ಯವನಿತ್ತು ಶರಣರಿಗೆ ॥ 52 ॥**

**ಅವತರಣಿಕೆ :**

ಶ್ರೀಹರಿಯ ಭೋಜನ ದ್ರವ್ಯಗತ ರಸವನ್ನು ಭೋಜನ ಮಾಡುವುದ ರಿಂದ ಅವನಿಗೆ ಯಾವ ವಿಧವಾದ ದೋಷವೂ ಇಲ್ಲವೆಂದು ತಿಳಿಸು ತ್ತಾರೆ. ॥52॥

**ಪ್ರತಿಪದಾರ್ಥ :–**

**ಉಂಡುದದರಿಂದ** = ಭೋಜನ ಮಾಡಿದ ಚರಾಚರ ಜಗತ್ತಿನಿಂದ. **ಉಪಚಯಂಗಳಿಲ್ಲ** = ಗುಣಪೂರ್ಣನಾದ ಶ್ರೀಪರಮಾತ್ಮನ ಶರೀರಕ್ಕೆ ಯಾವ

ವಿಧವಾದ ಉಪಚಯವೂ (ಅಭಿವೃದ್ಧಿ) ಇಲ್ಲ. **ಅಪಚಯಂಗಳಿಲ್ಲ**= ಶುಷ್ಕವಾಗಿ ಕ್ಷೀಣಿಸುವುದೂ ಇಲ್ಲ. **ಅಮರಗಣದೊಳಗೆ**= ದೇವತಾ ವರ್ಗದಲ್ಲಿ, **ಉಪಮಂಠಿನಿಸುವರಿಂ ಇಲ್ಲ**= ಸದೃಶರಾದವರೂ ಯಾರೂ ಇಲ್ಲ. **ಜನುಮಾದಿಗಳು**= ಸೃಷ್ಟಿರೂಪವಾದ ಜನನಾದಿಗಳು, **ಮೊದಲಿಲ್ಲ**= ಮೊದಲೇ ಇಲ್ಲ. **ಅಪರಿಮಿತಸನ್ಮಹಿಮ**= ಅಸದೃಶಮಹಿಮಾ ಸಂಪನ್ನನಾದ, **ನರಹರಿ**= ನರಸಿಂಹರೂಪೀ ಶ್ರೀಪರಮಾತ್ಮನು, **ಅಪುನಾವರ್ತನ ಮಾಡುವ**= ಪುನಃ ಜನ್ಮ ಇಲ್ಲದಂತೆ ಮಾಡುವನು (ಪುನಃ ಸೃಷ್ಟಿಗೆ ತರುವುದಿಲ್ಲ), **ಕೃಪಣವತ್ಸಲಾ**= ತನ್ನ ಭಕ್ತರಲ್ಲಿ ವಾತ್ಸಲ್ಯವುಳ್ಳ ದಯಾಮಯನು, **ಶರಣರಿಗೆ**= ತನ್ನನ್ನು ಮೊರೆಹೊಕ್ಕ ಭಕ್ತಜನರಿಗೆ, **ಸ್ವಪದಸೌಖ್ಯವನಿತ್ತು**= ತನ್ನ ವಾಸಸ್ಥಾನವಾದ ವೈಕುಂಠಾದಿ ಮುಕ್ತಿಧಾಮಗಳಲ್ಲಿ ಇಟ್ಟು ಅವರಿಗೆ ಸ್ವರೂಪಾವಿರ್ಭಾವರೂಪವಾದ ಮೋಕ್ಷಾನಂದವನೀಯುವನು. ॥52॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

**ಪೂರ್ವೋಕ್ತ ಭೋಜನದಿಂದ ಶ್ರೀಹರಿಗೆ ದೋಷವಾಗುವುದಿಲ್ಲ ಎಂತ ಹೇಳುತಾರೆ.**

ಭೋಜನ ಮಾಡಿದ ಆ ಚರಾಚರ ಜಗತ್ತಿನಿಂದ, ಗುಣಪೂರ್ಣನಾದ ಪರಮಾತ್ಮನ ದೇಹಕ್ಕೆ ಉಪಚಯವಾಗಿ ಬಲಿಯೋಣವೇನೂ ಇಲ್ಲ. ಭೋಜನ ಮಾಡದೇ ಇರೋಣದರಿಂದ ಉಪಚಯರಹಿತವಾಗಿ ಶುಷ್ಕವಾಗೋಣವೇನು ಈ ಎರಡೂ ಇಲ್ಲ. ಭೋಜನಸಾಂಕೇತದಿಂದ ರಕ್ಷಣಾರ್ಥ ಉದರದಲ್ಲಿ ಧರಿಸುತಾನೆ. ಘಟದಲ್ಲಿ ಧಾನ್ಯ ತುಂಬಿದೋಪಾದಿಯಲ್ಲಿ ಭೋಜನವು. ದೇವಗಣದೊಳಗೆ, ಈ ಪ್ರಕಾರಚರಾಚರಗಳ ಭೋಜನ ಮಾಡತಕ್ಕ ಶ್ರೀಪರಮಾತ್ಮಗೆ ಸದೃಶರಾದವರು ದಾರುದಾರೂ ಇಲ್ಲ. ದೇವತೆಗಳ ತಾನು ಸೃಷ್ಟಿಲಯಾದಿಗಳು ಮಾಡಿದಂತೆ, ತನ್ನ ಸೃಷ್ಟ್ಯಾದಿಗಳು ಮಾಡತಕ್ಕ ಪುರುಷ ಅಧಿಭೂತನಾದವ ಇಲ್ಲವೆಂಬೋಣದರಿಂದ ಸರ್ವೋತ್ತಮನೆಂತಲೂ, ಅಸದೃಶನೆಂತಲೂ ತಾತ್ಪರ್ಯ.

ಪರಿಮಿತಿ ಇಲ್ಲದ ನಿರ್ದುಷ್ಟವಾದ ಮಹಿಮಾವುಳ್ಳ ನರಸಿಂಹರೂಪೀ ಪರಮಾತ್ಮ, ತನ್ನ ಭಕ್ತರಲ್ಲಿ ವಾತ್ಸಲ್ಯವುಳ್ಳಂಥಾ ಪರಮಾತ್ಮ, ಏಕಾದಶೇಂದ್ರಿಯಗಳಿಂದ ಶರಣುಪೊಕ್ಕವರಿಗೆ ಪ್ರತ್ಯಕ್ಷನಾಗತಕ್ಕವ. ಸಾಧನ ಪರಿಪಕ್ವವಾದ ತನ್ನ ಭಕ್ತರನ್ನ, ತನ್ನ ಪಾದಧ್ಯಾನರೂಪವಾದ ಸೌಖ್ಯವನ್ನ ಕೊಟ್ಟು ಲಿಂಗಭಂಗ ಐದಿಸಿ ಪುನಃ ಜನ್ಮ ಇಲ್ಲದಂತೆ ಮಾಡುವ. ತದನ್ಯರಿಗೆ ಸ್ವಪದಸೌಖ್ಯವಲ್ಲದ ದ್ವೇಷಕೊಟ್ಟು, ಅಂಧಂತಮಸ್ಸಿನಲ್ಲಿ ಇಟ್ಟು, ಅಪುನರಾವರ್ತರನ್ನ ಮಾಡುವ.

॥52॥

## 2. ಭಾವಪ್ರಕಾಶಿಕೆ :–

ಶ್ರೀಹರಿಯು ಎಲ್ಲರಲ್ಲೂ ಇದ್ದು ತಾನುಂಡು ಉಣಿಸುವನೆಂದು ಮೇಲಿನ ಪದ್ಯದಲ್ಲಿ ಹೇಳಿದರು. ಹಾಗೆ ಉಣದಿದ್ದರೆ ಕ್ಷುದ್ಬಾಧೆಯಿಂದ ತಲ್ಲಣಿಸಿ ಏಳಲು ಕೊಡಲು ಶಕ್ತಿಯಿಲ್ಲದೆ ಕೃಷನಾಗುವನು ; ಆದುದರಿಂದ ತಾನುಂಡು ಹೊಟ್ಟೆತುಂಬಿಸಿಕೊಳ್ಳುವನೆಂದು ಶಂಕೆ ಮಾಡಬಾರದೆಂದು ; ಆ ಶಂಕೆಯನ್ನು ಈ ಪದ್ಯದಿಂದ ಪರಿಹರಿಸುತ್ತಾರೆ :–ಶ್ರೀಹರಿಗೆ ಭೋಜನ ಮಾಡದೆ ಇದ್ದುದರಿಂದ ಹಸಿವಾಗಲಿ, ದೇಹವು ಕೃಶವಾಯಿತೆಂತಾಗಲಿ, ಬಲಹೀನವಾಗಲಿ ಇಲ್ಲ. ಉಂಡುದುದರಿಂದ ಹೆಚ್ಚಿಗೆ ಬಲ ಬಂದಿತು ; ಪುಷ್ಟಿಯಾದನು ಎಂಬುದಿಲ್ಲ. ಯಾವಾಗಲೂ ಒಂದೇ ಪ್ರಕಾರವಾಗಿರುವನು. ದೇವತಾಗಣದಲ್ಲಿ ಇವನಿಗೆ ಸಮರೆಂದು ಮತ್ತೊಬ್ಬರನ್ನು ಉಪಮಾನ ಕೊಡುವಂತಿಲ್ಲ. ಜನನ ಮರಣಾದಿಗಳಿಲ್ಲ. ಇಂತಹ ಅಪರಿಮಿತವಾದ ಮಹಾಮಹಿಮೆಯುಳ್ಳವನು ; ಕೃಪಣವತ್ಸಲವಾದ ಶ್ರೀಹರಿಯು ತನ್ನನ್ನು ನಂಬಿದವರಿಗೆ ಮುಕ್ತಿಯನ್ನು ಕೊಟ್ಟು ಮತ್ತೂ ಹುಟ್ಟುವಿಕೆ ಇಲ್ಲದೇ ಮಾಡುವನು. ॥52॥

## 3. ಭಾವದರ್ಪಣ :–

ಉಂಡದ್ದರಿಂದ ವೃದ್ಧಿಯಿಲ್ಲ. ಉಣದೇ ಇದ್ದದರಿಂದ ಹ್ರಾಸವು ಇಲ್ಲ. ಪೂರ್ಣಕಾಮನೆಂದು ಶ್ರೀಹರಿಯನ್ನ ತಿಳಿದಂಥ ಪುರುಷರಿಗೆ ಅಪುನಾವರ್ತರನ್ನ

ಮಾಡುವನೆಂದು ಹೇಳುತ್ತಾರೆ. ।ಅಪಚಯ। ಉಪಚಯ–ವೃದ್ಧಿ. ಅಪಚಯ–ಹ್ರಾಸ. ಅಪುನರಾವರ್ತಿ–ಜನುಮಾಯಿಲ್ಲಧಾಗೆ ಮಾಡುತ್ತಾನೇತರ್ಥ.
॥52॥

## 4. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :

"ಅಪಚಯ" ಇತಿ॥ ಅಭೋಜನೇ ಹ್ರಾಸಃ ॥ಉಪಚಯಃ ವೃದ್ಧಿಃ॥
॥52॥

### ಕನ್ನಡಾರ್ಥ

ಭೋಜನವಿರದ ಮೂಲಕ ಹ್ರಾಸ, ಸೊರಗುವಿಕೆಯಿಲ್ಲ. ಭೋಜನದಿಂದ ವೃದ್ಧಿಯೂ ಇಲ್ಲ. ಇಂತಹುದು ಶ್ರೀಹರಿಯ ಮಾಹಾತ್ಮ್ಯ. ॥52॥

## 5. ಶ್ರೀಗುರುಹೃದಯಪ್ರಕಾಶಿಕೆ :

ದೇವರಿಗೆ ಪ್ರಾಕೃತರಸ ತೆಗೆದುಕೊಳ್ಳುವುದೆಂಬ ಭೋಜನಮಾತ್ರದಿಂದ ಉಪಚಯವೆಂಬ ಉಪಯೋಗವಿಲ್ಲ. ಸ್ವೀಕರಿಸುವುದರಿಂದ ಹಾನಿಯೂ ಸಹ, ಅಸಂಗನಾದ್ದರಿಂದ ಇಲ್ಲ. ದೇವತಾಗಣದಲ್ಲಿಯೂ ಕೂಡ ಈ ಸ್ವಾಮಿಗೆ ಸಮರಿಲ್ಲವಾದ್ದರಿಂದ ದೇವರೇ ಸರ್ವತಂತ್ರ ಸ್ವತಂತ್ರನು. ಈತನಿಗೆ ಜನ್ಮಾದಿ ದೋಷಗಳು ಎಂದಿಗೂ ಇಲ್ಲ. ಅಪರಿಮಿತ ಸನ್ಮಹಿತನಾದಾಗ್ಯೂ, ಕೃಪಣರೆಂಬ ದೀನಭಕ್ತರಲ್ಲಿ ವಾತ್ಸಲ್ಯವುಳ್ಳವನಾದ್ದರಿಂದ ಶ್ರೀನೃಸಿಂಹನು ಸ್ವಪದವೆಂಬ ಸ್ವಸ್ಥಾನವಾದ ವೈಕುಂಠಾದಿ ಲೋಕಗಳಲ್ಲಿ ಸ್ಥಿತಿಯನ್ನು ಕೊಟ್ಟು, ಈ ಭಕ್ತರನ್ನು ಅಪುನರಾವರ್ತರೆಂಬ ಜನ್ಮರಹಿತರನ್ನು ಮಾಡುವನು. ॥52॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಭೋಜನ ದ್ರವ್ಯಾಂತರ್ಗತ ರಸದಲ್ಲಿ ಶ್ರೀಪರಮಾತ್ಮನು ರಸಪದ ವಾಚ್ಯನಾಗಿ, ರಸಾಂತರ್ಗತನಾಗಿದ್ದಾನೆ. ಅದೇ ರಸಾಂತರ್ಗತ ಭಗವದ್ರೂಪವು,

ಇದಕ್ಕೇ ಆಯಾಯಾ ವಸ್ತುಗಳ ಅಂತರ್ಗತ "ಸ್ವಾಖ್ಯರಸ"ವೆನ್ನುವರು. ರಸಾಂತರ್ಗತನಾದ ಶ್ರೀರಮೇಶನು ತನ್ನದೇ ಆದ ಭಗವದ್ರೂಪಗಳಲ್ಲಿ ರಮಣ ಮಾಡಿ, ಸ್ವಾಖ್ಯರಸವನ್ನು ಸ್ವೀಕರಿಸುವನು. ಇದರಿಂದ ಅವನ ಅಪ್ರಾಕೃತ ಶರೀರಕ್ಕೆ ಯಾವ ವಿಧವಾದ ಅಭಿವೃದ್ಧಿಯೂ ಇಲ್ಲ (**ಉಂಡುದದರಿಂದ ಉಪಚಯಗಳಿಲ್ಲ**) ಶ್ರೀಪರಮಾತ್ಮನು ಲೋಕವಿಲಕ್ಷಣನು. ಸಮಸ್ತ ಜೀವ ಜಡಪದಾರ್ಥಗಳಿಂದ ಅತ್ಯಂತ ಭಿನ್ನನು. ಭೋಜನದ್ರವ್ಯಾಂತರ್ಗತ ಸ್ವಾಖ್ಯ ರಸಸೇವನೆಯಿಂದ. ಜ್ಞಾನಾನಂದಮಯವಾದ ಅನಾದಿನಿತ್ಯನಾದ ಅವನ ಶರೀರವು ಉಪಚಯಹೊಂದಿ, ವೃದ್ಧಿಯಾಗುವುದಿಲ್ಲ.

ಸ್ವೀಕರಿಸದಿರುವುದರಿಂದ ದೇಹಕ್ಷೀಣವೂ ಇಲ್ಲ (**ಅಪಚಯಗಳಿಲ್ಲ**). ಅಪಚಯವೆಂದರೆ ದೇಹದ ಕ್ಷೀಣತೆ ಮತ್ತು ದೇಹದೌರ್ಬಲ್ಯ (ನಿಶ್ಶಕ್ತಿ). ಆದರೆ ಜೀವರ ವಿಚಾರ ಹಾಗಲ್ಲ. ರಸಾಂತರ್ಗತ ಶ್ರೀರಮಾಪತಿಯು ಸ್ವಾಖ್ಯ ರಸಾಸ್ವಾದನೆಮಾಡದಿದ್ದರೆ, ರಸವಿಭಾಗವಾಗುವುದಿಲ್ಲ. ಅದರಿಂದ ಜೀವರ ಶರೀರದ ಉಪಚಯವಾಗುವುದಿಲ್ಲ. ಭೋಜನ ಮಾಡದಿದ್ದರೆ ಶರೀರವು ಒಣಗಿ (ಶುಷ್ಕವಾಗಿ) ಕ್ಷೀಣಿಸುವುದು. ಅದರಿಂದ ದುರ್ಬಲತೆ ಮತ್ತು ನಿಶ್ಶಕ್ತಿ ಉಂಟಾಗುವುದು.

2. ರಮಾದೇವಿಯರಿಂದ ಪ್ರಾರಂಭಿಸಿ ಸಕಲ ತೃಣಾಂತ ದೇವತಾ ಸಮೂಹದಲ್ಲಿ, ಶ್ರೀಹರಿಗೆ ಸದೃಶರಾದವರಾಗಲೀ ಅಧಿಕರಾದವರಾಗಲೀ ಯಾರೂ ಇಲ್ಲ. ಸಮಾಭ್ಯಧಿಕಶೂನ್ಯನಾದ ಸರ್ವೇಶ್ವರನು ಅನುಪಮನು.

3. ಜೀವರಿಗಿರುವಂತೆ ಜನನ ಮರಣಾದಿಗಳಿಲ್ಲ. ಆದಿಮಧ್ಯಾಂತ ವಿದೂರನು. ನಿತ್ಯಶಾಶ್ವತಮೂರ್ತಿಯು ನಿರ್ವಿಕಾರನು.

4. ಆತನ ಮಹಿಮಾವಿಶೇಷಗಳು ಅಪಾರ ಹಾಗೂ ಅನಂತ. ಅಪರಿಮಿತ ಮಹಿಮಾವಿಶೇಷನು.

5. ಅಂತಹ ನರಸಿಂಹರೂಪೀ ಶ್ರೀಹರಿಯು ತನ್ನನ್ನೇ ನಂಬಿದ ಭಕ್ತಜನರನ್ನು ಪುನರಾವರ್ತನೆ ಇಲ್ಲದ, ಅಂದರೆ ಪುನಃ ಜನನ ಮರಣಾದಿ

ಗಳಿಲ್ಲದ, ಸ್ವಧಾಮಗಳಾದ ವೈಕುಂಠಾದಿ ಮುಕ್ತಿಸ್ಥಾನಗಳಲ್ಲಿಟ್ಟು ಸದಾ ಸಂರಕ್ಷಿಸುತ್ತಿರುವನು. (ಅಪುನರಾವರ್ತನ ಮಾಡುವ)

6. **ಕೃಪಣ** ಎಂದರೆ ದೀನಜನರು. ತನ್ನ ಮೊರೆಹೊಕ್ಕ ದೀನ ಜನರಾದ ನಿಜಶರಣರಿಗೆ ಕೃಪಣವತ್ಸಲನು ಅಂದರೆ, ದೀನಜನರಲ್ಲಿ ಅಂತಃಕರಣ ಉಳ್ಳವನು. ಅಂತಹ ಕೃಪಣವತ್ಸಲನು ತನ್ನ ಶರಣಜನರಿಗೆ **ಸ್ವಪದಸೌಖ್ಯವ ನೀವ** ಅಂದರೆ ಸತ್ಸಾಧನ ಮಾಡಿಸಿ ತದ್ದ್ವಾರಾ ಲಿಂಗಭಂಗವನ್ನೈದಿಸಿ, ಕರ್ಮ ವಿಮೋಚನೆಗೊಳಿಸಿ ಅವರ ಸ್ವರೂಪಗತ ಆನಂದವನ್ನು ಅಭಿವ್ಯಕ್ತಗೊಳಿಸಿ ವೈಕುಂಠಾದಿ ಸ್ವಧಾಮಗಳಲ್ಲಿ ನಿತ್ಯಾನಂದರೂಪವಾದ ಮುಕ್ತಿ ಸಾಮ್ರಾಜ್ಯವನ್ನು ಕೊಡುವನು. ॥52॥

## ಪದ್ಯ ೫೩

**ಮೂಲ :-**

ಬಿತ್ತಿ ಬೀಜವ ಭೂಮಿಯೊಳು ನೀ ।
ರೆತ್ತಿ ಬೆಳೆಸಿದ ಬೆಳಸು ಪ್ರಾಂತಕೆ ।
ಕಿತ್ತಿ ಮೆಲುವಂದದಲಿ ಲಕುಮೀರಮಣ ಲೋಕಗಳ ॥
ಮತ್ತೆ ಜೀವರ ಕರ್ಮ ಕಾಲೋ ।
ತ್ಪತ್ತಿ ಸ್ಥಿತಿ ಲಯ ಮಾಡುತಲಿ ಸಮ ।
ವರ್ತಿಯೆನಿಸುವ ಖೇದ ಮೋದಗಳಿಲ್ಲದನವರತ ॥ ೫೩ ॥

**ಅವತರಣಿಕೆ :-**

ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳಿಂದ ಜಗತ್ಸೃಷ್ಟಿಕರ್ತನಿಗೆ ಸುಖ ದುಃಖಾದಿಗಳ ಸಂಪರ್ಕವೇ ಇಲ್ಲವೆಂದು ಸದೃಷ್ಟಾಂತವಾಗಿ ತಿಳಿಸುತ್ತಾರೆ. ॥53॥

**ಪ್ರತಿಪದಾರ್ಥ :–**

**ಭೂಮಿಯೊಳು** = ಭೂಮಿಯಲ್ಲಿ, **ಬೀಜವ ಬಿತ್ತಿ** = ರೈತಜನರು ಬೀಜಗಳನು ಬಿತ್ತಿದವರಾಗಿ. **ನೀರೆತ್ತಿ** = ನೀರನ್ನೂ ಹಾಯಿಸಿ, **ಬೆಳೆಸಿದ** = ಅಭಿವೃದ್ಧಿ ಮಾಡಿದ. **ಬೆಳಸು** = ಧಾನ್ಯಾದಿ ಪೈರುಗಳು, **ಪ್ರಾಂತಕೆ** = ಪಕ್ವವಾಗಿ ಬಲಿತನಂತರ, **ಕಿತ್ತಿ** = ಆ ಪೈರನ್ನು ಕೊಯಿದು, **ಮೆಲುವಂದದಲಿ** = ಪಕ್ವಮಾಡಿ, ಭೋಜನಮಾಡುವಂತೆ, **ಲಕುಮೀರಮಣ** = ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು, **ಲೋಕಗಳ** = ಹದಿನಾಲ್ಕು ಲೋಕಗಳನ್ನು, **ಮತ್ತೆ ಜೀವರ** = ಹಾಗೂ ಸಮಸ್ತ ಜೀವರನ್ನು, **ಕರ್ಮ** = ಅವರ ಅನಾದಿಕರ್ಮ, **ಕಾಲ** = ಕಾಲ ಎಂಬ ಬೀಜಗಳನ್ನು (ಕರ್ಮ ಬೀಜಗಳು ಕಾಲಾನುಗುಣವಾಗಿ ಮೊಳೆತು ಸಸ್ಯಗಳಾಗುವುವು ಎಂಬ ದೃಷ್ಟಾಂತ) **ಉತ್ಪತ್ತಿ** = ಪ್ರದೇಶ ಸಾಂಕೇತವಾದ ಭೂಮಿಯಲ್ಲಿ ಬಿತ್ತಿ ಸೃಷ್ಟಿ **ಸ್ಥಿತಿ** = ನೀರನ್ನು ಹಾಯಿಸಿ, ಸಂರಕ್ಷಿಸುವಿಕೆ. **ಲಯ** = ಪೈರು ಫಲಿಸಿ ಪಕ್ವವಾದ ನಂತರ ಕೊಯ್ಯುವುದು (ಇದೇ ಲಯರೂಪವಾದನಾಶ), **ಮಾಡುತಲಿ** = ಈ ಪ್ರಕಾರ ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಾದಿ ವ್ಯಾಪಾರಗಳನ್ನು ಮಾಡುತ್ತಾ, **ಅನವರತ** = ನಿರಂತರದಲ್ಲಿ, **ಸಮವರ್ತಿಯೆನಿಪ** = ಸ್ವಾನಂದದಿಂದ ಪರಿಪೂರ್ಣನಾಗಿ ಸರ್ವಜೀವರಲ್ಲಿ ಸ್ಥಿತನಾಗಿದ್ದು, ಅವರವರ ಯೋಗ್ಯತಾನುಸಾರ ಸಮನಾಗಿ ವರ್ತಿಸುತ್ತಾ 'ಸಮವರ್ತಿ' ಎನಿಸುವನು. **ಖೇದಮೋದಗಳಿಲ್ಲ** – ಸೃಷ್ಟಿಯಿಂದ ಸಂತೋಷವಾಗಲೀ, ಸಂಹಾರದಿಂದ ದುಃಖವಾಗಲೀ ಆ ಜಗದ್ವಿಲಕ್ಷಣನಿಗೆ ಇಲ್ಲ ಎಂದು ತಾತ್ಪರ್ಯ. ‖53‖

## ವ್ಯಾಖ್ಯಾನಗಳು

### 1. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಸೃಷ್ಟ್ಯಾದಿಗಳಿಂದ ಸುಖದುಃಖಾದಿಗಳು ಪರಮಾತ್ಮಗೆ ಇಲ್ಲವೆಂದು ದೃಷ್ಟಾಂತದಿಂದ ಹೇಳತಾರೆ.

ಲೋಕದಲ್ಲಿ ಪೈರು ಮಾಡತಕ್ಕವರು ಭೂಮಿಯಲ್ಲಿ ಬೀಜಗಳನ್ನು ಬಿತ್ತಿದವರಾಗಿ ಆ ಪೈರುರಕ್ಷಣಾರ್ಥ ನೀರುಕಟ್ಟಿ ಅಭಿವೃದ್ಧಿಮಾಡಿದ ಧಾನ್ಯಾದಿ ಪೈರುಗಳು ಆದದು ಫಲಿತವಾಗಿ ಪಕ್ವವಾಗೋಣವೇ ಕೊನೆಗೆ ಕೊಯಿದು, ಆ ಧಾನ್ಯಾದಿಗಳ ಭೋಜನ ಮಾಡಿದೋಪಾದಿಯಲ್ಲಿ ಲಕ್ಷ್ಮೀಪತಿಯಾದ ನಾರಾಯಣದೇವರು ಹದಿನಾಲ್ಕುಲೋಕಗಳ ಮತ್ತು ಜೀವರನ್ನ, ಕರ್ಮವೇಸ್ಸ ಕಾಲವೇನು ಇವುಗಳೆಂಬೋ ಬೀಜಗಳ, ಪ್ರದೇಶಸಾಂಕೇತವಾದ ಭೂಮಿಯಲ್ಲಿ ಉತ್ಪತ್ತಿ ಮಾಡೋಣ, ಪೈರಿಗೆ ನೀರೆತ್ತಿ ಪಾಲನಿವಮಾಡಿದೋಪಾದಿಯಲ್ಲಿ, ಅನ್ನೋದಕಾದಿಗಳ ಕೊಟ್ಟು ಪಾಲನಿ ಮಾಡೋಣ, ಪೈರು ಫಲಿಸಿ ಪಕ್ವವಾಗ ತಲೆ ಕೊಯ್ದೋಪಾದಿಯಲ್ಲಿ ಜಗದಾಖ್ಯ ಪೈರು ಕಾಲದಿಂದ ಪಕ್ವವಾಗ ತಲೆ ಕೊಯ್ಯೋಣವೆಂಬುದೇ ನಾಶಮಾಡೋಣ, ಧಾನ್ಯಗಳ ಪ್ರಾಣಿಗಳು ಭೋಜನಮಾಡಿದಂತೆ ಜಗತ್ತನ್ನ ಭೋಜನರೂಪದಿಂದ ಉದರಲ್ಲಿ ಧರಿಸೋಣ. ಈ ಪ್ರಕಾರ ಸೃಷ್ಟ್ಯಾದಿ ವ್ಯಾಪಾರ ಮಾಡತಾ ನಿರಂತರದಲ್ಲೂ, ಸೃಷ್ಟಿಯಿಂದ ಸಂತೋಷವೂ, ಸಂಹಾರದಿಂದ ವ್ಯಸನವೂ ಇವು ಎರಡೂ ಇಲ್ಲದೇ ತನ್ನ ಸ್ವಾನಂದದಿಂದ ಪೂರ್ಣನಾಗಿದ್ದು ಸರ್ವಪ್ರಾಣಿಗಳಲ್ಲಿ ಇದ್ದು, ಅವರವರ ಯೋಗ್ಯತಾಕ್ಕೆ ಸಮವಾಗಿ ವರ್ತಿಸತಾ ಇರತಾನೆ. ॥53॥

## 2. ಭಾವಪ್ರಕಾಶಿಕೆ :-

ಕೃಷಿ ಮಾಡುವವರು ಭೂಮಿಯಲ್ಲಿ ಬೀಜವನ್ನು ಬಿತ್ತಿ ಅವುಗಳಿಗೆ ಕಾಲಕಾಲಕ್ಕೆ ನೀರುಹಾಕಿ, ಬೆಳಸಿದ ಬೆಳಸನ್ನು ಕಿತ್ತು ಆ ಧಾನ್ಯಗಳನ್ನು ತಾವು ಭುಂಜಿಸುವರು. ಆವರಿಗೆ ಹೇಗೆ ಬೀಜವನ್ನು ಬಿತ್ತುವ ಕಾಲದಲ್ಲಿ ಸಂತೋಷವೂ ಬೆಳದ ಬೆಳಸನ್ನು ಕಿತ್ತುವ ಕಾಲದಲ್ಲಿ ವ್ಯಸನವೂ ಆಗುವುದಿಲ್ಲವೋ ಅದರಂತೆಯೇ ಪರಮಾತ್ಮನು ಲೋಕಗಳನ್ನು ಲೋಕದಲ್ಲಿ ಸಕಲಜೀವರನ್ನೂ ಸೃಷ್ಟಿಸಿ, ರಕ್ಷಿಸಿ, ಸಂಹರಿಸುವನು ; ಅದರಿಂದ ಅವನಿಗೆ ಸಂತೋಷವೂ ಇಲ್ಲ, ವ್ಯಸನವೂ ಇಲ್ಲ. ಸರ್ವದಾ ಸಮವರ್ತಿಯಾಗಿರುವನೆಂಬ ತಾತ್ಪರ್ಯ. ॥53॥

## 3. ಭಾವದರ್ಪಣ :-

ಸೃಷ್ಟಿಸ್ಥಿತಿಲಯದ ವಿಚಾರ ಹೇಳುತ್ತಾರೆ ಬಿತ್ತಿ ಬೀಜ. ॥53॥

4. **ಶ್ರೀವ್ಯಾಸದಾಸಸಿದ್ಧಾಂತಕೌಮುದೀ :–**

"ಬಿತ್ತಿ" ಇತಿ॥ ಬೆಳಸು ಫಲ। ಮೆಲು ತಿಂಬೋಣ. ॥53॥

4. **ಶ್ರೀಗುರುಹೃದಯಪ್ರಕಾಶಿಕೆ :**

ಸದೃಷ್ಟಾಂತವಾಗಿ, ದೇವರಿಗೆ ಜಗತ್ಪ್ರಳಯವು ಭೋಜನದಂತೆ ಆನಂದ ರೂಪವೆಂದು ತಿಳಿಸುತ್ತಾರೆ. ಭೂಮಿಯಲ್ಲಿ ಬೀಜವನ್ನು ಬಿತ್ತಿ ನೀರೆತ್ತಿ ಬೆಳಸಿ ಫಲ ಪಕ್ವವಾದಮೇಲೆ ಕಿತ್ತು ಜನಗಳು ಮೆಲುವಂದದಲಿ ಅಂದರೆ, ಭೋಗೋಪ ಯೋಗ ಮಾಡುವಂತೆ ಲಕ್ಷ್ಮೀರಮಣನಾದ ದೇವರು ಸಕಲಲೋಕಗಳ, ಜೀವರ ಕಾಲ ಕರ್ಮಾದಿಗಳನ್ನೂ ಸಹ ಉತ್ಪತ್ತಿ ಸ್ಥಿತಿ ಲಯಾದಿಗಳನ್ನು ಮಾಡುತ್ತಾ ಖೇದ ಮೋದವೆಂಬ ಪ್ರಾಕೃತ ದುಃಖ ಸುಖ ಸಂಬಂಧವೇ ಇಲ್ಲದೆ ಸದಾ ಸಮ ವರ್ತಿ ಎನಿಸುವನು. ಅಂದರೆ, ಸದಾ ಏಕರೀತಿ ಆನಂದ ಸ್ವರೂಪನೆನಿಸು ವನು. ॥53॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ರೈತರು ಭೂಮಿಯನ್ನು ಚೆನ್ನಾಗಿ ಉತ್ತು, ಹದಮಾಡಿ ಬೀಜ ಗಳನ್ನು ಬಿತ್ತುವರು. ಬೀಜಗಳು ಮೊಳಕೆಯೊಡೆದು ಸಸಿಗಳಾದಾಗ, ಕಾಲ ಕಾಲಕ್ಕೆ ನೀರನ್ನು ಹಾಯಿಸಿ ಬೆಳೆಸನ್ನು ಬೆಳೆಯುವರು. ಬೆಳೆದ ಪೈರು ಪಕ್ವ ವಾಗಿ ಬಲಿತನಂತರ ಸಕಾಲದಲ್ಲಿ ಕೊಯ್ದು ಧಾನ್ಯಗಳನ್ನು ಸಂಗ್ರಹಿಸುವರು. ಧಾನ್ಯಗಳನ್ನು ಪಕ್ವಮಾಡಿ ಭೋಜನಮಾಡುವರು.

2. ಅದರಂತೆ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ರೈತರ ಸದೃಶ. ಅಸೃಜ್ಯರಾಶಿಯಿಂದ ಜೀವರನ್ನು ಸೃಷ್ಟಿಸಿ ತರುವುದೇ ಬೀಜವನ್ನು ಬಿತ್ತುವ ಕ್ರಿಯೆ. ಜೀವರ ಅನಾದಿಕರ್ಮಗಳು ಬೀಜಸದೃಶ. ಲಿಂಗೋಪ ಚಯ ವಿಧಾನವು ಬೀಜೋಪಚಾರ ಕ್ರಮವೆನಿಸುವುದು. ಆದರಿಂದ ಅನಾದಿ ಕಾಲದಿಂದ ನಿತ್ಯರಾದ ಜೀವರಿಗೆ ಕರ್ಮಸಂಬಂಧವು. ಕರ್ಮೋಪಭೋಗವೇ

ಬೀಜಗಳು ಮೊಳಕೆಯೊಡೆದು ಪೈರುಗಳಾಗಿ ಬೆಳೆಯುವುದಕ್ಕೆ ಸಾದೃಶ್ಯ ರೈತರು ಕಾಲಕಾಲಕ್ಕೆ ಪೈರುಗಳಿಗೆ ನೀರನ್ನು ಹಾಕುವುದು. ಜೀವರ ಸೃಷ್ಟಿಯಾದ ನಂತರ, ಜನ್ಮಜನ್ಮಾಂತರಗಳಲ್ಲಿ ಅವರ ಸ್ಥೂಲಶರೀರದ ಉಪಚಯಕ್ಕೆ ಸಾದೃಶ್ಯವು.

3. ಜೀವರ ಅನಾದಿಕಾಲಕರ್ಮಗಳಿಗನುಗುಣವಾಗಿ, ಜೀವರ ಸ್ಥೂಲ ಶರೀರದ ದ್ವಾರಾ ಸಾಧನೆ. ಸೃಷ್ಟಿ (ಉತ್ಪತ್ತಿ), ಸ್ಥಿತಿ (ಸಂರಕ್ಷಣೆ) ನಾಶ (ಸಂಹಾರ–ಲಯ) ಈ ಕಾರ್ಯಗಳು, ಜಗದ್ವಿಲಕ್ಷಣನಾದ ಜಗಧೀಶನಿಗೆ ಲೀಲಾಜಾಲವಾದ ಕ್ರಿಯಾವಿಶೇಷಗಳು. ಬೀಜಗಳ ಬಿತ್ತನೆ (ಸೃಷ್ಟಿ) ಪೈರುಗಳ ಸಂರಕ್ಷಣೆ (ಸ್ಥಿತಿ) ಬಲಿತ ಪೈರನ್ನು ಕಟಾವು ಮಾಡಿ, ಧಾನ್ಯಗಳನ್ನು ಬೇಯಿಸಿ ತಿನ್ನುವ ಕ್ರಿಯೆ (ಸಂಹಾರ–ಲಯ) ಇವು ಹೇಗೆ ರೈತರಿಗೆ ಸ್ವಾಭಾವಿಕ ಕ್ರಿಯೆಗಳೋ, ಅಂತೆಯೇ ಜಗತ್ತಿನ ಸರ್ವವ್ಯಾಪಾರಗಳಿಗೆ ತಾನೇ ಸ್ವಯಂಕರ್ತೃವಾಗಿದ್ದರೂ ಶ್ರೀಪರಮಾತ್ಮನಿಗೆ ಅವುಗಳ ಲೇಪವಿಲ್ಲ, ನಿರ್ಲಿಪ್ತನಾದ ಆ ನಿರಂಜನನಿಗೆ ಸೃಷ್ಟಿಕಾರ್ಯದಿಂದ ಸಂತೋಷವಾಗಲೀ, ಲಯಕಾರ್ಯದಿಂದ ದುಃಖವಾಗಲೀ ಲವಲೇಶವೂ ಇಲ್ಲ. ಸಕಲ ಜಗದ್ವ್ಯಾಪಾರಗಳನ್ನೂ ನಿರಾಯಾಸವಾಗಿ ಲೀಲಾಮಾತ್ರದಿಂದ ನಿರ್ವಹಿಸುವನು ಆ ನಿರ್ಲಿಪ್ತನು.

4. ಜೀವರ ಯೋಗ್ಯತಾನುಸಾರ ಕರ್ಮಾಚರಣೆ.ತದ್ದ್ವಾರಾ ಕರ್ಮಫಲ ಪ್ರಾಪ್ತಿ. ಆ ಕರ್ಮಫಲಭೋಗ ಜೀವರಿಗೆ ಉಣಿಸುವ ಆ ಉರಗಶಯನನಿಗೆ ಪಕ್ಷಪಾತಾದಿ ದೋಷಗಳಲ್ಲಿ ಇದರಿಂದ ಸಮವರ್ತಿ ಎನಿಸುವನು. ನೈರ್ಘೃಣ್ಯ ಪಕ್ಷಪಾತಾದಿ ದೋಷಗಳಿಲ್ಲರು ನಿರ್ದೋಷವಸ್ತು ಆ ಪರಬ್ರಹ್ಮನೆಂದು ತಿಳಿಸುತ್ತಾರೆ ದಾಸರಾಯರು. ॥53॥

❋

## ಪದ್ಯ ೫೪

**ಮೂಲ :–**

ಶ್ವಸನರುದ್ರೇಂದ್ರ ಪ್ರಮುಖ ಸುಮ |
ನಸರೊಳಿದ್ದರು ಕ್ಷುತ್ಪಿಪಾಸೆಗ |
ಳೊಶದೊಳಿಪ್ಪವು ಸಕಲಭೋಗಕೆ ಸಾಧನಗಳಾಗಿ ||
ಅಸುರ ಪ್ರೇತ ಪಿಶಾಚಿಗಳ ಬಾ |
ಧಿಸುತಲಿಪ್ಪವು ದಿನದಿನದಿ ಮಾ |
ನಿಸರೊಳಗೆ ಮೃಗಪಕ್ಷಿ ಜೀವರೊಳಿದ್ದು ಪೋಗುವುವು || ೫೪ ||

**ಅವತರಣಿಕೆ :–**

ಬ್ರಹ್ಮಾದಿ ತೃಣಾಂತ ಸಮಸ್ತಜೀವರಿಗೆ ಹಸಿವು ನೀರಡಿಕೆಗಳುಂಟು ಎಂತ ಹೇಳುತ್ತಾರೆ. ॥54॥

**ಪ್ರತಿಪದಾರ್ಥ :–**

**ಕ್ಷುತ್** = ಹಸಿವು, **ಪಿಪಾಸೆಗಳು** = ಬಾಯಾರಿಕೆ ಇವೆರಡು, **ಶ್ವಸನ ರುದ್ರೇಂದ್ರ** = ವಾಯುದೇವರು, ರುದ್ರದೇವರು, ಇಂದ್ರದೇವರು, **ಪ್ರಮುಖ** = ಇವರೇ ಮೊದಲಾದ, **ಸುಮನಸರೊಳಿದ್ದರು** = ದೇವಗಂಧರ್ವಾಂತರಾದ ದೇವತೆಗಳಲ್ಲಿ ಇದ್ದರೂ ಸಹ. **ಸಕಲಭೋಗಕೆ** = ಅವರವರ ಯೋಗ್ಯತಾನುಸಾರವಾದ ಭೋಗಕ್ಕೆ, **ಸಾಧನಗಳಾಗಿ** = ಸಹಕಾರಿಗಳಾಗಿ, **ವಶದೊಳಿಪ್ಪವು** = ಆಯಾಯಾ ದೇವತೆಗಳ ವಶದಲ್ಲಿರುವವು (ಆಧೀನವಾಗಿರುವವು). **ಅಸುರ** = ದೈತ್ಯರು, **ಪ್ರೇತ** ಪ್ರೇತಗಣಗಳು, **ಪಿಶಾಚಿಗಳ** = ಪಿಶಾಚಿಗಳನ್ನು **ಬಾಧಿಸುತಲಿಪ್ಪವು** = ಹಸಿವು ನೀರಡಿಕೆಗಳು ಇವರ ವಶದೊಳಗಿರದೆ ಬಾಧಿಸುತ್ತಿರುವವು. **ಮಾನಿಸರೊಳಗೆ** = ಮನುಷ್ಯ ವರ್ಗದವರಲ್ಲಿ. **ಮೃಗ ಪಕ್ಷಿ ಜೀವರೊಳು** = ಪಶ್ವಾದಿ ಜೀವರು, ಪಕ್ಷಿ

ಜೀವರುಗಳಲ್ಲಿ, **ದಿನದಿನದಿ**= ನಿರಂತರವೂ, **ಇದ್ದು ಪೋಗುವುವು**= ಭೋಜನವಿಲ್ಲದ ಕಾಲದಲ್ಲಿ ಬಾಧೆ ; ಭೋಜನಾನಂತರ ನಿವಾರಣೆ ಹೀಗೆ ಇದ್ದು ಹೋಗುವುವು. ॥54॥

## ವ್ಯಾಖ್ಯಾನಗಳು

1. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :**

ಬ್ರಹ್ಮಾದಿ ತೃಣಾಂತ ಜೀವರಿಗೆ ಕ್ಷುತ್ಪಿಪಾಸಾದಿಗಳುಂಟು ಎಂತ ಹೇಳ ತಾರೆ.

ಹಸಿವಿ, ನೀರಡಿಕೆ ಎರಡೂ, ಪ್ರಧಾನವಾಯುದೇವರು, ರುದ್ರದೇವರು, ಇಂದ್ರದೇವರು ಇವರೇ ಮೊದಲಾದ ದೇನಗಂಧರ್ವಾಂತರಾದ ದೇವತೆ ಗಳೊಳಗೆ ದೈತ್ಯರು, ಪ್ರೇತಗಣದೊಳಗೆ, ಮನುಷ್ಯಗಣದೊಳಗೆ, ಮೃಗ ಗಣದೊಳಗೆ, ಪಕ್ಷಿಗಣದೊಳಗೆ, ಅವಶಿಷ್ಟ ಯಾವತ್ತೂ ಜೀವರೊಳು ಕ್ಷುತ್ಪಿಪಾಸಾದಿಗಳು ಇರೋವಾಗಿ ಅವೆ. ಈ ಪ್ರಕಾರ ಕ್ಷುತ್ಪಿಪಾಸಾದಿ ಗಳು ಪೀಡಾಕಾರವಾಗದೆ, ಸಕಲದೇವತೆಗಳಿಗೆ ಅವರವರ ಯೋಗ್ಯ ತಾನುಸಾರ ಭೋಗಕ್ಕೆ ಸಾಧಕಗಳಾಗಿ ಇರೋವಾಗಿ ಅವೆ ಎಂದರೆ, ಯಥೇಚ್ಛ ಭೋಜನಪಾನಾದಿಗಳು ಮಾಡಬೇಕೆಂಬ ಇಚ್ಛಾಪ್ರಾಪ್ತವಾದರೆ, ಭೋಜನರೂಪವಾದ ಭೋಗಕ್ಕೆ ಜಠರಾಗ್ನಿ ಅವಕಾಶ ಕೊಡೋದಾಗತದೆ. ತದಿಚ್ಛಾ ಇಲ್ಲದಾಗ್ಯೆ, ಜಠರಾಗ್ನಿ ಶಾಂತವಾಗಿ ಕ್ಷುತ್ಪಿಪಾಸಾದಿಗಳು ಇಲ್ಲದಂತೆ ಮಾಡತದೆ. ಈ ಪ್ರಕಾರ ಭೋಗಸಾಧಕಗಳಾಗಿ ಇರತವೆ. ಈ ಕ್ಷುತ್ಪಿ ಪಾಸಾದಿಗಳು ದೇವತೆಗಳಿಗೆ ಅವರವರ ವಶದಲ್ಲಿ ಇರೋವಾಗಿ ಇರತವೆ. ಅಸುರ, ಪ್ರೇತ, ಪಿಶಾಚಗಳಲ್ಲಿ ಇರತಕ್ಕ ಕ್ಷುತ್ಪಿಪಾಸಾದಿಗಳು ವಶದೊಳಗೆ ಇರದೆ, ಎಷ್ಟು ಭೋಜನ ಮಾಡಿದರೂ ನಿವಾರಣವಾಗದೆ, ಅವರನ್ನ ಬಾಧಿಸತಾ ಇರತವೆ. ಪ್ರತಿದಿನದಲ್ಲೂ ಮನುಷ್ಯರೊಳು, ಮೃಗ, ಪಕ್ಷಿ, ತೃಣಾಂತ ಜೀವ ರೊಳು ಕ್ಷುತ್ಪಿಪಾಸಾದಿಗಳು ಇದ್ದು, ಪ್ರತಿದಿನ ಭೋಜನಕಾಲದಲ್ಲಿ ನಿವಾರಣೆ, ಭೋಜನವಿಲ್ಲದಿರುವ ಕಾಲದಲ್ಲಿ ಬಾಧಾ, ಈ ಪ್ರಕಾರ ಇರೋವಾಗಿ ಇರತವೆ. ಶುದ್ಧವಾಗಿ ನಿವಾರಣ ಇಲ್ಲ. ವಶದೊಳಗೆ ಇರೋದಿಲ್ಲ, ಕಾಲವಿಶೇಷದಲ್ಲಿ ಎಂತ ಅರ್ಥ. ॥54॥

2. ಭಾವಪ್ರಕಾಶಿಕೆ :-

ವಾಯುದೇವರು, ರುದ್ರದೇವರು, ಇಂದ್ರದೇವರೇ ಪ್ರಧಾನರಾದ ಎಲ್ಲಾ ದೇವತೆಗಳಿಗೂ ಹಸಿವು ಬಾಯಾರಿಕೆಗಳಿರುತ್ತವು. ಆದರೂ ಅವರಿಗೆ ಬಾಧಕವಾಗುವುದಿಲ್ಲ. ಭೋಗಸಾಧನಗಳಾಗಿ ಅವರ ಇಚ್ಛಾನುಸಾರವಾಗಿ ಸ್ವಾಧೀನದಲ್ಲಿರುವವು. ಅಂದರೆ, ಯಾವುದಾದರೂ ಉತ್ತಮವಾದ ಫಲವೋ, ಭುಂಜಿಸುತ ಪದಾರ್ಥವೋ ಅವುಗಳನ್ನು ನೋಡಿ ಭುಂಜಿಸಬೇಕೆಂದು ತೋರಿದಾಗ ಹಸಿವಾಗದಿದ್ದರೆ ಅವುಗಳನ್ನು ತಿನ್ನುವುದೆಂತು ? ಆ ಸಮಯದಲ್ಲಿ ತಮಗೆ ಬೇಕಾದಷ್ಟು ಮಾತ್ರ ಹಸಿವಾಗುವುದು. ಇದರಂತೆಯೇ ತಮಗೆ ಪಾನಮಾಡಬೇಕೆಂದು ಇಚ್ಛೆ ಹುಟ್ಟಿದಾಗ ಬಾಯಾರಿಕೆಯಾಗುವದು. ಬೇಕಾದಷ್ಟು ಭುಂಜಿಸಿ ಯಥೇಷ್ಟವಾಗಿ ಪಾನಮಾಡಿ ಸುಖಪಡುವರು. ಇಂತೀ ಸುಖಭೋಗಕ್ಕೆ ಮಾತ್ರವೇ ಹಸಿವು ಬಾಯಾರಿಕೆಗಳಾಗುವವೆಂದು ತಾತ್ಪರ್ಯ. ದೈತ್ಯರು, ದಾನವರು, ರಾಕ್ಷಸರು, ಪ್ರೇತಗಳು, ಪಿಶಾಚಗಳು ಇವರುಗಳನ್ನು ಸರ್ವದಾ ಬಾಧಿಸುತ್ತಲೇ ಇರುವವು. ಮನುಷ್ಯರು, ಮೃಗಗಳು, ಪಕ್ಷಿಗಳು ಇವರುಗಳಿಗೆ ಹಸಿವು ಬಾಯಾರಿಕೆಗಳಾಗುವವು. ತಕ್ಷಣ ಭೋಜನಪಾನಾದಿಗಳನ್ನು ಮಾಡಿದಕೂಡಲೇ ಅವು ಪರಿಹಾರವಾಗುವವು. ॥54॥

3. ಭಾವದರ್ಪಣ :-

ಕ್ಷುತ್‌ಪಿಪಾಸಾದಿಗಳು ಬ್ರಹ್ಮಾದಿ ದೇವತೆಗಳಿಗೆ ಪೀಡಾಕರ ಅಲ್ಲವೆಂತಲೂ, ಮಾನಿಸರು ಎಂದರೆ ಮನುಷ್ಯರು. ಇವರೇ ಮೊದಲಾದ ಜೀವರಿಗೆ ಬಾಧಕವೆಂತಲೂ ಹೇಳುತ್ತಾರೆ। ಶ್ವಸನ। "ಕ್ಷುತ್ಪಿಪಾಸಾದಯಶ್ಚೈವ ದೇವಾನಾಂ ಭೋಗಸಾಧಕಾः। ನ ತು ಪೀಡಾಕರಾಸ್ತೇಷಾಮೈಶ್ವರ್ಯಾದಿಗುಣೋನ್ನತೇ" ಇತಿ ವಚನಾತ್. ॥54॥

4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :

'ಶ್ವಸನ' ಇತಿ॥ ಕ್ಷುತ್ಪಿಪಾಸಾದಯಃ ಸರ್ವೇದೇವಾನಾಂ ಭೋಗಸಾಧಕಾः॥ ನ ತು ಪೀಡಾಕರಾः ತೇಷಾಂ ಐಶ್ವರ್ಯಾದಿ ಗುಣೋನ್ನತೇः ॥54॥

### ಕನ್ನಡಾರ್ಥ

ಹಸಿವೆ ನೀರಡಿಕೆಗಳೆಲ್ಲವೂ ದೇವತೆಗಳಿಗೆ ಭೋಗಸಾಧಕಗಳು. ಅವು ಗಳಿಂದ ದೇವತೆಗಳಿಗೆ ಪೀಡೆ ಬಾಧೆಯಾಗುವುದಿಲ್ಲ. ಯಾಕೆಂದರೆ ಅವರ ಐಶ್ವರ್ಯಾದಿಗುಣಗಳಿಗೆ ಉನ್ನತಿಯಿರುತ್ತದೆ. ॥54॥

5. **ಶ್ರೀಗುರುಹೃದಯಪ್ರಕಾಶಿಕೆ :**

ಹಸಿವೆ, ಬಾಯಾರಿಕೆ ಮೊದಲಾದ್ದು ಜೀವರಿಗೆ ಆದರೂ, ದೇವತೆಗಳಿಗೆ ಸ್ವಾಧೀನವೆಂದು ತಿಳಿಸುತ್ತಾರೆ, ಎರಡು ಪದ್ಯದಿಂದ, ಶ್ವಸನ ಎಂದು. ಶ್ವಸನ ಎಂಬ ಪ್ರಾಣದೇವರೂ, ರುದ್ರದೇವರೂ. ಇಂದ್ರ ಮೊದಲಾದ ದೇವತೆಗಳಲ್ಲಿ ಕ್ಷುತ್ತೆಂಬ ಹಸಿವೆಯೂ. ಪಿಪಾಸವೆಂಬ ನೀರಡಿಕೆಯೂ ಇದ್ದಾಗ್ಯೂ ಅವರ ವಶದಲ್ಲೇ ಇದ್ದು ಸಕಲಸೌಖ್ಯಕ್ಕೂ ಸಾಧನಗಳಾಗಿರುತ್ತವೆ. ಅಸುರ ಪ್ರೇತ ಪಿಶಾಚ ಈ ಜೀವರನ್ನು ಹಸಿವೆ, ನೀರಡಿಕೆ ಸಹಾ ಬಾಧೆಪಡಿಸುವವು. ಮನುಷ್ಯ, ಮೃಗ. ಪಕ್ಷಿಜೀವರಲ್ಲಿದ್ದು ಪೊಂಗುವವು ಅಂದರೆ ಉಕ್ಕುವವು ಅಂದರೆ ವೃದ್ಧಿಹ್ರಾಸ ಹೊಂದುವವು ಎಂದರ್ಥ. ಪರಾ–ಪೊಗು ಎಂಬ ಕನ್ನಡ ಧಾತುವಿನಿಂದ ಪೊಗರು, ಪೊಂಗೆಂಬ ಶಬ್ದ ಹುಟ್ಟಿತು. ॥54॥

## ಸರ್ವವ್ಯಾಖ್ಯಾನಸಾರಸಂಗ್ರಹ

1. **ಶ್ವಸನ ರುದ್ರೇಂದ್ರ ಪ್ರಮುಖ–**

ಶ್ವಾಸಪತಿಗಳಾದ ಮುಖ್ಯ ಪ್ರಾಣದೇವರಿಗೆ. "ಶ್ವಸನ" ಎಂತ ನಾಮ. ಶ್ರೀವಾಯುದೇವರು (ಇದರಿಂದ ಬ್ರಹ್ಮದೇವರೂ ಗ್ರಾಹ್ಯ), ಶ್ರೀರುದ್ರದೇವರು, ಶ್ರೀ ಇಂದ್ರದೇವರು ಇವರೇ ಮುಂತಾದ ಸಮಸ್ತ ದೇವತಾ ವರ್ಗದವರಿಗೆ (**ಸುಮನಸರೊಳು**), ಹಸಿವು ಮತ್ತು ಬಾಯಾರಿಕೆ (**ಕ್ಷುತ್–ಪಿಪಾಸೆ**) ಗಳುಂಟು. ಆದರೆ ಅವು ಅವರ ಅಧೀನದಲ್ಲಿವೆ. ತಮಗೆ ಏನಾದರೂ ಪದಾರ್ಥ ತಿನ್ನಬೇಕೆಂಬ ಆಸೆಯುಂಟಾದಾಗ ಮಾತ್ರ ಹಸಿವಾಗುವುದು.

ಪಾನೀಯಗಳ ಅಗತ್ಯವಿದ್ದಾಗ ನೀರಡಿಕೆಯಾಗುವುದು ಅವು ಆಯಾಯಾ ದೇವತೆಗಳ ಯೋಗ್ಯತಾಸಾಮರ್ಥ್ಯಕ್ಕನುಗುಣವಾಗಿ ಅವರವರ ಸ್ವಾಧೀನ ವಾಗಿವೆ. ಅವು ಅವರ ಭೋಗಕ್ಕೆ ಮುಖ್ಯ ಸಾಧನಗಳ ರೂಪದಲ್ಲಿರುವುವು. ಹಸಿವು ನೀರಡಿಕೆಗಳಿಂದ ದೇವತೆಗಳಿಗೆ ಬಾಧಕವೇನೂ ಇಲ್ಲ.

2. ಆದರೆ ದೈತ್ಯವರ್ಗ (ಅಸುರ). ಪ್ರೇತಗಣಗಳು, ಪಿಶಾಚಾದಿ ವರ್ಗಗಳ ಚೇತನರಿಗೆ ಹಸಿವು ಬಾಯಾರಿಕೆ ವಿಪರೀತ. ಆದರಿಂದಲೇ ಅವರು ಸದಾ ಭಕ್ಷಕರಾಗಿರುವರು. ಅವುಗಳನ್ನು ತಡೆಯುವ ಸಾಮರ್ಥ್ಯ ಅವರಿಗಿಲ್ಲ.

3. ಮಾನವರಿಗೆ (ಮೂನಿಸರೊಳಗೆ) ಹುಲಿ, ಸಿಂಹ ಇತ್ಯಾದಿ ವನ್ಯ ಪ್ರಾಣಿಗಳಿಗೂ, ಪಶ್ವಾದಿ ಮೃಗಗಳಿಗೆ. ಪಕ್ಷಿವರ್ಗದ ಚೇತನರಿಗೆ ಹಸಿವಾದಾಗ ಹಸಿವೆಯ ಬಾಧೆ, ನೀರಡಿಕೆಯಾದಾಗ ಪಿಪಾಸೆ ಇವುಗಳ ಬಾಧೆಯುಂಟಾಗು ವುದು. ಭೋಜನಾನಂತರ, ಜಲಸೇವನಾನಂತರ ಕ್ಷುತ್ ಪಿಪಾಸೆಗಳು ಅಷಗಿ ಬಾಧಕವಾಗುವುದಿಲ್ಲ.

ಈ ರೀತಿಯಲ್ಲಿ ದೇವತೆಗಳು (ಸಾತ್ವಿಕವರ್ಗ), ಮಾನವರು, ಪಶ್ವಾದಿ ಗಳು, ಪಕ್ಷಿಗಳು (ಮಧ್ಯಮವರ್ಗ) ಮತ್ತು ದೈತ್ಯ ಪ್ರೇತ ಪಿಶಾಚಾದಿಗಳಿಗೆ (ಅಧಮಜೀವವರ್ಗ) ಕ್ಷುತ್ ಪಿಪಾಸೆಗಳಲ್ಲಿ ತಾರತಮ್ಯವಿದೆ ಎಂದು ತಿಳಿಸು ತ್ತಾರೆ ದಾಸವರ್ಯರು. ॥54॥

## ಪದ್ಯ ೫೫

ಮೂಲ :–

ವಾಸುದೇವಗೆ ಸ್ವಪ್ನ ಸುಷುಪ್ತಿ ಪಿ ।
ಪಾಸೆ ಕ್ಷುಧೆ ಭಯ ಶೋಕ ಮೋಹಾ ।
ಯಾಸ ವಿಸ್ಮೃತಿ ಮಾತ್ಸರ್ಯ ಮದ ಪುಣ್ಯ ಪಾಪಾದಿ ॥
ದೋಷವರ್ಜಿತನೆಂದು ಬ್ರಹ್ಮ ಸ ।
ದಾಶಿವಾದಿ ಸಮಸ್ತದಿವಿಜರು ।
ಪಾಸನೆಯ ಗೈದೆಲ್ಲಕಾಲದಿ ಮುಕ್ತರಾಗಿಹರು ॥ ೫೫ ॥

**ಅವತರಣಿಕೆ :-**

ಶ್ರೀಹರಿಯು ಸರ್ವದೋಷಗಳಿಂದ ವಿವರ್ಜಿತನೆಂದು ಉಪಾಸನೆ ಗೈಯ್ಯುವ ಬ್ರಹ್ಮಾದಿ ಮುಕ್ತಿಯೋಗ್ಯರಾದ ಸಮಸ್ತ ದೇವತೆಗಳು ಮುಕ್ತರಾದ ರೆಂದು ತಿಳಿಸುತ್ತಾರೆ. ॥55॥

**ಪ್ರತಿಪದಾರ್ಥ :-**

**ವಾಸುದೇವಗೆ** = ಗುಣಪೂರ್ಣನಾದ ನಿರ್ದೋಷನಾದ ವಾಸುದೇವ ನಾಮಕ ಶ್ರೀಪರಮಾತ್ಮನಿಗೆ, **ಸ್ವಪ್ನ** = ಸ್ವಪ್ನಾವಸ್ಥೆಯಾಗಲೀ, **ಸುಷುಪ್ತಿ** = ನಿದ್ರಾವಸ್ಥೆಯಾಗಲೀ, **ಪಿಪಾಸೆ** = ನೀರಡಿಕೆಯಾಗಲೀ, **ಕ್ಷುಧೆ** = ಹಸಿವಾಗಲೀ, **ಭಯ** = ಇತರರಿಂದ ಭಯವಾಗಲೀ, **ಶೋಕ** = ದುಃಖ ವಾಗಲೀ, **ಮೋಹ** = ಮೋಹವಾಗಲೀ, **ಆಯಾಸ** = ಶ್ರಮವಾಗಲೀ, **ವಿಸ್ಮೃತಿ** = ಮರವಾಗಲೀ, **ಮಾತ್ಸರ್ಯ** = ಮತ್ಸರವಾಗಲೀ, **ಮದ** = ಅಹಂಕಾರವಾಗಲೀ, **ಪುಣ್ಯ** = ಪುಣ್ಯಗಳಾಗಲೀ, **ಪಾಪ** = ಪಾಪಗಳಾಗಲೀ, **ಆದಿ ದೋಷವರ್ಜಿತನೆಂದು** = ಇವೇ ಮೊದಲಾದ ದೋಷಗಳಿಂದ ಅತ್ಯಂತ ದೂರನೆಂದು, **ಬ್ರಹ್ಮ** = ಬ್ರಹ್ಮದೇವರು, **ಸದಾಶಿವಾದಿ** = ರುದ್ರದೇವರೇ ಮೊದಲಾದ, **ಸಮಸ್ತದಿವಿಜರು** = ಸಕಲರಾದ ಮುಕ್ತಿಯೋಗ್ಯದೇವತೆಗಳು, **ಉಪಾಸನೆಯ ಗೈದು** ಉಪಾಸನೆ ಮಾಡಿ (ಧ್ಯಾನಮಾಡಿ), ಎಲ್ಲ **ಕಾಲದಿ** = ಸರ್ವಕಾಲಗಳಲ್ಲಿ, **ಮುಕ್ತರಾಗಿಹರು** = ಲಿಂಗಾಭಂಗಾನಂತರ ವೈಕುಂಠಾದಿಲೋಕಗಳನ್ನು ಸೇರಿ ಮುಕ್ತಿಯನ್ನು ಪಡೆಯುವರು. ॥55॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಪರಮಾತ್ಮ ದೋಷದೂರನೆಂದು ಉಪಾಸನಾಮಾಡಿ ಬ್ರಹ್ಮಾದಿ ಮುಕ್ತಿಯೋಗ್ಯರು ಮುಕ್ತರಾದರೆಂದು ಹೇಳುತ್ತಾರೆ.

ಗುಣಪೂರ್ಣನಾದ ನಿರ್ದೋಷನಾದ ವಾಸುದೇವಗೆ ಸ್ವಪ್ನಾವಸ್ಥಾ, ನಿದ್ರಾವಸ್ಥಾ, ನೀರಡಿಕೆ, ಹಸಿವು, ಅಂಜಿಕೆ, ದುಃಖ, ಮೋಹವೇನು, ಆಯಾಸ ವೇನು, ಮರವು, ಮತ್ಸರ, ಅಪ್ಪಮದಗಳು ಪುಣ್ಯಪಾಪಾದಿ ವಿಧಿಗಳು ಈ ಪೂರ್ವೋಕ್ತಗಳಾದ ದೋಷಗಳಿಂದ ರಹಿತನಾದವನೆಂದು, ಬ್ರಹ್ಮರುದ್ರಾದಿ ಸಮಸ್ತಮುಕ್ತಿಯೋಗ್ಯದೇವತೆಗಳು, ಜೀವರು, ಸರ್ವಕಾಲದಲ್ಲಿ ಉಪಾಸನ ಮಾಡಿ, ಲಿಂಗಭಂಗವನ್ನು ಐದಿ ವೈಕುಂಠಾದಿಲೋಕದಲ್ಲಿ ಇರೋವರಾಗಿ ದ್ದಾರೆ. ||55||

## 2. ಭಾವಪ್ರಕಾಶಿಕೆ :–

ಶ್ರೀಪರಮಾತ್ಮನು, ಸ್ವಪ್ನಾವಸ್ಥೆ, ಸುಷುಪ್ತ್ಯವಸ್ಥೆ, ಹಸಿವು, ಬಾಯಾರಿಕೆ, ಭಯ, ಶೋಕ, ಮೋಹ, ಆಯಾಸ, ವಿಸ್ಮೃತಿ, ಮಾತ್ಸರ್ಯ, ಮದ, ಪುಣ್ಯ, ಪಾಪ ಮೊದಲಾದ ಯಾವ ದೋಷವೂ ಇಲ್ಲದವನೆಂದು ತಿಳಿದು, ಬ್ರಹ್ಮರುದ್ರಾದಿ ದೇವತೆಗಳು ಸರ್ವಕಾಲದಲ್ಲೂ ಉಪಾಸನೆಯನ್ನು ಮಾಡಿ ಮುಕ್ತಿಹೊಂದುವರು. ||55||

## 3. ಭಾವದರ್ಪಣ :–

ಶ್ರೀಹರಿಗೆ ಸ್ವಪ್ನಾದಿ ಯಾವ ಯಾವ ದೋಷದಿಲ್ಲೆಂದು ಹೇಳುತ್ತಾರೆ. ವಾಸುದೇವ। ಉಕ್ತಂ ಚ ಗಾರುಡೇ। "ಕ್ಲೇಶಶೋಕಾದಿ ಶೂನ್ಯಸ್ಯ ಹರೇಃ ಕ್ಲೇಶಾದಿ ಚಿಂತನಃ। ತೇ ಸರ್ವೇ ಅಸುರಾಜ್ಞೇಯಾ ನಾತ್ರ ಕಾರ್ಯ ವಿಚಾರ ಣೇತಿ।" ಹೀಗೆ ಇರೋಣದರಿಂದ ಸ್ವಾಮಿಗೆ ಯಾವದೂ ಇಲ್ಲವೆಂದು ಭಾವ. ||55||

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :–

॥ ವಾಸುದೇವ ಇತಿ ॥

### ಕನ್ನಡಾರ್ಥ

ಅರ್ಥ ಸುಲಭವಿದೆ. ||55||

5. **ಶ್ರೀಗುರುಹೃದಯಪ್ರಕಾಶಿಕೆ :**

ವಾಸುದೇವನೆಂಬ ಜಗದ್ವ್ಯಾಪ್ತ ದೇವರಿಗೆ ಸ್ವಪ್ನವೆಂಬ ವಾಸನೋ ವಾಸನೆಯೂ, ಸುಪ್ತಿ ಎಂಬ ನಿದ್ರೆಯೂ, ಪಿಪಾಸವೆಂಬ ನೀರಡಿಕೆ, ಕ್ಷುತ್ತೆಂಬ ಹಸಿವೆ, ಭಯನೆಂಬ ಕಂಪವೂ, ಶೋಕವೆಂಬ ದುಃಖ, ಆಯಾಸವೆಂಬ ಶ್ರಮ, ಅಪಸ್ಮೃತಿ ಎಂಬ ಮೂರ್ಛೆ, ಮಾತ್ಸರ್ಯವೆಂಬ ದ್ರೋಹಬುದ್ಧಿ, ಮದವೆಂಬ ಮರವೆ, ಪುಣ್ಯವೆಂಬ ಸುಖಸಾಧನಕರ್ಮ, ಪಾಪವೆಂಬ ದುಃಖಸಾಧನಕರ್ಮ ಮೊದಲಾದ ದೋಷಗಳು ಇಲ್ಲ. ಆದ್ದರಿಂದ ದೋಷವರ್ಜಿತ, ಗುಣಪೂರ್ಣನೆಂದು ದೇವರನ್ನು ಬ್ರಹ್ಮರುದ್ರಾದಿ ಸಮಸ್ತ ದೇವತೆಗಳೂ ಸದಾ ಉಪಾಸನಾ ಮಾಡಿ ಮುಕ್ತರಾಗಿದ್ದಾರೆ. ||55||

## ಸರ್ವವ್ಯಾಖ್ಯಾನಸಾರಸಂಗ್ರಹ

1. **ವಾಸುದೇವನೆ–**

ಅನಂತಕಲ್ಯಾಣಗುಣಗಣಪರಿಪೂರ್ಣನೂ, ಅತಿ ಏವ ಸಮಸ್ತದೋಷ ವಿದೂರನೂ ಆದ ವಾಸುದೇವನಾಮಕ ಶ್ರೀಹರಿಯು ಮುಕ್ತಿಪ್ರದನು· ವಾಸುದೇವರೂಪವು ಮೋಕ್ಷಪ್ರದರೂಪವು.

2. ಅಂತಹ ವಾಸುದೇವನಾಮಕ ಶ್ರೀಪರಮಾತ್ಮನಿಗೆ, ಜೀವರಿಗಿರುವಂತೆ ಸ್ವಪ್ನಾವಸ್ಥೆಯಾಗಲೀ, ನಿದ್ರಾವಸ್ಥೆಯಾಗಲೀ (ಸ್ವಪ್ನ ಸುಷಪ್ತಿ) ಎಂದೆಂದಿಗೂ ಇಲ್ಲ.

ಸಾಮಾನ್ಯ ಜೀವರಿಗಿರುವಂತೆ ಹಸಿವಾಗಲೀ (ಕ್ಷುಧೆ) ನೀರಡಿಕೆಯಾಗಲೀ (ಪಿಪಾಸೆ) ಸರ್ವಕಾಲಕ್ಕೂ ಇಲ್ಲವೇ ಇಲ್ಲ. ನಿತ್ಯ ತೃಪ್ತನು ಮತ್ತು ನಿತ್ಯಾನಂದಮೂರ್ತಿಯು ಯಾರಿಂದಲೂ ಯಾವ ಕಾಲಕ್ಕೂ ಭಯವಂಬುದಿಲ್ಲ. ಸರ್ವಭಯರಹಿತನು. ಜೀವರಿಗೆ ದಾರಾ ಪುತ್ರಾದಿಗಳಲ್ಲಿರುವಂತೆ ಮೋಹಾದಿಗಳಿಲ್ಲ. ನಿತ್ಯಾವಿಯೋಗಿನಿಯಾದ ಶ್ರೀಲಕ್ಷ್ಮೀದೇವಿಯಿಂದ ಅವನಿಗೆ ಆನಂದಪ್ರಾಪ್ತಿಯಾಗಬೇಕಾದ್ದೇನೂ ಇಲ್ಲ. ಸ್ವರಮಣನಾದ ಆ ಸ್ವತಂತ್ರನು ಶ್ರೀರಮಾದೇವಿಯರಿಗೂ ಮತ್ತು ಸಕಲ ಶಜ್ಜನರಿಗೂ ಆನಂದಪ್ರದನು.

ಯಾವ ಕಾಲಕ್ಕೂ ದುಃಖಾದಿಗಳಿಲ್ಲ. ಆದರೆ ರಾಮಕೃಷ್ಣಾದ್ಯವತಾರ ಗಳಲ್ಲಿ ಶೋಕಪಟ್ಟವನಂತೆ ನಟಿಸಿರುವನು. ಆ ನಟನಟನೆ ಅಸುರರ ಮೋಹ ನಾರ್ಥ ಎಂದು ತಿಳಿಯಬೇಕು.

ಸೃಷ್ಟ್ಯಾದಿ ಮಹಾಕಾರ್ಯಗಳಿಂದ ಅವನಿಗೆ ದೇಹಶ್ರಮವಾಗಲೀ, ಆಯಾಸವಾಗಲೀ ಇಲ್ಲವೇ ಇಲ್ಲ. ನಿರಾಯಸವಾಗಿ, ಲೀಲಾಜಾಲವಾಗಿ ಜಗದ್ವ್ಯಾಪಾರಗಳನ್ನು ನಡೆಯಿಸುತ ಅಪ್ರತಿಸಂಪನ್ನನು. ಜೀವರಿಗಿರುವಂತೆ ಮರೆವು ಎಂದೆಂದಿಗೂ ಇಲ್ಲ (ವಿಸ್ಮೃತಿ). ಸದಾ ಜಾಗ್ರತನಾಗಿರುವನು. ಮತ್ಸರಾದಿ ದೋಷಗಳಿಲ್ಲ, ನಿರ್ಮತ್ಸರನು. ದೇವತೆಗಳಲ್ಲಿ ಪಕ್ಷಪಾತವಿಲ್ಲ. ಮಾನವರಲ್ಲಿ ಅಸೂಯೆ, ಉದಾಸೀನ ಭಾವಗಳಿಲ್ಲ. ದೈತ್ಯರಲ್ಲಿ ದ್ವೇಷವಿಲ್ಲ. ಆಯಾಯಾ, ಜೀವರ ಸ್ವರೂಪಯೋಗ್ಯತೆಗನುಗುಣವಾಗಿ ಶ್ರೀಶನ ಬಿಂಬಕ್ರಿಯಾರೂಪವಾದ ಸಕಲ ವ್ಯಾಪಾರ. ಅಷ್ಟುಮದಗಳಾಗಲೀ ಅಹಂಕಾರವಾಗಲೀ ಇಲ್ಲ. ಅಪ್ರಾಕೃತ ಗುಣಸಂಪನ್ನನು, ಶಾಂತಾಕಾರನು. ಸತ್ಕರ್ಮಗಳಿಂದ ಫಲಿತವಾದ ಪುಣ್ಯವಾಗಲೀ, ದುಷ್ಕರ್ಮಗಳಿಂದ ಜನ್ಯವಾದ ಪಾಪವಾಗಲೀ ಅವನಿಗೆ ಲೇಪವಿಲ್ಲ. ಸದಾ ನಿರ್ಲಿಪ್ತನು. ಕರ್ಮವು ಅವನ ಅಧೀನ. ನಿರಂಜನಮೂರ್ತಿ. ಸ್ವಾನಂದವಿಗ್ರಹನು. ಜಗದ್ವಿಲಕ್ಷಣನು.

3. ಹೀಗೆ ಸಮಸ್ತ ದೋಷಗಳಿಂದ ವಿದೂರನೆಂದು. ಚೆನ್ನಾಗಿ ತಿಳಿದು ಜ್ಞಾನಾನುಸಂಧಾನದಿಂದ ಬ್ರಹ್ಮ, ರುದ್ರಾದಿ ಸಕಲ ದಿವಿಜರು ಸರ್ವಕಾಲದಲ್ಲಿ ಆ ಅನಂತಕಲ್ಯಾಣಗುಣಸಂಪನ್ನನು ಪರಿಪೂರ್ಣನೆಂದು ಸದುಪಾಸನೆ ಮಾಡುತ್ತಿರುವರು. ಇದರಿಂದ ಲಿಂಗಭಂಗವನ್ನು ಹೊಂದಿ, ಸದಾ ನಿತ್ಯಾನಂದ ರೂಪವಾದ ಮುಕ್ತಿಸುಖವನ್ನು ಹೊಂದುವರು. ॥55॥

—*—

## ಪದ್ಯ ೫೬

**ಮೂಲ :-**

**ಪರಮಸೂಕ್ಷ್ಮ ಕ್ಷಣವೈದು ತ್ರುಟಿ ।**
**ಕರೆಸುವುದು ಐವತ್ತು ತ್ರುಟಿ ಲವ ।**
**ಎರಡು ಲವವು ನಿಮೇಷ ನಿಮೇಷಗಳೆಂಟು ಮಾತ್ರ ಯುಗ ॥**
**ಗುರು ದಶ ಪ್ರಾಣವು ಪಳವು ಹ ।**
**ನ್ನೆರಡು ಬಾಣವು ಘಳಿಗೆ ತ್ರಿಂಶತಿ ।**
**ಇರುಳು ಹಗಲರವತ್ತು ಘಟಿಕಗಳಹೋರಾತ್ರಿಗಳು ॥ ॥೫೬॥**

**ಅವತರಣಿಕೆ :**

ಪ್ರವಾಹತೋ ನಿತ್ಯವಾದ ಕಾಲದ ಪ್ರಬೇಧಗಳನ್ನು ತಿಳಿಸುತ್ತಾರೆ.
॥56॥

**ಪ್ರತಿಪದಾರ್ಥ :**

**ಪರಮ ಸೂಕ್ಷ್ಮ ಕ್ಷಣವು** = ಅತ್ಯಂತ ಸೂಕ್ಷ್ಮ ಭಾಗವಾದ ಕ್ಷಣವು. **ಐದು ತ್ರುಟಿಕರೆಸುವುದು** = ಐದು ಕ್ಷಣಗಳ ಕಾಲಕ್ಕೆ ಒಂದು ತ್ರುಟಿ ಎಂದು ಕರೆಯುಸುವುದು, **ಐವತ್ತು ತ್ರುಟಿ** = ಅಂತಹ 50 ತ್ರುಟಿಗಳಿಗೆ, **ಲವ** = ಒಂದು ಲವ ಕಾಲವೆನಿಸುವುದು. **ಎರಡು ಲವಗಳು** = ಎರಡು ಲವಗಳ ಕಾಲವು. **ನಿಮೇಷ** = ಒಂದು ನಿಮೇಷವು, **ನಿಮೇಷಗಳೆಂಟು** = ಅಂತಹ 8 ನಿಮೇಷಗಳ ಕಾಲಕ್ಕೆ, **ಮಾತ್ರ** = ಒಂದು ಮಾತ್ರವೆಂದು ಹೆಸರು, **ಯುಗ ಗುರು** = ಎರಡು ಮಾತ್ರಗಳಿಗೆ ಒಂದು **ಗುರುವೆಂದು** ಹೆಸರು, **ದಶ** = ಹತ್ತು ಗುರುಗಳ ಕಾಲವು. **ಪ್ರಾಣವು** = ಒಂದು ಪ್ರಾಣ ಸಾಂಕೇತ ಕಾಲವು, **ಪಳವು** = ಆರು ಪ್ರಾಣಗಳಿಗೆ ಒಂದು ಪಳವು, **ಹನ್ನೆರಡು ಬಾಣವು** =

12 × 5 ಅಂತಹ 60 ಪಳಗಳಿಗೆ ಒಂದು **ಘಳಿಗೆ** (**ಘಟಿಕಾ**) ಎಂದು ಹೆಸರು. **ತ್ರಿಂಶತಿ** = ಮೂವತ್ತು ಘಳಿಗೆಗೆ, **ಇರುಳು** = ಒಂದು ರಾತ್ರಿ ಕಾಲವೆನಿಸು ವುದು. **ಹಗಲು** 30 ಘಳಿಗೆ ಆದನಂತರ ಮತ್ತು 30 ಘಳಿಗೆ ಕಳೆದರೆ ಒಂದು ಹಗಲು ಎಂದಾಗುವುದು, **ಅರವತ್ತು ಘಟಿಕಗಳು** = 60 ಘಟಿಕ ಗಳಿಗೆ (ಒಂದು ಹಗಲು + ಒಂದು ರಾತ್ರಿ ಎರಡೂ ಸೇರಿ). **ಅಹೋರಾತ್ರಿ ಗಳು** = ಹಗಲು ರಾತ್ರಿ ಎನಿಸಿ ಒಂದು ದಿನ ಎಂಬ ಕಾಲ ಸಂಕೇತವು. ॥56॥

# ವ್ಯಾಖ್ಯಾನಗಳು

## 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಕಾಲಪರಿಮಿತಿ ವಿಚಾರ ಹೇಳತಾರೆ.

ಅತ್ಯಂತ ಸೂಕ್ಷ್ಮಗಳಾದ ಕ್ಷಣವು ಐದು ಗತವಾದ ಕಾಲವೆಂದು ತ್ರುಟ ಕಾಲವೆಂತ ಕರಸತದೆ. ಇಂಥಾ ತ್ರುಟಗಳು ಐವತ್ತು ಸೇರಿದ ಕಾಲ ಒಂದು ಲವಕಾಲವೆಂದು ಕರಸತದೆ. ಎರಡು ಲವಕಾಲಗಳು ಸೇರಿ ಒಂದು ನಿಮೇಷ ವೆಂತ ಕರಸೋದಾಗತದೆ. ನಿಮೇಷನಳೆಂಟು ಕೂಡಿದರೆ ಒಂದು ಮಾತ್ರಕಾಲ ವೆಂದು ಕರಸತದೆ. ಯುಗವೆಂದರೆ ಎರಡು ಮಾತ್ರಗಳು. ಎರಡೂ ಕೂಡಿದರೆ ಒಂದು ಗುರುಕಾಲವೆಂದು ಕರಸತದೆ. ಹತ್ತು ಗುರುಕಾಲ ಸೇರಿದರೆ ಪ್ರಾಣ ಸಾಂಕೇತಕಾಲವೆಂದು ಅನಿಸತದೆ. ಪ್ರಾಣಸಾಂಕೇತವಾದ ಕಾಲ ಹತ್ತಾದರೆ ಒಂದು ಪಳವು. (ದಶ ಶಬ್ದ ಆವರ್ತನವು) ಪಳಗಳು ಹನ್ನೆರಡು ಆದರೆ ಒಂದು ಬಾಣಕಾಲವೆಂದು ಕರಸತದೆ. ಹನ್ನೆರಡು ಬಾಣಕಾಲ ಸೇರಿದರೆ ಒಂದು ಘಳಿಗಿ ಎನಿಸತದೆ. ಘಳಿಗಿ ಮೂವತ್ತಾದರೆ ಒಂದು ರಾತ್ರಿ ಕಾಲವೆಂದು ಕರಸ ತದೆ. ಮೂವತ್ತು ಘಳಿಗಿ ಆದನಂತರ ಮತ್ತು ಮೂವತ್ತು ಘಳಿಗಿ ಕಳೆದರೆ ಒಂದು ಹಗಲು ಎಂತ ಕರಸತದೆ. ಪೂರ್ವೋಕ್ತ ಹಗಲು ಘಳಿಗಿ ಮೂವತ್ತು, ರಾತ್ರಿ ಘಳಿಗಿ ಮೂವತ್ತು ಅಂತು ಅರವತ್ತು ಘಟಿಕಗಳು ಸೇರಿದರೆ, ಹಗಲು ಎಂತ ಕರಸಿ ಒಂದು ದಿನ ಎಂತ ಕರಸತದೆ. ॥56॥

## 2. ಭಾವಪ್ರಕಾಶಿಕೆ :-

ಪರಮಸೂಕ್ಷ್ಮಕಾಲವು ಕ್ಷಣವೆನಿಸುವುದು. ಐದು ಕ್ಷಣಕಾಲವಾದರೆ ಒಂದು ತೃಟಿಕಾಲ. 50 ತೃಟಿ ಕಾಲವಾದರೆ ಒಂದು ಲವವೆಂದು ಕರೆಸುವುದು. 2 ಲವ ಕಾಲವಾದರೆ ಒಂದು ನಿಮೇಷ. 8 ನಿಮೇಷ ಕಾಲವಾದರೆ ಒಂದು ಮಾತ್ರ ಕಾಲ. 2 ಮಾತ್ರಗಳ ಕಾಲವಾದರೆ ಒಂದು ಗುರು ಕಾಲವಾಗುವುದು. ಗುರುಕಾಲವು 10 ಆದರೆ ಒಂದು ಪ್ರಾಣಕಾಲವಾಗುವುದು. 6 ಪ್ರಾಣಕಾಲವಾದರೆ ಒಂದು ಪಳವೆನಿಸುವುದು. ಬಾಣ ಸಂಖ್ಯೆ ಎಂದರೆ (5) ಐದೆಂದರ್ಥ $12 \times 5 = 60$. ಹೀಗೆ 12 ಬಾಣ 60 ಪಳಗಳಾದರೆ ಒಂದು ಘಳಿಗೆ ಕಾಲವು. ಘಳಿಗೆಗಳು 30 ಆದರೆ ಒಂದು ಹಗಲು ಮತ್ತು 30 ಆದರೆ ಒಂದು ರಾತ್ರಿ. ಹೀಗೆ 60 ಘಳಿಗೆಗಳಾದರೆ ಹಗಲೂ ರಾತ್ರಿಗಳಾಗುವುವು. ||56||

## 3. ಭಾವದರ್ಪಣ :-

ಪರಮಾತದುಕ್ತಂ।"ಅತಿ ಸೂಕ್ಷ್ಮಸ್ತು ಯಃ ಕಾಲಂ ಸ ಕ್ಷಣಃ ಪರಿಕೀರ್ತಿತಃ।ಕ್ಷಣಾಃ ಪಂಚ ತೃಟಿಃ ಪ್ರೋಕ್ತಾ ಪಂಚಾಶತ್ತಾ ಲವಃ ಸ್ಮೃತಃ। ಲವದ್ವಯಂ ನಿಮೇಷಸ್ಸ್ಯಾನ್ಮಾತ್ರಾಸ್ಯಾದಷ್ಟಭಿಸ್ಟ ತೇಃ। ಯಥಾಯಂ ವದತೇ ಚಾಷೋಮಾತ್ರಯೋರ್ದ್ವಿತಯಂ ಗುರುಃ। ಗುರೂಣಾಂ ದಶಕಂ ಪ್ರಾಣಃ ಪ್ರಾಣಷಟ್ಕ ಪಲಂ ಭವೇತ್। ಪಲಷಷ್ಟಿರ್ಘಟಿ ಪ್ರೋಕ್ತಾ ತಾಃ ಷಷ್ಟಿರ್ದಿನ ಮುಚ್ಯತೇ। ತತಸ್ತ್ರಿಂಶದ್ಘಟೀ ಪೂರ್ವಾ ದಿವಾ ರಾತ್ರಿಸ್ತಥಾಪರೇತಿ" ||56||

ವಿಷ್ಣುರಹಸ್ಯೆ.

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :-

ಸರ್ವತ್ರ ಕಾಲಾಂತರ್ಯಾಮಿತ್ವೇನ, ತತ್ತಚ್ಛಬ್ದ ವಾಚ್ಯತ್ವೇನ ತತ್ತತ್ಕಾಲಿಕ ದ್ರವ್ಯಪ್ರವರ್ತಕತ್ವೇನ, ಸ್ಥಿತಂ ಸಚ್ಚಿದಾನಂದ ಲಕ್ಷಣಂ ಅನಂತ ಸಂಜ್ಞಂ ಬ್ರಹ್ಮ ಕಾಲಮನುಭವತಿ ಇತಿ. ಸರ್ವಸಾಧನೋಪಯೋಗಿ (ಕ) ಶುಭಾಯುರ್ವೃದ್ಧಯೇ ಕಾಲೋಪಾಸ್ತಿಂ ವಕ್ತುಂ ಕಾಲಸ್ವರೂಪಂ ಆಹ-"ಪರಮ" ಇತಿ ||

ವಿಷ್ಣುರಹಸ್ಯೇ ಚ– "ಅತಿಸೂಕ್ಷ್ಮಸ್ತ್ರುಯಃ ಕಾಲಃ ಸ ಕ್ಷಣಃ ಪರಿಕೀರ್ತಿತಃ॥ ಕ್ಷಣಾಃ ಪಂಚ ತ್ರುಟಿಃ ಪ್ರೋಕ್ತಾ ಪಂಚಾಶತ್ತಾಃ ಲವಃ ಸ್ಮೃತಃ॥ ಲವದ್ವಯಂ ನಿಮೇಷಃ ಸ್ಯಾತ್ ಮಾತ್ರಾ ಸ್ಯಾತ್ ಅಷ್ಟಭಿಃ ಚ ತೈಃ॥ ಯಥಾಯಂ ವದತೇ ಚಾಷೋ ಮಾತ್ರಯೋರ್ದ್ವಿತಯಂ ಗುರುಃ॥ ಗುರೂಣಾಂ ದಶಕಂ ಪ್ರಾಣಃ ಪ್ರಾಣಷಟ್ಕಂ ಪಲಂ ಭವೇತ್॥ ಪಲಷಷ್ಟಿಃ ಘಟೀ ಪ್ರೋಕ್ತಾ ತಾ ಷಷ್ಟಿಃ ದಿನ ಮುಚ್ಯತೇ॥ ತತಃ ತ್ರಿಂಶದ್ ಘಟೀ ಪೂರ್ವಾ ದಿವಾ ರಾತ್ರಿಃ ತಥಾಪರಾ ॥56॥ ದಿನ ಪಂಚದಶಂ ಪಕ್ಷಃ ತೌ ದ್ವೌ ಮಾಸಸ್ತು ತತ್ ದ್ವಯಮ್ ಋತುಃ॥ ತತ್ ತ್ರಿತಯಂ ಪ್ರೋಕ್ತಂ ಅಯನಮ್॥ ತತ್ ದ್ವಯಂ ಪುನಃ ವರ್ಷಮಿತ್ಯುಚ್ಯತೇ॥ ತಚ್ಚ ದೇವಾನಾಂ ದಿನಮೇವತು॥ ಅಯನಂ ತೂತ್ತರಂ ತತ್ರ ದಿವಾ ರಾತ್ರಿಶ್ಚ (ದಿ) ದಕ್ಷಿಣಾ॥ ಏವಂ ದಿನಾನಾಂ ಷಷ್ಟಿಶ್ಚ ಶತತ್ರಯಸಮನ್ವಿತಮ್॥ ದಿವ್ಯ ವರ್ಷಮಿದಂ ಪ್ರೋಕ್ತಂ ಯುಗ ಸಂಖ್ಯಾಂ ತತಃಶೃಣು॥ ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಮ್॥ ದಿವ್ಯೈಃದ್ವಾದಶ ಸಾಹಸ್ರೈಃ ಸಾವ ಧಾನಂ ನಿರೂಪಿತಮ್ ॥57॥ ಚತ್ವಾರಿ ತ್ರೀಣಿ ದ್ವೇಚೈಕಂ ಕೃತಾದಿಷು ಯಥಾ ಕ್ರಮಮ್॥ ಸಂಖ್ಯಾತಾನಿ ಸಹಸ್ರಾಣಿ ದ್ವಿಗುಣಾ ನಿಶತಾನಿ ಚ॥ ಚತ್ವಾರ್ಯೇವ ಸಹಸ್ರಾಣಿ ಕೃತಂ ಯುಗಮಿತೀರಿತಮ್॥ ಅಷ್ಟೌ ಶತಾನಿ ವರ್ಷಾಣಾಂ ಆದಾ ವಂತೇ ಚ ಸಂಧ್ಯಕಮ್॥ ಏತತ್ಪಾದವಿಹೀನಂ ತು ತ್ರೇತಾಯುಗಮಿತೀರ್ಯತೇ॥ ತತೋಽಪಿ ಪಾದ ಹೀನಂ ತು ದ್ವಾಪರಂ ತಸ್ಯಯತ್ ಪುನಃ॥ ಅರ್ಧಂ ತತ್ ಕಲಿಮಾನಂ ಸ್ಯಾತ್ ಏವಂ ಯುಗ ಚತುಷ್ಟಯಂ॥ ದಿವ್ಯದ್ವಾದಶ ಸಾಹಸ್ರಂ ವರ್ಷಮಾನಂ ಮಹಾಯುಗಮ್॥ ಮಹಾಯುಗಾನಾಂ ಸಪ್ತತ್ಯಾ ಸೈಕ ಏವಾಂ ತರಂ ಮನೋಃ॥ ಚತುರ್ದಶೈವಂ ಮನವಃ ಪ್ರತ್ಯೇಕಂ ತು ತದಂತತಃ॥ ಸಂಧ್ಯಾ ಕೃತೋಮಿತ್ಯಕಾ ಸ್ಯಾತ್ ಕಲ್ಪಾದೌ ಚ ತಥೈಕತಾ॥ ॥56॥

### ಕನ್ನಡಾರ್ಥ

ಸರ್ವತ್ರ ಕಾಲಾಂತರ್ಯಾಮಿಯಾಗಿದ್ದಾನೆ. ತತ್ತಚ್ಛಬ್ದವಾಚ್ಯನಾಗಿ ಆಯಾ ಕಾಲದಲ್ಲಿರುವ ದ್ರವ್ಯಗಳನ್ನು ಪ್ರವರ್ತಿಸುತ್ತ ಆಯಾ ಕಾಲ ದೇಶಗಳಲ್ಲಿ ಇರುತ್ತಾನೆ. ಆದುದರಿಂದ "ಅನಂತ" ನಾಮಕನಾದ ಸಚ್ಚಿದಾನಂದ ಸ್ವರೂಪಿ

ಪರಮಾತ್ಮನು ಬ್ರಹ್ಮಕಾಲವನ್ನು ಮುಗಿಯಿಸುತ್ತಾನೆ. ಆದುದರಿಂದ ಸಕಲ ಸಾಧನೋಪಯೋಗಿಯಾದ ಶುಭಾಯುಷ್ಯದ ವೃದ್ಧಿಯ ಸಲುವಾಗಿ ಕಾಲೋ ಪಾಸನೆಯು ಆವಶ್ಯಕವಾಗಿದ್ದು ಅದರ ಸಲುವಾಗಿ ಕಾಲಸ್ವರೂಪವನ್ನು "ಪರಮ" ಈ ಪದ್ಯದಿಂದ ನಿರೂಪಿಸುತ್ತಾರೆ.

ಕಾಲಸ್ವರೂಪದ ಬಗ್ಗೆ ವಿಷ್ಣುರಹಸ್ಯದಲ್ಲಿ ಹೀಗೆ ನಿರೂಪಿತವಾರುತ್ತದೆ.

ಅತಿಸೂಕ್ಷ್ಮವಾದ ಕಾಲವು ಕ್ಷಣವೆನಿಸುತ್ತದೆ. ಐದು ಕ್ಷಣಗಳಿಗೆ ತ್ರುಟಿ ಎನ್ನುತ್ತಾರೆ. ಐವತ್ತು ತ್ರುಟಿಗಳು ಸೇರಿದರೆ "ಲವ"ವಾಗುತ್ತದೆ. ಎರಡು ಲವಗಳು ನಿಮೇಷವೆನಿಸುವವು. ಎಂಟು ನಿಮೇಷಗಳಿಗೆ "ಮಾತ್ರಾ" ಎನ್ನು ವರು. ಎರಡು ಮಾತ್ರಾಗಳು ಒಂದು ಗುರುವೆನಿಸುತ್ತದೆ. ಹತ್ತು ಗುರು ಗಳಿಗೆ ಒಂದು ಪ್ರಾಣ. ಆರು ಪ್ರಾಣಗಳಿಗೆ ಒಂದು ಪಲ. ಅರವತ್ತು ಪಲ ಗಳಿಗೆ ಒಂದು ಘಳಿಗೆ. ಅರವತ್ತು ಘಳಿಗೆಗಳಿಗೆ ಒಂದು ದಿನ. ಅದರಲ್ಲಿ ಮಿಂಚಿನ ಮೂವತ್ತು ಘಳಿಗೆಗಳಿಗೆ ದಿನ (ಹಗಲು) ಎಂದೂ, ಅನಂತರದ ಮೂವತ್ತು ಘಳಿಗೆಗಳಿಗೆ ರಾತ್ರಿ ಎಂದೂ ಕರೆಯುತ್ತಾರೆ. 15 ದಿನಗಳಿಗೆ ಒಂದು ಪಕ್ಷ, ಎರಡು ಪಕ್ಷಗಳಿಗೆ ಒಂದು ಮಾಸ. 2 ಮಾಸಗಳಿಗೆ ಒಂದು ಋತು. ಮೂರು ಋತುಗಳಿಗೆ ಒಂದು ಅಯನ. 2 ಅಯನಗಳಿಗೆ ಒಂದು ವರ್ಷ. ಮಾನವರ ಒಂದು ವರ್ಷವೆಂದರೆ ದೇವತೆಗಳ ಒಂದು ದಿನವೆನಿಸು ತ್ತದೆ. ಇಂಥ 360 ದಿವಸಗಳು ಅವರ ಒಂದು ವರ್ಷವೆನಿಸುತ್ತದೆ. ಹೀಗೆ ವರ್ಷಮಾನ.

ಇನ್ನು ಯುಗಮಾನ. ಕೃತ, ತ್ರೇತಾ, ದ್ವಾಪರ, ಕಲಿ ಹೀಗೆ ನಾಲ್ಕು ಯುಗಗಳು. ಈ ಯುಗಗಳು ಸೇರಿ ದೇವಮಾನದ 12,000 ವರ್ಷಗಳು. ಕ್ರಮವಾಗಿ 4, 3, 2, 1 ಸಾವಿರ ವರ್ಷಗಳು ಆ ಕೃತಾದಿ ಯುಗಗಳಲ್ಲಿ ಇರು ವುವು. ಹೇಗೆಂದರೆ ನಾಲ್ಕು ಸಾವಿರ ವರ್ಷಗಳು ಕೃತಯುಗದ ಮಾನ. ಆದ್ಯಂತ ಸಂಧಿವರ್ಷಗಳು 8 ನೂರು. ಇದರ ಕಾಲು ಭಾಗ ಕಡಿಮೆಯಾದ ವರ್ಷಗಳು ಅಂದರೆ 3600 ವರ್ಷ ತ್ರೇತಾಮಾನ. ತ್ರೇತಾಯುಗಕ್ಕಿಂತ ಒಂದು ಕಾಲುಭಾಗ ಕಡಿಮೆಯದು ಅಂದರೆ 2400 ವರ್ಷಗಳು ದ್ವಾಪರ

ಯುಗ ಮಾನ. ಅದಕ್ಕೆ ಕಾಲುಭಾಗ ಕಡಿಮೆ ಕಲಿಯುಗ. ಅಂದರೆ 1200 ವರ್ಷ ಕಲಿಯುಗ ಮಾನ. ಹೀಗೆ ದೇವಮಾನದ 12,000 ವರ್ಷಗಳಿಗೆ ಒಂದು ಮಹಾಯುಗ. 21 ಮಹಾಯುಗಗಳಿಗೆ ಒಂದು ಮನ್ವಂತರವಾಗುತ್ತದೆ. 14 ಮನುಗಳಾದುದರಿಂದ 14 ಮನ್ವಂತರಗಳಾಗುತ್ತದೆ.

॥55॥56॥57॥

## 5. ಶ್ರೀಗುರುಹೃದಯಪ್ರಕಾಶಿಕೆ :

ದೇವರಿಗೆ ಕಾಲನಿಮಿತ್ತಕ ಆದ್ಯಂತಗಳು ಸರ್ವಥಾ ಇಲ್ಲವಾದ್ದರಿಂದ, ಅನಂತನೆಂದು ತಿಳಿಸುವುದಕ್ಕೋಸ್ಕರ, ಕ್ಷಣಕಾಲ ಹಿಡಿದು ಕಾಲಗಣನೆಯನ್ನು ತಿಳಿಸುತ್ತಾರೆ ಏಳು ಪದ್ಯಗಳಿಂದ. ಮೊದಲನೇ ಪರಮ ಎಂದು, ಪರಮ ಸೂಕ್ಷ್ಮಕಾಲವಾದ ಕ್ಷಣವೆಂಬ ಕಾಲ ಐದು ಸೇರಿದರೆ ಒಂದು ತೃಟಿಕಾಲವೆಂದು ಕರೆಸುವುದು. ಆ ತೃಟಿ ಐವತ್ತು ಒಂದು ಲವಕಾಲವೆಂದು ಕರೆಸುವುದು. ಆ ಲವ ಎರಡಾದರೆ ಒಂದು ನಿಮಿಷ ಅಂದರೆ. ರೆಪ್ಪೆ ಹಾಕುವ ಹೊತ್ತು. ಆ ನಿಮಿಷ ಎಂಟಾದರೆ ಒಂದು ಮಾತ್ರವೆಂಬ ಕಾಲ. ಆ ಮಾತ್ರ ಎರಡಾದರೆ ಒಂದು ಗುರುಕಾಲ ಹತ್ತಾದರೆ ಒಂದು ಪ್ರಾಣಕಾಲ. ಆ ಪ್ರಾಣಕಾಲ ಆರಾದರೆ ಒಂದು ಪಳ. ಹನ್ನೆರಡು ಬಾಣ ಅಂದರೆ ಅರವತ್ತು ಪಳಕ್ಕೆ ಒಂದು ಘಳಿಗೆ (ಬಾಣ ಎಂಬುದು ಐದು ಎಂಬ ಸಂಖ್ಯಾಸೂಚಕ) ಆ ಘಳಿಗೆ ಅರವತ್ತು (ಹಗಲು ಮೂವತ್ತು, ರಾತ್ರಿ ಮೂವತ್ತು) ಆದರೆ ಒಂದು ದಿವಸ. ॥56॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಪರಮಾತ್ಮನು ಕಾಲಸ್ವರೂಪಿಯು. ಕಾಲಾಂತರ್ಗತನು. ಕಾಲ ಶಬ್ದವಾಚ್ಯನು. ಅನಂತನು. ಪ್ರವಾಹತೋನಿತ್ಯವಾದ ಕಾಲವು ಶ್ರೀಶಾಧೀನವು. ಆತನೇ ಕಾಲಚಕ್ರವನ್ನು ನಡೆಯಿಸುವ ಕಂಜದಳಾಯತಾಕ್ಷನು. ಇದಕ್ಕಾಗಿ ಕಾಲ–ಅವುಗಳ ಅತ್ಯಂತ ಸಣ್ಣ ಪ್ರಭೇದಗಳು ಮತ್ತು ಮಹತ್ತರವಾದ

ಮಹಾಕಾಲ ಇತ್ಯಾದಿ ವಿವರಗಳನ್ನು ತಿಳಿಸುವ ಉದ್ದೇಶದಿಂದ ದಾಸರಾಯರ ಪ್ರಸಕ್ತಪದ್ಯವನ್ನು "ಪರಮಸೂಕ್ಷ್ಮ"- ಎಂದು ಪ್ರಾರಂಭಿಸುತ್ತಾರೆ.

2. ಪರಮ ಸೂಕ್ಷ್ಮವಾದ ಕಾಲಾಂಶಕ್ಕೆ **ಕ್ಷಣ** ಎಂದು ಹೆಸರು.

3. ಐದು ಕ್ಷಣಗಳು = **ಒಂದು ತ್ರುಟಿ**

4. ಐವತ್ತು ತ್ರುಟಿಗಳು = **ಒಂದು ಲವ**

5. ಎರಡು ಲವಗಳು = **ಒಂದು ನಿಮೇಷ**

6. ಎಂಟು ನಿಮೇಷಗಳು = **ಒಂದು ಮಾತ್ರ**

7. ಎರಡು ಮಾತ್ರಗಳು = **ಒಂದು ಗುರು**

8. ಹತ್ತು ಗುರುಕಾಲಗಳು = **ಒಂದು ಪ್ರಾಣ**

9. ಆರು ಪ್ರಾಣಗಳು = **ಒಂದು ಪಲ**

10. ಅರವತ್ತು ಪಲಗಳು = **ಒಂದು ಘಳಿಗೆ (ಘಟಿಕ)**

ಇಲ್ಲಿ "ಹನ್ನೆರಡು ಬಾಣವು"– ಎಂದು ಸಂಖ್ಯಾ ಸೂಚಕವಿದೆ. "ಬಾಣ"– ಎಂದರೆ ಐದು ಎಂದರ್ಥ (ಮನ್ಮಥನ ಪಂಚ ಕುಸುಮ ಬಾಣಗಳೆಂಬ ಸಾಂಕೇತ)

ಹನ್ನೆರಡು ಬಾಣಗಳು = $12 \times 5 = 60$. ಅಂದರೆ 60 ಪಲಗಳಿಗೆ ಒಂದು "ಘಳಿಗೆ"

11. **ತ್ರಿಶಂತಿ ಇರುಳು—30 ಘಳಿಗೆಗಳು = ಒಂದು ರಾತ್ರಿ**

12. **ಹಗಲು—ಪುನಃ 30 ಘಳಿಗೆಗಳು = ಒಂದು ಹಗಲು**

ಅಂದರೆ $30 + 30 = 60$ ಘಟಿಕಗಳಿಗೆ **ಅಹೋರಾತ್ರಿಗಳು = ಒಂದು ದಿನ.**

**ಪ್ರಮಾಣ :–**

"ಅತಿಸೂಕ್ಷ್ಮಸ್ತ್ರುಯಃ ಕಾಲಃ ಸ ಕ್ಷಣಃ ಪರಿಕೀರ್ತಿತಃ|ಕ್ಷಣಾಃ ಪಂಚತೃಟಿಃ ಪ್ರೋಕ್ತಾ। ಪಂಚಾಶತ್ತಾಲವಃ ಸ್ಮೃತಃ। ಲವದ್ವಯಂ ನಿಮೇಷ ಸ್ಯಾನ್ಮಾತ್ರಾ ಸ್ಯಾದಷ್ಟಭಿಶ್ಚ ತೇಃ ಯಥಾಯಂ ವದತೇಚಾಷೋ ಮಾತ್ರಾಯೀರ್ದ್ವಿತಯಂ ಗುರುಃ॥ ಗುರೂಣಾಂ ದಶಕಂ ಪ್ರಾಣಃ ಪ್ರಾಣಷಟ್ಕಂಪಲಂ ಭವೇತ್। ಪಲಷಷ್ಟಿ ರ್ಘಟಿಂ ಪ್ರೋಕ್ತಾ ತಾಃ ಷಷ್ಟಿರ್ದಿ ಮುಚ್ಯತೇ। ತತಸ್ತ್ರಿಂಶದ್ಘಟೀ ಪೂರ್ವಾದ ದಿವಾ ರಾತ್ರಿಸ್ತಥಾಪರಾತೀ॥ ಇತಿ ವಿಷ್ಣು ರಹಸ್ಯೇ॥ ॥56॥

## ಪದ್ಯ ೫೭

**ಮೂಲ :**

ಈ ದಿವಾರಾತ್ರಿಗಳೆರಡು ಹದಿ।
ನೈದು ಪಕ್ಷಗಳೆರಡು ಮಾಸಗ।
ಗಳಾದಪವು ಮಾಸದ್ವಯವೆ ಋತು ಋತುತ್ರಯಗಳಯನ॥
ಐದುವುವು ಅಯನದ್ವಯಾಬ್ದ ಕೃ।
ತಾದಿಯಯುಗಗಳು ದೇವಮಾನದಿ।
ದ್ವಾದಶಸಹಸ್ರವರುಷಗಳಹವದನು ಪೇಳುವೆನು ॥ ೫೭ ॥

**ಅವತರಣಿಕೆ :**

ಕಾಲಪ್ರಬೇಧಗಳ ವಿಷಯವನ್ನೇ ಪ್ರಸಕ್ತಪದ್ಯದಲ್ಲಿ ಮುಂದುವರಿಸು ತ್ತಾರೆ. ॥56॥

**ಪ್ರತಿಪದಾರ್ಥ :**

**ಈ ದಿವಾರಾತ್ರಿಗಳೆರಡು** = ಈ ರೀತಿ ಒಂದು ಹಗಲು (ದಿವಾ) ಮತ್ತು ಒಂದು ರಾತ್ರಿ ಎರಡೂ ಸೇರಿ ಒಂದು ದಿನವೆಂದು ಕರೆಯಿಸುತ್ತದೆ.

**ಹದಿನೈದು** = ಅಂತಹ ಹದಿನೈದು ದಿನಗಳು ಸೇರಿದರೆ, **ಪಕ್ಷ** = ಒಂದು ಪಕ್ಷ ಕಾಲವೆನಿಸುವುದು. **ಪಕ್ಷಗಳೆರಡು ಮಾಸ** = ಎರಡು ಪಕ್ಷಗಳಿಗೆ ಒಂದು ತಿಂಗಳು (ಮಾಸ). **ಮಾಸದ್ವಯವೆ** = ಎರಡು ಮಾಸಗಳು ಕೂಡಿದರೆ. **ಋತು** = ಒಂದು ಋತು ಸಾಂಕೇತವಾದ ಕಾಲವೆನಿಸುವುದು. **ಋತು ತ್ರಯಗಳು ಅಯನ** = ಅಂತಹ ಮೂರು ಋತುಗಳಿಗೆ ಒಂದು ಅಯನವು. **ಅಯನದ್ವಯ** = ಎರಡು ಅಯನಗಳು. **ಅಬ್ದ ಐದುವುವು** = ಸೇರಿದಾಗ ಒಂದು ವರ್ಷಕಾಲವೆಂದೆನಿಸುವುದು (ಅಬ್ದ-ವರುಷ) ಇಂತಹ 360 ದಿನಗಳ ಕಾಲಾವಧಿಗೆ ಒಂದು ಮಾನುಷ ವರ್ಷವೆಂದು ಹೆಸರು. **ದೇವಮಾನದಿ** = 360 ಮಾನುಷದಿನಗಳು ದೇವತೆಗಳಿಗೆ ಒಂದು ದಿನವು. ಒಂದು ದೇವ ಮಾನ = 360 ಮಾನುಷದಿನಗಳು. **ಕೃತಾದಿ ಯುಗಗಳು** = ಕೃತ, ತ್ರೇತ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳು. **ದ್ವಾದಶಸಹಸ್ರವರ್ಷಗಳು** = ದೇವಮಾನದಿಂದ ಹನ್ನೆರಡುಸಾವಿರ ವರ್ಷಗಳಾಗುವುವು. **ಅದನು ಹೇಳುವೆನು** = ಅವುಗಳ ಕಾಲವಿವರಗಳನ್ನು ಮುಂದಿನ ಪದ್ಯದಲ್ಲಿ ನಿರೂಪಿಸುತ್ತೇನೆ ಎನ್ನುತ್ತಾರೆ ದಾಸವರ್ಯರು. ||57||

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಕಾಲದ ವಿವರ ಹೇಳುತ್ತಾರೆ.

ಈ ಹಗಲು ರಾತ್ರಿಗಳೆರಡೂ ಸೇರಿ ಒಂದು ದಿನವೆಂದು ಕರಸತದೆ. ಹದಿನೈದುದಿನಗಳು ಸೇರಿ ಒಂದು ಪಕ್ಷಕಾಲವೆಂದು ಕರಸತದೆ. ಎರಡು ಪಕ್ಷಗಳು ಸೇರಿದರೆ ಒಂದು ತಿಂಗಳೆಂದು ಕರಸತದೆ. ಕಾಲಸಾಂಕೇತಗಳು ಮಾಸಪಕ್ಷಿಯಂತ ಈ ಪ್ರಕಾರ ಆಗೋದಾಯಿತು. ಎರಡುತಿಂಗಳು ಕೂಡಿದ ಕಾಲವೇ ಒಂದು ಋತು ಸಾಂಕೇತವಾದ ಕಾಲವಾಗತದೆ. ಮೂರು ಋತುಗಳು ಕೂಡಿದರೆ ಒಂದು ಅಯನಕಾಲವೆಂದು ಕರಸತದೆ. ಎರಡು ಅಯನಗಳು

ಸೇರಿದರೆ, ಒಂದಾಗಿ ಸೇರಿದ ಕಾಲಕ್ಕೆ ಅದು ಒಂದು ವರುಷಕಾಲವೆಂದು ಕರೆಸ ತದೆ. ಈ ಪ್ರಕಾರ ಆದ ಒಂದುವರುಷ ಮಾನುಷಮಾನದಿಂದ ಆದ ವರುಷವು. ನಾಲ್ಕುಯುಗಗಳು ದೇವಮಾನದಿಂದ ಹನ್ನೆರಡುಸಾವಿರ ವರುಷ ಗಳು ಆಗೋವಾಗತವೆ. ಆದರನ್ನ ಹೇಳತೇನೆ ಎಂತ ಹೇಳತಾರೆ. ||57||

## 2. ಭಾವಪ್ರಕಾಶಿಕೆ :–

ಮೇಲೆ ಹೇಳಿದಂತೆ ಹಗಲೂ ರಾತ್ರಿಗಳೆರಡೂ 15 ಆದರೆ ಒಂದು ಪಕ್ಷಹೆನಿಸುವುದು. 2 ಪಕ್ಷಗಳಾದರೆ ಒಂದುಮಾಸವು (ತಿಂಗಳು) ಆಗುವುದು, 2 ತಿಂಗಳುಗಳಾದರೆ ಒಂದುಋತುವೆನಿಸುವುದು. 3 ಋತುಗಳಾದರೆ ಒಂದು ಆಯನವೆನಿಸುವುದು. 2 ಆಯನಗಳು ಒಂದು ವರ್ಷವೆನಿಸುವುದು. ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕುಯುಗಗಳಾಗಬೇಕಾದರೆ ದೇವಮಾನ ವರ್ಷಗಳಿಂದ 12 ಸಹಸ್ರ ಹರ್ಷಗಳಾಗವುವು. ದೇವಮಾನ ವರ್ಷಗಳ ಲಕ್ಷಣವನ್ನೂ ಒಂದೊಂದು ಯುಗದ ಕಾಲವನ್ನೂ ವಿವರವಾಗಿ ಹೇಳು ವೆನು, ||57||

## 3. ಭಾವದರ್ಪಣ :–

ಈ ದಿವಾರಾತ್ರೀತಿ। ತದುಕ್ತಂ ಬ್ರಹ್ಮವೈವರ್ತೇ। "ಕೈಃ ಪಂಚದಶಭಿಃ ಪಕ್ಷಃ ಪಕ್ಷೌ ದ್ವೌ ಮಾಸ ಉಚ್ಯತೇ। ಮಾಸೌ ದ್ವೌ ತು ಋತುಶ್ಚೈವ ತ್ರಿಭಿಸ್ತು ಅಯನಂ ತಥಾ। ಅಯನದ್ವೇ ಚ ಸಂಜ್ಞಾತಃ ವತ್ಸರಃ ಪರಿಕೀರ್ತಿತ" ಇತಿ. ||57||

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :

|| ಇತಿ ||57||

ಹಿಂದಿನ 56ನೇ ಪದ್ಯದಲ್ಲೇ ಪ್ರಮಾಣ ಕೊಟ್ಟಿದ್ದಾರೆ.

## 5. ಶ್ರೀಗುರುಹೃದಯಪ್ರಕಾಶಿಕೆ :—

ಈ ದಿವಾರಾತ್ರಿಗಳೆರಡು ಹದಿನೈದಾದರೆ ಒಂದು ಪಕ್ಷವು. ಪಕ್ಷ ಎರಡಕ್ಕೆ ಒಂದು ತಿಂಗಳು. ತಿಂಗಳು ಎರಡಕ್ಕೆ ಒಂದು ಋತುಕಾಲವು. ಮೂರು ಋತುಕಾಲವು ಒಂದು ಅಯನ. ಅಯನಗಳೆರಡಾದರೆ ಒಂದು ಅಬ್ದವೆಂಬ ವರ್ಷ. ಆ ವರ್ಷಗಳು ದೇವಮಾನದಲ್ಲಿ ಹನ್ನೆರಡುಸಾವಿರವಾದರೆ ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳಾಗುವುವು. ಇದನ್ನು ಮುಂದಿನ ಪದ್ಯದಲ್ಲಿ ತಿಳಿಸುವೆನು. ||57||

## ಸರ್ವವ್ಯಾಖ್ಯಾನಸಾರಸಂಗ್ರಹ

1. ದಿವಾ ಅಂದರೆ ಒಂದು ಹಗಲು. ರಾತ್ರಿ ಒಂದು ರಾತ್ರಿ. ಒಂದು ಹಗಲು ಮತ್ತು ಒಂದು ರಾತ್ರಿ ಎರಡೂ ಸೇರಿ **ಒಂದು ದಿನವೆನಿಸುವುದು.**

ಒಂದು ಹಗಲು + ಒಂದು ರಾತ್ರಿ = ಒಂದು ದಿನ.

2. ಹದಿನೈದುದಿನಗಳು = **ಒಂದು ಪಕ್ಷ.**

3. ಎರಡು ಪಕ್ಷಗಳು = **ಒಂದು ಮಾಸ** (ತಿಂಗಳು).

ಒಂದು ಮಾಸದಲ್ಲಿ ಶುಕ್ಲಪಕ್ಷದ 15 ದಿನಗಳು (ಪ್ರತಿಪದದಿಂದ ಪೂರ್ಣಿಮಪರ್ಯಂತ), ಕೃಷ್ಣಪಕ್ಷದ 15 ದಿನಗಳು (ಪ್ರತಿಪದದಿಂದ ಅಮಾವಾಸ್ಯೆ ಪರ್ಯಂತ) ಮೂವತ್ತು ದಿನಗಳು.

4. ಎರಡು ಮಾಸಗಳು = **ಒಂದು ಋತು** (ಮಾಸತ್ರಯವೆ ಋತು)

5. ಮೂರು ಋತುಗಳು = **ಒಂದು ಅಯನ** (ಋತುತ್ರಯಂಗಳೆ ಅಯನ)

6. ಎರಡು ಅಯನಗಳು = **ಒಂದುವರ್ಷ** (ಅಬ್ದ)

ಒಂದುವರ್ಷದಲ್ಲಿ ಉತ್ತರಾಯಣ ಮತ್ತು ದಕ್ಷಿಣಾಯಣನಗನಳೆರಡು ಇರುವುವು. (1) ಉತ್ತರಾಯಣ = ಪುಷ್ಯಮಾಸದ ಮಧ್ಯದಿಂದ (ಸಾಮಾನ್ಯವಾಗಿ ಜನವರಿ 14 ರಿಂದ). ಆಷಾಢ ಮಧ್ಯದವರೆಗೆ (ಜುಲೈ ಮಧ್ಯ) ಉತ್ತರಾಯಣದ ವ್ಯಾಪ್ತಿ.

ಪುಷ್ಯದ ಅರ್ಧಭಾಗ + ಮಾಘಮಾಸ + ಫಾಲ್ಗುಣಮಾಸ + ಚೈತ್ರ + ವೈಶಾಖ + ಜ್ಯೇಷ್ಠ + ಆಷಾಢ ಅರ್ಧಭಾಗ = ಆರುಮಾಸಗಳು.

ಹೇಮಂತಋತುವಿನಿಂದ ಗ್ರೀಷ್ಮಋತುವಿನಪರ್ಯಂತ = ಮೂರು ಋತುಗಳು.

(2) ದಕ್ಷಿಣಾಯನ-ಆಷಾಢಮಾಸದ ಉಳಿದ ಅರ್ಧಭಾಗದಿಂದ ಪ್ರಾರಂಭಿಸಿ ಪುಷ್ಯ ಮೊದಲ ಅರ್ಧದ ಪರ್ಯಂತ (ಜುಲೈ ಮಧ್ಯದಿಂದ ಜನವರಿ ಮಧ್ಯದವರೆಗೆ).

ಆಷಾಢ ಉಳಿದ ಅರ್ಧಭಾಗ + ಶ್ರಾವಣ + ಭಾದ್ರಪದ + ಆಶ್ವಯುಜ + ಕಾರ್ತೀಕ + ಮಾರ್ಗಶೀರ + ಪುಷ್ಯ ಮೊದಲನೆಯ ಅರ್ಧಭಾಗ = ಆರುಮಾಸಗಳ ಅವಧಿ.

ಗ್ರೀಷ್ಮಋತುವಿನಿಂದ ಹೇಮಂತಋತುವಿನ ಪರ್ಯಂತ = ಮೂರು ಋತುಗಳು.

## 7. ದೇವಮಾನದಿ-

ದೇವತೆಗಳಿಗೆ ಒಂದು ದಿನ-ಮಾನವರ 360 ದಿನಗಳು.

ಅಂತಹ ಮಾನವರ 360 ವರ್ಷಗಳು = ದೇವತೆಗಳಿಗೆ ಒಂದುವರ್ಷ. ಈ ರೀತಿಯಲ್ಲಿ ಕಾಲಗಣನೆ ಮಾಡಿದರೆ, ದೇವಮಾನದಿಂದ ಕೃತ, ತ್ರೇತಾ,

ದ್ವಾಪರ, ಕಲಿ ಎಂಬ ಚತುರ್ಯುಗಗಳಿಗೆ 12,000 ದೇವಮಾನ ವರ್ಷಗಳಾಗುವುವು. ಇದರ ವಿವರವನ್ನು ಮುಂದಿನ ಪದ್ಯದಲ್ಲಿ (58ನೆಯ ಪದ್ಯ) ದಾಸರಾಯರು ತಿಳಿಸುತ್ತಾರೆ. ||57||

## ಪದ್ಯ ೫೮

**ಮೂಲ :**

**ಚತುಸ್ಸಾವಿರದೆಂಟುನೂರವು |**
**ಕೃತಯುಗಕೆ ತ್ರಿಸಹಸ್ರ ಸಲೆಷಟ್ |**
**ಶತವು ತ್ರೇತೆಗೆ ದ್ವಾಪರಕೆ ದ್ವಿಸಹಸ್ರನಾನೂರು ||**
**ದಿತಿಜಪತಿ ಕಲಿಯುಗಕೆ ಸಾವಿರ |**
**ಶತಗಳ ದ್ವಯ ಕೂಡಿ ಈ ದೇ |**
**ವತೆಗಳಿಗೆ ಹನ್ನೆರಡುಸಾವಿರವಹವು ವರುಷಗಳು || ೫೮ ||**

**ಅವತರಣಿಕೆ :–**

ಚತುರ್ಯುಗಗಳ ಕಾಲಪರಿಮಾಣಗಳ ವಿಚಾರವನ್ನು ತಿಳಿಸುತ್ತಾರೆ.

||58||

**ಪ್ರತಿಪದಾರ್ಥ :–**

**ಚತುಸ್ಸಾವಿರದೆಂಟುನೂರು** = ನಾಲ್ಕುಸಾವಿರದ ಎಂಟುನೂರು (4800) ದೇವಮಾನ ವರ್ಷಗಳು (ಅಂದರೆ 17,28,000 ಮಾನವ ವರ್ಷಗಳು). **ಕೃತಯುಗಕೆ** = ಕೃತಯುಗದ ಕಾಲಮಾನವು. **ತ್ರೇತೆಗೆ** – ತ್ರೇತಾಯುಗಕ್ಕೆ, **ತ್ರಿಸಹಸ್ರ** = ಮೂರುಸಾವಿರದ, **ಸಲೆಷಟ್ ಶತವು** – ಆರುನೂರು (ಷಟ್ ಶತ = 6 × 10 = 600) ಅಂದರೆ ಮೂರುಸಾವಿರದ

ಆರುನೂರು ದೇವಮಾನ ವರ್ಷಗಳು (12,96,000 ಮಾನವವರ್ಷಗಳು). **ದ್ವಾಪರಕೆ** = ದ್ವಾಪರಯುಗಕ್ಕೆ, **ದ್ವಿಸಹಸ್ರನಾನೂರು** = ಎರಡುಸಾವಿರದ ನಾನೂರು ದೇವಮಾನವರ್ಷಗಳು (ದ್ವಿಸಹಸ್ರ = 2 × 1000 = 2000 ಇದರ ಮೇಲೆ 400 = 2400 ವರ್ಷಗಳು) ಅಂದರೆ 8,64,000 ಮಾನವ ವರ್ಷಗಳಾಗುವುವು. **ದಿತಿಜಪತಿ** = ದಿತಿದೇವಿಯ ಪುತ್ರರಾದ ದೈತ್ಯರ ಪ್ರಭು ವಾದ, **ಕಲಿಯುಗಕೆ** = ಕಲಿ ಅಭಿಮಾನ್ಯಮಾನವಾದ ಕಲಿಯುಗಕ್ಕೆ. **ಸಾವಿರಶತಗಳದ್ವಯಕೂಡಿ** = ಒಂದುಸಾವಿರದ ಮೇಲೆ ಎರಡುನೂರು ಗಳು (ಶತಗಳದ್ವಯ) 1200 ದೇವಮಾನವರುಷಗಳು. **ಈ ದೇವತೆ ಗಳಿಗೆ** = ದೇವತೆಗಳಿಗೆ, ಹನ್ನೆರಡುಸಾವಿರವಹವು ವರುಷಗಳು-ಈ ಎಲ್ಲಾ ವರುಷಗಳು ಕೂಡಿ, ಹನ್ನೆರಡುಸಾವಿರ ದೇವಮಾನವರುಷಗಳಾಗುವುವು. ॥58॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ಕಾಲಮಾನವಿಚಾರವೂ, ದೇವಮಾನ ವರುಷಗಳನೂ ಹೇಳ ತಾರೆ.

ನಾಲ್ಕುಸಾವಿರದೆಂಟುನೂರು ದೇವಮಾನವರುಷಗಳು. ಹದಿನೇಳುಲಕ್ಷ ಇಪ್ಪತ್ತೆಂಟುಸಾವಿರ ಮನುಷ್ಯಮಾನವರುಷಗಳು. ಆ ವರುಷಗಳು ಕೃತ ಯುಗಕ್ಕೆ ಆಗತವೆ. ತ್ರೇತಾಯುಗಕ್ಕೆ ಮೂರುಸಾವಿರದ ಆರುನೂರು ದೇವಮಾನವರುಷಗಳು. ಹನ್ನೆರಡುಲಕ್ಷ ತೊಂಭತ್ತಾರುಸಾವಿರ ಮನುಷ್ಯ ಮಾನ ವರುಷಗಳು. ದ್ವಾಪರಯುಗಕ್ಕೆ ಎರಡುಸಾವಿರದ ನಾಲ್ಕುನೂರು ದೇವಮಾನ ವರುಷಗಳು. ಎಂಟುಲಕ್ಷ ಅರವತ್ತುನಾಲ್ಕುಸಾವಿರ ಮನುಷ್ಯ ಮಾನ ವರುಷಗಳು. ದಿತಿದೇವಿಪುತ್ರರಾದ ಅಸುರರು, ಇವರಿಗೆ ಪತಿಯಾದವ ಕಲಿ. ಈ ಕಲಿಸಾಂಕೇತವಾದ ಕಲಿ ಅಭಿಮನ್ಯಮಾನವಾದ ಕಲಿಯುಗಕ್ಕೆ ಒಂದುಸಾವಿರದ ಇನ್ನೂರು ದೇವಮಾನ ವರುಷಗಳು, ನಾಲ್ಕುಲಕ್ಷ ಮೂವತ್ತೆರಡುಸಾವಿರ ಮನುಷ್ಯಮಾನ ವರುಷಗಳು. ಈ ಯಾವತ್ತೂ ವರುಷಗಳು ಕೂಡಿ ಹನ್ನೆರಡುಸಾವಿರ ದೇವಮಾನವರುಷಗಳು ಆಗತವೆ.

ಇದಕ್ಕೆ ಮನುಷ್ಯಮಾನವರುಷಗಳು ನಲವತ್ತಮೂರುಲಕ್ಷ ಇಪ್ಪತ್ತುಸಾವಿರ. ಈ ಹನ್ನೆರಡುಸಾವಿರ ದೇವಮಾನುಷವರುಷಗಳು, ಈ ಪೂರ್ವೋಕ್ತ ದೇವತೆಗಳಿಗೆ ದೇವಮಾನದಿಂದ ಆಗೋವಾಗತವೆ. ಮಾನುಷರ ಒಂದೂವರಿವರುಷ ದೇವತೆಗಳ ಒಂದುದಿನ; ಒಂದಂವರುಷದ 360 ದಿನವನ್ನ ದೇವಮಾನ ವರುಷಗಳಿಗೆ ಹೆಚ್ಚಿಸಿದರೆ ಮನುಷ್ಯಮಾನವರಂಷಕ್ಕೆ ಸರಿ ಆಗತದೆ. ॥58॥

2. ಭಾವಪ್ರಕಾಶಿಕೆ :–

ಕೃತಯುಗಕ್ಕೆ 4 ಸಾವಿರದ 8 ನೂರುವರ್ಷಗಳಾಗಬೇಕು. ತ್ರೇತಾಯುಗಕ್ಕೆ 3 ಸಾವಿರದ 6 ನೂರು ವರ್ಷಗಳಾಗಬೇಕು. ದ್ವಾಪರಯುಗಕ್ಕೆ 2 ಸಾವಿರದನಾನೂರು ವರ್ಷಗಳು. ದೈತ್ಯರಾಜನಾದ ಕಲಿಯುಗಕ್ಕೆ 1 ಸಾವಿರದ 2 ನೂರು ವರ್ಷಗಳು. ಈ ಎಲ್ಲಾ ವರ್ಷಗಳನ್ನು ಒಟ್ಟು ಕೂಡಿಸಿದರೆ ದೇವಮಾನದಿಂದ ಹನ್ನೆರಡುಸಾವಿರ ವರ್ಷಗಳು ಆಗುವವು. ॥58॥

ಭಾವದರ್ಪಣ :–

4800 ವರ್ಷ ಕೃತಯುಗಕ್ಕೆ, 3600 ವರ್ಷ ತ್ರೇತಾಯುಗಕ್ಕೆ, 2400 ವರ್ಷ ದ್ವಾಪರಕ್ಕೆ, 1200 ಕಲಿಯುಗಕ್ಕೆ, ಆಹತ್ಯ 12000 ದೇವಮಾನ ವರ್ಷವಾದರೆ ಒಂದು ಮಹಾಯುಗ। ಇಂಥಾ ಮಹಾಯುಗ 2000 ಆದರೆ ಬ್ರಹ್ಮದೇವರಿಗೆ ಒಂದು ಅಹೋರಾತ್ರಿ ಎಂದು ತಿಳಿಯತಕ್ಕದ್ದೆಂದು ಹೇಳುತ್ತಾರೆ। ಚತುಃಸಾವಿರ. ॥58॥

4. ಶ್ರೀವ್ಯಾಸಸಿದ್ಧಾಂತಕೌಮುದಿ :–

ಚತುರೇತಿ॥ ಸಲೆ–ಮೊತ್ತ. ॥58॥

ಈ ಪದ್ಯಾರ್ಥ ಪ್ರಮಾಣಗಳನ್ನೆಲ್ಲಾ 56ನೇ ಪದ್ಯದಡಿ, ಪದ್ಯ 57–58ರ ವಿವರ ಮಾಡಿದ್ದಾರೆ.

5. ಶ್ರೀಗುರುಹೃದಯಪ್ರಕಾಶಿಕೆ :–

ಕೃತ್ರಯುಗಕ್ಕೆ ನಾಲ್ಕುಸಾವಿರದೆಂಟುನೂರುವರ್ಷ. ಮೂರುಸಾವಿರದಾರುನೂರುವರ್ಷ ತ್ರೇತಾಯುಗಕ್ಕೆ. ಎರಡುಸಾವಿರದನಾನ್ನೂರುನರುಷ

ದ್ವಾಪರಯುಗಕ್ಕೆ. ಸಾವಿರದಇನ್ನೂರುವರುಷ ಕಲಿಯುಗಕ್ಕೆ. ಹೀಗೆ ನಾಲ್ಕು ಯುಗಕ್ಕೂ ಒಟ್ಟು ಹನ್ನೆರಡುಸಾವಿರವರುಷ ದೇವಮಾನದಿಂದ ಎಂದರ್ಥ.

॥58॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಥಮಯುಗವಾದ ಕೃತಯುಗದ ಕಾಲಪರಿಮಾಣವು. ನಾಲ್ಕು ಸಾವಿರದ ಎಂಟುನೂರು (4,800) ದೇವಮಾನವರ್ಷಗಳು.

ಮಾನವರ ಒಂದು ವರ್ಷಕ್ಕೆ ದೇವಮಾನದಲ್ಲಿ ಒಂದು ದಿನ. ಆದ್ದರಿಂದ ದೇವಮಾನದ ಒಂದುವರ್ಷ = 360 × 360 ॥ 24,7600 ದಿನಗಳು.

ಅದರಂತೆ 4800 ದೇವಮಾನ ವರ್ಷಗಳು = 17,28,000 ಮಾನವ ವರ್ಷಗಳು.

2. ದ್ವಿತೀಯ ಯುಗವಾದ ತ್ರೇತಾಯುಗದ ಕಾಲಪರಿಮಾಣವು ಮೂರುಸಾವಿರದ ಆರುನೂರು (3,600) ದೇವಮಾನವರ್ಷಗಳು.

ಇದನ್ನು ದಾಸರಾಯರು ತ್ರಿಸಹಸ್ರ ಷಲೆಷಟ್ ಶತವು ಎಂದಿದ್ದಾರೆ.

ಅಂದರೆ ತ್ರಿಸಹಸ್ರ = ಮೂರುಸಾವಿರ = 3000

ಷಲೆಷಟ್ ಶತವು = ಮೇಲೆ 6 × 100 = 600

ಒಟ್ಟು 3,600 ವರ್ಷಗಳು

ಇದು ಮಾನವವರ್ಷಗಳಲ್ಲಿ 12,96,000 ವರ್ಷಗಳಾಗುವುವು.

3. ತೃತೀಯ ಯುಗವಾದ ದ್ವಾಪರಯುಗಕ್ಕೆ ಎರಡುಸಾವಿರದ ನಾನೂರು ದೇವಮಾನವರ್ಷಗಳು (2,400).

ಇದನ್ನು ದಾಸರಾಯರು **ದ್ವಿಸಹಸ್ರನಾನೂರು** ಎಂದಿದ್ದಾರೆ.

ಅಂದರೆ, ದ್ವಿಸಹಸ್ರ $= 2 \times 1000 = 2000$
ನಾನೂರು $= 400$

ಒಟ್ಟು $= 2,400$ ವರ್ಷಗಳು

ಇದರ ಕಾಲಾವಧಿ $= 8,64,000$ ಮಾನವವರ್ಷಗಳು.

4. **ದಿತಿಜಪತಿ** ಕಶ್ಯಪಮಹಾಮುನಿಗಳ ಪತ್ನಿ ದಿತಿದೇವಿ. ದಿತಿ ದೇವಿಯ ಪುತ್ರರು ದೈತ್ಯರು (ದಿತಿಜರು) ಇವರಿಗೆ ಪ್ರಭುವಾದವನು (ಪತಿ) **ಕಲಿಯು.**

ಅಂದರೆ ಕಲಿಸಾಂಕೇತವಾದ, ಕಲಿ ಅಭಿಮನ್ಯಮಾನವಾದ ಕಲಿಯುಗದ ಕಾಲಪರಿಮಾಣವು ಒಂದುಸಾವಿರದಇನ್ನೂರು ದೇವವರ್ಷಗಳು (1,200 ವರ್ಷಗಳು).

ಇದನ್ನು ದಾಸರಾಯರು **ಸಾವಿರಶತಗಳ ದ್ವಯ** ಎಂದಿದ್ದಾರೆ.

ಅಂದರೆ, ಸಾವಿರ $= 1000$
ಶತದ್ವಯ $= 200$

ಒಟ್ಟು $= 1200$ ದೇವವರ್ಷಗಳು

$= 4,72,000$ ಮಾನವವರ್ಷಗಳು.

5. ಅಲ್ಲಿಗೆ ಚತುರ್ಯುಗಗಳ ಒಟ್ಟು ಕಾಲ ಪರಿಮಾಣ :

| | | | | | |
|---|---|---|---|---|---|
| 1. | ಕೃತಯುಗ | = 4,800 | *ದೇ.ವ. = | 17,28,000 | **ಮಾ. ವ. |
| 2. | ತ್ರೇತಾಯುಗ | = 3,600 | ದೇ.ವ. = | 12,96,000 | ಮಾ. ವ. |
| 3. | ದ್ವಾಪರಯುಗ | = 2,400 | ದೇ.ವ. = | 8,64,000 | ಮಾ. ವ. |
| 4. | ಕಲಿಯುಗ | = 1,200 | ದೇ.ವ. = | 4,32,000 | ಮಾ. ವ. |
| | ಕೂಡಿದರೆ | 12,000 | ದೇ.ವ. = | 43,20,000 | ಮಾ. ವ. |

ಇದನ್ನೆ ದಾಸರಾಯರು **ಕೂಡಿ ಈ ದೇವತೆಗಳಿಗೆ ಹನ್ನೆರಡು ಸಾವಿರ ವಹವು** ಎಂದಿದ್ದಾರೆ.

ಅಂದರೆ ನಾಲ್ಕು ಯುಗಗಳ ಮೊತ್ತಕ್ಕೆ ಒಂದು ಮಹಾಯುಗವೆಂದು ಹೆಸರು.

ಒಂದು ಮಹಾಯುಗದ ಕಾಲ = 12,000 ದೇವ ವರ್ಷಗಳು ಅಥವಾ 43,20,000 ಮಾನವ ವರ್ಷಗಳಾಗುವುವು. ॥58॥

* ದೇವ ವರ್ಷಗಳು

** ಮಾನವ ವರ್ಷಗಳು

## ಪದ್ಯ ೫೯

**ಮೂಲ :**

**ಪ್ರಥಮ ಯುಗಕೇಳಧಿಕವರೆ ವಿಂ |**
**ಶತಿ ಸುಲಕ್ಷಾಷ್ಟೋತ್ತರಶತ ವಿಂ |**
**ಶತಿಸಹಸ್ರ ಮನುಷ್ಯಮಾನಾಬ್ದಗಳು ಷಣ್ಣವತಿ ||**
**ಮಿತ ಸಹಸ್ರದ ಲಕ್ಷದ್ವಾದಶ |**
**ದ್ವಿತಿಯ ತೃತಿಯಕೆ ಎಂಟು ಲಕ್ಷದ |**
**ಚತುಃಷಷ್ಟಿ ಸಹಸ್ರ ಕಲಿಗಿದರರ್ಧ ಚಿಂತಿಪುದು || ||೫೯||**

**ಅವತರಣಿಕೆ :-**

ದೇವಮಾನ ವರುಷಗಳಿಗೆ ತತ್ಸಮಾನವಾದ ಮಾನವ ಮಾನದ ವರ್ಷಗಳ ಕಾಲಗಣನೆಯನ್ನು ತಿಳಿಸುತ್ತಾರೆ. ॥59॥

**ಪ್ರತಿಪದಾರ್ಥ :-**

**ಮನುಷ್ಯಮಾನ** = ಮಾನವರ ಮಾನದಿಂದ, **ಅಬ್ದಗಳು** = ಕೃತಾದಿ ನಾಲ್ಕು ಯುಗಗಳಿಗೆ ಆಗುವ ಮಾನವ ವರ್ಷಗಳು. **ಪ್ರಥಮಯುಗಕೆ** = ಪ್ರಥಮ ಯುಗವಾದ ಕೃತಯುಗಕ್ಕೆ, **ಅರೆವಿಂಶತಿ** = ಹತ್ತುಲಕ್ಷ (ವಿಂಶತಿ = 20. ಅದರಲ್ಲಿ ಅರ್ಧ = 10) **ಏಳಧಿಕವು** = ಏಳು ಲಕ್ಷ ಅಧಿಕವು, **ಸುಲಕ್ಷ** = ಅಂದರೆ ಹತ್ತುಲಕ್ಷ + ಏಳುಲಕ್ಷ = ಸಮೀಚೀನವಾದ ಹದಿನೇಳು ಲಕ್ಷ ಮಾನವ ವರ್ಷಗಳು. **ಉತ್ತರ** = ಅಂತ್ಯದಲ್ಲಿ. **ಅಷ್ಟೋತ್ತರಶತ** = ಎಂಟು ಸಾವಿರ, **ವಿಶಂತಿಸಹಸ್ರ** = ಇಪತ್ತು ಸಾವಿರ, ಅಂದರೆ ಗಣನೆ ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ ಮಾನವ ವರ್ಷಗಳು (12,28,000)

**ತ್ರಿತಿಯು** = ಎರಡನೆಯದಾದ ತ್ರೇತಾಯುಗಕ್ಕೆ, **ಲಕ್ಷದ್ವಾದಶ** = ಹನ್ನೆರಡು ಲಕ್ಷ, **ಷಣ್ಣವತಿಸಹಸ್ರ** = ತೊಂಭತ್ತಾರುಸಾವಿರ (ಷಣ್ಣವತಿ = ಷಟ್ + ನವತಿ = 6 + 90 = 96) ಅಂದರೆ ತ್ರೇತಾಯುಗದ ಕಾಲಾವಧಿಯು ಹನ್ನೆರಡು ಲಕ್ಷದ ಮೇಲೆ ತೊಂಭತ್ತಾರುಸಾವಿರ (12,96,000) ಮಾನವ ವರ್ಷಗಳಾಗುವವು. **ತೃತಿಯಕೆ** = ಮೂರನೆಯ ದ್ವಾಪರಯುಗಕ್ಕೆ. **ಎಂಟು ಲಕ್ಷದ ಚತುಃಷಷ್ಠಿ ಸಹಸ್ರ** = ಎಂಟು ಲಕ್ಷ + ಅರವತ್ತುನಾಲ್ಕು ಸಾವಿರ = 8,64,000 ಮಾನವ ವರ್ಷಗಳು. **ಕಲಿಗೆ** = ನಾಲ್ಕನೆಯದಾದ ಕಲಿಯುಗಕ್ಕೆ, **ಇದರರ್ಧ** = ಎಂಟು ಲಕ್ಷದ ಅರವತ್ತು ನಾಲ್ಕು ಸಾವಿರದಲ್ಲಿ ಅರ್ಧ, ಅಂದರೆ ನಾಲ್ಕು ಲಕ್ಷದ ಮೂವತ್ತೆರಡು ಸಾವಿರ = 4,32,000, ಮಾನವ ವರ್ಷಗಳೆಂದು, **ಚಿಂತಿಪುದು** = ಚಿಂತಿಸುವವರಾಗಬೇಕು. ॥59॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ದೇವಮಾನವರುಷಗಳಿಗೆ ಮನುಷ್ಯಮಾನವರುಷಗಳು ಹೇಳತಾರೆ.

ಮನುಷ್ಯಮಾನದಿಂದ ಕೃತಾದಿ ನಾಲ್ಕುಯುಗಗಳ ದೇವಮಾನವರುಷಗಳಿಗೆ ಆಗತಕ್ಕ ಮಾನುಷವರುಷಗಳು, ಪ್ರಥಮ ಯುಗವಾದ ಕೃತಯುಗಕ್ಕೆ ಹತ್ತುಲಕ್ಷ (ಇಪ್ಪತ್ತರಲ್ಲಿ ಅರ್ಧ) ಏಳುಲಕ್ಷ ಅಧಿಕ, ಅಂತು ಸಮೀಚೀನವಾದ ಹದಿನೇಳು ಲಕ್ಷ. ಅಂತ್ಯದಲ್ಲಿ ನೂರು (ಮೂರು ಸಂಖ್ಯಾಕವುಳ್ಳದ್ದು) ಇದರ ಹಿಂದೆ ಎಂಟು ಸೇರಿ ಎಂಟು ಸಾವಿರ ಆಗತದೆ, ಇಪ್ಪತ್ತು ಸಾವಿರ, ಅಂತೂ ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ. ಎರಡನೆಯದಾದ ತ್ರೇತಾಯುಗಕ್ಕೆ ಹನ್ನೆರಡು ಲಕ್ಷತೊಂಭತ್ತಾರು ಸಾವಿರ, ಅಂತು ಹನ್ನೆರಡು ಲಕ್ಷತೊಂಭತ್ತಾರು ಸಾವಿರವು. ತೃತೀಯ ಯುಗವಾದ ದ್ವಾಪರಯುಗಕ್ಕೆ ಎಂಟುಲಕ್ಷದ ಅರುವತ್ತುನಾಲ್ಕುಸಾವಿರ. ನಾಲ್ಕನೇ ಯುಗವಾದ ಕಲಿಯುಗಕ್ಕೆ ದ್ವಾಪರ ಯುಗದ ವರುಷದೊಳಗೆ ಅರ್ಧವಾದ ನಾಲ್ಕುಲಕ್ಷದ ಮೂವತ್ತೆರಡು ಸಾವಿರ

ವರುಷಗಳು. ಈ ಮಿತವಾದ ವರುಷಗಳಿಂದ ನಾಲ್ಕುಯುಗಗಳು ಯುಕ್ತವಾಗಿವೆ ಎಂದು ಚಿಂತಿಸೋನರಾಗಬೇಕು. ॥59॥

## 2. ಭಾವಪ್ರಕಾಶಿಕೆ :-

ಕೃತಯುಗಕ್ಕೆ ಏಳು ಹೆಚ್ಚಾದ 20ರಲ್ಲಿ ಅರ್ಧ 10 ಲಕ್ಷ = 17 ಲಕ್ಷವೆಂದರ್ಥ. 8 ಹೆಚ್ಚಿನ ಮೇಲೆ 20 ಸಹಸ್ರ ಅಂದರೆ 28 ಸಹಸ್ರವೆಂದರ್ಥ, ಅಂತು ಮನುಷ್ಯಮಾನದ ವರ್ಷಗಳು 17 ಲಕ್ಷದ 28 ಸಾವಿರ ವರ್ಷಗಳೆಂದರ್ಥ. ಎರಡನೆಯ ದ್ವಾಪರಯುಗಕ್ಕೆ 12 ಲಕ್ಷದ 96 ಸಹಸ್ರ. ಮೂರನೆಯದಾದ ದ್ವಾಪರಯುಗಕ್ಕೆ 8 ಲಕ್ಷದ 64 ಸಹಸ್ರ ವರ್ಷಗಳು. ಕಲಿಯುಗಕ್ಕೆ 4 ಲಕ್ಷದ 32 ಸಾವಿರ ವರ್ಷಗಳ ಚಿಂತಿಪುದು.

ಕ್ಷಣಕಾಲ ಮೊದಲು ದಿನಕಾಲದವರೆಗೂ ಹೇಳಿದ ತೃಟಿ, ಲವ ಮೊದಲಾದ ಕಾಲಗಳಲ್ಲಿ ಒಂದೊಂದು ಪುರಾಣದಲ್ಲಿ ಒಂದೊಂದು ಪ್ರಕಾರ ಹೇಳಿರುವರು. ಕಡೆಗೆ ದಿವಸಕ್ಕೆ 60 ಘಳಿಗೆ ಎಂದು ಘಳಿಗೆಗಳನ್ನು ಹೇಳುವಾಗ ಎಲ್ಲಾ ಸಂಖ್ಯೆಯು ಸರಿ ಹೋಗುವವು. ಪ್ರಕೃತ ದಾಸಾರ್ಯರು ಹೇಳಿದ ಸಂಖ್ಯೆಯು ವಿಷ್ಣುರಹಸ್ಯದಲ್ಲಿ ಹೇಳಿದಂತೆ ಹೇಳಿರುತ್ತಾರೆ; ಆ ಮೂಲವನ್ನನುಸರಿಸಿ ಈ ಪದ್ಯಗಳಿಗೆ ಅರ್ಥವು ಬರೆಯಲ್ಪಟ್ಟದೆ. ವಿಷ್ಣುರಹಸ್ಯದ ಪ್ರಮಾಣ : ಅತಿ ಸೂಕ್ಷ್ಮಸ್ತು ಯಃ ಕಾಲಃ ಸಕ್ಷಣಃ ಪರಿಕೀರ್ತಿತಃ॥ ಕ್ಷಣೌ ಪಂಚತ್ರುಟಿಃ ಪ್ರೋಕ್ತಾ ಪಂಚಾಶತ್ತಾಲವಃ ಸ್ಮೃತಃ|ಲವದ್ವಯಃ ನಿಮೇಷಃ ಸ್ಯಾನ್ಮಾತ್ರಾಸ್ಯಾದಷ್ಟಭಿಶ್ಚತ್ರೈಃ॥ ಯಚ್ಚ್ವಾಯಂ ವದತೇ ಚಾಷೋ ಮಾತ್ರಯೋರ್ದ್ವಿತಯಂ ಗುರುಃ॥ ಗುರೂಣಾಂ ದಶಕಃ ಪ್ರಾಣಃ ಪ್ರಾಣಷಟ್ಕ ಪಳಂ ಭವೇತ್॥ ಪಳಷಷ್ಟಿರ್ಘಟೀ ಪ್ರೋಕ್ತಾ ತಾಃ ಷಷ್ಟಿರ್ದಿನಮುಚ್ಯತೆ" ಇತ್ಯಾದಿ ವಾಕ್ಯಗಳು ಮೇಲಿನ ಪದ್ಯಾರ್ಥಗಳಿಗೆ ಆಧಾರಗಳು. ದೇವಮಾನವರ್ಷಗಳಿಂದ 12 ಸಹಸ್ರವರ್ಷಗಳು ಆದರೆ ಒಂದು ಮಹಾಯುಗವಾಗುವದು. ಮಹಾಯುಗವೆಂದರೆ ಕೃತ, ತ್ರೇತಾ, ದ್ವಾಪರ, ಕಲಿ ಎಂಬ 4 ಯುಗಗಳು ಕೇರಿದುದಕ್ಕೆ ಹೆಸರು. "ಕೃತಂ ತ್ರೇತಾ ದ್ವಾಪರಶ್ಚ ಕಲಶ್ಚೇತಿ ಚತುರ್ಯುಗಂ॥ ದಿವ್ಯೈರ್ದ್ವಾದಶಸಾಹಸ್ರೈಸ್ಸ್ಯಾವಧಾನಂ

ನಿರೂಪಿತಂ ॥ ಎಂದು ಭಾಗವತ ತೃತೀಯಸ್ಕಂದ ವಾಕ್ಯವಿರುವುದು. ಒಂದೊಂದು ಯುಗಕ್ಕೆ ಎಷ್ಟೆಷ್ಟು ವರ್ಷಗಳೆಂಬುದನ್ನು ಪದ್ಯಾರ್ಥದಲ್ಲಿ ಬರೆದಿದೆ. 4800, 3600, 2400, 1200 ಅಂತು 12 ಸಾವಿರವೆಂದು ದೇವಮಾನದಿಂದ ತಿಳಿಯಬೇಕು. ದೇವಮಾನವೆಂದರೇನು ? ಕೇಳ! ಮನುಷ್ಯಮಾನದಿಂದ ಒಂದುವರ್ಷವಾದರೆ ದೇವತೆಗಳಿಗೆ ಒಂದು ದಿವಸವಾಗುವುದು. ಉತ್ತರಾಯಣ ಹಗಲು, ದಕ್ಷಿಣಾಯಣವು ರಾತ್ರಿ ಎಂದು ತಿಳಿಯಬೇಕು. ಈ ದಿವಸ 360ಕ್ಕೆ ಒಂದು ವರ್ಷವು. ಅಂತು ಮನುಷ್ಯಮಾನದಿಂದ 360 ವರ್ಷಗಳಾದರೆ ದೇವತೆಗಳಿಗೆ ಒಂದು ವರ್ಷವಾಗುವುದು. ಇದಕ್ಕೆ ದೇವಮಾನ ವರ್ಷವೆಂದು ಹೇಳಿರುವರು. ಮೇಲೆ ಹೇಳಿದ ಕೃತಾದಿ ಯುಗಗಳಿಗೆ ಹೇಳಿದ ದೇವಮಾನ ಸಂಖ್ಯೆಯನ್ನು 360ರಿಂದ ಗುಣಾಕಾರ ಮಾಡಿದರೆ ಮನುಷ್ಯಮಾನವು ತಿಳಿಯುವುದು. ಕೃತಯುಗದ ಪ್ರಮಾಣವು ದೇವಮಾನದಿಂದ 4800ರೆಂದು ಹೇಳಿರುವರು. ಮನುಷ್ಯ ಮಾನದಿಂದ 17,28,000 ವರ್ಷಗಳೆಂದು ಹೇಳಿರುವರು. 4,800 x 17,28,000 ಹೀಗೆ ಗುಣಾಕಾರ ಮಾಡಿದರೆ ದಾಸಾರ್ಯರು ಹೇಳಿದ ಮನುಷ್ಯಮಾನ ದೇವಮಾನ ವರ್ಷಗಳು ಸರಿಹೋಗುವವು. ಇದರಂತೆ ಎಲ್ಲಾ ಯುಗಗಳ ಸಂಖ್ಯೆಗಳನ್ನೂ ತಿಳಿಯತಕ್ಕದ್ದು. ಮನುಷ್ಯಮಾನದಿಂದ ಕೃತಾದಿ ಯುಗಗಳ ಸಂಖ್ಯೆಯನ್ನು ದಾಸಾರ್ಯರು ಹೇಳಿದುದಕ್ಕೆ ಆಧಾರ ವಾಕ್ಯವು ಪ್ರಕಾಶಸಂಹಿತೆಯಲ್ಲಿ ಹೇಳಿರುವರು. "ಅಷ್ಟಾವಿಂಶತ್ಸಹಸ್ರೇತಲ್ಲಕ್ಷ ಸಪ್ತದಶಾಬ್ದತಃ ಕ್ಲೃಪ್ತಃ ಕೃತಯುಗಸ್ತಸ್ಮಾತ್ತ್ರೇತಾ ಪಾದೋನ ಉಚ್ಯತೆ॥ ಸಹಸ್ರಷಣ್ಣವತ್ಯೆ ತಲ್ಲಕ್ಷದ್ವಾದಶಸಮ್ಮಿತಃ॥ ತ್ರೇತಾಯುಗಸ್ತು ತತ್ಪಾದನ್ಯೂನೋದ್ವಾಪರ ಈರಿತಃ॥ ಚತು ಷಷ್ಟಿಸಹಸ್ರೇತರಷ್ಟಲಕ್ಷಾತ್ಮಃ ಈರಿತಃ॥ ದ್ವಾಪರಸ್ತು ಕಲಿಸ್ತಸ್ಮಾದರ್ಧಪಾದ ಇತಿ ಸ್ಮೃತಃ॥ ದ್ವಿಷೋಡಶ ಸಹಸ್ರೇ ತಚ್ಚತುರ್ಲಕ್ಷಾತ್ಮ ಕಲ್ಪಿತಃ॥ ಚತುರ್ಯುಗಾತ್ಮಕಃ ಕಾಲೋ ಮಹಾಯುಗ ಇತೀರಿತಃ॥ ಇತ್ಯಾದಿ. ಈ ಶ್ಲೋಕಗಳ ಅರ್ಥವು ಪದ್ಯಾರ್ಥದಿಂದ ವಿವರವಾಗಿರುವದು.

॥59॥

**೩. ಭಾವದರ್ಪಣ :–**

ಮೇಲೆ ಹೇಳಿದಂಥ ದೇವಮಾನಕ್ಕೆ ಮನುಷ್ಯಮಾನ ವರ್ಷಗಳು ಹೇಳುತ್ತಾರೆ। ಪ್ರಥಮ। ಏಳಧಿಕವಾದಂಥ ಅರೆವಿಂಶತಿ ಎಂದರೆ ಹತ್ತು ಎಂಟರ್ಧ, ಮುಂಚೆಂದು ಏಳು ಅಂತ ಹದಿನೇಳುಲಕ್ಷದ ಇಪ್ಪತ್ತೆಂಟುಸಾವಿರ ವರ್ಷ ಕೃತಯುಗಕ್ಕೆ। ಹನ್ನೆರಡುಲಕ್ಷದ ತೊಂಭತ್ತಾರುಸಾವಿರ ವರ್ಷ ತ್ರೇತಾಯುಗಕ್ಕೆ। ಎಂಟುಲಕ್ಷದ ಅರವತ್ತುನಾಲ್ಕುಸಾವಿರವರ್ಷ ದ್ವಾಪರಕ್ಕೆ। ನಾಲ್ಕುಲಕ್ಷದ ಮೂವತ್ತೆರಡುಸಾವಿರ ವರ್ಷ ಕಲಿಯುಗಕ್ಕೆ। ಅಹತ್ಯ ಮನುಷ್ಯಮಾನ ನಾಲ್ವತ್ತುಮೂರು ಲಕ್ಷದ ಇಪ್ಪತ್ತುಸಾವಿರ ವರ್ಷವಾಗತೇದು ಹೇಳುತ್ತಾರೆ|ಪ್ರಥಮ।ತದುಕ್ತಂ ಪ್ರಕಾಶಸಂಹಿತಾಯಾಂ। "ಅಷ್ಟಾವಿಂಶತ್ಸಹಸ್ರೇತಲ್ಲಕ್ಷ ಸಪ್ತದಶಾಬ್ದತಃ। ಕ್ಲುಪ್ತಃ ಕೃತಯುಗಸ್ತಸ್ಮಾತ್ ತ್ರೇತಾ ಪಾದೋನ ಉಚ್ಯತೇ। ಸಹಸ್ರಷಣ್ಣವತ್ಯೇ ತಲ್ಲಕ್ಷದ್ವಾದಶ ಸಂಮ್ಮಿತಃ। ತ್ರೇತಾಯಾಂಗಸ್ತು ತತ್ಪಾದನ್ಯೂನೋ ದ್ವಾಪರ ಈರಿತಃ। ಚತುಃಷಷ್ಟಿಸಹಸ್ರೇತದಷ್ಟಲಕ್ಷಾತ್ಮ ಈರಿತಃ। ದ್ವಾಪರಸ್ತು ಕಲಿಸ್ತಸ್ಮಾದರ್ಧಪಾದ ಇತಿ ಸ್ಮೃತಃ॥ ದ್ವಿಷೋಡಶಸಹಸ್ರೇತಚ್ಚತುರ್ಲಕ್ಷಾತ್ಮ ಕಲ್ಪಿತಃ। ಚತುರ್ಯುಗಾತ್ಮಕಃ ಕಾಲೋ ಮಹಾಯುಗ ಇತೀರಿತ" ॥59॥

**4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :–**

ಏವಂ ದೇವಮಾನೇನ ಚತುರ್ಯುಗ ಸಂಖ್ಯಾಂ ಉಕ್ತ್ವಾ "ಅಷ್ಟಾವಿಂಶತಿ ಸಹಸ್ರೇತ ಲಕ್ಷ ಸಪ್ತ ದಶಾತ್ಮಕಃ॥ ಕ್ಲುಪ್ತಃ ಕೃತಯುಗಃ ತಸ್ಮಾತ್ ತ್ರೇತಾ ಪಾದೋನ ಉಚ್ಯತೇ॥ ಸಹಸ್ರಷಣ್ಣವತ್ಯೇತ ಲಕ್ಷದ್ವಾದಶ ಸಮ್ಮಿತಃ॥ ತ್ರೇತಾಯುಗಃ ತತಃ ಪಾದಾದೂನೋ ದ್ವಾಪರ ಈರಿತಃ॥ ದ್ವಾಪರಸ್ಯ ಕಲಿಃ ತಸ್ಮಾತ್ ಅರ್ಧಪಾದಮಿತಃ ಸದಾ॥ ದ್ವಿಷೋಡಶ ಸಹಸ್ರೇತ ಚತುರ್ಲಕ್ಷಾತ್ಮಕಃ ಕಲಿಃ॥ ಇತಿ ಮಂಜರ್ಯುಕ್ತ (ಪ್ರನಾಡ್ಯಾ) ಪ್ರಾಣಾಡ್ಯಾ ಮಾನುಷ ವರ್ಷೈಃ ಕಲ್ಪಂ ಗಣಯತಿ–"ಪ್ರಥಮೇತಿ"–"ಅರೆ"–ಅರ್ಧ, ಮಿತಿ–ಪರಿಮಿತಿ."

(1) 'ಕೃತಂ'–17,28,000 (2) 'ತ್ರೇತಾ'–12,96,000
(3) 'ದ್ವಾಪರಂ'–8,64,000 (4) 'ಕಲಿಃ'–4,32,000 ॥59॥

### ಕನ್ನಡಾರ್ಥ

ದೇವಮಾನದಿಂದ ಚತುರ್ಯುಗಗಳ ವರ್ಷ ಸಂಖ್ಯೆಯನ್ನು ಹೇಳಿದರು. ಇನ್ನು 'ಮಂಜರೀ' ಎಂಬ ಗ್ರಂಥದಲ್ಲಿ ಮೇಲಿನ ಮೂಲದಲ್ಲಿ ತೋರಿಸಿದ ಶ್ಲೋಕಗಳಿಂದ ಹೇಳಿದಂತೆ, ಮಾನುಷವರ್ಷ ಮಾನದಿಂದ ಕಲ್ಪವನ್ನು ಗಣಿತ ದಿಂದ ತಿಳಿಸುತ್ತಾರೆ. 'ಪ್ರಥಮ' ಈ ಪದ್ಯದಿಂದ.

ಅರೆ ಸಂಖ್ಯೆಗಳನ್ನು ಟೀಕಾಕಾರರು ತಾವೇ ಬರೆದಿರುವುದರಿಂದ ಮತ್ತೆ ಇಲ್ಲಿ ಅದನ್ನು ಬರೆಯುವ ಅವಶ್ಯಕತೆ ಇರುವುದಿಲ್ಲ. ॥59॥

### 5. ಶ್ರೀಗುರುಹೃದಯಪ್ರಕಾಶಿಕೆ:

ಪ್ರಥಮವೆಂಬ ಕೃತಯುಗಕ್ಕೆ ಮನುಷ್ಯಮಾನವರ್ಷಗಳು ಏಳಧಿಕ ಅರೆ ವಿಂಶತಿ ಸುಲಕ್ಷಾಷ್ಟೋತ್ತರವು ಎಂದರೆ ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ, 17,28,000. ಷಣ್ಣವತಿಮಿತ ಸಹಸ್ರದ ಲಕ್ಷದ್ವಾದಶ ದ್ವಿತೀಯ ಎಂದರೆ, ದ್ವಿತೀಯವೆಂಬ ತ್ರೇತಾಯುಗಕ್ಕೆ 12,96,000 ಮನುಷ್ಯಮಾನ ವರ್ಷಗಳು. ತ್ರಿತಯವೆಂಬ ದ್ವಾಪರಯುಗಕ್ಕೆ ಎಂಟುಲಕ್ಷದ ಚತುಷಷ್ಟಿ ಸಹಸ್ರ 8,64,000 ಮಾನವ ವರ್ಷಗಳು. ಕಲಿಯುಗಕ್ಕೆ ಇದರ ಅರ್ಧ ಎಂದರೆ 4,32,000 ಮನುಷ್ಯವರ್ಷಗಳೆಂದು ಚಿಂತಿಸುವುದು. ॥59॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಲ್ಲಿ ಪ್ರತಿಯುಗದ ಕಾಲಪರಿಮಾಣವನ್ನು ಮಾನವ ವರ್ಷಮಾನದಿಂದ ತಿಳಿಸುತ್ತಾರೆ.

2. ಮಾನವರ ಒಂದು ವರ್ಷ = ದೇವತೆಗಳ ಒಂದು ದಿನ. ಉತ್ತರಾಯಣ ದೇವತೆಗಳಿಗೆ ಹಗಲು ಮತ್ತು ದಕ್ಷಿಣಾಯನವು ರಾತ್ರಿ. ಅಂದರೆ, 360 ಮಾನವ ವರ್ಷಗಳು = ದೇವತೆಗಳ ಒಂದು ವರ್ಷ.

3. ಈ ಲೆಕ್ಕದ ಗಣತಿಯಂತೆ, ಪ್ರಥಮಯುಗವಾದ ಕೃತಯುಗದ ಕಾಲಪರಿಮಾಣ = 4,800 ದೇವಮಾನಗಳು = 4,800 × 360 = 17,28,000. ಈ ಕಾಲವನ್ನು ದಾಸರಾಯರು–**ಏಳಧಿಕವರೆ ವಿಶಂತಿ ಸುಲಕ್ಷ ಅಷ್ಟೋತ್ತರಶತ**–ಎಂದಿದ್ದಾರೆ. ಅಂದರೆ, ವಿಂಶತಿ = 20 ಅರೆ ಅದರ ಅರ್ಧ = 10. ಅದರ ಮೇಲೆ ಏಳಧಿಕ = 10 + 7 = 17 ಅಷ್ಟೋತ್ತರ = ವಿಂಶತಿ ಸಹಸ್ರ 20 + 8 = 28. ಸುಲಕ್ಷಶತ ವಿಂಶತಿ ಸಹಸ್ರ ಹದಿನೇಳು ಲಕ್ಷ + ಇಪ್ಪತ್ತೆಂಟು ಸಾವಿರ = ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ (17,28,000) ಮಾನವ ವರ್ಷಗಳು.

4. ದ್ವಿತೀಯ. ಎಂದರೆ ಎರಡನೆಯದಾದ ತ್ರೇತಾಯುಗ = 3,600 ದೇವವರ್ಷಗಳು = 3,600 × 360 = 12,96,000 ಮಾನವ ವರ್ಷಗಳು. ಈ ಕಾಲವನ್ನು ದಾಸರಾಯರು **ಷಣ್ಣವತಿಮಿತ ಸಹಸ್ರದಲಕ್ಷ** ದ್ವಾದಶ–ಎಂದಿದ್ದಾರೆ. ಅಂದರೆ, ದ್ವಾದಶಲಕ್ಷ = 12 ಲಕ್ಷ. ಷಣ್ಣವತಿ = 96 (ಷಟ್ ನವತಿ = 90 + 6) ಸಹಸ್ರ = 96 ಸಾವಿರ. ಅಲ್ಲಿಗೆ 12 ಲಕ್ಷ + 96,000 + ಹನ್ನೆರಡು ಲಕ್ಷದ ತೊಂಭತ್ತಾರು ಸಹಸ್ರ ಮಾನವ ವರ್ಷಗಳಾಗುವುವು.

5. **ತೃತೀಯಕೆ**–ಎಂದರೆ ಮೂರನೆಯ ಯುಗವಾದ ದ್ವಾಪರ ಯುಗಕ್ಕೆ 2,400 ದೇವಮಾನ ವರ್ಷಗಳು = 2,400 × 360 = 8,64,000 (ಎಂಟು ಲಕ್ಷದ ಅರವತ್ತು ನಾಲ್ಕುಸಾವಿರ) ಮಾನವ ವರ್ಷಗಳು.

ಇದನ್ನು ದಾಸರಾಯರು–**ಎಂಟು ಲಕ್ಷದಚತುರ್ಷಷ್ಟಿ ಸಹಸ್ರ** ಎಂದಿದ್ದಾರೆ. ಅಂದರೆ ಎಂಟು ಲಕ್ಷದ ಮೇಲೆ ಚತುರ್ಷಷ್ಟಿ ಸಹಸ್ರ–64 ಸಾವಿರ. ಅಂದರೆ ಎಂಟುಲಕ್ಷ + ಅರವತ್ತುನಾಲ್ಕು ಸಾವಿರ = 8,64,000 ಮಾನವ ವರ್ಷಗಳಾಗುವುವು.

6. **ಕಲಿಗೆ ಇದರ ಅರ್ಧ ಚಿಂತಿಪುದು** – ಚತುರ್ಯುಗವಾದ ಕಲಿ ಯುಗಕ್ಕೆ 1,200 ದೇವಮಾನವ ವರ್ಷಗಳು = 1200 × 360 = 4,32,000 (ದ್ವಾಪರಯುಗದ ಅರ್ಧದಷ್ಟು = 1/2 × 8,64,000)

ಜ್ಞಾನವವರ್ಗಗಳು. ಈ ರೀತಿ ಯುಗಗಳ ಕಾಲಗಣನೆಯನ್ನು ಅರಿತು ಚಿಂತಿಸ ಬೇಕೆಂಬು ತಾತ್ಪರ್ಯ. ॥59॥

## ಪದ್ಯ ೬೦

**ಮೂಲ :-**

ಮೂರಧಿಕನಾಲ್ವತ್ತುಲಕ್ಷದ ।
ಲಾರು ಮೂರಿರಡಧಿಕ ಸಾವಿರ ।
ಈರೆರಡು ಯುಗವರುಷ ಸಂಖ್ಯೆಯು ಗ್ಯೆಯಲಿನಿತಹುದು ॥
ಸೂರಿಪೆಚ್ಚಿಸೆ ಸಾವಿರದನಾ ।
ನ್ಮೂರು ಮೂವತ್ತೆರಡುಕೋಟಿ ಸ ।
ರೋರುಹಾಸನನಿಗದು ದಿವಸವೆಂಬರು ವಿಪಶ್ಚಿತರು ॥ ೬೦ ॥

**ಅವತರಣಿಕೆ :**

ಚತುರ್ಮುಖ ಬ್ರಹ್ಮದೇವರ ಒಂದು ದಿನಮಾನದ ಗಣತಿಯನ್ನು ಹೇಳು ತ್ತಾರೆ. ॥60॥

**ಪ್ರತಿಪದಾರ್ಥ :**

**ಮೂರಧಿಕ** = ಮೂರು ಹೆಚ್ಚಾಗಿರುವ, **ನಾಲ್ವತ್ತುಲಕ್ಷದ** = ನಲವತ್ತುಲಕ್ಷ. ಅಂದರೆ ನಲವತ್ತುಮೂರುಲಕ್ಷವಾಯಿತು. **ಆರುಮೂರು** = ಆರು × ಮೂರು = ಹದಿನೆಂಟು. **ಎರಡಧಿಕ** = ಅದಕ್ಕೆ ಎರಡು ಅಧಿಕವಾದ ಅಂದರೆ 18 + 2 = 20. **ಸಾವಿರ** ನಲವತ್ತಮೂರುಲಕ್ಷ + ಇಪ್ಪತ್ತು ಸಾವಿರ = 43,20,000 (ನಲವತ್ತುಮೂರುಲಕ್ಷದ ಇಪ್ಪತ್ತುಸಾವಿರ) **ಈರೆರಡುಯುಗ** = ನಾಲ್ಕುಯುಗಗಳ (ಈರೆರಡು = 2 × 2 = 4), **ವರುಷ**

**ಸಂಖ್ಯೆಯು ಗೈಯಲು** = ಒಟ್ಟು ಮಾನವವರ್ಷಗಳು ಕೂಡಿದರೆ ಆಗುವುವು. **ಇನಿತಹುದು** = ಈ ರೀತಿಯಲ್ಲಿ ಚತುರ್ಯುಗಗಳ ಒಟ್ಟು ಕಾಲಪರಿಮಾಣವು 43,20,000 ಮಾನವವರ್ಷಗಳಾಗುವುವು. **ಸೂರಿ** = ಜ್ಞಾನಿಗಳಾದವರು. **ಸಾವಿರಪೆಚ್ಚಿಸೆ** = 43,20,000 ವರ್ಷಗಳನ್ನು ಒಂದುಸಾವಿರದಿಂದ ಗುಣಿಸಿದರೆ, **ನಾನೂರುಮೂವತ್ತೆರಡುಕೋಟಿ** = 43,20,000 × 1000 = 432,00,00,00 (ನಾನ್ನೂರುಮೂವತ್ತೆರಡುಕೋಟಿ ಮಾನವ ವರ್ಷಗಳು). **ಇದು** = ಚತುರ್ಯುಗಗಳು, ಒಂದುಸಾವಿರವಾದರೆ ಈ ಕಾಲ ಪರಿಮಾಣವು, **ಸರೋರುಹಾಸನನಿಗೆ** = ಬ್ರಹ್ಮದೇವರಿಗೆ, **ಒಂದು ದಿವಸವೆಂಬುರು** = ಒಂದುದಿನದಕಾಲ ಎಂಬುದಾಗಿ ಹೇಳುತ್ತಾರೆ. **ವಿಪಶ್ಚಿತರು** = ಬ್ರಹ್ಮಜ್ಞಾನಿಗಳಾದವರು. ॥60॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಬ್ರಹ್ಮಮಾನ ಹೇಳುತಾರೆ.

40,00,000 ಮನುಷ್ಯಮಾನದಿಂದ ನಾಲ್ಕುಯುಗದ ವರುಷಗಳು ಸೇರಿ ಆಗತಕ್ಕ ವರುಷಗಳು ಇವು. ಅಧಿಕ ಮೂರುಲಕ್ಷ, ಹದಿನೆಂಟು, ಎರಡು, ಸಾವಿರ ಸೇರಿ ಇಪ್ಪತ್ತುಸಾವಿರ. ನಾಲ್ವತ್ತುಮೂರುಲಕ್ಷದ ಮ್ಯಾಲೆ ಇಪ್ಪತ್ತು ಸಾವಿರ ಅಧಿಕ ಸೇರಿಸಬೇಕು. ಅಂತು 43,20,000 ಕೃತಾದಿ ನಾಲ್ಕು ಯುಗದ ಮಾನುಷವರುಷಗಳು. ಮೊತ್ತ ಸಂಖ್ಯಾ ಮಾಡಿದರೆ ಈ ಪ್ರಕಾರ ನಾಲ್ವತ್ತುಮೂರುಲಕ್ಷದ ಇಪ್ಪತ್ತುಸಾವಿರದ ಸಂಖ್ಯಾವರುಷಗಳಿಂದ ಯುಕ್ತವಾಗಿದೆ. ಈ ನಾಲ್ಕುಯುಗದ ಮೊತ್ತವನ್ನು ಸಾವಿರದಿಂದ ಜ್ಞಾನಿಗಳಾದವರು ಹೆಚ್ಚಿಸಿದರೆ, ಅಂದರೆ ಗುಣಿಸಿದರೆ ನಾನ್ನೂರುಮೂವತ್ತೆರಡುಕೋಟಿ (432,00,00,000) ವರುಷಗಳು ಬ್ರಹ್ಮದೇವರಿಗೆ. ಈ ಮ್ಯಾಲೆ ಉದ

ಹರಿಸಿದ ವರುಷಗಳು ಜ್ಞಾನಿಗಳಾದವರು ಬ್ರಹ್ಮಗೆ ಒಂದು ಹಗಲು ಎಂತ ಎಣ್ಣುತ್ತಾರೆ. ॥60॥

2. ಭಾವಪ್ರಕಾಶಿಕೆ :-

ನಾಲ್ಕುಯುಗಗಳ ವರ್ಷಸಂಖ್ಯೆಯನ್ನು ಒಟ್ಟುಗೂಡಿಸಿದರೆ 43,20,000 ವರ್ಷಗಳಾಗುವುವು. "ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿನಮುಚ್ಯತೆ" ಎಂಬ ಪ್ರಮಾಣಾನುಸಾರ 4 ಯುಗಗಳೂ. ಒಂದು ಸಹಸ್ರಾವರ್ತಿಯಾದರೆ ಬ್ರಹ್ಮದೇವರಿಗೆ ಒಂದು ಹಗಲು ಆಗುವುದು. ಮತ್ತು ಅಷ್ಟು ಆದರೆ ಒಂದು ರಾತ್ರಿಯಾಗುವುದು. ಅಂತೂ 4 ಯುಗಗಳೂ. 2000 ಸಲ ತಿರುಗಿ ಬಂದರೆ ಬ್ರಹ್ಮದೇವರಿಗೆ 1 ದಿವಸವೆಂದರ್ಥ. ಬ್ರಹ್ಮದೇವರ ದಿವಸ ಒಂದಕ್ಕೆ ಮನುಷ್ಯಮಾನದ ವರ್ಷಗಳು ಎಷ್ಟೆಂದರೆ 4 ಯುಗಗಳ ಒಟ್ಟು ವರ್ಷಗಳು 43,20,000. ಇದನ್ನು 1000 ದಿಂದ ಗುಣಕಾರ ಮಾಡಲು (432,00,00,000) ನಾನೂರಮೂವತ್ತೆರಡುಕೋಟಿ ವರ್ಷಗಳಾಗುವವು. ಈ ವರ್ಷಸಂಖ್ಯೆಯು ಬ್ರಹ್ಮದೇವರಿಗೆ ಹಗಲು ಎಂಬ ತಾತ್ಪರ್ಯ. ॥60॥

3. ಭಾವದರ್ಪಣ :-

"ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿನಮುಚ್ಯತೇ" ಎಂಬೋ ವಚನಾನುಸಾರ ಮೇಲ್ಕಂಡ ಮಾನಾತ್ಮಕ ಯುಗಗಳು ಸಹಸ್ರಾವರ್ತಿ ತಿರುಗಿದರೆ ಬ್ರಹ್ಮದೇವರಿಗೆ ಒಂದು ಹಗಲೆಂತ ಹೇಳುತ್ತದೆ। ಅದಕ್ಕೆ ಮನುಷ್ಯಮಾನ ನಾನೂರಮೂವತ್ತೆರಡುಕೋಟಿ ವರುಷವೆಂದು ದಾಸಾರ್ಯರು ಹೇಳುತ್ತಾರೆ। ಮೂರಧಿಕ। ಸೂರಿ ಎಂದರೆ ಸೂರ್ಯ ಎಂದರ್ಥ. ಆತಗೆ ಕಿರಣ ಸಹಸ್ರವಾದ್ದರಿಂದ ಸೂರಿ ಪೆಟ್ಟಿಸಲು ಎಂದರೆ ಸಹಸ್ರಾವರ್ತಿ ಗುಣಿಸಲು ಎಂಬರ್ಥ. ॥60॥

4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :

ಉಕ್ತಂ ಕ್ರೋಡೀಕರೋತಿ॥ ಮೂರೇತ॥ ಆರು, ಮೂರು, ಎರಡು
20 ಪೆಟ್ಟಿಸೆ॥ ಮಂಜರ್ಯಾಂ ಸ್ಪಷ್ಟಂ॥ ನಾನೂರುಮೂವತ್ತೆರಡುಕೋಟಿ

ವರುಷಾಣಾಂ (20) ಸಹಸ್ರ ನ್ಯೂನೇ ತಸ್ಯಮನೂ: ಸಂಧಿಕಾಲ ಮೇಲನಮ್ ಪ್ರಥಮಮನೂ: 1500. ದ್ವಿತೀಯಮನೂ: 1600, ತೃತೀಯಮನೂ: 1500, ಚತುರ್ಥಮನೂ: 1500, ಪಂಚಮಮನೂ: 1500, ಷಷ್ಠ ಮನೂ: 1500, ಸಪ್ತಮಮನೂ: 1400, ದಶಮಮನೂ: 1400, ಏಕಾದಶ ಮನೂ: 1400, ದ್ವಾದಶಮನೂ: 1400, ತ್ರಯೋದಶಮನೂ: 1400, ಚತುರ್ದಶಮನೂ: 1600.

ಅಧಿಕಂ ಶ್ರೀ ತೃತೀಯ ತಾತ್ಪರ್ಯೇದ್ರಷ್ಟನ್ಯಮ್॥ ಸಂಧ್ಯಾಪಂಚದ ಶೈವಂ ತಾ: ಯುಕ್ತಾ: ಮನ್ವಂತರಾಬ್ದಕೈ:॥ ಕೃತ್ಸೈವಂ ಜ್ಞಾಯತೇ ಯತ್ರ ನ್ಮಹಾ ಯುಗಸಹಸ್ರಕಮ್॥ ಪಿತಾಮಹದಿನಂ ತ್ವೇಕತ್ತಾವತೀ ರಾತ್ರಿರೇವಚ॥ ಸಾ ಹಿ ಕಲ್ಪ ಇತಿ ಪ್ರೋಕ್ತಾ ತಚ್ಛತ ತ್ರಯಷಷ್ಟಿಕಮ್॥ ವರ್ಷಂ ಬ್ರಾಹ್ಮಮಿತಿ ಪ್ರೋಕ್ತಂ ತಚ್ಛತಂ ಪರಮುಚ್ಯತೇ॥ ತದರ್ಧಂ ತು ಪರಾರ್ಧಂ ಸ್ಯಾತ್ ಪಂಚಾಶದ್ ಬ್ರಹ್ಮವಾರ್ಷಿಕಮ್॥ ಪರಮಾಯು: ಬ್ರಾಹ್ಮಣ: ಸ್ಯಾತ್ ತದತೀತೇ ಚ ತಲ್ಲಯ: ॥60॥

## ಕನ್ನಡಾರ್ಥ

ಇಲ್ಲಿ ತಿಳಿಯಬೇಕಾದ ಹೆಚ್ಚಿನ ವಿಷಯಗಳನ್ನು ಭಾಗವತ ತೃತೀಯ ಸ್ಕಂಧ ತಾತ್ಪರ್ಯದಲ್ಲಿ ತಿಳಿಯಬೇಕು.

ಮನ್ವಂತರ ವರ್ಷಗಳಿಂದ ಸಹಿತವಾದರೆ 15 ಯುಗಗಳಾಗುವುವು. ಹೀಗೆ ಮೇಳನದಿಂದ ಸಾವಿರ ಮಹಾಯುಗಗಳು ಪಿತಾಮಹನ ಒಂದುದಿನ (ಹಗಲು) ಎಂದು ಗೊತ್ತಾಗುತ್ತದೆ. ಇದರಷ್ಟೇ ರಾತ್ರಿಮಾನ. ಇದಕ್ಕೆ ಕಲ್ಪವೆಂದು ಹೆಸರು. ಈ 360 ದಿನಗಳು ಸೇರಿದರೆ ಬ್ರಹ್ಮಮಾನದ ಒಂದು ವರ್ಷ. ನೂರುವರ್ಷಗಳ ಕಾಲಕ್ಕೆ "ಪರ"ವೆನ್ನುತ್ತಾರೆ. ಅರ್ಧಪರಕ್ಕೆ (50 ವರ್ಷಕ್ಕೆ) ಪರಾರ್ಧವೆಂದು ಕರೆಯುತ್ತಾರೆ. ಹೀಗೆ ಪರಾಂತ್ಯಕಾಲವೇ ಬ್ರಹ್ಮದೇವರ ಪರಮಾಯುಷ್ಯ. ಪರಕಾಲವು ಮುಗಿಯುವಾಗ ಬ್ರಹ್ಮಲಯ ವಾಗುತ್ತದೆ. ॥60॥

5. ಶ್ರೀಗುರುಹೃದಯಪ್ರಕಾಶಿಕೆ :

ಈ ನಾಲ್ಕುಯುಗವೂ ಸೇರಿದರೆ ಮನುಷ್ಯಮಾನವರ್ಷಗಳು. ಮೂರಧಿಕ ನಾಲ್ವತ್ತುಲಕ್ಷದ ಆರುಮೂರೆರಡಧಿಕಸಾವಿರ 43,20,000. ಈ ನಾಲ್ಕು ಯುಗವೂ ಒಂದುಸಾವಿರಸಲ ತಿರುಗಿದರೆ ಬ್ರಹ್ಮದೇವರಿಗೆ ಒಂದು ದಿವಸ. ಅದು ಮನುಷ್ಯಮಾನದಲ್ಲಿ 4,32,00,00,000 ವರ್ಷಗಳಾಗುವುವು ಎಂಬುದಾಗಿ ಜ್ಞಾನಿಗಳು ಹೇಳುತ್ತಾರೆ. ॥60

## ಸರ್ವವ್ಯಾಖ್ಯಾನಸಾರಸಂಗ್ರಹ

1. ಕೃತಯುಗದ ಕಾಲಪರಿಮಾಣ = 17,28,000 ಮಾನವವರ್ಷಗಳು
ತ್ರೇತಾಯುಗದ ಕಾಲಪರಿಮಾಣ = 12,96,000 ಮಾನವವರ್ಷಗಳು
ದ್ವಾಪರಯುಗದ ಕಾಲಪರಿಮಾಣ = 8,64,000 ಮಾನವವರ್ಷಗಳು
ಕಲಿಯುಗದ ಕಾಲಪರಿಮಾಣ = 4,32,000 ಮಾನವವರ್ಷಗಳು

ಚತುರ್ಯುಗದ ಒಟ್ಟು ಕಾಲಪರಿಮಾಣ 43,20,000

4 ಯುಗಗಳ ಸಮೂಹಕ್ಕೆ ಒಂದು ಮಹಾಯುಗವೆನ್ನುವರು.
ಅಂದರೆ ಒಂದು ಮಹಾಯುಗ = 43,20,000 ಮಾನವವರ್ಷಗಳು.
= ನಾಲ್ವತ್ತುಮೂರುಲಕ್ಷದ ಇಪ್ಪತ್ತುಸಾವಿರ ಮಾನವವರ್ಷಗಳಾಗುವುವು.

ಈ ಸಂಖ್ಯೆಯನ್ನು ದಾಸರಾಯರು ಮೂರಧಿಕ ನಾಲ್ವತ್ತುಲಕ್ಷದ ಆರುಮೂರೆರಡಧಿಕಸಾವಿರ ಎಂದಿದ್ದಾರೆ.

ಅಂದರೆ ಮೂರಧಿಕ ನಾಲ್ವತ್ತುಲಕ್ಷ = 43,00,000 (ನಾಲ್ವತ್ತುಮೂರುಲಕ್ಷ)
ಆರುಮೂರೆರಡಧಿಕಸಾವಿರ = (18+2) = 20,000 (ಇಪ್ಪತ್ತುಸಾವಿರ)

ಒಟ್ಟು = 43,20,000 ಆಗುವುದು

2. ಈರೆರಡು ಯುಗವರುಷ–

ಈರೆರಡು $= 2 \times 2 = 4$. ಅಂದರೆ ಚತುರ್ಯುಗಗಳ ಒಟ್ಟು ಕಾಲಪರಿಮಾಣ.

3. ಸೂರಿ ಪೆಚ್ಚಿಸೆ–

'ಸೂರಿ' ಎಂದರೆ ಸೂರ್ಯ ಎಂದರ್ಥ ಮಾಡಬೇಕು (ಜ್ಞಾನಿಗಳೆಂದು ಶ್ರೀಸಂಕರ್ಷಣ ಒಡೆಯರ ವಾಖ್ಯಾನದಲ್ಲಿ ಕೊಟ್ಟಿದೆ. ಆದರೆ "ವಿಪಶ್ಚಿತರು" ಎಂಬ ಶಬ್ದವನ್ನು ಪ್ರಸಕ್ತ ಪದ್ಯದಲ್ಲಿಯೇ ದಾಸರಾಯರು ಉಪಯೋಗಿಸಿದ್ದಾರೆ).

ಅಂದರೆ 43,20,000 ಮಾನವವರ್ಷಗಳನ್ನು 1000 ದಿಂದ ಗುಣಿಸಿದರೆ (ಸೂರ್ಯನ ಕಿರಣಗಳು 1000. ಈ ದೃಷ್ಟಿಯಿಂದ ಸಂಖ್ಯಾಸಂಕೇತ ಸೂರಿ ಎಂದರೆ 1000) 432,0000000 (ನಾನೂರುಮೂವತ್ತೆರಡು ಕೋಟಿ ವರ್ಷಗಳಾಗುವುವು).

4. ಅಂದರೆ ಚತುರ್ಯುಗಗಳು ಒಂದುಸಾವಿರಸಾರಿ ಆದರೆ ಬ್ರಹ್ಮದೇವರಿಗೆ (ಸರೋರುಹಾಸನನಿಗೆ) ಒಂದು ಹಗಲು. ಅಷ್ಟೇ ಆದರೆ ಒಂದು ರಾತ್ರಿ. ಅಂದರೆ ಬ್ರಹ್ಮದೇವರ ದಿನಮಾನ = ಚತುರ್ಯುಗಗಳು 2000 ಸಾರಿ ಆಗುವುದು. ॥60॥

## ಪದ್ಯ ೬೧

ಮೂಲ :

ಶತಧೃತಿಗೆ ಈ ದಿವಸಗಳು ತ್ರಿಂ ।
ಶತಿಯು ಮಾಸದ್ವಾದಶಾಬ್ದವು ।
ಶತವೆರಡರೊಳು ಸರ್ವಜೀವೋತ್ಪತ್ತಿ ಸ್ಥಿತಿ ಲಯವು ॥
ಶ್ರುತಿಸ್ಮೃತಿಗಳು ಪೇಳುತಿಹುವ ।
ಚ್ಯುತಗೆ ನಿಮಿಷವಿದೆಂದು ಸುಖಶಾ ।
ಶ್ವತಗೆ ಪಾಸಟಿಯುಂಬರೆ ಬ್ರಹ್ಮಾದಿ ದಿವಿಜರನು ॥ ೬೧ ॥

**ಪ್ರತಿಪದಾರ್ಥ :-**

**ಶತಧೃತಿಗೆ** = ಬ್ರಹ್ಮದೇವನಿಗೆ. **ಈ ದಿವಸಗಳು** = ಪೂರ್ವೋಕ್ತ ಹಗಲು ಮತ್ತು ರಾತ್ರಿ ಸೇರಿ ಆಗುವ ದಿವಸಗಳು, **ತ್ರಿಂಶತಿಯಾ** – ಮೂವತ್ತಾದರೆ, **ಮಾಸ** = ಒಂದು ತಿಂಗಳಾಯ್ತು. **ದ್ವಾದಶ** = ಇಂತಹ ಹನ್ನೆರಡು ತಿಂಗಳಾದರೆ, **ಅಬ್ದವು** ಒಂದು ವರ್ಷವಾಗುತ್ತದೆ. **ಶತವು** = ಇಂತಹ ವರ್ಷಗಳು ಒಂದುನೂರಾದರೆ, **ಎರಡರೊಳು** = ಬ್ರಹ್ಮದೇವರ 100 ವರ್ಷ ಆಯುಃಪ್ರಮಾಣದಲ್ಲಿ ಐವತ್ತುವರ್ಷ ಪೂರ್ವಾರ್ಧವೆಂದೂ, ಉಳಿದ ಐವತ್ತು ವರ್ಷಗಳು ಉತ್ತರಾರ್ಧವೆಂದೂ ಎರಡು ಪ್ರಕಾರ. ಈ ಎರಡರೊಳಗೆ **ಸರ್ವಜೀವ** = ಪೂರ್ವಾರ್ಧದಲ್ಲಿ ಸೂಕ್ಷ್ಮಶರೀರಗಳಿಂದ ಅಂಡದ ಹೊರಗೆ ಸರ್ವಜೀವರಸೃಷ್ಟಿ, ಪರಾರ್ಧದಲ್ಲಿ ಅಂದರೆ ಒಳಗೆ ಸರ್ವ ಜೀವರಿಗೆ ಸ್ಥೂಲಶರೀರ ದ್ವಾರಾ ಸೃಷ್ಟಿ. **ಉತ್ಪತ್ತಿ** = ಈ ರೀತಿ ಸೃಷ್ಟಿಯು, **ಸ್ಥಿತಿ** = ಸೃಷ್ಟರಾದ ಸರ್ವಜೀವರ ಪಾಲನೆ–ಸಾಧನಾದಿಗಳನ್ನು ಮಾಡಿಸುವುದು. **ಲಯವು** = ಅಂತ್ಯದಲ್ಲಿ ನಾಶವು. **ಶ್ರುತಿಸ್ಮೃತಿಗಳು** = ಈ ರೀತಿ ಶ್ರೀಪರಮಾತ್ಮನು ಸೃಷ್ಟ್ಯಾದಿ ಜಗದ್ವ್ಯಾಪಾರಗಳನ್ನು ಲೀಲಾಜಾಲವಾಗಿ ನಡೆಯಿಸುತ್ತಾನೆ ಎಂದು ವೇದಗಳೂ ತದನುಸಾರಿ ಸ್ಮೃತಿಗಳೂ, **ಪೇಳುತಿಹುವು** = ಹೇಳುತ್ತಿವೆ. **ಅಚ್ಯುತಗೆ** ಚ್ಯುತಿರಹಿತನಾದ ಶ್ರೀಪರಮಾತ್ಮನಿಗೆ, **ನಿಮಿಷವಿದೆಂದು** ಈ ಬ್ರಹ್ಮನ ಪೂರ್ಣಾಯುಷ್ಯಕಾಲವು ಒಂದು ನಿಮಿಷವೆಂದು (ರೆಪ್ಪೆ ತೆಗೆಯುವುದರಿಂದ ಸೃಷ್ಟಿ–ರೆಪ್ಪೆ ಮುಚ್ಚುವುದರಿಂದ ಲಯ) ಇದೂ ಸಹ ಔಪಚಾರಿಕವೇ. ಕಾಲಾತೀತನಾದ ಶ್ರೀಪರಮಾತ್ಮನಿಗೆ ಇದು **ಕಾಲಪರಿಮಾಣವೇ** ಅಲ್ಲ. **ಸುಖಶಾಶ್ವತಗೆ** = ಸದಾನಂದನಾದ ಶ್ರೀಹರಿಗೆ. **ಪಾಸಟಿಯೆಂಬರೆ** = ಸೃಷ್ಟ್ಯಾದಿವ್ಯಾಪಾರಗಳಿಂದ ಶ್ರಮವಾಗಲೀ ಆ ಶ್ರಮ ಪರಿಹಾರಾರ್ಥವಾಗಿ ಪ್ರಳಯದಲ್ಲಿ ವಟಪತ್ರಶಾಯಿಯಾಗುವುದಾಗಲೀ ಆಗುತ್ತದೆ ಎನ್ನುತ್ತಾರೆಯೇ ? **ಬ್ರಹ್ಮಾದಿ ದಿವಿಜರನು** = ಬ್ರಹ್ಮಾದಿ ತೃಣಾಂತ ಸರ್ವಜೀವರ ಸೃಷ್ಟಿ, ಸ್ಥಿತಿ, ಲಯಕಾರ್ಯಗಳನ್ನು ಲೀಲಾಜಾಲವಾಗಿ ನಡೆಸುತ್ತಾನೆ, ಇದರಿಂದ ಅವನಿಗೆ ಶ್ರಮವಿಲ್ಲ. ಇದು ಅವನ ಸಹಜವಾದ ವ್ಯಾಪಾರ. ॥61॥

# ವ್ಯಾಖ್ಯಾನಗಳು

## 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಪರಮಾತ್ಮಗೆ ನಿಮಿಷಕಾಲವಿಚಾರ ಹೇಳತಾರೆ.

ಬ್ರಹ್ಮದೇವರಿಗೆ ಪೂರ್ವೋಕ್ತ ಹಗಲು ಪರಿಮಿತಿಯಿಂದ ಅಷ್ಟೇ ಪರಿಮಿತಿ ಕಾಲ ರಾತ್ರಿ ಆಗಿ ಒಂದು ದಿವಸ. ಈ ದಿನಗಳು ಮೂವತ್ತಾದರೆ ಒಂದು ತಿಂಗಳಾಗತದೆ. ಇಂಥಾ ತಿಂಗಳು ಹನ್ನೆರಡಾದರೆ ಒಂದು ವರುಷವಾಗತದೆ. ಇಂಥಾ ವರುಷಗಳು ನೂರಾದರೆ ಬ್ರಹ್ಮಗೆ ಆಯುಸ್ಸು ಸಮಾಪ್ತಿಯಾಗಿ ದೇಹ ತ್ಯಾಗಮಾಡತಾರೆ. ಬ್ರಹ್ಮನ ನೂರುವರುಷದಲ್ಲಿ ಐವತ್ತುವರುಷ ಪೂರ್ವಾರ್ಧ ವೆಂತಲೂ, ಐವತ್ತುವರುಷ ಪರಾರ್ಧ ಎಂತಲೂ, ಈ ಎರಡರೊಳಗೆ, ಪೂರ್ವಾರ್ಧದಲ್ಲಿ ಸೂಕ್ಷ್ಮಶರೀರಗಳಿಂದ, ಅಂಡದ ಹೊರಗೆ ಸರ್ವಜೀವರ ಬ್ರಹ್ಮಾಂಡಸೃಷ್ಟಿ. ಪರಾರ್ಧದಲ್ಲಿ ಅಂಡದ ಒಳಗೆ ಬ್ರಹ್ಮದೇವರಸೃಷ್ಟಿ, ಸರ್ವಪ್ರಾಣಿಗಳಿಗೆ ಸ್ಥೂಲಶರೀರ, ಆವರವರ ಪಾಲನಿ ಮಾಡಿಸೋಣ, ಸಾಧನ ಮಾಡಿಸೋಣ, ಈ ಪ್ರಕಾರ ಬ್ರಹ್ಮಾದಿ ಜೀವರನ್ನ ಸೃಷ್ಟಿ, ಸ್ಥಿತಿ, ಅಂತ್ಯದಲ್ಲಿ ಪ್ರಳಯ ಐದಿಸೋಣ ಈ ಪ್ರಕಾರ ಪರಮಾತ್ಮ ನಡಸತಾನೆ, ಎಂತ ಶ್ರುತಿ ಸ್ಮೃತಿಗಳು ಹೇಳತಾ ಅವೆ. ಈ ನೂರುವರುಷಕಾಲವು ಚ್ಯುತಿರಹಿತನಾದ ಪರಮಾತ್ಮಗೆ ನಿಮಿಷಕಾಲವೆಂದು ಹೇಳತದೆ ಎಂದರೆ, ರೆಪ್ಪಿ ಮುಚ್ಚೋಣದ ರಿಂದ ಲಯ, ರೆಪ್ಪಿ ತೆಗಿಯೋಣದರಿಂದ ಸೃಷ್ಟಿ ಅಂದರೆ, ಇದಾದರೂ ಔಪ ಚಾರಿಕವೇ ಹೊರ್ತು ಪರಮಾತ್ಮಗೆ ಕಾಲನೇಮವಿಲ್ಲ. ಸತತ ಸುಖಿಯಾದ ಶ್ರೀಶಗೆ ಸೃಷ್ಟ್ಯಾದಿವ್ಯಾಪಾರಗಳಿಂದ ಆಯಾಸವಾಗಿ, ಈ ಶ್ರಮಪರಿಹಾರಾರ್ಥ ಪ್ರಳಯದಲ್ಲಿ ವಟಪತ್ರಶಾಯಿ ಆದನೆಂತ ಅನಬಾರದೋ ? ಎಂದಿಗೂ ಅನಕೂಡದು. ನಿರ್ದೋಷನಾದ ಹರಿಗೆ ಸೃಷ್ಟ್ಯಾದಿ ಕಾರ್ಯಗಳು ಲೀಲ ಎಂತ ತಾತ್ಪರ್ಯ. ॥61॥

*

**2. ಭಾವಪ್ರಕಾಶಿಕೆ :–**

ಬ್ರಹ್ಮದೇವರಿಗೆ ಮೇಲೆ ಹೇಳಿದ ಸಂಖ್ಯೆಯುಳ್ಳ ದಿವಸಗಳು 30 ಅಂದರೆ 1 ತಿಂಗಳು. ತಿಂಗಳು 12ಕ್ಕೆ 1 ವರ್ಷವು. ಇಂತಹಾ ವರ್ಷಗಗು 100 ಬ್ರಹ್ಮದೇವರ ಪರಮಾಯುಸ್ಸೆಂದು ತಾತ್ಪರ್ಯ. ಈ ಬ್ರಹ್ಮಾಯುಷ್ಯದಲ್ಲಿ ಅಂದರೆ ಬ್ರಹ್ಮದೇವರ 100 ವರ್ಷಗಳಲ್ಲಿ ಸೃಷ್ಟಿ, ಸಂರಕ್ಷಣೆಯಾಗುವವು. ಬ್ರಹ್ಮಮಾನವರ್ಷಗಳು 100 ಆದ ಮೇಲೆ ಬ್ರಹ್ಮಕಲ್ಪವು ಮುಗಿದು ಮಹಾ ಪ್ರಳಯವಾಗುವದು. ಆದರ ಕಾಲವು 100 ವರ್ಷಗಳು. ಒಟ್ಟು 200 ವರ್ಷಗಳಿಗೆ ಸೃಷ್ಟಿ, ಸ್ಥಿತಿ. ಪ್ರಳಯವಾಗುವವು. ಪರಮಾತ್ಮನಿಗೆ ಬ್ರಹ್ಮ ಕಲ್ಪವು ಒಂದು ನಿಮಿಷವೆಂದು ಶ್ರುತಿ, ಸ್ಮೃತಿಗಳು ಹೇಳುತ್ತವೆ. ಇಂತಹಾ ಮಹಾಮಹಿಮೆಯುಳ್ಳ ಪರಮಾತ್ಮನಿಗೆ ಸಮರನ್ನಾಗಿ ಹೋಲಿಸಲು ಬ್ರಹ್ಮಾದಿಗಳು ಯಾರೂ ಸಾಟಿಯಲ್ಲವೆಂಬ ತಾತ್ಪರ್ಯ. ||61||

**3. ಭಾವದರ್ಪಣ :–**

ಎಂಟುನೂರ ಅರವತ್ತುನಾಲ್ಕುಕೋಟಿ ವರ್ಷವೆಂಬುವದೆ ಒಂದು ದಿವಸ। ಇಂಥ ಮೂವತ್ತು ದಿವಸಕ್ಕೆ ಒಂದು ಮಾಸ. ಇಂಥ ದ್ವಾದಶಮಾಸವಾದರೆ ಒಂದು ವರ್ಷ. ಇಂಥಾದೇ ಶತವರ್ಷವಾದರೆ ಬ್ರಹ್ಮದೇವರಿಗೆ ಪೂರ್ಣ ಆಯುಸ್ಸು ಎಂದೆನಿಸಿಕೊಂಡಿತು. ಇಂಥ ಶತವರ್ಷ ಭಗವಂತನ ಉದರದಲ್ಲಿ ಇರತಕ್ಕದ್ದು. ಇಂಥ ಕಾಲವು ಶ್ರೀಪರಮಾತ್ಮಗೆ ಒಂದು ನಿಮಿಷ ಕೂಡ ಅಲ್ಲವೆಂದು ಹೇಳುತ್ತಾರೆ. ಶತಧೃತಿ। ತದುಕ್ತಂ ಮಹಾಭಾರತನಿರ್ಣಯೇ। "ವೀಕ್ಷಾ ಬಭೂವ ಪರನಾಮ ನಿಮೇಷಕಾಂತ" ಇತಿ। ಶತಧೃತಿ–ಚತುರ್ಮುಖ ಬ್ರಹ್ಮನು. ಪಾಸಟಿ–ಸಾದೃಶ್ಯ॥ ||61||

**4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :–**

"ಶತ" ಇತಿ॥ "ಸರ್ವೇ ನಿಮೇಷಾ ಜಜ್ಞಿರೇ" ಇತಿ ಶ್ರುತಿಃ॥ ಉಕ್ತಾಃ ಸ್ಮೃತಯಃ॥ "ಪಾಸಟಿ" ಸರಿ. ಏವಂ ಶತಂ ಸೃಷ್ಟಿಃ, ಶತಂ ಪ್ರಲಯಾಃ ಇತ್ಯರ್ಥಃ॥ ||61||

### ಕನ್ನಡಾರ್ಥ

"ಸರ್ವೇ ನಿಮೇಷಾ ಜಜ್ಞಿರೇ" ಈ ಮುಂತಾದ ಶ್ರುತಿಗಳು. ಅದರಂತೆ ವಿಷ್ಣುರಹಸ್ಯ, ಭಾಗವತತಾತ್ಪರ್ಯದಲ್ಲಿ ಉದಾಹೃತ ಪ್ರಮಾಣ, ಗೀತಾ ಮುಂತಾದ ಆಗಮಗಳು ಸ್ಮೃತಿಗಳು ಹೀಗೆ ತಿಳಿಯಬೇಕು. ಶತಸೃಷ್ಟಿ ಶತಪ್ರಲಯಗಳನ್ನು ತಿಳಿಯಬೇಕು. ॥61॥

### 5. ಶ್ರೀಗುರುಹೃದಯಪ್ರಕಾಶಿಕೆ :

ಶತಧೃತಿ ಎಂಬ ಬ್ರಹ್ಮದೇವರಿಗೆ ಇಂಥಾ ದಿವಸ ಮೂವತ್ತಾದರೆ ಒಂದು ತಿಂಗಳು. ಅದು ಹನ್ನೆರಡಾದರೆ ಒಂದುವರ್ಷ. ಆ ವರ್ಷಗಳು ನೂರಾದರೆ ಸೃಷ್ಟಿಕಾಲ ಪೂರ್ತಿಯಾಯಿತು. ತಿರಗೂ ನೂರುವರ್ಷವಾದರೆ ಪ್ರಳಯಕಾಲ ತೀರಿತು. ಇದರೊಳಗೆ ಸರ್ವಜೀವೋತ್ಪತ್ತಿ. ಸ್ಥಿತಿ ಲಯಗಳು ಸಹ ಆಗುವವು. ಶ್ರುತಿ ಸ್ಮೃತಿಗಳು ಈ ಬ್ರಹ್ಮಮಾನ ಇನ್ನೂರುವರ್ಷವನ್ನು ಅಚ್ಯುತನೆಂಬ ಅನಂತನಾದ ದೇವರಿಗೆ ಒಂದು ನಿಮಿಷಕಾಲದ ಹಾಗೆಂದು ಹೇಳುವವು. ಆದ್ದರಿಂದ ಶಾಶ್ವತಸುಖನಾದ ದೇವರಿಗೆ ಬ್ರಹ್ಮಾದಿ ಜೀವರನ್ನು ಪಾಸಟಿ ಎಂದರೆ, ಪ್ರಸಂಗವುಳ್ಳ ಸಂಗಡಿಗರು, ಸಮಾನರು ಎಂದು ಹೇಳುವು ದುಂಟೇ, ಸಮರೆಂದು ಎಂದಿಗೂ ಹೇಳಬಾರದು ಎಂದರ್ಥ. ಪ್ರಸಂಗಶಬ್ದ, ಪ್ರಸಂಗಡವೆಂದು ತದ್ಭವವಾಗಿ ಎತ್ವಾದೇಶ ಬಂದು ಪಾಸಟಿ ಎಂಬುದಾಗಿ ಆಯಿತು. ಯಾಸಟ್ಟಿ ಎಂಬ ಗ್ರಾಮ್ಯಶಬ್ದದ ಹಾಗೆ ಎಂದು ತಿಳಿಯ ಬೇಕು. 61॥

## ಸರ್ವವ್ಯಾಖ್ಯಾನಸಾರಸಂಗ್ರಹ

### 1. ಶತಧೃತಿಗೆ–

ಸಾಧನಾತ್ಪೂರ್ವ 100 ಕಲ್ಪಗಳು, ಸಾಧನಾನಂತರ 100 ಕಲ್ಪಗಳು, ಸಾಧನಮಾಡಿ ಬ್ರಹ್ಮಪದವಿಗೆ ಬರುವ ಬ್ರಹ್ಮದೇವರಿಗೆ **ಶತಾನಂದರೆಂದು**

ಹೆಸರು. ಈ ಅರ್ಥವನ್ನೇ ಶತಧೃತಿ ಶಬ್ದವು ಸೂಚಿಸುವುದು. ಶತಧೃತಿ ನಾಮಕರು ಚತುರ್ಮುಖ ಬ್ರಹ್ಮದೇವರು.

2. ಅಂದರೆ, ಶತಧೃತಿಗೆ ಹಿಂದಿನ ಪದ್ಯದಲ್ಲಿ ತಿಳಿಸಿದ ಕಾಲಮಾನವು. ಒಂದು ದಿವಸವೆನಿಸುವುದು. ಅಂತಹ 30 ದಿನಗಳಿಗೆ (ತ್ರಿಂಶತಿ) ಬ್ರಹ್ಮ ದೇವರಿಗೆ ಒಂದು ಮಾಸವು. ಅಂತಹ 12 ಮಾಸಗಳು ಒಂದು ವರ್ಷವೆನಿಸು ವುದು. (ಬ್ರಹ್ಮನ ಕಲ್ಪದಲ್ಲಿ), (ದ್ವಾದಶಾಬ್ದವು).

ಅಂತಹ 100 ವರ್ಷಗಳು ಬ್ರಹ್ಮದೇವರ ಪರಮಾಯಸ್ಸು ಒಂದು ಬ್ರಹ್ಮಕಲ್ಪ.

3. ಬ್ರಹ್ಮದೇವರ 100 ವರ್ಷಗಳಲ್ಲಿ ಪ್ರಥಮಪರಾರ್ಧ = 50 ವರ್ಷಗಳು. ದ್ವಿತೀಯ ಪರಾರ್ಧ = 50 ವರ್ಷಗಳು.

ಈ ಎರಡರೊಳು ಸರ್ವಜೀವರ ಉತ್ಪತ್ತಿ ಅಂದರೆ ಸೃಷ್ಟಿ ನಡೆಯು ವುದು. ಅಂಡದ ಹೊರಗೆ ಸೂಕ್ಷದೇಹವುಳ್ಳ ಜೀವರ ಸೃಷ್ಟಿ. ತದನಂತರ ಅಂಡದ ಒಳಗೆ ಸ್ಥೂಲಸೃಷ್ಟಿ. ಅಂತೆಯೇ ಸೃಷ್ಟರಾದ ಸಕಲಜೀವರ ಪಾಲನೆ ಮತ್ತು ಸಾಧನಾದಿಗಳು (ಸ್ಥಿತಿಕಾಲ) ನಡೆಯುವುವು. ನಂತರ ಪ್ರಳಯ ರೂಪವಾದ ನಾಶ.

4. ಬ್ರಹ್ಮದೇವರ ಆಯುರ್ಮಾನವಾದ 100 ವರ್ಷಗಳು ಶ್ರೀಪರಮಾತ್ಮನಿಗೆ ಒಂದು ಕ್ಷಣವೆನಿಸುವುದು (ರೆಪ್ಪೆ ತೆಗೆದು ಮುಚ್ಚುವಕಾಲ) ಕಾಲಾತೀತನಾದ ಶ್ರೀಹರಿಗೆ ಇದೂ ಕೇವಲ ಔಪಚಾರಿಕ. ಲೆಕ್ಕಕ್ಕೇ ಸಿಗುವು ದಿಲ್ಲ. ಅಷ್ಟು ಸೂಕ್ಷ್ಮತಮಕಾಲವೆನಿಸುವುದು.

**ಪ್ರಮಾಣ–**

ವೀಕ್ಷೌ ಬಭೂವ ಪರನಾಮ ನಿಮೇಷಕಾಂತೇ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ವಾಕ್ಯ

೫. ಶ್ರೀಪರಮಾತ್ಮನು ಅಚ್ಯುತನಾಮಕನು. ಬ್ರಹ್ಮಾದಿ ಜೀವರುಗಳಿಗೆ ಚತುರ್ವಿದನಾಶವುಂಟು. ಅಂತಹ ನಾಶ ಶ್ರೀಹರಿಗಿಲ್ಲ. ನಿತ್ಯಶಾಶ್ವತ, ಮೂರ್ತಿಯು. ಶಶ್ವದೇಕಪ್ರಕಾಶನು. ಸದಾನಂದಾತ್ಮಕನು (ಸುಖ ಶಾಶ್ವತಗೆ).

೬. ಇಂತಹ ಸುಖಶಾಶ್ವತಸ್ವರೂಪಿಗೆ ಬ್ರಹ್ಮಾದಿ ದೇವತೆಗಳು ಎಂದಿಗಾದರೂ ಸಮಾನರಾಗುವರೇ ? (ಪಾಸಟ ಎಂಬುದೆ) ಸಮಾಭ್ಯಧಿಕಶೂನ್ಯನಾದ ಆ ನಿತ್ಯಶಾಶ್ವತನಿಗೆ ಸೃಷ್ಟಿ, ಸ್ಥಿತಿ, ಲಯಾದಿ ಜಗದ್ವ್ಯಾಪಾರಗಳು ಲೀಲಾ ಮಾತ್ರ. ನಿರಾಯಾಸವಾಗಿ ನಡೆಯಿಸುವನು ಶ್ರಮವಾಗಲೀ, ಶ್ರಮ ಪರಿಹಾರಾರ್ಥವಾಗಿ ಪ್ರಳಯದಲಿ ವಟಪತ್ರಶಯನವಾಗಲೀ ಇಲ್ಲ. ಜಗದ್ವ್ಯಾಪಾರ ಅವನಿಗೆ ಸಹಜಧರ್ಮವು. ॥61॥

## ಪದ್ಯ ೬೨

ಮೂಲ :–

ಆದಿಮಧ್ಯಾಂತಗಳು ಇಲ್ಲದ ।
ಮಾಧವಗಿದುಪಚಾರವೆಂದು ಋ ।
ಗಾದಿ ವೇದಪುರಾಣಗಳು ಪೇಳುವುವು ನಿತ್ಯದಲಿ ॥
ಮೋದಮಯನಾನುಗ್ರಹವ ಸಂ ।
ಪಾದಿಸಿ ರಮಾ ಬ್ರಹ್ಮ ರುದ್ರೇಂ ।
ದ್ರಾದಿಗಳು ತಮ್ಮ ತಮ್ಮ ಪದವಿಯನೈದಿ ಸುಖಿರುವರು
॥ ೬೨ ॥

**ಅವತರಣಿಕೆ :–**

ಶ್ರೀಪರಮಾತ್ಮನಿಗೆ ಕಾಲನಿಯಮಗಳಾವೂವೂ ಇಲ್ಲ. ಕಾಲಾತೀತನಾದ ಆ ಕಮಲದಳಾಯತಾಕ್ಷನ ಅನುಗ್ರಹ ಸಂಪಾದಿಸಿ ಬ್ರಹ್ಮಾದಿಗಳು ತಮ್ಮ ತಮ್ಮ ಪದವಿ ಹೊಂದಿ ಸುಖಿಗಳಾಗಿದ್ದಾರೆ ಎಂದು ಹೇಳುತ್ತಾರೆ. ॥62॥

**ಪ್ರತಿಪದಾರ್ಥ :–**

**ಆದಿಮಧ್ಯಾಂತಗಳು** ಇಲ್ಲದ = ಕಾಲಾದಿ ಸರ್ವವಿಷಯಗಳಲ್ಲಿಯೂ ಪ್ರಾರಂಭ ಮಧ್ಯಕಾಲ ಅಂತ್ಯ ಇವುಗಳಿಲ್ಲದೇ ಶಶ್ವದೇಕಪ್ರಕಾರನಾಗಿ ಇರುವ, **ಮಾಧವಗೆ** = ಲಕ್ಷ್ಮೀಪತಿಗೆ, **ಇದು** ಪೂರ್ವೋಕ್ತ ನಿಮಿಷಕಾಲ, **ಉಪಚಾರವೆಂದು** = ಬರೀ ಔಪಚಾರಿಕವೆಂದು. **ಋಗಾದಿವೇದ** = ಋಗ್ವೇದ ಮೊದಲಾದ ಚತುರ್ವೇದಗಳು, **ಪುರಾಣಗಳು** = ಶ್ರೀವೇದವ್ಯಾಸರಿಂದ ವಿರಚಿತ ಪುರಾಣಗಳು. **ನಿತ್ಯದಲಿ** = ಸದಾ ಸರ್ವಕಾಲ, **ಪೇಳುವುವು** = ಹೇಳುತ್ತವೆ. **ಮೋದಮಯನ** = ಆನಂದಸ್ವರೂಪಿಯಾದ ಶ್ರೀಪರಮಾತ್ಮನ, **ಅನುಗ್ರಹವ ಸಂಪಾದಿಸಿ** = ಪ್ರಸಾದವನ್ನು ಸಂಪಾದನೆಮಾಡಿ. **ರಮಾ** = ಶ್ರೀಲಕ್ಷ್ಮೀದೇವಿ, **ಬ್ರಹ್ಮ** = ಚತುರ್ಮುಖ ಬ್ರಹ್ಮದೇವರು. **ರುದ್ರೇಂದ್ರಾದಿಗಳು** = ರುದ್ರದೇವರು ಇತ್ಯಾದಿ ದೇವತಾವರ್ಗ ಮತ್ತು ಮುಕ್ತಿಯೋಗ್ಯ ಚೇತನರು. **ತಮ್ಮ ತಮ್ಮ ಪದವಿಯನು ಐದಿ** = ಸ್ವಯೋಗ್ಯವಾದ ಸ್ಥಾನಗಳನ್ನು ಪಡೆದು, **ಸುಖಿಸುವರು** = ಆನಂದಿಸುವರು. ॥62॥

## ವ್ಯಾಖ್ಯಾನಗಳು

**1. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—**

ಪರಮಾತ್ಮಗೆ ಕಾಲನಿಯಮವಿಲ್ಲವೆಂತಲೂ, ಇವನ ಅನುಗ್ರಹ ಸಂಪಾದಿಸಿ ಬ್ರಹ್ಮಾದಿಗಳು ತಮ್ಮ ತಮ್ಮ ಪದ ಐದಿ ಸುಖಿಗಳಾಗಿ ಇದ್ದಾರೆಂತಲೂ ಹೇಳುತಾರೆ.

ಕಾಲಾದಿ ಸರ್ವವಿಷಯದಲ್ಲೂ ಆದಿ ಮಧ್ಯ ಅಂತಗಳು ಇಲ್ಲದೇ ಶಶ್ವದೇಕಪ್ರಕಾರನಾಗಿ ಅಪರಿಚ್ಛಿನ್ನನಾಗಿ ಅಸದೃಶನಾಗಿ ಇರುವ ಸರ್ವೋತ್ತಮನಾದ ಲಕ್ಷ್ಮೀಪತಿಯಾದ ಪರಮಾತ್ಮಗೆ ಪೂರ್ವೋಕ್ತ ನಿಮಿಷಕಾಲ ಎಂತ ಹೇಳಿದ್ದು ಇದು ಬರೀ ಔಪಚಾರಿಕವೆಂದು. ಅನಂತಾನಂತ ಬ್ರಹ್ಮಾಂಡಗಳ ಇಚ್ಛಾಮಾತ್ರದಿಂದ ನಾಶವೂ, ರಾವಣ ಕಂಸಾದಿ ದೈತ್ಯರುಗಳನ್ನ ಸಂಹಾರ ಮಾಡಿದ್ದು ಮಹಾಮಹಿಮಾ ಎಂತಲೂ ಉಚ್ಚರಿಸೋಣವು ಹ್ಯಾಂಗೆ ಔಪಚಾರಿಕವೋ ಹಾಂಗೆ, ಬ್ರಹ್ಮನ ನೂರುವರುಷ ಆಯುಸ್ಸು ದೇವರಿಗೆ ಒಂದು ನಿಮಿಷ ಕಾಲ ಎಂತ ಹೇಳೋದು ಕೇವಲ ಔಪಚಾರಿಕವೇ ಹೊರ್ತು ಸತ್ಯನಲ್ಲ. ಪರಮಾತ್ಮಗೆ ಕಾಲನಿಯಮವಿಲ್ಲವೆಂತ ಚತುರ್ವೇದ. ಶ್ರೀವೇದವ್ಯಾಸರಿಂದ ವಿರಚಿತ ಸಮಗ್ರ ಪುರಾಣಗಳು ಪ್ರತಿದಿನದಲ್ಲೂ ಹೇಳೋವಾಗಿ ಅವೆ. ಆನಂದಸ್ವರೂಪಿಯಾದ ಪರಮಾತ್ಮನ, ಇನ್ನು ಲಕ್ಷ್ಮೀದೇವೇರು ಈ ಉಭಯರ ದಯವನ್ನ ಸರ್ವಪ್ರಕಾರದಿಂದಲೂ ಹೊಂದಿ ಸದ್ಗತಿ ಐದೋವರಾಗಿದ್ದಾರೆ, ದಾರೇದರೆ ಬ್ರಹ್ಮ, ರುದ್ರ, ಇಂದ್ರ, ಇನ್ನೂ ಸಮಸ್ತ ಮುಕ್ತಿಯೋಗ್ಯರು ಸ್ವಯೋಗ್ಯವಾದ ಸ್ಥಾನಗಳನ್ನು ಪಡೆದು ಸುಖಪಡೋವರಾಗಿದ್ದಾರೆ. ಆದ್ದರಿಂದ ಬ್ರಹ್ಮಾದಿ ಕ್ಷರಜೀವರಿಗೆ ಕಾಲನಿಯಮವೇ ಹೊರತು, ಅಕ್ಷರರಾದ ರಮಾದೇವೇರಿಗೂ, ಶ್ರೀಹರಿಗೂ, ಕಾಲನೇಮವಿಲ್ಲ. ರಮಾದೇವೇರು ಪರಿಚ್ಛಿನ್ನರು, ದೇವರು ಅಪರಿಚ್ಛಿನ್ನನು ಎಂತ ತಿಳಿದುಕೊಳ್ಳಬೇಕು ಎಂತ ತಾತ್ಪರ್ಯ. ॥62॥

**2. ಭಾವಪ್ರಕಾಶಿಕೆ :–**

ಶ್ರೀಪರಮಾತ್ಮನಿಗೆ, ಕೆಲವು ಕಾಲಕ್ಕೆ ಮುಂಚೆ ಇರಲಿಲ್ಲ, ಆಮೇಲೆ ಹುಟ್ಟದನೆಂಬುವದು, ಆದಿ = ಇಂತಹಾ ಆದಿಯು ಇಲ್ಲ, ಇವತ್ತು ಹುಟ್ಟಿ ದಿನೇ ದಿನೇ ಬೆಳೆಯುತ್ತಾ ಬಂದನು ಎಂಬುದಿಲ್ಲ. ವೃದ್ಧಾಪ್ಯಕಾಲ ಬಂದಿತು ; ಮರಣ ಹೊಂದಿದನೆಂಬುವದಿಲ್ಲ. ಅನಾದಿಕಾಲದಿಂದಲೂ ಇದ್ದೇ ಇರುವನು. ಜೀವರೂ ಅನಾದಿಯಾಗಿ ಇದ್ದೇ ಇರುವರು ; ಪರಮಾತ್ಮನದು ಏನು ವಿಶೇಷವೆಂದರೆ, ಜೀವನಿಗೆ ಶರೀರಪ್ರಾಪ್ತಿಯಿಂದ ಹುಟ್ಟದನೆಂತಲೂ, ಅದು

ವೃದ್ಧಿ ಹೊಂದುವುದರಿಂದ ಬೆಳೆದನೆಂತಲು. ಶರೀರವನ್ನು ಬಿಡಲು ಮೃತನಾದ ನೆಂತಲೂ ವ್ಯವಹಾರ ಉಂಟು. ಪರಮಾತ್ಮನಿಗೆ ಆ ವಿಧವಾದ ಶರೀರ ಸಂಯೋಗ ವಿಯೋಗಗಳೂ ಇಲ್ಲ. ಇಂತಹಾ ಪರಮಾತ್ಮನಿಗೆ ನಿಮಿಷ ಕಾಲವೆಂದು ಹೇಳಿದುದು "ನಿಮೇಷ ಉಪಚರ್ಯತೆ" ನಿಮೇಷವೆಂದು ಬ್ರಹ್ಮಕಲ್ಪವನ್ನು ಸಂಕೇತವಾಗಿ ಮಾಡಿಕೊಂಡಿರುವನೇ ಹೊರತು, 60 ನಿಮಿಷ ವಾದರೆ ಎರಡೂವರೆ ಘಳಿಗೆ ಎಂಬುದೇ ಮೊದಲಾದ ಕಾಲವು ಪರಮಾತ್ಮನಿಗಿಲ್ಲ. ಪ್ರಳಯವನ್ನು ಮಾಡುವುದಕ್ಕೂ, ಸೃಷ್ಟಿಮಾಡುವುದಕ್ಕೂ ಒಂದು ಕಾಲ ನಿರ್ಣಯವಾಗಬೇಕಾಗಿರುವುದರಿಂದ ನಿಮೇಷಕಾಲವನ್ನಾಗಿ ಬ್ರಹ್ಮನ ಕಲ್ಪ ವನ್ನು ಸಂಕೇತಮಾಡಿಕೊಂಡಿರುವನು. ಆದ್ದರಿಂದ ಆಯುರ್ವರ್ಷಾದಿಗಳು ಹೇಳಿದಂತಾಗುವುದಿಲ್ಲವೆಂಬ ತಾತ್ಪರ್ಯ. ಈ ಪ್ರಕಾರವಾಗಿ ಋಗ್ವೇದ ಮೊದಲಾದ ವೇದಗಳಲ್ಲೂ, ಭಾಗವತಾದಿ ಪುರಾಣಗಳಲ್ಲೂ ಹೇಳಲ್ಪಟ್ಟಿದೆ. ನಿತ್ಯಾನಂದಸ್ವರೂಪನಾದ ಶ್ರೀಪರಮಾತ್ಮನ ಅನುಗ್ರಹವನ್ನು ಸಂಪಾದಿಸಿ ರಮಾಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಪದವಿಯನ್ನು ಪಡೆದು ಸುಖದಿಂದಿರುವರು. ॥62॥

3. ಭಾವದರ್ಪಣ :–

ಆದಿ ॥62॥

4. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :

'ಆದಿ' ಇತಿ॥ "ಕಾಲೋಽಯಂ ದ್ವಿಪರಾರ್ಧಾಖ್ಯೋ ನಿಮೇಷ ಉಪ ಚರ್ಯತೇ॥ ಅವ್ಯಾಕೃತಸ್ಯಾನಂತಸ್ಯ ಹ್ಯನಾದೇಃ ಜಗದಾತ್ಮನಃ ॥ ಇತಿ॥ ॥62॥

## ಕನ್ನಡಾರ್ಥ

ಎರಡು ಪರಾರ್ಧ ಮಿತವಾದ ರೂಪವಾದ ನಿಮೇಷರೂಪವಾದ ಕಾಲವು ಪರಮಾತ್ಮನಿಗೆ ಔಪಚಾರಿಕ. ಅನಾದಿಯೂ, ಅನಂತನೂ,

ಅವ್ಯಕ್ತನೂ ಆದ ಶ್ರೀಹರಿಗೆ ಇದು ಬಾಧಕವಲ್ಲ–ಸಹಾಯಕವಲ್ಲ. ಕೇವಲ ತನ್ನ ಅಧೀನದಲ್ಲಿರುವ ನಿಮಿತ್ತ ಮಾತ್ರ. ॥62॥

### 4. ಶ್ರೀಗುರುಹೃದಯಪ್ರಕಾಶಿಕೆ :

ಆದಿ ಮಧ್ಯ ಅಂತಗಳೆಂಬ ಜನ್ಮ ಸ್ಥಿತಿ ನಾಶ ಸಹಾ ಇಲ್ಲದ ರಮಾಪತಿಯಾದ ದೇವರಿಗೆ, ಇದು ಅಂದರೆ ಬ್ರಹ್ಮಮಾನ ಇನ್ನೂರುವರ್ಷ ನಿಮಿಷವೆಂದು ಹೇಳಿದ್ದು ಒಂದು ಉಪಚಾರವೆಂದು ಋಗಾದಿ ವೇದಗಳೂ, ಪುರಾಣಗಳೂ ಸಹ ಹೇಳುವವು. ಅಂದರೆ ಭೋಜನವು ಜಾಗ್ರತೆಯಾಗಿದ್ದರೂ, ಅನೇಕ ಪದಾರ್ಥಗಳಿಂದ ಕೂಡಿದ್ದರೂ ಹೊತ್ತು ಬಹಳವಾಯಿತು ಬರೀ ಅನ್ನೋದಕವೆಂದು ಹೇಳುವಂತೆ, ಸುಮ್ಮಸ್ತುತಿರೂಪವಲ್ಲದೆ, ಪರಮಾತ್ಮನಿಗೆ ಆಯುಸ್ಸು ಕಟ್ಟುವುದಕ್ಕೆ ಅಲ್ಲ ಎಂದು ಅರ್ಥ. ಮತ್ತು ಮೋದಮಯನೆಂಬ ಆನಂದಾತಿಶಯವುಳ್ಳ ಈ ದೇವರ ಅನುಗ್ರಹವನ್ನು ಸಂಪಾದಿಸಿ, ರಮಾ ಬ್ರಹ್ಮ ರುದ್ರೇಂದ್ರಾದಿಗಳು ತಮ್ಮ ತಮ್ಮ ಪದವಿಯಲ್ಲಿ ಸುಖಿಸುವರಾದ್ದರಿಂದಲೂ ನಮ್ಮ ಸ್ವಾಮಿಗೆ ಸರ್ವಥಾ ಕಾಲಕಲ್ಪಿತ್ತಿ ಇಲ್ಲವೆಂದು ಅರ್ಥ.

**ಪ್ರಮಾಣ–ನಜಾಯತೇ ಮ್ರಿಯತೇ ವಾ ಕದಾಚಿತ್, ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ, ನಾಸೌ ಜಜಾನ ನಮರಿಷ್ಯತಿ** ಇತ್ಯಾದಿ ಶ್ರುತಿಸ್ಮೃತಿಗಳ ಅರ್ಥ ವಿವರಿಸಲ್ಪಟ್ಟಿತು. ॥62॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನಿಗೆ ಜನನ ಅಥವಾ ಸೃಷ್ಟಿ ಎಂಬ ಆದಿಯಾಗಲೀ, ಬೆಳವಣಿಗೆ ಎಂಬ ಮಧ್ಯಸ್ಥಿತಿಕಾಲವಾಗಲೀ, ನಾಶ ಅಥವಾ ಮರಣವೆಂಬ ಅಂತಗಳಾಗಲೀ ಯಾವುವೂ ಇಲ್ಲ. ಅವನು ಅನಾದಿನಿತ್ಯನು. ಆದಿ ಮಧ್ಯಾಂತರಹಿತನು. ಕಾಲಾತೀತನು. ಕಾಲಪ್ರವಾಹವು ಶ್ರೀಶನ ಅಧೀನವಾಗಿದೆ.

ಆದರೆ ಸರ್ವಜೀವರೂ ಶ್ರೀಪರಮಾತ್ಮನಂತೆ ಅನಾದಿನಿತ್ಯರು. ಆದರೆ ಇರುವ ಮುಖ್ಯ ವ್ಯತ್ಯಾಸವೇನೆಂದರೆ ಅಸ್ಪಷ್ಟರಾಶಿಯಲ್ಲಿರುವ ಜೀವರನ್ನು ಲಿಂಗೋಪಾದಾನದಿಂದ ಸೃಷ್ಟಿಗೆ ತರುತ್ತಾನೆ. ಆಗ ಅವರಿಗೆ ಸ್ಥೂಲದೇಹವು ಪ್ರಾಪ್ತವಾಗುವುದು. ಈ ಸ್ಥೂಲದೇಹಕ್ಕೆ ಜನನಾಖ್ಯವಾದ ಆದಿ. ಬೆಳವಣಿಗೆ ಅಥವಾ ಉಪಚಯವೆಂಬ ಮಧ್ಯಸ್ಥಿತಿ, ದೇಹನಾಶವೆಂಬ ಮರಣಗಳು ಉಂಟಾಗುವುದು. ಅಂತೆಯೇ ಅನಿರುದ್ಧ ಶರೀರದ ನಾಶ. ಲಿಂಗದೇಹ ಭಂಗಗಳುಂಟು. ಜೀವರಿಗೆ ಚತುರ್ವಿಧನಾಶಗಳಿವೆ. ಆದರೆ ನಿತ್ಯ ಶಾಶ್ವತ ಸ್ವರೂಪಿಯಾದ ಶ್ರೀಪರಮಾತ್ಮನಿಗೆ ಅಂತಹ ಆದಿ, ಮಧ್ಯ, ಅಂತಗಳಾವುವೂ ಇಲ್ಲ.

2. **ಮಾಧವ** ಎಂದರೆ ಶ್ರೀಲಕ್ಷ್ಮೀಪತಿಯಾದ ನಾರಾಯಣನು (ಮಾ–ರಮಾ, ಧವ–ಪತಿ) ಅಂತಹ ಆದಿ ಮಧ್ಯಾಂತರಹಿತನಾದ ಮಾಧವನಿಗೆ ಬ್ರಹ್ಮದೇವರ ಆಯುಃಪ್ರಮಾಣವು ಒಂದು ನಿಮಿಷವೆಂದು ಋಗಾದಿ ವೇದಗಳೂ, ವೇದವ್ಯಾಸವಿರಚಿತ ಸಕಲ ಪುರಾಣಗಳು ಸಾರುತ್ತಲಿವೆ. ಈ ನಿಮಿಷ ಕಾಲವೆಂದರೆ, ರೆಪ್ಪೆ ತೆರೆದು ಮುಚ್ಚುವ ಸೂಕ್ಷ್ಮತಮಕಾಲವು. ಇದೂ ಸಹ ನಿತ್ಯಶಾಶ್ವತನಿಗೆ ಕೇವಲ ಔಪಚಾರಿಕವೆಂದು ತಿಳಿಸುತ್ತಾರೆ. ಅವನಿಗೆ ಬ್ರಹ್ಮದೇವರ ಅಗಾಧವಾದ ಕಾಲಪ್ರಮಾಣವು ಏನೇನೂ ಲೆಕ್ಕಕ್ಕೇ ಇಲ್ಲ.

3 ಶ್ರೀಶನ ನಿತ್ಯಾವಿಯೋಗಿನಿಯಾದ ಶ್ರೀಲಕ್ಷ್ಮೀದೇವಿ (ರಮಾ), ಬ್ರಹ್ಮದೇವರು (ಬ್ರಹ್ಮ) ರುದ್ರ, ಇಂದ್ರಾದಿ ಸಮಸ್ತ ದೇವತೆಗಳೂ ಹಾಗೂ ಸಮಸ್ತ ಮುಕ್ತಿಯೋಗ್ಯಚೇತನರೂ, ಪರಿಪೂರ್ಣ ಆನಂದಸ್ವರೂಪಿಯಾದ (ಮೋದಮಯನಾದ) ಆ ನಿತ್ಯಶಾಶ್ವತಸ್ವರೂಪಿಯ ಅನುಗ್ರಹವನ್ನು ಸಂಪಾದಿಸಿ ತಮ್ಮ ತಮ್ಮ ಸ್ವರೂಪಯೋಗ್ಯತೆಗನುಗುಣವಾದ ಸ್ಥಾನಗಳನ್ನು (ಪದವಿ) ಹೊಂದಿ, ಮುಕ್ತಿಸುಖವನ್ನು ಪಡೆಯುವರೆಂದು ಪ್ರಸ್ತುತಪದ್ಯದ ತಾತ್ಪರ್ಯಾರ್ಥವು. ಅಂದರೆ ರಮಾ, ಬ್ರಹ್ಮಾದಿಗಳಿಗೆ, ಸಾಧನ, ಸುಖಭೋಗ ಇತ್ಯಾದಿಗಳೆಲ್ಲಾ ಭಗವದನುಗ್ರಹದಿಂದ ಪ್ರಾಪ್ತಿಯಾಗುವುವು. ॥62॥

## ಪದ್ಯ ೬೩

**ಮೂಲ :-**

**ಈ ಕಥಾಮೃತಪಾನಸುಖ ಸುವಿ |**
**ವೇಕಿಗಳಿಗಲ್ಲದಲೆ ವೈಷಿಕ |**
**ವ್ಯಾಕುಲ ಕುಚಿತ್ತರಿಗೆ ದೊರೆವುದೆ ಆವಕಾಲದಲಿ ||**
**ಲೋಕವಾರ್ತೆಯ ಬಿಟ್ಟು ಇದನವ |**
**ಲೋಕಿಸುತ ಮೋದಿಪರಿಗೊಲಿದು ಕೃ |**
**ಪಾಕರ ಜಗನ್ನಾಥವಿಠ್ಠಲ ಕಾಯ್ವ ಕರುಣದಲಿ || ೬೩ ||**

**ಅವತರಣಿಕೆ :-**

ಅವಿವೇಕಿಗಳು ಈ ಕಥಾಮೃತಪಾನದ ಸುಖವನ್ನು ಪಡೆಯಲಾರರು. ಈ ಕಾವ್ಯಾಲೋಕನದಿಂದ ಪರಮಾತ್ಮನು ಅವರನ್ನು ಅನುಗ್ರಹಿಸಿ, ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ. ॥63॥

**ಪ್ರತಿಪದಾರ್ಥ :-**

**ಈ ಕಥಾಮೃತಪಾನಸುಖ** = ಪ್ರಸಕ್ತಕಾವ್ಯ ಹರಿಕಥಾಮೃತಸಾರ ಗ್ರಂಥಗತ ಶ್ರೀಹರಿಯ ಮಹಾತ್ಮ್ಯವೆಂಬೋ ಕಥಾಸಾಂಕೇತವಾದ ಅಮೃತ ಪಾನದ ಸುಖವು. **ಸುವಿವೇಕಿಗಳಿಗಲ್ಲದಲೆ** = ಸಮೀಚೀನವಾದ ಜ್ಞಾನವುಳ್ಳರಿಗಲ್ಲದೆ, **ವೈಷಿಕ** = ವಿಷಯಾಸಕ್ತರಾಗಿ, **ವ್ಯಾಕುಲ** = ಸದಾಪ್ರಾಪಂಚಿಕ ಸುಖಾಪೇಕ್ಷೆಯಿಂದ ವ್ಯಸನಯುಕ್ತರಾದ, **ಕುಚಿತ್ತರಿಗೆ** = ಪಾಪಮಾರ್ಗದಲ್ಲಿ ಆಸಕ್ತಮನಸ್ಸುಳ್ಳವರಿಗೆ, **ಆವಕಾಲದಲಿ** = ಯಾವ ಕಾಲಕ್ಕಾದರೂ. **ದೊರೆಯುವುದೆ** = ದೊರಕುತ್ತದೆಯೇ ? **ಲೋಕವಾರ್ತೆಯಬಿಟ್ಟು** = ಪ್ರಾಪಂಚಿಕ ಸಂಬಂಧದ ವಿಷಯಗಳಲ್ಲಿ ಮನಸ್ಸನ್ನು ಇಡದೇ, **ಮೋದಿಪರಿಗೆ** = ಸಂತೋಷಪಡತಕ್ಕ ಸುಜನರಿಗೆ, **ಒಲಿದು** = ಅನುಗ್ರಹಿಸಿ, **ಕೃಪಾ**

**ಕರ** = ಪರಮ ಕರುಣಾಶಾಲಿಯಾದ, **ಜಗನ್ನಾಥವಿಠಲ** = ಜಗತ್ತಿಗೇ ಪ್ರಭುವಾದ ಶ್ರೀಪರಮಾತ್ಮನು (ದಾಸರ ಅಂಕಿತನಾಮ ಸ್ವಾಮಿಯು) **ಕರುಣದಲಿ ಕಾಯ್ವ** = ಅಂತಃಕರಣದಿಂದ ಸಂರಕ್ಷಿಸುವನು. ॥62॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಅಯೋಗ್ಯರು ಇದರ ರಸಪಾನ ಮಾಡಲಾರರೆಂತಲೂ, ಈ ಕಾವ್ಯಾವ ಲೋಕನದಿಂದ ಪರಮಾತ್ಮ ರಕ್ಷಕನಾಗತಾನೆಂತಲೂ ಹೇಳತಾರೆ.

ಈ ಕಾವ್ಯ ಹರಿಕಥಾಮೃತಸಾರಗ್ರಂಥಗತ ಶ್ರೀಹರಿಮಹಾತ್ಮ್ಯವೆಂಬೋ ಕಥಾ ಸಾಂಕೇತವಾದ ಅಮೃತಪಾನಮಾಡಿ ಸುಖಪಡತಕ್ಕವರು ಸಮೀಚೀನವಾದ ಜ್ಞಾನವಂತರಿಗೆ. ಇವರಿಗಲ್ಲದಲೆ ಇವರಲ್ಲದ ಅನ್ಯಶಾಸ್ತ್ರಗಳು ಓದಿ ವೈಷಮ್ಯ ಯುಕ್ತರಾಗಿ, ವಿಷಯಾಸಕ್ತರಾಗಿ ಪರಮಾತ್ಮನ್ನ ಮರೆತವರಾಗಿ, ಸರ್ವದಾ ಐಹಿಕ ಸುಖಾಪೇಕ್ಷೆಯಿಂದ ವ್ಯಸನಯುಕ್ತರಾದವರಿಗೆ, ಸರ್ವದಾ ಪಾಪಮಾರ್ಗ ದಲ್ಲಿ ಮನಸ್ಸುಳ್ಳವರಿಗೆ ದಾವಕಾಲದಲ್ಲಾದರೂ ಈ ಅಮೃತಪಾನಸುಖ ದೊರಕಲಾರದು. ಲೋಕಸಂಬಂಧವಾದ ಮಾತಿನಲ್ಲಿ ಮನಸ್ಸು ಇಡದೆ ಬಿಟ್ಟು ಲೋಕಾಂತರ್ಗತ ಪರಮಾತ್ಮನಲ್ಲಿ ಅನುಸಂಧಾನಪೂರ್ವಕ ಮನವಿಟ್ಟು, ಈ ಗ್ರಂಥವನ್ನು ಅವಲೋಕನ ಮಾಡತಾ ಸಂತೋಷಪಡತಕ್ಕವರಿಗೆ ಪ್ರತ್ಯಕ್ಷನಾಗಿ ಕೃಪಾಸಾಂಕೇತವಾದ ಕರದಿಂದ ಓಡಕೊಂಡು ಜಗನ್ನಾಥ ಅಂದರೆ, ಜಗತ್ತಿಗೇ ಸ್ವಾಮಿಯಾದ ವಿಠಲ ಸಾಂಕೇತನಾದ ಪರಮಾತ್ಮ, ಅಂತಃಕರಣದಿಂದ ಸಂಸಾರ ಸಮುದ್ರ ದಾಟಿಸಿ ಸಂರಕ್ಷಣ ಮಾಡತಾನೆ. ತೃಣಜೀವರ ಆರಂಭಮಾಡಿ ಆಜಾನಜದೇವತೆಗಳ ಪರಿಯಂತ ಪ್ರತೀಕಾಲಂಬನರು, ತದನ್ಯರು ಅಪ್ರತೀ ಕಾಲಂಬನರು. ಪ್ರತೀಕಾಲಂಬನರು ಎಂದರೆ ದೇಹಾಖ್ಯ ಪ್ರತೀಕದಲ್ಲಿ ಮಾತ್ರ ಭಗವದ್ದರ್ಶನವೂ, ತದನ್ಯರಿಗೆ ಸರ್ವತ್ರ ಭಗವದ್ದರ್ಶನವು. ಸ್ವರೂಪಾಪ ರೋಕ್ಷ, ಸ್ಥೂಲಾಪರೋಕ್ಷ ಎರಡಕ್ಕೂ ಒಂದೇ ನೇಮ. ॥63॥

## ಕೆಲವು ಆಕ್ಷೇಪಗಳಿಗೆ ಸಮಾಧಾನ

ಮೂರನೇ ಶ್ಲೋಕದಲ್ಲಿ ಏಳುವಿಧ ನಿರಂತರ ಹೇಳೋದರಲ್ಲಿ, 1. ನರೋತ್ತಮ, 2. ಜನಪ ಎಂತ ಪ್ರಯೋಗ ಮಾಡಿರೋಣದರಿಂದ, 1. ನರೋತ್ತಮ ಎಂದರೆ ಮನುಷ್ಯೋತ್ತಮ, 2. ಜನಪ, ಅರಸರು ಎಂತಲೇ ಅರ್ಥವಾಗತದೆ. ಈ ಮೂರನೇ ಶ್ಲೋಕಗತ ನರೋತ್ತಮ, ಜನಪರ ಸಹಿತ ಏಳುವಿಧ ನಿರಂಶರಿಗೆ ಎಷ್ಟು ಬಹ್ಮಕಲ್ಪ ಸಾಧನವೆಂದರೆ, ನಲವತ್ತೇಳನೇ ಶ್ಲೋಕದಲ್ಲಿ ಹೇಳಿದ್ದಾರೆ. ಆ ಹೇಳೋದರಲ್ಲಿ–

1. ಮಾನುಷಗಾಯಕರು. 2. ನರಾಧಿಪರು ಎಂತ ಪ್ರಯೋಗ ಮಾಡಿರೋಣದರಿಂದ, ಮಾನುಷಗಾಯಕರು ಎಂದರೆ, ಮಾನುಷಗಂಧರ್ವರು; 2, ನರಾಧಿಪರು ಎಂದರೆ, ಮಾನುಷೋತ್ತಮರು, ನರಾಧಿಪರು ಎಂದರೂ, ಏಕಾರ್ಥವಾಗಿ ಮಾನುಷೋತ್ತಮರೆಂದು ಕರಸತಾರೆ.

ಮಾನುಷಗಾಯಕರು, ನರಾಧಿಪರ ಹೇಳೋದರಿಂದ ಮಧ್ಯಗತ ಜನಪರು ಅರ್ಥಾತ್ ಬಂದಂತಾಯಿತು. ಮಾನುಷಗಾಯಕರು, ನರಾಧಿಪರು ಎಂಬ ದಿಕ್ಪ್ರದರ್ಶನದಿಂದ ಪೂರ್ವೋಕ್ತ ಏಳುವಿಧ ಜೀವರೂ ಗ್ರಾಹ್ಯ. ಏಳು ವಿಧ ಜೀವರಿಗೆ ಒಂದು ಬ್ರಹ್ಮಕಲ್ಪ ಸಾಧನ ಎಂತ ತಾತ್ಪರ್ಯ. ನರಾಧಿಪ ರೆಂದರೆ ಅರಸನಲ್ಲ. ಮೂರನೇ ಶ್ಲೋಕದಲ್ಲಿ ಏಳು ವಿಧ ಜೀವರ ಹೇಳಿ ರೋಣದರಿಂದ, 43ನೇ ಶ್ಲೋಕದಲ್ಲಿ ದಿಕ್ಪ್ರದರ್ಶನ ಮಾಡೋವರಾಗಿದ್ದಾರೆ. ಮಾನುಷೋತ್ತಮರಿಗೆ ನೀಚರಾದ ಮಾನುಷರೆಂಬುವರು, ಕ್ಷತ್ರಿಯ, ವೈಶ್ಯ, ಶೂದ್ರ, ಕುಂಬಾರಾದಿ ನಾಲ್ಕು ಲಕ್ಷಜಾತಿ ಅವರರು ಎಂತ ತಿಳಿಯಬೇಕು. ಈ ಏಳು ವಿಧರಿಗೆ ಒಂದು ಸಾವಿರದ ಹದಿಮೂರು (1013) ಜನ್ಮ ಎಂಬುದು ಎಲ್ಲರಿಗೂ ಸಮ. ತದ್ವತ್ ಒಂದು ಬ್ರಹ್ಮಕಲ್ಪವೇ ಸಾಧನ ಎಂತ ತಾತ್ಪರ್ಯ.

॥63॥

# ತೃಣಾದಿ ಋಜುಜೀವರ ಪರಿಯಂತ ಭಗವದಪರೋಕ್ಷ ತಾರತಮ್ಯ ವಿವರ

| ಕ್ರಮ ಸಂಖ್ಯೆ | ಜೀವರು | ಅಪರೋಕ್ಷಕಾಲ ಪರಿಮಿತಿ | ಭಗವದ್ದರ್ಶನ ಪ್ರಕಾಶನ ಪ್ರಮಾಣ | ಭಗವದ್ದರ್ಶನ ಪರಿಮಿತಿ | ದೇಹಕಾಂತಿ ವ್ಯಾಪ್ತಿ ಆಗುವ ದೂರ | ಉಪಾಸನಾ ಗುಣಗಳ ಸಂಖ್ಯಾ | ಬಿಂಬದರ್ಶನವಾಗುವ ರೀತಿ (ಪರಿ) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1. | ತೃಣ ಜೀವರು | 1/2 ಘಳಿಗಿ | ಸಣ್ಣಬತ್ತಿ ದೀಪದ ಕಾಂತಿ | ಒಂದು ನೆಲ್ಲು | ಹತ್ತು ಯೋಜನ | ಒಂದು | ಒಬ್ಬ ಬಿಂಬನ ಮಾತ್ರ ಕಾಣತಾರೆ, ನ ದೇವಮಂಟಪ |
| 2. | ಕೀಟಾದಿ ಕ್ರಿಮಿ ಜೀವರು | 3/4 ಘಳಿಗಿ | ಧಮ್ಮಬತ್ತಿ ದೀಪದ ಕಾಂತಿ | ಒಂದು ಬೋರೆ ಹಣ್ಣು | " " | ಒಂದು | " " " " |
| 3. | ವೃಕ್ಷ. ಮೃಗ ಜೀವರು | 1 ಘಳಿಗಿ | ಹತ್ತು ಧಮ್ಮ ಬತ್ತಿ ದೀಪದ ಕಾಂತಿ | ಒಂದು ಅಂಗುಷ್ಠಾಗ್ರ | ಇಪ್ಪತ್ತು ಯೋಜನ | ಎರಡು | " " " " |
| 4. | ಖಗ, ಪಶುಗಳು | 1 3/4 ಘಳಿಗಿ | ನೂರುಬತ್ತಿ ದೀಪದ ಕಾಂತಿ | " " | ನಲವತ್ತು | ಮೂರು | " " " " |

| | | | | | | |
|---|---|---|---|---|---|---|
| 5. ಶೂದ್ರ ಜೀವರು | 1 / 13/16 ಘಳಿಗಿ | 13/16 ಮಿಂಚಿನ ಕಾಂತಿ | " " | ಎಂಭತ್ತು | ಮೂರು ಕಾಲು | ಮಂಟಪದಿಂದ ಸಹಿತನಾದ ಬಿಂಬ |
| 6. ವೈಶ್ಯ ಜೀವರು | 1 / 13/16 ಘಳಿಗಿ | 14/16 ಮಿಂಚಿನ ಕಾಂತಿ | " " | ನೂರಾ ಅರವತ್ತು ಯೋಜನ | ಮೂರುವರಿ | 1. ದೇವರು, 2. ಮಂಟಪ, 3. ಪೀಠದೇವತಿಗಳು, 5. ಪದಸ್ಥ ದೇವತೆಗಳು, ಪದಸ್ಥರಲ್ಲದ ದೇವತಿಗಳು |
| 7. ಕ್ಷತ್ರಿಯ ಜೀವರು | 1 / 15/16 ಘಳಿಗಿ | 15/16 ಮಿಂಚಿನ ಕಾಂತಿ | " " | ಇನ್ನೂರಾ ನಲವತ್ತು ಯೋಜನ | ಮೂರು ಮುಕ್ಕಾಲು | 1. ದೇವರು, 2. ಮಂಟಪ 3. ಪೀಠ ದೇವತಿಗಳು, 4. ಆವರಣ ದೇವತಿಗಳು, 5. ಪದಸ್ಥ ದೇವತಿಗಳು 6. ಪದಸ್ಥರಲ್ಲದ ದೇವತಿಗಳು |
| 8. ಮಾನಮೊತ್ತಮ ಬ್ರಾಹ್ಮಣರು | ಎರಡು ಘಳಿಗಿ | ಒಂದು ಮಿಂಚಿನ ಕಾಂತಿ | ಒಂದು ಅಂಗುಷ್ಠಾಗ್ರ | ಮುನ್ನೂರಾ ಇಪ್ಪತ್ತು ಯೋಜನ | ನಾಲ್ಕು | 1. ದೇವರು, 2. ಮಂಟಪ, 3. ಪೀಠದೇವತಿಗಳು. 4. ಆವರಣ ದೇವತಿಗಳು, 5. ಪಾದಸ್ಥ ದೇವತಿಗಳು, 6. ಪದಸ್ಥರಲ್ಲದ ದೇವತಿಗಳು 7. ಸುಷುಮ್ನಾನಾಡಿ, 8. ಸಪ್ತ ಕಮಲ, 9. ಕಮಲಗತ ದೇವತಿಗಳು, 10. ಕಮಲಗತ ದೇವತಾಂತರ್ಗತ ಭಗವದ್ರೂಪಗಳು |

| | | | | | | | |
|---|---|---|---|---|---|---|---|
| 9. | ಮಾನುಷ ಚಕ್ರವರ್ತಿಗಳು | ಮೂರು ಘಳಿಗಿ | ಹತ್ತು ಮಿಂಚಿನ ಕಾಂತಿ | ಒಂದು ಅಂಗುಷ್ಠ | ಆರುನೂರಾ ನಲವತ್ತು ಯೋಜನೆ | ಆರು | ಮಾನುಷೋತ್ತಮ ಬ್ರಾಹ್ಮಣರು ಕಾಣುವಂತೆ ಹತ್ತುವಿಧ ಭಗವದ್ರೂಪಗಳನ್ನೂ, 11. ಪ್ರಾದೇಶ, 12. ಮೂಲೇಶ ಭಗವದ್ರೂಪಗಳನ್ನೂ. ಅಂತು ಹನ್ನೆರಡು ವಿಧ ಕಾಣತಾರೆ. |
| 10. | ಮಾನುಷ ಗಂಧರ್ವರು | ನಾಲ್ಕು ಘಳಿಗಿ | ಇಪ್ಪತ್ತು ಮಿಂಚಿನ ಕಾಂತಿ | " " | ಒಂಭೈನೂರಾ ಅರುವತ್ತು ಯೋಜನ | ಹತ್ತು | ಮಾನುಷಚಕ್ರವರ್ತಿಗಳೋಪಾದಿಯಲ್ಲೇ ಕಾಣತಾರೆ. |
| 11. | ದೇವ ಗಂಧರ್ವರು | ಆರು ಘಳಿಗಿ | ಒಂದು ಸೂರ್ಯನ ಕಾಂತಿ | " " | ಎಂಭತ್ನಾಲ್ಕುಸಾವಿರ ಯೋಜನ | ನೂರು | ಮಾನುಷಗಂಧರ್ವರಿಗಿಂತಲೂ ಅಧಿಕ ವಿಶೇಷಗಳ ಗುಣಗಳ ಕಾಣತಾರೆ. |
| 12. | ಚಿತಪಿತೃಗಳು | " | ನೂರು ಸೂರ್ಯರ ಕಾಂತಿ | " " | ಭುವರ್ಲೋಕ ಪರಿಯಂತ | ಹತ್ತುಸಾವಿರ | ದೇವಗಂಧರ್ವರಿಗಿಂತಲೂ ಅಧಿಕ ವಿಶೇಷಗಳ ಕಾಣತಾರೆ. |

| | | | | | | |
|---|---|---|---|---|---|---|
| 13. | ಕೃಷ್ಣನ ಅಂಗಸಂಗಿ ಗಳಾದ ಗೋಪಿಕಾ ಸ್ತ್ರೀಯರು | ಏಳೂವರಿ ಫಳಿಗಿ | ಐದುಸಾವಿರ ಸೂರ್ಯರ ಕಾಂತಿ | ” ” | ಐವತ್ತು ಲಕ್ಷ ಯೋಜನ ಪರಿಯಂತ | ಒಂದುಲಕ್ಷ | ಚಿರಪಿತೃಗಳಿಗಿಂತಲೂ ಅಧಿಕ ವಿಶೇಷ ಗುಣಗಳ ಕಾಣತಾರೆ |
| 14. | ಅವಶಿಷ್ಟ ಆದಾನ ಜರು ಅಗ್ನಿ ಪುತ್ರರು | ಹತ್ತು ಫಳಿಗಿ | ಹತ್ತುಸಾವಿರ ಸೂರ್ಯರ ಕಾಂತಿ | ಒಂದು ಅಂಗುಷ್ಠ | ಒಂದುಕೋಟಿ ಯೋಜನ ಪರಿಯಂತ | ಒಂದು ಕೋಟಿ | ಶ್ರೀಕೃಷ್ಣನ ಅಂಗಸಂಗಿಗಳಾದ ಗೋಪಿಕಾಸ್ತ್ರೀಯರುಗಳಿಗಿಂತಲೂ ಅಧಿಕ ವಿಶೇಷ. ಆ ವಿಶೇಷಗಳ ವಿವರ ಇಡಾ, ಪಿಂಗಳಾನಾಡ್ಯಂತ ರ್ಗತ ಭಗವದ್ರೂಪಗಳನ್ನೂ, ಚತು ರ್ವಿಂಶತಿ ತತ್ತ್ವದೇವತೆಗಳನ್ನೂ ತದಂತರ್ಗತ ಭಗವದ್ರೂಪಗಳನ್ನೂ ದೇಹಗತ ಸರ್ವ ನಾಡೀಗತ ಭಗವ ದ್ರೂಪಗಳನ್ನೂ ಕಾಣತಾರೆ. |

| | | | | | | | |
|---|---|---|---|---|---|---|---|
| 15. ಪುಷ್ಕರಾರಭ್ಯ ಶತಸ್ಥ ದೇವತಾಂತರ್ಗತ ಕರ್ಮಜರು | ಹದಿನೈದು ಘಳಿಗಿ | ಒಂದು ಕೋಟಿ ಸೂರ್ಯರ ಕಾಂತಿ | " | " | ಚತುರ್ದಶ ಲೋಕ ಪರಿಯಂತ | ಒಂದು ಅರ್ಬುದ | ವ್ಯಾಪ್ತ ದರ್ಶಕರು, ಅಂತರ್ಬಹಿಃ ಭಗವದಪರೋಕ್ಷಿಗಳು, ಸ್ವದೇಹದಲ್ಲೂ ಮಹಾವಿಶೇಷಗಳ ಕಾಣತಾರೆ. |
| 16. ಶತಸ್ಥರಾಭ್ಯ ರುದ್ರದೇವರ ವರಗೇ ಗರುಡ ಶೇಷ ರೂಗ್ರಾಹ್ಯ | ಮೂವತ್ತು ಘಳಿಗಿ | ಒಂದು ಕೋಟಿ ಅರ್ಬುದ ಸೂರ್ಯರ ಕಾಂತಿ | " | " | ಶತಸ್ಥರಾರಭ್ಯ ಇಂದ್ರನವರೆಗಿನ ಜೀವರ ದೇಹಕಾಂತಿ ಇಪ್ಪತ್ತೈದು ಕೋಟಿ ಯೋಜನ ಪರಿಯಂತ ರುದ್ರಾದಿ ಜೀವರ (ಇಂದ್ರನವರೆಗೆ) ದೇಹಕಾಂತಿ ವ್ಯಾಪ್ತಿ ಅಂಡ ಖರ್ವರ ಪರಿಯಂತ | ಒಂದು ಖರ್ವ ಸಂಖ್ಯಾ | ಅಂತರ್ಬಹಿಃ ಮಹಾ ವಿಶೇಷಗಳ ಕಾಣತಾರೆ |

ಕೃಪಾಕರನಾದ ಜಗನ್ನಾಥವಿಠ್ಠಲನೆಂಬ ಸ್ವಾಮಿಯು ಕರುಣದಿಂದ ರಕ್ಷಿಸಿ ಒಲಿವನು. ॥63

ಇಂತು **ಗುರುಹೃದಯಪ್ರಕಾಶಿಕಾ** ಎಂಬ ವ್ಯಾಖ್ಯಾನ ಸಹಿತ **ಶ್ರೀಹರಿಕಥಾಮೃತಸಾರದಲ್ಲಿ, ಕಲ್ಪಸಾಧನ** ಎಂಬ 23ನೇ ಸಂಧಿಗೆ ಮಂಗಳಂ

॥ ಶ್ರೀಕೃಷ್ಣಾರ್ಪಣಮಸ್ತು ॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಹರಿಯ ಮಹಾತ್ಮ್ಯೆಯನ್ನು ಒಳಗೊಂಡ ಕಥಾರೂಪವಾದ ಈ ಕಾವ್ಯದ ಅಮೃತಸಮಾನವಾದ ಪಾನಸುಖವನ್ನು ಸುಜನರಾದ ಸುಜ್ಞಾನಿಗಳು ಮಾತ್ರ ಸವಿಯಬಲ್ಲರು. ಅಂತಹ ಭಗವದ್ಭಕ್ತರೇ ಈ ಕಾವ್ಯದ ಶ್ರವಣಾಧ್ಯಯನಾದಿಗಳಿಗೆ ನಿಜವಾದ ಅಧಿಕಾರಿಗಳು.

2. ಕೇವಲ ವಿಷಯಭೋಗಗಳಲ್ಲಿ ಆಸಕ್ತರಾಗಿ ವಿಷಯಸಂಬಂಧವಾದ ವ್ಯಸನಗಳಲ್ಲಿ ಮುಳುಗಿ ಸಂಸಾರದ ದುಃಖಗಳಿಂದ ಪೀಡಿತರಾದ ಪಾಪಬುದ್ಧಿಯುಳ್ಳ ಮನಸ್ಸುಳ್ಳ ಮಂದಭಾಗ್ಯರಿಗೆ ಯಾವ ಕಾಲಕ್ಕೂ ಹರಿಕಥಾಮೃತ ರುಚಿಸದು. ಅವರಿಗೆ ಎಂದೆಂದಿಗೂ ದೊರೆಯುವುದಿಲ್ಲ.

3. ಸಾಂಸಾರಿಕ ವಿಷಯಗಳನ್ನು ಬಿಟ್ಟು (ಲೋಕವಾರ್ತೆಯ ಬಿಟ್ಟು), ಶ್ರೀಹರಿಯ ಚರಣಕಮಲಗಳಲ್ಲಿ ಮತ್ತಭೃಂಗರಾಗಿ, ಈ ಕಾವ್ಯಗತ ಶ್ರೀಪರಮಾತ್ಮನ ರೂಪ, ಗುಣ, ಕ್ರಿಯಾಲೀಲಾವಿಷಯಗಳಾದ ಕಥಾಸಕವನ್ನು ನೋಡುತ್ತಾ, ಅಧ್ಯಯನ ಮಾಡುತ್ತಾ ಆನಂದಪಡುವವರೇ ಪುಣ್ಯವಂತರು.

4. ಅಂತಹ ಶ್ರವಣ ಮನನಾದಿಕಾರಿಗಳಿಗೆ ಜಗತ್ಪ್ರಭುವಾದ ಜಗನ್ನಾಥ ವಿಠ್ಠಲನು ಪರಮಕಾರುಣ್ಯದಿಂದ ಸಂರಕ್ಷಿಸುವನೆಂದು ತಿಳಿಸುತ್ತಾ ಪರಮ ಜ್ಞಾನಿಗಳಾದ ದಾಸರಾಯರು **ಅಪರೋಕ್ಷಕಾರಕತಮ್ಯಸಂಧಿ ಅಥವಾ ಕಲ್ಪಸಾಧನಾಸಂಧಿ** ಎಂಬ ಪ್ರಸಕ್ತ ಸಂಧಿಯನ್ನು ಈ 63ನೆಯ ಅಂತ್ಯ ಪದ್ಯದಿಂದ ಉಪಸಂಹರಿಸುತ್ತಾರೆ. ॥63॥

**॥ ಇಲ್ಲಿಗೆ ಪ್ರಸಕ್ತಸಂಧಿಯ "ಸರ್ವವ್ಯಾಖ್ಯಾನಸಾರಸಂಗ್ರಹ"ವು 63ನೆಯ ಅಂತ್ಯ ಪದ್ಯದಿಂದ ಪರಿಸಮಾಪ್ತಿಯಾಯಿತು ॥**

**॥ ಶ್ರೀಮಧ್ವೇಶಾರ್ಪಣಮಸ್ತು ॥**